## ಅಧ್ಯಾಯ–೧

# ಪ್ರಾಸ್ತಾವಿಕ

**ಚಿ**ತ್ರದುರ್ಗ ಜಿಲ್ಲೆಯು, ಭೌಗೋಳಿಕವಾಗಿ ಕರ್ನಾಟಕದ ಕೇಂದ್ರ ಭಾಗದಲ್ಲಿದೆ. ವಿಭಜಿತ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದಾದ ಹೊಸದುರ್ಗ ತಾಲ್ಲೂಕು ಸಾಂಸ್ಕೃತಿಕವಾಗಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ವೇದಾವತಿ ನದಿಯ ಇಕ್ಕೆಲಗಳಲ್ಲಿ ಮೈಚಾಚಿ ಬೆಳೆದಂತೆ ಇರುವ ಹೊಸದುರ್ಗ ತಾಲ್ಲೂಕು ಪ್ರಾಚೀನ ಇತಿಹಾಸ, ಸಮೃದ್ಧ ಜಾನಪದ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಹಾಗೂ ನೈಸರ್ಗಿಕ ಸಂಪತ್ತನ್ನು ಹೊಂದಿದೆ. ಬಯಲು ಸೀಮೆಯಾಗಿದ್ದರೂ ಅರೆಮಲೆನಾಡು ಪ್ರದೇಶವಾಗಿರುವ ಹೊಸದುರ್ಗ ಪರಿಸರವು, ಜನಜೀವನಕ್ಕೆ ಉತ್ತಮ ನೆಲೆಯಾಗಿದೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಸಂಖ್ಯೆಯ ಗ್ರಾಮಗಳನ್ನು ಒಳಗೊಂಡಿರುವ ಈ ತಾಲ್ಲೂಕು ಪ್ರಾಕೃತಿಕವಾಗಿ ಅನೇಕ ಬೆಟ್ಟ–ಗುಡ್ಡಗಳನ್ನು, ಅರಣ್ಯಗಳನ್ನು, ನದಿ, ಹಳ್ಳ, ಕೊಳ್ಳ, ಕಣಿವೆ, ಕೆರೆ–ಕಟ್ಟೆ, ಕಿರುಜಲಾಶಯ, ಪುಷ್ಕರಣಿಗಳು, ತೋಟ, ಹೊಲ, ಗದ್ದೆಗಳ ಐಸಿರಿಯನ್ನು ಹೊಂದಿದೆ. ಪ್ರಾಚೀನ ಅರ್ವಾಚೀನ ತಾಣಗಳು, ಪುರಾಣ ಕಾಲದ ಪುಣ್ಯಕ್ಷೇತ್ರಗಳು, ನೂರಾರು ದೇವಾಲಯಗಳು, ಮಠಗಳು, ಬೃಹತ್ ಕನಕ ಪ್ರತಿಮೆ, ಬಯಲುರಂಗಮಂದಿರ (ಕೆಲ್ಲೋಡು ಹಾಗೂ ಸಾಣೇಹಳ್ಳಿ,) ಮುಂತಾದವು ಹೊಸದುರ್ಗದ ತಾಲ್ಲೂಕಿನಲ್ಲಿದೆ. ಹಿಂದೆ ಇಲ್ಲಿ ಮೆರೆದ ಪಾಳೇಪಟ್ಟುಗಳ ಇತಿಹಾಸದ ಶ್ರೀಮಂತಿಕೆ, ಆ ಕುರಿತ ಶತಮಾನಗಳ ಹಿಂದಿನ ಸಾಂಗತ್ಯ ಕೃತಿಗಳ ಹಿರಿಮೆ–ಗರಿಮೆ ಎಲ್ಲವೂ ಹೊಸದುರ್ಗದ ಕೀರ್ತಿ ಶಿಖರಗಳೇ ಆಗಿವೆ. ಸಿದ್ಧರು–ಸತ್ಪುರುಷರು–ಅವಧೂತರು ತಾಲ್ಲೂಕಿನಲ್ಲಿದ್ದ ಪರಂಪರೆ ಇದೆ.

ಈ ತಾಲ್ಲೂಕಿನ ನೆಲ, ಜಲ, ಹವಾಗುಣ ಜನಜೀವನಕ್ಕೆ ಪೂರಕವಾಗಿವೆ. ತಾಲೂಕಿನಾದ್ಯಂತ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಂಪ್ರದಾಯಗಳು, ಆಚರಣೆಗಳು, ವಿಚಾರಕ್ರಾಂತಿಗಳು, ಎಲ್ಲೆಡೆಯೂ ಕಾಣಸಿಗುವ ಶಿಲಾಶಾಸನಗಳು, ವೀರಗಲ್ಲುಗಳು, ಮಹಾಸತಿಶಿಲ್ಪಗಳು, ಕೋಟೆ–ಕೊತ್ತಲಗಳು, ಗುಡಿ–ಗುಂಡಾರ, ಬಸದಿಗಳು ಮುಂತಾದ ಐತಿಹಾಸಿಕ ಅವಶೇಷಗಳು ಕಾಣಬರುತ್ತವೆ. ನೂರಾರು

ಗ್ರಾಮಗಳಲ್ಲಿ-ಹಟ್ಟಿಗಳಲ್ಲಿ ಕೇಳಲು ಸಿಗುವ ಪುರಾಣ ಕಥೆಗಳು, ಪದಗಳು, ಒಗಟು, ಗಾದೆಗಳು, ನುಡಿಗಟ್ಟುಗಳು, ತ್ರಿಪದಿಗಳು, ಪರಾಕುಗಳು, ಕೀರ್ತನೆ, ವೀರಗಾಸೆ, ಭಜನೆ, ಶನಿಕಥೆ, ತತ್ವಪದ ಮುಂತಾದ ಸಮೃದ್ಧ ಜಾನಪದ ಶ್ರೀಮಂತಿಕೆಯಿದೆ. ಅಂತೆಯೇ, ಡೊಳ್ಳು-ಕೋಲಾಟ, ನಾಟಕ-ಸೋಮನ ಕುಣಿತ, ವಗ್ಗಯ್ಯಗಳ ಕುಣಿತ, ಕಂಚಿದೇವರ ಕುಣಿತ ಈ ಪ್ರದೇಶದಲ್ಲಿ ಹೆಸರುವಾಸಿಯಾಗಿದೆ. ಈ ತಾಲ್ಲೂಕಿನಲ್ಲಿ ಅನೇಕ ಜಾತ್ರೆಗಳು ಜರುಗುತ್ತವೆ.

ರಾಜ್ಯದಲ್ಲಿಯೇ ಮೊದಲು ಅಂಬು ಹೊಡೆಯುವುದು ಹೊಸದುರ್ಗ ತಾಲ್ಲೂಕಿನಲ್ಲಿ ಎಂಬ ಪ್ರತೀತಿಯಿದೆ. ರಾಜ್ಯದಲ್ಲಿರುವ ಏಕೈಕ ಕೂರ್ಮಾವತಾರ ಕ್ಷೇತ್ರವಿರುವುದು ಈ ತಾಲ್ಲೂಕಿನಲ್ಲಿ ಹಾಗೂ ಅತಿ ಹೆಚ್ಚು ಸಂಖ್ಯೆಯ "ವಜ್ಜುರ" ಕ್ಷೇತ್ರಗಳು ತಾಲ್ಲೂಕಿನಲ್ಲಿದೆ. ಅವುಗಳಲ್ಲಿ ನೀರಿನ ಕೊಳದಲ್ಲಿ ಫಲ ಬರುವ ಹಾಲುರಾಮೇಶ್ವರ ಕ್ಷೇತ್ರ ಜಗತ್ಪ್ರಸಿದ್ಧ. ಹೊಸದುರ್ಗದ ದಾಳಿಂಬೆ ಹೊರರಾಜ್ಯಗಳಿಗೆ ರಫ್ತಾಗುತ್ತಿದೆ. ಮೊದಲಿನಿಂದಲೂ ಈ ಸೀಮೆಯ ತೆಂಗು ಹೆಸರುವಾಸಿಯಾಗಿದ್ದು, ತೆಂಗಿನಕಾಯಿ ಮತ್ತು ತೆಂಗಿನಕಡ್ಡಿ ಹೊರ ರಾಜ್ಯಗಳಿಗೆ ರಫ್ತಾಗುತ್ತಿವೆ. ಅಂತೆಯೇ, ಹೊಸದುರ್ಗದ ರಾಗಿ ಬಹು ಜನಪ್ರಿಯವಾಗಿದೆ. ಹೊಸದುರ್ಗದ ಕುರಿ ಸಂತೆಯೂ ದನಗಳ ಸಂತೆಯೂ ಮನೆ ಮಾತಾಗಿದೆ. ಖನಿಜ ಸಂಪತ್ತೂ ಇಲ್ಲಿನ ಭೂಮಿಯಲ್ಲಿ ಹುದುಗಿದೆ. ರಾಜ್ಯದಲ್ಲಿ ಗಾರೆಯಿಂದ ನಿರ್ಮಿಸಿದ ಮೊದಲ ಜಲಾಶಯ ಹಾಗು ದೇಶದ ಅತ್ಯಂತ ಉದ್ದವಾದ ಕೃತಕ ಸರೋವರವೆನ್ನಿಸಿರುವ ಮಾರೀಕಣಿವೆ (ವಾಣಿವಿಲಾಸ ಸಾಗರ) ಇರುವುದು ಇಲ್ಲೇ.

ಪ್ರಾಚೀನವಾದ ಶ್ರೇಷ್ಠ ಶಿಲ್ಪಕಲೆ, ಚಿತ್ರಕಲೆ, ಕಟ್ಟಡಕಲೆ, ಕಾಷ್ಟಶಿಲ್ಪ, ಆಯುಧಗಳ ತಯಾರಿಕೆ, ಸುಂದರ ವಿಗ್ರಹಗಳು, ದೇವಾಲಯಗಳು, ಪುಷ್ಕರಣಿಗಳು, ಬತೇರಿ, ಕೋಟೆಯ ಭಾಗಗಳು, ಮಂಟಪ-ಮಹಾದ್ವಾರಗಳು, ರಥಗಳು, ಬೃಹತ್ ಪ್ರಮಾಣದ ಬಿಲ್ಲು-ಬಾಣಗಳು, ಭರ್ಜಿ-ಖಡ್ಗಗಳು ತಾಲ್ಲೂಕಿನಲ್ಲಿ ಅಪಾರ ಸಂಖ್ಯೆಯಲ್ಲಿವೆ. ಪ್ರಾಚೀನ ಕಾಲದ ನಿಲುವುಗಲ್ಲುಗಳು, ಕಲ್ಗೋರಿಗಳು, ವಾಮನಮುದ್ರೆಕಲ್ಲುಗಳು, ಶಾಸನೋಕ್ತ ಗರುಡಗಂಬಗಳು, ಆಭರಣ ಶಾಸನಗಳು, ವಿವಿಧ ರೀತಿಯ ಲೋಹಶಾಸನಗಳು ಇಲ್ಲಿ ಕಂಡುಬಂದಿವೆ.

ಮಹಾಸತಿ ಕಲ್ಲು ಹಾಗೂ ವೀರಗಲ್ಲುಗಳಿಗೆ ಗುಡಿಗಳನ್ನು ನಿರ್ಮಿಸಿ ಆರಾಧಿಸುವ ಅತ್ಯಪೂರ್ವ ಧಾರ್ಮಿಕನೆಲೆ ಇದಾಗಿದೆ. ಕರ್ನಾಟಕದ ಕೆಲವೇ ಸಂಖ್ಯೆಯಲ್ಲಿರುವ ಮೈಲಾರನ ಕ್ಷೇತ್ರಗಳಲ್ಲಿ ಒಂದು ಈ ತಾಲ್ಲೂಕಿನಲ್ಲಿರುವುದೊಂದು ಹೆಗ್ಗಳಿಕೆಯ ಸಂಗತಿಯಾಗಿದೆ. ಜಿಲ್ಲೆಯಲ್ಲಿಯೇ ಅತಿ ಎತ್ತರದ ಬೆಟ್ಟ ಈ ತಾಲ್ಲೂಕಿನಲ್ಲಿದೆ. ಚಿತ್ರದುರ್ಗದ ಹೆಸರಾಂತ ಪಾಳೆಯಗಾರನಾಗಿ ಮೆರೆದ ವೀರ ಮದಕರಿನಾಯಕನ ತವರೂರು ಈ ತಾಲೂಕಾಗಿದೆ. ಪ್ರಾಚೀನ ಕಾಲದಲ್ಲಿ ಅತಿಹೆಚ್ಚು ಅಗ್ರಹಾರಗಳನ್ನು

ಹೊಂದಿ ಶಿಕ್ಷಣವಲಯವೆನಿಸಿದ ಪ್ರದೇಶ ಇದಾಗಿತ್ತು. ದುರ್ಗದ ಪಾಳೆಯಗಾರರಿಗೆ ಆಯುಧಗಳ ತಯಾರಿಕೆಗೆ ಅಗತ್ಯವಾದ ಕಬ್ಬಿಣದ ಅದಿರನ್ನು ಒದಗಿಸುವ ಸ್ಥಳ ಈ ಸೀಮೆಯಾಗಿತ್ತು. ಪ್ರಾಚೀನ ಕಾಲದಲ್ಲಿ ರಾಜ್ಯವಾಗಿ ಮೆರೆದ 'ಶ್ರೀಪೃಥ್ವಿ ನೀರ್ಗುಂದನಾಡು' ಈ ತಾಲೂಕೆಂದು ಅಭಿಪ್ರಾಯವಿದೆ. ಪ್ರಾಚೀನ ಕಾಲದಲ್ಲಿ ಇದು ನೀಲಾವತಿಪಟ್ಟಣ ಎಂಬ ಹೆಸರನ್ನು ಹೊಂದಿತ್ತೆಂಬ ಹೇಳಿಕೆಯಿದೆ. ಹಿಂದಿನ ಕಾಲದಿಂದಲೂ ವಾಣಿಜ್ಯ ವರ್ತಕರಿಗೆ, ಗುಡಿ ಕೈಗಾರಿಕೆಗಳಗೆ ಈ ತಾಲ್ಲೂಕು ಹೆಸರುವಾಸಿಯಾಗಿದೆ. ಪ್ರಾಚೀನ ಕಾಲದಲ್ಲಿ 'ತೆಂಕಣಅಯ್ಯಾವೊಳೆ'/ 'ಅಯ್ಯಾವೊಳೆ ಐನೂರ್ವರ್' ಎಂದು ಪ್ರಖ್ಯಾತವಾಗಿದ್ದ ಸ್ಥಳಗಳು ಈ ತಾಲ್ಲೂಕಿನಲ್ಲಿದ್ದು, ಶ್ರೀಮಂತ ವರ್ತಕರು ಇಲ್ಲಿದ್ದರು ಎಂಬುದಕ್ಕೆ ಪೂರಕವಾಗಿದೆ.

ಶಿಕ್ಷಣ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿಯೂ ಹೊಸದುರ್ಗ ತಾಲ್ಲೂಕು ಮುಂಚೂಣಿಯಲ್ಲಿದೆ. ಸ್ವಾತಂತ್ರ್ಯ ಯೋಧರೂ ಈ ತಾಲ್ಲೂಕಿನಲ್ಲಿ ಹೆಸರಾಗಿದ್ದು, ದೇಶಪ್ರೇಮವನ್ನು ಮೆರೆದಿದ್ದಾರೆ. ಆಂಗ್ಲರ ಕಾಲದ ಕಛೇರಿ–ಕಟ್ಟಡಗಳು, ಆಗಿನ ಶಾಲಾಕಟ್ಟಡಗಳು, ಮಹಾರಾಜರ ಕಾಲದ ಸೇತುವೆ, ಆಗಿನ ಕುಡಿಯುವ ನೀರಿನ ಸಂಸ್ಕರಣಾ ಘಟಕ ಮುಂತಾದವು ಇಂದಿಗೂ ಇಲ್ಲಿ ಕಾಣಸಿಗುತ್ತವೆ. ಮಹಾರಾಜರ ಆಸ್ಥಾನದಲ್ಲಿ ಪ್ರಜಾಪ್ರತಿನಿಧಿಗಳಾಗಿದ್ದವರು, ಪುರೋಹಿತರು–ಧರ್ಮಪ್ರವರ್ತಕರಾಗಿ –ಜೋಡಿದಾರ್ ಆಗಿ–ಸಂಗೀತ ಪರಂಪರೆಯ ನಿಪುಣರಾಗಿ ಈ ತಾಲ್ಲೂಕಿನ ವ್ಯಕ್ತಿಗಳು ಸ್ಥಾನಮಾನಗಳನ್ನು ಪಡೆದಿದ್ದರೆಂಬುದು ತಿಳಿದುಬರುತ್ತದೆ. ಹೀಗೆ, ಸಮಸ್ತ ರಂಗಗಳಲ್ಲಿಯೂ ಹೊಸದುರ್ಗ ತಾಲ್ಲೂಕು ತನ್ನದೇ ಆಗಿರುವ ಹಿರಿಮೆಯನ್ನು ಪಡೆದಿದೆಯಾದರೂ, 'ನಂಜುಂಡಪ್ಪ ವರದಿ' ಪ್ರಕಾರ ಅತ್ಯಂತ ಹಿಂದುಳಿದ ತಾಲೂಕೆಂದು ವರ್ಗೀಕರಿಸಲಾಗಿದೆ.

**ತಾಲ್ಲೂಕಿನ ಉದಯ** : ಶಿರಾ ಮಹಮದೀಯರ ವಶದಲ್ಲಿದ್ದ ಸಂಪದ್ಭರಿತ ಬಾಗೂರು ಕೋಟೆಯನ್ನು ತನ್ನ ವಶಮಾಡಿಕೊಳ್ಳಲು ಚಿತ್ರದುರ್ಗ ಪಾಳೆಯಗಾರ ಚಿಕ್ಕಣ್ಣನಾಯಕನು ಈಗಿನ ಹೊಸದುರ್ಗದ ಬೆಟ್ಟದ ಮೇಲೆ ಕ್ರಿ.ಶ. ೧೬೭೫ರಲ್ಲಿ ಕೋಟೆ, ಮದ್ದಿನ ಉಗ್ರಾಣ, ದೇವಾಲಯ, ಅರಮನೆ, ಸೈನಿಕರ ವಸತಿಗಳನ್ನು ನಿರ್ಮಿಸಿಕೊಂಡು ಸೇನೆಯೊಂದಿಗೆ ನೆಲೆಸಿದನು. ನಂತರದ ಅವಧಿಯಲ್ಲಿ, ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮ ಪುರೋಹಿತನು ಚಿಕ್ಕಣ್ಣನಾಯಕನನ್ನು ಕಂಡು ಆಶ್ರಯ ಬೇಡಿದನು. ಬೆಟ್ಟದ ತಪ್ಪಲಿನಲ್ಲಿ ಹೊರಪೇಟೆಯನ್ನು ನಿರ್ಮಿಸಿಕೊಂಡು ಇತರರೊಂದಿಗೆ ನೆಲೆಸಲು ನಾಯಕನು ಅವನಿಗೆ ಅನುಮತಿ ನೀಡಿದನು. ಕ್ರಿ.ಶ.೧೭೭೦ರ ವೇಳೆಗೆ ಬೆಟ್ಟದ ಕೆಳಗಿನ ಪ್ರದೇಶದಲ್ಲಿ ಚಿಕ್ಕ ಪೇಟೆಯೊಂದು ಜನ್ಮ ತಳೆಯಿತು. ಹೀಗೆ ಹೊಸದುರ್ಗವು ನಿರ್ಮಾಣಗೊಂಡಿತೆಂದು ತಿಳಿದುಬರುತ್ತದೆ. ಹೊಸದುರ್ಗ ಪ್ರದೇಶವನ್ನು ಕ್ರಿ.ಶ.೧೭೨೧ ರಲ್ಲಿ ದೊಡ್ಡಮದಕರಿನಾಯಕನು (ಚಿಕ್ಕಣ್ಣನಾಯಕನ ತರುವಾಯ) ಆಳಿದನು. ನಂತರ,

ದಂಡಿನ ಜಂಪಣ್ಣನಾಯಕ ಆಳಿದನು. ಮುಂದೆ ಹೈದರಾಲಿಯು ದುರ್ಗದವರ ಮೇಲಿನ ಸೇಡಿಗಾಗಿ ಬಾಗೂರು ಮತ್ತು ಹೊಸದುರ್ಗಗಳನ್ನು ಲೂಟಿ ಮಾಡಿದನು.

ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯–೧೮೮೧) ಅವರು ಮೈಸೂರು ಸಂಸ್ಥಾನವನ್ನು ೬ ಫೌಜದಾರಿ(ತುಕಡಿ)ಗಳಾಗಿ ಮತ್ತು ಅವುಗಳನ್ನು ೧೦೧ ತಾಲ್ಲೂಕುಗಳಾಗಿ ವಿಂಗಡಿಸಿದರು. ಅವುಗಳಲ್ಲಿ ಚಿತ್ರದುರ್ಗ ಮತ್ತು ಮತ್ತೋಡು ತಾಲ್ಲೂಕುಗಳಾಗಿ ಸ್ಥಾನ ಪಡೆದು, ನಂತರ ಮುಮ್ಮಡಿಯವರು ಹೊಸದುರ್ಗವನ್ನು ತಾಲೂಕಾಗಿ ಮಾಡಿ, ಮತ್ತೋಡು ಸಮ್ಮತನ್ನು ಅದರಲ್ಲಿ ಸೇರಿಸಿದರು. ೧೮೬೨ರಲ್ಲಿ ಮೈಸೂರು ಕಮೀಷನರ್ ಲ್ಯೂವಿನ್ ಗೌರ್ನಿಂಗ್ ಅವರು ಮೈಸೂರು ಸಂಸ್ಥಾನವನ್ನು ೮ ಜಿಲ್ಲೆಗಳಾಗಿ ಮರು ವಿಂಗಡಿಸಿದ್ದು, ಆವರೆಗೆ ಹೊಳಲ್ಕೆರೆಯು ಹೊಸದುರ್ಗ ತಾಲ್ಲೂಕಿನ ಒಂದು ಭಾಗವಾಗಿದ್ದಿತು. ಆದರೆ ಅದೇ ವರ್ಷ ಹೊಸದುರ್ಗ ಮತ್ತು ಬಾಗೂರು ಹೋಬಳಿಗಳನ್ನು ಹೊಳಲ್ಕೆರೆ ತಾಲ್ಲೂಕಿನ ಭಾಗವನ್ನಾಗಿಸಲಾಯಿತು. ೧೮೮೨ರಲ್ಲಿ ಹೊಸದುರ್ಗವು ಹೊಳಲ್ಕೆರೆಗೆ ಸೇರಿದ ಒಂದು ಸಮ್ಮತು ಆಯಿತು. ಆಗ್ಗೆ ಹೊಸದುರ್ಗ ಉಪತಾಲ್ಲೂಕಿಗೆ ಒಟ್ಟು ೯೮ ಸ್ಥಳಗಳು ಒಳಪಟ್ಟಿದ್ದು, ಇದು 'ಸರ್ಕಾರ ೬೮' ಆಗಿದ್ದಿತು. ೧೯೦೨ ರಲ್ಲಿ ಹೊಸದುರ್ಗವು ಪಕ್ಕಾ ತಾಲೂಕಾಗಿ ರೂಪುಗೊಂಡು, ತಾಲ್ಲೂಕು ಕೇಂದ್ರವಾಯಿತು. (ಉಲ್ಲೇಖ:– Studies in Karnataka History and Culture, Proceeding Volume VIII, Karnataka History Congress, February ೨೦೦೮, ಇದರಲ್ಲಿನ ಪ್ರೊ ಲಕ್ಷ್ಮಣ್ ತೆಲಗಾವಿ ಅವರ ಲೇಖನ).

**ಹೆಸರಿನ ಹಿನ್ನೆಲೆ**: 'ದುರ್ಗ' ಎಂದರೆ ಯಾರೂ ಸುಲಭವಾಗಿ ಪ್ರವೇಶಿಸಲು ಸಾಧ್ಯವಾಗದ (ದುರ್ಗಮವಾದ) ಜಾಗ ಅಥವಾ ಪ್ರದೇಶ ಎಂದು ಅರ್ಥವಿದೆ. ಹಿಂದೆ, ಪಾಳೆಯಗಾರರಿಗೆ ತಮ್ಮ ಪಾಳೇಪಟ್ಟನ್ನು ಸುರಕ್ಷಿತವಾದ ಸ್ಥಳದಲ್ಲಿ ನಿರ್ಮಿಸಿಕೊಳ್ಳುವ ಅನಿವಾರ್ಯತೆ ಇದ್ದಿತು. ಶತ್ರುಗಳು ಆ ವೇಳೆಯಲ್ಲಿ ದಾಳಿ ಮಾಡುವ ಸಾಧ್ಯತೆಗಳಿರುತ್ತಿದ್ದವು. ಹೀಗೆ ಅವರು ದುರ್ಗಗಳನ್ನು ನಿರ್ಮಿಸಿಕೊಂಡು ತಮ್ಮ ಸೇನಾ ಬಲದೊಂದಿಗೆ ಸಜ್ಜಾಗಿರುತ್ತಿದ್ದರು. ದುರ್ಗಗಳಲ್ಲಿ 'ಗಿರಿದುರ್ಗ', 'ಜಲದುರ್ಗ' ಹಾಗೂ 'ವನದುರ್ಗ'ಗಳೆಂಬ ಮೂರು ರೀತಿಯ ದುರ್ಗಗಳಿವೆ. ಬೆಟ್ಟಗುಡ್ಡದ ಮೇಲೆ ನಿರ್ಮಿಸುವುದೇ ಗಿರಿದುರ್ಗ, ಕಂದಕಗಳಿಂದ ಅಥವಾ ನಿಸರ್ಗದತ್ತವಾಗಿ ಜಲಾವೃತ್ತವಾದ ದುರ್ಗ ಜಲದುರ್ಗ, ಕಾಡು, ಕಗ್ಗಾಡುಗಳ ಮಧ್ಯದಲ್ಲಿರುವುದು ವನದುರ್ಗ.

ಹೊಸದುರ್ಗ ಎಂಬ ಹೆಸರು ಕ್ರಿ.ಶ. ೧೪ನೇ ಶತಮಾನದಲ್ಲಿದ್ದ ಕುಮ್ಮಟದುರ್ಗದ ಕುಮಾರ ರಾಮನು ಹೊಸದಾಗಿ ನಿರ್ಮಿಸಿದ (ಸಮೀಪದ) ಹೊಸಮಲೆ ದುರ್ಗಕ್ಕೆ ಇದ್ದ ಮತ್ತೊಂದು ಸಂಕ್ಷಿಪ್ತ ನಾಮವೆಂಬ ಅಭಿಪ್ರಾಯವಿದೆ. ಆದರೆ, ಈಗ ಪ್ರಸ್ತಾಪಿಸುತ್ತಿರುವ, ಚಿಕ್ಕಣ್ಣನಾಯಕನು ನಿರ್ಮಿಸಿದ (ಬಾಗೂರು ಬಳಿಯ) ಹೊಸದುರ್ಗವು ಕ್ರಿ.ಶ. ೧೭ನೇ

ಶತಮಾನದ್ದು. ಚಿಕ್ಕಣ್ಣನಾಯಕನು ತಾನು ಕ್ರಿ.ಶ. ೧೬೭೫ ರಲ್ಲಿ ನಿರ್ಮಿಸಿದ ಕೋಟೆಗೆ ತನ್ನ ಮೂಲ ಕೋಟೆಯ ಹೆಸರಾದ ಚಿತ್ರದುರ್ಗದ ಹೆಸರನ್ನೇ ನೆನಪಿಸುವ ಹೊಸದಾದ ದುರ್ಗಕ್ಕೆ 'ಹೊಸದುರ್ಗ' ಎಂದು ಹೆಸರಿಟ್ಟಿರಬೇಕು.ಕ್ರಿ. ಶ. ೧೭೦೮ ರಲ್ಲಿ ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮರೋರ್ವರು ಇಲ್ಲಿ ಚಿಕ್ಕನಾಯಕನ ಆಶ್ರಯ ಪಡೆದು, ಬೆಟ್ಟದ ತಪ್ಪಲಲ್ಲಿ ಪೇಟೆಯ ನಿರ್ಮಾಣಕ್ಕೆ ಕಾರಣರಾದರೆನ್ನಲಾಗಿದೆ. ಐತಿಹಾಸಿಕ ಹಿರಿಮೆಯನ್ನು ಹೊಂದಿರುವ ಹಾಗೂ ತಾಲ್ಲೂಕು ಕೇಂದ್ರವಾಗಿ ಪ್ರಸಿದ್ಧಿಯಾಗಿರುವುದು ಈಗಿನ ಹೊಸದುರ್ಗವೇ ಆಗಿದೆ. ಇದೇ ಹೆಸರಿನ ಸ್ಥಳವು ಪಾವಗಡ ತಾಲ್ಲೂಕಿನಲ್ಲಿ ಮತ್ತು ಕನಕಪುರ ತಾಲ್ಲೂಕಿನಲ್ಲಿ ತಲಾ ಒಂದೊಂದು ಇವೆಯಾದರೂ ಪ್ರಸ್ತುತ ದುರ್ಗದ ಪಾಳೆಯಗಾರರು ನಿರ್ಮಿಸಿರುವ ಹೊಸದುರ್ಗಕ್ಕೆ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ ಪ್ರಾಮುಖ್ಯತೆ ಇದೆ.

ತಾಲ್ಲೂಕು ಕೇಂದ್ರವಾಗಿರುವ ಹೊಸದುರ್ಗದಲ್ಲಿ ಗ್ರಾಮದೇವತೆ ದುರ್ಗಾಂಬಿಕೆ, ವೀರಭದ್ರ, ಬನಶಂಕರಿ, ಕನ್ಯಕಾಪರಮೇಶ್ವರಿ ಮುಂತಾದ ದೇವಾಲಯಗಳು, ಅನೇಕ ಕಛೇರಿಗಳು, ಬ್ಯಾಂಕುಗಳು, ಸಾರ್ವಜನಿಕ ಆಸ್ಪತ್ರೆ, ಆಧುನಿಕ ಬಸ್‌ನಿಲ್ದಾಣ, ಸರ್ಕಾರಿ ಬಸ್ ಡಿಪೋ(ಹೊಸದುರ್ಗ ಘಟಕ)–ಸರ್ಕಾರಿ ಬಸ್ ನಿಲ್ದಾಣ, ಕೈಗಾರಿಕಾ ಘಟಕ, ನ್ಯಾಯಾಲಯ, ಮಠಗಳು, ಮಸೀದಿ–ಚರ್ಚು, ಆಶ್ರಮಗಳು, ಅಂಗಡಿ–ಹೋಟೆಲುಗಳಿವೆ. ಪಟ್ಟಣದ ಪೂರ್ವದಲ್ಲಿ ಐತಿಹಾಸಿಕ ಭೈರನಕೊಂಬೆ (ಗುಡ್ಡ), ಪಶ್ಚಿಮದಲ್ಲಿ ಮತ್ತೊಂದು ಬೆಟ್ಟಸಾಲು(ದೊಡ್ಡ ಗುಡ್ಡ), ಹೀಗೆ ಎರಡೂ ಬೆಟ್ಟಗಳ ಮಧ್ಯದಲ್ಲಿ ಹೊಸದುರ್ಗ ಪಟ್ಟಣ, ಹೊಸ– ಹೊಸ ಬಡಾವಣೆಗಳಿಂದ ವಿಸ್ತಾರಗೊಳ್ಳುತ್ತಿದೆ.ಅಲ್ಲದೆ ಇಲ್ಲಿ ಇಸ್ಕಾನ್ ಸಂಸ್ಥೆಯಿಂದ ೨೫ ಕೋಟಿ ರೂ ಅಂದಾಜು ವೆಚ್ಚದಲ್ಲಿ ರಾಧಾಕೃಷ್ಣ ದೇವಾಲಯ ನಿರ್ಮಾಣವಾಗಲಿದೆ.

**ಮೇರೆಗಳು** : ಚಿತ್ರದುರ್ಗ ಜಿಲ್ಲೆಯ ದಕ್ಷಿಣದ ತುದಿಯಲ್ಲಿರುವ ಹೊಸದುರ್ಗವು ರಾಜ್ಯದ ಮೂರು ಜಿಲ್ಲೆಗಳ ಸಂಗಮ ಬಿಂದುವಾಗಿದೆ. ಉತ್ತರಕ್ಕೆ ಇದೇ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು, ದಕ್ಷಿಣಕ್ಕೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳು ಹಾಗೂ ಪೂರ್ವಕ್ಕೆ ಇದೇ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಇದ್ದು, ಹೀಗೆ ಹೊಸದುರ್ಗ ತಾಲ್ಲೂಕು ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳ ಸಂಗಮವಾಗಿದೆ. ತಾಲ್ಲೂಕು ಕೇಂದ್ರವಾದ ಹೊಸದುರ್ಗವು, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಿಂದ ೨೦೦ ಕಿ.ಮೀ. ಜಿಲ್ಲಾ ಕೇಂದ್ರವಾದ ಚಿತ್ರದುರ್ಗದಿಂದ ೬೦ ಕಿ.ಮೀ. ಹಾಗೂ ಬೆಂಗಳೂರು–ಹುಬ್ಬಳ್ಳಿ ರೈಲು ಮಾರ್ಗದಲ್ಲಿರುವ ಹೊಸದುರ್ಗ ರೋಡ್ ರೈಲ್ವೆನಿಲ್ದಾಣದಿಂದ ೧೮ ಕಿ.ಮೀ, ದೂರದಲ್ಲಿದೆ. ಸುಪ್ರಸಿದ್ಧ ಶ್ರೀ ಹಾಲುರಾಮೇಶ್ವರ ಕ್ಷೇತ್ರವು, ಹೊಸದುರ್ಗದಿಂದ (ಜಾನ್ಕಲ್ಲು ತಾಳ್ಯ ಮಾರ್ಗದಲ್ಲಿ) ೮

ಕಿ.ಮೀ. ದೂರದಲ್ಲಿದೆ. ಅತಿದೊಡ್ಡ ಕನಕವಿಗ್ರಹ (೨೪ ಅಡಿ ಎತ್ತರ)ವಿರುವ ಕನಕಗಿರಿ ಕ್ಷೇತ್ರವು, ಹೊಸದುರ್ಗದಿಂದ ೬ ಕಿ.ಮೀ. (ಬೆಂಗಳೂರು ರಸ್ತೆ) ದೂರದಲ್ಲಿ ಕೆಲ್ಲೋಡು ಬಳಿ ವೇದಾವತಿ ನದಿಯ ದಡದಲ್ಲಿ ಸ್ಥಾಪನೆಯಾಗಿದೆ. ದೇಶದಲ್ಲಿ ದೊಡ್ಡ ಬಯಲು ರಂಗಮಂದಿರವಿರುವ ಸಾಣೇಹಳ್ಳಿ ಶ್ರೀಮಠ ಹಾಗೂ ಪ್ರಾಚೀನ ಕಾಲದಲ್ಲಿ ಸಂಪದ್ಭರಿತ ರಾಜ್ಯ (ನೀಲಾವತಿಪಟ್ಟಣ)ವಾಗಿ ಮೆರೆದ ನೀರಗುಂದ ಇವೆರಡೂ ಹೊಸದುರ್ಗದಿಂದ (ಅಜ್ಜಂಪುರ ರಸ್ತೆಯಲ್ಲಿ) ೧೧ ಕಿ.ಮೀ. ದೂರದಲ್ಲಿ ಅಕ್ಕಪಕ್ಕದಲ್ಲಿವೆ. ಅಂತೆಯೇ ವೀರ ಮದಕರಿನಾಯಕನ ಜನ್ಮಸ್ಥಳವಾದ ಜಾನಕಲ್ಲು ಹೊಸದುರ್ಗದಿಂದ ೧೨ ಕಿ.ಮೀ. (ತಾಳ್ಯ ಶಿವಗಂಗ ರಸ್ತೆ), ಶ್ರೀ ಗವಿರಂಗನಾಥಸ್ವಾಮಿ ಕ್ಷೇತ್ರವು ಬೆಂಗಳೂರು ಮಾರ್ಗದಲ್ಲಿ ೨೪ ಕಿ.ಮೀ., ಐತಿಹಾಸಿಕ ಗ್ರಾಮ ಸಣ್ಣಕ್ಕಿಬಾಗೂರು ೯ ಕಿ.ಮೀ. (ಹೊಸದುರ್ಗ ರೈಲ್ವೆ ನಿಲ್ದಾಣ ಮಾರ್ಗದಲ್ಲಿ), ಪಾಳೆಯಗಾರರ ನೆಲೆವೀಡಾಗಿದ್ದ ಮತ್ತೋಡು ೧೪ ಕಿ.ಮೀ. (ಗುಡ್ಡದ ನೇರಲಕೆರೆ ಮಾರ್ಗ) ಅಂತರದಲ್ಲಿ ಇವೆ. ಜಿಲ್ಲೆಯಲ್ಲಿ ಅತೀ ಹೆಚ್ಚು ವ್ಯಾಪ್ತಿಯ ಅರಣ್ಯ ಪ್ರದೇಶವನ್ನು ಹಾಗೂ ಹೆಚ್ಚು ಸಂಖ್ಯೆಯ ಕೆರೆಗಳನ್ನು ಹೊಂದಿರುವ ತಾಲ್ಲೂಕು ಇದಾಗಿದ್ದು, ಜಿಲ್ಲೆಯಲ್ಲೇ ಹೆಚ್ಚು ತೆಂಗು, ಹುರುಳಿ ಹಾಗೂ ರಾಗಿಯನ್ನು ಬೆಳೆಯುವ ಪ್ರದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜ್ಯದಲ್ಲೇ ಮೊದಲು ಅಂಚಿನೋತ್ಸವ ನಡೆಯುವುದು ಈ ತಾಲ್ಲೂಕಿನಲ್ಲೇ. ದೇವಸ್ಥಾನಗಳು ಸಹ ಅತಿ ಹೆಚ್ಚು ಸಂಖ್ಯೆಯಲ್ಲಿವೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ** : ಹೊಸದುರ್ಗ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೪೩೮ ಚ.ಕಿ.ಮೀ ಇದೆ ಹಾಗೂ ಈ ತಾಲ್ಲೂಕು ೧೩°.೩೪' ೦೨'' ರಿಂದ ೧೪°.೦೦' ೦'' ಉತ್ತರ ಅಕ್ಷಾಂಶ ಮತ್ತು ೭೬°.೦೬' ೦೩'' ರಿಂದ ೭೬°.೩೩' ೩೬'' ಪೂರ್ವರೇಖಾಂಶದ ನಡುವೆ ವ್ಯಾಪಿಸಿದೆ. ಈ ತಾಲ್ಲೂಕಿನ ಭೂಪ್ರದೇಶವು ಸಮುದ್ರ ಮಟ್ಟದಿಂದ ೧,೧೪೧ ಮೀ. ಎತ್ತರದಲ್ಲಿದೆ. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು ಭೌಗೋಳಿಕ ವಿಸ್ತೀರ್ಣದಲ್ಲಿ ಹೊಸದುರ್ಗ ತಾಲ್ಲೂಕು ಮೂರನೆಯ ಸ್ಥಾನ ಪಡೆದಿದೆ. ತಾಲ್ಲೂಕಿನ ಕಂದಾಯ ಗ್ರಾಮಗಳ ಸಂಖ್ಯೆ ಒಟ್ಟು ೨೨೫, ಗ್ರಾಮ ಪಂಚಾಯಿತಿಗಳ ಸಂಖ್ಯೆ ಮೂವತ್ತ್ಮೂರು ಹಾಗೂ ಹೋಬಳಿಗಳ ಸಂಖ್ಯೆ ನಾಲ್ಕು ಇದ್ದು, ಬೇಚರಾಕ್ ಗ್ರಾಮಗಳ ಸಂಖ್ಯೆ ೧೮೫ ಇದೆ.

೧೮೮೨ರಲ್ಲಿ ಹೊಸದುರ್ಗ ಉಪ ತಾಲ್ಲೂಕಿನ ಜನಸಂಖ್ಯೆ ೧೧,೨೧೬ ಮತ್ತು ಹೊಸದುರ್ಗ ಪಟ್ಟಣದ ಜನಸಂಖ್ಯೆ ೨,೦೬೧ ಇದ್ದಿತು. ೧೯೯೧ರ ಜನಗಣತಿಯಂತೆ ತಾಲ್ಲೂಕಿನ ಜನಸಂಖ್ಯೆ ೧,೯೯,೮೪೯ ಇದ್ದು, ೨೦೦೧ರ ಜನಗಣತಿಯ ಹೊತ್ತಿಗೆ ಆ ಸಂಖ್ಯೆ ೨,೧೯,೪೪೫ ಕ್ಕೆ ಏರಿತು. ಅಂದರೆ ಒಂದು ದಶಕಾವಧಿಯಲ್ಲಿ ತಾಲ್ಲೂಕಿನ ಜನಸಂಖ್ಯೆ ಶೇ. ೯.೮ ಅಧಿಕಗೊಂಡಿತು. ೨೦೧೧ರ ಜನಗಣತಿಯಂತೆ ತಾಲ್ಲೂಕಿನ ಜನಸಂಖ್ಯೆ ೨,೩೫,೧೧೬ ಆಗಿದೆ. ತಾಲ್ಲೂಕಿನಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ:

೫೨೫೮೨ ಆಗಿದೆ. ಜನಸಂಖ್ಯೆ ೨,೩೫,೧೧೬ರಲ್ಲಿ ಗಂಡು : ೧,೧೯,೧೪೮, ಹೆಣ್ಣು ೧,೧೫,೯೬೮ ಹಾಗೂ ಕುಟುಂಬಗಳ ಸಂಖ್ಯೆಯಲ್ಲಿ ನಗರ : ೪,೪೮೦ ಮತ್ತು ಗ್ರಾಮೀಣ ಕುಟುಂಬಗಳು ೪೦,೦೦೯ (ನಗರ ಜನಸಂಖ್ಯೆ ೨೮,೩೭೦ ಮತ್ತು ಗ್ರಾಮೀಣ ಜನಸಂಖ್ಯೆ: ೨,೦೬,೭೪೬) ತಾಲ್ಲೂಕಿನ ಪರಿಶಿಷ್ಟ ಜಾತಿ ಜನಸಂಖ್ಯೆ : ೪೮,೨೭೨ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆ ೧೮,೯೫೪ ಆಗಿದೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ, ಹೊಸದುರ್ಗ**

| | | | **೨೦೧೧ರ ಜನಗಣತಿ ಪ್ರಕಾರ** |
|---|---|---|---|
| ೧) | ಭೌಗೋಳಿಕ ವಿಸ್ತೀರ್ಣ (ಚ.ಕಿಮೀ) | | ೧,೪೩೮ |
| ೨) | ಜನಸಂಖ್ಯೆ (೨೦೧೧ರ ಜನಗಣತಿ) | | |
| | ೨.೧) | ಗಂಡಸರು | ೧,೧೯,೧೪೮ |
| | ೨.೨) | ಹೆಂಗಸರು | ೧,೧೫,೯೬೮ |
| | ೨.೩) | ಒಟ್ಟು | ೨,೩೫,೧೧೬ |
| ೩) | ದಶಕದ ಬೆಳವಣಿಗೆ ಪ್ರಮಾಣ (ಪ್ರತಿಶತ) –೨೦೧೧ | | ೭.೧೪ |
| ೪) | ಲಿಂಗಾನುಪಾತ | | |
| | ೪.೧) | ನಗರ | ೯೫೧ |
| | ೪.೨) | ಗ್ರಾಮೀಣ | ೯೭೬ |
| | ೪.೩) | ಒಟ್ಟು | ೯೭೩ |

ಹೊಸದುರ್ಗ ತಾಲ್ಲೂಕಿನಲ್ಲಿ ಜನಸಾಂದ್ರತೆಯು ಪ್ರತಿ ಚ.ಕಿ.ಮೀ.ಗೆ ೧೬೪ ಇದ್ದು, ಜಿಲ್ಲೆಯಲ್ಲಿ ಅತ್ಯಧಿಕ ಜನಸಾಂದ್ರತೆಯಿರುವ ನಾಲ್ಕನೇಯ ತಾಲ್ಲೂಕು ಆಗಿದೆ. ತಾಲ್ಲೂಕಿನಲ್ಲಿ ಸಾಕ್ಷರಸ್ಥರ ಸಂಖ್ಯೆ ೧,೫೪,೪೯೩ ಇದ್ದು, ಇವರಲ್ಲಿ ಗಂಡು : ೮೬,೧೩೩ ಮತ್ತು ಹೆಣ್ಣು ೬೮,೩೬೦ ಇದ್ದಾರೆ ಹಾಗೂ ತಾಲ್ಲೂಕಿನಲ್ಲಿ ಸಾಕ್ಷರತಾ ಪ್ರಮಾಣ ೭೩.೭೮ ಇದೆ.

ತಾಲ್ಲೂಕಿನ ಜನಸಂಖ್ಯೆಯಲ್ಲಿ ಹಿಂದೂ ೨,೦೬,೫೪೩ (೯೪.೧೨%), ಮುಸ್ಲಿಂ ೧೦,೪೨೬ (೪.೭೫%), ಕ್ರೈಸ್ತ ೧೧೭ (೦.೦೫%), ಜೈನ ೫೦೩ (೦.೨೨%), ಇತರೆ: ೧,೮೫೬ (೦.೮೩%) ಇರುವರೆಂದು ೨೦೦೧ರ ಜನಗಣತಿಯಲ್ಲಿ ಸಮೀಕ್ಷಿಸಲಾಗಿದೆ. ೮೪ ಗ್ರಾಮಗಳು ಮತ್ತು ೧ ಪಟ್ಟಣವನ್ನು ಹೊಂದಿರುವ ಕಸಬಾ ಹೋಬಳಿಯ ಒಟ್ಟು ಜನಸಂಖ್ಯೆ: ೬೬,೭೮೭. ೪೩ ಗ್ರಾಮಗಳನ್ನೊಳಗೊಂಡಿರುವ ಮತ್ತೋಡು ಹೋಬಳಿಯ

ಒಟ್ಟು ಜನರ ಸಂಖ್ಯೆ: ೩೭,೦೧೫, ಅಲ್ಲದೆ ೩೮ ಗ್ರಾಮಗಳನ್ನು ಹೊಂದಿರುವ ಮಾಡದಕೆರೆ ಹೋಬಳಿಯ ಜನಸಂಖ್ಯೆ : ೪೧,೨೨೪ ಹಾಗೂ ೫೯ ಗ್ರಾಮಗಳನ್ನು ಹೊಂದಿರುವ ಶ್ರೀರಾಂಪುರ ಹೋಬಳಿಯ ಜನಸಂಖ್ಯೆಯು ೫೧,೯೩೧ ಆಗಿದೆ. ಹೊಸದುರ್ಗ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಗುಡ್ಡದನೇರಲಕೆರೆ ಗ್ರಾಮ ಪಂಚಾಯಿತಿ ಅತಿಹೆಚ್ಚು ಜನಸಂಖ್ಯೆ (೨,೬೩೩)ಯನ್ನು ಹೊಂದಿದೆ. ದೊಡ್ಡಘಟ್ಟ ಗ್ರಾಮ ಪಂಚಾಯಿತಿಯು ಅತಿಹೆಚ್ಚು ಪರಿಶಿಷ್ಟ ಜಾತಿಯ ಜನಸಂಖ್ಯೆ (೨,೩೪೮) ಹೊಂದಿದೆ. ಅತಿಹೆಚ್ಚು ಪರಿಶಿಷ್ಟ ಪಂಗಡ ಜನಸಂಖ್ಯೆ (೨,೨೬೯) ಇರುವ ಗ್ರಾಮ ಪಂಚಾಯತಿ ಗುಡ್ಡದನೇರಲಕೆರೆ ಆಗಿದೆ.

ತಾಲ್ಲೂಕಿನ ಗ್ರಾಮಗಳಲ್ಲಿ ಅತ್ಯಧಿಕ ಜನಸಂಖ್ಯೆಯಿರುವ ಗ್ರಾಮ ಜಾನಕಲ್ಲು (೪,೭೯೧), ಇದೇ ಗ್ರಾಮ ಅತಿಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆ (೧,೩೫೭)ಯನ್ನು ಹೊಂದಿದೆ. ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೆಚ್ಚಾಗಿ ಒಳಗೊಂಡಿರುವ ಹಳ್ಳಿ– ನಾಗತಿಹಳ್ಳಿ (ಜಿ.ಎನ್.ಕೆರೆ ಗ್ರಾ.ಪಂ) (೧,೨೫೧) ಹಾಗೂ ಅತ್ಯಂತ ಕಡಿಮೆ ಜನಸಂಖ್ಯೆ (೭) ಹೊಂದಿರುವ ಗ್ರಾಮ – ಗೊಲ್ಲರಹಳ್ಳಿ.

**ಭೂ ಸ್ವರೂಪ**: ಜಿಲ್ಲಾ ಕೇಂದ್ರವಾದ ಚಿತ್ರದುರ್ಗಕ್ಕಿಂತ ಭಿನ್ನವೂ ವಿಶಿಷ್ಟವೂ, ಆಗಿರುವ ಹೊಸದುರ್ಗ ಪ್ರದೇಶದ ಭೌಗೋಳಿಕ ಲಕ್ಷಣಗಳು, ಇಲ್ಲಿನ ಜನರ ಕೃಷಿ ಮತ್ತು ಕೈಗಾರಿಕೆಗಳಿಗೆ ಪೂರಕವಾಗಿದ್ದು, ಇಲ್ಲಿರುವ ಬೆಟ್ಟಗುಡ್ಡ, ಕಣಿವೆ– ಹುಲ್ಲುಗಾವಲುಗಳು–ನದಿ–ಹಳ್ಳಕೊಳ್ಳ–ಹೊಂಡಗಳು, ಅಧಿಕ ಸಂಖ್ಯೆಯಲ್ಲಿರುವ ಜಲಬುಗ್ಗೆಗಳ 'ವಜ್ಜುರ'ಗಳು (ನೀರು ಬಸರುವ ಜಾಗ), ಫಲವತ್ತತೆಯಿಂದ ಹಾಗೂ ವಿವಿಧ ಖನಿಜಗಳಿಂದ ಕೂಡಿರುವ ಇಲ್ಲಿನ ಭೂಸಂಪತ್ತು ತಾಲ್ಲೂಕಿನ ಹಿರಿಮೆಯನ್ನು ಹೆಚ್ಚಿಸಿವೆ. ಇಲ್ಲಿ ಸಮಶೀತೋಷ್ಣ ವಾಯುಗುಣವಿದೆ. ತಾಲ್ಲೂಕಿನ ಭೂಪ್ರದೇಶವು, ಸಮುದ್ರ ಮಟ್ಟದಿಂದ ೧,೧೪೧ ಮೀ. ಎತ್ತರದಲ್ಲಿದ್ದು, ಸಾಮಾನ್ಯ ಉಬ್ಬು–ತಗ್ಗುಗಳಿಂದ ಕೂಡಿದೆ. ತಾಲ್ಲೂಕಿನಲ್ಲಿ ದಕ್ಷಣೋತ್ತರವಾಗಿ ಹಬ್ಬಿರುವ ಎರಡು ಗಿರಿಪಂಕ್ತಿಗಳು ತಾಲೂಕನ್ನು ಭೌಗೋಳಿಕವಾಗಿ ನಾಲ್ಕು ವಿಭಾಗಗಳನ್ನಾಗಿಸಿದೆ.

(೧)ಚನ್ನಸಮುದ್ರದಿಂದ ಪ್ರಾರಂಭವಾಗಿ ಬ್ರಹ್ಮವಿದ್ಯಾನಗರ, ಹಾಲುರಾಮೇಶ್ವರ, ಶಬರಿವನ ಮೂಲಕ ಹಬ್ಬಿರುವ ಗಿರಿಪಂಕ್ತಿ, (೨)ಹುಳಿಯಾರು ಕಡೆಯಿಂದ ಹಬ್ಬಿರುವ ಬೆಟ್ಟಸಾಲು, (೩)ಮಾಡದಕೆರೆಯ ಹತ್ತಿರ ಹಾದು ಹೋಗಿರುವ ಗುಡ್ಡಗಳ ಸಾಲು ಹಾಗೂ (೪)ತಾಲ್ಲೂಕಿನ ಪೂರ್ವದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿರುವ ಮಾರೀಕಣಿವೆಯ ಬೆಟ್ಟಸಾಲು (ಇದು ಹೊಸದುರ್ಗ ತಾಲ್ಲೂಕು ಮತ್ತು ಹಿರಿಯೂರು ತಾಲ್ಲೂಕಿನ ಗಡಿ ಭಾಗವೂ ಆಗಿದೆ). ತಾಲ್ಲೂಕಿನ ಬಹುಪಾಲು ಭೂಭಾಗವು ವೇದಾವತಿ ನದಿಯ ಜಲಾನಯನ ಪ್ರದೇಶದ ವ್ಯಾಪ್ತಿಗೊಳಪಟ್ಟಿದೆ. ಇಲ್ಲಿನ ಬೆಟ್ಟ ಪ್ರದೇಶಗಳಲ್ಲಿ ಕುರುಚಲು ಜಾತಿಯ ಗಿಡಗಳೂ ಬೆಳೆಯುತ್ತವೆ. ಇಲ್ಲಿನ ಮಣ್ಣಿನ ರಚನೆ ಹಾಗೂ ಬಣ್ಣವನ್ನು ಆಧರಿಸಿ ಮೂರು ವಿಧದ ಮಣ್ಣನ್ನು ಗುರುತಿಸಬಹುದಾಗಿದೆ. (೧)ಕಪ್ಪು ಮಣ್ಣು

(ಎರೆಯ ಭೂಮಿ) ಇಲ್ಲಿನ ಅರಳಿಹಳ್ಳಿ, ಅನಿವಾಳ, ಶ್ರೀರಂಗಪುರ ಚಿಕ್ಕಯಗಟಿ, ಬಳ್ಳೆಕೆರೆ, ನಾಗೇನಹಳ್ಳಿ ಗ್ರಾಮಗಳಲ್ಲಿಯೂ (೨)ಮರಳು ಮಿಶ್ರಿತ ಕೆಂಪು, ಕಂದು ಮತ್ತು ಮರಳುಮಣ್ಣು ಮಾರಬಘಟ್ಟ, ಭಾಗಶೆಟ್ಟಿಹಳ್ಳಿ, ಬಲ್ಲಾಳಸಮುದ್ರ, ತಂಡಗ, ಹರಳಹಳ್ಳಿ, ಕಾರೇಹಳ್ಳಿ, ಕೊಂಡಾಪುರ, ಹೆಬ್ಬಳ್ಳಿ ಮತ್ತು ಹೊಸದುರ್ಗ ಭಾಗಗಳಲ್ಲಿಯೂ ಇದೆ. ಭೂಮಿಯಲ್ಲಿ ಹುದುಗಿರುವ ಗ್ರಾನೈಟ್ ಮತ್ತು ನೈಸ್ ಶಿಲೆಗಳಿಂದಾಗಿ ಮರಳು ಮಿಶ್ರಿತ ಕೆಂಪು, ಕಂದು ಹಾಗೂ ಮರಳು ಮಣ್ಣು ಉಂಟಾಗಿರುತ್ತವೆ. ಸಿಸ್ಟ್, ಕಬ್ಬಿಣ ಮತ್ತು ಮೆಗ್ನೀಷಿಯಂ ಧಾತುಗಳು ಅಧಿಕವಾಗಿರುವ ಶಿಲೆಗಳಿಂದಾಗಿ ಕಂದು ಬಣ್ಣದ ಗೋಡುಮಣ್ಣು ಮತ್ತು ಕೆಂಪುಮಣ್ಣು ಉಂಟಾಗುವುದು. ವೇದಾವತಿ ನದಿಯ ಪಾತ್ರದ ಇಕ್ಕೆಲಗಳಲ್ಲಿ ಸಿಗುವ ಕ್ಷಾರೀಯ ಮಣ್ಣಿನ ವ್ಯಾಪ್ತಿಯು ಕೇವಲ ತಗ್ಗು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದು, ಬೆಲಗೂರು ಮತ್ತು ಸೊಡರನಾಳು ಮುಂತಾದೆಡೆ ಇದನ್ನು ನೋಡಬಹುದು. ಗೋಡು ಮಿಶ್ರಿತ ಕೆಂಪುಮಣ್ಣು, ನೊರಜು ಮತ್ತು ಎರೆಭೂಮಿ ತೆಂಗುಬೆಳೆಗೆ ಉತ್ಕೃಷ್ಟವಾಗಿದೆ.

ಹಿಂದಿನ ಕಾಲದಲ್ಲಿ ಇಲ್ಲಿ ಅನೇಕ ಕಾವಲುಗಳು ಹೆಸರಾಗಿದ್ದವು. ತೊಗರಿಗೊಂದಿ ಕಾವಲು, ಎಕ್ಕಾಗೊಂದಿ ಕಾವಲು, ಮುಕ್ಕನಕಲ್ಲು ಕಾವಲು, ಮಾಳೇಗುತ್ತಿ ಕಾವಲು, ಮುಗಿಲೋಡು ಕಾವಲು, ಅರೇಹಳ್ಳಿ ಕಾವಲು, ಆನೆಗೊಂದಿಕಾವಲು ಇವು ಮತ್ತೋಡು ಪಾಳೆಯಪಟ್ಟಿನ ವ್ಯಾಪ್ತಿಗೊಳಪಟ್ಟಿದ್ದವು. ಕ್ಯಾದಿಗೆರೆ ಕಾವಲು, ಕುದುರೆ ಕಣಿವೆ ಕಾವಲು, ಕುಮಾರನ ಕಣಿವೆ ಕಾವಲು, ಕೈನಡು ಕಾವಲು, ಬಲ್ಲಾಳ ಸಮುದ್ರ ಕಾವಲು, ವೀರಾಪುರ ಕಾವಲು, ಕೈನಡು ಒಳಕಾವಲು ಮುಂತಾದವು ಈಗಲೂ ಇವೆ. ಅಲ್ಲದೆ ತಾಲ್ಲೂಕಿನ ವಿವಿಧೆಡೆ ಹರಿಯುವ ಖಾನಿಹಳ್ಳ, ಗುಂಡಿಹಳ್ಳ, ನಾಮದ ಹಳ್ಳ, ಗಂಗೆಹಳ್ಳ, ಮಲತೊರೆ, ಅಯ್ನೋರಹಳ್ಳ, ಕಲ್ಲೇದೇವರ ಹೊಳೆ ಮುಂತಾದವು ಅಲ್ಲದೆ ತಾಲ್ಲೂಕಿನ ವಿವಿಧೆಡೆ ನಿರ್ಮಿಸಿರುವ ಚೆಕ್‌ಡ್ಯಾಂಗಳು ಭೂಮಿಯ ಫಲವತ್ತತೆಗೆ ಜಲಾಸರೆಯಾಗಿವೆ.

**ಅರಣ್ಯ ಸಂಪತ್ತು**

ಕ್ರಿ.ಶ. ೧೭ನೆಯ ಶತಮಾನದ, ಇಲ್ಲಿನ ಬೂದಾಳು(ಶ್ರೀರಾಂಪುರ) ಕೋಟೆಯ ಸಿರುಮಣ್ಣ ನಾಯಕನನ್ನು ಕುರಿತ ಸಾಂಗತ್ಯ ಕೃತಿಗಳಲ್ಲಿ, ಬೂದಾಳು ಸೀಮೆಯಿಂದ ಹೊರಗಿದ್ದ ದಶರಥ ರಾಮೇಶ್ವರ ಅರಣ್ಯದ ವರ್ಣನೆ ಇದೆ. 'ದಶರಥ ರಾಮೇಶನ ಕಾನನದಲಿ ಎಸೆದಿಹ ನಾನಾ ವೃಕ್ಷಗಳು' ಎಂದಿರುವ ಕವಿಯು, ಆ ಅರಣ್ಯವು ಲಕ್ಕೆ, ಅಂಕೋಲೆ, ಬಿದರು, ದೇವದಾರು, ಕಕ್ಕೆ, ತುಂಬುರ, ಅರಟಾಳು, ಬಿಕ್ಕೆ, ಬೇಳವು, ನೇರಿಲು, ಮಾಮರದಿಂದ ಕಿಕ್ಕಿರಿದಿಹುದು ಆ ವಿಪಿನ' ಎಂದು ಹೊಗಳಿದ್ದಾನಲ್ಲದೆ, ಅಲ್ಲಿನ ಹೊನ್ನೆ, ಹುಣಸೆ, ಆಲ, ಎಲಚಿ, ಪಚ್ಚೇರ, ಬನ್ನಿ, ತರಿ, ಬೇವು, ಕೆನ್ನೆಲ್ಲಿ, ಹಿಪ್ಪೆ, ತೇಗ,

ಬಿದಿರು ಮುಂತಾದ ವೃಕ್ಷಸಂಪತ್ತನ್ನು, ಹುಲ್ಲೆ, ಹರಿಣ, ಕಾಡೆಮ್ಮೆ, ಬಲ್ಲೂಕ, ಕಡವೆ, ಸಾರಂಗ, ಹುಲಿ, ಮೊಲ, ಉಡ, ಕಾಡುಬೆಕ್ಕು, ವರಾಹ ಮುಂತಾದ ವನ್ಯಜೀವಿಗಳನ್ನು ಉಲ್ಲೇಖಿಸಿದ್ದಾನೆ.

೧೮೦೧ರಲ್ಲಿ ಫ್ರಾನ್ಸಿಸ್ ಬುಕಾನನ್‌ನು ಮತ್ತೋಡು ಸುತ್ತಲ ಪ್ರದೇಶಗಳಲ್ಲಿ ಸಂಚರಿಸಿ ಅಧ್ಯಯನ ನಡೆಸಿದ್ದು, ಇಲ್ಲಿನ ಬುಕ್ಕಸಾಗರ ಮತ್ತು ಕುದುರೆ ಕಣಿವೆಗಳಲ್ಲಿ ನರಭಕ್ಷಕ ಹುಲಿಗಳಿದ್ದವೆಂದೂ, ಕಗ್ಗಲಕಟ್ಟೆ ಹಾಗೂ ಲಕ್ಕೀಹಳ್ಳಿ ಸಮೀಪದ ಕಣಿವೆಗಳಲ್ಲಿಯೂ ಹುಲಿಗಳು ವಿಪುಲವಾಗಿದ್ದು, ಗ್ರಾಮಗಳ ಜನರು ರಾತ್ರಿ ವೇಳೆಯಲ್ಲಿ ಗ್ರಾಮಗಳನ್ನು ತೊರೆಯುತ್ತಿದ್ದರು ಹಾಗೂ ಬುಕ್ಕಸಾಗರ ಕಣಿವೆಯ ಗಣಿಯನ್ನು ಜನರು ತೊರೆಯುವಂತೆ ಒತ್ತಾಯಿಸಲಾಗಿತ್ತೆಂದು ತಿಳಿಸಿದ್ದಾನೆ. ಇಂದಿಗೂ ಬೇವಿನಹಳ್ಳಿ, ಕಂಚೀಪುರ, ಬುರುಡೇಕಟ್ಟೆ, ಚಿಕ್ಕಬ್ಯಾಲದಕೆರೆ, ಜಾನ್ಕಲ್ಲು, ಹೊಸದುರ್ಗ, ಮಲ್ಲಪ್ಪನಹಳ್ಳಿ, ಮಾವಿನಕಟ್ಟೆ, ಮಾಡದಕೆರೆ, ಹುಲುಕಟ್ಟೆ, ಇಟ್ಟಿಗೆಹಳ್ಳಿ, ಕಪ್ಪನಾಯಕನಹಳ್ಳಿ ಮುಂತಾದೆಡೆ ಕರಡಿ, ಚಿರತೆ, ಕಾಡಾನೆ, ಮುಳ್ಳುಹಂದಿ ಮುಂತಾದ ಕಾಡುಪ್ರಾಣಿಗಳ ಉಪಟಳ ಹೆಚ್ಚಾಗಿದೆ. ಚಿತ್ರದುರ್ಗ ಜಿಲ್ಲೆಯ ಒಟ್ಟು ಅರಣ್ಯಪ್ರದೇಶದ ವಿಸ್ತೀರ್ಣವು ೭೩,೭೧೯ ಹೆಕ್ಟೇರುಗಳು ಆಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿರುವ ಅರಣ್ಯಪ್ರದೇಶಗಳ ಒಟ್ಟು ವಿಸ್ತೀರ್ಣವು ೧೯,೦೭೪ ಹೆಕ್ಟೇರುಗಳಾಗಿದ್ದು, ಜಿಲ್ಲೆಯಲ್ಲಿಯೇ ಇದು ಅತ್ಯಧಿಕ ಅರಣ್ಯ ಪ್ರದೇಶವನ್ನು ಹೊಂದಿರುವ ತಾಲೂಕಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ 'ಕಾಯ್ದಿಟ್ಟ ಅರಣ್ಯ ಪ್ರದೇಶ'ಗಳು.

(೧) ಕುದುರೆ ಕಣಿವೆ ಕಾಯ್ದಿಟ್ಟ ಅರಣ್ಯ ಪ್ರದೇಶ ಭಾಗ–೧
೨) ಜಾನಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶ
೩) ದೇವರ ಗುಡ್ಡ ಕಾಯ್ದಿಟ್ಟ ಅರಣ್ಯ ಪ್ರದೇಶ
೪) ಲಕ್ಕೀಹಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶ
೫) ಕುದುರೆ ಕಣಿವೆ ಕಾಯ್ದಿಟ್ಟ ಅರಣ್ಯ ಪ್ರದೇಶ –ಭಾಗ ೨

ಆಗಿನ ಮೈಸೂರು ಸರ್ಕಾರವು ಈ ಕಾಯ್ದಿಟ್ಟ ಅರಣ್ಯ ಪ್ರದೇಶಗಳ ಬಗ್ಗೆ ಅನುಕ್ರಮವಾಗಿ ಇಸವಿ ೧೮೯೫, ೧೯೦೩, ೧೯೦೪, ೧೯೦೫ ಹಾಗೂ ೧೯೧೫ರಲ್ಲಿ ನೋಟಿಫಿಕೇಷನ್ ಹೊರಡಿಸಿದೆ. ಇವುಗಳಲ್ಲಿ ಲಕ್ಕೀಹಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶವು ಅತಿ ಹೆಚ್ಚು ವಿಸ್ತೀರ್ಣವನ್ನು (೭,೩೫೯,೨೯ ಹೆ) ಹೊಂದಿದೆ. ಇಲ್ಲಿನ ಅರಣ್ಯಗಳಲ್ಲಿ ಕಾರಾಚಿ ಮರಗಳು, ಹಿಪ್ಪೆ, ಮಾವು, ಹುಣಸೆ, ಜಾಲಿ, ಕಮರ, ಬೇವು, ಬಾಗೆ, ಮತ್ತಿ, ತಾರೆ, ಆಲ, ಬಿಲ್ವಾರ, ಕರೀಬಸರಿ ಮುಂತಾದ ಮರಗಳು, ಬಂದರಿಕೆ ಮುಂತಾದ ಕುರುಚಲು ಗಿಡಗಳು ಇವೆ. ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿ, ಮೊಲ, ಜಿಂಕೆ, ನವಿಲು, ಕಾಡುಕೋಳಿ, ಮರಕುಟಿಗ, ಅಳಿಲು, ಉಡ, ಕೋತಿಗಳು, ಸರ್ಪ ಮುಂತಾದ ಕಾಡುಪ್ರಾಣಿಗಳೂ – ಪಕ್ಷಿಗಳೂ ಕಂಡು ಬರುತ್ತವೆ.

**'ಮಗುವಿಗೊಂದು ಮರ : ಶಾಲೆಗೊಂದು ವನ'** ಯೋಜನೆ ಹಾಗೂ 'ಪಟ್ಟಣ ನಗರೀಕರಣ' ಯೋಜನೆ ಹಾಗೂ 'ರೈತರಿಗೆ ಕೃಷಿ ಅರಣ್ಯ ಪ್ರೋತ್ಸಾಹ' ಯೋಜನೆ ಜಾರಿಯಲ್ಲಿವೆ. ಕಡವಗೆರೆ ವಜ್ರ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲಾಗುತ್ತಿದೆ. ಅಲ್ಲದೆ, ಸಾಮಾಜಿಕ ಅರಣ್ಯ ವಲಯ ವಿಭಾಗದಿಂದ ವಿಶೇಷ ಅಭಿವೃದ್ಧಿ ಯೋಜನೆಯಡಿ ನೆಡುತೋಪು ನಿರ್ವಹಣೆ ಮಾಡಲಾಗುತ್ತಿದೆ. (೧೯ ಕಿಮೀ. ಹಾಗೂ ೬೩.೨೫ ಹೆಕ್ಟೇರು ಪ್ರದೇಶದಲ್ಲಿ) ತಾಲ್ಲೂಕಿನಲ್ಲಿರುವ ತೋಪುಗಳ ಪ್ರದೇಶ ಒಟ್ಟು ೧೪೨೬ ಹೆಕ್ಟೇರುಗಳು.

**ಬೆಟ್ಟ-ಗುಡ್ಡಗಳು** : ಹೊಸದುರ್ಗ ತಾಲ್ಲೂಕಿನಲ್ಲಿ ಅನೇಕ ಬೆಟ್ಟ ಗುಡ್ಡಗಳಿವೆ. ಜಾನಕಲ್ಲು ಗುಡ್ಡವು ಪ್ರಾಚೀನ ಆದಿಹಳೆಯ ಶಿಲಾಯುಗದ ನೆಲೆಯಾಗಿದ್ದಿತೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಿಂದ ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಮುಖಾಂತರ ಅಣಜಿಯವರೆಗೂ ವಿಸ್ತರಿಸಿದೆ. ಇವುಗಳಲ್ಲಿ ಈ ತಾಲ್ಲೂಕಿನ ನೀರಗುಡ್ಡ ಬೆಟ್ಟ ಶ್ರೇಣಿ, ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲದೇವರ ಗುಡ್ಡ ಮತ್ತು ಹಾಲುರಾಮೇಶ್ವರ ಗುಡ್ಡ ಪ್ರಮುಖವಾದವು. ಮಾರೀಕಣಿವೆ ಬೆಟ್ಟಸಾಲು ತಾಲ್ಲೂಕಿನ ಪೂರ್ವ-ದಕ್ಷಿಣೋತ್ತರವಾಗಿದೆ. ಹಾಲುರಾಮೇಶ್ವರ ಬೆಟ್ಟವು ಜಿಲ್ಲೆಯಲ್ಲಿ ಅತ್ಯಂತ ಎತ್ತರವಾದ ಬೆಟ್ಟವಾಗಿದೆ. (ಸಮುದ್ರ ಮಟ್ಟದಿಂದ ೧,೧೮೧ ಮೀ.) ಗವಿರಂಗನಾಥಸ್ವಾಮಿ ಬೆಟ್ಟ, ಮೈಲಾರಗುಡ್ಡ, ಸಿದ್ದಪ್ಪನಬೆಟ್ಟ, ಕಂಚೀದೇವರಬೆಟ್ಟ, ಉತ್ತರೇಗುಡ್ಡ, ಮುತ್ತಿನದೇವರ ಗುಡ್ಡ, ದಶರಥರಾಮೇಶ್ವರ ಬೆಟ್ಟ, ದೇವರಮರಡಿ, ಮಾವಿನ ಕಣಿವೆ ರಂಗಪ್ಪನ ಬೆಟ್ಟ ಮುಂತಾದವು ಪುಣ್ಯಕ್ಷೇತ್ರಗಳ ಶಿಖರಗಳಾಗಿವೆ. ಗವಿರಂಗನಾಥಸ್ವಾಮಿಬೆಟ್ಟವು ನಾಡಿನ ಏಕೈಕ ಕೂರ್ಮಾವತಾರ ಕ್ಷೇತ್ರವೆಂದು ಪ್ರಖ್ಯಾತವಾಗಿದೆ. ಕಂಚಿದೇವರು, ನಾಡಿನಲ್ಲಿ ಮೊದಲು ಅಂಬು ಹೊಡೆಯುವ ದೇವರಾಗಿದೆ. ಮೈಲಾರಗುಡ್ಡವು ದಕ್ಷಿಣ ಭಾರತದ ಮೈಲಾರನ ಕೆಲವೇ ಆರಾಧನಾ ಕೇಂದ್ರಗಳಲ್ಲಿ ಒಂದೆನಿಸಿದೆ. ಹೊಸದುರ್ಗ ಪಟ್ಟಣದ ಇಬ್ಬದಿಗಳಲ್ಲಿರುವ ಭೈರನ ಕುಂಬಿ ಗುಡ್ಡ ಹಾಗೂ ದೊಡ್ಡಗುಡ್ಡ(ದೇವರಗುಡ್ಡ) ಇತಿಹಾಸ ಸಂಶೋಧನೆಗೆ ಅರ್ಹವಾಗಿವೆ. ದೊಡ್ಡಗುಡ್ಡದ ಹಿಂಬದಿಗಿರುವ 'ಬಸವನ ಕಣಿವೆ' ಪ್ರಕೃತಿ ಸೌಂದರ್ಯದಿಂದ ಕೂಡಿದೆ.

## ಪ್ರಾಣಿ ಸಂಪತ್ತು

ಹಿಂದಿನ ಕಾಲದಲ್ಲಿ ಎಲ್ಲೆಡೆ ಗೋವುಗಳನ್ನು ಹೆಚ್ಚಾಗಿ ಸಾಕುತ್ತಿದ್ದು, ಹೆಚ್ಚು ಸಂಖ್ಯೆಯ ಗೋವು (ರಾಸು)ಗಳ ಹಿಂಡುಗಳನ್ನು ಹೊಂದಿರುವುದು ಆಗಿನ ಕಾಲದ ರಾಜರುಗಳಿಗೆ/ಪಾಳೆಯಗಾರರಿಗೆ ಸಂಪತ್ತಿನ ಕುರುಹಾಗಿತ್ತು. ಬೂದಿಹಾಳಿನ ಸಿರುಮನಾಯಕನು ದಶರಥರಾಮೇಶ್ವರ ಅರಣ್ಯದಲ್ಲಿ ಹಿರಿಯೂರು ಕಸವೇಂದ್ರನಿಗೆ ಸೇರಿದ್ದ ತುರುಗಳನ್ನು ಹಿಡಿದಿದ್ದರಿಂದ ಇಬ್ಬರಿಗೂ ಯುದ್ಧ ನಡೆಯಿತೆಂದು ತಿಳಿದು

ಬರುತ್ತದೆ. ಹೊಸದುರ್ಗ ತಾಲ್ಲೂಕಿನಲ್ಲಿ ಬಾಗೂರು, ಹೆಬ್ಬಳ್ಳಿ, ನಿರುವುಗಲ್ಲು, ಅತ್ತಿಮಗೆ, ಜಾನಕಲ್ಲು, ಮಳಲಿ, ಮೆಣಸಿನಡು, ಆನಿವಾಳ, ಹೊನ್ನೇಕೆರೆ ಮುಂತಾದೆಡೆ ಇರುವ ಕ್ರಿ.ಶ. ೮ನೇ ಶತಮಾನದಿಂದ ೧೩ನೇ ಶತಮಾನದವರೆಗಿನ ವೀರಗಲ್ಲುಗಳನ್ನು (ಒಟ್ಟು ಹದಿನಾರು) ಅವುಗಳ ಶಾಸನಗಳನ್ನು ಪರಿಶೀಲಿಸಿದರೆ, ಒಟ್ಟಾರೆ ೨೫ ಜನ ವೀರಸೈನಿಕರು–ಊರಾಳುಗಳು ತುರುಗಳ ರಕ್ಷಣೆಗಾಗಿ ಮಾಡಿದ ಕಾಳಗಗಳಲ್ಲಿ ವೀರ ಮರಣವನ್ನಪ್ಪಿರುವುದು ಅರಿವಾಗುತ್ತದೆ. ಬಾಗೂರಿನ ಕ್ರಿ.ಶ.೧೫ನೇ ಶತಮಾನದ ಶಾಸನದಲ್ಲಿ ಚನ್ನಕೇಶವ ದೇವರ ನೈವೇದ್ಯಕ್ಕೆ ಸಲ್ಲುವ ದಧ್ಯಾನ್ನ(ಮೊಸರನ್ನ)–ಹಾಲು–ತುಪ್ಪ ಮುಂತಾದವಕ್ಕಾಗಿ ಅರಳಹಳ್ಳಿಯ ಆಕಳುಗಳನ್ನು ದತ್ತಿ ಬಿಡಲಾಗಿದ್ದಿತೆಂಬ ಅಂಶ ವೇದ್ಯವಾಗುವುದು. ವಿಜಯನಗರ ಕಾಲದಲ್ಲಿ ಅಮೃತಮಹಲ್ ರಾಸುಗಳ ತಳಿ ಸಂಶೋಧನೆಗೊಂಡು, ಈ ತಳಿಯ ರಾಸುಗಳು ರಾಜರುಗಳ ಸಂಪತ್ತಿನ ದ್ಯೋತಕವಾಗಿದ್ದವು. ೧೯೨೦ರಲ್ಲಿ ಅಮೃತಮಹಲ್‌ನ್ನು ಕೃಷಿ ಇಲಾಖೆಗೆ ವಹಿಸಲ್ಪಟ್ಟಿತು. ನಂತರದಲ್ಲಿ ಪಶುಪಾಲನಾ ಇಲಾಖೆಗೆ ವರ್ಗಾಯಿಸಲ್ಪಟ್ಟಿತು. ತರೀಕೆರೆ ಬಳಿಯ ಅಜ್ಜಂಪುರದಲ್ಲಿ ಮುಖ್ಯ ಕೇಂದ್ರವಿದ್ದು, ಸ್ಥಾಪಿಸಲಾದ ಇತರೆ ಉಪಕೇಂದ್ರಗಳಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ಉಪಕೇಂದ್ರ (ಕೈನಡು) ಇದೆ. ಈ ಉಪಕೇಂದ್ರದಲ್ಲಿ ಅಮೃತ ಮಹಲ್ ಕಾವಲು ಇದ್ದು, ಇಲ್ಲಿಗೆ ವರ್ಷಕ್ಕೊಮ್ಮೆ ಅಜ್ಜಂಪುರದ ತಳಿಯ ರಾಸುಗಳು ಅಮೃತ್‌ಮಹಲ್ ಕಾವಲಿನಲ್ಲಿ ಮೇಯಲು ಬರುತ್ತವೆ.

ಹೊಸದುರ್ಗ ತಾಲ್ಲೂಕಿನಲ್ಲಿ ೨೦೦೭ರ ಜಾನುವಾರು ಗಣತಿಯ ಮೇರೆಗೆ, ಒಟ್ಟು ೫೯,೪೪೯ ದನಕರುಗಳಿದ್ದು, ಜಿಲ್ಲೆಯಲ್ಲಿಯೇ ಹೆಚ್ಚು ಜಾನುವಾರು ಹೊಂದಿರುವ ತಾಲೂಕಾಗಿ ಹೊರಹೊಮ್ಮಿದೆ. ಒಟ್ಟು ೩೧,೮೬೪ ಸಂಖ್ಯೆಯ ಎಮ್ಮೆಗಳನ್ನು ಹೊಂದಿದ್ದು, ೧,೩೫,೮೬೩ ಕುರಿಗಳೂ ಹಾಗೂ ೩೧,೮೬೨ ಮೇಕೆಗಳೂ ಈ ತಾಲ್ಲೂಕಿನಲ್ಲಿವೆಯಲ್ಲದೆ, ೩,೭೫,೫೮೨ ಕೋಳಿಗಳು, ೪,೮೩೩ ನಾಯಿಗಳು, ೧,೨೪೭ ಮೊಲಗಳು, ೫೩೪ ಹಂದಿಗಳು, ೮೯೯ ಇತರ ಪ್ರಾಣಿಗಳು ಇದ್ದು, ಕೋಳಿ ಸಾಕಣೆ ಕೇಂದ್ರಗಳು ೩೦ ಇವೆ. ಹಾಲು ಉತ್ಪಾದಕರ ಒಟ್ಟು ೨೫ ಸಂಘಗಳಿದ್ದು, ಪ್ರತಿನಿತ್ಯ ೧೦ ಸಾವಿರ ಲೀಟರ್ ಹಾಲು ಉತ್ಪಾದನೆ ಇರುತ್ತದೆ. ಹೊಸದುರ್ಗ ಮತ್ತು ಮತ್ತೋಡಿನಲ್ಲಿ ಪಶು ಆಸ್ಪತ್ರೆ ಇವೆ. ಅಲ್ಲದೆ, ತಾಲ್ಲೂಕಿನಲ್ಲಿ ೪ ಪಶು ಆಸ್ಪತ್ರೆಗಳು, ೭ ಚಿಕಿತ್ಸಾಲಯಗಳು, ೨೦ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ೪ ಕೃತಕ ಗರ್ಭಧಾರಣ ಕೇಂದ್ರಗಳು, ೨ ಕುರಿ ಮತ್ತು ಉಣ್ಣೆ ಉಪಕೇಂದ್ರಗಳು, ೨ ಗೋಶಾಲೆಗಳು ಹಾಗೂ ೧ ಸಂಚಾರಿ ಪಶು ಚಿಕಿತ್ಸಾಲಯ ಹಾಗೂ ಇತರೆ ೫ ಪಶು ವೈದ್ಯ ಶಾಲೆಗಳು ಇವೆ. ಹಿಂದಿನ ಕಾಲದಲ್ಲಿ ಈ ತಾಲ್ಲೂಕಿನ ಹೆಗ್ಗೆರೆ ಕೋಣಗಳು ಬಹು ಪ್ರಸಿದ್ಧವಾಗಿದ್ದವು. ಅವುಗಳನ್ನು ಗದ್ದೆ ಉಳಲು ಮಾತ್ರವಲ್ಲದೆ, ಯುದ್ಧದಲ್ಲಿಯೂ ಬಳಸುತ್ತಿದ್ದರೆಂಬ ಸಂಗತಿ ಸಮರ ಐತಿಹ್ಯದಿಂದ ತಿಳಿದು ಬರುತ್ತದೆ. ಆಗಿನ ಕಾಲದಲ್ಲಿ ಕುರಿಗಳಿಗೂ ಸುಂಕ ವಿಧಿಸಿದ್ದ ಸಂಗತಿಯು ತಿಳಿದು ಬರುತ್ತದೆ.

## ಪ್ರಾಸ್ತಾವಿಕ

### ಸಸ್ಯ ಸಂಕುಲ

ಹಿಂದಿನ ಕಾಲದಲ್ಲಿ ಈ ಪ್ರದೇಶವನ್ನಾಳಿದ ಅನೇಕ ರಾಜರು/ಸಾಮಂತರಸರು, ತಮ್ಮ ರಾಜ್ಯ/ಪಾಳೆಯಪಟ್ಟಿನ ಮೇರೆಯೊಳಗೆ ಅಲ್ಲಲ್ಲಿ ನೆಡುತೋಪುಗಳನ್ನು ಬೆಳೆಸಿದ್ದರೆಂಬ ಸಂಗತಿ ಶಾಸನಗಳಿಂದ ತಿಳಿಯುತ್ತದೆ. ಉದಾಹರಣೆಗೆ, ಕ್ರಿ.ಶ. ೧೫ನೇ ಶತಮಾನದಲ್ಲಿ ಬಾಗೂರಿನ ಮಲ್ಲರಸನು ಸಿಂಗಾರ ತೋಪನ್ನು ನಿರ್ಮಿಸಿದ್ದು. ಆ ತೋಪು 'ಮಲ್ಲರಸನ ತೋಪು' ಎಂಬ ಹೆಸರನ್ನು ಹೊಂದಿದ್ದು ತಿಳಿದುಬರುತ್ತದೆ. ಹಿಂದೆ ತೆಂಗು, ಅಡಿಕೆ, ವಿಳೆಯದೆಲೆ ಅರಿಶಿನ, ಮೆಣಸು, ಬತ್ತ ಮುಂತಾದುವನ್ನು ಬೆಳೆಯುತ್ತಿದ್ದ ಬಗ್ಗೆ ಈ ತಾಲ್ಲೂಕಿನ ಚಿಕ್ಕಯ ಗಟಿಯ ಕ್ರಿ.ಶ. ೧೧ನೇ ಶತಮಾನದ ಶಾಸನದಿಂದ ತಿಳಿಯುವುದು. (ಹೆಗ್ಗೆರೆ ಶಾಸನದಲ್ಲೂ ಗಮನಿಸಬಹುದು.) ಹುಣಸೆ, ತೇಗ, ಮತ್ತಿ, ಮಾವು, ಹಲಸು, ತೆಂಗು, ಅಡಿಕೆ ಮುಂತಾದ ಸಸ್ಯ ಸಂಪತ್ತನ್ನು ಇಂದಿಗೂ ಈ ಪ್ರದೇಶದಲ್ಲಿ ಕಾಣಬಹುದಾಗಿದೆ. ರಸ್ತೆಗಳ ಇಕ್ಕೆಲಗಳಲ್ಲಿ ಕಣಿವೆ–ಕಮರಿಗಳಲ್ಲಿ, ಕೆರೆಯ ದಡಗಳಲ್ಲಿ, ಹಳ್ಳ–ಕೊಳ್ಳಗಳ ದಂಡೆಯಲ್ಲಿ ಸಸ್ಯ ಸಂಪತ್ತು ಯಥೇಚ್ಛವಾಗಿ ಬೆಳೆದಿರುವುದು, ಹೂವಿನ ತೋಟಗಳೂ ಕಂಡು ಬರುತ್ತವೆ. ಹಚ್ಚ ಹಸಿರಿನ ಸೊಬಗನ್ನು ಹೊತ್ತು ನಿಂತಿರುವ ಬನಸೀಹಳ್ಳಿ–ತಣಿಗೇಕಲ್ಲು ಪ್ರದೇಶ, ದಶರಥ ರಾಮೇಶ್ವರದ ಕಾನನ, ಜಾನಕಲ್ಲು ಪ್ರದೇಶ, ಕಂಚೀಪುರ, ಚಿಕ್ಕಬ್ಯಾಲದಕೆರೆ ಬಳಿಯ ಕುದುರೆ ಕಣಿವೆಯ ದಟ್ಟಾರಣ್ಯದ ವನಸಿರಿ, ಬದುಗಳಲ್ಲಿ–ಬೀಳುನೆಲದಲ್ಲೂ ದಾಂಗುಡಿಯಿಡುವ ತಂಕಟೆಗಿಡಗಳು, ಕತ್ತಾಳೆ, ಹಳ್ಳದ ಬದುವಿನಲ್ಲಿ ದಟ್ಟೈಸುವ ಕೇದಿಗೆ ಮಳೆ, ಎಕ್ಕೆ ಗಿಡಗಳು, ಗುಲಗಂಜಿ ಗಿಡಗಳು ಇಲ್ಲಿಯ ಸಾಮಾನ್ಯ ಸಂಗತಿಯಾಗಿದೆ. ಒಟ್ಟಾರೆ ನೂರಾರು ಜಾತಿಯ ಸಸ್ಯಗಳು ಇಲ್ಲಿ ಕಾಣಬರುತ್ತದೆ.

### ಖನಿಜಗಳು

ಪಾಳೆಯಗಾರರ ಕಾಲದಲ್ಲಿ, ಈ ತಾಲ್ಲೂಕಿನ ಕಿಟ್ಟದಹಾಳು, ಚಿಕ್ಕಬ್ಯಾಲದಕೆರೆ ಪ್ರದೇಶದಿಂದ ಚಿತ್ರದುರ್ಗದ ಪಾಳೆಯಗಾರರು ಕೋಣಗಳು ಮತ್ತು ಕತ್ತೆಗಳ ಸಹಾಯದಿಂದ ಕಬ್ಬಿಣ ತಯಾರಿಸುವ ಕಚ್ಚಾ ಸಾಮಾಗ್ರಿಯನ್ನು(ಅದಿರನ್ನು) ತರಿಸಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಇಂದಿಗೂ ಕಂಚೀಪುರ ಗ್ರಾಮದ ಎರಡು ದೇವಾಲಯಗಳ ಮುಂದೆ ಮತ್ತು ಕಂಚೀಬೆಟ್ಟದ ಮೇಲಿರುವ ದೇವಾಲಯದೆದುರು ಶಾಸನವಿರುವ ನಾಡ ಕಬ್ಬಿಣದ ಗರುಡ ಗಂಬಗಳನ್ನು ಕಾಣಬಹುದಾಗಿದೆ. ಅಲ್ಲದೆ, ಈ ಸೀಮೆಯ ಅನೇಕ ದೇವಾಲಯಗಳಲ್ಲಿ ಪೂಜೆಗೊಳ್ಳುತ್ತಿರುವ ಬೃಹತ್ (ಉದ್ದದ) ನಾಡ ಕಬ್ಬಿಣದ ಬಿಲ್ಲುಗಳನ್ನು(ಬಿಲ್ಲಪ್ಪ) ಮತ್ತು ಬಾಣಗಳನ್ನು (ಬಾಣಪ್ಪ) ಕಾಣಬಹುದು. ಮತ್ತೋಡಿನಲ್ಲಿ ಗಾಜಿನ ಬಳೆಗಳನ್ನು ತಯಾರಿಸಲಾಗುತ್ತಿತ್ತು. ಸ್ಥಳೀಯವಾಗಿ ತಯಾರಿಸಲಾಗುತ್ತಿದ್ದ ಗಾಜು ತಯಾರಿಕೆಗೆ ಅಗತ್ಯವಾದ ಕಚ್ಚಾವಸ್ತುಗಳು ಅಲ್ಲಿನ ಪರಿಸರದಲ್ಲೇ ದೊರಕುತ್ತಿದ್ದುದಾಗಿ ೧೮೦೧ರಲ್ಲಿ ಈ ಪ್ರದೇಶದ ಸಮೀಕ್ಷೆ ನಡೆಸಿದ

ಫ್ರಾನ್ಸಿಸ್ ಬುಕಾನನ್ ದಾಖಲಿಸಿದ್ದಾನೆ. ಚಿಕ್ಕಬ್ಯಾಲದ ಕೆರೆಯಲ್ಲಿ ಕಬ್ಬಿಣದ ಅದಿರು ಕರಗಿಸುವ ಕುಲುಮೆಗಳಿದ್ದು, ಬುಕ್ಕಾಸಾಗರ ಹಾಗೂ ಕುದುರೆ ಕಣಿವೆಯ ಗಣಿಗಳಿಂದ ಈ ರೀತಿಯ ಅದಿರು ಸರಬರಾಜಾಗುತ್ತಿತ್ತೆಂದೂ ಬುಕಾನನ್ ದಾಖಲಿಸಿದ್ದಾನೆ.

೧೮೯೩–೯೭ರಲ್ಲಿ ಹೊಸದುರ್ಗ ಪ್ರದೇಶದ ಭೂ ವೈಜ್ಞಾನಿಕ ಪರಿವೀಕ್ಷಣೆಯನ್ನು ಸಾಂಬ ಶಿವ ಅಯ್ಯರ್ ಅವರು ನಡೆಸಿದರೆಂದು, ಮೈಸೂರು ಭೂಗರ್ಭ ಇಲಾಖೆಯ ಆಗಿನ ಅಧಿಕಾರಿ ರಾಬರ್ಟ್ ಬ್ರೂಸ್‌ಫುಟ್ ಅವರು ಹೇಳಿದ್ದಾರೆ. (ಉಲ್ಲೇಖ:– ಲಕ್ಷ್ಮಣ್ ತೆಲಗಾವಿ ಅವರ ಲೇಖನದಿಂದ (ಹೊಸದುರ್ಗ ತಾಲ್ಲೂಕು ಇತಿಹಾಸ: ಕೆಲವು ಹೊಸ ಸಂಗತಿಗಳು: ತರಳಬಾಳು, ೧೯೯೯ ಸಂಚಿಕೆ). ಕರ್ನಾಟಕದ ಮುಖ್ಯ ಬೆಟ್ಟ ಶ್ರೇಣಿಯೊಂದು ಈ ತಾಲ್ಲೂಕಿನಲ್ಲಿ ಹಾದು ಹೋಗಿದೆ. ತಾಲ್ಲೂಕಿನ ಕೆಲವೆಡೆ ಭೂಮಿಯ ಒಡಲಲ್ಲಿ ಬೆಣಚುಕಲ್ಲು, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು ಮತ್ತು ಸುಣ್ಣದ ಕಲ್ಲಿನ ನಿಕ್ಷೇಪವಿದೆ. ರಾಮಜ್ಜನ ಹಳ್ಳಿಯ ಬಳಿ ಬೆಣಚು ಕಲ್ಲು, ಬುಕ್ಕಸಾಗರ, ಕಡವಗೆರೆ, ಕುದುರೆ ಕಣಿವೆ ಕಾವಲು, ಮಾಡದಕೆರೆ ಮುಂತಾದೆಡೆ ಕಬ್ಬಿಣದ ಅದಿರು ಇದ್ದು, ಇಲ್ಲಿ ಇದುವರೆಗೆ ನಡೆಯುತ್ತಿದ್ದ ಗಣಿಗಾರಿಕೆ ಇತ್ತೀಚೆಗೆ ಕೋರ್ಟ್ ಆದೇಶದಿಂದ ತಾತ್ಕಾಲಿಕವಾಗಿ ನಿಲುಗಡೆಯಾಗಿದೆ (ಈ ಅದಿರು ಶ್ರೇಷ್ಠ ಮಟ್ಟದ್ದೆನ್ನಲಾಗಿದೆ). ಲಕ್ಕೀಹಳ್ಳಿ ಮತ್ತು ಮಾಡದಕೆರೆ ಸಮೀಪ ಮ್ಯಾಂಗನೀಸ್ ದೊರೆಯುವುದು. ಸಿಮೆಂಟ್ ತಯಾರಿಕೆಗೆ ಅಗತ್ಯವಾಗಿರುವ ಹೈಕ್ಯಾಲ್ಸಿಯಂ ಗುಣದ ಸುಣ್ಣದ ಕಲ್ಲು ಕಪ್ಪನಾಯಕನಹಳ್ಳಿ, ಮತ್ತೋಡು, ಬೇವಿನ ಹಳ್ಳಮ್ಮನ ಗುಡ್ಡ ಮತ್ತು ದೊಣೇಕಲ್ಲು ಭಾಗದಲ್ಲಿದೆ. ವೇದಾವತಿ ನದಿಯ ಉತ್ತರ ಭಾಗದ ಮಲ್ಲಾಪುರ ಮತ್ತು ಕೆಂಕೆರೆ ಹತ್ತಿರ ಸಿಮೆಂಟ್ ಗ್ರೇಡ್ ಸುಣ್ಣದ ಕಲ್ಲನ್ನು ಗುರುತಿಸಲಾಗಿದೆ. ೧೯೭೮ ರಿಂದ ಈ ತಾಲ್ಲೂಕಿನಲ್ಲಿ ಅನೇಕ ಮಿನಿ ಸಿಮೆಂಟ್ ಫ್ಯಾಕ್ಟರಿಗಳು ಪ್ರಾರಂಭಗೊಂಡಿದೆ.

ಹಿಂದಿನ ಕಾಲದಲ್ಲಿ ಬೂದಿಮರಡಿ ಪ್ರದೇಶದಲ್ಲಿ ಚಿನ್ನದ ನಿಕ್ಷೇಪ ಇದ್ದಿತೆಂದೂ ಅಲ್ಲಿ ಚಿನ್ನ ತೆಗೆಯುತ್ತಿದ್ದರೆಂದೂ ಹೇಳಲಾಗಿದೆ. ಬೂದಿಹಾಳು (ಶ್ರೀರಾಂಪುರ) ಗಂಜಿಗೆರೆ ಈ ಪ್ರದೇಶಗಳಲ್ಲಿ ಕಲ್ನಾರು ಸಿಗುವುದು. ಬುರುಡೇಕಟ್ಟೆಯ ಪಶ್ಚಿಮದಲ್ಲಿ ದೊರಕುವ ಅಗ್ನಿಶಿಲೆ (ಸೋಪ್ ಸ್ಟೋನ್) ಯಿಂದ ಹಿಂದಿನ ಕಾಲದಲ್ಲಿ (ವಿಜಯ ನಗರದವರ ಕಾಲ) ಹೆಗ್ಗೆರೆಯ ಬಸದಿ ಮತ್ತು ನೀರುಗುಂದದ 'ಸಿದ್ಧನಾಥ' ದೇವಾಲಯಗಳನ್ನು ನಿರ್ಮಿಸಿದ್ದಾರೆಂದು ತಿಳಿದುಬರುತ್ತದೆ. ಅಲಂಕಾರ ವಸ್ತುಗಳನ್ನು ತಯಾರಿಸಬಹುದಾದ ಪಿಂಕ್ ಗ್ರಾನೈಟ್ ಸಹ ಈ ತಾಲ್ಲೂಕಿನಲ್ಲಿ ಸಿಗುವುದು. ಇನ್ನೂ ಅನೇಕ ರೀತಿಯ ಉಪಯುಕ್ತವಾದ ಶಿಲೆಗಳು ಈ ತಾಲ್ಲೂಕಿನ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ದೊರೆಯುತ್ತವೆ. ಫುಕ್ಸೈಟ್, ಕ್ವಾರ್ಟರ್ ಜೈಟ್ ಶಿಲೆ (ಪಚ್ಚೆಕಲ್ಲು) ಜಾನಕಲ್ಲು ಮತ್ತು ಪೀಲಾಪುರದ ಸ್ವಲ್ಪ ಭಾಗಗಳಲ್ಲಿ ಸಿಗುವುದು. ನೈಸಿಕ್ ಗ್ರಾನೈಟ್ ಶಿಲೆ ಚಿನ್ನಸಮುದ್ರ ಹಾಗೂ ಶಬರಿ ವನ ಮಧ್ಯದಲ್ಲಿರುವ ಬೆಟ್ಟಗಳಲ್ಲಿದೆ (ಇವು ಕಪ್ಪು ಬಿಳಿಪಟ್ಟೆಯಿರುವ

ಶಿಲೆಗಳು). (ಉಲ್ಲೇಖ: – ಭೂವೈಜ್ಞಾನಿಕ ಮಾಹಿತಿ: ಕೆ.ಪಿ.ಹನುಮಂತರಾಯಪ್ಪ ಅವರ ಲೇಖನದಿಂದ. (ಭೂವೈಜ್ಞಾನಿಕವಾಗಿ ಹೊಸದುರ್ಗ ತಾಲ್ಲೂಕು)– ಹೊಸಚಿಗುರು– ೧೯೮೪–೮೫, ಶಿಕ್ಷಕರ ಸಂಚಿಕೆ).

## ಭೂಕಂಪ ಹಾಗೂ ಪ್ರಾಕೃತಿಕ ವೈಪರಿತ್ಯ

ಕ್ರಿ.ಶ. ೧೭೪೧ರಲ್ಲಿ (ಅಕ್ಟೋಬರ್ ೮ ರಿಂದ ನವೆಂಬರ್ ೨ರವರೆಗೆ) ಚಿತ್ರದುರ್ಗ ಜಿಲ್ಲಾ ಪ್ರದೇಶದಾದ್ಯಂತ ಒಟ್ಟು ೨೫ ದಿನಗಳ ಕಾಲ ಸುರಿದ ಸತತಮಳೆ, ಹೊಸದುರ್ಗ ಪ್ರದೇಶದಲ್ಲಿಯೂ ಆಗಿದ್ದು, ಇತರೆಡೆಯಂತೆ ಇಲ್ಲಿಯೂ ಹೆಚ್ಚು ಹಾನಿಯುಂಟು ಮಾಡಿತು. ೧೭೪೮ರಲ್ಲಿ (ಡಿಸೆಂಬರ್ ೨ ರಂದು) ಎಲ್ಲೆಡೆಯೂ ಭೂಕಂಪ ಸಂಭವಿಸಿತು (ಹೊಸದುರ್ಗ ಸೀಮೆಯಲ್ಲೂ ಸಹ) ೧೯೬೦–೭೦ರ ದಶಕದಲ್ಲಿ ಹೊಸದುರ್ಗ ತಾಲ್ಲೂಕಿನ ಕೆಲವು ಭೂ ಭಾಗಗಳಲ್ಲಿ ಲಘು ಭೂಕಂಪ ಸಂಭವಿಸಿತು. ಮನೆಗಳಲ್ಲಿ ಪಾತ್ರೆಗಳು ಅಲ್ಲಾಡಿದ್ದರಿಂದ ಜನರೆಲ್ಲ ಹೊರಗೋಡಿ ಬಂದಿದ್ದರು. ೨೦೧೩ ರಲ್ಲಿ ದೊಡ್ಡಕಿಟ್ಟದಹಳ್ಳಿ, ಕೆಂಕೆರೆ, ನಾಕಿಕೆರೆ ಪ್ರದೇಶದಲ್ಲಿ ಹಾಗೂ ೨೦೧೬ ರಲ್ಲಿ ಕಂಚೀಪುರ ಪ್ರದೇಶದಲ್ಲಿ ಭೂಕಂಪ (ಲಘು) ಸಂಭವಿಸಿದ್ದಿತು. ಪ್ರಾಣಾಪಾಯಗಳು ಸಂಭವಿಸಿಲ್ಲ. ದಶಕಗಳ ಹಿಂದೆ ಬೀಸಿದ ಬಿರುಗಾಳಿಗೆ ತಾಲ್ಲೂಕಿನ ಬಹಳಷ್ಟು ತೋಟಗಳಲ್ಲಿ ತೆಂಗಿನಮರಗಳು ನೆಲ ಕಚ್ಚಿದವು. ಮನೆಗಳ ಮೇಲಿನ ಹೆಂಚುಗಳು ಹಾರಿ ಹೋಗಿದ್ದವು. ತಾಲ್ಲೂಕಿನಲ್ಲಿ ಸುರಿದ ಬಿರುಮಳೆಯ ಮಧ್ಯೆ ಎರಗಿದ ಸಿಡಿಲಿಗೆ ಮನುಷ್ಯರು, ಎತ್ತುಗಳು ಪ್ರಾಣ ನೀಗಿರುವುದುಂಟು. ಜಡಿಮಳೆಗೆ ಮಣ್ಣಿನ ಹಾಗೂ ಮಾಳಿಗೆ ಮನೆಗಳು ಕುಸಿದು ಪ್ರಾಣಹಾನಿಗಳಾಗಿವೆ. ಹೊಳೆನೀರಿನಲ್ಲಿ ಸಿಕ್ಕು ನೀರಿನ ಸೆಳೆತಕ್ಕೆ ಬಲಿಯಾದವರ ಉದಾಹರಣೆಗಳಿವೆ. ೨೦೧೭ ರಲ್ಲಿ ತಾಲ್ಲೂಕಿನಲ್ಲಿ ಎರಗಿದ ಸಿಡಿಲಿಗೆ, ಮಾಡದಕೆರೆ ಹೋಬಳಿಯಿಂದ ಲಕ್ಕಿಹಳ್ಳಿಯ ಐತಿಹಾಸಿಕ ಕೋಟೆಗೆ ಹಾನಿಯಾಗಿರುತ್ತದೆ ಹಾಗೂ ಒಬ್ಬರು ಗಾಯಗೊಂಡಿರುತ್ತಾರೆ.

## ನದಿ ಮತ್ತು ಅಣೆಕಟ್ಟು

ಹೊಸದುರ್ಗ ತಾಲ್ಲೂಕಿನ ಜೀವನದಿ, ವೇದಾವತಿ. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯ ಪೂರ್ವಭಾಗದಲ್ಲಿ ವೇದ ಮತ್ತು ಆವತಿ ಎಂಬ ಎರಡು ನದಿಗಳಾಗಿ ಹುಟ್ಟಿ ಸಯಾಮಿ ನದಿಗಳಂತೆ ಕೂಡಿ ವೇದಾವತಿ ನದಿಯಾಗಿದೆ. ವೇದ ಸಖರಾಯ ಪಟ್ಟಣದ ಮೂಲಕ ಹರಿದು, 'ಅವತಿ'ಯೊಂದಿಗೆ ಸೇರಿ ವೇದಾವತಿಯಾಗಿ ಹಳೇಬೀಡು ಹಾರ್‍ನಹಳ್ಳಿ ಉಬ್ರಾಣಿ ಸ್ಥಳಗಳನ್ನು, ಬೆಟ್ಟ ತಪ್ಪಲುಗಳನ್ನು ಹಾಯ್ದು ಕಡೂರು ಮೂಲಕ ಹೊಸದುರ್ಗದತ್ತ ಹರಿದು ಬರುತ್ತದೆ. ಮುಂದೆ, ಹೊಸದುರ್ಗ ಮತ್ತೋಡುಗಳ ಮಧ್ಯೆ ಹರಿದು, ಹಿರಿಯೂರು ಹೊಸದುರ್ಗ ಗಡಿಪ್ರದೇಶದ ಬೆಟ್ಟದ

ಮಧ್ಯಕಣಿವೆಯನ್ನು ತಲುಪುತ್ತದೆ. ವೇದಾವತಿ ಸೃಷ್ಟಿಸಿದ ಈ ಕಣಿವೆಯೆ (ಜಲಾಶಯ) ಮಾರೀಕಣಿವೆ ಡ್ಯಾಂ. ಹಿರಿಯೂರಿನಿಂದ ಮುಂದೆ ಸಾಗುವ ವೇದಾವತಿ, ಭರಮ ಗಿರಿದುರ್ಗದ ಬಳಿ ದಕ್ಷಿಣಕ್ಕೆ ತಿರುಗಿ, ಶಿರಾ ಹಾಗಲವಾಡಿಯಿಂದ ಮುಂದೆ ಉತ್ತರಕ್ಕೆ ಸರಿದು, ಬಳ್ಳಾರಿಯನ್ನು (ಜಿಲ್ಲೆಯನ್ನು) ಪ್ರವೇಶಿಸುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಉದ್ಧೃತ ವಾಣಿವಿಲಾಸ ಸಾಗರ (ಮಾರಿಕಣಿವೆ ಡ್ಯಾಂ) ಜಲಾಶಯವು ಹೊಸದುರ್ಗ ತಾಲ್ಲೂಕಿನ ಹಾಗೂ ಹಿರಿಯೂರು ತಾಲ್ಲೂಕಿನ ಗಡಿ ಮಧ್ಯದಲ್ಲಿ ಹೊಸದುರ್ಗ ತಾಲ್ಲೂಕಿನ ಗಡಿಯ ಅಂಚಿನಲ್ಲಿ ೧೯೦೭ರಲ್ಲಿ ನಿರ್ಮಾಣಗೊಂಡಿದೆ.

ಇದು ಕರ್ನಾಟಕದ ಅತ್ಯಂತ ಹಳೆಯ ನೀರಾವರಿ ಯೋಜನೆಯಾಗಿದ್ದು, ಕೃತಕ ಸರೋವರವೂ ಆಗಿದೆ. ಗಾರೆ–ಸೈಜುಕಲ್ಲುಗಳಿಂದ ನಿರ್ಮಿಸಿರುವ ರಾಜ್ಯದ ಮೊಟ್ಟಮೊದಲ ಜಲಾಶಯವೂ ಇದೇ ಆಗಿದೆ. ದೇಶದ ಅತ್ಯಂತ ಉದ್ದವಾದ ಕೃತಕ ಸರೋವರವೆಂಬ ಖ್ಯಾತಿಯೂ ಇದಕ್ಕೆ ಸಲ್ಲುವುದು. ಸರ್.ಎಂ.ವಿಶ್ವೇಶ್ವರಯ್ಯನವರ ಕೃತಿ ಇದಾಗಿದೆ ಎನ್ನಲಾಗಿದೆ. ಈ ಜಲಾಶಯದ ಜಲಾವೃತ ಪ್ರದೇಶ ಒಟ್ಟು ೮,೫೫೯ ಹೆಕ್ಟೇರ್ ಭೂಮಿಯು ಹೊಸದುರ್ಗ ತಾಲ್ಲೂಕಿಗೆ ಸೇರಿದೆ. ಆದರೆ, ಜಲಾಶಯದ ಅನುಕೂಲವನ್ನು ಪಡೆಯುವುದು ಹಿರಿಯೂರು ತಾಲೂಕಾಗಿದೆ. ಸರೋವರದ ಸ್ವಾಧೀನ ಪ್ರದೇಶ ೧,೫೫೪ ಚ.ಕಿ.ಮೀ ಹಾಗೂ ಕೂಡು ಸ್ವಾಧೀನ ಪ್ರದೇಶವು ೫,೨೨೪.೨೫ ಚ.ಕಿ.ಮೀ. ಆಗಿದ್ದು, ಜಲಾಶಯದ ಗರಿಷ್ಠ ನೀರಿನ ಪ್ರಮಾಣ ೧,೧೫,೫೦೦ ಯೂನಿಟ್‌ಗಳಾಗಿವೆ. ಅಣೆಕಟ್ಟಿನ ಉದ್ದ ೧೩೦ ಅಡಿಗಳು, ಎತ್ತರ ೧೬೨ ಅಡಿಗಳು, ಅಣೆಕಟ್ಟಿನಿಂದ ದೊರಕುವ ನೀರಾವರಿ ಸೌಲಭ್ಯ (ಹಿರಿಯೂರು ಪ್ರದೇಶಕ್ಕೆ) ೧೦,೦೧೦.೨೫ ಹೆಕ್ಟೇರ್. ಈ ಜಲಾಶಯ ಹೊಸದುರ್ಗದಿಂದ ಪೂರ್ವಕ್ಕೆ ೩೦ ಕಿ.ಮೀ. ಹಾಗೂ ಚಿತ್ರದುರ್ಗದಿಂದ ದಕ್ಷಿಣಕ್ಕೆ ೫೬ ಕಿ.ಮೀ. ದೂರದಲ್ಲಿದೆ. ಈ ಡ್ಯಾಂನ ಹಿನ್ನೀರಿನಲ್ಲಿ ಹೊಸದುರ್ಗದ ಅನೇಕ ಗ್ರಾಮಗಳು ಮುಳುಗಡೆಯಾಗಿವೆ. 'ಮಾರಿಯ ಕಣಿವೆಯ ಮ್ಹಾರಾಜ ಕಟ್ಟಿಸಿದ ಮೂವತ್ಮೂರ್ಹಳ್ಳು ಮುಣುಗ್ಯಾವೋ' ಎಂಬ ಆಸಾದಿಪದ ಇಲ್ಲಿ ಉಲ್ಲೇಖಾರ್ಹವಾಗಿದೆ.

## ವಾಯುಗುಣ

ಮಲೆನಾಡಿನ ಸೆರಗಿನಲ್ಲಿದ್ದರೂ ಈ ತಾಲ್ಲೂಕು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದಾಗಿ, ಸುಡುಬೇಸಿಗೆಯ ದಿನಗಳಿಂದ ಗುರುತಿಸಲ್ಪಟ್ಟಿದ್ದು, ಕಡಿಮೆ ಮಳೆ ಸಾಧಾರಣ ಮಾರುತಗಳಿಂದ ಕೂಡಿದೆ. ಡಿಸೆಂಬರ್‌ನಿಂದ ಫೆಬ್ರವರಿವರೆಗಿನ ಅವಧಿಯು ಚಳಿಗಾಲದಿಂದ ಕೂಡಿದ್ದು, ಶುಷ್ಕ ವಾತಾವರಣವಿರುತ್ತದೆ. ಫೆಬ್ರವರಿ ಅಂತ್ಯದಿಂದ ಜೂನ್ ಪ್ರಾರಂಭದವರೆಗಿನ ಅವಧಿಯು ಬೇಸಗೆ ಎಂದು ಸಾಮಾನ್ಯವಾಗಿ ಪರಿಗಣಿಸಲ್ಪಟ್ಟಿದೆ. (ನೈರುತ್ಯ ಮಾರುತಗಳು ಶುರುವಾಗುವವರೆಗೆ)

ನೈರುತ್ಯ ಮಾರುತಗಳು ಸೆಪ್ಟೆಂಬರ್‌ವರೆಗೂ ಮಳೆ ತರುತ್ತವೆ. ಅಕ್ಟೋಬರ್ ಮತ್ತು ನವೆಂಬರ್ ಮಳೆಯ ಮಾರುತಗಳು ಪುನರಾವರ್ತಿಸುವ ಅಥವಾ ಮಾರುತೋತ್ತರ ಮಾಸಗಳೆನ್ನಬಹುದು. ನವೆಂಬರ್ ಉತ್ತರಾರ್ಧದಿಂದಲೇ ಚಳಿಗಾಲ ಮಾರುತೋತ್ತರ ಮಾಸಗಳೆನ್ನಬಹುದು. ಡಿಸೆಂಬರ್ ಅತ್ಯಂತ ಗರಿಷ್ಠ ಚಳಿಯ ಮಾಸವಾಗಿದ್ದು, ಆಗ ಗರಿಷ್ಠ ಹವಾಮಾನ ೨೭.೯ ಡಿಗ್ರಿ ಸೆಲ್ಸಿಯಸ್ ಹಾಗೂ ನಿತ್ಯದ ಕನಿಷ್ಠ ಹವಾಮಾನವು ೧೬.೬ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಮಾರ್ಚ್‌ನಿಂದ ಮೇ ವರೆಗೆ ತಾಪಮಾನ ಹೆಚ್ಚಾಗುವ ಅವಧಿಯಾಗಿದೆ. ಏಪ್ರಿಲ್ ಅತ್ಯಂತ ಕಡುಬೇಸಿಗೆಯ ಮಾಸವಾಗಿದ್ದು, ಆಗಿನ ಗರಿಷ್ಠ ಉಷ್ಣಾಂಶ ೩೬.೨ ಡಿಗ್ರಿ ಸೆಲ್ಸಿಯಸ್ ನಿಂದ ೪೧ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಏಪ್ರಿಲ್–ಮೇ ಅವಧಿಯಲ್ಲಿ ಗುಡುಗುಸಹಿತ ಮಳೆಯಾಗುವುದು ಸಾಮಾನ್ಯ.

**ಹೊಸದುರ್ಗ ತಾಲ್ಲೂಕು ಮಾಸವಾರು ತಾಪಮಾನ ಮತ್ತು ಮಳೆ**

| | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ |
|---|---|---|---|---|---|---|---|---|---|---|---|---|
| ಸರಾಸರಿ ತಾಪಮಾನ(ಡಿಗ್ರಿ ಸೆಲ್ಸಿಯಸ್) | ೨೨.೪ | ೨೪.೮ | ೨೭.೩ | ೨೮.೭ | ೨೭.೯ | ೨೫.೨ | ೨೩.೭ | ೨೩.೯ | ೨೪.೨ | ೨೪.೪ | ೨೨.೯ | ೨೨.೪ |
| ಕನಿಷ್ಟ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೧೫.೮ | ೧೭.೬ | ೨೦ | ೨೧.೯ | ೨೧.೯ | ೨೧ | ೨೦.೪ | ೨೦.೩ | ೧೯.೯ | ೧೯.೯ | ೧೭.೭ | ೧೫.೭ |
| ಗರಿಷ್ಟ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೨೯.೧ | ೩೨ | ೩೪.೭ | ೩೫.೬ | ೩೪ | ೨೯.೫ | ೨೭.೧ | ೨೭.೫ | ೨೮.೫ | ೨೯ | ೨೮.೨ | ೨೭.೯ |
| ಸರಾಸರಿ ಮಳೆ ಪ್ರಮಾಣ (ಮಿ.ಮೀ) | ೦ | ೧ | ೫ | ೨೭ | ೭೪ | ೩೬ | ೫೭ | ೩೮ | ೮೪ | ೧೩೭ | ೨೮ | ೯ |

## ಮಳೆ

ಮಲೆನಾಡಿನ ಸೆರಗಿನಲ್ಲಿರುವ ಹೊಸದುರ್ಗ ತಾಲ್ಲೂಕಿನಲ್ಲಿ ಮಾನ್ಸೂನ್ ಪೂರ್ವದ ಮಳೆ ಸರಾಸರಿ ೧೮ ರಿಂದ ೨೩% ನೈರುತ್ಯ ಮಾರುತಗಳಿಂದ ಆಗುವ ಸರಾಸರಿ ಮಳೆ ೪೫ ರಿಂದ ೫೨% ಹಾಗೂ ಈಶಾನ್ಯ ಮಾರುತಗಳಿಂದಾಗುವ ಸರಾಸರಿ ಮಳೆ ೨೮ ರಿಂದ ೩೩% ವಾರ್ಷಿಕ ಆಗಿದ್ದು, ವಾರ್ಷಿಕ ಸರಾಸರಿ ಮಳೆ ೫೮೯ ಮಿ.ಮೀ. ೧೯೪೧ ರಿಂದ ೧೯೬೦ ರ ವರೆಗಿನ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಹೊಸದುರ್ಗ ತಾಲ್ಲೂಕಿನ ಸರಾಸರಿ ವಾರ್ಷಿಕ ಮಳೆ ದಿನಗಳು ೩೨ ಹಾಗೂ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಳೆ ಮಾಪನದ ೫ ಕೇಂದ್ರಗಳು ಇವೆ. ತಾಲ್ಲೂಕಿನಲ್ಲಿ ೨೦೧೫–೧೬ರ ಅಂಕಿಅಂಶಗಳ

ಪ್ರಕಾರ ವಾಡಿಕೆ ಮಳೆಯ ಪ್ರಮಾಣ ೬೨೩ ಮೀ ಮೀ ಆಗಿದೆ. ತಾಲ್ಲೂಕಿನಲ್ಲಿರುವ ಆರು ಮಳೆಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

| **ಮಳೆಮಾಪನ ಕೇಂದ್ರಗಳು** | **೨೦೧೫-೧೬** |
|---|---|
| ಕಾರ್ಯನಿರ್ವಹಿಸುತ್ತಿರುವ | ೫ |
| **ವಾರ್ಷಿಕ ವಾಡಿಕೆ ಮಳೆ(೧೯೪೧ - ೧೯೯೦)** | |
| ಮಳೆದಿನಗಳು | ೩೨ |
| ವಾಡಿಕೆಮಳೆ | ೬೨೩ |
| ಮಳೆ (ಮಿ.ಮಿ.)೨೦೦೫ರಿಂದ ೨೦೧೫ ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮಿ) | |
| ೧) ೨೦೦೫ | ೭೩೭ |
| ೨) ೨೦೦೬ | ೬೫೨ |
| ೩) ೨೦೦೭ | ೬೩೮ |
| ೪)೨೦೦೮ | ೬೩೪ |
| ೫)೨೦೦೯ | ೮೬೪ |
| ೬)೨೦೧೦ | ೯೫೧ |
| ೭) ೨೦೧೧ | ೪೨೩ |
| ೮) ೨೦೧೨ | ೩೬೫ |
| ೯) ೨೦೧೩ | ೩೭೨ |
| ೧೦) ೨೦೧೪ | ೬೩೫ |
| ೧೧) ೨೦೧೫ | ೬೯೦ |

**ಮೂಲ:ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬.**

## ತಾಲ್ಲೂಕಿನ ಮಾಹೆವಾರು ಸರಾಸರಿ ಮಳೆ ವಿವರ (ಮಿ.ಮೀ.ಗಳಲ್ಲಿ)

ಹೊಸದುರ್ಗ ತಾಲ್ಲೂಕಿನಲ್ಲಿ ಇತ್ತೀಚಿನ ವರ್ಷಗಳಲ್ಲಾದ ಸರಾಸರಿ ವಾಸ್ತವಿಕ ಮಳೆಯ ಮಾಹೆವಾರು ವಿವರ ಹೀಗಿದೆ. (ಮಳೆ ದಿನಗಳು) ಜನವರಿ ೧.೨, ಫೆಬ್ರವರಿ ೦.೦, ಮಾರ್ಚ್ ೦.೬, ಏಪ್ರಿಲ್ ೯೫.೨, ಮೇ ೧೨೨, ಜೂನ್ ೩೧.೪, ಜುಲೈ ೧೧೯.೯, ಆಗಸ್ಟ್ ೨೦೭.೨, ಸೆಪ್ಟಂಬರ್ ೯೧.೩, ಅಕ್ಟೋಬರ್ ೧೧೯.೪, ನವೆಂಬರ್ ೧೬೬.೬, ಡಿಸೆಂಬರ್ ೦.೦ ಹಾಗೂ ಒಟ್ಟು ೬೫೫.೧ ಆಗಿದೆ. ಮುಂಗಾರು ಪೂರ್ವ ೧೨೮, ನೈರುತ್ಯ ಮಾರುತಗಳಿಂದ ೨೬೬, ಈಶಾನ್ಯ ಮಾರುತಗಳಿಂದ ೧೯೪, ವಾರ್ಷಿಕ ಸರಾಸರಿ ಮಳೆ ೫೮೯ ಮಿ.ಮೀ. ಆಗಿದೆ.

# ಅಧ್ಯಾಯ–೨

## ಇತಿಹಾಸ

"**ಚಿ**ತ್ರದುರ್ಗ ಜಿಲ್ಲೆಯಲ್ಲಿರುವಷ್ಟು ಇತಿಹಾಸಾಭಿಮಾನಿಗಳು ಬೇರೆಲ್ಲಿಯೂ ಕಾಣಬರುವುದಿಲ್ಲ" ಎಂಬ ಮಾತಿದೆ. ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದ್ದು, ಪೂರ್ವೇತಿಹಾಸದ ಅನೇಕ ನೆಲೆಗಳನ್ನು–ಪ್ರಾಚ್ಯ ಅವಶೇಷಗಳನ್ನು ಹೊಂದಿದೆ. ಅನೇಕ ಪುರಾಣಕಾಲದ ಸ್ಥಳಗಳೂ ಇವೆ. ಹೊಸದುರ್ಗ ತಾಲ್ಲೂಕಿನಲ್ಲಿ ಆದಿ ಹಳೇಶಿಲಾಯುಗ ಮಾನವನ ನಾಗರಿಕತೆಗೆ ಸಂಬಂಧಿಸಿದ ಅವಶೇಷಗಳು ಗೋಚರಿಸಿವೆ. ಕ್ರಿ.ಪೂ. ಕಾಲದಲ್ಲಿ ರಾಜಧಾನಿಯಾಗಿದ್ದ ಪ್ರಾಚೀನ ಮಹಾನಗರ ನೀರಗುಂದ/ನೀಲಾವತಿ ಪಟ್ಟಣ ಇದೇ ತಾಲ್ಲೂಕಿನಲ್ಲಿದೆ. ಇಡೀ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಶಿಲಾಶಾಸನಗಳೂ, ತಾಮ್ರಶಾಸನಗಳು, ಮಹಾಸತಿ ಕಲ್ಲುಗಳು ಹಾಗೂ ಇನ್ನಿತರ ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ಎರಡನೆಯ ತಾಲ್ಲೂಕು ಇದಾಗಿದ್ದು, ಜಿಲ್ಲೆಯಲ್ಲೇ ಅತಿಹೆಚ್ಚು ಸಂಖ್ಯೆಯ ವೀರಗಲ್ಲುಗಳು ಇಲ್ಲಿವೆ. ರಾಜ್ಯದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆ ಇಡೀ ಕರ್ನಾಟಕವನ್ನು ಪ್ರತಿನಿಧಿಸುವ ಜಿಲ್ಲೆಯಾಗಿದ್ದು, ಕಿರುಕರ್ನಾಟಕ ಎಂದು ಇತಿಹಾಸ ತಜ್ಞರಿಂದ ವ್ಯಾಖ್ಯಾನಿಸಲ್ಪಟ್ಟಿದೆ. ಹೊಸದುರ್ಗ ಪ್ರದೇಶದ ಇತಿಹಾಸವನ್ನು ಹೊಸದುರ್ಗ, ಹೊಳಲ್ಕೆರೆ, ಚಿಕ್ಕನಾಯಕನಹಳ್ಳಿ, ಅರಸೀಕೆರೆ, ನಾಗಮಂಗಲ, ಶಿಕಾರಿಪುರ ಹಾಗೂ ಕೃಷ್ಣರಾಜಪೇಟೆ ತಾಲ್ಲೂಕುಗಳ ನೂರಾರು ಶಾಸನಗಳಿಂದ ತಿಳಿಯಬಹುದಾಗಿದೆ. ಆಭರಣಶಾಸನಗಳೂ, ಲೋಹಶಾಸನಗಳೂ ಇಲ್ಲಿ ದೊರೆತಿವೆ.

**ಪೌರಾಣಿಕ ಹಿನ್ನೆಲೆ**: ಹೊಸದುರ್ಗ ತಾಲ್ಲೂಕಿನ ಪ್ರಮುಖ ಪೌರಾಣಿಕ ಕ್ಷೇತ್ರಗಳೆಂದರೆ ದಶರಥರಾಮೇಶ್ವರ, ಹಾಲುರಾಮೇಶ್ವರ, ಶಬರಿವನ, ನಿರುವುಗಲ್ಲು ಹರಿಹರೇಶ್ವರ ಕ್ಷೇತ್ರ, ಗವಿರಂಗನಾಥಸ್ವಾಮಿ ಕ್ಷೇತ್ರ, ಕಂಚೀಪುರ ಹಾಗೂ ಮೈಲಾರ ಪುರಕ್ಷೇತ್ರ, ಇವುಗಳಲ್ಲಿ ಮೊದಲ ಮೂರು ಕ್ಷೇತ್ರಗಳು ರಾಮಾಯಣ ಕಾಲಕ್ಕೆ ಸಂಬಂಧಪಟ್ಟವು ಎನ್ನಲಾಗಿದೆ.

**ದಶರಥರಾಮೇಶ್ವರ**: ದಕ್ಷಿಣ ಭಾರತದಲ್ಲಿರುವ ಕೆಲವೇ ರಾಮಾಯಣಕಾಲದ ಕ್ಷೇತ್ರ/ಸ್ಥಳಗಳಲ್ಲಿ ಹೊಸದುರ್ಗ ತಾಲ್ಲೂಕಿನ ಮತ್ತೋಡು ಹೋಬಳಿಯಲ್ಲಿರುವ ದಶರಥರಾಮೇಶ್ವರ ಮುಖ್ಯವಾದುದು. ಕರ್ನಾಟಕದಲ್ಲಿಯ ಅತ್ಯಂತ ಪ್ರಾಚೀನ ಕ್ಷೇತ್ರವೂ ಹೌದು. ಈ ಸ್ಥಳಕ್ಕೆ ಸಂಬಂಧಿಸಿದ ಪುರಾಣಕಥೆ ಇಲ್ಲಿ ಮನೆಮಾತಾಗಿದೆ. ತ್ರೇತಾಯುಗದಲ್ಲಿ, ಅಯೋಧ್ಯವನ್ನಾಳುತ್ತಿದ್ದ ದಶರಥ ರಾಜನು, ರಥಾರೂಢನಾಗಿ ತನ್ನ ಸೇನಾಬಲದೊಂದಿಗೆ ಗೊಂಡಾರಣ್ಯಗಳಲ್ಲಿ ಬೇಟೆಗಾಗಿ ಸುತ್ತುತ್ತ, ಪ್ರಸ್ತುತ ತಾಣವಾದ ಆಗಿನ ಭಯಂಕರ ಕಾನನವಾಗಿದ್ದ ಈ ವಜ್ರಗಿರಿಗೆ ಬಂದು ತಲುಪಿದನು. ವಜ್ರ ಪರ್ವತ ವಾಗಿದ್ದ ಇಲ್ಲಿ ಘನ ಘೋರ ಅರಣ್ಯವಿದ್ದು, ಕಾಡು ಪ್ರಾಣಿಗಳಿಂದ ತುಂಬಿದ್ದಿತು. ಇಲ್ಲಿನ ಪ್ರಕೃತಿ ನಿರ್ಮಿತ ಗಂಗಾ ತೀರ್ಥದಿಂದ ಉಂಟಾಗಿದ್ದ ಜಲಧಾರೆಯ ಸರೋವರಕ್ಕೆ ಆ ವಿಪಿನ ಮೃಗಗಳು ಹಾಗೂ ಪಕ್ಷಿಗಳು ನೀರು ಕುಡಿಯಲು ಸಹಜವಾಗಿಯೆ ಬಂದು ಹೋಗುತ್ತಿದ್ದುದನ್ನು ತನ್ನ ಪರಿವಾರದಿಂದ ತಿಳಿದುಕೊಂಡ ದಶರಥನು, ಒಂದು ದಿನ ಬೇಟೆಯಾಡುತ್ತಾ ಅರಣ್ಯ ಮಧ್ಯದಲ್ಲಿ (ದಾರಿಗಳ ತಪ್ಪಲಿನ) ಸರೋವರದ ಸ್ವಲ್ಪ ದೂರಕ್ಕೆ ಧಾವಿಸುವ ವೇಳೆಗೆ ಸಂಜೆಗತ್ತಲು ಕವಿಯಾಲಾರಂಭಿಸಿರುತ್ತದೆ. ಮೊದಲೇ ಅದು ಸೂರ್ಯನ ಕಿರಣಗಳೂ ಕಾಣಿಸದಷ್ಟು ದಟ್ಟಕಾಡು. ಆದರೂ ಬೇಟೆಯಾಡುವ ದಶರಥನ ಉತ್ಸಾಹಕ್ಕೆ ಆ ಸಂಜೆಗತ್ತಲು ಅಡ್ಡಿಯಾಗಿರಲಿಲ್ಲ. ಸರೋವರಕ್ಕೆ ಸ್ವಲ್ಪ ದೂರದಲ್ಲಿ ಯಾವ ಪ್ರಾಣಿಗಳಿಗೂ ಕಾಣಿಸದಂತೆ ಅವಿತು ಕುಳಿತ ದಶರಥ, ಆ ಸರೋವರಕ್ಕೆ ನೀರಿಗಾಗಿ ಬರುವ ಮೃಗಗಳನ್ನು ಬೇಟೆಯಾಡುವ ಹುನ್ನಾರದಿಂದ ಚಡಪಡಿಸುತ್ತಿದ್ದ. ಆದರೆ, ಅದೇ ಹೊತ್ತಿಗೆ ದೂರದ ನಾಡಿನಿಂದ ತನ್ನ ಅಂಧ ಹಾಗೂ ವೃದ್ಧ ಮಾತಾ ಪಿತೃಗಳನ್ನು ಅಡ್ಡೆಯಲ್ಲಿ ಹೊತ್ತು ಪುಣ್ಯ ಕ್ಷೇತ್ರಗಳ ದರ್ಶನಕ್ಕಾಗಿ ಸಂಚರಿಸುತ್ತಾ ಬಂದ ಶ್ರವಣಕುಮಾರನೆಂಬ ರಾಜಕುಮಾರನು, ತನಗೂ ತನ್ನ ತಾಯ್ತಂದೆಯರಿಗೂ ಬಾಯಾರಿಕೆಯಾಗಿದ್ದುದರಿಂದ, ಆ ಸರೋವರದ ದಡದಲ್ಲಿ ಅಡ್ಡೆಯನ್ನು ಇಳುಹಿ, ಸರೋವರದಲ್ಲಿ ತಾನು ನೀರು ಕುಡಿದು, ತಾಯ್ತಂದೆಯರಿಗೂ ನೀರನ್ನು ಒಯ್ಯಲು ಮಣ್ಣಿನ ಹೂಜಿಯಲ್ಲಿ ನೀರನ್ನು ತುಂಬ ತೊಡಗುವನು. ನೀರು ತುಂಬುವ 'ಬುಳುಬುಳು' ಶಬ್ಧವು ಆ ನೀರವ ಸಂಜೆಯಲ್ಲಿ ದೂರದ ಮರದ ಮರೆಯಲ್ಲಿದ್ದ ದಶರಥನಿಗೆ ಯಾವುದೊ ಭಾರೀಮೃಗ ನೀರು ಕುಡಿಯುತ್ತಿದೆ ಎಂಬ ಭ್ರಮೆಯನ್ನುಂಟು ಮಾಡಿತು. ತಡಮಾಡದೆ ದಶರಥನು ಬಿಲ್ಲಿಗೆ ಬಾಣವನ್ನು ಹೂಡಿ, ಶಬ್ಧವೇದಿ ವಿದ್ಯೆಯ ಜ್ಞಾನದಿಂದ ಆ ಸರೋವರದಲ್ಲಿ ಶಬ್ದ ಬಂದೆಡೆಗೆ ಗುರಿಯಿಟ್ಟು ಬಿಟ್ಟನು.

ದಶರಥನು ಬಿಟ್ಟ ಬಾಣ, ಶ್ರವಣಕುಮಾರನಿಗೆ ತಾಗಿ ಅವನು ಹಾ! ಎಂದು ಚೀರುತ್ತಾ ಪ್ರಾಣ ಬಿಟ್ಟನು. ಕತ್ತಲಲ್ಲಿ ಅನಾಹುತ ನಡೆದು ಹೋಯಿತು. ಸರೋವರದ ದಡದಲ್ಲಿದ್ದ ವೃದ್ಧ ತಂದೆ-ತಾಯಿಯರು ತಮ್ಮ ಮಗ ಶ್ರವಣನು ಪ್ರಾಣಸಂಕಟದಿಂದ ಚೀರಿದ್ದನ್ನು ಕೇಳಿ ಏನಾಯಿತೆಂದು ತಿಳಿಯಲು ತಡಬಡಿಸುವಷ್ಟರಲ್ಲಿ, ಅಲ್ಲಿಗೆ ಓಡಿ

ಬಂದ ಸೈನಿಕರು ನಡೆದ ಅನಾಹುತವನ್ನು ತಿಳಿಸಿದರು. ವೃದ್ಧದಂಪತಿಗಳಿಗೆ ತಮ್ಮ ಮಗನನ್ನು ವಿನಾಕಾರಣವಾಗಿ ವಧೆ ಮಾಡಿದವನ ಮೇಲೆ ಅಸಾಧ್ಯವಾದ ಕೋಪವೂ ಉಂಟಾಯಿತು. ಒಡನೆಯೆ, 'ನಮ್ಮ ಮಗನನ್ನು ವಧೆ ಮಾಡಿದವನೂ ನಮ್ಮಂತೆಯೇ ಪುತ್ರಶೋಕದಿಂದ ನರಳಿ ಸಾಯುವಂತಾಗಲಿ'! ಎಂದು ದಶರಥನಿಗೆ ಶಾಪವಿತ್ತು, ಪುತ್ರನ ಅಕಾಲಿಕ ಅಗಲಿಕೆಯನ್ನು ತಾಳಲಾರದೆ ತಾವೂ ಸ್ಥಳದಲ್ಲಿಯೇ ಪ್ರಾಣ ಬಿಟ್ಟರು. ದಶರಥನು ತನ್ನಿಂದಾದ ಅಪರಾಧದಿಂದಾಗಿ, ಶ್ರವಣಕುಮಾರ ಮತ್ತು ಅವನ ಮಾತಾ ಪಿತೃಗಳು ಸಾವಿಗೀಡಾದ ಪಾಪವನ್ನು ವಿಮೋಚನೆ ಮಾಡಿಕೊಳ್ಳಲು, ಸರೋವರದ ಬಳಿಯೇ ಅವರ ಸಮಾಧಿಗಳನ್ನು ನಿರ್ಮಿಸಿ, ವಿಧಿ-ಪೂಜಾ-ಕರ್ಮಗಳನ್ನು ಪೂರೈಸಿದನಲ್ಲದೆ, ಶಾಪ ವಿಮೋಚನೆಗಾಗಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಪಾಪ ಪ್ರಾಯಶ್ಚಿತ್ತಾರ್ಥವಾಗಿ ಅದೇ ಸ್ಥಳದಲ್ಲಿ ಯಜ್ಞ ಯಾಗಗಳನ್ನು ಅಲ್ಲಿನ ಗುಹೆಯಲ್ಲಿ ಮಾಡಿದನೆಂದು ಪ್ರತೀತಿ ಇದೆ. ದಶರಥನು ಪ್ರತಿಷ್ಠಾಪಿಸಿದ ಶಿವಲಿಂಗವನ್ನು ಮುಂದೆ ರಾಮನೂ ಯಾತ್ರೆ ಬಂದು ಪೂಜಿಸಿದ್ದರಿಂದ ಈ ಕ್ಷೇತ್ರಕ್ಕೆ ದಶರಥರಾಮೇಶ್ವರ ಎಂಬ ಖ್ಯಾತಿ ಉಂಟಾಯಿತು ಎನ್ನಲಾಗಿದೆ. ಇಂದಿಗೂ ಈ ಕ್ಷೇತ್ರದಲ್ಲಿ ಶ್ರವಣನ ಸಮಾಧಿ, ಅವನ ಮಾತಾಪಿತೃಗಳ ಸಮಾಧಿ, ದಶರಥನ ಉಬ್ಬು ಕೆತ್ತನೆಯ ಶಿಲ್ಪ, ರಾಮಲಿಂಗನ ಗುಹಾಲಯ, ಸರೋವರ, ಶ್ರವಣ ಪರ್ವತ, ಆಕಾಶಗಂಗೆ, ಪಾತಾಳಗಂಗೆ, ವಜ್ರಗಿರಿ, ಪಂಚನಂದಿ, ಉದ್ಭವಲಿಂಗ, ೮೦೦ ವರ್ಷಗಳ ಹಿಂದಿನ ಕಲ್ಲಿನ ಗಾಲಿಗಳ ರಥ, ವೀರಭದ್ರ, ಶಿಲಾ ಮಂಟಪಗಳು ಮುಂತಾದವುಗಳಿವೆ. ಈಗ ಹೊಸ ರಥವಿದೆ. ದಶರಥರಾಮೇಶ್ವರ ದೇವರ ಉತ್ಸವ ಮೂರ್ತಿಯು ಸಮೀಪದ ಗುಡ್ಡದನೇರಲಕೆರೆಯಲ್ಲಿದೆ. ಮಾಘ ಮಾಸದಲ್ಲಾಗುವ ರಥೋತ್ಸವಕ್ಕೆ ಕಂಚೀದೇವರು, ದಸೂಡಿ ಆಂಜನೇಯದೇವರ ಉತ್ಸವ ಮೂರ್ತಿಗಳು ಇಲ್ಲಿಗೆ ಬರುತ್ತವೆ. ಇಲ್ಲಿ ಕಂಚಿದೇವರ ಕುಣಿತ ನೋಡಲು ಅದ್ಭುತವಾಗಿರುತ್ತದೆ. ಶ್ರಾವಣಮಾಸದಲ್ಲಿ ಕ್ಷೇತ್ರವು ಸಾವಿರಾರು ಭಕ್ತರಿಂದ ಕಿಕ್ಕಿರಿದಿರುತ್ತದೆ. ಈಗಲೂ ಈ ಕ್ಷೇತ್ರವು ಅರಣ್ಯ ಪ್ರದೇಶವಾಗಿಯೇ ಇದೆ. ರಾಮಾಯಣಕ್ಕೆ ಸಂಬಂಧಿಸಿರುವ ಈ ಕ್ಷೇತ್ರದಲ್ಲಿ ಭಕ್ತರು ಇಲ್ಲಿ ವಾಸವಿರುವ ನೂರಾರು ಕೋತಿಗಳಿಗೆ ಎಡೆ (ನೈವೇದ್ಯದ ಅಡುಗೆ)ಯನ್ನು ಬಡಿಸುತ್ತಾರೆ. ದೇವರಿಗಿಂತ ಮೊದಲು ಮಂಗಗಳಿಗೆ ಎಡೆ ಹಾಕುವ ಹರಕೆಯನ್ನು ಅನೇಕ ಭಕ್ತರು ಇಲ್ಲಿ ನೆರವೇರಿಸುವರು. ಈ ತಾಣದ ರಾಮೇಶ್ವರನ ಗುಹಾಲಯದಲ್ಲಿ ಎರಡು ಸುರಂಗಗಳಿದ್ದು, ಇವುಗಳಲ್ಲಿ ಒಂದು ಬಂಗಾರಗಿರಿಗೂ ಮತ್ತೊಂದು ಕೆಂಕೆರೆಪುರದವರೆಗೂ ಹೋಗಿದೆ ಎನ್ನುವರು. ಜನರು ಕ್ಷೇತ್ರದ ಪುಣ್ಯತೀರ್ಥದಲ್ಲಿ ಮಿಂದು ದೇವರನ್ನು ಆರಾಧಿಸುವರು. ಸುತ್ತಲ ಅನೇಕ ಗ್ರಾಮಗಳಿಂದ ನೆರೆಹೊರೆಯ ಇತರ ಜಿಲ್ಲೆ-ತಾಲ್ಲೂಕುಗಳಿಂದಲೂ ಗ್ರಾಮದೇವರುಗಳ ಉತ್ಸವಮೂರ್ತಿಗಳನ್ನು ಇಲ್ಲಿಗೆ ಪುಣ್ಯಸ್ನಾನಕ್ಕಾಗಿ ಕರೆತರುವ ಪರಿಪಾಠವಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಯಳನಾಡು ಸಿದ್ಧರಾಮೇಶ್ವರ ದೇವರಿಗೂ ಇಲ್ಲಿಂದ ವಿಶೇಷಪೂಜೆಗೆ ನಂದಿಯ

ಮೇಲೆ ಗಂಗೆಯನ್ನು ಶ್ರದ್ಧಾಭಕ್ತಿಗಳಿಂದ ಒಯ್ಯುವರು. ದಶರಥರಾಮೇಶ್ವರ ಅರಣ್ಯದ ಸೊಬಗು ನೋಡುವಂತಿದೆ. ರುದ್ರರಮಣೀಯ ತಾಣವಿದು. ಈ ವಜ್ಜುರ ಕ್ಷೇತ್ರವನ್ನು ಜನರು 'ದೊಡ್ಡವಜ್ರ' ಎನ್ನುವರು.

ಪ್ರಾಚೀನಕಾಲದಲ್ಲಿ ಪ್ರಸ್ತುತ ಕ್ಷೇತ್ರದಲ್ಲಿ ಸಿದ್ಧರು, ಯತಿಗಳು, ಋಷಿಗಳು, ಯೋಗಿಗಳು ಗಣಾಧೀಶರು, ಸಂತರು, ಸತ್ಪುರುಷರು ಸಂಚರಿಸುತ್ತಿದ್ದರೆಂಬ ಪ್ರತೀತಿ ಇದೆ. ದಶರಥರಾಮೇಶ್ವರ ಲಿಂಗವಿರುವ ಗುಹಾಲಯದ ಮುಂಭಾಗದ ಪರ್ವತವನ್ನು 'ಶ್ರವಣಕುಮಾರನ ಪರ್ವತ' ಎನ್ನುವರು. ಹಿಂದೆ ದಶರಥನ ಬಾಣದೇಟಿಗೆ ಶ್ರವಣನೆದೆಯಿಂದ ಚಿಮ್ಮಿದ ರಕ್ತದ ಸಂಕೇತವಾಗಿ ಇಂದಿಗೂ  ಈ ಪರ್ವತದಲ್ಲಿ ಹರಿಯುವ ನೀರು ರಕ್ತ ಕೀವುಗಳ ಬಣ್ಣದಲ್ಲಿ ಗೋಚರಿಸುತ್ತದೆ ಎನ್ನಲಾಗುತ್ತದೆ. ಅಲ್ಲದೆ, ಈ ಪರ್ವತದ ಹೊರಮೈಯಲ್ಲಿ ನಿಸರ್ಗದತ್ತ ಚಿತ್ರ ವಿಚಿತ್ರವಾದ ಕಲಾಕೃತಿ (ಚಿತ್ರಕಲೆ) ಗಳು ಶಿಲ್ಪ ಕಲಾಕೃತಿಗಳಂತೆ ಭ್ರಮೆಯನ್ನುಂಟು ಮಾಡುತ್ತವೆ. ಇತ್ತೀಚಿನ ವರ್ಷದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ತಾಣಗಳಿಗೆ ಯಾತ್ರೆ ಹೊರಟಿದ್ದ ಉತ್ತರ ಭಾರತದ ತಂಡವೊಂದು ಈ ತಾಣಕ್ಕೂ ಭೇಟಿ ನೀಡಿದ್ದಿತು. ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ಬೂದಿಹಾಳು ಸಂಸ್ಥಾನವನ್ನು ಆಳಿದ ಸಿರುಮಣ್ಣನಾಯಕನು ದಶರಥರಾಮೇಶ್ವರ ಅರಣ್ಯಕ್ಕೆ ಬೇಟೆಗೆ ಹೋಗಿದ್ದಾಗ, ದಟ್ಟಕಾನನದ ಮಧ್ಯದಲ್ಲಿ ದಶರಥರಾಮೇಶನಾಲಯದ ಕಳಶಗೋಪುರಗಳು ಹೊಳೆಯುತ್ತಿದ್ದವೆಂಬ ಚಿತ್ರಣ ಸಿರುಮನ ಸಾಂಗತ್ಯಗಳಲ್ಲಿದೆ. (ಉಲ್ಲೇಖ:- ಹಿಂದಿನ ಕಾಲದಲ್ಲಿ ಕುಂಚಿಟಿಗರ ಈರಬಡಣ್ಣನು ಗೋವುಗಳನ್ನು ಮೇಯಿಸಲು ಉತ್ತರೇ ಗುಡ್ಡಕ್ಕೆ ಬರುತ್ತಿದ್ದುದಲ್ಲದೆ, ದಶರಥರಾಮೇಶ್ವರ ವಜ್ಜುರಕ್ಕೆ ಹೋಗಿ ದಶರಥರಾಮೇಶ್ವರ ದೇವರನ್ನು ಪೂಜಿಸುತ್ತಿದ್ದನೆಂಬ ದಂತಕಥೆಯಿದೆ.)

**ಹಾಲುರಾಮೇಶ್ವರ ಕ್ಷೇತ್ರ** : ಚಿತ್ರದುರ್ಗ ಜಿಲ್ಲೆಯ ಅತ್ಯಂತ ಹೆಚ್ಚು ಪ್ರಸಿದ್ಧಿ ಪಡೆದಿರುವ ಪೌರಾಣಿಕ ಸ್ಥಳವೆಂದರೆ ಹಾಲುರಾಮೇಶ್ವರ. ಇದೊಂದು ಪುಣ್ಯತೀರ್ಥದ ಕ್ಷೇತ್ರ. ಹೊಸದುರ್ಗದಿಂದ ಜಾನಕಲ್ಲು-ತಾಳ್ಯ ರಸ್ತೆಯಲ್ಲಿ ೮ ಕಿ.ಮೀ. ದೂರದಲ್ಲಿರುವ ಈ ತಾಣದಲ್ಲಿ ಪುಟ್ಟ ಗಂಗಾಕೊಳದಲ್ಲಿನ ಶುಭ್ರಜಲದಲ್ಲಿ ಫಲಗಳು ತೇಲಿ ಬರುವುದೇ ಈ ಜನಪ್ರಿಯತೆಗೆ ಕಾರಣವಾಗಿದೆ. ಈ ಸ್ಥಳವು ಪುಣ್ಯ ಕ್ಷೇತ್ರವಾದ ಕುರಿತು ದಂತ ಕಥೆಯೊಂದು  ಪ್ರಚಲಿತದಲ್ಲಿದೆ.

ಪ್ರಾಚೀನ ಕಾಲದಲ್ಲಿ ಋಷಿಯೊಬ್ಬನು ತನ್ನ ಪತ್ನಿಯೊಂದಿಗೆ ಪುಣ್ಯಕೇತ್ರಗಳ ದರ್ಶನಕ್ಕಾಗಿ ಯಾತ್ರೆ ಹೊರಟಿದ್ದನು. ಕಾವೇರಿ-ತುಂಗಭದ್ರಾ ನದಿಗಳನ್ನು ದಾಟಿ, ವೇದಾವತಿ ನದಿಯ ದೂರದ ಅರಣ್ಯ ಪ್ರದೇಶದಲ್ಲಿದ್ದ ಶಬರಿವನಕ್ಕೆ  ತೆರಳುವ ಉದ್ದೇಶ ಅವನದಾಗಿದ್ದಿತು. ಮಾರ್ಗಮಧ್ಯದಲ್ಲಿ ಒಂದು ದಿನ ಬೆಳಗ್ಗೆ ಋಷಿಪತ್ನಿಯು ಹೊಳೆಯೊಂದರಲ್ಲಿ  ಮೀಯುತ್ತಿರುವಾಗ, ಗಂಗಾದೇವಿಯು ಪ್ರತ್ಯಕ್ಷಳಾಗಿ, ತನಗೆ

ಬಾಗಿನವನ್ನಿತ್ತು ಮುತ್ತೈದೆ ಧರ್ಮವನ್ನು ಪಾಲಿಸುವಂತೆ ಹೇಳಿದಳು,. ಋಷಿಪತ್ನಿಯು ಆನಂದಿತಳಾಗಿ ತನ್ನ ಕೈಕಡಗಗಳನ್ನೇ ಗಂಗೆಗೆ ಬಾಗಿನವನ್ನಾಗಿ ಅರ್ಪಿಸಿದಳು. ಈ ಸಂಗತಿಯನ್ನವಳು ಗಂಗೆಯ ಆಣತಿಯಂತೆ ತನ್ನ ಪತಿಗೆ ತಿಳಿಸಿರಲಿಲ್ಲ. ಆದರೆ ದಿವ್ಯದೃಷ್ಟಿಯ ಋಷಿಯು, ಮರುದಿನವೇ ಕೈಕಡಗಗಳು ಏನಾದುವೆಂದು ಪತ್ನಿಯನ್ನು ಪ್ರಶ್ನಿಸಿದನು. ನೆನ್ನೆ ತಾನು ಮಿಂದ ಹೊಳೆಯ ದಡದಲ್ಲಿ ಇಟ್ಟಿದ್ದು, ಮರೆತುಬಂದಿದ್ದೇನೆ, ಈಗಲೇ ತರುತ್ತೇನೆ ಎಂದು ಪತಿಯ ಒಪ್ಪಿಗೆ ಪಡೆದು ಆ ದಿಕ್ಕಿನೆಡೆಗೆ ಹೋದವಳು, ಮುಂದೆ ಕಾನನವನ್ನು ಪ್ರವೇಶಿಸಿ ಪತಿಗೆ ಸುಳ್ಳು ಹೇಳಿದ ತಾನು ಬದುಕಿರಬಾರದೆಂದೆಣಿಸಿ, ಸರ್ಪವಾದರೂ ತನ್ನನ್ನು ಬಲಿ ತೆಗೆದುಕೊಳ್ಳಲೆಂದು, ಕಾಡಿನಲ್ಲಿ ಕಂಡ ದೊಡ್ಡ ಹುತ್ತದ ಕ್ವಾವೆಗಳಿಗೆ ತನ್ನ ಮುಂಗೈಗಳನ್ನು ತೂರಿಸಿದಳು. ಅವಳಿಗೆ ಸರ್ಪ ಕಚ್ಚುವ ಬದಲು, ಹುತ್ತದಿಂದ ಶುಭ್ರ ಹಾಲಿನಂಥಹ ಜಲ ಉಕ್ಕಿ ಹರಿಯತೊಡಗಿತಲ್ಲದೆ, ಆಕೆಯ ಮುಂಗೈಗಳಲ್ಲಿ ಚಿನ್ನದ ಕೈಕಡಗಗಳು ಶೋಭಿಸುತ್ತಿದ್ದವು.

ಅಲ್ಲಿಗೆ ಬಂದ ಋಷಿಯು, ಉಕ್ಕಿ ಹರಿಯುವ ಗಂಗೆಯು ಅಲ್ಲಿಯೇ ನಿರಂತರವಾಗಿ ನೆಲೆಸಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುವಳೆಂದು ಪತ್ನಿಗೆ ತಿಳಿಸಿ, ಅದೇ ಜಾಗದಲ್ಲಿ ರಾಮನು ಆರಾಧಿಸಿದ್ದ ಶಿವಲಿಂಗವನ್ನು ಪತ್ನಿಯೊಂದಿಗೆ ಪೂಜಿಸಿ, ಯಾತ್ರೆ ಮುಂದುವರೆಸಿದನು. ಅಂದಿನಿಂದ ಅದು ಹಾಲಿನಂಥ ಶುಭ್ರ ಗಂಗೆ ಉಕ್ಕುವ ರಾಮೇಶ್ವರ ಇರುವ 'ಹಾಲುರಾಮೇಶ್ವರ' ಎಂದು ಹೆಸರಾಯಿತು. ಇಂದಿಗೂ ಕ್ಷೇತ್ರದಲ್ಲಿ ಗಂಗಾ ಗುಡಿ, ರಾಮೇಶ್ವರನ ಗುಡಿ, ರಾಮನ ಗುಡಿ, ಮುಂತಾದ ಗುಡಿಗಳು, ಸಾಲು ಮಂಟಪಗಳು, ಭಕ್ತರಿಗೆ ಇರಲು ಛತ್ರ ಮುಂತಾದವು ಇವೆ. ಅಲ್ಲದೆ, ಅನೇಕ ಪುಷ್ಕರಣಿಗಳಿವೆ. ಸಮುದ್ರಮಟ್ಟದಿಂದ ಹಾಲುರಾಮೇಶ್ವರ ಬೆಟ್ಟವು ೧,೧೮೧ ಮೀಟರ್ ಎತ್ತರವಿದ್ದು, ಜಿಲ್ಲೆಯಲ್ಲಿಯೆ ಅತ್ಯಂತ ಎತ್ತರದ ಬೆಟ್ಟವೆಂದು ದಾಖಲಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಅಂತರ್ಜಲ ಅತ್ಯಂತ ಕೆಳಮಟ್ಟದಲ್ಲಿದ್ದರೂ ಸಹ ಈ ರೀತಿ ನೆಲದ ಮಟ್ಟದಿಂದ ಕೆಲವೇ ಅಡಿಗಳ ಕೆಳಗೆ (ಮೂರಡಿಗಿಂತ ಕಡಿಮೆ), ನೀರಿರುವ ಹಾಗೂ ನೀರಿನ ಮೇಲ್ಮುಖ ಒತ್ತಡದ ಬುಗ್ಗೆಗಳಿರುವ ವಜ್ಜುರಗಳು ಅನೇಕವಿದ್ದು, ಇದೊಂದು ಭೂ ವೈಜ್ಞಾನಿಕ ವಿಸ್ಮಯವೆನ್ನಿಸಿದೆ. ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಗಂಗೆಯ ಒರತೆಯಲ್ಲಿ ವ್ಯತ್ಯಾಸವಾಗದಿರುವುದು ಅಚ್ಚರಿಯ ಸಂಗತಿಯಾಗಿದೆ. ತಾಲ್ಲೂಕಿನಲ್ಲಿ ಸಾವಿರಾರು ಬೋರ್‌ವೆಲ್‌ಗಳನ್ನು ಕೊರೆಯಿಸಿ ಕೃಷಿಗಾಗಿ ನೀರಿನ ಗಣಿಗಾರಿಕೆ ನಡೆದಿದ್ದರೂ, ಪ್ರಸ್ತುತ ವಜ್ಜುರಗಳ ನೀರಿನ ಸೆಲೆಗೆ ಭಂಗವಾಗಿಲ್ಲ. ಈ ಎಲ್ಲಾ ದೃಷ್ಟಿಗಳಿಂದ ಹೊಸದುರ್ಗದ ಹಾಲುರಾಮೇಶ್ವರ ನಿಜಕ್ಕೂ ಅದ್ಭುತ. ಆಸ್ತಿಕರ ಪಾಲಿಗಿದು ಕಾಶಿ ರಾಮೇಶ್ವರದಷ್ಟೆ ಪವಿತ್ರ ಕ್ಷೇತ್ರವಾಗಿದೆ.

ಐದು ಅಡಿ ಉದ್ದ, ಐದು ಅಡಿ ಅಗಲದ ಗಂಗಾ ಕೊಳಕ್ಕೆ ಕಲ್ಲುಚಪ್ಪಡಿಯ ಪುಟ್ಟ ಗುಡಿ ಕಟ್ಟಲಾಗಿದೆ. ಕೊಳದ ಮೇಲ್ಗಡೆ ಅಡ್ಡವಾಗಿ ತೊಲೆಗಲ್ಲನ್ನು ಹಾಕಲಾಗಿದ್ದು, ಅದರ

ಮೇಲೆ ಬಾಗಿಲಿಗೆದುರಾಗಿ ಗಂಗಾದೇವಿಯ ಪುಟ್ಟವಿಗ್ರಹ ಇಡಲಾಗಿದೆ. ಗುಡಿಯ ಬಾಗಿಲಿಂದ ಕೊಳಕ್ಕೆ ಇಳಿಯುವ ಶಿಲಾ ಸೋಪಾನಗಳಿವೆ. ಕೊಳದ ದಡದಲ್ಲಿ ಸುತ್ತಲೂ ಗೋಡೆಗೆ ಲಗತ್ತಾಗಿರುವ ಜಗಲಿಯಂತಿರುವ ಹಾಸುಗಲ್ಲುಗಳಿವೆ. ಭಕ್ತರು ಗುಡಿಯ ಹೊರಗೆ ಕೊಡದಲ್ಲಿ ತೀರ್ಥ ಹಾಕಿಸಿಕೊಂಡು ಮಿಂದು ನಂತರ ಗುಡಿಯೊಳಗೆ ಪ್ರವೇಶಿಸಿ ಗಂಗಾಪೂಜೆ ಮಾಡಿ ಯಾವುದೇ ದಿಕ್ಕಿನ ಶಿಲಾಜಗಲಿಯ ಮೇಲೆ ಕುಳಿತು ಭಕ್ತಿಯಿಂದ 'ಫಲ' ಕೇಳುತ್ತಾರೆ. ಕೆಲವರಿಗೆ ಬೇಗನೆ, ಕೆಲವರಿಗೆ ತುಂಬಾ ತಡವಾಗಿ ಫಲ ಬರುವುದುಂಟು. ಇನ್ನೂ ಕೆಲವರಿಗೆ ಬರುವುದೇ ಇಲ್ಲ. ಗಂಗೆಯಲ್ಲಿ (ಕೊಳದ ಬುಗ್ಗೆಯಲ್ಲಿ) ತೇಲಿಬರುವ ಫಲಗಳೆಂದರೆ ಚಿಗಣಿ ತಂಬಿಟ್ಟು, ತೆಂಗಿನಕಾಯಿ, ಬಾಳೆಹಣ್ಣು, ಬಳೆ, ತಾಳಿ, ವೀಳ್ಯದೆಲೆ, ಗರಿಕೆಹುಲ್ಲು ಮುಂತಾದ ಶುಭಸೂಚಕಗಳೂ ಆಗಿರಬಹುದು. ಖಾಲಿಚಿಪ್ಪು, ಇದ್ದಿಲು ಮುಂತಾದ ಅಶುಭ ಸೂಚಕಗಳೂ ಆಗಿರಬಹುದು. ಅವುಗಳ ಅರ್ಥದ ಬಗ್ಗೆ ಪೂಜಾರಿಯು ವಿವರಿಸುವನು. ಪೂಜೆಗೆ ನಿರ್ದಿಷ್ಟ ಶುಲ್ಕವಿದೆ.

'ಬಿ' ಗ್ರೇಡ್ ಮುಜರಾಯಿ ದೇವಸ್ಥಾನವಾಗಿರುವ ಈ ಕ್ಷೇತ್ರದ ಜೀರ್ಣೋದ್ಧಾರಕ್ಕಾಗಿ ೨೦೧೩ರಲ್ಲಿ ಸರ್ಕಾರದಿಂದ ಒಂಬತ್ತು ಕೋಟಿ ರೂಪಾಯಿ ಮಂಜೂರಾಗಿರುತ್ತದೆ. ಹಾಲು ರಾಮೇಶ್ವರದಲ್ಲಿ ಕೆಲವು ವೀರಗಲ್ಲುಗಳಿವೆ, ರಾಮೇಶ್ವರ ದೇವಾಲಯದ ಪಡಸಾಲೆಯಲ್ಲಿ ಲಕ್ಷ್ಮೀನಾರಾಯಣ, ಶಿವ-ಪಾರ್ವತಿ, ಗಣಪತಿ, ಷಣ್ಮುಖ, ವೆಂಕಟೇಶ್ವರ, ಆಂಜನೇಯ ಮುಂತಾದ ಸುಂದರ ಕೆತ್ತನೆಯ ಶಿಲಾ ವಿಗ್ರಹಗಳಿವೆ. ೧೯೪೩ರಲ್ಲಿ ಮೈಸೂರು ಅರಸ ಜಯಚಾಮರಾಜೇಂದ್ರ ಒಡೆಯರ್ ದಂಪತಿಗಳು ಹಾಲುರಾಮೇಶ್ವರಕ್ಕೆ ಬಂದಿದ್ದು, (ಗಂಗಾ ಮಾತೆಗೆ) ಪೂಜೆ ಸಲ್ಲಿಸಿ ಅಪ್ಪಣೆ ಕೇಳಿದಾಗ ಪುಟ್ಟ ಬೆಳ್ಳಿತೊಟ್ಟಿಲು ಕೊಳದಲ್ಲಿ ಬಂದಿತ್ತೆನ್ನಲಾಗಿದೆ. ಚಿತ್ರದುರ್ಗ ಪಾಳೆಯಗಾರರು ಇಲ್ಲಿನ ಹಾಲುರಾಮೇಶ್ವರ ದೇವಾಲಯದ ಎದುರಿಗೆ ದೀಪಾಲೆಕಂಬ ನಿಲ್ಲಿಸಿದ್ದಲ್ಲದೆ, ಗಂಗಮ್ಮನ ಗುಡಿಯ ಶಿಖರವನ್ನು ಮಾಡಿಸಿದ್ದಾರೆ. (ಕ್ರಿ.ಶ. ೧೭ ರಿಂದ ೧೮ನೇ ಶತಮಾನದಲ್ಲಿ).

**ಶಬರಿವನ ಕ್ಷೇತ್ರ**: ಹೊಸದುರ್ಗ ತಾಲ್ಲೂಕಿನ ದೇವರಗುಡ್ಡ ಅರಣ್ಯದ ಬಳಿ ಇರುವ ದೊಡ್ಡಘಟ್ಟದ ಪಕ್ಕದಲ್ಲಿ ಮಲ್ಲಾಪುರದಿಂದ ೧ ಕಿ.ಮೀ. ದೂರದಲ್ಲಿರುವ ತೋಪಿನ ಆವರಣವೇ ಪ್ರಾಚೀನಕಾಲದ ಶಬರಿವನ. ಇದನ್ನು ಈ ಪ್ರದೇಶದ ಜನರು 'ರಾಮದೇವರ ತೋಪು' ಎಂದೂ ಕರೆಯುತ್ತಾರೆ. ಶ್ರೀರಾಮನನ್ನು ಹುಡುಕುತ್ತಾ ಕಾಡುಗಳಲ್ಲಿ ದುಃಖದಿಂದ ಅಲೆಯುತ್ತಿದ್ದ ಶಬರಿಯು ದರ್ಶನ ದೊರಕಿಸಿಕೊಡೆಂದು ಅಂಗಲಾಚಿ ಶ್ರೀರಾಮನನ್ನು ಭಕ್ತಿಯಿಂದ ಕೂಗಿದಾಗ, ಶ್ರೀರಾಮನು ಈ ಅರಣ್ಯದಲ್ಲಿ ದರ್ಶನವಿತ್ತು, ಆಕೆಯ ದು:ಖ ಶಮನಗೊಳಿಸಿದನೆಂಬ ಪ್ರತೀತಿ ಇದೆ. ಹಾಗಾಗಿರುವ ಇಲ್ಲಿನ ಕಲ್ಲಿನ ಪೌಳಿಯಲ್ಲಿ ಪ್ರತಿ ಶನಿವಾರ ಜನರಿಂದ ಪೂಜೆಗೊಳ್ಳುವ ಒಂದು ಗುಂಡುಶಿಲೆ ಹಾಗೂ ಬಾಗಿಲ ಬಳಿ ಸೀತಾರಾಮಲಕ್ಷ್ಮಣರ ಪುಟ್ಟ ವಿಗ್ರಹವೊಂದು

ಇದೆ. ಈ ತಾಣವೆ ಶಬರಿಯ ಸಮಾಧಿ ಸ್ಥಳವೆನ್ನಲಾಗಿದೆ. ಇಲ್ಲಿ ಮಧ್ಯಾಹ್ನದ ನಂತರ ಜನ ಸಂಚಾರವಿರುವುದಿಲ್ಲ. ರಾಮಾಯಣ ಕಾಲದ ಸ್ಥಳವಿದಾಗಿದ್ದರೂ, ಇಲ್ಲಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಿದೆ. ಪ್ರವಾಸಿಗರನ್ನು ಆಕರ್ಷಿಸಬೇಕಿದೆ. ಈ ಸ್ಥಳದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಾದ ಅಗತ್ಯವಿದೆ.

**ಗವಿರಂಗನಾಥ ಸ್ವಾಮಿ ಬೆಟ್ಟ** : ಈ ಪೌರಾಣಿಕ ಕ್ಷೇತ್ರವನ್ನು ವಾಮನನು ಪಾದ ಊರಿದ ಸ್ಥಳವೆನ್ನುವರು. ಇಲ್ಲಿನ ಬೆಟ್ಟದಲ್ಲಿ ಪ್ರಾಚೀನವಾದ ಶ್ರೀಗವಿರಂಗನಾಥ ದೇವರ ಗುಹಾದೇಗುಲವಿದೆ. ವಿಜಯನಗರ ಕಾಲದ ಪಾಳೆಯಗಾರರು ಇಲ್ಲಿನ ದೇವಾಲಯ ಸಂಕೀರ್ಣವನ್ನು ಜೀರ್ಣೋದ್ಧಾರಗೊಳಿಸಿದ್ದಾರಲ್ಲದೆ, ಗರುಡಗಂಭ, ಉಯ್ಯಾಲೆ ಕಂಭಗಳನ್ನು ಪ್ರತಿಷ್ಠಾಪಿಸಿ, ದೇವರಿಗೆ ವಿವಿಧ ಉತ್ಸವಗಳಿಗಾಗಿ ಆಳು ಪ್ರಮಾಣದ ಕಂಚಿನ ಗರುಡವಾಹನ, ಆಂಜನೇಯ, ಆಮೆ ಮುಂತಾದ ಕಲಾತ್ಮಕ ವಿಗ್ರಹಗಳನ್ನು ಅರ್ಪಿಸಿದ್ದು, ನೋಡಲು ಅತ್ಯಾಕರ್ಷಕವಾಗಿವೆ. ಗವಿರಂಗನಾಥನನ್ನು 'ನಿತ್ಯೋತ್ಸವದ ಗವಿರಂಗ', 'ಅನ್ನದಾನಿ ಗವಿರಂಗ' ಮುಂತಾದ ಬಿರುದುಗಳಿಂದ ಜನರು ಉಲ್ಲೇಖಿಸುವರು. ಇದು ಕರ್ನಾಟಕದ ಏಕೈಕ ಕೂರ್ಮಾವತಾರ ಕ್ಷೇತ್ರವಾಗಿದ್ದು, ಇಲ್ಲಿನ ರಂಗನಾಥ ದೇವರು ಉದ್ಭವ ಮೂರ್ತಿಯಾಗಿದೆ. ಅಲ್ಲದೆ ಈ ಕ್ಷೇತ್ರದಲ್ಲಿ ರಂಗನಾಥದೇವರ ಪರಿವಾರ ದೇವತೆಗಳಾದ ಅನಂತಪದ್ಮನಾಭ, ಮಾರುತಿ, ಕೆಂಚಲಕ್ಕಮ್ಮ, ಕೆಂಚರಾಯ ಹಾಗೂ ಕಾಡರಾಯ ದೇವಾಲಯಗಳಿವೆ. ಬೆಟ್ಟದ ತಪ್ಪಲಲ್ಲಿ ಭಕ್ತರು ಕಟ್ಟಿಸಿರುವ ನೂರಾರು ಛತ್ರಗಳೂ, ಅಂಗಡಿ ಮುಂಗಟ್ಟುಗಳೂ ರಥ ಬೀದಿಯೂ, ವಿಜಯನಗರಕಾಲದ ಅತ್ಯಾಕರ್ಷಕ ಕಲ್ಯಾಣಿಯೂ, ಮರಗಳ ತೋಪೂ ಇವೆ. ಮೂರ್‍ನಾಲ್ಕು ವರ್ಷಗಳಿಗೊಮ್ಮೆ ಚೈತ್ರ ಬಹುಳ ಚಿತ್ತಾ ನಕ್ಷತ್ರದಲ್ಲಿ ರಥೋತ್ಸವವು ಭಾರೀ ಜನಜಾತ್ರೆಯೊಂದಿಗೆ ಜರುಗುವುದು. ಇಲ್ಲಿ ವರ್ಷ ಪೂರ್ತಿ ಆಗಾಗ್ಗೆ ಉತ್ಸವಗಳು ಜರುಗುತ್ತವೆ. ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರವಾಗಿರುತ್ತದೆ. ಇದು ಮುಜರಾಯಿ ಇಲಾಖೆಯ 'ಎ' ವರ್ಗದ ದೇವಾಲಯವಾಗಿದ್ದು, ಈ ಕ್ಷೇತ್ರವು ಬೆಂಗಳೂರಿನಿಂದ ೧೭೫ ಕಿ.ಮೀ. ದೂರದಲ್ಲಿದೆ. ವೈಕುಂಠ ಏಕಾದಶಿಯಂದು ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಗವಿರಂಗಸ್ವಾಮಿ ಬೆಟ್ಟದ ಪಶ್ಚಿಮ(ಹಿಂಬದಿ)ದಲ್ಲಿ ಶೈವ ಗುಹಾಲಯ ಇರುವುದೊಂದು ವಿಶೇಷ ಸಂಗತಿಯಾಗಿದೆ.

**ಕಂಚೀಪುರ**: ಇದೂ ಸಹ ರಾಮಾಯಣ ಕಾಲಕ್ಕೆ ಸಂಬಂಧಿಸಿರುವ ಸ್ಥಳವೆನ್ನುವರು. ಹಿಂದೆ ಈ ಸ್ಥಳಕ್ಕೆ ಅರಳಿಹಾಳು ಎಂಬ ಹೆಸರಿದ್ದು, ಮೂಲ ಗ್ರಾಮದ ಅವಶೇಷಗಳು ಸಮೀಪದ ಅರಣ್ಯದ ಮಧ್ಯದಲ್ಲಿ ಕಾಣಸಿಗುವುವು. ಇಲ್ಲಿನ ಕಂಚೀವರದ ದೇವರು ಸುಗ್ರೀವನ ಅವತಾರ ಎಂಬ ನಂಬಿಕೆ ಜನರಲ್ಲಿದೆ. ಯುಗಾದಿಯ ನಂತರ ಈ ದೇವರ ರಥೋತ್ಸವ ನಡೆಯುವುದು. ಈ ದೇವರ ಜಾತ್ರೆ-ಉತ್ಸವಗಳಲ್ಲಿ ಭಕ್ತರು ತಮ್ಮ ಹರಕೆಯ ಹಣದ ಚಿಲ್ಲರೆಯನ್ನು ಬೊಗಸೆಗಟ್ಟಲೆ ದೇವರ ಮೇಲಕ್ಕೆ ಎರಚುವ ಸಂಪ್ರದಾಯವಿದೆ.

ರಾಜ್ಯದಲ್ಲಿ ಮೊಟ್ಟ ಮೊದಲು ಅಂಬಿನೋತ್ಸವ ಆಚರಿಸಿಕೊಳ್ಳುವ ದೇವರಿದು. ಉತ್ತರೇಮಳೆ ಹುಟ್ಟಿದ ತರುವಾಯ ಬರುವ ಮೊದಲನೆ ಸೋಮವಾರದಂದು ಅಂಬು ಹೊಡೆಯುತ್ತದೆ. 'ಉತ್ತರೇಮಳೆಅಂಬು' ಎಂದೇ ಪ್ರಸಿದ್ಧ. ಕಂಚಿದೇವರು ದಶರಥರಾಮೇಶ್ವರಕ್ಕೆ ಹೋಗಿ ಉತ್ತರೇಮಳೆಯ ನೀರಿನಲ್ಲಿ ತಿರುನಾಮ ತೇದು ಹಚ್ಚಿಕೊಳ್ಳುತ್ತದೆ. ಕಂಚಿದೇವರ ಪಟ್ಟದ ಪೂಜಾರಿಯು ತಲೆಗೆ ಪಾಗು ಸುತ್ತಿಕೊಂಡು ದೇವರನ್ನು ಹೊರುತ್ತಾನೆ. ಇಲ್ಲಿ ಕಂಚೀದೇವರ ಕುಣಿತವು ಸೋಮನ ಕುಣಿತಕ್ಕಿಂತಲೂ ಆಕರ್ಷಕವಾಗಿರುತ್ತದೆ. ಈ ದೇವರಿಗೆ ಸಲ್ಲಿಸುವ ಪಾಷಾಣದೆಡೆ, ಸೊರಗಂಬಲಿ ಮುಂತಾದ ಸೇವೆಗಳು ವಿಶೇಷ ಅಧ್ಯಯನಕ್ಕೆ ಯೋಗ್ಯವಾಗಿವೆ. ಕಂಚೀವರದನು ದಶರಥರಾಮೇಶ್ವರನ ಪರಮಶಿಷ್ಯನೆಂಬ ನಂಬಿಕೆ–ಆಚರಣೆಗಳು ಪ್ರಚಲಿತದಲ್ಲಿವೆ. ಅನೇಕ ಶಾಸನಗಳೂ ಸಹ ಇಲ್ಲಿವೆ. **'ಹೊನ್ನು ಸೂರೆ ಕಂಚಿವರದ'** ಎಂಬ ನಾಣ್ಣುಡಿ ಈ ಪ್ರದೇಶದಲ್ಲಿ ಮನೆಮಾತಾಗಿದೆ. ಈ ದೇವರಿಗೆ ಇಲ್ಲಿನ ಜನರು 'ವರದಯ್ಯ' ಎಂದು ಕರೆಯುತ್ತಾರೆ.

**ಮೈಲಾರಪುರ**: ದಕ್ಷಿಣ ಭಾರತದ ಕೆಲವೇ ಮೈಲಾರನ ಆರಾಧನಾ ಕೇಂದ್ರಗಳಲ್ಲಿ ಇದೂ ಒಂದು. ಮೈಲಾರನಿಗೆ ಈಶ್ವರನು ಒಲಿದ ಪುರಾಣಕಥೆ ಇಲ್ಲಿ ಪ್ರಚಲಿತದಲ್ಲಿದೆ. ಬೆಟ್ಟದಲ್ಲಿರುವ ದೇವಾಲಯ ಸಮುಚ್ಚಯದಲ್ಲಿ ಮೈಲಾರ ದೇವರು ಮತ್ತು ಪರಿವಾರ ದೇವರುಗಳಿವೆ. ವಿಜಯದಶಮಿಯಲ್ಲಿ ಜರುಗುವ ಸರಪಳಿ ಪವಾಡ ಮತ್ತು ಶಸ್ತ್ರಪವಾಡವನ್ನು ನೋಡಲು ಲಕ್ಷಾಂತರ ಜನ ಸೇರುತ್ತಾರೆ. ಈ ಕ್ಷೇತ್ರದಲ್ಲಿ ೨೫ ಅಡಿ ಉದ್ದದ ಪ್ರಾಚೀನ ಕಾಲದ ಮರದ ಬಿಲ್ಲೊಂದಿದೆ. ಇದರ ಅರ್ಧದವರೆಗಿನ ಭಾಗವನ್ನು 'ಚೌಡಮ್ಮ' ದೇವರು ಎಂದೂ ಇನ್ನರ್ಧ ಭಾಗವನ್ನು 'ನೀಲಣ್ಣ'ದೇವರೆಂದೂ ಪೂಜಿಸುವರು. ೧೨ ವರ್ಷಗಳಿಗೊಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ. ೧೫ನೆಯ ಶತಮಾನದಲ್ಲಿ ಬೂದಿಹಾಳು ಕೋಟೆಯನ್ನಾಳಿದ ಗೊಲ್ಲ ಸಿರುಮಣ್ಣನಾಯಕನು ಈ ಕ್ಷೇತ್ರದಲ್ಲಿ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿ, ದೀಪಾಲೆಕಂಬ ಹಾಗೂ ಉಯ್ಯಾಲೆಕಂಬ, ಮಂಟಪಗಳನ್ನು ಸ್ಥಾಪಿಸಿದನೆನ್ನಲಾಗಿದೆ. ಸಿರುಮನ ಸಾಂಗತ್ಯದಲ್ಲಿ, ಸಿರುಮನು ಈ ದೇವರ ಭಕ್ತನಾಗಿದ್ದ ಬಗ್ಗೆ ವರ್ಣನೆ ಇದೆ. ಇಲ್ಲಿರುವ ದೊಡ್ಡದಾದ ಬಿಲ್ಲು, ಪುರಾಣಕಾಲದಲ್ಲಿ ಭೈರವನು ಮಣಿಮಲ್ಲಾಸುರರ ಸಂಹಾರಕ್ಕೆ ಬಳಸಿದ್ದೆನ್ನಲಾಗಿದೆ. ಪಾಶು ಪತಾಸ್ತ್ರವೆಂಬ ದೊಡ್ಡ ಮರದ ಬಾಣವೂ ಇಲ್ಲಿಯೆ ಇದೆ. ಇಲ್ಲಿನ ವೀರಭದ್ರ ದೇವರ ಹಲಗೆಯಲ್ಲಿ ಕನ್ನಡ ಲಿಪಿಯ ತೆಲುಗು ಶಾಸನವಿದೆ.

**ಇತಿಹಾಸ ಪೂರ್ವಕಾಲ**: ಇತಿಹಾಸ ಪೂರ್ವಕಾಲ ಎಂದರೆ, ಹಳೇ ಶಿಲಾಯುಗ (ಆದಿ ಹಳೇಶಿಲಾಯುಗ ಒಳಗೊಂಡಂತೆ) ಸಂಸ್ಕೃತಿಯು ಮಧ್ಯ ಹಳೇಶಿಲಾಯುಗ ಸಂಸ್ಕೃತಿ, ಅಂತಿಮ ಹಳೇಶಿಲಾಯುಗ ಸಂಸ್ಕೃತಿ, ನೂತನ ಶಿಲಾಯುಗ ಅಥವಾ ತಾಮ್ರ ಶಿಲಾಯುಗ ಸಂಸ್ಕೃತಿ ಹಾಗೂ ಕಬ್ಬಿಣ ಯುಗದ ಬೃಹತ್ ಶಿಲಾಯುಗ

ಸಂಸ್ಕೃತಿ. ಇತಿಹಾಸ ಪೂರ್ವ ಕಾಲೀನ ಸಮಾಜದತ್ತ ದೃಷ್ಟಿ ಹಾಯಿಸಿದರೆ ಕಾಣುವ ಮಾನವ ಬದುಕಿನ ಸ್ಥಿತ್ಯಂತರಗಳು ಕುತೂಹಲಕರವಾಗಿವೆ. ಆಹಾರ ಸಂಗ್ರಹಣೆಯ ಅಲೆಮಾರಿ ಸ್ಥಿತಿಯಿಂದ ಆಹಾರೋತ್ಪಾದನೆಯ ಹಂತಕ್ಕೆ ಬೆಳೆದ ಸಮುದಾಯಗಳು ತಮ್ಮ ಬೆಳೆವಣಿಗೆಯ ಹಾಗೂ ಪರಿವರ್ತನೆಯ ಸ್ವರೂಪವನ್ನು ನಾನಾ ರೀತಿಯಲ್ಲಿ ಮನಗಾಣಿಸಿವೆ. ಕೃಷಿಯ ಆರಂಭ, ಮಡಿಕೆ ಕುಡಿಕೆಗಳ ತಯಾರಿಕೆ ಹಾಗೂ ಲಿಪಿಯ ಬಳಕೆ ಇವು ಮುಖ್ಯ ಬೆಳವಣಿಗೆಗಳಾಗಿವೆ.

ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಪ್ರದೇಶವು ಅತ್ಯಂತ ಪ್ರಾಚೀನ ಅಂದರೆ, ಆದಿ ಹಳೇ ಶಿಲಾಯುಗ ಸಂಸ್ಕೃತಿಯ ಪುರಾವೆಗಳು ಗೋಚರಿಸಿರುವ ತಾಣವಾಗಿದೆ. ರಾಬರ್ಟ್ ಬ್ರೂಸ್‌ಫೂಟ್‌ರವರು ಈ ಪ್ರಾಗೈತಿಹಾಸಿಕ ತಾಣದ ಅಧ್ಯಯನ ಮಾಡಿ ಮೊದಲಿಗರಾಗಿದ್ದಾರೆ. (ಉಲ್ಲೇಖ:– ತದನಂತರ ೧೯೫೭ ರಲ್ಲಿ ಎಂ. ಶೇಷಾದ್ರಿಯವರು ಇಲ್ಲಿ ಹಳೇಶಿಲಾಯುಗದ ಆಯುಧಗಳನ್ನು ಪತ್ತೆ ಹಚ್ಚಿದರು. ಎನ್.ಎಸ್.ಮಹಂತೇಶ್ ಅವರು ಈಚಿನ ವರ್ಷಗಳಲ್ಲಿ ಹೊಸದುರ್ಗ ತಾಲ್ಲೂಕಿನ ಹಲವೆಡೆಗಳಲ್ಲಿ ಇಂಥಹ ನೆಲೆಗಳನ್ನು ಗುರುತಿಸಿದ್ದಾರೆ. ಬಾಗೂರು ಆರ್. ನಾಗರಾಜಪ್ಪ ಅವರು ಈಚೆಗೆ ಹೊಸದುರ್ಗದ ದೊಡ್ಡಗುಡ್ಡದಲ್ಲಿ ಪ್ರಾಚೀನ ಶಿಲಾ ಕೈಕೊಡಲಿಯನ್ನು ಪತ್ತೆ ಹಚ್ಚಿದ್ದಾರೆ. ಇದರ ಪ್ರಾಚೀನತೆ ಕನಿಷ್ಟ ಕ್ರಿ.ಪೂ. ೧.೨೫ ಲಕ್ಷ ವರ್ಷಗಳಿಂದಾಚಿನದು. ಚಿತ್ರದುರ್ಗ ಜಿಲ್ಲೆಯಲ್ಲಿ ಇಷ್ಟೊಂದು ಪ್ರಾಚೀನ ಸಂಸ್ಕೃತಿಯ ತಾಣಗಳು,ಹೊಳಲ್ಕೆರೆ ತಾಲ್ಲೂಕಿನ ತಾಳ್ಯ, ಚಿತ್ರದುರ್ಗ ತಾಲ್ಲೂಕಿನ ಕೂನಬೇವು, ಸಂಗೇನ ಹಳ್ಳಿಕೆರೆ, ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಮೊದಲಾದೆಡೆ ನೆಲೆ ಹಾಗೂ ಕೆಲವೆಡೆ ಪ್ರಾಚೀನ ಶಿಲಾಗೋರಿಗಳು ಕಂಡು ಬಂದಿವೆ. ನೈಸರ್ಗಿಕ ಕಲ್ಲಾಸರೆಗಳೂ, ಗುಹೆಗಳೂ ಇದ್ದು ಅಧ್ಯಯನ ಯೋಗ್ಯವಾಗಿವೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಿ ಜೈನಧರ್ಮದ ಪ್ರಭಾವ ಇದ್ದ ಬಗ್ಗೆ ಪುರಾವೆಗಳಿವೆ.

**ಇತಿಹಾಸ ಕಾಲ**: ಕ್ರಿ.ಶ. ೪ನೇ ಶತಮಾನದಿಂದ ಈ ತಾಲ್ಲೂಕಿನ ವಿವಿಧ ಪ್ರದೇಶಗಳನ್ನು ಗಂಗರು, ಹೊಯ್ಸಳರು, ನೊಳಂಬರು, ಪಲ್ಲವರು, ವಿಜಯನಗರದ ಅರಸರು, ಪಾಳೆಯಗಾರರು, ಸುಲ್ತಾನರು, ದೆಹಲಿಯವರು, ಶಿರಾದವರು, ಪೇಶ್ವೆಗಳು, ಮೊಗಲರು, ಮರಾಠರು, ಮೈಸೂರಿನವರು ಹಾಗೂ ಆಂಗ್ಲರು ವಿವಿಧ ಕಾಲಘಟ್ಟಗಳಲ್ಲಿ ಆಳಿದ್ದಾರೆ.

## ಗಂಗರು

ಹೊಸದುರ್ಗ ಭೂ ಪ್ರದೇಶದಲ್ಲಿ ಪ್ರಾಚೀನ ಇತಿಹಾಸ ಕಾಲದಲ್ಲಿ ಆಳಿದವರಲ್ಲಿ ಗಂಗ ವಂಶದವರು ಮುಖ್ಯರಾಗಿದ್ದಾರೆ. ಕ್ರಿ.ಶ.೪ನೆಯ ಶತಮಾನದಿಂದಲೇ

ಇವರ ಆಳ್ವಿಕೆಗೆ ಇಲ್ಲಿನ ಪ್ರದೇಶವು ಒಳಪಟ್ಟಿದ್ದಿತೆಂಬ ಅಭಿಪ್ರಾಯವಿದೆಯಾದರೂ ಅಧಿಕೃತವಾಗಿ ನಮಗೆ ದೊರಕುವ ಆಧಾರ ಶಾಸನಗಳೆಂದರೆ, ಗಂಗ ವಂಶದ ಕೊನೆಯ ಅರಸನಾದ ಶ್ರೀಪುರುಷನು ಇಲ್ಲಿನ ನೀರಗುಂದವನ್ನು ಆಳಿದ ಬಗೆಗಿನ ಕ್ರಿ.ಶ. ೮ನೆಯ ಶತಮಾನದ ಶಾಸನಗಳೇ ಆಗಿವೆ. ಶ್ರೀಪುರುಷನ ಆಳ್ವಿಕೆಯ ಕಾಲ ಕ್ರಿ.ಶ. ೭೨೬–೭೮೮ರ ಅವಧಿಯಾಗಿದ್ದು, ಇವನಿಗಿಂತಲೂ ಹಿಂದಿನ ಕಾಲದಲ್ಲಿಯೆ 'ನೀರಗುಂದ ವಿಷಯ'ವು ಇದ್ದಿತೆಂಬ ಬಗ್ಗೆ ದಾಖಲೆಗಳಿವೆ. ಸುಮಾರು ೨೦೦೦ ವರ್ಷಗಳಷ್ಟು ಪುರಾತನ ನಗರವಾದ ನೀರ್ಗುಂದವು, ಕರ್ನಾಟಕದ ಅತ್ಯಂತ ಪುರಾತನ ನಗರಗಳಲ್ಲೊಂದೆನ್ನಿಸಿದೆ. ಶಾಸನಗಳಲ್ಲಿ ಇದನ್ನು 'ಉದ್ಭವ ಸೋಮನಾಥಪುರ', 'ನೀರ್ಗುಂದನಾಡು', 'ನೀರ್ಗುಂದ ೨೦೦ ನಾಡು', 'ತೆಂಕಣ ಅಯ್ಯಾವೊಳೆ' ಎಂಬ ಅಭಿದಾನಗಳಿಂದ ಪ್ರಶಂಸಿಸಲಾಗಿದೆ. ಅಲ್ಲದೆ, ಒಂದೂವರೆ ಸಾವಿರ ವರ್ಷಗಳ ಹಿಂದೆ ಈ ಸ್ಥಳವು ಜೈನರ ರಾಜಧಾನಿಯಾಗಿತ್ತೆನ್ನಲಾಗಿದೆ. ಕ್ರಿ.ಶ. ೨ನೇ ಶತಮಾನದಿಂದಲೂ ನೀರಗುಂದವು ರಾಜಧಾನಿಯಾಗಿ ಮೆರೆದಿತ್ತೆಂಬ ಐತಿಹ್ಯಗಳಿವೆ.

ಕ್ರಿ.ಶ.೮ನೇ ಶತಮಾನದ ಆರಂಭದಲ್ಲಿ ನೀರ್ಗುಂದನಾಡನ್ನು ಗಂಗರಸನಾದ ಶ್ರೀಪುರುಷನ ಮಹಾಸಾಮಂತನಾದ ದಿಂಡಿಕ (ಇವನು ಬಾಣ ವಂಶದವನು)ನೆಂಬ ಅರಸನು ಆಳುತ್ತಿದ್ದನು. ದಿಂಡಿಕನಿಗೆ 'ದುಂಡು' ಎಂಬ ಬಿರುದಿದ್ದಿತು. ದಿಂಡಿಕನ ತರುವಾಯ ನೀರ್ಗುಂದ ನಾಡನ್ನು ಅವನ ಮಗನಾದ ಪರಮಗುಳನು ದಕ್ಷತೆಯಿಂದ ಆಳಿ 'ಶ್ರೀಪೃಥ್ವಿನೀರ್ಗುಂದರಾಜಾ' ಎಂಬ ಬಿರುದನ್ನು ಪಡೆದಿದ್ದನು. ಪರಮಗುಳನ ಪತ್ನಿ ಕುಂದಾಚ್ಚಿ (ಈಕೆ ಸಗರ ವಂಶದ ಮರುವರ್ಮನ ಮಗಳು)ಯು ಶ್ರೀಪುರದಲ್ಲಿ ಲೋಕತಿಲಕ ಜಿನಾಲಯವನ್ನು ನಿರ್ಮಿಸಿದಾಗ, ಶ್ರೀಪುರುಷನು ಆ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ದೇವರ ಪೂಜೆಗೆ ಇತ್ಯಾದಿ ಕಾರ್ಯಗಳಿಗೆಂದು ವಿವಿಧ ದತ್ತಿಗಳನ್ನು ನೀಡಿದನೆಂದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯ ಕ್ರಿ.ಶ. ೭೭೬ ರ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಶ್ರೀಪುರುಷನು 'ಮೂಷವ ವಿಷಯ'ವನ್ನು ಜಯಿಸಿದಾಗ ಮೊದಲಶರ್ಮ ಎಂಬ ಬ್ರಾಹ್ಮಣನಿಗೆ ಗ್ರಾಮದತ್ತಿ ನೀಡಿದ ಸಂದರ್ಭದಲ್ಲಿ ಪರಮಗುಳನ ತಂದೆಯಾದ ದಿಂಡಿಕನು ಸಾಕ್ಷಿಯಾಗಿದ್ದನೆಂದು ಶಾಸನದಲ್ಲಿ ಹೇಳಲಾಗಿದೆ. ದಿಂಡಿಕನು ನೀರ್ಗುಂದನಾಡನ್ನು ಕ್ರಿ.ಶ. ೭೫೦ರಲ್ಲಿಯೂ, ಇವನ ಮಗ ಪರಮಗುಳನು ಕ್ರಿ.ಶ. ೭೭೬ ರಲ್ಲಿಯೂ ಆಳಿರಬಹುದೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿರುವರು. ಇದೇ ವಂಶದ ವಿಕ್ರಮರಾಯನ ಆಳ್ವಿಕೆಯು ಕ್ರಾಂತಿಕಾರಿಯಾಗಿದ್ದಿತೆನ್ನಲಾಗಿದೆ. ಪರಮಗುಳನ ಪಟ್ಟದರಾಣಿ ಕುಂದಾಚ್ಚಿಯು ಸ್ವಲ್ಪ ಕಾಲ ನೀರ್ಗುಂದನಾಡನ್ನು ಆಳಿದಳೆನ್ನಲಾಗಿದೆ.

ಕ್ರಿ.ಶ. ೮ನೇ ಶತಮಾನದಲ್ಲಿ ನೀರ್ಗುಂದನಾಡಿನ ದೊರೆಯಾದ ವಿಕ್ರಮರಾಯನ ಮಗಳು ರತ್ನವತಿಯನ್ನು, ರತ್ನಪುರಿ (ಈಗಿನ ಲಕ್ಕವ್ವನಹಳ್ಳಿ) ದೇಶದ

ರಾಜಕುಮಾರರಾದ ಸೋಮಶೇಖರ ಮತ್ತು ಚಿತ್ರಶೇಖರ ಎಂಬಿಬ್ಬರಲ್ಲಿ ಚಿತ್ರಶೇಖರನು, ನೀರ್ಗುಂದದಲ್ಲಿ ಜನರನ್ನು ಪೀಡಿಸುತ್ತಿದ್ದ ಸಿಂಹವನ್ನು ಕೊಂದು, ಅಲ್ಲಿನ ರಾಜನನ್ನು ಮೆಚ್ಚಿಸಿ ರತ್ನವತಿಯನ್ನು ವಿವಾಹವಾದ. ಈ ಕಥೆಯನ್ನು ವಸ್ತುವಾಗುಳ್ಳ 'ಚೋರಕಥೆ' ಎಂಬ ನಾಟಕವನ್ನು ಹಿಂದಿನ ಕಾಲದಲ್ಲಿ (ಕಳೆದ ಶತಮಾನದವರೆಗೆ) ಈ ಪ್ರದೇಶದ ಜನರು ಅಭಿನಯಿಸುತ್ತಿದ್ದರು. ಈ ಕಥೆಯ ಹಸ್ತಪ್ರತಿ ಇತ್ತೀಚೆಗೆ ದೊರೆತಿರುತ್ತದೆ. ವಿಕ್ರಮರಾಯನ ತರುವಾಯದಲ್ಲಿ ಅಧಿಕಾರಕ್ಕೆ ಬಂದ ಬಾಲವೀರ ಮತ್ತು ನರಸಿಂಹರ ನಂತರ, ನೀರ್ಗುಂದವು ಅನ್ಯ ರಾಜರ ವಶವಾಯಿತು. (ಉಲ್ಲೇಖ:– ಬಾಗೂರಿನಲ್ಲಿರುವ, ಗಂಗರ ಕಾಲ ಕ್ರಿ.ಶ ೮ ನೇ ಶತಮಾನದ್ದೆನ್ನಲಾದ ವೀರಗಲ್ಲು ಶಾಸನ ಹೀಗಿದೆ) ೧. ಸ್ವಸ್ತಿಶ್ರೀ ಬಾಲಾದಿತ್ಯರಾಳು ೨. ಶ್ರೀ ಮುಜ್ಜನೆಂಬೊನ್ನೀಲಸಿನ್ದ ೩. ಮನಸಿಜರಾನಿರಿದು ೪. ಪಿಡಿದು ತಾನ್ಪೊನ್ದಿದಾನ್ ಈ ಶಾಸನ ಲಿಪಿಯು ಪೂರ್ವದ ಹಳಗನ್ನಡದಲ್ಲಿದೆ. (ಉಲ್ಲೇಖ: ಮಾರ್ಚಿ ೧೯೪೧)

## ನೊಳಂಬ ಪಲ್ಲವರು

'ನೊಳಂಬಳಿಗೆ ೧೦೦೦' ಹಾಗೂ 'ನೀರ್ಗುಂದ ೩೦೦' ವಿಷಯ ಈ ಎರಡೂ ನಾಡುಗಳು ನೊಳಂಬ ಪಲ್ಲವರ ರಾಜ್ಯದ ಭಾಗಗಳಾಗಿದ್ದು, ಇವುಗಳನ್ನು ಹಾಗೂ ಇನ್ನಿತರ ನಾಡುಗಳನ್ನು ಪಲ್ಲವಾದಿರಾಜನು ಆಳುತ್ತಿದ್ದನೆಂದು ಚಿಕ್ಕಮಧುರೆಯ ಕ್ರಿ.ಶ. ೮೧೫ರ ಎರಡು ಶಾಸನಗಳಲ್ಲಿ ಹೇಳಲಾಗಿದೆ. ನೀರ್ಗುಂದ ವಿಷಯವು ಆಗ ಮೂರುನೂರು ಹಳ್ಳಿಗಳನ್ನು ಒಳಗೊಂಡಿದ್ದಿತು. 'ಪಲ್ಲವಾನ್ವಯ ಕುಲತಿಲಕ' ಇತ್ಯಾದಿ ಬಿರುದುಳ್ಳ ಪೊನ್ನೇರು ನೊಳಂಬಾದಿರಾಜನು ರಾಜ್ಯವಾಳುತ್ತಿರುವಾಗ, ಧರ್ಮವೊಳಲಲ್ಲಿದ್ದನು. ಆಗ ಪೊಳಲ್ಚೋರನ ಜಾತಕರ್ಮದ ದಕ್ಷಿಣೆಗಾಗಿಯೂ, ಆದಿತ್ಯದೇವರ ಪ್ರತಿಷ್ಠೆಗಾಗಿಯೂ ಅರಸರು ಇವರ ಗುಣವಿಶೇಷವನ್ನು ಮೆಚ್ಚಿ, ನೀರ್ಗುಂದ ವಿಷಯದ ಗೊರವೂರನ್ನು 'ಪ್ರಭುರಾಮ ಮಂಗಳ' ಎಂದು ಹೆಸರಿಟ್ಟು, ಅಂಗೀರಸ ಭಾರಧ್ವಾಜ ಗೋತ್ರದ ಋಗ್ವೇದ ನಾರಾಯಣ ಸೋಮಯಾಜಿಯ ಕಾಲನ್ನು ತೊಳೆದು ದೇವಕ ನಿರ್ಮಡಿಯ ಪಾತ್ರೆಯಿಂದ ಧಾರೆಯೆರೆದು ನಾರಾಯಣ ಬ್ರಹ್ಮಾದಾಯವಾಗಿ ದಾನ ಮಾಡಿದ್ದಕ್ಕೆ ಗಂಗಮಂಡಳದ ೯೬,೦೦೦ ಗ್ರಾಮಗಳ ಪ್ರಜೆಗಳು ಸಾಕ್ಷಿ ಎಂದು ತಾಮ್ರ ಶಾಸನದಲ್ಲಿ ಹೇಳಲಾಗಿದೆ.

ನೊಳಂಬ ಪಲ್ಲವರು ವೇದಾವತಿ ಮತ್ತು ಉತ್ತರ ಪಿನಾಕಿನಿ ನದಿಗಳ ಮಧ್ಯೆ ಮತ್ತು ಅಕ್ಕಪಕ್ಕ ಪ್ರದೇಶಗಳಲ್ಲಿ (ಚಿತ್ರದುರ್ಗ, ಬಳ್ಳಾರಿ, ಅನಂತಪುರ ಮತ್ತು ತುಮಕೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡಂತೆ) ಕ್ರಿ.ಶ. ೮,೯, ಹಾಗೂ ೧೦ನೇ ಶತಮಾನಗಳಲ್ಲಿ ಆಳಿದರು. ನೊಳಂಬವಾಡಿಯು ೩೨,೦೦೦ ಗ್ರಾಮಗಳನ್ನು

ಒಳಗೊಂಡಿದ್ದಿತು. ಹೊಸದುರ್ಗ ತಾಲ್ಲೂಕಿನ ಹೆಬ್ಬಳ್ಳಿಯ ನಾಲ್ಕು ವೀರಗಲ್ಲುಗಳ ಪೈಕಿ ಒಂದು ವೀರಗಲ್ಲಿನಲ್ಲಿ, ಗಂಗವಾಡಿ ತೊಂಬತ್ತಾರು ಸಾವಿರ ರಾಜ್ಯವನ್ನು ದೊರೆ ಸಿಂಗಪೆರ್ಮಾಡಿಯು ಆಳುತ್ತಿರುವಾಗ, ನನ್ನಿಯ ಗಂಗಗಾವುಂಡ ಹಾಗೂ ನೂರ್ಗಾವುಂಡ ಎಂಬ ಗೌಡರು ಹೆಬ್ಬಳ್ಳಿ ವಳಿತವನ್ನು ನೋಡಿಕೊಳ್ಳುತ್ತಿರುವಾಗ, ಗರಜ್ಜಯ್ಯನ ಮಯ್ದುನ ಮುದ್ದಯ್ಯನು ತುರುಗಳನ್ನು ರಕ್ಷಿಸುವ ಕಾದಾಟದಲ್ಲಿ ಮಡಿದನು ಎಂದು ಶಾಸನವಿದೆ.(ತುರುಗೋಳ್ ವೀರಗಲ್ಲು ಶಾಸನ).

## ಚಾಲುಕ್ಯ- ಹೊಯ್ಸಳರು

'ನೀರ್ಗುಂದ ೩೦೦', ಹೊಯ್ಸಳರ ಒಂದು ಪ್ರಾಂತ್ಯವಾಗಿದ್ದಿತು ಹಾಗೂ ಮಾದಿಗಿ ದೇವ ದಂಡನಾಯಕನು ಆಳುತ್ತಿದ್ದ ರಾಜ್ಯ ವ್ಯಾಪ್ತಿಗೆ ಸೇರಿದುದಾಗಿತ್ತು. 'ಶ್ರೀಮದ್ ಉದ್ಭವ ಸೋಮನಾಥಪುರ', 'ಶ್ರೀಮತ್ಸರ್ಬ್ಬ ನಮಸ್ಯದಗ್ರಹಾರ', 'ಶಾಸನದ ಮನೆ', 'ನೀರ್ಗುಂದ ನಾಡು', 'ತೆಂಕಣ ಅಯ್ಯಾವೊಳೆ' ಮುಂತಾದ ಅಭಿದಾನಗಳು ಇದಕ್ಕಿದ್ದವು.

ಕ್ರಿ.ಶ. ೧೦೬೫ರ ಶಾಸನವು, ಹೊಯ್ಸಳ ವೀರಬಲ್ಲಾಳನು 'ಗಂಗವಾಡಿ ೯೬೦೦೦' ಆಗಿದ್ದ ದೋರಸಮುದ್ರವನ್ನು ಆಳುತ್ತಿರುವಾಗ, 'ಶ್ರೀಪೃಥ್ವೀವಲ್ಲಭ' ಮುಂತಾದ ಬಿರುದುಳ್ಳ ವೀರ ಸೋಮೇಶ್ವರನ ಸಾಮಂತನಾಗಿದ್ದ ಚಟ್ಟಯ್ಯನಾಯಕನು ನೀರ್ಗುಂದವನ್ನು ದಕ್ಷತೆಯಿಂದ ಪಾಲಿಸುತ್ತಿದ್ದನು. ಆಗ ನೀರ್ಗುಂದದ ಕೆರೆಯು ಒಡೆದಿದ್ದುದನ್ನು ಗಮನಿಸಿದ ಪ್ರಭು ನಲ್ಲೆಸೆಟ್ಟಿಯು ಕೆರೆಯ ಜೀರ್ಣೋದ್ಧಾರವನ್ನು ಮಾಡಿ, 'ಒಡೆಗೆರೆಮಲ್ಲ' ಎಂಬ ಬಿರುದಿಗೆ ಪಾತ್ರನಾದನೆಂದು ತಿಳಿಸುತ್ತದೆ. ನೀರ್ಗುಂದದ ಸಿದ್ಧನಾಥದೇವರಿಗೆ ಚಟ್ಟಯ್ಯ ನಾಯಕನು ಅನೇಕ ಗದ್ದೆಗಳನ್ನು ನೀಡಿದ್ದಲ್ಲದೆ ವೀರಸೋಮೇಶ್ವರ ದೇವರು ಮತ್ತು ನೀರ್ಗುಂದದ ಮೂಲ ಸ್ವಾಮಿ ಗಂಗೇಶ್ವರ ದೇವರಿಗೆ ಹಾಗೂ ಅಗ್ರಹಾರ ನಿರ್ಮಿಸಲು, ಒಂದು ವೃತ್ತಿಯನ್ನು ದಾನ ಬಿಟ್ಟನು. ಇದೇ ಸಂದರ್ಭದಲ್ಲಿ 'ತೆಂಕಣ ಅಯ್ಯೊವೊಳೆ' ಎಂದೆನಿಸಿದ ನೀರ್ಗುಂದ ನಾಡಿನ ಸಮಸ್ತ ನಖರ-ಮುಮ್ಮರಿ-ದಂಡಗಳು ನಲ್ಲೆಸೆಟ್ಟಿಯ ಮುಂದಾಳತ್ವದಲ್ಲಿ ಸಿದ್ಧನಾಥ ದೇವರು ಮತ್ತು ಗಂಗೇಶ್ವರ ದೇವರಿಗೆ ಅನೇಕ ರೀತಿಯ ಸಂತೆಯ ಸುಂಕಗಳನ್ನು ದತ್ತಿ ನೀಡಿದ ಬಗ್ಗೆ ಈ ಶಾಸನವು ವಿವರವಾಗಿ ತಿಳಿಸುತ್ತದೆ. ನೀರಗುಂದದ ಸಿದ್ಧನಾಥ, ಗಣೇಶ ಹಾಗೂ ಚನ್ನಕೇಶವ ದೇವಾಲಯಗಳು ಹೊಯ್ಸಳರ ಶಿಲ್ಪಕಲಾ ನೈಪುಣ್ಯತೆಗೆ ಸಾಕ್ಷಿಯಾಗಿದ್ದವು. ಇಲ್ಲಿನ ಚನ್ನಕೇಶವ ದೇವಾಲಯ ನಿಶ್ಶೇಷವಾಗಿದೆ ಹಾಗೂ ಗಣೇಶ ದೇವಾಲಯದ ಗಣೇಶ ವಿಗ್ರಹವು ೧೯೨೩ರಲ್ಲಿ ಹೊಸದುರ್ಗಕ್ಕೆ ಸ್ಥಳಾಂತರಗೊಂಡಿದೆ. ಇದೀಗ ಪ್ರಾಚ್ಯವಸ್ತು ಇಲಾಖೆಯಿಂದ ಇಲ್ಲಿನ ಎರಡು ದೇವಾಲಯಗಳ ಜೀರ್ಣೋದ್ಧಾರ ಮಾಡಲಾಗಿದೆ. ನೀರಗುಂದ ಸಿದ್ದನಾಥ ದೇವಾಲಯವು ಚಾಲುಕ್ಯ ಹೊಯ್ಸಳರ

ಕಾಲದ್ದೆಂದು ಪ್ರಖ್ಯಾತಿಗೊಂಡಿದೆ. ಪೂರ್ವೋಕ್ತ ಶಾಸನದ ಕಡೆಯಲ್ಲಿ ನೀರಗುಂದ ಸಿದ್ಧನಾಥದೇವರ ಸ್ಥಾನಿಕನಾದ ನಲ್ಲಜೀಯನ ಮಗ ಸಿದ್ಧಜೀಯನು ಸ್ವರ್ಗಸ್ಥನಾದ ಬಗ್ಗೆ ನೀರ್ಗುಂದ ಮಹಾಜನಗಳಿಗೆ ಅರಸಾಳು ಮಾದಯ್ಯ-ಬಲ್ಲಯ್ಯರು ಬಿನ್ನವತ್ತಳೆಯನ್ನು ಅರ್ಪಿಸಿದ ಬಗ್ಗೆ ಹೇಳಲಾಗಿದೆ.

ಕ್ರಿ.ಶ. ೯೬೨ ರಿಂದ ೧೦೭೮ ರವರೆಗಿನ ಬಳ್ಳೇಕೆರೆ, ಹೆಬ್ಬಳ್ಳಿ, ಅನಿವಾಳ, ಮಳಲಿಯ ಅನೇಕ ವೀರಗಲ್ಲು ಶಾಸನಗಳು ತುರುಕಾಳಗಗಳಲ್ಲಿ ಅನೇಕ ವೀರರು ಕಾದಿ ಮಡಿದ ಬಗ್ಗೆ ಹಾಗೂ ನಾಡ- ಉಯ್ಯಲಲ್ಲಿ ಸತ್ತ ಬಗ್ಗೆ ತಿಳಿಸುತ್ತವೆ. ತಾಲ್ಲೂಕಿನ ಚಿಕ್ಕಯಗಟಿಯ ಕ್ರಿ.ಶ. ೧೧೯೪ರ ಶಾಸನವು ನಲ್ಲೆಸೆಟ್ಟಿಯು ದೇಮೇಶ್ವರ ದೇವರ ಅಂಗರಂಗ ಭೋಗದ ಸೇವೆಗಳಿಗೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ, ನಂದಾದೀವಿಗೆಗಾಗಿ, ತಪಸ್ವಿಗಳ ಆಹಾರದಾನಾದಿಗಳಿಗಾಗಿ, ಪೂಜಾರಿಗಾಗಿ, ಕಾರ್ಯಗಳು ತಪ್ಪದೇ ನಡೆಯಲು, ವಿವಿಧ ಗದ್ದೆಗಳನ್ನು ಹಾಗೂ ವಿವಿಧ ಸಂತೆ ಸುಂಕುಗಳನ್ನು (ಎಣ್ಣೆಯಗಾಣದ ಸುಂಕ, ಎಲೆಯಸುಂಕ, ಅಡಿಕೆಸುಂಕ, ಅರಿಶಿನಸುಂಕ, ಮೆಣಸಿನಸುಂಕ, ದವಸದ ಸುಂಕ) ದತ್ತಿ ನೀಡಿದನೆಂದು ತಿಳಿಸುತ್ತದೆ. ಅತ್ಯಂತ ಸುಂದರ ಲಿಪಿಯುಳ್ಳ ಶಾಸನ ಇದಾಗಿದೆ. ದತ್ತಿ ನೀಡಿದ ಗದ್ದೆಗಳ ಅಳತೆ ಮತ್ತು ವಲಯ ವಿವರಗಳನ್ನು ಶಾಸನದಲ್ಲಿ ಹೇಳಲಾಗಿದೆ. ಗದ್ದೆಯ ಭೂಮಾಪನವನ್ನು ಮಾರು ಹಾಗೂ ವೊತ್ತೋಳು ಲೆಕ್ಕದಲ್ಲಿ ನಮೂದಿಸಿರುವುದು ಗಮನಾರ್ಹವಾಗಿದೆ. ಉದಾಹರಣೆಗೆ 'ವುಂಬಳಿಯ ತೋಟದಿಂ ಮೂಡಲು ಹನ್ನೊಂದುಮಾರು ವೊತ್ತೋಳು' ಎಂಬ ವಿವರವನ್ನು ನೋಡಬಹುದು. ಇಲ್ಲಿನ ವರ್ತಕರ ಸಂಘವು 'ಅಯ್ಯಾವೊಳೆ ಐನೂರ್ವರು' ಎಂಬ ಬಿರುದು ಪಡೆದಿದ್ದಿತು. (ಉಲ್ಲೇಖ:- 'ಡಾ॥ ಬಿ.ಆರ್ ಹಿರೇಮಠರ ಶಾಸನ ಅಧ್ಯಯನ'-ಸಂ: ಡಾ॥ ಮಲ್ಲಿಕಾರ್ಜುನ.ಕೆ ಮತ್ತು ಇತರರು(೨೦೧೨). ಪ್ರ: ಪ್ರಸಾರಂಗ, ಕನ್ನಡ ವಿ.ವಿ.ಹಂಪಿ.

ಸಂತೆಗೆ ಬರುವ ವರ್ತಕರು, ಗಾಣವೊಂದಕ್ಕೆ ೧ ಸೊಳ ಎಣ್ಣೆಯನ್ನು, ಅಡಕೆಯ ಹೇರುವೊಂದಕ್ಕೆ ೨೦ ಅಡಕೆಗಳನ್ನು, ಎಲೆ ಹೇರುವೊಂದಕ್ಕೆ ೧೦೦ ಎಲೆ (ವೀಳೆಯದೆಲೆ) ಗಳನ್ನು, ಅರಿಶಿನ ಹೇರಿಗೆ ೧ ಬಳ್ಳ ಅರಿಶಿನ, ಮೆಣಸು ಒಂದು ಹೇರಿಗೆ ೧ ರಾವುಳ ಮೆಣಸು, ದವಸ ಹೇರೊಂದಕ್ಕೆ ೧ ವೀಸದಂತೆ ಸುಂಕಗಳನ್ನು ಪಾವತಿಸಬೇಕಾಗಿದ್ದಿತು. ಹೀಗೆ ಬರುವ ಸುಂಕಗಳ ಆದಾಯವನ್ನು ಮೇಲ್ಕಂಡ ದೇವರ ಸೇವೆಗಳಿಗಾಗಿ ಬಿಟ್ಟುಕೊಡುವ ದಾನಶಾಸನ ಇದಾಗಿದೆ. ಕ್ರಿ.ಶ. ೧೦೬೫ರ ನೀರ್ಗುಂದದ ಶಾಸನದಲ್ಲಿಯೂ ಇದೇ ರೀತಿಯ ದಾನಗಳನ್ನು ಮಾಡಿರುವುದನ್ನು ಗಮನಿಸಬಹುದು. ಒಂದು ರಾಶಿ ಬತ್ತಕ್ಕೆ ಒಂದು ಬಳ್ಳ ಬತ್ತ, ಎಲೆಯ ಹೇರಿಗೆ ೫೦ ಎಲೆ, ಒಂದು ಹಸತ ಅಡಿಕೆಗೆ ೫ ಅಡಕೆ, ಎಣ್ಣೆಯ ಹಾಡವೊಂದಕ್ಕೆ ಸೊಲಗೆಂಣೆ, ಒಂದು ಹೆಡಿಗೆ ಉಪ್ಪಿಗೆ ಒಂದು ಬಳ್ಳ ಉಪ್ಪು, ಈ ದರಗಳಂತೆ ಸಂತೆ ಸುಂಕಗಳನ್ನು ಸಲ್ಲಿಸುವಂತೆ ಹೊರಡಿಸಿದ ಶಾಸನವದು.

ಹೆಗ್ಗೆರೆಯ ಕಲ್ಲೇಶ್ವರ ದೇವಸ್ಥಾನದೊಳಗೆ ರಂಗಮಂಟಪದ ತೊಲೆಗಲ್ಲಿನ ಮೇಲಿನ ಕ್ರಿ.ಶ ೧೧೧೧ ಶಾಸನವು, ಹೊಯ್ಸಳ ವೀರಬಲ್ಲಾಳನ ಆಣತಿಯಂತೆ, ಅನೇಕ ಗೌಡ ಪ್ರಜೆಗಳು ವೀರವಿಜಯ–ಬಲ್ಲಾಳಪುರವಾದ ಅರಸೀಕೆರೆಯ ಶ್ರೀಮದ್ ಮಹಾಜನಂಗಳಿಗೆ ಹೆಗ್ಗೆರೆಯೊಳಗೆ ಬೂದಿಹಾಳ ಕೆರೆಯ ನೀರೊತ್ತುವ ಭೂಮಿಯನ್ನು ದಾನ ನೀಡಿರುವ ಬಗ್ಗೆ ಸೇನಬೋವ ಮಹದೇವನ ಮಗ ಮಾದಣ್ಣನು ಬರೆದುದಾಗಿದೆ. ಇದರಲ್ಲಿ ಮಹಾ ಅಗ್ರಹಾರದ ಪ್ರಸ್ತಾಪವಿದೆ. ಅದೇ ದೇವಸ್ಥಾನದೊಳಗೆ ಬಾಗಿಲು ಚೌಕಟ್ಟಿನ ಮೇಲ್ಭಾಗದಲ್ಲಿರುವ ಶಾಸನವು ಪರಿಧಾಂ ಸಂವತ್ಸರದಲ್ಲಿ ಕುಂಬಾರ ಪಣಮಯ್ಯ ಮತ್ತು ಮಲ್ಲವ್ವ ದಂಪತಿಗಳ ಮಗ ಮಾಕಯ್ಯನು ದೇವರಪೀಠ, ಜಾಲಾಂದರ, ದ್ವಾರವಂದಗಳನ್ನು ಮಾಡಿಸಿದನೆಂದು ತಿಳಿಸುತ್ತದೆ.

ನೀರ್ಗುಂದದ ಸಿದ್ಧನಾಥ ದೇವಾಲಯ, ಗಣೇಶ ದೇವಾಲಯ ಚಿಕ್ಕಯಗಟಿಯ ಈಶ್ವರ ದೇವಾಲಯ ಹಾಗೂ ಹೆಗ್ಗೆರೆಯ ಕಲ್ಲೇಶ್ವರ ದೇವಾಲಯ ಮತ್ತು ಬಸದಿ ಮುಂತಾದವು ಹೊಯ್ಸಳರ ಕಾಲದ ಶಿಲ್ಪ ಕಲಾ ವೈಭವವನ್ನು ಮೆರೆಯುವ ಮಂದಿರಗಳಾಗಿದ್ದು, ಇತಿಹಾಸದ ಪುಟಗಳಲ್ಲಿಯೂ ಪ್ರಸಿದ್ಧಿ–ಪ್ರಾಮುಖ್ಯತೆ ಪಡೆದಿದೆ. ಹೊಸದುರ್ಗದ ಪಶ್ಚಿಮ ಬೆಟ್ಟದ ತಪ್ಪಲಲ್ಲಿರುವ ಸಿದ್ಧಪ್ಪನಬೆಟ್ಟದ ಬೃಹತ್ ಸಿದ್ಧೇಶ್ವರಲಿಂಗ, ಬೃಹತ್‌ನಂದಿ ಹಾಗೂ ಆಳೆತ್ತರದ ಭೈರವನ ವಿಗ್ರಹಗಳು ಸಹ ಅತ್ಯಂತ ಕಲಾತ್ಮಕತೆಯ ಶಿಲ್ಪ ಕೃತಿಗಳಾಗಿದ್ದು, ಇವು ಸಹ ಹೊಯ್ಸಳರ ಕಾಲದ ಅಪೂರ್ವ ಕಾಣಿಕೆಗಳಾಗಿವೆ. ಹೊಸದುರ್ಗದಲ್ಲಿರುವ ನೀರ್ಗುಂದದ ಬೃಹತ್ ಗಣೇಶನ ವಿಗ್ರಹವೂ ಹೊಯ್ಸಳರ ಕಲಾಕೃತಿಗಳ ಸಾಲಿಗೆ ಸೇರಿದೆ. ಹಾಲುರಾಮೇಶ್ವರ ಕ್ಷೇತ್ರದ ಹಾಲುರಾಮೇಶ್ವರ ದೇವಾಲಯದ ನವರಂಗದಲ್ಲಿ ಇರಿಸಲ್ಪಟ್ಟಿರುವ ಕೆಲವು ಕಲಾತ್ಮಕ ಶಿಲಾವಿಗ್ರಹಗಳು ಹೊಯ್ಸಳದ ಕಾಲದ ಕೃತಿಗಳಾಗಿದ್ದು, ಹಿಂದಿನ ಕಾಲದಲ್ಲಿ ಹಾಳಾಗಿರುವ ದೇವಾಲಯದಿಂದ ತಂದಿರಿಸಿದವುಗಳಾಗಿರಬಹುದು. (ಹಾಲುರಾಮೇಶ್ವರ ದೇವಾಲಯವೂ ಈಗ ಜೀರ್ಣೋದ್ಧಾರಗೊಳ್ಳುತ್ತಿದೆ).

ಹೊಯ್ಸಳರ ಕಾಲದ ಗಂಗವಾಡಿನ ೬೦೦೦ ಸಾಮ್ರಾಜ್ಯ ನೀರ್ಗುಂದ ೩೦೦ ಮಾಡಿಗೆ ಸೇರಿದ್ದ ಅರಬಲೆ ಎಪ್ಪತ್ತರ 'ಪ್ರಥಮ' ಸ್ಥಳವಾದ ಹೊನ್ನೇಕೆರೆಯು ಆಗಿನ ಅತ್ಯಂತ ಶ್ರೀಮಂತ ವರ್ತಕರುಗಳಿದ್ದ ಸ್ಥಳವಾಗಿದ್ದಿತು. ಈಗ ಪ್ರಾಚೀನ ಹೊನ್ನೇಕೆರೆ ಗ್ರಾಮವು ನಾಶವಾಗಿದ್ದು, ಈಗಿನ ಹೊನ್ನೇಕೆರೆ ಗ್ರಾಮವು ಸ್ಥಳಾಂತರಗೊಂಡುದಾಗಿದೆ. ಈ ಗ್ರಾಮದ ಹತ್ತಿರದಲ್ಲೇ ಜಾಲಿಮರಗಳ ಹಾಳು ಪ್ರದೇಶದಲ್ಲಿರುವ ಪುರಾತನ ಹೊನ್ನೇಕೆರೆಯ ಶಿಲಾಶಾಸನ ಮತ್ತಿತರ ಅವಶೇಷಗಳು ಇವೆಯಾದರೂ, ಹೊಯ್ಸಳರ ಕಾಲದ ಶಿಲ್ಪಕಲಾವೈಭವದ ವಿಗ್ರಹಗಳು ದೇವಾಲಯಗಳು ಇಲ್ಲವಾಗಿರುವುದು ಜಿಜ್ಞಾಸೆಯ ಸಂಗತಿಯಾಗಿದ್ದು, ಹಳೆಯ ಊರಿನ ಈ ಪ್ರದೇಶದಲ್ಲಿ ಉತ್ಖನನ ನಡೆಯಬೇಕಾದ ಅಗತ್ಯವಿದೆ.

## ಇತಿಹಾಸ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕ್ರಿ.ಶ. ೧೧೫೮ರ ಶಾಸನದಲ್ಲಿ ನೀರ್ಗುಂದ ನಾಡಿನ ಅಗ್ರಹಾರವನ್ನು ತ್ರಿಪದಿಪದ್ಯದಲ್ಲಿ ಹೀಗೆ ಹೊಗಳಲಾಗಿದೆ.

**'ಆ ನಾಡೊಳೆಸೆವುದು ನಾನಾ ವಿದ್ವಜ್ಜನ ।**
**ಸ್ಥಾನಂ ನಿರ್ಗುಂದಮೆನಿಪಗ್ರಹಾರವ ।**
**ತ್ಯಾನಂದಕಾರಿ ಜಗಕ್ಕೆಲ್ಲಂ ।**

ಕ್ರಿ.ಶ. ೧೨ನೇ ಶತಮಾನಕ್ಕಿಂತ ಮೊದಲೇ ನೀರ್ಗುಂದ ನಾಡಿನಲ್ಲಿ ಅಗ್ರಹಾರ ವಿದ್ದಿತೆಂಬ ಸಂಗತಿಯು ಮೇಲ್ಕಂಡ ಶಾಸನ ಪದ್ಯದಿಂದ ಖಚಿತವಾಗುತ್ತದೆ. ಕ್ರಿ.ಶ. ೧೦ನೇ ಶತಮಾನ ಅಥವಾ ಅದಕ್ಕೂ ಮೊದಲೇ ಈ ಅಗ್ರಹಾರವು ಅಸ್ತಿತ್ವದಲ್ಲಿದ್ದಿತು. ಕ್ರಿ.ಶ. ೮ನೇ ಶತಮಾನದಲ್ಲಿ ಪರಮಗುಳನ ಆಡಳಿತಾವಧಿಯಲ್ಲಿಯೆ ಅಗ್ರಹಾರವಾಗಿರುವ ಸಾಧ್ಯತೆ ಇದೆ. ನೀರ್ಗುಂದದ ಬಳಿ ಇರುವ ಮಳಲಿಯು ಅಂದಿನ ಕಾಲದ ಅಗ್ರಹಾರವಾಗಿದ್ದಿತು. ಅಂತೆಯೆ, ಈ ಪ್ರದೇಶದಲ್ಲಿರುವ ಬೋಕಿಕೆರೆಯು ಹೊಯ್ಸಳರ ಕಾಲದ ಬೋಗಾರರಕೇರಿ, ಸಾಣೇಹಳ್ಳಿಯು ಆಯುಧಗಳನ್ನು ಸಾಣೆ ಹಿಡಿಯುವ ಸ್ಥಳ, ವಾದ್ಯಗಾರರಿದ್ದ ಕೇರಿ ಪೀಲಾಪುರ, ಆನೆಗಳನ್ನು ಕಟ್ಟುತ್ತಿದ್ದ ಸ್ಥಳ ಆನೆವಾಳ, ಕುದುರೆಗಳ ಲಾಯವಾಗಿದ್ದ ಕಡಿವಾಣಕಟ್ಟೆ, ಗೊಲ್ಲರು ಗೋವುಗಳನ್ನು ಸಾಕಿದ್ದ ಸ್ಥಳ ಮಧುರೆ, ಸಿಂಹಗಳು ನೀರು ಕುಡಿಯುವ ಕಟ್ಟೆ ಇದ್ದ ಸ್ಥಳ ಸಿವನೇಕಟ್ಟೆ(ಸಿಂಹನಕಟ್ಟೆ) ರುದ್ರಭೂಮಿಯ ಸ್ಥಳ ಹೆಬ್ಬಳ್ಳಿ, ಅರಳೀತೋಪುಗಳಿದ್ದ ಅರಳೀಹಳ್ಳಿ, ಹೀಗೆ ರಾಜಧಾನಿಯ ಸುತ್ತಲೂ ಇದ್ದ ಸ್ಥಳಗಳನ್ನು ಇಂದಿಗೂ ಕಾಣಬಹುದಾಗಿದೆ.

ಹೊಯ್ಸಳರ ಕಾಲದಲ್ಲಿದ್ದ ನಖರ – ಮುಮ್ಮುರಿ – ದಂಡಗಳಲ್ಲೆಲ್ಲ ಅತ್ಯಂತ ಪ್ರಮುಖವಾದದ್ದು 'ಅಯ್ಯಾವೊಳೆ ೫೦೦' ಎಂಬ ವಾಣಿಜ್ಯ ಸಂಘ. ಇದರಿಂದಾಗಿಯೆ ನೀರ್ಗುಂದವು ಆಗಿನ ಕಾಲದಲ್ಲಿ 'ದಕ್ಷಿಣದ ಅಯ್ಯಾವೊಳೆ' ಎಂದೆನ್ನಿಸಿದ್ದಿತು. ೧೮೯೧ರಲ್ಲಿ ನೀರ್ಗುಂದದ ಜನಸಂಖ್ಯೆ ೩೫೦ನ್ನು ಮೀರಿರಲಿಲ್ಲ. ಈಗ ೩೦೦ ಮನೆಗಳಿರುವ ಈ ಪುಟ್ಟಗ್ರಾಮದಲ್ಲಿ ೨೦೦೦ ಜನರಿದ್ದಾರೆ. ಆಂಗ್ಲರ ಕಾಲದಲ್ಲಿ ನೀರ್ಗುಂದವು ಬಾಗೂರು ಹೋಬಳಿಗೆ ಸೇರಿದ್ದಿತು. ಇಲ್ಲಿನ ಸಿದ್ದೇಶ್ವರ ದೇವಾಲಯವು ಕರ್ನಾಟಕದ ಪ್ರಾಚೀನ ದೇವಾಲಯಗಳ ಸಾಲಿಗೆ ಸೇರಿದೆ. ಹದಿಮೂರು ಅಂಕಣಗಳ ಈ ದೇಗುಲವು, ಆಕರ್ಷಕ ಸ್ತಂಭಗಳಿಂದ ಕಲಾ ಕುಸುರಿಯ ಭುವನೇಶ್ವರಿಗಳಿಂದ, ಆಕರ್ಷಕ ಕೆತ್ತನೆಯ ಶಿವಲಿಂಗ, ನಂದಿ, ವೇಣುಗೋಪಾಲ, ವಿಷ್ಣು ವಿಗ್ರಹಗಳು, ಶಿಲಾ ಜಾಲಾಂಧ್ರಗಳು ಕಲಾತ್ಮಕ ಕೆತ್ತನೆಗಳಿಂದ ಕೂಡಿವೆ. ಹೊಸದುರ್ಗದಿಂದ ನೀರ್ಗುಂದಕ್ಕೆ (ಅಜ್ಜಂಪುರ ರಸ್ತೆ) ೧೦ ಕಿ.ಮೀ. ದೂರ ಹಾಗೂ ಈ ಸ್ಥಳವು ಸಾಣೇಹಳ್ಳಿಯ ಪಕ್ಕದಲ್ಲಿದೆ.

ಹೆಗ್ಗೆರೆಯ (ಹೊಸದುರ್ಗ ತಾ||) ಕ್ರಿ.ಶ. ೧೧೬೧ರ ಶಾಸನವು, ಹೆಗ್ಗೆರೆಯ ಚನ್ನಪಾರ್ಶ್ವದೇವರ ಬಸದಿಯ ನಿರ್ಮಾಣದ ಬಗ್ಗೆ ವಿವರ ನೀಡುತ್ತದೆ. ಪೆರ್ಮಾಡಿ

ದೇವನು ಕಲ್ಯಾಣದ ನೆಲೆವೀಡಿನಲ್ಲಿ ಆಳುತ್ತಿರುವಾಗ ತಲಕಾಡನ್ನು ವಶಪಡಿಸಿಕೊಂಡ ವಿಷ್ಣುವರ್ಧನನು ಎಲ್ಲ ದಿಕ್ಕಿನಿಂದ ರಾಜ್ಯ ವಿಸ್ತರಿಸಿದನು. ಅವನ ಮಗ ನರಸಿಂಹ ಬಲ್ಲಾಳನು ಸಹ ರಾಜ್ಯವಾಳಿದನು. ಹುಳಿಯಾರು ಚಟ್ಟನು ಶೌರ್ಯದಿಂದ ಆಳಿದನು. ಅವನ ತಮ್ಮ ಗೋವಿಂದನು ದಾನ, ಶೌರ್ಯ ಗುಣಗಳಿಂದ ಪ್ರಸಿದ್ಧನಾದನು. ಶಾಂತಲೆಯು ಚಟ್ಟನ ಮಡದಿ, ಈಕೆ ಶೈವ, ವೈಷ್ಣವ, ಜೈನ, ಬೌದ್ಧಾಗಮಗಳಲ್ಲಿ ಸಮಾನ ಶ್ರದ್ಧೆ ಇರಿಸಿದ್ದಳು. ಈಕೆಯ ಮಗ ಸಾಮಂತ ಬಿಟ್ಟಿದೇವನು, ಅವನ ಆಸ್ತಿಯಲ್ಲಿ ಭೂಮಿಯನ್ನು ದಾನ ಮಾಡಿದ. ಸಾಮಂತ ಗೋವಿಂದದೇವನು ಮಹದೇವಿ ನಾಯಕಿಗೆ ಪರೋಕ್ಷ ವಿನಯವಾಗಿ ಚನ್ನಪಾರ್ಶ್ವದೇವರ ಬಸದಿಯನ್ನು ಮಾಡಿಸಿಕೊಟ್ಟನು ಹಾಗೂ ತಪೋಧನರ ಆಹಾರಕ್ಕಾಗಿ ಮತ್ತು ಎಂಟು ವಿಧದ ಪೂಜೆಗಳಿಗಾಗಿ ಸಾಮಂತ ಬಿಟ್ಟಿದೇವನಿಗೆ ಪುಣ್ಯವಾಗಲೆಂದು ಸವಣಗೆರೆಯನ್ನು ದತ್ತಿ ನೀಡಿದನು. ಈ ಶಾಸನವು ಬಸದಿಯ ಮುಂದೆ ರಕ್ಷಾಮಂಟಪದಲ್ಲಿದೆ.

ಬಸದಿಗೆ ಬಿಡಲಾಗಿದ್ದ ಸುಂಕಗಳ ದತ್ತಿ ವಿಚಾರ ಸ್ವಾರಸ್ಯಕರವಾಗಿದೆ. ಹತ್ತಿ ಹಂಜಿ ನೂಲವೆಳವೆಗೆ ವೀಸ ೨, ಬಳೆಬಟ್ಟು ಕಬ್ಬುನವಾದಿಯಾಗಿ ಹೇರಿಗೆ ವೀಸ ೧, ದವಸದ ಬಂಡಿಗೆ ಕೊ–೧, ಮೂಲೆವತ್ತ ಬ೨, ಮೆಣಸು–ಸಾಸಿವೆ ಜೀರಿಗೆ ಇತ್ಯಾದಿ ಹೇರಿಗೆ ಮಾನ ೨, ಅರಿಶಿನವಲ್ಲದ ಹೇರಿಗೆ ವಲ ೧, ಅಡಿಕೆ ತಲೆಹೊರೆಗೆ, ಅ. ೨೫, ಎಲೆ ತಲೆಹೊರೆಗೆ ಎಲೆ ೫೦ ಮತ್ತು ಗಾಣದಲು ಸೂಳ ೨, ಕೈಗಾಣದಲು ಸೊ೧, ತಿಪ್ಪೆಸುಂಕ ಹೆಡಿಗೆಗೆ, ಮಾ.೨ ಗೊಬ್ಬರದ ತಿಪ್ಪೆಯ ಗುಂಡಿಗೂ ಸುಂಕ ವಿಧಿಸಲಾಗಿದ್ದಿತು.

ಮೇಲ್ಕಂಡ ಹೆಗ್ಗೆರೆ ಬಸದಿಯು ಗರ್ಭಗೃಹ ಸುಕನಾಸಿ, ನವರಂಗಗಳನ್ನು ಹೊಂದಿರುವ ಕರ್ನಾಟಕದ ಏಕೈಕ ಬಸದಿಯಾಗಿದೆ. ಅಲ್ಲದೆ ಬಸದಿಯ ಹೊರ–ಒಳಗೆಲ್ಲ ಒಟ್ಟಾರೆ ಐದು ನೂರಕ್ಕೂ ಹೆಚ್ಚು ಸಂಖ್ಯೆಯ ಕಮಲದ ಹೂಗಳನ್ನು ಹೊಂದಿರುವ ಬಸದಿಯೂ ರಾಜ್ಯದಲ್ಲಿ ಇದೊಂದೇ ಆಗಿದೆ. ಮೇಲ್ನೋಟಕ್ಕೆ ಬಸದಿಯು ನಕ್ಷತ್ರಾಕಾರದ ವಿನ್ಯಾಸವನ್ನು ಹೊಂದಿದ್ದು, ಅತ್ಯಂತ ಕಲಾತ್ಮಕವಾಗಿದೆ. ಸವಣಗೆರೆ ಮತ್ತು ಎಣ್ಣೆಗೆರೆ ಗ್ರಾಮಗಳನ್ನು ಹಾಗೂ ಒಂದೆರಡು ಹೂದೋಟಗಳನ್ನು ಸಹ ಬಸದಿಗೆ ದತ್ತಿ ನೀಡಲಾಗಿದ್ದಿತೆಂದು ಶಾಸನವಿದೆ. ಬಸದಿಯ ಮುಂದೆ ಕ್ರಿ.ಶ.೧೧೪೨ ಹಾಗೂ ಕ್ರಿ.ಶ. ೧೨೯೮ರ ಅವಧಿಗಳ ನಿಷಧಿ ಶಾಸನಗಳಿದ್ದು, ಜೈನ ಸನ್ಯಾಸಿಗಳು ಉಪವಾಸ ವ್ರತಗಳಿಂದ ಸಮಾಧಿಸ್ಥರಾದ ಬಗ್ಗೆ ತಿಳಿಸುತ್ತವೆ.

ಹೆಗ್ಗೆರೆಯ ಕಲ್ಲೇಶ್ವರ ದೇವಸ್ಥಾನದ ಬಳಿ ಇರುವ ಕ್ರಿ.ಶ.೧೨೩೩ರ ಶಾಸನವು ದ್ವಾರ ಸಮುದ್ರದಲ್ಲಿ ವೀರನರಸಿಂಗದೇವನು ಆಳುತ್ತಿರುವಾಗ, ಸಾಮಂತ ಹುಳಿಯಾರ ಚಟ್ಟಯನು ಅಧಿಕಾರದಲ್ಲಿದ್ದನು. ಮಂಡಳಿಯ ಬಲ್ಲಯ್ಯನಾಯಕ, ನಾಯಕ ಶಿಖಾಮಣಿ ಚಿಕ್ಕಬಲ್ಲೆಯನಾಯಕ, ಕಪ್ಪಯ್ಯನಾಯಕರು, ಹೆಗ್ಗೆರೆಯ ಬೊಕ್ಕಗೌಡ, ಮೋಟಗೌಡ, ಹೊನ್ನಗೌಡ, ಬಿಟ್ಟಗೌಡನ ಮಾದಯ್ಯ, ಬೆಲಗೂರ ಕೇತಿಸೆಟ್ಟಿ, ತೇಕುರವಟ್ಟಿ

ಮುದ್ದಗೌಡ, ಕೋರಂಗೆರೆಯ ಹಂಪಗೌಡ ಸಮಸ್ತರೂ, ಸೂಜಿನಹಳ್ಳಿಯನ್ನು ಹೆಗ್ಗೆರೆಯ ಕಲಿದೇವರಿಗೆ ಗಂಗೇಶ್ವರ ದೇವರಿಗೆ ದತ್ತಿ ನೀಡಿದ ಬಗ್ಗೆ ವಿವರಗಳನ್ನು ಹೊಂದಿದೆ. ಶಾಸನದ ಪ್ರಾರಂಭದಲ್ಲಿ 'ಶ್ರೀಪೃಥ್ವೀವಲ್ಲಭ', 'ಚೋಳರಾಜ್ಯಪ್ರತಿಷ್ಠಾಪನಾಚಾರ್ಯ' ಮುಂತಾದ, ವೀರನಾರಸಿಂಗನ ಬಿರುದುಗಳನ್ನು ಸಾರಲಾಗಿದೆ.

ಕೈನಡು ಗ್ರಾಮದಲ್ಲಿರುವ ಶಿಲಾಶಾಸನವು ಕ್ರಿ.ಶ. ೧೧೮೧ರ ಕಾಲದ್ದು, ಇದರಲ್ಲಿಯೂ, ಗಂಗವಾಡಿ ೯೬,೦೦೦ ದ ಹೊಯ್ಸಳ ಬಲ್ಲಾಳದೇವನ ಪ್ರಸ್ತಾಪ, ಬಿರುದುಗಳ ಉಲ್ಲೇಖದೊಂದಿಗೆ (ಪದ್ಮಾವತಿ ದೇವಿಯ ಲಬ್ಧವರಪ್ರಸಾದ ಇತ್ಯಾದಿ) ಸಾಮಂತಾಧಿಪತಿ ಗೋವಿದೇವನು ಹುಳಿಯಾರ ನೆಲೆವೀಡಿನಲ್ಲಿ ರಾಜ್ಯಾಡಳಿತ ಮಾಡುತ್ತಿರುವಾಗ, ಅಧೀನಾಧಿಕಾರಿಗಳಾದ ಮಾಚಗೌಡ, ಹರಿಯಮಗೌಡ ಹಾಗೂ ಮಾದಿಗೌಡ ಈ ಮೂವರು, ಬೋಚಿಗಾವುಂಡ ಮತ್ತು ಮುದ್ದಗಾವುಂಡ ಕಹೆಗನೊಡವಿನ ಮಲ್ಲಿಕಾರ್ಜುನ ದೇವರ ಅಂಗಭೋಗ ನೈವೇದ್ಯಕ್ಕೆ ತಪಸ್ವಿಗಳ ಆಹಾರಕ್ಕೆಂದು ಅನೇಕ ಗದ್ದೆ-ಬೆದ್ದಲೆಗಳನ್ನು ಹಾಗೂ ವಿವಿಧ ಸಂತೆ-ಸುಂಕಗಳನ್ನು ದತ್ತಿ ನೀಡಿದ ಬಗ್ಗೆ ವಿವರಗಳಿವೆ. ಈ ಶಾಸನವನ್ನು ಗೋವಿಂದಜೀಯನು ಬರೆದ ಬರಹ ಎಂದು, ಶಾಸನದ ಕಡೆಯಲ್ಲಿ ಒಕ್ಕಣೆ ಇದೆ.

ದೊಡ್ಡತೇಕಲವಟ್ಟಿಯ ಕ್ರಿ.ಶ.೧೧೮೭ರ ಶಿಲಾಶಾಸನವು ಅಲ್ಲಿನ ಈಶ್ವರ ದೇವಸ್ಥಾನದ ಬಳಿ ಇದೆ. ಇದರಲ್ಲಿಯೂ ಸಹ ಗಂಗವಾಡಿ ೯೬೦೦೦ದ ಹೊಯ್ಸಳ ಬಲ್ಲಾಳದೇವನ ಬಿರುದಾವಳಿಗಳನ್ನು ವರ್ಣಿಸಲಾಗಿದೆ. ತೇಕುರವಟ್ಟಿಯ ಬಮ್ಮಗಾವುಂಡನು, ತೇಕುರವಟ್ಟಿಯ ದೇವರಿಗೆ ಕೆಲವು ಗದ್ದೆ-ಬೆದ್ದಲೆ ಭೂಮಿಯನ್ನು ಮತ್ತು ಒಂದು ಗಾಣವನ್ನು ದತ್ತಿ ನೀಡಿದನೆಂದು ತಿಳಿಸುವುದು. ಯಾದಗಟ್ಟದ ಕ್ರಿ.ಶ.೧೧೮೮ರ ಮತ್ತೊಂದು ಶಾಸನದಲ್ಲಿಯೂ ಮೊದಲರ್ಧ ಭಾಗದಲ್ಲಿ ಹೊಯ್ಸಳ ವೀರಬಲ್ಲಾಳ ಚಟ್ಟಯ, ಗೋವಿದೇವ ಹಾಗೂ ಮಾಂಡಳಿಕರ ಹೆಸರುಗಳೂ ಬಿರುದುಗಳೂ ಇದ್ದು, ಉತ್ತರಾರ್ಧದಲ್ಲಿ ಅನೇಕ ಗೌಡ ಪ್ರಜೆಗಳು ಕಲಿದೇವರಿಗೆ ಗದ್ದೆಗಳನ್ನು ದಾನ ನೀಡಿದ ವಿವರಗಳಿವೆ. ಕಬ್ಬಳದ ಬ್ರಹ್ಮಶಕ್ತಿ ಗುರುಗಳ ಪಾದವನ್ನು ತೊಳೆದು ದಾನ ನೀಡಿದ ಬಗ್ಗೆ ಹೇಳಲಾಗಿದೆ. ಇದೀಗ ಪ್ರಾಚ್ಯವಸ್ತು ಇಲಾಖೆಯಿಂದ ನೀರ್ಗುಂದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಅಲ್ಲದೆ ಇತ್ತೀಚೆಗೆ ನೀರ್ಗುಂದದಲ್ಲಿ ಮನೆ ನಿವೇಶನದ ಹದಿ ತೋಡುವಾಗ ಲೋಹದ ಕೆಲವು ಪುಟ್ಟ ವಿಗ್ರಹಗಳು ಕಂಡು ಬಂದಿವೆ.

ಬೂದಿಹಾಳು (ಶ್ರೀರಾಂಪುರ) ಗ್ರಾಮದ ಕ್ರಿ.ಶ.೧೧೯೦ ರ ಶಾಸನದ, ಪ್ರಾರಂಭದ ಅರ್ಧ ಭಾಗದಲ್ಲಿ ಹೊಯ್ಸಳ ವೀರಬಲ್ಲಾಳ ಮತ್ತಿತರರ ಬಿರುದುಗಳಿತ್ಯಾದಿ ಒಕ್ಕಣೆಗಳಿದ್ದು, ಅಂತ್ಯಾರ್ಧ ಭಾಗದಲ್ಲಿ ಚಿಕ್ಕಬೂದಿಹಾಳ ಮಾಂಡಳಿಕರಾದ ಮಾಚೇಗೌಡ ಮತ್ತು ಮಾದಗೌಡರು ಧರ್ಮೇಶ್ವರ ದೇವರ ನೈವೇದ್ಯ, ಅಂಗಭೋಗ, ಆಹಾರ ವೆಚ್ಚಗಳಿಗಾಗಿ

ಗದ್ದೆಗಳನ್ನು ಮತ್ತು ಗಾಣವನ್ನು ದಾನವಾಗಿ ನೀಡಿದ ವಿಚಾರವನ್ನು ಒಳಗೊಂಡಿದೆ. ಈ ಶಾಸನದ ರೂವಾರಿ ಬಂಮೋಜನ ಮಗ ಸೂರಿಯಾಚಾರಿ ಎಂಬ ಷರಾ ಶಾಸನದ ಕಡೆಯಲ್ಲಿದೆ.

ನೇರಲಕೆರೆ ಗ್ರಾಮದ ನಂದನ ಸಂವತ್ಸರದ ಶಿಲಾಶಾಸನವು, ಮೊದಲರ್ಧದಲ್ಲಿ ಹೊಯ್ಸಳ ರಾಜರ ಸಾಮಂತರ, ಮಾಂಡಳಿಕರ ಹೆಸರು-ಬಿರುದುಗಳನ್ನು ಒಳಗೊಂಡಿದ್ದು, ಕಡೆಯಲ್ಲಿ ಗೌಡ ಪ್ರಜೆಗಳು ನೇರಲಕೆರೆಯ ಸುಗ್ಗೇಶ್ವರ ದೇವರಿಗೆ ಗದ್ದೆಗಳನ್ನು-ಗಾಣವನ್ನು ಹಾಗೂ ಕೆಲವು ಸಂತೆಯ ಸುಂಕಗಳನ್ನು ದಾನವಾಗಿ ಬಿಟ್ಟ ಬಗ್ಗೆ ಇದೆ. ಇದೇ ರಾಜರ, ಪಿಂಗಳ ಸಂವತ್ಸರದಲ್ಲಿನ, ನಾಯಿಗೆರೆ ಗ್ರಾಮದ ಶಾಸನದಲ್ಲಿ ಚಟ್ಟಯ್ಯನು ಹುಳಿಯಾರು ಪ್ರಾಂತ್ಯವನ್ನು ಆಳುತ್ತಿರುವಾಗ, ಹಂದನಕೆರೆಯ ಮಲ್ಲಿಕಾರ್ಜುನ ದೇವರಿಗೆ ೨ ಖಂಡುಗ ಗದ್ದೆಯನ್ನು ದತ್ತಿ ಬಿಟ್ಟ ಬಗ್ಗೆ ಹೇಳಲಾಗಿದೆ. ಆನಂದ ಸಂವತ್ಸರದಲ್ಲಿ ಸಾಮಂತ ಬಲ್ಲಯ್ಯನಾಯಕನ ಮಗ ವೀರನಾರಸಿಂಗದೇವನು ಆಳುತ್ತಿರುವಾಗ, ಐದು ಜನ ಗೌಡಪ್ರಜೆಗಳು, ಚೌಡೇಶ್ವರ ದೇವರು ಎಂಬ ಹೆಸರನ್ನಿಟ್ಟು, ಆ ದೇವರಿಗೆ ಗದ್ದೆಯ ದತ್ತಿ ನೀಡಿದರೆಂದು ಸೂಜಿಕಲ್ಲು ಶಾಸನವು ಅರುಹುತ್ತದೆ. ಈ ಶಾಸನದಲ್ಲೂ ಹೊಯ್ಸಳ ಬಲ್ಲಾಳದೇವನ ಹಾಗೂ ಅವನ ಬಿರುದು ಇತ್ಯಾದಿಯನ್ನು ಪ್ರಾರಂಭದಲ್ಲಿ ವರ್ಣಿಸಲಾಗಿದೆ. ಅದೇ ಸೂಜಿಕಲ್ಲು ಗ್ರಾಮದ ಮತ್ತೊಂದು ಶಿಲಾಶಾಸನದಲ್ಲಿ, ಹೊಯ್ಸಳ ವೀರಬಲ್ಲಾಳನ (ಮೇಲೆ ಹೇಳಿದಂತೆ) ಪ್ರಸ್ತಾಪವಿದ್ದು, ಅನೇಕ ಗೌಡ ಪ್ರಜೆಗಳು ಕಲಿದೇವರಿಗೆ ಗದ್ದೆಗಳ ದತ್ತಿ ಬಿಟ್ಟರೆಂದು ಬರೆಯಲಾಗಿದೆ.

ತಂಡಗ ಗ್ರಾಮದ ಶುಕ್ಲ ಸಂವತ್ಸರದ ಶಾಸನದಲ್ಲಿ, ನಾರಸಿಂಗ ಹೊಯ್ಸಳ ದೇವರು ಗಂಗವಾಡಿ ೯೬೦೦೦ ರಾಜ್ಯವಾಳುತ್ತಿರುವಾಗ ಗೋವಿದೇವನು 'ಮಗರನಾಡು ಮುನ್ನೂರ'ನ್ನು ಆಳುತ್ತಿದ್ದನು. ಶ್ರೀಮತು ತಂಡಗದ ಮಾಚರಸನು ಬಾಣಕುಲೋದ್ಭವ ಎಂದು ಹೇಳಿದ್ದು, ಮುಂದಿನ ಭಾಗದಲ್ಲಿ ದೇಕರಸನು ತುರು ಕಾಳಗದಲ್ಲಿ ಹೋರಾಡಿದ ಬಗ್ಗೆ ವರ್ಣನೆ ಇದೆ. ದೇಕನು ಹೋರಾಡಿ ಮಡಿದಾಗ, ತಂಡಗದ ಮಾಚರಸಮುದ್ದೇಶ್ವರ ದೇವರ ಪ್ರತಿಷ್ಠೆ ಮಾಡಿಸಿ ಗದ್ದೆ-ಬೆದ್ದಲನ್ನು ದತ್ತಿ ನೀಡಿದನು. ದೇಕರಸನ ಮೂರು ಶ್ಲೋಕಗಳಲ್ಲಿ ಬಾಣ ಮಯೂರ ಹಾಗೂ ಕನ್ನಡದ ಆದ್ಯ ವಚನಕಾರ ದೇವರದಾಸಿಮಯ್ಯ ಇವರೆಲ್ಲರನ್ನು ಹಾಡಿ ಹೊಗಳಿದಂತೆ ಹೆಸರು ಶಾಶ್ವತವಾಗಿರಲೆಂದು ಬಣ್ಣಿಸಲಾಗಿದೆ. ವೀರಗಲ್ಲು ಶಾಸನವಿದಾಗಿದ್ದು, ಗಮನಾರ್ಹವೆನ್ನಿಸಿದೆ.

ಹುಣವಿನೋಡು ಗ್ರಾಮದ ಕ್ರಿ.ಶ.೧೨೨೮ರ ಶಿಲಾಶಾಸನವು ಅಲ್ಲಿನ ನಾರಾಯಣದೇವರ ದೇವಸ್ಥಾನದ ಉತ್ತರಕ್ಕಿದೆ. ಹೊಯ್ಸಳ ವೀರಬಲ್ಲಾಳದೇವನು 'ಗಂಗವಾಡಿ ೯೬,೦೦೦'ದ ದೋರ ಸಮುದ್ರವನ್ನಾಳುವಾಗ್ಯೆ ನೀರ್ಗುಂದ ವಿಷಯವನ್ನು

ಚಟ್ಟಯ್ಯನು ಆಳುತ್ತಿದ್ದನು. ನೀರ್ಗುಂದದ ಶ್ರೀಮಹಾನಾಡಪ್ರಭು ಮಾರಸೆಟ್ಟಿಯ ಶ್ರೀ ಮಾರೇಶ್ವರದೇವರ ಜೀರ್ಣೋದ್ಧಾರವನ್ನು ಮಾಡಿಸಿ, ದೇವರ ವಿವಿಧ ಸೇವೆಗಳಿಗಾಗಿ ಸರ್ವಧಾರಿ ಸಂವತ್ಸರದ ಸೂರ್ಯಗ್ರಹಣದಂದು, ಆಚಾರ್ಯ ಮಸಣಜೀಯಗೆ ಧಾರಾಪೂರ್ವಕವಾಗಿ ಅನೇಕ ಗದ್ದೆಗಳನ್ನು ದತ್ತಿ ನೀಡಿದನೆಂದು ತಿಳಿಸುತ್ತದೆ. ದತ್ತಿ ಬಿಟ್ಟಿರುವ ಫಲವತ್ತಾದ ಆ ಗದ್ದೆ ಬೆದ್ದಲುಗಳ ವಲಯ ವಿವರಗಳನ್ನು ಶಾಸನದಲ್ಲಿ ಹೇಳಲಾಗಿದೆ.

ಕ್ರಿ.ಶ. ೧೨ನೇ ಶತಮಾನದ ಬೂದಿಹಾಳು ಶ್ರೀರಾಂಪುರ ಶಿಲಾಶಾಸನದಲ್ಲಿ, ಹೊಯ್ಸಳ ಚಕ್ರವರ್ತಿ ಎರಡನೇ ಬಲ್ಲಾಳನು ಆಳುತ್ತಿದ್ದಾಗ, ವೀರಬಣಂಜು ಧರ್ಮದ ಮೂವರು ಪ್ರಜೆಗಳು ಗೂಳೇಶ್ವರ ಮತ್ತು ಮಾಚೇಶ್ವರ ದೇವರುಗಳನ್ನು ಪ್ರತಿಷ್ಠಾಪಿಸಿ ದೇವರ ಸೇವೆಗಳಿಗಾಗಿ ಗದ್ದೆಗಳನ್ನು ದತ್ತಿಬಿಟ್ಟರೆಂದು ತಿಳಿಯುವುದು.

ಜಾನಕಲ್ಲು ಗ್ರಾಮದಲ್ಲಿರುವ ವೀರಗಲ್ಲು ಶಾಸನ ಬಹಳ ವಿಶೇಷವಾದುದಾಗಿದೆ. ಶಂಕರೇಶ್ವರ ದೇವಸ್ಥಾನದ ಬಳಿಯಲ್ಲಿರುವ ಪ್ರಸ್ತುತ ವೀರಗಲ್ಲು ಶಾಸನವು ಕ್ರಿ.ಶ. ೧೩೦೩ರ ಕಾಲದ್ದಾಗಿದ್ದು, ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿ ಕುಮಾರ ರಾಮನ ತಂದೆ ವೀರಕಂಪಿಲ ದೇವನು ಹೊಳಲ್ಕೆರೆಗೆ ಬಂದಿದ್ದನೆಂಬ ಸಂಗತಿಯನ್ನು ತಿಳಿಸುತ್ತದೆ. ವೀರಕಂಪಿಲ ದೇವನು ಕ್ರಿ.ಶ.೧೩೦೭ರಲ್ಲಿ ಕಮ್ಮಟದುರ್ಗವನ್ನು ಆಳಿಕೊಂಡಿದ್ದನೆಂದು ಇತಿಹಾಸ ತಜ್ಞರು ಖಚಿತಪಡಿಸಿರುವ ಹಿನ್ನೆಲೆಯಲ್ಲಿ ಈ ವೀರಗಲ್ಲು ಶಾಸನಕ್ಕೆ ಹೆಚ್ಚಿನ ಮಹತ್ವವಿದೆ. ವಿಜಯನಗರ ಪೂರ್ವದಲ್ಲಿ ಕಂಪ್ಲಿಯ ಅರಸ ವೀರ ಕಂಪಿಲರಾಯನು ರಾಮನಮಲೆ ಭೂಪ್ರದೇಶವನ್ನು ಒಳಗೊಂಡಂತೆ ವಿಶಾಲವಾದ ಪ್ರದೇಶಕ್ಕೆ ಒಡೆಯನಾಗಿದ್ದನು. ಆಗ ದಕ್ಷಿಣದಲ್ಲಿ ಹೊಯ್ಸಳರು ಪ್ರಬಲರಾಗಿದ್ದರು. ಅವರಿಗೆ ರಾಮನಮಲೆಯು ಗಡಿರೇಖೆಯಾಗಿದ್ದಿತು. ಹೀಗೆ ಕಂಪಿಲರಾಯನಿಗೂ ಆ ಪ್ರದೇಶ ಗಡಿಭಾಗವಾಗಿದ್ದರಿಂದ ಹೊಯ್ಸಳರ ಬಲ್ಲಾಳರಾಯನಿಗೂ ಕಂಪಿಲರಾಯನಿಗೂ ಕ್ರಿ.ಶ.೧೩೨೩ರಲ್ಲಿ ಆ ಪ್ರದೇಶದಲ್ಲಿ ಯುದ್ಧ ನಡೆಯಿತು. ಕ್ರಿ.ಶ.೧೩೩೬ರಲ್ಲಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯವು ಪ್ರಬಲವಾಗಿ ಬೆಳೆಯುತ್ತಾ ಹೊಯ್ಸಳರನ್ನು ಅರಗಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಜಾನಕಲ್ಲು ವೀರಗಲ್ಲು ಶಾಸನವು ಅತ್ಯಂತ ಮಹತ್ವ ಪಡೆಯುತ್ತದೆ. ಕ್ರಿ.ಶ.೧೩೦೩ಕ್ಕೆ ಮೊದಲೇ ವೀರ ಕಂಪಿಲರಾಯನು ಕುಮ್ಮಟದುರ್ಗದ ಸಾಮ್ರಾಜ್ಯ ಸ್ಥಾಪಿಸಿದ್ದನೆಂಬುದಕ್ಕೆ ಇದು ಇಂಬು ಕೊಡುತ್ತದೆ. ಕ್ರಿ.ಶ.೧೩೦೩ರಲ್ಲಿ ಹೊಳಲ್ಕೆರೆಗೆ ಪದಾತಿದಳದೊಂದಿಗೆ ಬಂದ ಕಂಪಿಲದೇವನು ಶ್ರೀಮನ್ಮಹಾಮಂಡಲೇಶ್ವರನೂ ಚಕ್ರವರ್ತಿಯೂ ಆಗಿದ್ದ ಶ್ರೀಮಾರದೇವನನ್ನು ಎದುರಿಸುತ್ತಾನೆ. ಮಾರದೇವನ ಸಾಮಂತನಾಗಿದ್ದ ಕೆಂದಾರಿದೇವರಸನ ಮೈದುನ ಬಸವಪ್ಪನು ಹೋರಾಡಿ (ಜಯಶಾಲಿಯಾಗಿ) ಮಡಿದನು. ಬಸವಪ್ಪನ ವೀರ ಮರಣದ ನೆನಪಿಗಾಗಿ ಈ ವೀರಗಲ್ಲನ್ನು ಜಾನಕಲ್ಲಿನಲ್ಲಿ ನೆಡಲಾಗಿದೆ. ಇವನು ಜಾನಕಲ್ಲು

ಗ್ರಾಮದವನೆಂದು ಇದರಿಂದ ಖಚಿತಪಡುವುದು. ಅಲ್ಲದೆ, ಈ ಯುದ್ಧವು ಜಾನಕಲ್ಲು ಸಮೀಪದಲ್ಲಿ ನಡೆದಿದೆ ಎಂದು ನಿರ್ಣಯಿಸಬಹುದಾಗಿದೆ.

ಜಾನಕಲ್ಲು ಗ್ರಾಮದ ಅದೇ ಕ್ರಿ.ಶ.೧೩೦೩ರ ಮತ್ತೊಂದು ವೀರಗಲ್ಲು ಶಾಸನವು ಅದೇ ಗ್ರಾಮದ ಶಂಕರೇಶ್ವರ ದೇವಸ್ಥಾನದ ಬಳ ಇದ್ದು, ಇದರಲ್ಲಿ ಶ್ರೀಮನು ಹಾಪನಾಯ್ತುರಾಯ ನಾಯಕ ಎಂಬ ಅಸ್ಪಷ್ಟ ಹೆಸರಿದೆ (ರಾಜನ ಹೆಸರು) ಗೋವಿಬೋಯಿ ನಾಯಕನಿಗೆ ಧರ್ಮಾರ್ಥವಾಗಿ ಹಾಕಿಸಿದ ವೀರಗಲ್ಲು ಇದಾಗಿದ್ದು, ಹುರದ ಹಳ್ಳಿಯ ಸನಿಗಾವುಂಡ ಹಾಗೂ ಸಿದಿಲಯ ನಾಯಕನು ಮಾದಕೆರೆಯ ಲಕಹರಿಯಗಳಿಗೆ ಕಲಸುಬಂನಮಾರ ದೊಡ್ಡಘಟ್ಟದ ಮಲ್ಲಯ್ಯನು ಕಡಿಸಿದನು ಎಂದು ವೀರರ ಮರಣದ ಬಗ್ಗೆ ಪ್ರಸ್ತಾಪವಿದೆ.

ಹೊಸದುರ್ಗ ತಾಲ್ಲೂಕಿನ ಹೊನ್ನೇಕೆರೆ ಗ್ರಾಮವು, ಹೊಯ್ಸಳರ ಕಾಲದಲ್ಲಿ, ನಮಸ್ಯದ ಮಹಾಗ್ರಹಾರ ಹಾಗೂ ಉದ್ಭವ ಸೋಮನಾಥಪುರ ಎಂಬ ಅಭಿದಾನಗಳಿಂದ ಪ್ರಖ್ಯಾತವಾಗಿದ್ದ ನೀರಗುಂದದ ಶ್ರೀಮಂತ ಇನ್ನೂರಿಪ್ಪತ್ತು ಮಹಾಜನಂಗಳಿದ್ದ ಪ್ರಥಮಸ್ಥಳವೆನ್ನಿಸಿದ್ದಿತು. (ಉಲ್ಲೇಖ:– ಇಲ್ಲಿನ ವರ್ತಕರ ಸಂಘವು 'ಅಯ್ಯಾವೊಳೆ ಐನೂರ್ವರ್' ಎಂಬ ಪ್ರಶಸ್ತಿಗೆ ಪಾತ್ರವಾಗಿದ್ದಿತು.(ಆಕರ:– 'ಡಾ|| ಬಿ.ಆರ್ ಹಿರೇಮಠರ ಶಾಸನ ಅಧ್ಯಯನ'–ಸಂ: ಡಾ|| ಮಲ್ಲಿಕಾರ್ಜುನ.ಕೆ ಮತ್ತು ಇತರರು(೨೦೧೨). ಪ್ರ: ಪ್ರಸಾರಂಗ, ಕನ್ನಡ ವಿ.ವಿ.ಹಂಪಿ.). ಇಲ್ಲಿನ ಗೌಡ ಪ್ರಜೆಗಳು ಪ್ರಸಿದ್ಧಿ ಪಡೆದಿದ್ದರು. ಶ್ರೀಮಂತ ವಾಣಿಜ್ಯ ವರ್ತಕರು ಇಲ್ಲಿ ನೆಲೆಸಿದ್ದರು. ಇಲ್ಲಿನ ಕ್ರಿ.ಶ. ೧೩೦೬ರ ಶಾಸನವು, ಹೊನ್ನೆಕೆರೆಯ ಶ್ರೀ ಪ್ರಸನ್ನ ಮಲ್ಲಿನಾಥ ದೇವರಿಗೆ ಅಲ್ಲಿನ ಸೋಮಗೌಡ ಮತ್ತು ಲಕ್ಷ್ಮೀಲಖಗವುಡಿ ದಂಪತಿಗಳ ಮಗನಾದ ಮಲ್ಲಿಗಾವುಂಡನು ದೇವರ ಅಂಗರಂಗಭೋಗಕ್ಕೆ ಅಮೃತಪಡಿಗೆ, ನಂದಾದೀಪಕ್ಕೆ ಗಂಧ–ಧೂಪ–ದೀಪ–ನೈವೇದ್ಯಾದಿ ಸೇವೆಗಳಿಗಾಗಿ ಹೊಲಗದ್ದೆಗಳನ್ನು ಕ್ರಯಕ್ಕೆ ಕೊಂಡು ದತ್ತಿ ನೀಡಿದ ವಿವರಗಳನ್ನು ಒಳಗೊಂಡಿದೆ. ಶ್ರೀ ಪ್ರಸನ್ನಮಲ್ಲಿನಾಥ ದೇವರಿಗೆ ೫೫ ಮಹಾಜನಗಳು ಕೊಟ್ಟ ಮನೆಯೊಂದರ ಅಳತೆಯನ್ನು (ಉದ್ದ ಮತ್ತು ಅಗಲವನ್ನು) ಕೈಯ್ಯಳತೆಯಲ್ಲಿ ಹೇಳಿರುವುದು ಸ್ವಾರಸ್ಯವಾಗಿದೆ. ಹೊನ್ನೇಕೆರೆ ಗ್ರಾಮದ ಕಲ್ಲಗವುಡ ಮತ್ತು ಲಕ್ಷ್ಮೀ ಪೋತಗವುಡಿ ದಂಪತಿಗಳ ಮಗ ಲಿಂಗಗವುಡನು ಸಹ ಅದೇ ದೇವರಿಗೆ ಅನೇಕ ಗದ್ದೆ ಹಾಗೂ ಎರೆಭೂಮಿಯನ್ನು ಕ್ರಯಕ್ಕೆ ಬೇರೆಯವರಿಂದ ಖರೀದಿಸಿ ದತ್ತಿ ನೀಡಿದ ವಿವರವೂ ಇದೇ ಶಾಸನದಲ್ಲಿದೆ. ಈ ಶಾಸನವನ್ನು ಬರೆದವನು ಆಚಾರಿ ಯೇಚೋಜನ ಮಗ ಸಿದ್ದೋಜ ಸೋಮೋಜ ಎಂಬ ಷರಾ ಶಾಸನದ ಕಡೆಯಲ್ಲಿದೆ.

ಇದೇ ಶಾಸನಕಲ್ಲಿನಲ್ಲಿ (ಹೊನ್ನೆಕೆರೆ ಶಾಸನ) ಮತ್ತೊಂದು ಶಾಸನವನ್ನು ಕಂಡರಿಸಲಾಗಿದ್ದು, ನಯವಿನಯ ವಿಜ್ಞಾನ ವೀರಾವತಾರ ವೀರಬಣಂಜು ಸಮೆಯ ಧರ್ಮ ಪ್ರತಿಪಾಲಕರು ಆಗಿರುವ ಅರಬಲೆ ಎಪ್ಪತ್ತರ ಸೆಟ್ಟಿಗುತ್ತರು, ಪಟ್ಟಣಸ್ವಾಮಿ, ಗವುಡ

ಸ್ಥಾನಿಕರು, ಹಲವರು ಹದಿನೆಂಟು ಸಮೆಯಿಗಳು ಹೊನ್ನೇಕೆರೆಯ ಮಾರಗಾವುಂಡಗೆ ನಾಡಹೆಗ್ಗಡೆತನವನ್ನು ಕೊಟ್ಟರೆಂದು ಶಾಸನದಲ್ಲಿ ಹೇಳಲಾಗಿದೆ. ಅರಬಲೆಯ ಎಪ್ಪತ್ತು ಗ್ರಾಮಗಳಲ್ಲಿ ೪೦ ಗ್ರಾಮಗಳು ಒಂದೊಂದು ಪಣವನ್ನು, ಇನ್ನುಳಿದ ೩೦ ಗ್ರಾಮಗಳು ಸಂತೆಯ ಸುಂಕಗಳನ್ನು ಬಿಟ್ಟುಕೊಟ್ಟುದಾಗಿ ಹದಿನೆಂಟು ಸಮೆಯಿಗಳು ಶಾಸನದಲ್ಲಿ ಹೇಳಿಕೊಂಡಿದ್ದಾರೆ. ಅಲ್ಲದೆ, ಮಾರಗವುಡನು ತಾನು ನಾಡಹೆಗ್ಗಡೆಯಾದುದರ ನೆನಪಿಗಾಗಿ ಶ್ರೀ ಪ್ರಸನ್ನ ಮಲ್ಲಿಕಾರ್ಜುನ ದೇವರಿಗೆ ಪ್ರತಿವರ್ಷ ದೀಪಾವಳಿಯಲ್ಲಿ ದೀಪಗಳನ್ನು ಬೆಳಗಿಸುವ ಸೇವೆಯನ್ನು ಪ್ರಕಟಿಸಿದನು.

ಹೀಗೆ, ಹೊಯ್ಸಳರು ಈಗಿನ ಹೊಸದುರ್ಗ ತಾಲ್ಲೂಕು ಭೂ ಪ್ರದೇಶವನ್ನು ತಮ್ಮ ಮಹಾಸಾಮಂತರುಗಳು, ಮಾಂಡಲೀಕರು ಹಾಗೂ ಇನ್ನಿತರ ಅಧೀನ ಅಧಿಕಾರಿಗಳ ಮೂಲಕ ಅತ್ಯಂತ ಪ್ರಭಾವಯುತವಾಗಿ ಆಳಿದರು. ಅವರ ಕಾಲದ ಶಿಲ್ಪಕಲೆಯ ಸೌಂದರ್ಯವನ್ನು ಇಲ್ಲಿನ ನೀರಗುಂದ, ಚಿಕ್ಕಯಗಟಿ, ಸಿದ್ಧಪ್ಪನಬೆಟ್ಟ, ಹೆಗ್ಗೆರೆ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು–ಬಸದಿ ಹಾಗೂ ಶಿಲಾವಿಗ್ರಹಗಳಲ್ಲಿ ಕಾಣಬಹುದಾಗಿದೆ. ಹೊಸದುರ್ಗ ಪಟ್ಟಣದಲ್ಲಿರುವ ನೀರ್ಗುಂದ ಗಣಪತಿಯೂ ಹೊಯ್ಸಳರ ಕಾಲದ ಬೃಹತ್ ಕಲಾಕೃತಿಯಾಗಿದೆ. ಬೆಲಗೂರಿನ ಪ್ರಸನ್ನರಾಮೇಶ್ವರ ದೇವಾಲಯ ಹಾಗೂ ಮಲ್ಲಾಪುರದ ಈಶ್ವರ ದೇವಾಲಯ ಚೋಳರ ಕಾಲದವು ಎನ್ನಲಾಗಿದೆ.

## ವಿಜಯನಗರದ ಅರಸರು

ದಕ್ಷಿಣದಲ್ಲಿ ಮುಮ್ಮಡಿ ಬಲ್ಲಾಳನ ಅವಸಾನದ ತರುವಾಯದಲ್ಲಿ, ಬಲ್ಲಾಳನ ಗರಡಿಯಲ್ಲಿ ಪಳಗಿದ್ದ ಸಂಗಮನ ಐವರು ಮಕ್ಕಳಲ್ಲಿ ಹಿರಿಯವನಾದ ಹರಿಹರನು ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರನಾಗಿ ಸ್ವತಂತ್ರವಾಗಿ ಆಳ್ವಿಕೆಯನ್ನು ಮಾಡಿದನು. ಅವನ ಸಾಮ್ರಾಜ್ಯ ಹಾಗೂ ರಾಜಧಾನಿಯಾದ ವಿಜಯನಗರವನ್ನು (ಕ್ರಿ.ಶ.೧೩೩೬) ತನ್ನ ಸಹೋದರರಾದ ಕಂಪಣ್ಣ ಬುಕ್ಕಣ್ಣರ ನೆರವಿನಿಂದ ಸಾಮ್ರಾಜ್ಯವನ್ನು ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಸಮುದ್ರಗಳವರೆಗೆ ವಿಸ್ತರಿಸಿದನು. ಬುಕ್ಕರಾಯನು ಕ್ರಿ.ಶ. ೧೩೫೬ರಿಂದ ೭೭ ರವರೆಗೆ, ಇವನ ನಂತರ ಇಮ್ಮುಡಿ ಹರಿಹರ, ಒಂದನೇ ದೇವರಾಯ, ಇಮ್ಮಡಿ ದೇವರಾಯ (ಒಬ್ಬರ ನಂತರ ಒಬ್ಬರು) ಆಳಿದರು. (ಕ್ರಿ.ಶ. ೧೪೮೫ರವರೆಗೆ) ಸಂಗಮ ವಂಶದ ಅರಸರ ಆಳ್ವಿಕೆ ಕೊನೆಗೊಂಡ ವಿಪತ್ಕಾಲದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ ಸಾಳುವ ವಂಶದ ನರಸಿಂಹನು ಶತ್ರುಗಳನ್ನು ಓಡಿಸಿ ವಿಜಯನಗರದ ಚಕ್ರಾಧಿಪತಿಯಾದನು. ಸಾಳುವ ವಂಶದ ಅರಸರ ಆಡಳಿತ ಸ್ವಲ್ಪ ಕಾಲದಲ್ಲಿಯೇ ಮುಗಿದು, ತುಳುವ ವಂಶದ ಅಧಿಕಾರಿಗಳು ಸಿಂಹಾಸನವನ್ನೇರಿದರು. ಕೃಷ್ಣದೇವರಾಯನು ಈ ವಂಶದ ಮುಖ್ಯನೆನಿಸಿದನು. ಇವನ ನಂತರದವರು

ಪ್ರಬಲರಾಗಿರಲಿಲ್ಲ. ಸದಾಶಿವರಾಯನ ಕಾಲದಲ್ಲಿ ಕೃಷ್ಣದೇವರಾಯನ ಅಳಿಯ ರಾಮರಾಯನು ಆಕ್ರಮಣಕಾರಿಯಾಗಿ ತಾನೇ ಸಾಮ್ರಾಜ್ಯದ ಅಧಿಪತ್ಯವನ್ನು ವಹಿಸಿ ಕ್ರಿ.ಶ. ೧೫೪೨ ರಿಂದ ೧೫೬೫ರವರೆಗೆ ಪರಾಕ್ರಮ ಮೆರೆದನು. ಇವನ ಅವಧಿಯಲ್ಲಿ ಶತ್ರುಗಳೆಲ್ಲರೂ ಒಂದಾಗಿ ವಿಜಯನಗರದ ಮೇಲೆರಗಿ ಧ್ವಂಸಗೊಳಿಸುತ್ತಾರೆ.

ಹೊಸದುರ್ಗ ತಾಲ್ಲೂಕಿನಲ್ಲಿ ವಿಜಯನಗರದವರ ಕಾಲಾವಧಿಯ ಅನೇಕ ಶಾಸನಗಳು ಕಂಡು ಬಂದಿವೆ. ವಿಜಯನಗರದ ಸಾಳುವ ನರಸಿಂಹನು, ಇಲ್ಲಿನ ಬೂದಿಹಾಳು ಕೋಟೆಯ ಸಿರುಮ ನಾಯಕ ಹಾಗೂ ಬಾಗೂರು ಕೋಟೆಯ ಗೋವಿಂದನ ಮೇಲೆ ದಂಡೆತ್ತಿ ಬಂದು ದೀರ್ಘ ಕಾಲಾವಧಿಯವರೆಗೆ ಯುದ್ಧ ನಡೆಸಿದ ಬಗ್ಗೆ ಐತಿಹಾಸಿಕ ಸಾಂಗತ್ಯ ಕೃತಿಗಳು ಇದ್ದು, ಇವು ಹಿಂದಿನ ಕಾಲದ ಕವಿಗಳಿಂದ ರಚಿತಗೊಂಡಿರುವುವು. ಈ ಸಂಗತಿ ನಾಡಿನ ಚರಿತ್ರೆಯಲ್ಲಿ ಅತ್ಯಂತ ವಿಶಿಷ್ಟವಾದ ದಾಖಲೆಯೆನ್ನಿಸಿದೆ. ಅಷ್ಟೇ ಅಲ್ಲದೆ, ಆಗಿನ ಬೂದಿಹಾಳು ಕೋಟೆಯ ಅವಶೇಷಗಳಾದ ಗುಡಿ, ಕೋಟೆ, ಕೊತ್ತಲ, ಬತೇರಿ, ಮುಂತಾದ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ. ಬಾಗೂರಿನಲ್ಲಿಯೂ ಆಗಿನ ಕೋಟೆ ಕೊತ್ತಲಗಳ ಅವಶೇಷಗಳಿವೆ. ಆದ್ದರಿಂದ ಸಿರುಮನ ಸಾಂಗತ್ಯಗಳು ವಿಜಯನಗರ ಚರಿತ್ರೆಗೆ ಸಹಾಯಕವಾದ (ಪೂರಕ) ಚಾರಿತ್ರಿಕ ಗ್ರಂಥಗಳೆನ್ನಬಹುದು.


ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರ ಗ್ರಾಮವು ಹಿಂದೆ ಬೂದಿಹಾಳು ಎಂಬ ಹೆಸರನ್ನು ಪಡೆದಿದ್ದಿತು. (ಬೂದಿಪುರ, ವಿಭೂತಿಪುರ ಮುಂತಾದ ಹೆಸರುಗಳೂ ಇದ್ದ ಬಗ್ಗೆ ಆಧಾರಗಳಿವೆ) ಹೊಯ್ಸಳರು ಮತ್ತು ವಿಜಯನಗರದವರ ಕಾಲದಲ್ಲಿ ಹುಳಿಯಾರು ಮತ್ತು ಚಿಕ್ಕನಾಯಕನಹಳ್ಳಿ ಪ್ರದೇಶವು 'ಮಗರ ಮುನ್ನೂರುನಾಡು' ಅರ್ಥಾತ್ 'ಮಗರದೇಂಠೆಯ' ಆಗಿದ್ದಿತು. ಆಗಿನ ಕಾಲದಲ್ಲಿ ಬೂದಿಹಾಳು ಸೀಮೆಯು ಮಗರ ರಾಜ್ಯದ ಭಾಗವಾಗಿದ್ದಿತು. ಕ್ರಿ.ಶ.೧೫ನೇ ಶತಮಾನದ ಮಧ್ಯಭಾಗದಲ್ಲಿ ಗೊಲ್ಲ ಸಿರುಮನಾಯಕನು ಬೂದಿಹಾಳು ಕೋಟೆಯನ್ನು ಆಳುತ್ತಿದ್ದನು. ಸಿರುಮನ ಬೂದಿಹಾಳು ಕೋಟೆಯು ಕಂಪಿಲನ ಕುಮ್ಮಟ ದುರ್ಗದ ಕೋಟೆಯಂತೆಯೆ ಅಬೇಧ್ಯ ಕೋಟೆಯಾಗಿತ್ತೆಂದು ದಾಖಲೆಗಳು ತಿಳಿಸುತ್ತವೆ. ಸಿರುಮನಾಯಕನ ರಾಜ್ಯವಿಸ್ತಾರವನ್ನು ಕಂಡು ಅಸೂಯೆಗೊಂಡ ನೆರೆಯ ಪಾಳೆಯಗಾರರು, ವಿಜಯನಗರದ ಸಾಳುವ ನರಸಿಂಹನಲ್ಲಿಗೆ ಹೋಗಿ ಸಿರುಮನನ್ನು ಬಗ್ಗು ಬಡಿದು ತಮ್ಮನ್ನು ರಕ್ಷಿಸಬೇಕೆಂದು ವಿನಂತಿಸಿಕೊಂಡಿದ್ದರಿಂದ, ಸಾಳ್ವ ನರಸಿಂಹನು ಬೂದಿಹಾಳು ಕೋಟೆಯ ಸಿರುಮನ ಮೇಲೆ ಸಮರ ಸಾರಿದನು. (ಸಿರುಮನಿಂದ ಕಪ್ಪಕಾಣಿಕೆ ತನಗೆ ಬಾರದಿದ್ದ ಕೋಪವೂ ನರಸಿಂಹನಿಗಿದ್ದಿತು). ಬೂದಿಹಾಳು ಸಿರುಮನ ಪರಮ ಮಿತ್ರನಾದ ಗೋವಿಂದನು ಬಾಗೂರು ಕೋಟೆಯನ್ನು, ಸಿರುಮನ ತಮ್ಮನಾದ ಮಲ್ಲನು ಬೂದಿಹಾಳು ಪಕ್ಕದ ಹೆಗ್ಗೆರೆ ವಳಿತವನ್ನು ಆಳುತ್ತಿದ್ದರು. ಸಾಳ್ವನು ಮೊದಲಿಗೆ,

ಸಿರುಮನ ಮಿತ್ರನ ಬಲವನ್ನು ಮುರಿಯುವ ಉದ್ದೇಶದಿಂದ, ಬಾಗೂರು ಕೋಟೆಯ ಮೇಲೆರಗಿ ಜಯಿಸಿದನು. ನಂತರ ಬೂದಿಹಾಳು ಕೋಟೆಯ ಬಳಿ ಬೀಡು ಬಿಟ್ಟು, ಅನೇಕ ತಿಂಗಳುಗಳ ಕಾಲ ಯುದ್ಧ ಮಾಡಿ ಸಿರುಮನೊಂದಿಗೆ ಸೆಣೆಸಬೇಕಾಯಿತು. ದೊಡ್ಡ ಸಾಮ್ರಾಜ್ಯದ ಅತ್ಯಂತ ದೊಡ್ಡ ಸೇನಾಬಲದ ವಿರುದ್ಧ ದೀರ್ಘಕಾಲ ಹೋರಾಡಿದ ಒಬ್ಬ ಸಣ್ಣ ಪಾಳೆಯಗಾರನ ಧೈರ್ಯ ಸಾಹಸಗಳು ನಾಡಿನ ಸಮರೇತಿಹಾಸದಲ್ಲಿಯೇ ಅಪರೂಪವಾದ ಪ್ರಸಂಗವಾಗಿದೆ. ಕಡೆಗೆ ಸಿರುಮನಿಗೆ ತನ್ನ ಸೋಲು ಖಚಿತವಾದಾಗ ರಾಜಪರಿವಾರದವರೆಲ್ಲ ಶಿರಚ್ಛೇದನ ಮಾಡಿಕೊಂಡು ಅಗ್ನಿಕುಂಡಗಳಿಗೆ ಧುಮುಕಿ ಪ್ರಾಣಾರ್ಪಣೆ ಮಾಡಿಕೊಂಡ ಹೃದಯ ವಿದ್ರಾವಕ ಚಿತ್ರಣವನ್ನು ಸಾಂಗತ್ಯಗಳಲ್ಲಿ ನೀಡಲಾಗಿದೆ. ಬೂದಿಹಾಳು ಕೋಟೆಯನ್ನಾಳಿದ ಗೊಲ್ಲ ಸಿರುಮನಾಯಕನ ಮೂರು ಸಾಂಗತ್ಯ ಕೃತಿಗಳನ್ನು ಡಾ||ಎಂ.ಎಂ. ಕಲಬುರ್ಗಿಯವರು ಸಂಶೋಧನೆ ಮಾಡಿ ಸಂಪಾದಿಸಿ ಪ್ರಕಟಿಸಿರುತ್ತಾರೆ ಹಾಗೂ ಈ ಪಾಳೆಯಗಾರರನ್ನು ಕುರಿತು ಡಾ|| ಶೈಲಜಾ ಹೊಸಳ್ಳೇರ ಅವರು ಪಿ.ಹೆಚ್.ಡಿ ಮಾಡಿರುತ್ತಾರೆ. ಇಂದಿಗೂ ಕುಮಾರ ಮಲ್ಲನದೆಂದು ಪೂಜಿಸಲಾಗುವ ಕಟ್ಟಿಗೆಯ ರುಂಡವು ಬೂದಿಹಾಳು ಶ್ರೀರಾಂಪುರದ ಕೊಲ್ಲಾಪುರದಮ್ಮನ ಗುಡಿಯಲ್ಲಿದೆ. ಕುಮಾರಮಲ್ಲನ ಗುಡಿಯಲ್ಲಿನ ವೀರಗಲ್ಲುಗಳಿಗೆ ಪೂಜೆ ಸಲ್ಲಿಸುವರು ವಿಜಯದಶಮಿಯಂದು (ಪ್ರತಿವರ್ಷ) ಕುಮಾರಮಲ್ಲನ ಕಟ್ಟಿಗೆಯ ರುಂಡವನ್ನು ಪಾಲಿಕೆಯಲ್ಲಿ (ಮರದ ಕುದುರೆಯ ಮೇಲೆ) ಸ್ಥಾಪಿಸಿ, ಬೆಳ್ಳಿಯ ಮುಖವಾಡ–ಹೂ–ಕುಂಕುಮಗಳಿಂದ ಅಲಂಕರಿಸಿ, ಊರ ಹೊರಗಿನ ಅಂಬಿನ ಬಯಲಿಗೆ ಮೆರವಣಿಗೆಯಲ್ಲಿ ವಾದ್ಯಮೇಳ ಸಹಿತ ಕರೆದೊಯ್ಯುವರು. ಅಂಬಿನ ಬಯಲಿಗೆ ಇನ್ನಿತರ (ಸುತ್ತಲ) ಗ್ರಾಮಗಳಿಂದ ಗವಿರಂಗನಾಥಸ್ವಾಮಿ, ಬನಶಂಕರಿದೇವಿ, ಕೊಲ್ಲಾಪುರದಮ್ಮ, ದೇಕೇರಪ್ಪ (ಬೀರಲಿಂಗದೇವರು) ಕೋಡಿಲಕ್ಕಮ್ಮ, ಹೆಗ್ಗೆರೆ ಕೆಂಪಮ್ಮ ಹಾಗೂ ಹೆಗ್ಗೆರೆ ಬೀರದೇವರುಗಳ ಉತ್ಸವಮೂರ್ತಿಗಳು ಪ್ರತ್ಯೇಕ ಪಾಲಿಕೆಗಳಲ್ಲಿ ಮೆರವಣಿಗೆಯಲ್ಲಿ ಬಂದು, ರಣಭೋಜು ವಾದ್ಯ ಮೊಳಗುವುದರೊಂದಿಗೆ ಪರಸ್ಪರ ಎದುರುಗೊಳ್ಳುತ್ತವೆ. ಸುತ್ತಲ ಹತ್ತಾರು ಹಳ್ಳಿಗಳಿಂದ ಸಹಸ್ರಾರು ಜನರು ಕುಮಾರಮಲ್ಲನ ಈ ಅಂಬಿನೋತ್ಸವವನ್ನು ವೀಕ್ಷಿಸಲು ಉತ್ಸಾಹದಿಂದ ಸೇರುತ್ತಾರೆ. ಅಲ್ಲಿನ ಸಾಲು ಮಂಟಪಗಳಲ್ಲಿ ಎಲ್ಲಾ ಉತ್ಸವ ಮೂರ್ತಿಗಳನ್ನು ಕುಳ್ಳಿರಿಸಿ ಮಹಾಮಂಗಳಾರತಿ ಪೂಜೆ ನಡೆದು, ಬನ್ನೀಮರಕ್ಕೆ ಪೂಜಾರಿ ಹಾಗೂ ಖಡ್ಗ ಹಿಡಿದ ಮುಖ್ಯ ವ್ಯಕ್ತಿ ಪ್ರದಕ್ಷಿಣೆ ಮಾಡಿ ಪೂಜೆ ಸಲ್ಲಿಸಿದ ನಂತರ, ಅಲ್ಲಿ ನೆಟ್ಟಿದ್ದ ಬಾಳೇಕಂದನ್ನು ಆ ವ್ಯಕ್ತಿ ಖಡ್ಗದಿಂದ ತುಂಡರಿಸುತ್ತಲೆ, ಜನರು ಹರ್ಷದ ಉದ್ಗಾರಗಳನ್ನು ಮಾಡುವರು. ಕೂಡಲೇ ಕುಮಾರಮಲ್ಲ ದೇವರ ಪಾಲಿಕೆಯನ್ನು ಹೊತ್ತ ಜನರು ಬೂದಿಹಾಳು ಗ್ರಾಮದತ್ತ ಓಡುತ್ತಾ ಸಾಗುತ್ತಾರೆ. ಹಿಂದಿನ ಕಾಲದ ಊರ ಹೆಬ್ಬಾಗಿಲು ಇದ್ದಿತೆನ್ನಲಾದ ಹಾಗೂ ಈಗ ಕೊಳಲು ಗೋಪಾಲ ಮಂಟಪ ಇರುವ ಜಾಗದ ಸಮೀಪದಲ್ಲಿ ಕುಮಾರಮಲ್ಲ ದೇವರು ನಿಂತು ಆವೇಶದಿಂದ ವಾಲಾಡುತ್ತಿರುವಾಗ, ಗ್ರಾಮಸ್ಥರು ಆ ಹೆಬ್ಬಾಗಿಲಿಗೆ ಕುರಿಯನ್ನು

ಬಲಿಕೊಡುತ್ತಾರೆ. ನಂತರ ಕುಮಾರಮಲ್ಲ ದೇವರು (ಪಾಲಿಕೆಯು) ನಿಧಾನವಾಗಿ ತನ್ನ ಗುಡಿಯತ್ತ ಮೆರವಣಿಗೆ ಸಾಗುವಾಗ ಆ ಕೇರಿಯ ಮನೆಗಳವರು ಕುಮಾರಮಲ್ಲನಿಗೆ ಹಣ್ಣು-ಕಾಯಿ ಕೊಟ್ಟು ಮಂಗಳಾರತಿ ಮಾಡಿಸಿ ಕೈ ಮುಗಿದು ಬೀಳ್ಕೊಡುತ್ತಾರೆ. ವಿಜಯ ದಶಮಿಯಂದು ಜರುಗುವ ಪ್ರಸ್ತುತ ಕುಮಾರಮಲ್ಲನ ಅಂಬಿನೋತ್ಸವದ ಪ್ರಕ್ರಿಯೆಗಳು, ಆಗಿನ ಕಾಲದ ಕುಮಾರಮಲ್ಲನ ಸಮರೋತ್ಸಾಹವನ್ನು ಬಿಂಬಿಸುತ್ತವೆ. ವಿಜಯನಗರದವರೊಂದಿಗಿನ ಧೀರಸಮರವನ್ನು ಸಂಕೇತಿಸುತ್ತದೆ.

ಕರ್ನಾಟಕದಲ್ಲಿ ವೀರರ ಆರಾಧನೆ ಜೀವಂತವಾಗಿರುವುದಕ್ಕೆ ಇದು ಉತ್ತಮ ನಿದರ್ಶನವಾಗಿದೆ. ವಿಜಯದಶಮಿಯನ್ನು ಹೊರತು ಪಡಿಸಿದರೆ ಕಾರ್ತೀಕದಲ್ಲಿ ಸಹ ಕುಮಾರಮಲ್ಲನ ಕಟ್ಟಿಗೆ ರುಂಡಕ್ಕೆ ಪೂಜೆ ಸಲ್ಲುವುದು. ಹೀಗೆ, ತೀರಾ ಪ್ರಾಚೀನವಲ್ಲದ ವಿಜಯನಗರದವರ ಕಾಲದ ವೀರಾಗ್ರಣಿಗಳಾದ ಸಿರುಮ ಮತ್ತು ಅವನ ಮಗ ಕುಮಾರಮಲ್ಲನಿಗೆ ಪೂಜೆ ಸಲ್ಲುತ್ತಿರುವುದು ಇತಿಹಾಸದ ಅಚ್ಚರಿಯೇ ಸರಿ. ಇಂದು ಕುಮಾರಮಲ್ಲನ ಗುಡಿ ಇರುವ ಜಾಗವು ಕುಮಾರಮಲ್ಲನ ಸಮಾಧಿಯಾಗಿದ್ದು, ಸಿರುಮನು ಪ್ರಾಣ ನೀಗಿಕೊಂಡನೆನ್ನಲಾದ ಅಗ್ನಿಕುಂಡವಿದ್ದ ಜಾಗವು ಅದೇ ಆಗಿದ್ದಿರಬೇಕು. ವಿಜಯನಗರ ಶೈಲಿಯ ಲಕ್ಷ್ಮೀನಾರಾಯಣದೇವರ ದೇವಾಲಯದ ಅವಶೇಷವಾಗಿರುವ ಲಕ್ಷ್ಮೀಕಾಂತಮಂಟಪವು ಆಗಿನ ಶಿಲ್ಪಕಲೆಗೆ ಸಾಕ್ಷಿಯಾಗಿದೆ. ಸಿರುಮನ ಕಾಲದ ಬನಶಂಕರಿ ದೇವಾಲಯ, ಕಾಳಮ್ಮನ ಗುಡಿ ಮುಂತಾದ ಅನೇಕ ಮಂದಿರಗಳು ಈಗಲೂ ಬೂದಿಹಾಳಿನಲ್ಲಿವೆ. ಹೆಗ್ಗೆರೆಯಲ್ಲಿ ಮಲ್ಲನಾಯಕನ (ಸಿರುಮನ ತಮ್ಮ) ಸಮಾಧಿಯಿದ್ದು, ಅದರ ಮೇಲೆ (ರಾಜನ ಉಬ್ಬುಕೆತ್ತನೆಯುಳ್ಳ) ವೀರಗಲ್ಲಿದೆ. ಬೂದಿಹಾಳಿನಲ್ಲಿ, ಸಾಂಗತ್ಯ ಕೃತಿಯಲ್ಲಿ ಉಲ್ಲೇಖಗೊಂಡಿರುವ ಏಕನಾಥೇಶ್ವರಿ ದೇವಾಲಯ ಈಗ ಕಾಣಬರುತ್ತಿಲ್ಲ.

ಬೂದಿಹಾಳು ಕೋಟೆಯ ಪ್ರಸ್ತುತ ಪಾಳೆಯಗಾರರ ವಂಶವೃಕ್ಷವನ್ನು ಸಾಂಗತ್ಯಗಳ ನೆರವಿನಿಂದ ಹೀಗೆ ಗುರುತಿಸಬಹುದು.




ಬೂದಿಹಾಳು ಕೋಟೆಯ ಪಾಳೆಯಗಾರರ ಮೂಲಪುರುಷನಾದ ಕಾಚನು, ವಿಜಯನಗರ ಪ್ರೌಢರಾಯ (ಪೆನುಗೊಂಡೆ)ನ ಅರಮನೆಯ ದ್ವಾರಪಾಲಕ

ನಾಗಿದ್ದನೆಂದು ಮಲ್ಲಕವಿಯ 'ಗೊಲ್ಲಸಿರುಮನ ಚರಿತ್ರೆ'ಯಲ್ಲಿ ವ್ಯಾಖ್ಯಾನಿಸಲಾಗಿದೆ. ಕಾಚನ ಸಾಹಸ ಪ್ರಸಂಗವೊಂದನ್ನು ಮೆಚ್ಚಿದ ಪ್ರೌಢರಾಯನು ಕಾಚನಿಗೆ ಸೂಜಿಕಲ್ಲು ಕೋಟೆಯ ಪ್ರಾಂತ್ಯವನ್ನು ಬಳುವಳಿಯಾಗಿ ನೀಡಿದನು. ಸ್ವಲ್ಪ ದಿನ ಸೂಜಿಕಲ್ಲಿನಲ್ಲಿದ್ದ ಕಾಚನು, ಮುಂದೆ ಹತ್ತಿರದ ಬೂದಿಹಾಳಿನಲ್ಲಿ ಧೀರಪುತ್ರ ಸಿರಮನು ನಿರ್ಮಿಸಿದ 'ಬೂದಿಹಾಳು' ಕೋಟೆಗೆ ತನ್ನ ಕೇಂದ್ರಸ್ಥಾನವನ್ನು ಸ್ಥಳಾಂತರಿಸಿದನು. ಸೂಜಿಕಲ್ಲು ಗ್ರಾಮದಲ್ಲಿ ಸಿರುಮನ ಮನೆದೇವರಾದ ಸೋಮೇಶ್ವರನ ದೇವಾಲಯವಿದೆ. ಕ್ರಿ.ಶ. ೧೮೦೧ರಲ್ಲಿ ಹೊಸದುರ್ಗ ತಾಲ್ಲೂಕಿನ ಕೆಲವು ಊರುಗಳಿಗೆ ಅಧ್ಯಯನಕ್ಕಾಗಿ ಭೇಟಿಯಿತ್ತಿದ್ದ ಫ್ರಾನ್ಸಿಸ್ ಬುಕಾನನ್‌ನು, ಬೂದಿಹಾಳು ಕೋಟೆಯು ೧೨೦೦೦ ಪಗೋಡಗಳಷ್ಟು ಆದಾಯವನ್ನು ಹೊಂದಿತ್ತೆಂದು ತನ್ನ 'ಎ ಜರ್ನಿ ಫ್ರಂ ಮದ್ರಾಸ್' ಎಂಬ ಗ್ರಂಥದಲ್ಲಿ ಹೇಳಿದ್ದಾನೆ. (ಉಲ್ಲೇಖ:- 'ಇತಿಹಾಸ ಕಥನ'-ಡಾ|| ಬಿ.ರಾಜಶೇಖರಪ್ಪ). ಸಿರುಮ ಮತ್ತು ಕುಮಾರಮಲ್ಲನ ಕಾಲದ ಶಾಸನಗಳು ಇಂದು ಲಭ್ಯವಾಗದಿದ್ದರೂ, ಅವರ ಬಗೆಗಿನ (ಸಿರುಮನ) ಸಾಂಗತ್ಯ ಕೃತಿಗಳು ಚರಿತ್ರೆ ಕಾವ್ಯಗಳಾಗಿದ್ದು, ಇತಿಹಾಸ ರಚನೆಗೆ ಸಹಾಯಕವಾಗಿವೆ. ನಾಡಿನ ಎಲ್ಲಾ ಸಂಶೋಧಕರು ಹಾಗೂ ಇತಿಹಾಸ ತಜ್ಞರು ಪ್ರಸ್ತುತ ಸಾಂಗತ್ಯ ಕೃತಿಗಳನ್ನು ಬೂದಿಹಾಳು ಚರಿತ್ರೆಯ ಕೃತಿಗಳೆಂದೇ ಪರಿಗಣಿಸಿದ್ದಾರೆ. ಬೂದಿಹಾಳಿನಲ್ಲಿ ವ್ಯಾಪಕ ಸಂಶೋಧನೆ-ಉತ್ಖನನ ನಡೆದಲ್ಲಿ ಸಿರುಮನ ಶಾಸನಗಳೂ ಲಭ್ಯವಾಗುವ ಸಾಧ್ಯತೆ ಇದೆ.

ತಾಲ್ಲೂಕಿನ ದೊಡ್ಡತೇಕಲವಟ್ಟಿಯಲ್ಲಿ ಕ್ರಿ.ಶ.೧೩೮೪ರ ವಿಜಯನಗರ ಕಾಲದ ವೀರಗಲ್ಲು ಶಾಸನವೊಂದಿದ್ದು, ಅದರಲ್ಲಿ ಹರಿಹರನ ಕುಮಾರ ಶ್ರೀವೀರಬುಕ್ಕರಾಯನು ಓರುಗಲ್ಲು ದೇಶಕ್ಕೆ ದಂಡೆತ್ತಿ ಹೋದಾಗ, ಕೊತ್ತಕೊಂಡದಲ್ಲಿ ಮುಸ್ಲಿಮರು ಬಂದು ಸೆಣಸಿದರೆಂದೂ, ಮುಸ್ಲಿಂದಳ ಭಯಂಕರ ಸಾಳುವ ರಾಮದೇವನು ಹೋರಾಡಿ ಮಡಿದನೆಂದೂ ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ವೀರ ಹರಿಹರರಾಯನ ಮನೆಯ ನಾಯಕಾಚಾರ್ಯ ದೋಣಮುಖ, ವೀರಮಾರರಾಹುತ, ಕಾಚಿನಾಯ್ಕನ ಕುಮಾರ ಬಾಚಯ್ಯನಾಯ್ಕನ ಮಗ ಕಂಪಣನ ಹೆಸರುಗಳಿವೆ. ಮುಸ್ಲೀಂಗುದುರೆ ಯೇರಿದಲ್ಲಿ ಸಾಳುವೆಯ ಕಾಯದೇವನ ಮಗ ಮಾಂಡಳಿಕ ಚಾಮೂಲಪಾಯಕ, ನಾಯಕ ಪೊಡೆಯ ರಾಮಗೊಂಡಯ್ಯ, ಮಿಣುವರಿಯ ಮಾಂಡಳಿಕ ಚಾಮೂಲ ಸಾಳುವನ ಸೇನಾನಿ ಹೋರಾಡಿದ ಬಗ್ಗೆ ಮಾಹಿತಿ ಇದೆ. ಬಲ್ಲಾಳ ಸಮುದ್ರದ ಕ್ರಿ.ಶ.೧೩೮೭ರ ಕೇಶವ ದೇವಸ್ಥಾನದ ಎದುರಿನ ಗರುಡಗಂಭದ ಕೆಳಗೆ ನೆಟ್ಟಿರುವ ಶಿಲಾಶಾಸನವು ವಿಜಯನಗರದ ಹರಿಹರನ ಕಾಲದ್ದು, ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಸಾಮ್ರಾಜ್ಯ ಸ್ಥಾಪಿಸಿ ಅಧಿಪತಿಯಾಗಿರುವ ಶ್ರೀವೀರಹರಿಹರರಾಯನು ಆಳುತ್ತಿರುವಾಗ, ಅವನ ಸಾಮಂತರಾದ ಚಾಲುಕ್ಯ ನಾರಾಯಣ ಚಾಲುಕ್ಯ ಚಕ್ರವರ್ತಿ ವೀರದೇವರಸರ ಕುಮಾರ ವಲ್ಲಭರಾಯನ ಧರ್ಮಾರ್ಥವಾಗಿ ಅವನ ಪ್ರಧಾನಿ ಪೆದ್ದರಸನು ಬಲ್ಲಾಳ ಸಮುದ್ರದ ಕೇಶವ ದೇವರ ನಿವಾಲ್ಯದ ದೀಪಮಾಲೆಯ ಶಿಲಾಸ್ತಂಭವನ್ನು

ಪ್ರತಿಷ್ಠಾಪಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ. ಕೇಶವದೇವರ ಅಮೃತಪಡಿಗೆ ಕೆಲವು ಗದ್ದೆ, ಬೀಜಾವರಿ(ಫಲವತ್ತಾದ) ತೋಟ ಹಾಗೂ ಹೊಲವನ್ನು ದತ್ತಿ ನೀಡಲಾಗಿರುವ ವಿವರವಿದ್ದು, ಹೊಲದ ಅಳತೆಯನ್ನು 'ಒಂದು ದಿನ ಒಂದು ಕೂರಿಗೇಲಿ ಬಿತ್ತುವಷ್ಟು ಭೂಮಿ' ಎಂದು ಹೇಳಿರುವುದು ಸ್ವಾರಸ್ಯವಾಗಿದೆ. ಆಗಿನ ಕಾಲದಲ್ಲಿ ಭೂಮಾಪನದ ವಿಧಾನವನ್ನು ಇದು ಸಂಕೇತಿಸುತ್ತದೆ. ಅಲ್ಲದೆ, ಈ ಧರ್ಮಶಾಸನದ ನಿಯಮವನ್ನು ಮುಂದೆ ಯಾವ ಯಾವ ಅರಸರುಗಳು ಇಲ್ಲಿ ಆಡಳಿತಕ್ಕೆ ಬಂದರೂ ಈ ಧರ್ಮಕ್ಕೆ ಸಹಾಯಕವಾಗಿ ಶಾಸನವನ್ನು ಪಾಲಿಸಬೇಕೆಂದು ಆಶಯದ ಷರಾ ಬರೆಯಲಾಗಿದೆ. ಇದೂ ಸಹ ವಿಶೇಷವಾದ ಅಂಶವೇ ಆಗಿದೆ.

ಮೇಲ್ಕಂಡ ಶಾಸನಗಳು ವಿಜಯನಗರದ ಸಂಗಮ ವಂಶಸ್ಥರ ಅರಸರ ಅವಧಿಯದ್ದಾಗಿದ್ದು, ಮುಂದೆ ತುಳುವ ವಂಶದ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯನ ಅಥವಾ ಅವನ ಪರವಾಗಿ ರಾಮರಾಯನ ಕಾಲದ ಕೆಲವು ಶಾಸನಗಳು ಹೊಸದುರ್ಗ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ಇರುವುದನ್ನು ಗಮನಿಸಬಹುದು. (ಸಾಳುವ ವಂಶದ ನರಸಿಂಹನ ಕಾಲದ ಇತಿಹಾಸವನ್ನು ಈಗಾಗಲೇ ಪ್ರಸ್ತಾಪಿಸಿರುತ್ತೆ.) ವಿಜಯನಗರದ ಅರಸರ, ಸಾಮಂತರ, ಮಾಂಡಳೀಕರು, ಮತ್ತಿತರ ಅಧಿಕಾರಿಗಳು ಹೊಸದುರ್ಗ ತಾಲ್ಲೂಕಿನ ವಿವಿಧ ಪ್ರದೇಶಗಳಲ್ಲಿ ಆಡಳಿತವನ್ನು ಮುಂದುವರೆಸಿದುದನ್ನು ಅನೇಕ ಶಿಲಾಶಾಸನ ಹಾಗೂ ತಾಮ್ರ ಶಾಸನಗಳಿಂದ ಅರಿಯಬಹುದು. ವಿಜಯನಗರ ಶೈಲಿಯ ಅನೇಕ ಗುಡಿ–ಗೋಪುರಗಳು, ಪುಷ್ಕರಣಿಗಳು, ಕೆರೆಗಳು ಇಂದಿಗೂ ಈ ಪ್ರದೇಶದಲ್ಲಿ ಕಾಣಸಿಗುತ್ತವೆ. ಕೆಲವು ಅಪ್ರಕಟಿತ ಶಾಸನಗಳನ್ನು ಸಂಶೋಧಕರಾದ ಹುಲ್ಲೂರು ಶ್ರೀನಿವಾಸ ಜೋಯಿಸರು, ಎಸ್.ಎಸ್.ಮಹಾಂತೇಶ್, ಲಕ್ಷ್ಮಣ್ ತೆಲಗಾವಿ, ಎಂ.ಹೆಚ್.ಕೃಷ್ಣ, ಬಿ.ರಾಜಶೇಖರಪ್ಪ, ಎಸ್. ವೈ.ಸೋಮಶೇಖರ್–ಕರ್ನಾಟಕ ದೇವಾಲಯದ ಕೋಶ:ಚಿತ್ರದುರ್ಗ ಜಿಲ್ಲೆ ಎಂಬ ಪುಸ್ತಕ ಹಾಗೂ ಬಾಗೂರು ಆರ್. ನಾಗರಾಜಪ್ಪ ಇವರು ಬೆಳಕಿಗೆ ತಂದಿರುತ್ತಾರೆ. ಪ್ರೊ॥ಹೆಚ್. ಶ್ರೀಶೈಲ ಆರಾಧ್ಯ ಅವರು ಕೆಲವು ಐತಿಹಾಸಿಕ ಅವಶೇಷಗಳನ್ನು ಪತ್ತೆ ಹಚ್ಚಿರುತ್ತಾರೆ. ಅಲ್ಲದೆ ಇತ್ತೀಚೆಗೆ ಡಾ॥ ಎನ್.ಎಸ್. ಮಹಂತೇಶ್ ಅವರು ಈ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳ ಕುರಿತು ಕ್ಷೇತ್ರಾಧ್ಯಯನ ನಡೆಸಿದ್ದಾರೆ. ವಿಜಯನಗರದವರಲ್ಲಿ, ಸಂಗಮ ವಂಶ ಮತ್ತು ಸಾಳುವ ವಂಶದ ತರುವಾಯ ಆಳಿದ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯನ ಅವಧಿಯ ಅನೇಕ ಶಿಲಾಶಾಸನ ಮತ್ತು ತಾಮ್ರ ಶಾಸನಗಳು ಹೊಸದುರ್ಗ ತಾಲ್ಲೂಕಿನಲ್ಲಿವೆ. ಬಹುಮಟ್ಟಿನ ಶಾಸನಗಳನ್ನು ಬಿ.ಎಲ್.ರೈಸ್ ಅವರು ಬೆಳಕಿಗೆ ತಂದಿರುತ್ತಾರೆ. ಕೃಷ್ಣದೇವರಾಯನ ಅವಧಿಯಲ್ಲಿನ ಮೂರು ಶಿಲಾಶಾಸನಗಳು ಬಾಗೂರು ಗ್ರಾಮದಲ್ಲಿ ಇದ್ದು, ಮತ್ತೋಡು ಗ್ರಾಮದಲ್ಲಿ ಎರಡು ತಾಮ್ರ ಶಾಸನಗಳು, ಬೂದಿಹಾಳು ಶ್ರೀರಾಂಪುರದಲ್ಲಿ ಒಂದು ತಾಮ್ರ ಶಾಸನವೂ, ಅಲ್ಲದೆ ಆಲದಹಳ್ಳಿ, ಹೊನ್ನೇನಹಳ್ಳಿ ಮತ್ತು ಗಂಗ ಸಮುದ್ರದಲ್ಲಿ

ತಲಾ ಒಂದೊಂದು ಶಿಲಾಶಾಸನಗಳೂ ಇವೆ. ಗಂಗ ಸಮುದ್ರವು ಬೇರೆ ತಾಲ್ಲೂಕಿನ ಗ್ರಾಮವಾಗಿದ್ದರೂ, ಈ ಗ್ರಾಮದ ಶಾಸನ ಬಾಗೂರಿಗೆ ಸಂಬಂಧಿಸಿದುದಾಗಿದೆ. ಕೃಷ್ಣದೇವರಾಯನ ಆಳ್ವಿಕೆಯ ಕಾಲ ಕ್ರಿ.ಶ. ೧೫೦೯ ರಿಂದ ೧೫೨೫ ರವರೆಗೆ. ತದನಂತರದ ಅಚ್ಯುತರಾಯನ ಕಾಲದ ಶಾಸನಗಳು ಈ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ೨, ಮಳಲಿ ಗ್ರಾಮದಲ್ಲಿ ೧, ಕಲ್ಕೆರೆ ಗ್ರಾಮದಲ್ಲಿ ೧ ಮತ್ತು ಬೂದಿಹಾಳು ಶ್ರೀರಾಂಪುರ ಗ್ರಾಮದಲ್ಲಿ ೧ ಇವೆ. (ಒಟ್ಟು ೫). ಸದಾಶಿವರಾಯನ ಆಳ್ವಿಕೆಯ ಕಾಲ (ಕ್ರಿ.ಶ.೧೫೪೨ ರಿಂದ ೧೫೬೫ ರವರೆಗೆ)ದ ಶಾಸನಗಳು ಬಾಗೂರಿನಲ್ಲಿ ೫ ಹಾಗೂ ಬೂದಿಹಾಳು (ಶ್ರೀರಾಂಪುರ)ದಲ್ಲಿ ೨ ಹೀಗೆ ಒಟ್ಟು ೭ ಸಂಖ್ಯೆಯಲ್ಲಿವೆ. ೧೮೯೨ರಲ್ಲಿ ಬೂದಿಹಾಳಿನ ಪ್ರಜಾಸಂಖ್ಯೆ ೧೨೦೯ ಇದ್ದಿತು. ಒಟ್ಟಾರೆ, ವಿಜಯನಗರದವರ ಕಾಲಕ್ಕೆ ಸಂಬಂಧಿಸಿರುವ ಒಟ್ಟು ೨೫ಕ್ಕೂ ಹೆಚ್ಚು ಶಾಸನಗಳು ಹೊಸದುರ್ಗ ತಾಲ್ಲೂಕಿನಲ್ಲಿವೆ. ಇವುಗಳಲ್ಲಿ ಕೆಲವು ಅಸ್ಪಷ್ಟವಾಗಿವೆ. ಮತ್ತೆ ಕೆಲವು ಭಾಗಶಃ ಮಾತ್ರ ಪಠ್ಯವನ್ನು ಹೊಂದಿವೆ.

### ಕೃಷ್ಣದೇವರಾಯನ ಕಾಲದ ಶಾಸನಗಳು

ಕ್ರಿ.ಶ. ೧೫೧೬ರ ಬಾಗೂರು ಶಾಸನದಲ್ಲಿ ಮೊದಲ ಮೂರು ಪಂಕ್ತಿ ಮಾತ್ರ ಇದೆ. ಅದೇ ವರ್ಷದ ಆಲದಹಳ್ಳಿ ಶಾಸನವು ವಿಶೇಷವಾದುದಾಗಿದೆ. ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ಪ್ರಧಾನಿ ಬಾಗೂರು ಮಲ್ಲರಸನು ಮಲ್ಲಿಕಾರ್ಜುನ ದೇವರ ಛತ್ರವನ್ನು ಕಟ್ಟಿಸಲು ಆಲದಹಳ್ಳಿ ಗ್ರಾಮವನ್ನು ದತ್ತಿ ನೀಡಿದ ಬಗ್ಗೆ ತಿಳಿಸುವುದು. ದೇವಾಲಯವೊಂದರ ಛತ್ರವನ್ನು ಕಟ್ಟಲು ಗ್ರಾಮದತ್ತಿ ನೀಡಿರುವ ಪ್ರಸಂಗ ಅಪರೂಪದ್ದಾಗಿದೆ. ಹೊನ್ನೇನಹಳ್ಳಿಯ ಕ್ರಿ.ಶ. ೧೫೧೮ರ ಶಾಸನವು, ಕೃಷ್ಣದೇವರಾಯನ ಪ್ರಧಾನಿ ಬಾಗೂರು ಮಾರಸಯ್ಯಗೆ ಧರ್ಮವಾಗಲೆಂದು ಸಾಮಂತ ವಾಮರಸನು ಕೆರೆಯನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದ ಬಗ್ಗೆ ತಿಳಿಸುವುದು. ಇದೇ ವಾಮರಸನು ಈಗಿನ ಹೊಸದುರ್ಗ ತಾಲ್ಲೂಕಿಗೆ ಸೇರಿಲ್ಲದ ಗಂಗಸಮುದ್ರ ಕೆರೆಯನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದ ಬಗ್ಗೆ ಅಲ್ಲಿನ ಕ್ರಿ.ಶ. ೧೫೧೯ರ ಶಾಸನ ಸಾರುವುದು. (ಗಂಗಸಮುದ್ರವು ಹಿಂದಿನ ಕಾಲದಲ್ಲಿ ಬಾಗೂರಿನ ವ್ಯಾಪ್ತಿಗೆ ಸೇರಿದ್ದಿತು) ಕ್ರಿ.ಶ. ೧೫೨೩ರ ಬಾಗೂರು ಶಾಸನದಲ್ಲಿ ಕೃಷ್ಣದೇವರಾಯನ ಸಾಮಂತದೊರೆ ಬಸವಪ್ಪಯ್ಯನು ಆಳುತ್ತಿರುವಾಗ, ಅವನ ಶ್ರೇಯಸ್ಸಿಗಾಗಿ ಬೊಕ್ಕಸದ ಕವಾಯಿತಿಮ್ಮಪ್ಪನು ದೇವಸ್ಥಾನವನ್ನು ಕಟ್ಟಿಸಿ, ದೇವರ ಸೇವಾ ನಿರ್ವಹಣೆಗಾಗಿ ರಾಮಗಿರಿ ಸೀಮೆಯ ಹೊನ್ನಗೊಂಡನಹಳ್ಳಿಯನ್ನು ದತ್ತಿ ನೀಡಿರುವುದನ್ನು ತಿಳಿಸಿದ್ದು, ಶಾಸನದ ಕಡೆಯಲ್ಲಿನ ಶಾಪಾಶಯ ಉಕ್ತಿಯು ತುಂಬ ವಿಚಿತ್ರವಾದುದಾಗಿದೆ. 'ಈ ಶಾಸನಕ್ಕೆ ತಪ್ಪಿ ನಡೆಯುವವರು ಅವರ ಹೆಂಡಿರನು ಬಾಗೂರ ಹೊಲೆಮಾದಿಗರಿಗೆ

ಕೊಟ್ಟವರು' ಎಂದು ತೀಕ್ಷ್ಣವಾದ ಎಚ್ಚರಿಕೆಯನ್ನು ನೀಡಲಾಗಿದೆ. ಯುವನಾಮ ಸಂವತ್ಸರದ, ಬಾಗೂರು ಗ್ರಾಮದ ಮತ್ತೊಂದು ಶಾಸನವು ಕೃಷ್ಣದೇವರಾಯನ ಕಾಲದಲ್ಲಿ ಬಾಗೂರಿನ ಮಲ್ಲರಸನು ಸಿಂಗಾರತೋಪು ನಿರ್ಮಿಸಿ ಅದಕ್ಕೆ **'ಮಲ್ಲರಸನ ತೋಪು'** ಎಂದು ಹೆಸರಿಟ್ಟನೆಂದು ತಿಳಸುತ್ತದೆ. ಬಾಗೂರು ಮಲ್ಲರಸನು ಕ್ರಿ.ಶ.೧೫೧೫ ರಲ್ಲಿ ಜಾಜೂರಿನ (ಹೊಳಲ್ಕೆರೆ ತಾಲ್ಲೂಕು) ಗವಿಯ ತಿರುಮಲ ದೇವರಿಗೆ ತೇಗದ ಹಳ್ಳಿಯನ್ನು ದತ್ತಿ ನೀಡಿದ್ದನು. ೧೫೧೮ರಲ್ಲಿ ರಾಮಗಿರಿಯ ರಾಮಲಿಂಗ ದೇವರಿಗೆ ಬೆಳಗಿನ ಪೂಜೆಗೆ ಮೊಸರನ್ನ ಅರ್ಪಿಸುವ ವೆಚ್ಚಕ್ಕಾಗಿ ರಾಮಗಿರಿ ಸಂತೆಸುಂಕಗಳನ್ನು ದತ್ತಿ ನೀಡಿದನು. (ರಾಮಗಿರಿ ಈಗ ಹೊಳಲ್ಕೆರೆ ತಾಲ್ಲೂಕಿಗೆ ಸೇರಿದೆ).

ಕೃಷ್ಣದೇವರಾಯನ ಕಾಲದ ಮೂರು ತಾಮ್ರಶಾಸನಗಳು ಈ ತಾಲ್ಲೂಕಿನಲ್ಲಿ ಕಂಡು ಬಂದಿದ್ದು, ಬೂದಿಹಾಳಿನ ತಾಮ್ರಶಾಸನವು ಅಲ್ಲಿನ ಲಖುಮಾಪುರ ಎಂಬ ಗ್ರಾಮಕ್ಕೆ 'ಕೃಷ್ಣರಾಯ ಸಮುದ್ರ' ಎಂದು ಪುನರ್ನಾಮಕರಣ ಮಾಡಿ, ಅದನ್ನು ಅಗ್ರಹಾರವನ್ನಾಗಿಸಿ, ಸೀಮಾವಲಯದ ವಿವರಗಳನ್ನು ಮತ್ತು ಅಲ್ಲಿ ಇರುವ ಬ್ರಾಹ್ಮಣ ಪಂಡಿತರುಗಳ ಹೆಸರುಗಳನ್ನು ಗೋತ್ರಗಳ ಸಹಿತ ಪಟ್ಟಿ ಮಾಡಲಾಗಿದೆ. ಇದೇ ರೀತಿ, ಮತ್ತೊಂದು ತಾಮ್ರಪಟದಲ್ಲಿ, ಹಿರಿಯೂರು ಪ್ರಾಂತ್ಯದ ಒಬ್ಬೂರಿಗೆ **'ಕೃಷ್ಣರಾಯಪುರ'** ಎಂದು ಪುನರ್ನಾಮಕರಣ ಮಾಡಿ, ಸೀಮಾವಲಯ ವಿವರ ಹಾಗೂ ಆ ಅಗ್ರಹಾರದಲ್ಲಿನ ವಿದ್ವಾಂಸ ಬ್ರಾಹ್ಮಣರುಗಳ ಹೆಸರು, ಗೋತ್ರಗಳ ವಿವರಗಳನ್ನು ನೀಡಲಾಗಿದೆ. ಮತ್ತೋಡಿನ ಮತ್ತೊಂದು ತಾಮ್ರಶಾಸನ ಅಪೂರ್ಣವಾಗಿದೆ (ಕೃಷ್ಣದೇವರಾಯನ ಹೆಸರಿದೆ).

**ಅಚ್ಯುತರಾಯನ ಕಾಲದ ಶಾಸನಗಳು**: ಬಾಗೂರಿನ ಕ್ರಿ.ಶ.೧೫೨೦ರ ಶಿಲಾಶಾಸನವು ಅದೇ ಗ್ರಾಮದ ಚಂದ್ರಾಪುರಿ ಊರಬಾಗಿಲಲ್ಲಿ (ಬಯಲು ಬಸವಣ್ಣನ ಎದುರು) ಇದೆ. ಅಚ್ಯುತರಾಯನು ವಿದ್ಯಾನಗರವನ್ನು ಆಳುತ್ತಿರುವಾಗ ಅವನ ಸಾಮಂತನಾಗಿದ್ದ ಪೆನುಗೊಂಡೆಯ ವೀರಪ್ಪಣ್ಣನು ಅವನ ತಮ್ಮನಾದ ಹಿರಿಯ ಮಲ್ಲಪ್ಪಣ್ಣನ ಮೂಲಕ ನಿರೂಪವನ್ನು ಜಾರಿಗೊಳಿಸಿ, ಬಾಗೂರು ಸೀಮೆಯ ವಳಿತದಲ್ಲಿ ಮದುವೆ ಸುಂಕವನ್ನು ತೆಗೆದು ಹಾಕಿದನು. ಇದರಿಂದ ಸಂತಸಗೊಂಡ ಸೀಮೆಯ ಹಿರಿಯ ಬ್ರಾಹ್ಮಣರು, ಗೌಡ–ಶ್ಯಾನುಭೋಗ–ಸೆಟ್ಟಿ–ಪಟ್ಟಣಸ್ವಾಮಿಗಳು–ಪ್ರಜೆಗಳು ಹಾಗೂ ಹಲವಾರು ಮಹಾಸ್ವಾಮಿಗಳು ಶುಭವನ್ನು ಕೋರಿದ್ದಾರೆ. ಹೀಗೆ ಮದುವೆ ಸುಂಕವನ್ನು ಸರ್ವಮಾನ್ಯವಾಗಿ ರದ್ದುಗೊಳಿಸಲು ದುಮ್ಮಿಯ ಪಟ್ಟಣಸ್ವಾಮಿ, ಮಾಳಸೆಟ್ಟಿಯರ ಮಕ್ಕಳು ನಾಡ ಪಟ್ಟಣಸ್ವಾಮಿ, ವೀರಶೆಟ್ಟರು ಕಾರಣರು ಎಂದು ಹೇಳಿದೆ. ಈ ಶಾಸನಕ್ಕೆ ಯಾರಾದರೂ ಅಪಚಾರ ಮಾಡಿದಲ್ಲಿ 'ನಾಯಮಾಂಸವನು ಹೆಂಡವನು ತೆಂಕ ಮುಂದಾಗಿ ಕುಡಿಯುತ್ತ ಹೋಹರು, ಕತ್ತೆಯ......ತಿಂದವರು' ಎಂದು ಕಠಿಣ ಶಬ್ದಗಳಲ್ಲಿ ಎಚ್ಚರಿಕೆ ನೀಡಿರುವುದು ವಿಚಿತ್ರವೆನ್ನಿಸುತ್ತದೆ. ಈ ಶಾಸನವನ್ನು ಬರೆದವನು

ವಿದ್ಯಾನಗರಿಯ ನಾಗಣಾಚಾರಿ ಎನ್ನಲಾಗಿದೆ.

ಕ್ರಿ.ಶ. ೧೫೩೩ರ ಬಾಗೂರಿನ ಚನ್ನಕೇಶವ ದೇವಾಲಯದ ಎದುರಿನ ಗರುಡ ಗಂಭದ ಶಾಸನವು ಪ್ರಧಾನಿ ಅಯ್ಯಪ್ಪರಸನ ಪುಣ್ಯಾರ್ಥವಾಗಿ ಸಾಮಂತ (ಅಧಿಕಾರಿ) ವಿಶ್ವನಾಥಯ್ಯನು ಸಲ್ಲಿಸಿದ ಗರುಡ ಗಂಭದ ಸೇವೆ ಎಂದು ಉಲ್ಲೇಖಿಸುತ್ತದೆ. ಮಳಲಿ ಗ್ರಾಮದಲ್ಲಿರುವುದು ತಾಮ್ರ ಶಾಸನವಾಗಿದ್ದು, ಐದು ತಾಮ್ರ ಪತ್ರಗಳಲ್ಲಿ ಒಟ್ಟು ೧೭೬ ಸಾಲುಗಳಲ್ಲಿರುವ ನಾಗರಾಕ್ಷರದ ಶಾಸನವಾಗಿದೆ. ಕ್ರಿ.ಶ. ೧೫೩೩ರ ಈ ಶಾಸನದಲ್ಲಿ ಮುಖ್ಯವಾಗಿ ಹೊಯ್ಸಳ ರಾಜ್ಯದ ಯಕ್ಕಟಿ ವಳಿತದ ನೀರುಗುಂದದ ಸೀಮಾವಲಯ (ಚೆಕ್ಕುಬಂದಿ)ವನ್ನು ಹೇಳಲಾಗಿದ್ದು ಶ್ರೀಸಂಗಯ್ಯನಹಳ್ಳಿ, ಮಾರಗೊಂಡನಹಳ್ಳಿ, ಚನ್ನಸಮುದ್ರ, ಗೋತ್ರಗುಡ್ಡ, ಕೆಲ್ಲನಡು, ಶ್ರೀಮೆಟ್ಟಿನಹೊಳೆ, ಶ್ರೀನಾಗಯ್ಯನಹಳ್ಳ, ಕಟಿಕನಕೆರೆ, ಯಿಮಾಂಬಿಕಾ ಸಮುದ್ರ ಹಾಗೂ ಕೇದಗ್ಗೆರೆ ಗ್ರಾಮಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. (ಇವುಗಳಲ್ಲಿ ಗೋತ್ರಗುಡ್ಡ ಮತ್ತು ಯಿಮಾಂಬಿಕಾ ಸಮುದ್ರ ಗ್ರಾಮಗಳು ಈಗ ಇಲ್ಲ) ಅಲ್ಲದೆ, ಅಲ್ಲಿ ನೆಲೆಸಿದ್ದ ವೇದ ಪಾರಂಗತರಾದ ಬ್ರಾಹ್ಮಣರುಗಳ ಹೆಸರು–ಕುಲ–ಗೋತ್ರಗಳನ್ನು ವಿವರಿಸಲಾಗಿದೆ.

"ವೇದಾವತೀ ನದೀತೀರ ವಾಸಿನ: ಕರುಣಾನಿಧೇ: ಮಲ್ಲಿಕಾರ್ಜುನ ದೇವಸ್ಯ" ಹಾಗೂ "ಕೇದಗ್ಗೆರೇ ಗ್ರಾಮಂ ಸರ್ವಸಸ್ಯಸಮನ್ವಿತಂ" ಎಂಬ ಶ್ಲೋಕದ ಪಂಕ್ತಿಗಳು ಆಕರ್ಷಕವಾಗಿವೆ. ಶಾಸನ ಬರೆದವನು ಮಲ್ಲಣನ ಮಗ ವೀರಣಾಚಾರ್ಯ, ಈ ಶಾಸನದಲ್ಲಿ ಹೇಳಲಾಗಿರುವ ಬ್ರಾಹ್ಮಣರುಗಳು ನೀರುಗುಂದದ (ಮಳಲಿ) ಅಗ್ರಹಾರದಲ್ಲಿದ್ದ ಪಂಡಿತರುಗಳೆಂದು ಖಚಿತವಾಗಿದೆ. ಕಲ್ಲಕೆರೆ ಗ್ರಾಮದ ಕ್ರಿ.ಶ. ೧೫೩೫ರ ಶಿಲಾಶಾಸನದಲ್ಲಿ ಅಚ್ಯುತರಾಯನ ಸಾಮಂತ ತಿರಗರಸನು, ಬೂದಿಹಾಳು ಸೀಮೆಯೊಳಗಣ ಕಲ್ಲಕೆರೆ ಗ್ರಾಮವನ್ನು ಶ್ರೀ ಬನದ ಚೌಡೇಶ್ವರಿ ದೇವರಿಗೆ ದತ್ತಿ ನೀಡಿರುವುದನ್ನು ಹೇಳಲಾಗಿದೆ. ಅಚ್ಯುತರಾಯನ ಧರ್ಮಾರ್ಥವಾಗಿ ಮಾಗಣೇಕಾರ ಬಯಕಾರ ರಾಮಪ್ಪಯ್ಯನು ಪ್ರಸ್ತುತ ಧರ್ಮಾಶಾಸನವನ್ನು ಹಾಕಿಸಿದನು.

ಇದೇ ಕ್ರಿ.ಶ. ೧೫೩೫ರ ಮತ್ತೊಂದು ಶಾಸನ ಬೂದಿಹಾಳು (ಶ್ರೀರಾಂಪುರ) ಗ್ರಾಮದಲ್ಲಿದ್ದು, ಅಚ್ಯುತರಾಯನಿಗೆ ಅನೇಕ ಪುಣ್ಯವಾಗಲೆಂದು ಮದುವೆಯ ಸುಂಕ(ಗೌಡುವಣ), ತಳವಾರಿಕೆಯ ಸುಂಕ, ಅಕ್ಕಸಾಲೆ ಸುಂಕ, ಕೆರೆಯ ಬಂಡಿಯ ಸುಂಕ ಮುಂತಾದ ಸುಂಕಗಳನ್ನು ರದ್ದುಗೊಳಿಸಿದ ಮಾಗಣೇಕಾರ ಬಯಕಾರ ರಾಮಪ್ಪನ ಧಾರ್ಮಿಕ ಮನೋಭಾವವನ್ನು ಎತ್ತಿ ಹಿಡಿಯುತ್ತದೆ. ಹೀಗೆ ದಕ್ಷನಾಗಿದ್ದ ಮಾಗಣೇಕಾರನೊಬ್ಬ ಸಾಮ್ರಾಜ್ಯದ ಆಡಳಿತ ನಡೆಸಿದ ಬಗೆಗಿನ ಎರಡು ಶಾಸನಗಳನ್ನು ಈ ಪ್ರದೇಶದಲ್ಲಿ ಕಾಣಬಹುದಾಗಿದೆ.

**ಸದಾಶಿವರಾಯನ ಕಾಲದ ಶಾಸನಗಳು**

ಬಾಗೂರಿನ ಕ್ರಿ.ಶ.೧೫೪೭ರ ಶಿಲಾಶಾಸನದಲ್ಲಿ ಸದಾಶಿವರಾಯನು ಬಾಗೂರು ಸೀಮೆಯಲ್ಲಿ ನಾಯಿಂದ ತೆರಿಗೆ, ಬಿರಾಡ(ಬಿಡಾರ)ಸುಂಕ, ತಳವಾರಿಕೆ ಸುಂಕ ತೆಗೆದುಹಾಕಲು ರಾಮರಾಜಯ್ಯನ ಮೂಲಕ ನಿರೂಪ ಕಳಿಸಿದನು. ಅದರಂತೆ ಬಾಗೂರು ಸೀಮೆಯ ಸಾಮಂತ ಯರೆ ಕೃಷ್ಣಪ್ಪನಾಯಕನು ಆ ತೆರಿಗೆಗಳನ್ನು ರದ್ದುಗೊಳಿಸಿ ಶಾಸನ ಹೊರಡಿಸಿದನು. ಮೇಲ್ಕಂಡ ತೆರಿಗೆಗಳ ರದ್ದತಿಗೆ ವಿಜಯನಗರದ ಅಧಿಕಾರಿ ಕೊಂಡೋಜನು ಕಾರಣನೆಂದು ಒಕ್ಕಣೆ ಇದೆ. ಇವನು ನಾಯಿಂದ ಸುಂಕವನ್ನು ತೆಗೆಸಲು ಮುಖ್ಯ ಕಾರಣವೆಂದರೆ, ಸ್ವತಃ ಕೊಂಡೋಜ ಹಾಗೂ ಯರೆ ಕೃಷ್ಣಪ್ಪನಾಯಕ ಇಬ್ಬರೂ ನಾಯಿಂದರು ಎಂಬುದು ಬೇರೆಡೆಗಳಲ್ಲೂ ಇವರು ಈ ತೆರಿಗೆಯನ್ನು ಮನ್ನಾ ಮಾಡಿಸಿದ್ದಾರೆ. ಬಾಗೂರಿನ ಈ ಅವಧಿಯ ಇನ್ನುಳಿದ ನಾಲ್ಕು ಶಾಸನಗಳಲ್ಲಿ, ಒಂದು ಶಾಸನದಲ್ಲಿ ಬಾಗೂರಿನಲ್ಲಿ ಹಾಳಾಗಿದ್ದ ಹೊರಪೇಟೆಯನ್ನು ಕಟ್ಟಿಸಿ ಅದಕ್ಕೆ 'ಕೃಷ್ಣಾಪುರ' (ಕೃಷ್ಣಪ್ಪನಾಯಕನ ನೆನಪಿಗೆ) ಎಂದು ನಾಮಕರಣ ಮಾಡಿ, ಅಲ್ಲಿ ನೆಲೆಸುವವರಿಗೆ ಒಂದು ವರ್ಷಕಾಲ ಸುಂಕಗಳಿಂದ ವಿನಾಯಿತಿ ಪ್ರಕಟಿಸಿದ ಬಗ್ಗೆ ಮಾಹಿತಿ ಇದೆ. ಇದರಲ್ಲಿ ಪೋತಪ್ಪನಾಯಕನ ಹೆಸರು, ಸಾಮಂತ ವೀರಣ್ಣನಾಯಕನ ಹೆಸರು ಹಾಗೂ ಅನೇಕ ಗೌಡ ಪ್ರಜೆಗಳ ಹೆಸರುಗಳಿವೆ. ಮತ್ತೊಂದು ಶಾಸನವು, ಸಾಮಂತ ಕೊಂಡರಾಜನು ಕೃಷ್ಣಪ್ಪನಾಯಕನ ಹೆಸರಿನಲ್ಲಿ ಬಾಗೂರಿನ ಚನ್ನಕೇಶವ ದೇವರಿಗೆ ಅರಳಹಳ್ಳಿ, ಮಧುರೆ, ನಾಗೇನಹಳ್ಳಿ, ಕೃಷ್ಣಾಪುರ, ಕುಂದೂರು, ಆದ್ರಿಕಟ್ಟೆ ಮುಂತಾದ ಗ್ರಾಮಗಳನ್ನು ವಿವಿಧ ಸೇವೆಗಳಿಗಾಗಿ ದತ್ತಿ ನೀಡಿದ ಬಗ್ಗೆ ಇದೆ. ಗದ್ದೆಗಳನ್ನು ಆಕಳುಗಳನ್ನು ದತ್ತಿ ಬಿಡಲಾದ ಸಂಗತಿ ಇದರಲ್ಲಿದೆ. ಸದಾಶಿವರಾಯನಿಗೆ ಪುಣ್ಯವಾಗಲೆಂದು ಕೃಷ್ಣಾಪುರವನ್ನು ಚನ್ನಿಗದೇವರಿಗೆ ದತ್ತಿ ಬಿಟ್ಟಿರುವ ಮತ್ತೊಂದು ಶಾಸನವಿದೆ. ಊರ ಹೊರಗಿರುವ ಅಂತರಘಟ್ಟಮ್ಮ ಗುಡಿ ಹತ್ತಿರದ ಶಾಸನ ಅಸ್ಪಷ್ಟವಾಗಿದ್ದು, 'ಅಮ್ಮ'ನಿಗೆ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.

ಮಗರನಾಡು ಬೂದಿಹಾಳು(ಈಗಿನ ಶ್ರೀರಾಂಪುರ) ಸೀಮೆಯ ಎರಡು ಶಾಸನಗಳು ಸಹ ಮಹಾ ಮಂಡಲೇಶ್ವರ ಶ್ರೀಪತಿರಾಜನಿಗೆ ಪುಣ್ಯಕೋರಿ ಲಕ್ಷ್ಮೀನಾರಾಯಣ ದೇವರು, ಗಣೇಶ್ವರ-ಗವರೇಶ್ವರ ದೇವರುಗಳಿಗೆ ನಾಡಿನ ಗೌಡ ಮುಖಂಡರುಗಳ ಸಮ್ಮುಖದಲ್ಲಿ ದತ್ತಿಗಳನ್ನು ಬಿಟ್ಟ ವಿಚಾರವನ್ನು ತಿಳಿಸುತ್ತವೆ. (ಒಂದು ಶಾಸನದಲ್ಲಿ ಬೂದಿಹಾಳು ಸಿರುಮ ನಾಯಕನ ತಮ್ಮ ಮಲ್ಲರಸನ ಹೆಸರಿದೆ). ಬಾಗೂರು ಗ್ರಾಮವೊಂದರಲ್ಲೇ ಕೃಷ್ಣದೇವರಾಯನ ೩ ಶಾಸನ, ಅಚ್ಯುತರಾಯನ ೨ ಶಾಸನ ಹಾಗೂ ಸದಾಶಿವರಾಯನ ೫ ಶಾಸನಗಳು ಹೀಗೆ ವಿಜಯನಗರದವರ ಕಾಲದ ಒಟ್ಟು ೧೦ ಶಾಸನಗಳಿರುವುದು ಗಮನಾರ್ಹ. ಅಲ್ಲದೆ, ಇಲ್ಲಿನ ಚನ್ನಕೇಶವ ದೇವಸ್ಥಾನದ ಆವರಣದಲ್ಲಿ ಕೊಂಡೋಜನ ಉಬ್ಬುಶಿಲ್ಪ ಹಾಗೂ ಅವನ ಹೆಸರನ್ನು ಕಾಣಬಹುದು. ಗುಡಿ ಪ್ರಾಕಾರದ ದ್ವಾರದ ಒಳ ಮುಖದಲ್ಲಿ ನಾಲ್ವರು ಪಾಳೆಯಗಾರರು ಹಾಗೂ ಒಬ್ಬ ಮಹಿಳೆಯ ಉಬ್ಬುಕೆತ್ತನೆಯ ಏಕಶಿಲ್ಪ (ಗುಂಪುಶಿಲ್ಪ) ವಿದೆ.

ಈ ತಾಲ್ಲೂಕಿನ ಅನೇಕ ದೇವಾಲಯಗಳು ವಿಜಯನಗರ ಶೈಲಿಯಲ್ಲಿವೆ. ಒಟ್ಟಾರೆ, ವಿಜಯನಗರದವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಈ ತಾಲ್ಲೂಕಿನ ವಿವಿಧೆಡೆಗಳಲ್ಲಿ ಗ್ರಾಮನಿರ್ಮಾಣ, ಕೆರೆಗಳ ಜೀರ್ಣೋದ್ಧಾರ, ದೇವಾಲಯಗಳ ನಿರ್ಮಾಣ/ಜೀರ್ಣೋದ್ಧಾರ, ಛತ್ರ ನಿರ್ಮಾಣ, ಮದುವೆ ಸುಂಕ, ಬಿಡಾರ ಸುಂಕ ಹಾಗೂ ನಾಯಿಂದ ಸುಂಕಗಳ ಮನ್ನಾ ಮಾಡಿರುತ್ತಾರೆ. ಅಗ್ರಹಾರಗಳನ್ನು ಸ್ಥಾಪಿಸಿ ಶಿಕ್ಷಣಕ್ಕೆ ಆದ್ಯತೆ ನೀಡಿರುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ. ದೇವಸ್ಥಾನಗಳಿಗೆ ಗ್ರಾಮಗಳ ದತ್ತಿ ನೀಡಿರುವುದು ಅವರ ಧಾರ್ಮಿಕ ಶ್ರದ್ಧೆಗೆ ತಕ್ಕ ಪುರಾವೆಯಾಗಿದೆ. ವಿಜಯನಗರೋತ್ತರ ಕಾಲದ ಶಾಸನಗಳು ಈ ತಾಲ್ಲೂಕಿನ ಬಾಗೂರು (೧೫೭೧), ಹೆಗ್ಗೆರೆ (೧೫೭೮), ಗರಗ (೧೬೩೫), ಜೋಡಿಶ್ರೀರಂಗಪುರ(೧೭೦೨), ಬೋಕಿಕೆರೆ (೧೭೪೩,) ಬಲ್ಲಾಳಸಮುದ್ರ, (ಮೊಗಲರದು,) ಹೊಸದುರ್ಗ, ಕೆಲ್ಲೋಡು, ಕಬ್ಬಿನಕೆರೆ, ಕೋಡಿಹಳ್ಳಿ (ನೀರ್ಗುಂದ ಹತ್ತಿರ), ಕಂಚೀಪುರ, ಅರೆಹಳ್ಳಿಗೊಲ್ಲರಹಟ್ಟಿ, ಸೋಮಸಂದ್ರ ಮುಂತಾದ ಗ್ರಾಮಗಳಲ್ಲಿವೆ. ಬಾಗೂರು ಕೇಶವದೇವರ ಗುಡಿಯಲ್ಲಿ ಲೋಹದ ಶಾಸನಗಳಿವೆ (ಹರಿವಾಣ, ತೇರಿನಕಳಸ, ಇತ್ಯಾದಿಗಳಲ್ಲಿ) ಶ್ರೀರಾಂಪುರ ಮತ್ತು ಅರೆಹಳ್ಳಿಗೊಲ್ಲರಹಟ್ಟಿಯಲ್ಲಿ ಲೋಹದ ಕುದುರೆಯ ಮೇಲೆ ಶಾಸನವಿದೆ. ಕಂಚೀಪುರ ಹಾಗೂ ಕಂಚೀದೇವರ ಬೆಟ್ಟದಲ್ಲಿರುವ ನಾಡ ಕಬ್ಬಿಣದ ೩ ದೀಪಾಲೆ ಕಂಬಗಳಲ್ಲಿ ಶಾಸನ ಇದೆ. ಬೂದಿಹಾಳು ಶ್ರೀರಾಂಪುರ, ಬಾಗೂರು ಹಾಗೂ ಮೈಲಾರಪುರ ಇಲ್ಲಿ ಮುದ್ರೆಯುಂಗುರ ಹಾಗೂ ವೀರಭದ್ರನಹಲಗೆ (ಲೋಹ)ಯಲ್ಲಿ ಶಾಸನವಿದೆ. ಮತ್ತೋಡಿನಲ್ಲಿ ರುಬ್ಬುಕಲ್ಲಿನ ಮೇಲೆ, ಕಂಗುವಳ್ಳಿಯಲ್ಲಿ-ಬೀಸೆಕಲ್ಲು-ಒರಳು ಕಲ್ಲಿನ ಮೇಲೆ ಶಾಸನಗಳಿವೆ. ಅಲ್ಲದೆ ವೀರಗಲ್ಲುಗಳು-ಮಾಸ್ತಿಕಲ್ಲು ಮುಂತಾದ ಐತಿಹಾಸಿಕ ಅವಶೇಷಗಳು ತಾಲ್ಲೂಕಿನಲ್ಲಿ ಹೇರಳವಾಗಿದ್ದು, ಇವೆಲ್ಲವು ಈ ಪ್ರದೇಶದ ಗತಕಾಲದ ಇತಿಹಾಸ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಕೆಲವು ಪುಷ್ಕರಣಿಗಳು, ಬಾವಿ-ಕೆರೆ ಕಟ್ಟೆಗಳೂ ಗಮನಾರ್ಹವಾಗಿದೆ.

### ಮತ್ತೋಡು ಪಾಳೆಯಗಾರರು

ವಿಜಯನಗರೋತ್ತರ ಕಾಲದಲ್ಲಿ ಈ ತಾಲ್ಲೂಕಿನಲ್ಲಿ ಆಳಿದ ಬಹುಮುಖ್ಯವಾದ ಪಾಳೆಯಗಾರರೆಂದರೆ ಮತ್ತೋಡು ಪಾಳೆಯಗಾರರು. ಇವರ ಆಳ್ವಿಕೆಯ ಇತಿಹಾಸವು ಕ್ರಾಂತಿಕಾರಿ ಅಂಶಗಳಿಂದ ಕೂಡಿದ್ದು, ಇವರಿಗೆ ಸಂಬಂಧಿಸಿದ ಅನೇಕ ಶಿಲಾಶಾಸನ ಹಾಗೂ ತಾಮ್ರದ ಶಾಸನಗಳು ಈ ತಾಲ್ಲೂಕಿನ ಮತ್ತೋಡು, ಅರೆಹಳ್ಳಿ, ವೊಟ್ರಗೊಂಡನಹಳ್ಳಿ ಅಲ್ಲದೆ ಹೊಳಲ್ಕೆರೆ, ಹಿರಿಯೂರು ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಕಂಡುಬರುತ್ತವೆ. ಮತ್ತೋಡು ಪಾಳೆಯಪಟ್ಟು ಹೊಸದುರ್ಗ ತಾಲ್ಲೂಕಿನ ಏಕೈಕ ನದಿಯಾದ ವೇದಾವತಿಯ ತೀರಪ್ರದೇಶದಲ್ಲಿ ಉಗಮಿಸಿದ

ಸಂಸ್ಕೃತಿಯಾಗಿದ್ದು, ಈ ಪಾಳೆಯಗಾರರು ಕ್ರಿ.ಶ.೧೬೦೪ ರಿಂದ ೧೭೭೯ ರವರೆಗೆ ಒಟ್ಟು ೧೭೫ ವರ್ಷಗಳ (ಒಂದೂ ಮುಕ್ಕಾಲು ಶತಮಾನ) ಕಾಲ ಇಲ್ಲಿ ಯಶಸ್ವಿಯಾಗಿ ಆಳ್ವಿಕೆ ಮಾಡಿದರು. ಈ ಪಾಳೆಯಗಾರರ ಮೂಲ ಪುರುಷನಾದ ಗಿರಿಯಪ್ಪ ನಾಯಕನು ಬೇಡ ಜನಾಂಗದವನಾಗಿದ್ದು, ಮಹಾಶೂರನಾಗಿದ್ದನು. ವಿಜಯನಗರದ ಪೆನುಗೊಂಡೆಯ ರಾಜ ವೆಂಕಟಪತಿರಾಯನ ಸಂಸ್ಥಾನದಲ್ಲಿ ಮದವೇರಿದ್ದ ಆನೆಯೊಂದನ್ನು ಪಳಗಿಸಲು ಆಹ್ವಾನಿಸಲ್ಪಟ್ಟಿದ್ದ ಗಿರಿಯಪ್ಪನು, ಬಹು ಸಾಹಸದಿಂದ ಮದ್ದಾನೆಯನ್ನು ಪಳಗಿಸಿ ರಾಜನಿಂದ ಗೌರವಿಸಲ್ಪಟ್ಟು, ೯೦೦೦ ಪಗೋಡಗಳ ಆದಾಯದ ಪ್ರದೇಶವಾಗಿದ್ದ ಲಕ್ಕವ್ವನಹಳ್ಳಿ (ಲಕ್ಕಿಹಳ್ಳಿ) ವಳತವನ್ನು ಜಹಗೀರಾಗಿ ಪಡೆಯುವ ಅದೃಷ್ಟಶಾಲಿಯಾದನು. ಹೀಗೆ ಕ್ರಿ.ಶ. ೧೬೦೪ರಲ್ಲಿ ಗಿರಿಯಪ್ಪನಾಯಕನು ಲಕ್ಕವ್ವನಹಳ್ಳಿ ಕೋಟೆಯ ಅಧಿಪತಿಯಾದನು. ಇವನಿಂದ ಮೊದಲ್ಗೊಂಡು ಒಟ್ಟು ಹತ್ತು ತಲೆಮಾರಿನವರು ಮತ್ತೋಡು ಸಂಸ್ಥಾನವನ್ನು ಆಳಿದ್ದಾರೆ. ಗಿರಿಯಪ್ಪನಾಯಕನು ಮೊದಲಿಗೆ (ಮೂಲತ:) ಮತ್ತೋಡಿನವನೆ ಆಗಿದ್ದು, ಅವನು ಬೂದಿಹಾಳು ಸಿರುಮನಾಯಕನಲ್ಲಿ ಸೇನಾನಿಯಾಗಿದ್ದನಾದ್ದರಿಂದ ಲಕ್ಕವ್ವನಹಳ್ಳಿಯಿಂದ ತನ್ನ ಪಾಳೆಯಪಟ್ಟನ್ನು ಮತ್ತೋಡಿಗೆ ಸ್ಥಳಾಂತರಿಸಿದನು. ಈ ಪಾಳೆಯಗಾರರಲ್ಲಿ ದೊಡ್ಡಹಾಲಪ್ಪನಾಯಕ, ಚಿನ್ನದ ಗಿರಿಯಪ್ಪನಾಯಕ, ಸಂಗಪ್ಪನಾಯಕ, ಹಾಲಪ್ಪನಾಯಕ, ಸಿದ್ಧಪ್ಪನಾಯಕ ಇವರು ಮುಖ್ಯರೆನ್ನಿಸಿದ್ದಾರೆ. ಇವರ ಆಳ್ವಿಕೆಯ ಕಾಲದಲ್ಲಿ ಶಾಂತಿ, ಸೌಹಾರ್ದತೆ, ಶೈಕ್ಷಣಿಕ, ಧಾರ್ಮಿಕತೆ, ಕೈಗಾರಿಕೆ, ಕಲೆ, ಕೃಷಿ ಮುಂತಾದ ವಿಚಾರಗಳಲ್ಲಿ ಆದ್ಯತೆ ನೀಡಲಾಗಿದ್ದಿತು.

ದೊಡ್ಡಣ್ಣನಾಯಕನು ಕ್ರಿ.ಶ.೧೬೭೧ರಲ್ಲಿ ತನ್ನ ಮಗ ರಾಜಕುಮಾರ ಚಿನ್ನದಗಿರಿಯಪ್ಪ ನಾಯಕನ ವಿವಾಹದ ಶುಭಸಂದರ್ಭದಲ್ಲಿ, ಸಂಸ್ಥಾನದ ಕ್ಷೌರಿಕರ ಕೋರಿಕೆಯಂತೆ ಕ್ಷೌರಿಕಸುಂಕದ ಬಾಕಿ ೧,೦೦೦ ವರಹವನ್ನು ಮನ್ನಾ ಮಾಡಿದ್ದಲ್ಲದೆ, ಇನ್ನು ಮುಂದೆ ಕ್ಷೌರಿಕ ಸುಂಕ ತೆರಬೇಕಿಲ್ಲವೆಂದು ಧರ್ಮಶಾಸನ ಹೊರಡಿಸಿದನು. ಸಂಗಪ್ಪನಾಯಕನ ಮಗ ಹಾಲಪ್ಪನಾಯಕನು ಕ್ರಿ.ಶ. ೧೭೦೭ರಲ್ಲಿ ಮತ್ತೋಡಿನಲ್ಲಿ ಮುರುಘಾ ಮಠವನ್ನು ಸ್ಥಾಪಿಸಿ, ಆ ಮಠದ ವೆಚ್ಚಗಳಿಗಾಗಿ ಹತ್ತಿರದ ಅರೆಹಳ್ಳಿ ಗ್ರಾಮವನ್ನು ದತ್ತಿ ನೀಡಿದನು. ಇವನಿಗೆ ದೊಡ್ಡ ಹಾಲಪ್ಪನಾಯಕ ಎಂಬ ಪ್ರಸಿದ್ಧಿಯೂ ಇದ್ದಿತು. ಕ್ರಿ.ಶ. ೧೭೧೦ರ ವೇಳೆಗೆ ಇವನು ಮತ್ತೋಡನ್ನು ಮಹಾನಗರವನ್ನಾಗಿ ಅಭಿವೃದ್ಧಿ ಪಡಿಸಿದನು. ನಗರದ ಸುತ್ತಲೂ ಭದ್ರವಾದ ಕೋಟೆ–ಕೊತ್ತಲ, ಬತೇರಿ, ಮಹಾದ್ವಾರಗಳು, ಅರಮನೆ, ಉಗ್ರಾಣ, ಬಾಂಢಾಗಾರ, ಗಜಶಾಲೆ, ಅಶ್ವಶಾಲೆ, ಸೈನಿಕ ವಸತಿ ಸಮುಚ್ಚಯ, ಸಚಿವ ಗೃಹಗಳು, ಸದರ ಚಾವಡಿಗಳು, ಭಾವಿ – ತಟಾಕಗಳು – ಮುತ್ತು – ರತ್ನದಂಗಡಿಗಳು, ರಾಜಬೀದಿ, ದೇವಾಲಯಗಳನ್ನು ನಿರ್ಮಿಸಿದನು. ಅರಮನೆ – ಗುರುಮನೆಗಳು ಚಿತ್ರಕಲೆಯಿಂದ ಶೋಭಿಸುತ್ತಿದ್ದವು. ಅರಮನೆಯುಪ್ಪರಿಗೆಗಳು ಹೊಂಗಲಶಗಳಂತೆ ಹೊಳೆಯುತ್ತಿದ್ದವು. ಗಾಜಿನ ಬಳೆಗಳ ತಯಾರಿಕೆಗೆ ಈ ನಗರವು ಹೆಸರಾಗಿದ್ದಿತು.

ಹಾಲಪ್ಪ ನಾಯಕನ ಬಹುಮುಖ್ಯ ಕೆಲಸವೆಂದರೆ, ಹತ್ತಿರದ ಗಂಜಿಗೆರೆ ಅಗ್ರಹಾರವನ್ನು ಪುನರ್‌ಸ್ಥಾಪಿಸಿ ಹಾಗೂ ಕೆರೆಗಳನ್ನು ದುರಸ್ಥಿಗೊಳಿಸಿದ್ದು, ಶ್ರೀಶೈಲದ ಕಡೆಯಿಂದ ಆಗಮಿಸಿದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಗಾಗಿ ಮಠವನ್ನು ಹಾಗೂ ಆ ಸ್ವಾಮಿಗಳ ಸಲಹೆಯಂತೆ, ತಮಗಿದ್ದ ದೋಷವೊಂದರ ಪರಿಹಾರಾರ್ಥ ಬೇವಿನಹಳ್ಳಿ ಕರಿಯಮ್ಮ, ಸಿದ್ಧರಾಮೇಶ್ವರ, ಕಂಚೀವರದರಾಜ ದೇವರು, ದಶರಥರಾಮ ದೇವರು ಹಾಗೂ ಭಾಗೀಮರದಮ್ಮ ದೇವರುಗಳಿಗೆ ದೇವಾಲಯಗಳನ್ನು ಕಟ್ಟಿಸಿದ. ಹಿರಿಯ ಹಾಲಪ್ಪ ನಾಯಕನು, ನಾಗಕೆಂಚಾಂಬೆಯ ಸೀಮಂತ ಶುಭಕಾರ್ಯದ ಪುಣ್ಯಾರ್ಥವಾಗಿ ಕ್ರಿ.ಶ. ೧೭೨೯ರಲ್ಲಿ ದಶರಥರಾಮೇಶ್ವರ ದೇವರು, ಸಿದ್ಧರಾಮೇಶ್ವರ, ಕಂಚೀವರದರಾಜ ದೇವರು, ಕರಿಯಮ್ಮದೇವಿ, ಕಣಿವೆ ಮಾರಮ್ಮದೇವಿ, ಬೇವಿನಹಳ್ಳಿ ಕರಿಯಮ್ಮದೇವಿ, ಕಾರೇಹಳ್ಳಿ ಹನುಮಂತ ದೇವರು, ಮೆಣಸಿನೋಡು ಮಲ್ಲೇದೇವರು, ನಿರೂಗಲ್ಲು ಹರಿಹರದೇವರು, ಅಂತರ ಗಟ್ಟೆಮ್ಮದೇವಿ, ಬಂದಮ್ಮ ದೇವರುಗಳ ಪೂಜಾ ಪಟ್ಟಾಧಿಕಾರವನ್ನು ವಿವಿಧ ಮತಗಳ ಗೌಡಪ್ರಜೆಗಳಿಗೆ ವಹಿಸಿ ತಾಮ್ರಶಾಸನ ಹೊರಡಿಸಿದನು. (ಉಲ್ಲೇಖ:– ಹೊಸದುರ್ಗದ ಸುತ್ತ'–(೧೯೮೪), ಬಾಗೂರು ಆರ್. ನಾಗರಾಜಪ್ಪ).

ಮತ್ತೋಡು ನಾಯಕರ ಕ್ರಾಂತಿಕಾರಿ ಸಂಗತಿಯೆಂದರೆ, ಇವರು ತಮ್ಮ 'ಬೇಡ' ಕುಲವನ್ನು ತ್ಯಜಿಸಿ, 'ವೀರಶೈವ' ಮತಾವಲಂಬಿಗಳಾದುದು. (ಉಲ್ಲೇಖ:–'ಕರ್ನಾಟಕ ರಾಜ್ಯ ಗ್ಯಾಸೆಟಿಯರ್'(ಭಾಗ–೩),೧೯೮೬– ಸಂ: ಡಾ॥ ಸೂರ್ಯನಾಥ್ ಕಾಮತ್ ಹಾಗೂ 'ಮತ್ತೋಡು ಪಾಳೆಯಗಾರ ವಂಶಜರ ಒಂದು ಪತ್ರ(೧೮೮೨)–ಪ್ರೊ. ಲಕ್ಷ್ಮಣ್ ತೆಲಗಾವಿ.(Studies in Karnataka History and Culture,2008). ಹಾಲಪ್ಪ ನಾಯಕನ ಮಗ ಸಿದ್ಧಪ್ಪನಾಯಕನು ದುರ್ಗದ ಪಾಳೆಯಗಾರರ ಸೆರೆಯಾಳಾಗಿದ್ದಾಗ, ದುರ್ಗದವರ ಮಗಳನ್ನು ಪ್ರೀತಿಸಿದ್ದರಿಂದ, ದುರ್ಗದವರು ಸಿದ್ಧಪ್ಪನಿಗೆ ತಮ್ಮ ಮಗಳನ್ನು ವಿವಾಹ ಮಾಡಿಕೊಟ್ಟರಲ್ಲದೆ, ತಾವೂ ಸ್ವಲ್ಪ ಅವಧಿಯವರೆಗೆ ವೀರಶೈವರಾಗಿದ್ದು, ಪುನ: ನಾಯಕಮತವನ್ನೇ ಉಳಿಸಿಕೊಂಡರು. ಆದರೆ, ಮತ್ತೋಡಿನ ಪಾಳೆಯಗಾರರು ವೀರಶೈವರಾಗಿಯೆ ಉಳಿದರು. ಇಂದಿಗೂ ಮತ್ತೋಡು ಸಂಸ್ಥಾನದ ಅರಸು ವಂಶಸ್ಥರು ಇದ್ದು, ವೀರಶೈವರಾಗಿಯೇ ಮುಂದುವರೆದಿರುವರು. ಸಿದ್ಧಪ್ಪನಾಯಕನು ಮತ್ತೋಡನ್ನಾಳಿದ ಕೊನೆಯ ಪಾಳೆಯಗಾರನಾಗಿದ್ದಾನೆ. ಸಿದ್ಧಪ್ಪನಾಯಕನಿಗಿಂತ ಮೊದಲು ಅಧಿಕಾರ ಪಡೆಯದೆ ನಿರಾಶನಾದ ಅವನ ಅಣ್ಣ ಹಾಲಪ್ಪನಾಯಕನು ಹೈದರಾಲಿಯ ಕುಮ್ಮಕ್ಕಿನಿಂದ ಸ್ವಲ್ಪ ಅವಧಿಗೆ ಸಿದ್ಧಪ್ಪನಾಯಕನನ್ನು ಕೆಳಗಿಳಿಸಿ ತಾನು ಅಧಿಕಾರದ ಚುಕ್ಕಾಣಿ ಹಿಡಿದನು. ಆದರೆ ದುರ್ಗದವರು ಹಾಲಪ್ಪನಾಯಕನನ್ನು ಸೆರೆಯಲ್ಲಿಟ್ಟು ತಮ್ಮ ಅಳಿಯನಾದ ಸಿದ್ಧಪ್ಪನಾಯಕನನ್ನು ಪುನ: ಅಧಿಕಾರಕ್ಕೆ ತಂದರು.! ಮುಂದೆ ನಡೆದ ಯುದ್ಧದಲ್ಲಿ ದುರ್ಗದವರ ವಿರುದ್ಧ ಹೈದರನು ಗೆದ್ದರೂ ಮತ್ತೋಡಿನ ಅಧಿಕಾರ ಹಾಲಪ್ಪನಿಗೆ ದೊರೆಯಲಿಲ್ಲ. ಆಗಿನ ಕಾಲಕ್ಕೆ ಮತ್ತೋಡು ಸಂಸ್ಥಾನದ

ಆಡಳಿತ ವ್ಯಾಪ್ತಿಗೆ ಸುಮಾರು ೮೦೦ ಹಳ್ಳಿಗಳು ಒಳಪಟ್ಟಿದ್ದವೆನ್ನಲಾಗಿದೆ. ಕ್ರಿ.ಶ.೧೭೭೯ಕ್ಕೆ ಮತ್ತೋಡು ಸಂಸ್ಥಾನದ ಆಡಳಿತ ಅಂತ್ಯಗೊಳ್ಳುತ್ತದೆ. ಕ್ರಿ.ಶ.೧೮೮೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ವಿಂಗಡಿಸಿದ ೧೦೧ ತಾಲ್ಲೂಕುಗಳಲ್ಲಿ ಮತ್ತೋಡು ಸಹ ಒಂದು ತಾಲೂಕಾಗಿ ಮಾನ್ಯತೆ ಪಡೆಯಿತು. ಮೈಸೂರಿನವರು ಮತ್ತೋಡಿನ ಕೊನೆಯ ಅರಸನಾಗಬೇಕಿದ್ದ ಹಾಲಪ್ಪನಾಯಕನಿಗೆ ಸಂಬಳ ನೀಡುವುದಾಗಿ ಹೇಳಿ ಅಧಿಕಾರ ತಪ್ಪಿಸಿದರೆನ್ನಲಾಗಿದೆ. ಪಾಳೆಯಗಾರರ ಕಾಲದಲ್ಲಿ ಮತ್ತೋಡು ಸಂಪದಭಿವೃದ್ಧಿಯ ಬಲಾಢ್ಯ ರಾಜಧಾನಿಯಾಗಿದ್ದಿತು.

**ಮತ್ತೋಡು ಪಾಳೆಯಗಾರರ ವಂಶವೃಕ್ಷ**

ಗಿರಿಯಪ್ಪ ನಾಯಕ (ಮೂಲಪುರುಷ)

↓

ಹಾಲಪ್ಪ ನಾಯಕ

↓

ಗಿರಿಯಪ್ಪ ನಾಯಕ

↓

ದೊಡ್ಡ ಹಾಲಪ್ಪ ನಾಯಕ

↓

ಚಿನ್ನದ ಗಿರಿಯಪ್ಪನಾಯಕ | ಸಂಗಪ್ಪ ನಾಯಕ

ಸಂಗಪ್ಪ ನಾಯಕ ↓

ದೊಡ್ಡಾಲನಾಯಕ(ಹಾಲಪ್ಪ ನಾಯಕ)

↓

ಹಾಲಪ್ಪ ನಾಯಕ. | ಸಿದ್ದಪ್ಪನಾಯಕ. | ಸಂಗಪ್ಪನಾಯಕ

(ದುರ್ಗದವರ ಸಂಬಂಧಿ)

↓

ಗಿರಿಯಪ್ಪ ನಾಯಕ | ರಾಚಪ್ಪ ನಾಯಕ

↓

ಗಿರಿಯಪ್ಪನಾಯಕ | ಸಿದ್ದರಾಮನಾಯಕ | ಗುರುಪಾದನಾಯಕ

ಗುರುಸಿದ್ದಪ್ಪನಾಯಕ

[ಮತ್ತೋಡು ಪಾಳೆಯಗಾರರ ಒಟ್ಟು ಏಳು ತಲೆಮಾರಿನವರು ಆಡಳಿತ ನಡೆಸಿರುತ್ತಾರೆ. ಕ್ರಿಶ.೧೬೭೦ಳರಿಂದ ೧೭೭೯ರವರೆಗೆ.]

ಸಿದ್ದಪ್ಪ ನಾಯಕನ ಮರಿಮೊಮ್ಮಗನಾದ ರಾಚಪ್ಪ ನಾಯಕನು ಕ್ರಿ.ಶ. ೧೮೮೨ರಲ್ಲಿ ಮತ್ತೋಡನ್ನು ಸಮ್ಮತು ಮಾಡಲು ಮೈಸೂರು ರಾಜರಿಗೆ ಅಹವಾಲು ಬರೆದಿದ್ದನು. ೭೨ ಗ್ರಾಮಗಳನ್ನು ಮತ್ತೋಡಿಗೆ ಸೇರಿಸಬೇಕೆಂದು ಕೋರಿದ್ದನು.

ಇಂದಿಗೂ ಮತ್ತೋಡಿನಲ್ಲಿ ಎರಡು ಮಹಾದ್ವಾರಗಳ (ಹೆಬ್ಬಾಗಿಲು) ಹಾಗೂ ಕೋಟೆಯ ಅವಶೇಷಗಳಿವೆ. ಕೋಟೆಯ ಭಾಗವಿದೆ, ಬಳೆ ತಯಾರಿಕೆಯ ಬಟ್ಟಿ ಒಲೆಗಳು, ಗಾಜಿನುಂಡೆಗಳು ಕಾಣಬಂದಿವೆ. ಸುಬೇದಾರನು ವಾಸಿಸುತ್ತಿದ್ದ ಮನೆ, 'ಅರಸನ ತೋಟ' ಇನ್ನೂ ಅನೇಕ ಐತಿಹಾಸಿಕ ಅವಶೇಷಗಳಿವೆ. ಹಾಲಪ್ಪನಾಯಕನ ಕಾಲದಲ್ಲಿ ಮತ್ತೋಡಿನಲ್ಲಿದ್ದ ಮನೆಗಳ ಸಂಖ್ಯೆ ೨,೦೦೦ ಆದರೆ, ೧೮೦೧ರಲ್ಲಿ ಇಲ್ಲಿಗೆ ವಿದೇಶಿ ಅಧ್ಯಯನಕಾರ ಫ್ರಾನ್ಸಿಸ್ ಬುಕಾನನ್ ಭೇಟಿ ನೀಡಿದ್ದಾಗ ಈ ಗ್ರಾಮದ ಜನವಸತಿಗಳು ಕೇವಲ ೧೨೦ ಇದ್ದವು. ಅಲ್ಲದೆ, ಬಣ್ಣ ಬಣ್ಣದ ಬಳೆಗಳ ತಯಾರಿಕೆಯ ಘಟಕಗಳಿದ್ದವು. ಕಪ್ಪು ಬಣ್ಣದ ಗಾಜಿನ ಬಳೆಗಳಿಗೆ ಆಗ ಅಪಾರ ಬೇಡಿಕೆ ಇತ್ತೆನ್ನಲಾಗಿದೆ. ಬಳೆ ತಯಾರಿಕೆಗೆ ಅಗತ್ಯವಾದ ಗಾಜನ್ನು ಸ್ಥಳೀಯವಾಗಿಯೆ ಉತ್ಪಾದಿಸಲಾಗಿತ್ತು ಎನ್ನಲಾಗಿದೆ. ಮತ್ತೋಡಿನಲ್ಲಿರುವ ದೇವಾಲಯಗಳೆಂದರೆ ಭಾಗೀಮರದಮ್ಮ, ಬನಶಂಕರಿ, ಆಂಜನೇಯ, ಗಣೇಶ, ಭೂತರಾಯ, ಸಿದ್ಧರಾಮೇಶ್ವರ, ಬಾಣದರಂಗಪ್ಪ, ಬೇವಿನಹಳ್ಳಿ ಕರಿಯಮ್ಮ, ಲಕ್ಷ್ಮೀನಾರಾಯಣ ಮುಂತಾದವು.

## ಬಾಗೂರು ಪಾಳೆಯಪಟ್ಟು

ಹೊಸದುರ್ಗ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಸಂಖ್ಯೆಯ ಶಾಸನಗಳನ್ನು ಹೊಂದಿರುವ ಬಾಗೂರು ಗ್ರಾಮವು ಚೋಳರು, ಗಂಗರು, ಹೊಯ್ಸಳರು, ವಿಜಯನಗರದವರು, ಬೇಲೂರಿನವರು, ಚಂದ್ರಗಿರಿಯವರು, ಮೊಗಲರು, ಮುಸಲ್ಮಾನರು, ಚಿತ್ರದುರ್ಗದವರು, ಸಂತೇಬೆನ್ನೂರಿನವರು ಮುಂತಾದವರ ಆಳ್ವಿಕೆಗೆ ಒಳಪಟ್ಟಿದ್ದ ಐತಿಹಾಸಿಕ ಸ್ಥಳವಾಗಿದ್ದು, ಇತಿಹಾಸ ಕಾಲದಲ್ಲಿ ಇಲ್ಲಿನ ಚನ್ನಕೇಶವ ದೇವಾಲಯಕ್ಕೆ ಅನೇಕ ಗ್ರಾಮಗಳನ್ನು ದತ್ತಿ ಬಿಡಲಾಗಿದ್ದಿತು. ಭಾಗ್ಯಪುರಿ, ಚಂದ್ರಾಪುರಿ, ಸಣ್ಣಕ್ಕಿ ಬಾಗೂರು ಎಂದೆಲ್ಲಾ ಇದು ಪ್ರಖ್ಯಾತವಾಗಿದ್ದಿತು. ಪಾಳೆಯಗಾರರ ಕಾಲದ ಎರಡು ದೊಡ್ಡ ಕೆರೆಗಳು ಊರಿನ ಪೂರ್ವ ಪಶ್ಚಿಮಕ್ಕಿವೆ. ಕೋಟೆ–ಕೊತ್ತಲು, ವೀರಗಲ್ಲು, ಮಹಾಸತಿಕಲ್ಲು, ಶಾಸನ ಮುಂತಾದ ಅವಶೇಷಗಳು ಹೇರಳವಾಗಿವೆ. ಕ್ರಿ.ಶ.೧೫ನೆಯ ಶತಮಾನದಲ್ಲಿ ಬೂದಿಹಾಳು ಸಿರುಮನ ಪರಮ ಗೆಳೆಯನಾಗಿದ್ದ ಗೋವಿಂದನೆಂಬ ರಾಜನು ಸಂಪದ್ಭರಿತವಾಗಿದ್ದ ಬಾಗೂರು ಸೀಮೆಯನ್ನಾಳಿದನು

ಆಗಿನ ಕಾಲದ ಅಸಂಖ್ಯಾತ ದೇವಸ್ಥಾನಗಳು ಈಗಲೂ ಇವೆ. ಅಲ್ಲದೆ ಹಿಂದೆ ಅನೇಕ ಮಠಗಳು ಇಲ್ಲಿದ್ದುವೆನ್ನಲಾಗಿದೆ. ನವಾಬರ ಕಲಾತ್ಮಕ ಸಮಾಧಿಗಳು ಊರ ಹೊರಗಿವೆ. ಕ್ರಿ.ಶ.೧೬೭೬ರಲ್ಲಿ ಶಿರಾ ಮುಸಲ್ಮಾನರ ವಶವಾಗಿದ್ದ ಬಾಗೂರು, ಕ್ರಿ.ಶ.೧೬೮೯ರಲ್ಲಿ ಮೊಗಲರ ಆಳ್ವಿಕೆಗೊಳಪಟ್ಟಿತು. ಅದಕ್ಕೂ ಮುನ್ನ, ಕ್ರಿ.ಶ.೧೫೭೨ರಲ್ಲಿ ತರೀಕೆರೆಯ ಪೂವ್ವಲ ಹನುಮಪ್ಪನಾಯಕನು ಆಕ್ರಮಿಸಿದ್ದ ಈ ಸ್ಥಳವನ್ನು, ಕ್ರಿ.ಶ.೧೬೦೪ರಲ್ಲಿ ದುರ್ಗದ ೧ನೇ ಕಸ್ತೂರಿ ರಂಗಪ್ಪನಾಯಕನು ತನ್ನ ಸ್ವಾಧೀನಕ್ಕೆ ಪಡೆದನು. ಮುಂದೆ, ಕ್ರಿ.ಶ.೧೭೨೦ರಲ್ಲಿ ಶಿರಾ ಮೊಗಲರ ಸುಬೇದಾರ ನವಾಬ್ ದರ್ಗಾಕೂಲಿಖಾನ್‌ನ ವಿರುದ್ಧ ಬಾಗೂರಿನ ಕಿಲ್ಲೇದಾರನು ತಿರುಗಿಬಿದ್ದಾಗ, ಬಿಚ್ಚುಗತ್ತಿ ಭರಮಣ್ಣನು ಸುಬೇದಾರನಿಗೆ ಬಾಗೂರನ್ನು ವಶಮಾಡಲು ನೆರವಾದನು. ಕ್ರಿ.ಶ.೧೭೬೨ರಲ್ಲಿ ಹೈದರಾಲಿಯು ದುರ್ಗದವರ ಮೇಲೆರಗಿದ್ದಲ್ಲದೆ, ಅವನು ವಶಪಡಿಸಿಕೊಂಡ ೧೬ ಮುಖ್ಯ ಠಾಣೆಗಳಲ್ಲಿ ಬಾಗೂರು, ಜಾನಕಲ್ಲು ಹಾಗೂ ಹೊಸದುರ್ಗ ಸೇರಿವೆ.

ದುರ್ಗದ ಚಿಕ್ಕಣ್ಣನಾಯಕನು ಕ್ರಿ.ಶ.೧೬೭೯ರಲ್ಲಿ ಬಾಗೂರು ಚನ್ನಕೇಶವದೇವರಿಗೆ ತೇರು ಮತ್ತು ಚಿನ್ನದ ಲೇಪನವಿರುವ ಗರುಡ ಮೂರ್ತಿಯನ್ನು ಕಾಣಿಕೆಯಾಗಿ ನೀಡಿದನು. ತೇರಿನ ಕಳಸದಲ್ಲಿ 'ಜಲಪನಾಯಕರ ಯದವಳ ಅಂಗಂಣನಸೇವೆ' ಎಂದೂ, ಇದೇ ದೇವಸ್ಥಾನದ ಹರಿವಾಣ (ಲೋಹ)ದಲ್ಲಿ 'ದಳವಾಯಿಮುದ್ದಂಣನವರ ಕೊಮಾರ ದಳವಾಯಿ ರಂಗಪ್ಪನವರು ಸಮರ್ಪಿಸಿದ ಹರಿವಾಣ' ಎಂದೂ ಬರಹವಿದೆ. ಕೇಶವದೇವರ ಉತ್ಸವಮೂರ್ತಿಗಳಲ್ಲಿ ತೆಲುಗು ಲಿಪಿ ಇದೆ. ಗಾರೆ ಅರೆಯುವ ಕಲ್ಲಿನಲ್ಲಿ '**ಕೊಂಡರಾಜನಸೇವೆ**' ಎಂದಿದೆ. ದೇವಾಲಯದ ಹೊರಸ್ತಂಭದಲ್ಲಿ ಕೊಂಡೋಜನ ಉಬ್ಬುಕೆತ್ತನೆ ಚಿತ್ರವಿದ್ದು, ಅದರ ಕೆಳಗೆ 'ಕೊಂಡೋಜಿ' ಎಂಬ ಬರಹವಿದೆ. ದೇವಾಲಯದ ದ್ವಾರದಲ್ಲಿ (ಒಳಗೆ) ಪಾಳೆಯಗಾರರ ಉಬ್ಬುಕೆತ್ತನೆ ಶಿಲ್ಪ (ಫಲಕ)ವಿದೆ.

ಹಿಂದಿನ ಕಾಲದಲ್ಲಿ ಬಾಗೂರಿನ ಪ್ರಧಾನಿ ಮತ್ತು ಇತರ ಅಧಿಕಾರಿಗಳಾಗಿದ್ದವರಲ್ಲಿ ಬಾಗೂರು ಮಲ್ಲರಸ, ಬಾಗೂರು ವಾಮರಸ, ಬಾಗೂರು ಅಯ್ಯಪ್ಪರಸ, ಬಾಗೂರು ಮಾರಸಯ್ಯ ಇವರು ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡಿದ್ದ ಬಗೆಗೆ ವಿವಿಧೆಡೆಗಳಲ್ಲಿರುವ ಕ್ರಿ.ಶ. ೧೫ನೇ ಶತಮಾನದ ಶಾಸನಗಳು ತಿಳಿಸುತ್ತವೆ. ವಿಜಯನಗರದ ಸಾಳುವ ನರಸಿಂಹನು ಬಾಗೂರಿನ ಮೇಲೆ ದಂಡೆತ್ತಿ ಬಂದುದು ಕ್ರಿ.ಶ. ೧೪೬೩-೧೪೭೯ರ ಮಧ್ಯಾವಧಿಯಲ್ಲಿ ಎನ್ನಲಾಗಿದೆ. ಬಾಗೂರು ಮಲ್ಲರಸಯ್ಯನು ಮಹಾಮಂತ್ರಿಯಾಗಿ ಹೊಯ್ಸಳನಾಡಿನ ನರಸಿಂಗಪುರ ಸೀಮೆಯನ್ನು ಆಳುತ್ತಿದ್ದನೆಂದು, ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಜೋಡಿಕುಪ್ಪೆಯ ಶಾಸನ ತಿಳಿಸುತ್ತದೆ. ಹಿಂದಿನ ಕಾಲದಲ್ಲಿ ಬಾಗೂರಿನ ಸಣ್ಣಕ್ಕಿ, ಬಾಗೂರು ಬಡಗಿ, ಬಾಗೂರು ಸಂತೆ, ಬಾಗೂರು ತಾಳಿ, ಬಾಗೂರು ಬಳೆ, ಬಾಗೂರು ಕೇಶವ, ಬಾಗೂರು ರಾಮೋತ್ಸವ ಸುಪ್ರಸಿದ್ಧ. ಚನ್ನಕೇಶವ ದೇವಾಲಯ ನೊಳಂಬರ ಕಾಲದ್ದೆನ್ನಲಾಗಿದ್ದು,

ವಿಜಯನಗರದವರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ತಾಲ್ಲೂಕಿನ ಸೂಜಿಕಲ್ಲು ಕೋಟೆ, ಜಾನಕಲ್ಲು ಕೋಟೆ, ದೇವಪುರ ಕೋಟೆ, ಬೆಲಗೂರು ಕೋಟೆ, ಲಕ್ಕವ್ವನಹಳ್ಳಿ ಕೋಟೆ, ಹೊಸದುರ್ಗ ಕೋಟೆ, ಮತ್ತೋಡು ಸಂಸ್ಥಾನ, ಬೂದಿಹಾಳು ಸಂಸ್ಥಾನ (ಕೋಟೆ), ಬಾಗೂರು ಕೋಟೆ ಮುಂತಾದವು ಹಿಂದೆ ಹೆಸರಾಗಿದ್ದವು. 'ನೀರ್ಗುಂದ ನಾಡ'ಂತೂ ಪ್ರಖ್ಯಾತವಾಗಿದ್ದಿತು.

## ಮೈಸೂರು ಒಡೆಯರು

ಹೊಸದುರ್ಗ ತಾಲ್ಲೂಕು ಪ್ರದೇಶಕ್ಕೆ ಸಂಬಂಧಿಸಿದಂತೆ ಮೈಸೂರು ಒಡೆಯರ ವಿಚಾರ ಸ್ವಲ್ಪ ಮಟ್ಟಿಗೆ ಮಾತ್ರ ಇದೆ. ಕ್ರಿ.ಶ.೧೭೭೯ರಲ್ಲಿ ಪತನಗೊಂಡ ಮತ್ತೋಡು ಸಂಸ್ಥಾನವು, ಮೈಸೂರು ಒಡೆಯರ ಆಡಳಿತಕ್ಕೆ ಒಳಪಡುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರವರ ಆಡಳಿತ ಅವಧಿಯಲ್ಲಿ ಕ್ರಿ.ಶ. ೧೮೩೦ರಲ್ಲಿ ಚಿತ್ರದುರ್ಗ ಮತ್ತಿತರ ನಗರ ಫೌಜುದಾರಿಗಳಲ್ಲಿ ಆರಂಭಗೊಂಡ ಬೂದಿಬಸಪ್ಪನ ನೇತೃತ್ವದ 'ರೈತರದಂಗೆ'ಯು ಬೂದಿಹಾಳು ರೈತರನ್ನು ಸಹ ಪ್ರಚೋದಿಸಿತು. ಆಗ ಬೂದಿಹಾಳಿನಲ್ಲಿ ಏರ್ಪಟ್ಟ ರೈತರ ಗಲಭೆಯನ್ನು ಶಮನಗೊಳಿಸಲು ಮುಮ್ಮಡಿ ಕೃಷ್ಣರಾಜ ಒಡೆಯರ್ ಹಾಗೂ ವೆಂಕಟರಾಜ ಅರಸು ಮಧ್ಯೆ ಪ್ರವೇಶಿಸಿದ್ದರು. ಕ್ರಿ.ಶ.೧೮೮೦-೮೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ೬ ಫೌಜುದಾರಿ(ತುಕಡಿ) ಗಳಾಗಿ ಮತ್ತು ಅವುಗಳನ್ನು ೧೦೧ ತಾಲ್ಲೂಕುಗಳಾಗಿ ವಿಂಗಡಿಸಿದಾಗ, ಮತ್ತೋಡು ಸಹ ಒಂದು ತಾಲೂಕಾಗಿ ಸ್ಥಾನ ಪಡೆಯಿತು. (ಉಲ್ಲೇಖ:- ಮತ್ತೋಡು ಪಾಳೆಯಗಾರರ ವಂಶಜರ ಒಂದು ಪತ್ರ(೧೮೮೨): ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಲೇಖನ. (Studies in Karnataka History and Culture,2008) . ಇದಕ್ಕೂ ಹಿಂದೆ, ಕ್ರಿ.ಶ. ೧೭೭೯ರಲ್ಲಿ ಮತ್ತೋಡಿನ ಕೊನೆಯ ರಾಜನಾದ ಹಾಲಪ್ಪನಾಯಕನಿಗೆ (ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು) ವೇತನ ಕೊಡುವುದಾಗಿ ಹೇಳಿ, ಅಧಿಕಾರದ ಮರು ಹಸ್ತಾಂತರ ಮಾಡದೆ ತಪ್ಪಿಸಿದರು.

ಕ್ರಿ.ಶ.೧೮೮೨ರಲ್ಲಿ ಮೈಸೂರು ಚಾಮರಾಜ ಒಡೆಯರ್ ಬಹದ್ದೂರ್ ಅವರಿಗೆ, ಮತ್ತೋಡು ಸಂಸ್ಥಾನದ ಕೊನೆಯ ರಾಜನಾದ ಹಾಲಪ್ಪನಾಯಕನ ಮರಿ ಮೊಮ್ಮಗನಾದ ರಾಚಪ್ಪನಾಯಕನು ಮತ್ತೋಡನ್ನು ಮುಮ್ಮಡಿಯವರು ತಾಲ್ಲೂಕು ಎಂದು ಮಾಡಿ ೭೨ ಗ್ರಾಮಗಳ 'ಸಮ್ಮತ್ತು' ಸೇರಿಸಿಕೊಟ್ಟಿದ್ದರೆಂದೂ ೭೨ ಗ್ರಾಮಗಳ ರೈತರಿಂದ ಬೇಸಾಯ ಒಂದಕ್ಕೆ ಕುಂಪಣಿ ಒಂದಕ್ಕೆ ೬ ಸೇರಿನಂತೆ ದವಸ, ಉಪ್ಪಿನಮಾಳೆ ಒಂದಕ್ಕೆ ೧೨ ಸೇರು ಉಪ್ಪು, ಕುರಿ ಅಳತಕ್ಕೆ ಗೊಲ್ಲರು ಹುದಿ ಒಂದಕ್ಕೆ ೧ ಕುರಿಯಂತೆಯೂ, ಮದುವೆ-ಮುಂಜಿ ಶುಭಶೋಭನ ದೇವತಾಕಾರ್ಯಕ್ಕೆ 'ಅರಸುಗಳ ವೀಳ್ಯ' ಈ ರೀತಿಯ ವರಮಾನ ಇದ್ದುದಾಗಿಯೂ, ಈಗ ಮತ್ತೋಡು ಸಮ್ಮತು ಎಂಬ

ಹೆಡ್‌ಕ್ವಾರ್ಟರ್ ತಪ್ಪಿಸಿ ಹೊಳಲ್ಕೆರೆಗೆ ೩೩ ಗ್ರಾಮಗಳು ಹಾಗೂ ಹಿರಿಯೂರು ತಾಲ್ಲೂಕಿಗೆ ೩೯ ಗ್ರಾಮವೆಂದು ನಮೂದಿಸಿ ಹುಕುಂ ಮಾಡಿರುವುದರಿಂದ ಪಾಳೆಯಗಾರರ ವಂಶಸ್ಥರಾದ ತಮ್ಮ ಜೀವನಕ್ಕೆ ವರಮಾನ ಕೈತಪ್ಪಿ ತೊಂದರೆಯಾಗಿರುವುದಾಗಿ ಅಹವಾಲು ಮಾಡಿಕೊಂಡು, ಮತ್ತೋಡನ್ನು ಮೊದಲಿದ್ದಂತೆ ಸಮ್ಮತ್ತು ಮಾಡಿ ೭೨ ಗ್ರಾಮಗಳನ್ನು ಯಾವುದಾದರೂ ಒಂದು ತಾಲ್ಲೂಕಿಗೆ ಸೇರಿಸಿ ಉಪಕಾರ ಮಾಡಬೇಕೆಂದು ಕೋರಿ ದಿನಾಂಕ ೮–೧೨–೧೮೮೨ ರಲ್ಲಿ ಪತ್ರ ಬರೆದಿದ್ದನು. ಇದಕ್ಕೆ ಒಪ್ಪಿರುವುದಾಗಿ ಆಗಿನ ದಿವಾನರಿಂದ ರಾಚಪ್ಪ ನಾಯಕನಿಗೆ ಉತ್ತರ ಬಂದಿದ್ದಿತು. (ಉಲ್ಲೇಖ:– ಮತ್ತೋಡು ಪಾಳೆಯಗಾರರ ವಂಶಜರ ಒಂದು ಪತ್ರ(೧೮೮೨): ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಲೇಖನ. (Studies in Karnataka History and Culture,2008). ೧೮೮೨ರಲ್ಲಿ ಮತ್ತೋಡು ಗ್ರಾಮವು ಹೊಳಲ್ಕೆರೆ ತಾಲ್ಲೂಕು ಹೊಸದುರ್ಗ ಸಮ್ಮತಿಗೆ ಸೇರಿದ್ದಿತು.

ಕ್ರಿ.ಶ.೧೮೯೮ರಲ್ಲಿ ಹೊಸದುರ್ಗ ತಾಲ್ಲೂಕು ಗಡಿ ಪ್ರದೇಶದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರು ವಾಣೀವಿಲಾಸ ಸಾಗರ ಅಣೆಕಟ್ಟಿನ ನಿರ್ಮಾಣವನ್ನು ಪ್ರಾರಂಭಿಸಿದರು. ಇದರಿಂದ ತಾಲ್ಲೂಕಿನ ಅನೇಕ ಗ್ರಾಮಗಳು ಹಿನ್ನೀರಿನಲ್ಲಿ ಮುಳುಗಡೆಯಾದವು. ಅಣೆಕಟ್ಟೆಯು 'ಕೃಷ್ಣರಾಜ ಸಮುದ್ರ' ಎಂಬ ಹೆಸರಿನಲ್ಲಿ ೧೯೦೬ರಲ್ಲಿ ಪೂರ್ಣಗೊಂಡು ಹಿರಿಯೂರು ತಾಲ್ಲೂಕಿಗೆ ವರದಾನವಾಯಿತು. (ಜನರ ಬಾಯಲ್ಲಿ ಡ್ಯಾಮಿನ ಹೆಸರು 'ಮಾರಿಕಣಿವೆ ಕೆರೆ' ಎಂದಿದೆ).

ಮೈಸೂರು ಒಡೆಯರ ಕಾಲದಲ್ಲಿ ಶತಮಾನಗಳಿಂದಲೂ ಪೋಷಣೆಗೊಂಡು ಅಭಿವೃದ್ಧಿ ಪಡಿಸಲ್ಪಟ್ಟ 'ಅಮೃತಮಹಲ್' ರಾಸುಗಳಿಗೆ ಸಂಬಂಧಪಟ್ಟ 'ಅಮೃತ ಮಹಲ್'ತಳಿ ಅಭಿವೃದ್ಧಿಯ ಉಪಕೇಂದ್ರವು ಕ್ರಿ.ಶ.೧೯೨೦ ರಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಕೈನಡು ಹತ್ತಿರ ಪ್ರಾರಂಭಿಸಲ್ಪಟ್ಟಿತು. ಈಗಲೂ ಇಲ್ಲಿ ಅಮೃತಮಹಲ್ ಕಾವಲು ಅನೇಕ ಎಕರೆ ವ್ಯಾಪ್ತಿಯಲ್ಲಿದ್ದು, ಇಲ್ಲಿ ವರ್ಷಕ್ಕೊಮ್ಮೆ ಅಜ್ಜಂಪುರದ ಅಮೃತಮಹಲ್ ರಾಸುಗಳನ್ನು ಇಲ್ಲಿ ೧ ತಿಂಗಳು ಮೇಯಲು ಬಿಡುತ್ತಾರೆ. ಶತಮಾನಗಳ ಹಿಂದೆ, ಕ್ರಿ.ಶ ೧೮ನೇ ಶತಮಾನದಲ್ಲಿ ತಾಲ್ಲೂಕಿನ ಗವಿರಂಗನಾಥಸ್ವಾಮಿ ಕ್ಷೇತ್ರದಲ್ಲಿ ಬೆಟ್ಟದ ತಪ್ಪಲಿನಿಂದ ಮೇಲಿನ ದೇವಾಲಯದವರೆಗೂ ಜನರು ಓಡಾಡಲು ಅನುಕೂಲವಾಗುವಂತೆ ಮೈಸೂರಿನ ಅರಸರು ಮೆಟ್ಟಿಲುಗಳನ್ನು ಹಾಕಿಸಿದರೆಂದು ಹೇಳಲಾಗಿದೆ.

೧೯೪೦ರಲ್ಲಿ ಹೊಸದುರ್ಗದ ಕೆಲ್ಲೋಡು ಗ್ರಾಮದ ಬಳಿ, ವೇದಾವತಿಗೆ ಅಡ್ಡಲಾಗಿ ನಿರ್ಮಿಸಲಾದ ಸೇತುವೆಯನ್ನು ಮಹಾರಾಜ ಕೃಷ್ಣರಾಜ ಒಡೆಯರ್‌ರು ದಿನಾಂಕ ೨೪–೨–೧೯೮೦ ರಂದು ಉದ್ಘಾಟಿಸಿದರೆಂದು ಸೇತುವೆಯ ಭಿತ್ತಿಯಲ್ಲಿರುವ ಆಂಗ್ಲಭಾಷೆಯ ಫಲಕ ತಿಳಿಸುತ್ತದೆ. ಸೇತುವೆಯ ಹತ್ತಿರ 'ಶ್ರೀಕೃಷ್ಣರಾಜೇಂದ್ರ ಸೇತುವೆ' ಎಂಬ ಆಗಿನ

ಕಾಲದ ಕನ್ನಡ ನಾಮಫಲಕವಿದೆ. ಈ ಸೇತುವೆಯ ನಿರ್ಮಾಣದ ಪ್ರಾರಂಭವನ್ನು ದಿನಾಂಕ ೮–೨–೧೯೩೭ ರಂದು ಅಮೀನ್ ಉಲ್‌ಮುಲ್ಕ್ ಸರ್ ಮಿರ್ಜಾ ಇಸ್ಮಾಯಿಲ್ ಕೆ.ಸಿ.ಐ.ಇ. ಒ.ಬಿ.ಇ. ಮೈಸೂರು ದಿವಾನ್ ಅವರು ನೆರವೇರಿಸಿದರು. ಈ ಕುರಿತು ಆಂಗ್ಲ ಫಲಕ ಸೇತುವೆಯ ಮತ್ತೊಂದು ಭಿತ್ತಿಯಲ್ಲಿದೆ. ಅಲ್ಲದೆ, ಹೊಸದುರ್ಗ ಪಟ್ಟಣಕ್ಕೆ ವೇದಾವತಿ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಘಟಕವನ್ನು ಅದೇ ಕೆಲ್ಲೋಡು ಸೇತುವೆಯ ಬಳಿ 'ಶ್ರೀ ಮೀನಾಕ್ಷಿದೇವಿ ವಾಟರ್ ವರ್ಕ್ಸ್'ನ್ನು ದಿನಾಂಕ ೨೪–೨–೧೯೫೬ರಂದು ಜಯಚಾಮರಾಜ ಒಡೆಯರ್, ಮೈಸೂರು ರಾಜ್ಯಪಾಲ ಅವರು ಉದ್ಘಾಟಿಸಿದ್ದು, ಈ ಬಗ್ಗೆ ನೀರು ಶುದ್ಧೀಕರಣ ಘಟಕದ ಕಟ್ಟಡದ ಭಿತ್ತಿಯಲ್ಲಿ ಆಂಗ್ಲಫಲಕವಿದೆ.

೧೯೪೦ರಲ್ಲಿ ಸೇತುವೆಯ ಪ್ರಾರಂಭೋತ್ಸವಕ್ಕೆ ಆಗಮಿಸಿದ್ದ ಮಹಾರಾಜ ಕೃಷ್ಣರಾಜ ಒಡೆಯರ್ ಅವರನ್ನು ಹೊಸದುರ್ಗ ಪಟ್ಟಣದಲ್ಲಿ ಭವ್ಯ ಮೆರವಣಿಗೆ ಮಾಡಿ ಗೌರವಿಸಲಾಯಿತು. ಅದೇ ರೀತಿ, ೧೯೫೯ರಲ್ಲಿ ನೀರು ಸರಬರಾಜು ಘಟಕ ಪ್ರಾರಂಭೋತ್ಸವಕ್ಕೆ ಆಗಮಿಸಿದ್ದ ಆಗಿನ ಮೈಸೂರು ರಾಜ್ಯದ ರಾಜ್ಯಪಾಲ ಜಯಚಾಮರಾಜ ಒಡೆಯರ್ ಅವರನ್ನು ಸಹ ಹೊಸದುರ್ಗದಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಿ ವಿನಾಯಕ ರಂಗಮಂದಿರದಲ್ಲಿ ಮರ್ಯಾದಿಸಲಾಯಿತು. ರಾಜ್ಯಪಾಲ ಜಯಚಾಮರಾಜ ಒಡೆಯರ್‌ರವರಿಗೆ ಮತ್ತೋಡಿನ ಪಾಳೆಯಗಾರರ ವಂಶಸ್ಥರಾದ ಎಚ್.ಎನ್.ಪಾಳೇಗಾರ್ ಐ.ಎ.ಎಸ್.ರವರು ಆಪ್ತ ಕಾರ್ಯದರ್ಶಿಯಾಗಿ ದ್ದರು. ೧೯೪೩ರಲ್ಲಿ ಜಯಚಾಮರಾಜ ಒಡೆಯರ್ ಅವರು ತಮ್ಮ ೨೪ನೇ ವಯಸ್ಸಿನಲ್ಲಿ ಹೊಸದುರ್ಗದ ಸುಪ್ರಸಿದ್ಧ ತೀರ್ಥಕ್ಷೇತ್ರವಾದ ಹಾಲುರಾಮೇಶ್ವರಕ್ಕೆ ಬಂದು ಪೂಜೆ ಸಲ್ಲಿಸಿದ್ದರೆಂದೂ ಅವರಿಗೆ ಅಲ್ಲಿನ ಗಂಗಾ ಕೊಳದಲ್ಲಿ ಬಂಗಾರದ ಪುಟ್ಟ ತೊಟ್ಟಿಲು ಬಂದಿದ್ದಿತೆಂದೂ ಜನರು ಹೇಳುವರು. ಮಳಲಿ ಜೋಡಿದಾರ್ ಶೇಷಭಟ್ಟರು ಮಹಾರಾಜರಲ್ಲಿ ಪುರೋಹಿತರಾಗಿದ್ದರು (ನಾಲ್ವಡಿಯವರಲ್ಲಿ). ಹೊಸದುರ್ಗದ ಅಪ್ಪೂಶಾಸ್ತ್ರಿಗಳು ಹಾಗೂ ಎಂ.ಪೂರ್ಣಾಚಾರ್ ಇವರೂ ಸಹ ಬೇರೆ ಬೇರೆ ಅವಧಿಗೆ ಒಡೆಯರ್‌ರ ಆಸ್ಥಾನದಿಂದ ಧರ್ಮ ಪ್ರವರ್ತಕರಾಗಿ ನೇಮಕಗೊಂಡಿದ್ದರು ಎನ್ನಲಾಗಿದೆ.

**ಬ್ರಿಟಿಷರ ಅವಧಿ**

೧೮೬೩ರಲ್ಲಿ, ಚಿತ್ರದುರ್ಗ ವಿಭಾಗವು (ಚಿತ್ರದುರ್ಗ ಡಿವಿಜನ್) ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳನ್ನು ಒಳಗೊಂಡಿದ್ದಿತು. ೧೮೭೯ರಲ್ಲಿ ಈ ವಿಭಾಗ ಪುನರ್ವಿಂಗಡಣೆಯಾಗಿ ನಂದಿದುರ್ಗದೊಂದಿಗೆ ಸೇರ್ಪಡೆಯಾಯಿತು. ೧೮೮೨ರಲ್ಲಿ ವಿಭಾಗ ಸ್ವರೂಪ ಹೋಗಿ, ಚಿತ್ರದುರ್ಗ ಪ್ರದೇಶವು ತುಮಕೂರು ಜಿಲ್ಲೆಯ

ಉಪವಿಭಾಗವಾಯಿತು. ೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆ ಪುನರ್ ಸ್ಥಾಪನೆಯಾಗಿ ೬ ತಾಲ್ಲೂಕುಗಳನ್ನು ಒಳಗೊಂಡಿತು(ಒಂದು ಉಪವಿಭಾಗ). ಅವುಗಳಲ್ಲಿ ಹೊಸದುರ್ಗ ತಾಲ್ಲೂಕು ಸೇರ್ಪಡೆಗೊಂಡಿತು.

೧೮೬೨ರಲ್ಲಿ ಲ್ಯೂವಿನ್‌ಗೌರಿಂಗ್‌ನು ಮೈಸೂರು ಕಮೀಷನರ್ ಆಗಿ, ಸಂಸ್ಥಾನವನ್ನು ೮ ಜಿಲ್ಲೆಗಳಾಗಿ ಮರುವಿಂಗಡಿಸಿದ್ದಾಗ ಜಿಲ್ಲೆಯಾದ ಚಿತ್ರದುರ್ಗದ ತಾಲ್ಲೂಕುಗಳಲ್ಲಿ ಹೊಳಲ್ಕೆರೆಯು ಹೊಸದುರ್ಗ ತಾಲ್ಲೂಕಿನ ಒಂದು ಭಾಗವಾಗಿದ್ದಿತು. ಅದೇ ವರ್ಷ ಹೊಳಲ್ಕೆರೆ ತಾಲ್ಲೂಕು ರೂಪುಗೊಂಡಿತಲ್ಲದೆ, ಹೊಸದುರ್ಗ ಮತ್ತು ಬಾಗೂರು ಹೋಬಳಿಗಳನ್ನು ಹೊಳಲ್ಕೆರೆ ತಾಲ್ಲೂಕಿಗೆ ಸೇರಿಸಿ 'ಉಪತಾಲ್ಲೂಕು' ಮಾಡಲಾಯಿತು. ನಂತರ ಅಂತಿಮವಾಗಿ ಹೊಸದುರ್ಗವು ೧೯೦೨ರಲ್ಲಿ ಪಕ್ಕಾ ತಾಲೂಕಾಯಿತು.

೧೮೬೯ರಲ್ಲಿ ಹೊಸದುರ್ಗ ಪ್ರದೇಶವನ್ನೊಳಗೊಂಡಂತೆ 'ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್'ನ್ನು ಕೃಷ್ಣರಾವ್ ಅವರು ಸಿದ್ಧಪಡಿಸಿದರು. ೧೮೦೧ರಲ್ಲಿ ಫ್ರಾನ್ಸಿಸ್ ಬುಕಾನನ್‌ನು ಹೊಸದುರ್ಗ ಪ್ರದೇಶದ ಮುಖ್ಯ ಸ್ಥಳಗಳಿಗೆ ಭೇಟಿಯಿತ್ತು ಅಧ್ಯಯನ ನಡೆಸಿ ಈ ಪ್ರದೇಶದ ಆಗಿನ ಜನಜೀವನ ಸ್ಥಿತಿಗತಿಗಳನ್ನು ತಿಳಿಸಿದ್ದಾನೆ.

ಹೊಸದುರ್ಗ ಮತ್ತು ಮತ್ತೋಡುಗಳಲ್ಲಿ ಆಂಗ್ಲರ ಕಾಲದಲ್ಲಿನ ಶಾಸನಗಳು ಹಾಗೂ ಶಾಲೆಗಳು ಇಂದಿಗೂ ಇವೆ. ಮತ್ತೋಡಿನಲ್ಲಿ ಸುಬೇದಾರನ ಮನೆ ಇಂದಿಗೂ ಇದ್ದು, ವಾಸಯೋಗ್ಯವಾಗಿದೆ. ಹೊಸದುರ್ಗ ಪ್ರದೇಶದ ಭೂ ವೈಜ್ಞಾನಿಕ ಪರಿವೀಕ್ಷಣೆಯು ಮೊದಲಿಗೆ ೧೮೯೬–೯೭ರಲ್ಲಿ ಸಾಂಬಶಿವೈಯರ್, ಮೈಸೂರು ಭೂಗರ್ಭ ಪರಿವೀಕ್ಷಣೆ ಇಲಾಖೆ ಇವರಿಂದ ನಡೆಯಿತು. (ಉಲ್ಲೇಖ:– ೧೯೦೬ ರ ವೇಳೆಗೆ 'ಶಾಸನ ಪಿತಾಮಹ' ಬಿ.ಎಲ್.ರೈಸ್ ರವರು ಹೊಸದುರ್ಗ ತಾಲ್ಲೂಕಿನ ಶಾಸನಗಳನ್ನು ಒಳಕೊಂಡಂತೆ ಚಿತ್ರದುರ್ಗ ಜಿಲ್ಲೆಯ ಶಾಸನ ಪಾಠಗಳನ್ನು ಸಂಶೋಧಿಸಿ ಪ್ರಕಟಿಸಿದರು (ಎಪಿಗ್ರಾಫಿಯಾ ಕರ್ನಾಟಿಕ). ಆಂಗ್ಲರ ಕಾಲದಲ್ಲಿ ಹೊಸದುರ್ಗದ ಕಬ್ಬಿಣದ ಕೆಲಸಗಾರರು ಪ್ರಸಿದ್ಧರಾಗಿದ್ದರು. ಈ ತಾಲ್ಲೂಕು ಪ್ರದೇಶದ ಚಿಕ್ಕಬ್ಯಾಲದಕೆರೆ ಮತ್ತು ಕಿಟ್ಟದಾಳು ಸ್ಥಳಗಳಲ್ಲಿನ ನಾಡಕಬ್ಬಿಣದ ತಯಾರಿಕಾ ಘಟಕಗಳನ್ನು ವೀಕ್ಷಿಸಲು ಆ ಕಾಲದಲ್ಲಿ ವಿದೇಶಿಯ ತಜ್ಞರು ಭೇಟಿ ನೀಡಿರುತ್ತಾರೆನ್ನಲಾಗಿದೆ ಹೊಸದುರ್ಗ ಹಾಗೂ ಜಾನಕಲ್ಲು ಪ್ರದೇಶದಲ್ಲಿ ಆದಿ ಹಳೇಶಿಲಾಯುಗದ ಕಾಲದ ಅವಶೇಷಗಳು ಪತ್ತೆಯಾಗಿವೆ.

೧೮೮೨–೯೧ರಲ್ಲಿ ಹೊಸದುರ್ಗ ಉಪತಾಲ್ಲೂಕಿನ ಪ್ರಜಾಸಂಖ್ಯೆ:೧೧,೨೧೬ ಹಾಗೂ ಹೊಸದುರ್ಗ ಪಟ್ಟಣದ ಪ್ರಜಾಸಂಖ್ಯೆ ೨,೦೬೧ ಇದ್ದಿತು. ಬ್ರಿಟಿಷರ ಕಾಲದ್ದೆನ್ನಲಾದ ಫಿರಂಗಿಯೊಂದು ಬೂದಿಹಾಳು ಹತ್ತಿರದ ಕರುಬರಹಳ್ಳಿ ಮತ್ತು ಮೈಲಾರಪುರದ ನಡುವೆ ಹಳ್ಳದ ಕಣಿವೆಯಲ್ಲಿ (೧೯೮೪ರಲ್ಲಿ) ಪತ್ತೆಯಾಗಿದ್ದಿತು. ಇಷ್ಟೆ ಅಲ್ಲದೆ ಅರೆಹಳ್ಳಿ ಗೊಲ್ಲರಹಟ್ಟಿಯಲ್ಲಿ ದೇವರೆಂದು ಪೂಜಿಸಲಾಗುತ್ತಿರುವ ಖಡ್ಗವೊಂದರಲ್ಲಿ ಈ ಕೆಳಕಂಡಂತೆ ಇಂಗ್ಲೀಷ್ ಬರಹವಿದೆ–

'PHILLIPS SELTONIA
ALL STEEL HUB
LARGE BALLS
MADE IN ENGLAND.'

ತಾಲ್ಲೂಕು ಕೇಂದ್ರವಾಗುವುದಕ್ಕೂ ಮೊದಲು ಮತ್ತೋಡು ಸ್ಥಳವು ಆಂಗ್ಲರ ಆಳ್ವಿಕೆಗೆ ಒಳಪಟ್ಟಿದ್ದ ಅವಧಿಯಲ್ಲಿನ ಸೇನಾನಿಗಳ ಖಡ್ಗವಿದಾಗಿದ್ದಿರಬಹುದು ಎನ್ನಲಾಗಿದೆ. ೧೯೨೩ರಲ್ಲಿ ಹೊಸದುರ್ಗ ಪಟ್ಟಣದಲ್ಲಿ ಪ್ರಾರಂಭಗೊಂಡ ಅಶೋಕ ವಾಚನಾಲಯ ಮತ್ತು ಮನರಂಜನಾ ಕೇಂದ್ರವು ಅಂದಿನಿಂದಲೂ ಸಾಮಾಜಿಕ ಸೇವಾಕಾರ್ಯಗಳಲ್ಲಿ ಗುರುತಿಸಿಕೊಂಡಿದೆ. ಶಾಲಾ ಕಟ್ಟಡದ ಧನಸಹಾಯ, ಸುನಾಮಿ ಸಂತ್ರಸ್ಥರಿಗೆ-ಪ್ರವಾಹ ಸಂತ್ರಸ್ಥರಿಗೆ ಧನಸಹಾಯ ಮಾಡಿದೆ, ಪ್ರತಿಭಾವಂತ ಶಿಕ್ಷಕರನ್ನು ವಿದ್ಯಾರ್ಥಿಗಳನ್ನು, ಸಾಹಿತಿಗಳನ್ನು ಸತ್ಕರಿಸಿದೆ.

## ಸ್ವಾತಂತ್ರ್ಯ ಹೋರಾಟ

ಪ್ರಾಚೀನ ಕಾಲದಿಂದಲೂ ಹೊಸದುರ್ಗ ಪ್ರದೇಶದಲ್ಲಿ ನೂರಾರು ವೀರರು ಗ್ರಾಮದ ಉಯ್ಯಿಲಲ್ಲಿ ಹಾಗೂ ತುರುಗಳ ರಕ್ಷಣೆಗಾಗಿ ನಡೆದ ಯುದ್ಧ ಹೋರಾಟಗಳಲ್ಲಿ ತಮ್ಮ ಪ್ರಾಣಾರ್ಪಣೆ ಮಾಡಿರುವ ಕುರುಹಾಗಿ ಹೆಬ್ಬಳ್ಳಿ, ಅನಿವಾಳ, ಅತ್ತಿಮಗೆ, ಜಾನಕಲ್ಲು, ಮಳಲಿ, ನಿಲುವುಗಲ್ಲು, ಮೆಣಸಿನಡು, ಕಂಚೀಬೆಟ್ಟ, ಸೋಮಸಂದ್ರ, ಹಾಲುರಾಮೇಶ್ವರ, ಅರಳೀಹಳ್ಳಿ, ಶ್ರೀರಾಂಪುರ (ಬೂದಿಹಾಳು), ಹೆಗ್ಗೆರೆ, ನೀರ್ಗುಂದ, ಬಾಗೂರು, ಕಂಗುವಳ್ಳಿ, ಬೀಸನಹಳ್ಳಿ, ಬನಸೀಹಳ್ಳಿ ಮುಂತಾದೆಡೆಗಳಲ್ಲಿ ವೀರಗಲ್ಲುಗಳು ತಮ್ಮ ಕ್ರಾಂತಿಗಾಥೆಯನ್ನು ಸಾರುತ್ತಿವೆ. ಕ್ರಿ.ಶ. ೯ನೇ ಶತಮಾನದಿಂದ ಕ್ರಿ.ಶ. ೧೪ನೇ ಶತಮಾನದವರೆಗಿನ ಇಲ್ಲಿನ ವೀರಗಲ್ಲು-ಶಾಸನಗಳಲ್ಲಿ, ಶತ್ರುಗಳೊಂದಿಗೆ ಹೋರಾಡಿ ಮಡಿದ ಚೋಳರ ಪೆಳ್ದುವಯ್ಯ ಪಿಳ್ಗುವಗ, ಬಾಕಯ್ಯ, ಮಾಯಂಣ, ಮುದ್ದಯ್ಯ, ಬಯಿಚಂಣ, ಮುದ್ದಗವುಡ, ಬಸವಪ್ಪ, ಹುರದಹಳ್ಳಿ ಸನಿಗಾವುಂಡ, ಸಿದಿಲಯ್ಯನಾಯಕ, ಮಾದಕೆರೆಯ ಲಕ್ಕಯ್ಯ, ಮುದ್ದಿಗಾವುಂಡ, ಮಾದಿಗೌಡ, ಬಮ್ಮಿಸೆಟ್ಟಿ, ನಾಗಯ್ಯ, ಮಾಳಯ್ಯ, ಜೋಗಯ್ಯ, ಸಂತೆಯಸಿರಿಯ, ಅಜಕಬೋವ, ಬೂಚಂಣ, ಜಗತುಂಗ, ಗಾವುಂಡನ ತಮ್ಮ ಪಂಚ ಮುಂತಾದ ಹೆಸರುಗಳನ್ನು ಕಾಣಬಹುದು.

ವ್ಯಾಪಾರದ ನೆಪದಲ್ಲಿ ಭಾರತಕ್ಕೆ ಬಂದ ಬ್ರಿಟಿಷರು ಇಲ್ಲಿನ ಸಂಪತ್ತು ಮತ್ತು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅರಿತುಕೊಂಡು ಈ ದೇಶವನ್ನೇ

ಸ್ವಾಧೀನ ಮಾಡಿಕೊಂಡರು. ಭಾರತೀಯರ ಮೇಲೆ ದಬ್ಬಾಳಿಕೆ–ದೌರ್ಜನ್ಯ ನಡೆಯಲಾರಂಭಿಸಿದ್ದರಿಂದ ತಾಳ್ಮೆಗೆಟ್ಟ ಭಾರತೀಯರು, ಬ್ರಿಟಿಷರ ವಿರುದ್ಧ ಸಿಡಿದೆದ್ದು, ಅವರನ್ನು ಇಲ್ಲಿಂದ ಓಡಿಸಬೇಕೆಂದು ಸಂಕಲ್ಪತೊಟ್ಟರು. ಗಾಂಧೀಜಿ ಮತ್ತಿತರರ ಪ್ರೇರಣೆಯಿಂದ ದೇಶಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹತ್ತಿತು. ಬ್ರಿಟಿಷರ ಆಡಳಿತಕ್ಕೆ ತಮ್ಮ ಅಸಹಕಾರ–ಅಡಚಣೆಗಳನ್ನು ದಿಟ್ಟತನದಿಂದ ಪ್ರದರ್ಶಿಸಿದರು. ಹೊಸದುರ್ಗ ತಾಲೂಕಿನಾದ್ಯಂತವೂ ಸಹ ಈ ಚಳವಳಿಯ ಧಾವಾಗ್ನಿ ಪಸರಿಸಿದ್ದಿತು. ಇಲ್ಲಿನ ಅನೇಕ ಚಳವಳಿಗಾರರು ತಮ್ಮ ಮನೆಗಳನ್ನು–ಮನೆಯವರನ್ನು ಮರೆತು, ತಮ್ಮ ದುಡಿಮೆಯನ್ನು ಮರೆತು, ದೇಶಕ್ಕಾಗಿ ಹೋರಾಡಿದರು. ಕೆಲವರು ಇದಕ್ಕಾಗಿಯೆ ತಮ್ಮ ನೌಕರಿಯನ್ನು ಕಳೆದುಕೊಂಡರೆ, ಮತ್ತೆ ಕೆಲವರು ತಮ್ಮ ಪ್ರಾಣವನ್ನೇ ಅರ್ಪಿಸಿದರು.

ಬ್ರಿಟಿಷರ ವಿರುದ್ಧ ಈ ತಾಲ್ಲೂಕಿನಲ್ಲಿ ನಡೆಸಲ್ಪಟ್ಟ ಚಳವಳಿಯ ಕಾರ್ಯಗಳು ಹಲವು ರೀತಿಯವು. ಸ್ವದೇಶಿ ಚಳುವಳಿ ೧೯೩೦ರಲ್ಲಿ ಪ್ರಾರಂಭವಾದಾಗಲೂ ಈ ತಾಲ್ಲೂಕಿನಲ್ಲಿ ತೀವ್ರತರವಾದ ಪ್ರಭಾವ ಕಂಡುಬಂದಿತು. ೧೯೩೪ರಲ್ಲಿ ಕಾನೂನುಭಂಗ ಚಳುವಳಿ ಇಲ್ಲಿಯೂ ವ್ಯಾಪಿಸಿತು. ಸೇಂದೀವನ ದಹನ, ರೈಲುತಡೆ, ಶಾಲೆಗಳನ್ನು ಮುಚ್ಚುವುದು, ಅಂಚೆ ಕಚೇರಿಯನ್ನು ದೋಚುವುದು, ಸೇಂದಿ ಅಂಗಡಿ ಲೂಟಿ, ಸ್ವದೇಶಿ ಧ್ವಜಾರೋಹಣ ಮುಂತಾದ ಸಾಮೂಹಿಕ ಚಟುವಟಿಕೆಗಳನ್ನು ನಡೆಸಿದರು. ಹೊಸದುರ್ಗದ ಆಲಂಪಲ್ಲಿ ಸಿದ್ದಪ್ಪ ಶೆಟ್ಟರ ಮನೆ ಈ ಚಳವಳಿಗಾರರ ಕೇಂದ್ರ ನಿವಾಸವಾಗಿದ್ದಿತು. ಈ ಚಳವಳಿಗಾರರಿಗೆ ಜನರು ಹೆಚ್ಚು ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು. ಅವರಿಗೆ ಊಟ–ತಿಂಡಿ, ಬಟ್ಟೆಗಳ ಪೂರೈಕೆ ಮಾಡುತ್ತಿದ್ದರು. ಕೆಲವು ದರ್ಜಿಗಳು ಉಚಿತವಾಗಿ ಅವರಿಗೆ ಬಿಳಿ ಟೋಪಿಗಳನ್ನು ಹೊಲೆದು ಕೊಡುತ್ತಿದ್ದರು. ಚಳವಳಿಗಾರರನ್ನು ನೋಡಲು ಹಳ್ಳಿಗಳಿಂದ ಜನರು ತಂಡೋಪತಂಡವಾಗಿ ಹೊಸದುರ್ಗಕ್ಕೆ ಬರುತ್ತಿದ್ದರು. ಅವರಿಗೆ ಹಳ್ಳಿಗಳಿಂದಲೂ ಊಟದ ಬುತ್ತಿ ತಂದು ಕೊಡುತ್ತಿದ್ದವರುಂಟು. ೧೯೪೨ರಲ್ಲಿ ಕೈನಡು ಸೂರಾಚಾರಿ ಮತ್ತು ಭಾಸ್ಕರಾಚಾರಿ ಇವರನ್ನು ಬ್ರಿಟಿಷರು ೬ ತಿಂಗಳು ಬಂದೀಖಾನೆಯಲ್ಲಿಟ್ಟಿದ್ದರು.

ಇದೇ ರೀತಿ ಇನ್ನಿತರ ಸಂದರ್ಭಗಳಲ್ಲಿ ಸೆರೆಮನೆ ಕಂಡ ಸ್ವಾತಂತ್ರ್ಯಯೋಧರ ಹೆಸರುಗಳು ಈ ರೀತಿ ಇವೆ; ಎಚ್.ಆರ್.ಇಜಾರಿ ಭೂಪಾಲಪ್ಪ, ಚಂಗಯ್ಯನಾಯ್ಡು ಬಲ್ಲಾಳಸಮುದ್ರ, ಚಿಕ್ಕಯಗಟಿ ಪರಮೇಶ್ವರಯ್ಯ, ಆಲಂಪಲ್ಲಿ ನಂಜುಂಡಶೆಟ್ಟಿ, ಬರಿಗಾಲಿ ಕುಬೇರಪ್ಪ, ಎ.ಟಿ.ಭೀಮಣ್ಣ, ಎಚ್.ಸಿ.ಕಾಳಾಚಾರ್, ಕಾಳಸೆಟ್ಟೆಪ್ಪ ಹೊಸದುರ್ಗ, ಮೂಡಲಗಿರಿಯಪ್ಪ ವೀರಾಚಾರ್ ಮಾರಬಘಟ್ಟ, ಹಂಜಿ ಸಿದ್ದಪ್ಪ, ಬೊಮ್ಮರಾಜಪ್ಪ, ಡಿ.ಬಿ.ತಿಮ್ಮಣ್ಣ, ಹಾಗೂ ಎ.ಜಿ. ಶ್ರೀನಿವಾಸಯ್ಯ, ಹೊಸದುರ್ಗ, ಕೆ.ಎನ್. ನೀಲಶೇಖರಶೆಟ್ಟಿ ಬೆಲಗೂರು, ಡಿ.ಸಿ. ಕೃಷ್ಣಪ್ಪ, ನೀರಗುಂದ, ಕೆ.ವೆಂಕಟರಾಮಯ್ಯ, ಬಿ.ಎನ್. ನರಸಿಂಹರೆಡ್ಡಿ, ಡಿ. ರಾಮಯ್ಯ ಹಾಗೂ ಎಚ್.ಕಿಟ್ಟಪ್ಪ ಬಾಗೂರು,

ನಿಂಗಪ್ಪ, ಅನಿವಾಳ, ಪಂದಿಪೆರಮಯ್ಯ, ರಾಮಯ್ಯ, ಶ್ರೀರಾಂಪುರ, ಬಸಪ್ಪ, ಹೆಬ್ಬಳ್ಳಿ, ಮಹಾದೇವಯ್ಯ, ಗಂಗಾಧರಶೆಟ್ಟಿ ಹೊಸದುರ್ಗ, ಪುಟ್ಟಯ್ಯ ನಾಗೇನಹಳ್ಳಿ ಇನ್ನೂ ಮುಂತಾದವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಸೆರೆಮನೆಗೆ ಹೋಗದಿದ್ದರೂ ಚಳುವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರು: ದೊರೆಸ್ವಾಮಿ ನಾಯ್ಡು ಬಲ್ಲಾಳ ಸಮುದ್ರ, ನಾಗಪ್ಪ, ಡಾ॥ಎಂ.ಕರೀಂಖಾನ್, ಬಾಗೂರು, ಬುಡೇನ್‌ಖಾನ್, ಹೊಸದುರ್ಗ, ಬನಪ್ಪ, ಶ್ರೀರಾಂಪುರ, ಎಂ.ವಿ.ಮೂಡಲಗಿರಿಯಪ್ಪ, ಎ.ಪಿ.ಕೇಶವಮೂರ್ತಿ, ಸಿ.ಎಂ.ಮಲ್ಲಿಕಾರ್ಜುನಯ್ಯ, ಟಿ.ರಾಮಯ್ಯ, ನೀಲಪ್ಪ, ಜಿ.ಚೌಡಪ್ಪ, ಬಾಗೂರು ಹನುಮಂತರಾಯಪ್ಪ, ಬಿ. ಈಶ್ವರಪ್ಪ, ಎ.ಶೇಷಾಚಲಪ್ಪ, ಕರಿಯಪ್ಪ, ಹನುಮಂತಪ್ಪ, ಗೋವಿಂದಪ್ಪ, ಹಾಗೂ ಸಣ್ಣ ಗೋವಿಂದಪ್ಪ, ಹೊಸಕುಂದೂರು ಮುಂತಾದವರು.

೧೯೪೭ರಲ್ಲಿ ಹೊಸದುರ್ಗದ ಆಗಿನ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್ (ಪ್ರತಿಭಟನೆ) ನಡೆಸುತ್ತಿದ್ದ ಸ್ವಾತಂತ್ರ್ಯ ಚಳವಳಿಗಾರರ ಮೇಲೆ ಪೋಲೀಸರು ೪ ಸುತ್ತು ಗುಂಡು ಹಾರಿಸಿದಾಗ, ಗುಂಡು ತಗುಲಿ ಪ್ರಾಣಾರ್ಪಣೆ ಮಾಡಿದ ದೇಶಪ್ರೇಮಿಗಳ ಹೆಸರುಗಳು, ಈಗಿನ ಗಣೇಶ ಮಂಟಪದ ಎದುರಿಗೆ (ಹುತಾತ್ಮರ ಗೌರವಾರ್ಥ) ನಿಲ್ಲಿಸಿರುವ ವೀರಗಲ್ಲಿನಲ್ಲಿವೆ. ಆ ಫಲಕ ಆರಡಿ ಎತ್ತರವಿದ್ದು, ಅದರಲ್ಲಿನ ಹೆಸರುಗಳು ಹೀಗಿವೆ;

**ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮರು ಹೊಸದುರ್ಗ**
**ಕಾಡಪ್ಪ ಬಿನ್ ಕುಕೇರಜ್ಜ**
**ಹನುಮಂತಪ್ಪ ಬಿನ್ ಕರಿಯಪ್ಪ**
**ಗಿರಿತಿಮ್ಮಯ್ಯ ಬಿನ್ ತಾಳೆ ತಿಮ್ಮಯ್ಯ**
**ಸಣ್ಣಮ್ಮ ಕೋಂ ರಂಗಣ್ಣ**
**ಎಣ್ಣೆಗೆರೆ ರಾಮ ಯಳನಡು.**

ಇವರಲ್ಲಿ ಮೊದಲನೆಯವರು ಬಂಟನಗವಿ ಕಾಟಪ್ಪ, ನಂತರ, ಹನುಮಯ್ಯ ಕೊಂಡಾಪುರ (ಇವರು ಗುಂಡೇಟಿನಿಂದ ಸ್ಥಳದಲ್ಲೇ ಮಡಿದರು) ಮಾರುಗೊಂಡನ ದಿಬ್ಬದ ಗಿರೇತಿಮ್ಮಯ್ಯ, ಗುತ್ತಿಕಟ್ಟೆ ಸಣ್ಣಮ್ಮ ಇವರಲ್ಲದೆ ಗುಂಡೇಟಿನಿಂದ ಗಾಯಗೊಂಡವರೆಂದರೆ, ಅತ್ತಿಮಗೆಯ ಗಂಗಮ್ಮ ಕೋಂ ವರದಪ್ಪ ಮಾಚೇನಹಳ್ಳಿ ಗಿರೇತಿಮ್ಮಯ್ಯ, ಹೊನ್ನೇನಹಳ್ಳಿಯ ಶಂಕರಪ್ಪ, ಮಲ್ಲಿಹಳ್ಳಿ ನಿಂಗಪ್ಪ, ದೇವಪುರದ ಗೋವಿಂದಪ್ಪ ಮತ್ತು ನಾಗೇನಹಳ್ಳಿಯ ರಾಮಣ್ಣ ಇವರುಗಳು.

೧೯೩೭ರಲ್ಲಿ ಬಾಗೂರಿನಲ್ಲಿ ನಡೆದ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಈ ನಾಡಿನ ಪ್ರಖ್ಯಾತ ಕಾದಂಬರಿಕಾರ ತ.ರಾ.ಸುಬ್ಬರಾವ್ (ತ.ರಾ.ಸು.) ಅವರು ಪೋಲೀಸರಿಂದ

ದಸ್ತಗಿರಿಯಾಗಿದ್ದರು. ಸದರಿ ವರ್ಷದಲ್ಲಿ ಹೊಸದುರ್ಗ ಪಟ್ಟಣದಿಂದ ಹೊಸದುರ್ಗ ರೈಲ್ವೆ ನಿಲ್ದಾಣಕ್ಕೆ ರಸ್ತೆ ನಿರ್ಮಾಣವಾಯಿತು. 'ಹೊಸದುರ್ಗ ಮತ್ತು ಬಾಗೂರು ಮುಂತಾದೆಡೆ ನಡೆದ, ಸ್ವಾತಂತ್ರ್ಯ ಹೋರಾಟ-ಸತ್ಯಾಗ್ರಹ ಮನೆಮಾತಾದುದು' ಎಂದು ರಾಷ್ಟ್ರನಾಯಕ ಎಸ್.ನಿಜಲಿಂಗಪ್ಪನವರು ಹೇಳಿದ್ದಾರೆ. ಸ್ವಾತಂತ್ರ್ಯ ಪೂರ್ವದ ಮುಖ್ಯವಾದ ಸಾಮಾಜಿಕ/ಸಾಂಸ್ಕೃತಿಕ ಕಾರ್ಯವೊಂದು ೧೯೨೩ರಲ್ಲಿ ತಾಲ್ಲೂಕಿನಲ್ಲಿ ಜರುಗಿತು. ಅಂದರೆ, ನೀರಗುಂದದಲ್ಲಿದ್ದ ಹೊಯ್ಸಳರ ಕಾಲದ ಕಲಾತ್ಮಕ ದೊಡ್ಡ ಗಣಪತಿಯ ಶಿಲಾವಿಗ್ರಹವನ್ನು ಹೊಸದುರ್ಗಕ್ಕೆ ಸ್ಥಳಾಂತರಿಸಲಾಯಿತು. ಆಗಿನ ಅಮಲ್ದಾರರಾಗಿದ್ದ ಸುಬ್ರಹ್ಮಣ್ಯಶಾಸ್ತ್ರಿಯವರು ಈ ಕಾರ್ಯದ ನೇತೃತ್ವ ವಹಿಸಿದ್ದರು. ಎರಡು ಗಾಡಿ(ಚಕ್ಕಡಿ)ಗಳನ್ನು ಜೋಡಿಸಿಕಟ್ಟಿ, ನಾಲ್ಕು ಹೋರಿಗಳನ್ನು ಹೂಡಿ ಆ ಬೃಹತ್ ವಿಗ್ರಹವನ್ನು ಸಾಗಿಸಲಾಯಿತು. ಕೃಷ್ಣಶಿಲೆಯ ಈ ಗಣಪತಿಯನ್ನು ಆಗಿನ ಅಮಲ್ದಾರ್ ಕಛೇರಿಯ ಈಗಿನ ಶಿರಸ್ತೇದಾರ್ ಕಛೇರಿ ಮುಂಭಾಗದಲ್ಲಿ ೨೩ನೇ ಜೂನ್ ೧೯೪೩ರಂದು ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು (ವಿಗ್ರಹದ ಎತ್ತರ ೮ ಅಡಿ ಹಾಗೂ ಅಗಲ ೪ ಅಡಿ).

ಸ್ವಾತಂತ್ರ್ಯೋತ್ತರದ ಮುಖ್ಯ ಬೆಳವಣಿಗೆಯೆಂದರೆ, ೧೯೫೪ರಿಂದ ಶುಲ್ಕಗಳ ಪದ್ಧತಿ ಜಾರಿಗೆ ಬಂದುದು ಹಾಗೂ ದಶಕಗಳ ಹಿಂದೆ (೧೯೭೮-೭೯ ರ ತರುವಾಯ) ಹೊಸದುರ್ಗ ತಾಲ್ಲೂಕಿನ ಮಾಡದಕೆರೆ, ಮತ್ತೋಡು ಮತ್ತು ಕಂಚೀಪುರಗಳಲ್ಲಿ ಸಿಮೆಂಟ್ ಕಾರ್ಖಾನೆಗಳು ಸ್ಥಾಪನೆಗೊಂಡು ಉತ್ಪಾದನೆಯನ್ನು ಪ್ರಾರಂಭಿಸಿದುದೇ ಆಗಿದೆ. ೧೯೪೭ರಿಂದ ಹೊಸದುರ್ಗದ ಅಶೋಕ ವಾಚನಾಲಯ ಮತ್ತು ಮನರಂಜನಾ ಕೇಂದ್ರದ ಆವರಣ (ಈಗಿನ ಅಶೋಕ ರಂಗಮಂದಿರದ ಜಾಗ)ದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ನಡೆಯುತ್ತಿದ್ದಿತು. ಆಗ ಇಲ್ಲಿ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಸಂಸ್ಥೆಯು ಸಿಹಿ ಹಂಚುವ ಸಂಪ್ರದಾಯವನ್ನು ಪ್ರಾರಂಭಿಸಿತು.

**ಚುನಾವಣೆಗಳು**

ಮೈಸೂರು ಸಂಸ್ಥಾನವು ಬ್ರಿಟಿಷ್ ಆಡಳಿತ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾಗುವ ಮುನ್ನವೇ, ೧೮೮೧ರಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯನ್ನು ಸ್ಥಾಪಿಸಿ, ಪ್ರತಿಯೊಂದು ತಾಲೂಕಿನಿಂದಲೂ ಪ್ರತಿಷ್ಠಿತ ವರ್ಗಕ್ಕೆ ಸೇರಿದ ಗಣ್ಯರನ್ನು ಒಂದೊಂದು ವರ್ಷದ ಅವಧಿಗೆ ನಾಮಕರಣ ಮಾಡಿಕೊಳ್ಳುವ ಮೂಲಕ ಪ್ರಜಾ ಆಡಳಿತ ವ್ಯವಸ್ಥೆಗೆ ಮುನ್ನುಡಿ ಬರೆಯಿತು. ತರುವಾಯ ಕಾಲಕಾಲಕ್ಕಾದ ಸುಧಾರಣೆಗಳ ಪರಿಣಾಮವಾಗಿ, ಅಂತಿಮವಾಗಿ ಮತದಾನದ ಹಕ್ಕು ರೂ.೨೫ ಭೂಕಂದಾಯ ಅಥವಾ ರೂ.೫ ಮನೆಕಂದಾಯ ತೆರುವ ವ್ಯಕ್ತಿಗೆ ದೊರೆಯುವಂತಾಯಿತು. ಇದರಿಂದ ಸದಸ್ಯತ್ವದ ಅವಧಿಯು ನಾಲ್ಕು ವರ್ಷಗಳವರೆಗೆ ವಿಸ್ತರಿಸಲ್ಪಟ್ಟಿತು. ಅಲ್ಲದೆ, ಮಹಿಳೆಯರಿಗೂ ಮತದಾನದ ಹಕ್ಕು ದೊರೆತು ಮೀಸಲಾತಿಯು ಲಭಿಸಿತು.

## ಇತಿಹಾಸ

ಹೊಸದುರ್ಗ ತಾಲ್ಲೂಕಿನ ಭೂಪಾಳಂ ನಂಜುಂಡಯ್ಯನವರು ಒಟ್ಟು ೨೫ ವರ್ಷಗಳ ಕಾಲ 'ಪ್ರಜಾಪ್ರತಿನಿಧಿ ಸಭೆ'ಯ ಸದಸ್ಯರಾಗಿದ್ದು, ಮಹಾರಾಜರಿಂದ 'ಧರ್ಮಪ್ರವರ್ತಕ' ಎಂಬ ಬಿರುದನ್ನೂ ಬಂಗಾರದ ಪದಕವನ್ನೂ ಪಡೆದಿದ್ದರು. ಭೂಪಾಳಂರವರು ಹೊಸದುರ್ಗ ಪಟ್ಟಣದಲ್ಲಿ ಧರ್ಮಛತ್ರವೊಂದನ್ನು ಕಟ್ಟಿಸಿದರಲ್ಲದೆ, ಹೆರಿಗೆ ಆಸ್ಪತ್ರೆ, ಪಶುಚಿಕಿತ್ಸಾಲಯ ಕಟ್ಟಡ ಕಟ್ಟಿಸಿದ್ದರು, ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ ಕಟ್ಟಡಕ್ಕೆ ನೆರವಾಗಿದ್ದರು. (ಐವತ್ತು ಸಹಸ್ರ ರೂ. ದಾನ) ಬಾವಿ, ಕೊಳವೆಬಾವಿ ತೋಡಿಸಿದ್ದರು. 'ಪ್ರಜಾಪ್ರತಿನಿಧಿ ಸಭೆ'ಯ ಸದಸ್ಯರಾಗಿ ನಾಮಕರಣಗೊಂಡಿದ್ದ ಇತರರೆಂದರೆ ಬಾಗೂರಿನ ಕೆ.ವಿ.ತಿಮ್ಮಯ್ಯ ಹಾಗೂ ಬಿ.ವಿ. ನಾಗೇಶಶೆಟ್ಟಿ ಅವರು. ಇವರು ಸಲ್ಲಿಸಿದ ಸಮಾಜ ಸೇವೆಗಾಗಿ ಇವರಿಗೆ ಕರ್ನಾಟಕ ಸರ್ಕಾರದ ಸೇವಾ ಪ್ರಶಸ್ತಿ ಮತ್ತು ಬಂಗಾರದ ಪದಕ ದೊರೆತಿದ್ದಿತು.

ಹೊಸದುರ್ಗ ತಾಲ್ಲೂಕಿನ ರಾಜಕೀಯ ಇತಿಹಾಸದಲ್ಲಿ ಮೊದಲು ವಿಧಾನಸಭಾ ಚುನಾವಣೆಯ ಮೂಲಕ ಶಾಸಕರಾದವರೆಂದರೆ ಚಿಕ್ಕಯಗಟಿ ಗ್ರಾಮದ ಜಿ.ಬಸಪ್ಪನವರು. ೧೯೫೨ರಲ್ಲಿ ಆಯ್ಕೆಯಾಗಿದ್ದ ಇವರು, ೧೯೮೩ರಲ್ಲಿ ಪುನಃ ಶಾಸಕರಾಗಿ ಆಯ್ಕೆಯಾದರು. ಬೆಲಗೂರಿನವರಾದ ಬಿ.ಎಸ್.ಶಂಕರಪ್ಪನವರು ೧೯೫೭ರಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆದ್ದರು. ೧೯೬೨ರಲ್ಲಿ ನಡೆದ ಹೊಸದುರ್ಗ ಚುನಾವಣೆಯು ರಾಜ್ಯದಲ್ಲಿಯೇ ಸುದ್ದಿ ಮಾಡಿತು. ರಾಜ್ಯದ ರಾಜಕೀಯ ಮುತ್ಸದ್ದಿ ಎಸ್.ನಿಜಲಿಂಗಪ್ಪನವರು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವತಿಯಿಂದ ಇಲ್ಲಿ ಸ್ಪರ್ಧಿಸಿ ಪರಾಭವಗೊಂಡರು. ಅವರ ವಿರುದ್ಧ ಸ್ಪರ್ಧಿಸಿ ಜಯಗಳಿಸಿದವರೆಂದರೆ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಅಭ್ಯರ್ಥಿ ಬಾಗೂರು ಗ್ರಾಮದ ಜಿ.ಟಿ.ರಂಗಪ್ಪನವರು ೧೯೬೭ರಲ್ಲಿ ನಡೆದ ಚುನಾವಣೆಯಲ್ಲಿ ಮಳಲಕೆರೆ ರಾಮಪ್ಪನವರು ಇಲ್ಲಿ ಗೆದ್ದು ಶಾಸಕರಾದರು. ಇವರ ವಿರುದ್ಧ ಸ್ಪರ್ಧಿಸಿ ಸೋಲನುಭವಿಸಿದ್ದ ಎಂ.ವಿ.ರುದ್ರಪ್ಪನವರು, ೧೯೭೨ರಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿ ಶಾಸಕರಾದರು. ಮುಂದೆ ಇವರು, ೧೯೮೧ರಲ್ಲಿ ನಡೆದ ಉಪಚುನಾವಣೆಯಲ್ಲಿಯೂ ಪುನ: ವಿಜೇತರಾದರು. ೧೯೭೮ರಲ್ಲಿ ಶಾಸಕರಾಗಿ ಆಯ್ಕೆಗೊಂಡಿದ್ದ ಕೆ.ವೆಂಕಟರಾಮಯ್ಯನವರು ಶಾಸಕರಾಗಿದ್ದಾಗಲೆ ೧೯೮೧ರಲ್ಲಿ ಅಕಾಲ ಮರಣಕ್ಕೀಡಾದುದರಿಂದ, ದಿನಾಂಕ ೧೪-೬-೧೯೮೧ರಂದು ಹೊಸದುರ್ಗ ವಿಧಾನಸಭಾಕ್ಷೇತ್ರಕ್ಕೆ ಮರುಚುನಾವಣೆ ನಡೆದಿದ್ದಿತು.

೧೯೮೩ರಲ್ಲಿ ಜಿ.ಬಸಪ್ಪನವರು ಎರಡನೆಯ ಬಾರಿಗೆ ಶಾಸಕರಾದರು. ೧೯೮೫ರಲ್ಲಿ ಜಿ.ರಾಮದಾಸ್ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆದ್ದರು. ಅನುಕ್ರಮವಾಗಿ ೧೯೮೯ರಲ್ಲಿ ಇಳ್ಕಲ್ ವಿಜಯಕುಮಾರ್, ೧೯೯೪ರಲ್ಲಿ ಟಿ.ಎಚ್.ಬಸವರಾಜ್, ೧೯೯೯ರಲ್ಲಿ, ೨೦೦೪ರಲ್ಲಿ ಹಾಗೂ ೨೦೧೩ರಲ್ಲಿ ಬಿ.ಜಿ.ಗೋವಿಂದಪ್ಪ ಶಾಸಕರಾಗಿ ತಾಲ್ಲೂಕಿನಲ್ಲಿ ಅನೇಕ ಕಿರು ಜಲಾಶಯಗಳನ್ನು ನಿರ್ಮಿಸಿ ಅಂತರ್ಜಲದ ರಕ್ಷಣೆಗೆ

ಒತ್ತು ಕೊಟ್ಟರು. ೨೦೦೮ರಲ್ಲಿ ಶಾಸಕರಾಗಿ ಆಯ್ಕೆಗೊಂಡಿದ್ದ ಸ್ವತಂತ್ರ ಅಭ್ಯರ್ಥಿ ಗೂಳಿಹಟ್ಟಿ ಡಿ.ಶೇಖರ್‌ರವರು ಹೊಸದುರ್ಗದ ರಾಜಕೀಯ ಇತಿಹಾಸದಲ್ಲೇ ಮೊದಲ ಬಾರಿಗೆ ಸಚಿವರಾಗಿ ದಾಖಲೆ ನಿರ್ಮಿಸಿರುತ್ತಾರೆ. ಇವರು ಹೊಸದುರ್ಗ ಪಟ್ಟಣದಲ್ಲಿ ಕ್ರೀಡಾಂಗಣ, ಈಜುಕೊಳ, ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಿಸಿದರಲ್ಲದೆ ದೇಗುಲಗಳ ಜೀರ್ಣೋದ್ಧಾರ, ಸಮುದಾಯ ಭವನ (ವಿವಿಧ ಗ್ರಾಮಗಳಲ್ಲಿ) ಹಾಗೂ ಪ್ರಸಿದ್ಧ ಪುಣ್ಯಕ್ಷೇತ್ರ ಹಾಲುರಾಮೇಶ್ವರದ ಜೀರ್ಣೋದ್ಧಾರ ಮುಂತಾದವುಗಳನ್ನು ಕೈಗೊಂಡರು. ಜಿ.ಬಸಪ್ಪ, ಎಂ.ವಿ.ರುದ್ರಪ್ಪ ಹಾಗೂ ಗೂಳೀಹಟ್ಟಿ ಶೇಖರ್ ಇವರು ತಲಾ ಎರಡೆರಡು ಬಾರಿ ಶಾಸಕರಾಗಿ ಆಯ್ಕೆಯಾದ ಅಭ್ಯರ್ಥಿಗಳಾದರೆ, ಬಿ.ಜಿ.ಗೋವಿಂದಪ್ಪನವರು ಮೂರು ಬಾರಿ ಶಾಸಕರಾಗಿ ದಾಖಲೆ ನಿರ್ಮಿಸಿದ್ದಾರೆ.

ಲೋಕಸಭೆ ಹಾಗೂ ವಿಧಾನಸಭಾ ಚುನಾವಣಾ ಫಲಿತಾಂಶಗಳ ತಃಖ್ತೆಗಳನ್ನು ಮುಂದೆ ನೀಡಲಾಗಿದೆ.

### ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ೧೯೫೨–೨೦೧೪

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ | ದ್ವಿತೀಯ ಸ್ಥಾನಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ |
|---|---|---|
| ೧೯೫೨, ಚಿತ್ರದುರ್ಗ | **ಎಸ್. ನಿಜಲಿಂಗಪ್ಪ** (ಭಾ.ರಾ.ಕಾಂ) ೧,೨೬, ೫೮೪ (೫೮.೦೧) | ಕ.ಮ.ಪ್ರ.ಪಾ. ೪೭, ೪೭೨ (೨೧.೭೩) |
| ೧೯೫೭, ಚಿತ್ರದುರ್ಗ | **ಮುಷೀರ್‌ಉಲ್‌ಮಲಿಕ್ (ಜೆ. ಎಂ.ಮಹಮದ್‌ಇಮಾಂಸಾಬ್)** ಪ್ರ.ಸೋ.ಪಾ.೧,೨೯,೮೪೮ (೫೨.೨೪) | ಭಾ.ರಾ.ಕಾಂ. ೧,೧೮,೬೫೯ (೪೭.೭೬) |
| ೧೯೬೨, ಚಿತ್ರದುರ್ಗ | **ಎಸ್.ವೀರಬಸಪ್ಪ** (ಭಾ.ರಾ.ಕಾ) ೧,೭೨,೬೭೩ (೫೪.೪೨) | ಪ್ರ.ಸೋ.ಪಾ. ೧,೨೭,೬೧೬ (೪೦.೬೬) |
| ೧೯೬೭, ಚಿತ್ರದುರ್ಗ | **ಜೆ.ಎಂ.ಇಮಾಂ,** (ಪಕ್ಷೇತರ) ೧,೬೪,೫೪೮ (೫೦.೪೫) | ಭಾ.ರಾ.ಕಾಂ. ೧,೩೨,೬೧೬ (೪೦.೬೬) |
| ೧೯೭೧, ಚಿತ್ರದುರ್ಗ | **ಕೊಂಡಜ್ಜಿ ಬಸಪ್ಪ** ಭಾ.ರಾ.ಕಾಂ. (ಜ) ೨,೫೧,೦೦೫ (೭೪.೫೭) | ಪಕ್ಷೇತರ. ೮೧,೩೦೩ (೨೪.೧೮) |

| | | |
|---|---|---|
| ೧೯೭೭,<br>ಚಿತ್ರದುರ್ಗ | **ಕೆ.ಮಲ್ಲಣ್ಣ** (ಭಾ.ರಾ.ಕಾಂ)<br>೨,೨೭,೯೨೬ (೬೧.೨೯) | ಭಾ.ಲೋ.ದ.<br>೧,೪೧,೨೭೨ (೩೭.೯೯) |
| ೧೯೮೦,<br>ಚಿತ್ರದುರ್ಗ | **ಕೆ. ಮಲ್ಲಣ್ಣ,** ಭಾ.ರಾ.ಕಾಂ. (ಐ)<br>೨,೧೫,೧೮೦ (೫೧.೪೪) | ಜ.ಪಾ.<br>೧,೦೫,೮೧೯ (೨೫.೩೦) |
| ೧೯೮೪,<br>ಚಿತ್ರದುರ್ಗ | **ಕೆ.ಎಚ್.ರಂಗನಾಥ್** (ಭಾ.ರಾ.ಕಾಂ).<br>೨,೭೯,೧೪೬ (೫೨.೩೦) | ಜ.ಪಾ.<br>೨,೨೨,೩೫೫ (೪೧.೬೫) |
| ೧೯೮೯,<br>ಚಿತ್ರದುರ್ಗ | **ಸಿ.ಪಿ.ಮೂಡಲಗಿರಿಯಪ್ಪ**<br>(ಭಾ.ರಾ.ಕಾಂ).<br>೩,೩೯,೩೦೩ (೫೧.೨೦) | ಜ.ದ.<br>೧,೯೭,೧೧೦ (೨೯.೮೦) |
| ೧೯೯೧,<br>ಚಿತ್ರದುರ್ಗ | **ಸಿ.ಪಿ.ಮೂಡಲಗಿರಿಯಪ್ಪ**<br>(ಭಾ.ರಾ.ಕಾಂ).<br>೩,೦೨,೨೬೭ (೫೨.೪೯) | ಭಾ.ಜ.ಪಾ.<br>೨,೨೦,೩೩೫ (೩೮.೧೯) |
| ೧೯೯೬,<br>ಚಿತ್ರದುರ್ಗ | **ಪಿ.ಕೋದಂಡರಾಮಯ್ಯ,** (ಜ.ದ.)<br>೨,೫೧,೬೧೭, (೩೫.೬೭) | ಭಾ.ರಾ.ಕಾಂ.<br>೨,೩೨,೨೩೫ (೩೨.೯೨) |
| ೧೯೯೮,<br>ಚಿತ್ರದುರ್ಗ | **ಸಿ.ಪಿ.ಮೂಡಲಗಿರಿಯಪ್ಪ** (ಭಾ.ರಾ.ಕಾಂ.)<br>೩,೨೧,೯೩೦ (೪೨.೮೮) | ಲೋಕಶಕ್ತಿ.<br>೨,೬೩,೬೯೦ (೩೫.೧೧) |
| ೧೯೯೯,<br>ಚಿತ್ರದುರ್ಗ | **ಶಶಿಕುಮಾರ್,** ಜ.ದ.(ಯು)<br>೩,೭೦,೭೯೩ (೪೫.೦೦) | ಭಾ.ರಾ.ಕಾಂ.<br>೩,೫೯,೬೧೫ (೪೩.೦೦) |
| ೨೦೦೪,<br>ಚಿತ್ರದುರ್ಗ | **ಎನ್.ವೈ.ಹನುಮಂತಪ್ಪ** (ಭಾ.ರಾ.ಕಾಂ)<br>೩,೨೨,೬೦೯ (೩೫.೧೧) | ಜ.ದ. (ಎಸ್).<br>೨,೮೫,೧೪೯ (೩೧.೦೩) |
| ೨೦೦೯,<br>ಚಿತ್ರದುರ್ಗ | **ಜನಾರ್ಧನಸ್ವಾಮಿ,** (ಭಾ.ಜ.ಪಾ)<br>೩,೭೦,೯೨೦ (೪೪.೩೭%) | ಭಾ.ರಾ.ಕಾಂ.<br>೨,೩೫,೩೪೯ (೨೮.೧೫) |
| ೨೦೧೪<br>ಚಿತ್ರದುರ್ಗ | **ಬಿ.ಎನ್.ಚಂದ್ರಪ್ಪ,** (ಭಾ.ರಾ.ಕಾಂ.)<br>೪,೬೭,೩೭೨ (೪೨.೬೦) | ಜನಾರ್ಧನಸ್ವಾಮಿ,<br>(ಭಾ.ಜ.ಪಾ)<br>೩,೬೬,೨೨೦ (೩೩.೪೦) |

## ಹೊಸದುರ್ಗ ತಾಲ್ಲೂಕು ವಿಧಾನಸಭಾ ಕ್ಷೇತ್ರದ ಚುನಾವಣೆಗಳ ಫಲಿತಾಂಶ (೧೯೫೨–೨೦೧೩)

| ವರ್ಷ | ವಿಧಾನಸಭಾ ಕ್ಷೇತ್ರ | ಕ್ಷೇತ್ರದ ಹೆಸರು | ವರ್ಗ | ವಿಜೇತರು | ಲಿಂಗ | ಪಕ್ಷ | ಮತಗಳು | ಎರಡನೇ ಸ್ಥಾನ | ಲಿಂಗ | ಪಕ್ಷ | ಮತಗಳು |
|---|---|---|---|---|---|---|---|---|---|---|---|
| ೧೯೫೭ | ೯೦ | ಹೊಸದುರ್ಗ | (ಸಾಮಾನ್ಯ) | ಬಿ.ಎಸ್. ಶಂಕರಪ್ಪ | ಪು | ಐಎನ್‌ಡಿ | ೧೨೭೨೭ | ಗಂಗಮ್ಮ | ಮ | ಐಎನ್‌ಸಿ | ೮೧೭೫ |
| ೧೯೬೨ | ೧೦೧ | ಹೊಸದುರ್ಗ | (ಸಾಮಾನ್ಯ) | ಜಿ.ಟಿ. ರಂಗಪ್ಪ | ಪು | ಪಿಎಸ್‌ಪಿ | ೨೨೦೨೪ | ಎಸ್. ನಿಜಲಿಂಗಪ್ಪ | ಪು | ಐಎನ್‌ಸಿ | ೧೬೩೧೫ |
| ೧೯೬೭ | ೪೭ | ಹೊಸದುರ್ಗ | (ಸಾಮಾನ್ಯ) | ಎಂ. ರಾಮಪ್ಪ | ಪು | ಐಎನ್‌ಸಿ | ೨೨೧೫೭ | ಎಂ.ವಿ. ರುದ್ರಪ್ಪ | ಪು | ಪಿಎಸ್‌ಪಿ | ೧೭೭೮೧ |
| ೧೯೭೨ | ೪೭ | ಹೊಸದುರ್ಗ | (ಸಾಮಾನ್ಯ) | ಎಂ.ವಿ. ರುದ್ರಪ್ಪ | ಪು | ಐಎನ್‌ಸಿ | ೩೧೩೭೫ | ಜಿ. ಬಸಪ್ಪ | ಪು | ಎನ್‌ಸಿಒ | ೧೮೧೪೧ |
| ೧೯೭೮ | ೫೦ | ಹೊಸದುರ್ಗ | (ಸಾಮಾನ್ಯ) | ಕೆ. ವೆಂಕಟರಾಮಯ್ಯ | ಪು | ಐಎನ್‌ಸಿ(ಐ) | ೩೦೫೩೯ | ಕೆ.ಆರ್.ಶಿವಪ್ರಕಾಶ್ | ಪು | ಐಎನ್‌ಸಿ | ೧೩೨೮೫ |
| ೧೯೮೨ | ಉಪ ಚುನಾವಣೆ | ಹೊಸದುರ್ಗ | (ಸಾಮಾನ್ಯ) | ಎಂ.ವಿ. ರುದ್ರಪ್ಪ | ಪು | ಐಎನ್‌ಸಿ | ೨೫೪೪೮ | ಜಿ. ಬಸಪ್ಪ | ಪು | ಜೆಎನ್‌ಪಿ | ೨೦೨೫೬ |
| ೧೯೮೩ | ೫೦ | ಹೊಸದುರ್ಗ | (ಸಾಮಾನ್ಯ) | ಜಿ. ಬಸಪ್ಪ | ಪು | ಜೆಎನ್‌ಪಿ | ೩೯೮೭೭ | ಎಂ.ವಿ. ರುದ್ರಪ್ಪ | ಪು | ಐಎನ್‌ಸಿ | ೨೭೯೧೩ |
| ೧೯೮೫ | ೫೦ | ಹೊಸದುರ್ಗ | (ಸಾಮಾನ್ಯ) | ಜಿ. ರಾಮ್‌ದಾಸ್ | ಪು | ಐಎನ್‌ಸಿ | ೩೭೫೬೨ | ಎಂ. ಸಣ್ಣಚಿಕ್ಕಣ್ಣ | ಪು | ಜೆಎನ್‌ಪಿ | ೩೭೩೨೮ |
| ೧೯೮೯ | ೫೦ | ಹೊಸದುರ್ಗ | (ಸಾಮಾನ್ಯ) | ಇ. ವಿಜಯ್‌ಕುಮಾರ್ | ಪು | ಐಎನ್‌ಡಿ | ೪೧೭೦೩ | ಬಿ.ಎಸ್. ದ್ಯಾಮಪ್ಪ | ಪು | ಐಎನ್‌ಡಿ | ೧೮೬೧೫ |
| ೧೯೯೪ | ೫೦ | ಹೊಸದುರ್ಗ | (ಸಾಮಾನ್ಯ) | ಟಿ.ಹೆಚ್. ಬಸವರಾಜ | ಪು | ಐಎನ್‌ಡಿ | ೨೬೪೫೩ | ಇ.ವಿ. ವಿಜಯ್‌ಕುಮಾರ್ | ಪು | ಐಎನ್‌ಸಿ | ೨೧೩೮೪ |
| ೧೯೯೯ | ೫೦ | ಹೊಸದುರ್ಗ | (ಸಾಮಾನ್ಯ) | ಬಿ.ಜಿ. ಗೋವಿಂದಪ್ಪ | ಪು | ಐಎನ್‌ಡಿ | ೨೬೩೭೨ | ಎಲ್‌ಕಲ್ ವಿಜಯ್‌ಕುಮಾರ್ | ಪು | ಐಎನ್‌ಡಿ | ೨೫೧೪೫ |
| ೨೦೦೪ | ೫೦ | ಹೊಸದುರ್ಗ | (ಸಾಮಾನ್ಯ) | ಬಿ.ಜಿ. ಗೋವಿಂದಪ್ಪ | ಪು | ಐಎನ್‌ಸಿ | ೪೯೭೮೦ | ಎಲ್‌ಕಲ್ ವಿಜಯ್‌ಕುಮಾರ್ | ಪು | ಜೆಡಿ(ಎಸ್) | ೨೯೦೫೨ |
| ೨೦೦೮ | ೧೦೧ | ಹೊಸದುರ್ಗ | (ಸಾಮಾನ್ಯ) | ಗೂಳಿಹಟ್ಟಿ ಡಿ. ಶೇಖರ್ | ಪು | ಐಎನ್‌ಡಿ | ೪೧೭೯೮ | ಬಿ.ಜಿ. ಗೋವಿಂದಪ್ಪ | ಪು | ಐಎನ್‌ಸಿ | ೪೦೬೩೦ |
| ೨೦೧೩ | ೧೦೧ | ಹೊಸದುರ್ಗ | (ಸಾಮಾನ್ಯ) | ಬಿ.ಜಿ. ಗೋವಿಂದಪ್ಪ | ಪು | ಐಎನ್‌ಸಿ | ೫೮೦೧೦ | ಗೂಳಿಹಟ್ಟಿ ಡಿ. ಶೇಖರ್ | ಪು | ಐಎನ್‌ಡಿ | ೩೭೯೯೩ |
| ೨೦೧೮ | | ಹೊಸದುರ್ಗ | (ಸಾಮಾನ್ಯ) | ಗೂಳಿಹಟ್ಟಿ ಡಿ. ಶೇಖರ್ | ಪು | ಬಿಜೆಪಿ | ೯೦೫೬೨ | ಬಿ.ಜಿ. ಗೋವಿಂದಪ್ಪ | ಪು | ಐಎನ್‌ಸಿ | ೬೪೫೭೦ |

ಹೊಸದುರ್ಗ ತಾಲ್ಲೂಕಿನ ಇದುವರೆಗಿನ ವಿಧಾನಸಭಾ ಚುನಾವಣೆಗಳಲ್ಲಿ ೭ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿರುತ್ತಾರೆ. ಎರಡನೆಯ ಸ್ಥಾನ, ಅಂದರೆ ಸ್ವತಂತ್ರ (ಪಕ್ಷೇತರ) ಅಭ್ಯರ್ಥಿಗಳು ಇದುವರೆಗೆ ೫ ಅಭ್ಯರ್ಥಿಗಳು ಶಾಸಕರಾಗಿದ್ದಾರೆ. ಅಲ್ಲದೆ, ಪ್ರಜಾಸೋಷಿಯಲಿಸ್ಟ್ ಅಭ್ಯರ್ಥಿ–೧ ಮತ್ತು ಜನತಾಪಕ್ಷದ ಅಭ್ಯರ್ಥಿ ಒಬ್ಬರು ಇಲ್ಲಿ ವಿಜಯಿಗಳಾಗಿದ್ದಾರೆ. (ಒಂದು ಭಾರಿ ಮಧ್ಯಂತರ ಚುನಾವಣೆ ನಡೆದಿರುವುದೂ ಸೇರಿ) ಒಟ್ಟು ೧೪ ಬಾರಿ ಹೊಸದುರ್ಗ ವಿಧಾನಸಭಾ ಕ್ಷೇತ್ರದ ಚುನಾವಣೆ ನಡೆದಿದೆ.

೧೯೫೨ರಲ್ಲಿ ಹೊಸದುರ್ಗ ತಾಲ್ಲೂಕಿನ ಮತದಾರರ ಸಂಖ್ಯೆ ೪೦,೧೨೬ ಇದ್ದುದು, ೧೯೫೭ರಲ್ಲಿ ೪೬,೪೧೧ಕ್ಕೆ, ೧೯೬೨ರಲ್ಲಿ ೫೪,೦೪೮ಕ್ಕೆ, ೧೯೬೭ರಲ್ಲಿ ೬೨,೪೮೬ಕ್ಕೆ ಏರಿತು. ಅದೇ ರೀತಿ ೧೯೭೨ರಲ್ಲಿ ೭೬,೨೪೨ಕ್ಕೆ, ೧೯೭೮ರಲ್ಲಿ ೮೩,೮೩೨ ಕ್ಕೇರಿತು. ೧೯೮೧ರಲ್ಲಿ ನಡೆದ ಮಧ್ಯಂತರ/ಮರು ಚುನಾವಣೆಯ ಹೊತ್ತಿಗೆ ೯೪,೪೩೦ಕ್ಕೆ ಇದ್ದುದು, ೧೯೮೩ರಲ್ಲಿ ೯೪,೪೨೪ಕ್ಕೆ ಇಳಿಯಿತು. ಪುನಃ ೧೯೮೫ರಲ್ಲಿ ೧,೦೫,೪೦೯ಕ್ಕೆ, ೧೯೮೯ರಲ್ಲಿ ೧,೩೦,೭೯೮ಕ್ಕೆ, ೧೯೯೪ರಲ್ಲಿ ೧,೪೨,೯೫೨ಕ್ಕೆ ಅಧಿಕಗೊಂಡಿತು. ೧೯೯೯ರಲ್ಲಿ ೧,೪೯,೪೮೨ಕ್ಕೇರಿದ ಮತದಾರರ ಸಂಖ್ಯೆ ೨೦೦೪ರ ವೇಳೆಗೆ ೧,೬೪,೩೩೯ಕ್ಕೂ, ೨೦೦೮ರಲ್ಲಿ ೧೬೮೦೦೪ಕ್ಕೆ ೨೦೧೩ರಲ್ಲಿ ೧೭೫೩೪೯ ಕ್ಕೇರಿದೆ.

## ಜನಸಂಖ್ಯೆಯ ಅಂದಾಜು Projected Population * (Numbers)

| ಕ್ರ. ಸಂ. | ತಾಲ್ಲೂಕುಗಳು Taluks | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 |
|---|---|---|---|---|---|---|---|---|---|---|---|---|
| 1 | 2 | 131 | 132 | 133 | 134 | 135 | 136 | 137 | 138 | 139 | 140 | 141 |
| 1 | ಚಳ್ಳಕೆರೆ Challakere | 366267 | 369412 | 372594 | 375806 | 379054 | 382336 | 385654 | 389008 | 392397 | 395823 | 399286 |
| 2 | ಚಿತ್ರದುರ್ಗ Chitrdurga | 424381 | 429018 | 433718 | 438483 | 443314 | 448212 | 453178 | 458215 | 463321 | 468497 | 473749 |
| 3 | ಹಿರಿಯೂರು Hiriyuru | 286494 | 289106 | 291748 | 294421 | 297124 | 299859 | 302624 | 305425 | 308254 | 311118 | 314017 |
| 4 | ಹೊಳಲ್ಕೆರೆ Holalkere | 207377 | 209050 | 210737 | 212443 | 214164 | 215902 | 217659 | 219429 | 221219 | 223027 | 224851 |
| 5 | ಹೊಸದುರ್ಗ Hosadurga | 235285 | 237225 | 239182 | 241162 | 243158 | 245178 | 247216 | 249275 | 251354 | 253456 | 255578 |
| 6 | ಮೊಳಕಾಲ್ಮೂರು Molakalmuru | 140574 | 141718 | 142874 | 144041 | 145219 | 146410 | 147611 | 148824 | 150050 | 151288 | 152538 |
|  | **ಜಿಲ್ಲಾ ಮೊತ್ತ Dist. Total** | **1660378** | **1675529** | **1690853** | **1706356** | **1722033** | **1737897** | **1753942** | **1770176** | **1786595** | **1803209** | **1820019** |

ಮಾಹಿತಿಮೂಲ : 2011ರ ಜನಗಣತಿ ಇಲಾಖೆ

## ಅಧ್ಯಾಯ–೩

# ಜನತೆ

**ಚಿ**ತ್ರದುರ್ಗ ಜಿಲ್ಲೆಯ ದಕ್ಷಿಣ ದಿಕ್ಕಿಗಿರುವ ಈ ತಾಲ್ಲೂಕು ಪ್ರದೇಶ, ಪೂರ್ವ ಕಾಲದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಮದ್ರಾಸು ಪ್ರಾಂತದಲ್ಲಿದ್ದು ಬಹುಪಾಲು ಬಯಲು ಸೀಮೆಯಿಂದ ಕೂಡಿದ್ದು, ಕೆಲ ಭಾಗಗಳಲ್ಲಿ ಗುಡ್ಡಗಳಿಂದ ಆವೃತವಾದ ಅರಣ್ಯ ಪ್ರದೇಶವಾಗಿದೆ. ಇಲ್ಲಿ ಕಪ್ಪು, ಕೆಂಪು, ಕಲ್ಲು, ಮರಳು ಜವುಗು ಭೂಮಿಯಿಂದ ಕೂಡಿದ್ದು ಹೆಚ್ಚಾಗಿ ಕೃಷಿ ಪ್ರಧಾನವಾಗಿದೆ. ಒಣ ಬೇಸಾಯ ಪ್ರಾಧಾನ್ಯತೆ ಪಡೆದಿದ್ದು, ಬಹು ಜನರು ಕೃಷಿ ಮತ್ತು ಕೃಷಿ ಕಾರ್ಮಿಕರಾಗಿ ಪಾರಂಪರಿಕವಾಗಿ ಸಾಂಪ್ರದಾಯಿಕ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕೆ ಹೊಂದಿಸಿಕೊಂಡಿರುವರು. ಕೆಲವರು ಪಶುಪಾಲನೆ (ಕುರಿ–ಮೇಕೆ, ಎಮ್ಮೆ, ಗೋವು ಪಾಲನೆ) ಯಲ್ಲಿ ತೊಡಗಿರುವರು. ಇತ್ತೀಚೆಗೆ ಸರಕಾರದ ಮೀಸಲಾತಿ ನಿಯಮಗಳಿಂದಾಗಿ ಶಿಕ್ಷಣದಿಂದ ವಂಚಿತರಾಗಿದ್ದ ಗ್ರಾಮೀಣ ಪರಿಸರದ ಬಡ ಜನರ ಮಕ್ಕಳಿಗೆ ವಿಶೇಷ ಪ್ರೋತ್ಸಾಹ ದೊರಕಿದ್ದುದರಿಂದ, ಇಂದಿನ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಗಳು ಕಂಡು ಬಂದಿವೆ. ಜಾತಿ ಸಮುದಾಯ ಸಾಮಾಜಿಕ ಜೀವನ ಧಾರ್ಮಿಕ ಆಚರಣೆ ಮತ್ತು ಸಾಂಸ್ಕೃತಿಕ ಪದ್ಧತಿಗಳಲ್ಲಿ ವಿಫುಲ ಬದಲಾವಣೆಗಳು ಕಂಡು ಬರುತ್ತಿದೆ. ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿನ ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳಂತಹ ಅಂಶಗಳ ಪರಿಶೀಲನೆಯೂ ಅವಶ್ಯವಾಗಿರುತ್ತವೆ. ಈ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುವುದು ಸಹಜವಾಗಿರುತ್ತದೆ. ಹೊಸದುರ್ಗ ತಾಲ್ಲೂಕಿನಲ್ಲಿಯೂ ವಿವಿಧ ಜಾತಿ ಮತ್ತು ಬುಡಕಟ್ಟು, ಮತ–ಧರ್ಮ, ಆಚಾರ–ವಿಚಾರ, ನಂಬಿಕೆ, ಆಹಾರಾಭ್ಯಾಸ, ವೇಷಭೂಷಣ, ಭಾಷೆಗಳೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡುಬರುತ್ತವೆ.

**ಜನಸಂಖ್ಯಾ ಬೆಳವಣಿಗೆ**

ಹಿಂದೆ ಸಂಸ್ಥಾನದ ಸರ್ಕಾರವು ಅನುಸರಿಸಿದ ಖಾನೇಶುಮಾರಿ ಅಂದಾಜಿನಂತೆ, ಹೊಸದುರ್ಗ ತಾಲ್ಲೂಕಿನ ಜನಸಂಖ್ಯೆಯನ್ನು ವಿವಿಧ ಅಂಕಿಅಂಶಗಳಿಂದ ಪರಿಶೀಲಿಸಬಹುದು. ೧೮೯೧ರಲ್ಲಿ ಹೊಸದುರ್ಗ ಪ್ರದೇಶವು ತಾಲ್ಲೂಕಾಗಿರಲಿಲ್ಲ. ೭೦ ಗ್ರಾಮಗಳು, ೧೮ ಉಪಗ್ರಾಮಗಳು ಹಾಗೂ ೨ ಜೋಡಿ ಗ್ರಾಮಗಳು ಹೀಗೆ ಒಟ್ಟಾರೆ ೯೦ ಸ್ಥಳಗಳನ್ನು ಒಳಗೊಂಡಿದ್ದ ಉಪ ತಾಲ್ಲೂಕಾಗಿತ್ತು. ಆಗ ಇದು 'ಸರ್ಕಾರ ೬೮' ಆಗಿತ್ತು. ಈ ತಾಲ್ಲೂಕಿನಲ್ಲಿ ೧೯೭೧ರ ಜನಗಣತಿಯಂತೆ ೧,೩೯,೭೯ ಜನಸಂಖ್ಯೆ ಇದ್ದು, ೧೯೮೧ ರಲ್ಲಿ ೧,೭೩,೦೨೧, ೧೯೯೧ ರಲ್ಲಿ ೧,೯೯,೮೪೪, ೨೦೦೧ ರಲ್ಲಿ ೨,೧೯,೪೪೫ ಹಾಗೂ ೨೦೧೧ ರಲ್ಲಿ ೨,೩೫,೧೧೬ ಕ್ಕೆ ಹೆಚ್ಚಳಗೊಂಡಿರುತ್ತದೆ. ಹೊಸದುರ್ಗ ಪಟ್ಟಣದ ಜನಸಂಖ್ಯೆಯು ಶತಮಾನದ ಹಿಂದೆ ೧೮೯೧ರಲ್ಲಿ ೨,೦೬೧ ಇದ್ದು, ೧೯೦೧ ರಲ್ಲಿ ೨,೨೬೩, ೧೯೭೧ರಲ್ಲಿ ೮,೭೫೩, ೧೯೯೧ ರಲ್ಲಿ ೧೭,೨೫೭, ೨೦೧೧ರಲ್ಲಿ ೨೮,೩೭೦ ಕ್ಕೆ ಹೆಚ್ಚಳಗೊಂಡಿದೆ.

**ಜನಸಾಂದ್ರತೆ**

ಒಂದು ಪ್ರದೇಶದ ಪ್ರತಿ ಚ.ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನಸಾಂದ್ರತೆಯು ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ಹೊಸದುರ್ಗ ತಾಲ್ಲೂಕಿನಲ್ಲಿ ಜನಸಾಂದ್ರತೆಯು ೨೦೧೧ ರ ಜನಗಣತಿಯಂತೆ ೧೬೪ ಆಗಿದ್ದಿತು.

**ವಾಸದ ಮನೆಗಳು ಮತ್ತು ಕುಟುಂಬಗಳು**

ಜನಗಣತಿಯ ಪ್ರಕಾರ ವಾಸದ ಮನೆ ಎಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕುಟುಂಬಗಳು ವಾಸಿಸುವ ಪೂರ್ತಿ ಅಥವಾ ಭಾಗಶಃ ಕಟ್ಟಡ ಎಂದರ್ಥ. ಕುಟುಂಬವೆಂದರೆ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡುಗೆ ಮನೆಯಲ್ಲಿ ತಯಾರಿಸಿದ ಅಡುಗೆಯನ್ನು (ಅನೇಕ ಸಂಧರ್ಭಗಳಲ್ಲಿ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನಸಮೂಹ ಎಂದರ್ಥ. ಕೆಲವು ಕುಟುಂಬಗಳಿಗೆ ವಾಸದ ಮನೆಗಳಿರುವುದಿಲ್ಲ. ಅಂತಹ ಕುಟುಂಬಗಳನ್ನು ನಿರ್ವಸತಿ ಕುಟುಂಬಗಳು ಎಂದು ಕರೆಯುತ್ತಾರೆ. ತಾಲ್ಲೂಕಿನಲ್ಲಿ ೨೦೧೧ ರ ಜನಗಣತಿಯಂತೆ ಒಟ್ಟು ೫೨,೫೮೨ ಕುಟುಂಬಗಳಿದ್ದವು.

## ನಿರ್ವಸತಿ ಕುಟುಂಬಗಳು

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರದೆ ಸಾಮಾನ್ಯವಾಗಿ ಬಸ್ಸು ನಿಲ್ದಾಣ, ರೈಲ್ವೆ ನಿಲ್ದಾಣ, ಹಳೆ ಕಟ್ಟಡ, ಮಂಟಪ, ರಸ್ತೆ ಬದಿಯಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯ ಪ್ರಕಾರ ನಿರ್ವಸತಿ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆಯಲಾಗುತ್ತದೆ.

## ಸ್ತ್ರೀ–ಪುರುಷರ ಪ್ರಮಾಣ

ಸ್ತ್ರೀ–ಪುರುಷರ ಪ್ರಮಾಣವೆಂದರೆ, ಪ್ರತಿ ಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆ. ಸ್ತ್ರೀ–ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯ, ವೈವಾಹಿಕ ಸ್ಥಾನ–ಮಾನ, ಜನರ ವಲಸೆ, ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ತಾಲ್ಲೂಕಿನಲ್ಲಿ ೨೦೦೧ ರ ಜನಗಣತಿಯಂತೆ ಒಟ್ಟು ೧೦೦೦ ಪುರುಷರಿಗೆ ೯೭೧ ಸ್ತ್ರೀಯರಿದ್ದರು. ಇದು ಗ್ರಾಮೀಣದಲ್ಲಿ ೯೭೫, ನಗರದಲ್ಲಿ ೯೩೭ ಆಗಿರುತ್ತದೆ. ೨೦೧೧ ರಲ್ಲಿ ಒಟ್ಟು ೯೭೩ ಸ್ತ್ರೀಯರಿದ್ದು, ಗ್ರಾಮೀಣದಲ್ಲಿ ೯೭೬, ನಗರದಲ್ಲಿ ೯೫೧ ಆಗಿರುತ್ತದೆ.

## ಗ್ರಾಮೀಣ ಜನಸಂಖ್ಯೆ

ಹಳ್ಳಿಗಳಲ್ಲಿ ವಾಸಮಾಡುವ ಜನರನ್ನು ಗ್ರಾಮೀಣ ಜನತೆ ಎನ್ನಲಾಗುತ್ತದೆ. ತಾಲ್ಲೂಕಿನಲ್ಲೂ ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯು ಪಟ್ಟಣ ಪ್ರದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ೧೯೮೧ ರ ಜನಗಣತಿಯಂತೆ ತಾಲ್ಲೂಕಿನಲ್ಲಿ ೧೮೪ ಜನವಸತಿಯಿರುವ ಗ್ರಾಮಗಳಿದ್ದು, ಒಟ್ಟು ೧,೬೦,೬೪೧ ಗ್ರಾಮೀಣ ಜನಸಂಖ್ಯೆಯಿದ್ದಿತು. ಇದರಲ್ಲಿ ೮೧,೪೬೧ ಪುರುಷರು ಹಾಗೂ ೭೯,೧೮೦ ಮಹಿಳೆಯರು ಸೇರಿದ್ದರು. ತಾಲ್ಲೂಕಿನಲ್ಲಿ ೨೦೦ ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ ೨೨ ಗ್ರಾಮಗಳಿದ್ದು, ಒಟ್ಟು ೧,೬೯೦ ಜನಸಂಖ್ಯೆಯನ್ನು ಹೊಂದಿದ್ದವು. ೨೦೦ ರಿಂದ ೪೯೯ ಜನಸಂಖ್ಯೆಯನ್ನು ಹೊಂದಿದ ೫೭ ಗ್ರಾಮಗಳಿದ್ದು, ಒಟ್ಟು ೨೦,೯೩೫ ಜನಸಂಖ್ಯೆಯನ್ನು ಹೊಂದಿದ್ದವು. ೫೦೦ ರಿಂದ ೯೯೯ ಜನಸಂಖ್ಯೆಯನ್ನು ಹೊಂದಿದ ೫೪ ಗ್ರಾಮಗಳಿದ್ದು, ಒಟ್ಟು ೩೯,೫೯೦ ಜನಸಂಖ್ಯೆಯನ್ನು ಹೊಂದಿದ್ದವು. ೧೦೦೦ ದಿಂದ ೧೯೯೯ ಜನಸಂಖ್ಯೆಯನ್ನು  ಹೊಂದಿದ ೪೩ ಗ್ರಾಮಗಳಿದ್ದು, ಒಟ್ಟು ೫೯,೦೨೧ ಜನಸಂಖ್ಯೆಯನ್ನು ಹೊಂದಿದ್ದವು. ೨೦೦೦ ದಿಂದ ೪,೯೯೯ ಜನಸಂಖ್ಯೆಯನ್ನು ಹೊಂದಿದ ೧೨ ಗ್ರಾಮಗಳಿದ್ದು, ಒಟ್ಟು ೩೪,೧೮೪ ಜನಸಂಖ್ಯೆಯನ್ನು ಹೊಂದಿದ್ದವು.

೫,೦೦೦ ದಿಂದ ೯,೯೯೯ ಜನಸಂಖ್ಯೆಯನ್ನು ಹೊಂದಿದ ಒಂದು ಗ್ರಾಮವಿದ್ದು, ೫,೨೧೬ ಜನಸಂಖ್ಯೆಯನ್ನು ಹೊಂದಿತ್ತು. ೧೦೦೦೦ ಮತ್ತು ಅದಕ್ಕಿಂದ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಯಾವುದೇ ಗ್ರಾಮಗಳು ತಾಲ್ಲೂಕಿನಲ್ಲಿ ಇರುವುದಿಲ್ಲ.

೨೦೧೧ ರ ಜನಗಣತಿಯಂತೆ ೨೦೧ ಜನವಸತಿ ಗ್ರಾಮಗಳಿದ್ದು, ಒಟ್ಟು ೨,೦೬,೭೪೬ (೧,೦೪,೬೦೫ ಪುರುಷರು ಮತ್ತು ೧,೦೨,೧೪೧ ಮಹಿಳೆಯರು) ಗ್ರಾಮೀಣ ಜನಸಂಖ್ಯೆ ಇತ್ತು. ಇದರಲ್ಲಿ ೨೦೦ ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ ೨೧(ಶೇ. ೧೦) ಗ್ರಾಮಗಳಿದ್ದು, ಒಟ್ಟು ೮೬೧ ಜನಸಂಖ್ಯೆಯನ್ನು ಹೊಂದಿದ್ದವು. ೨೦೦ ರಿಂದ ೪೯೯ ಜನಸಂಖ್ಯೆಯನ್ನು ಹೊಂದಿದ ೪೧(ಶೇ. ೨೦) ಗ್ರಾಮಗಳಿದ್ದು, ಒಟ್ಟು ೧೪,೪೬೬ ಜನಸಂಖ್ಯೆಯನ್ನು ಹೊಂದಿದ್ದವು. ೫೦೦ ರಿಂದ ೯೯೯ ಜನಸಂಖ್ಯೆಯನ್ನು ಹೊಂದಿದ ೬೨(ಶೇ.೩೧) ಗ್ರಾಮಗಳಿದ್ದು, ಒಟ್ಟು ೪೫,೦೨೫ ಜನಸಂಖ್ಯೆಯನ್ನು ಹೊಂದಿದ್ದವು. ೧,೦೦೦ ದಿಂದ ೧,೯೯೯ ಜನಸಂಖ್ಯೆಯನ್ನು ಹೊಂದಿದ ೫೩(ಶೇ.೨೬) ಗ್ರಾಮಗಳಿದ್ದು, ಒಟ್ಟು ೭೪,೩೭೦ ಜನಸಂಖ್ಯೆಯನ್ನು ಹೊಂದಿದ್ದವು. ೨೦೦೦ ದಿಂದ ೪,೯೯೯ ಜನಸಂಖ್ಯೆಯನ್ನು ಹೊಂದಿದ ೨೧(ಶೇ.೧೦) ಗ್ರಾಮಗಳಿದ್ದು, ಒಟ್ಟು ೫೫,೨೧೭ ಜನಸಂಖ್ಯೆಯನ್ನು ಹೊಂದಿದ್ದವು. ೫,೦೦೦ ದಿಂದ ೯,೯೯೯ ಜನಸಂಖ್ಯೆಯನ್ನು ಹೊಂದಿದ ೩(ಶೇ.೧) ಗ್ರಾಮಗಳಿದ್ದು, ೧೬,೭೯೮ ಜನಸಂಖ್ಯೆಯನ್ನು ಹೊಂದಿದ್ದವು. ೧೦೦೦೦ ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಯಾವುದೇ ಗ್ರಾಮಗಳು ತಾಲ್ಲೂಕಿನಲ್ಲಿ ಇರುವುದಿಲ್ಲ.

### ಪಟ್ಟಣದ ಜನಸಂಖ್ಯೆ

ತಾಲ್ಲೂಕಿನಲ್ಲಿ ಪಟ್ಟಣ (ಹೊಸದುರ್ಗ) ಒಂದೇ ಇದ್ದು, ಅದರ ಜನಸಂಖ್ಯೆ ೧೯೮೧ರಲ್ಲಿ ೧೨,೩೮೦ ಇದ್ದು, ೧೯೦೧ರಲ್ಲಿ ೨೨೬೩, ೧೯೧೧ರಲ್ಲಿ ೨೧೭೬, ೧೯೨೧ರಲ್ಲಿ ೨೫೯೪, ೧೯೩೧ರಲ್ಲಿ ೩೫೧೨, ೧೯೪೧ರಲ್ಲಿ ೩೯೨೨, ೧೯೫೧ರಲ್ಲಿ ೪೯೩೭, ೧೯೬೧ರಲ್ಲಿ ೬೭೧೨, ೧೯೭೧ರಲ್ಲಿ ೮೭೫೩ ಆಗಿತ್ತು. ಒಂದು ಶತಮಾನದ ತರುವಾಯ, ೧೯೯೧ರಲ್ಲಿ ೧೭,೨೫೭ ಕ್ಕೇರಿದ್ದಿತು. ೨೦೦೧ರಲ್ಲಿ ೨೨,೪೮೮ ಈ ಪಟ್ಟಣದ ಜನಸಂಖ್ಯೆಯಾಗಿದ್ದು, ಅದರಲ್ಲಿ ೧೧,೯೦೭ ಪುರುಷರು ಹಾಗೂ ೧೦,೮೮೧ ಮಹಿಳೆಯರು ಸೇರಿದ್ದರು. ೨೦೧೧ರ ಜನಗಣತಿಯಂತೆ ೨೮೩೭೦ ನಗರ ಸಂಖ್ಯೆಯಿತ್ತು.

### ಪರಿಶಿಷ್ಟ ಜಾತಿ

ಭಾರತ ಸಂವಿಧಾನದ ೩೪೧ನೇಯ ಪರಿಚ್ಛೇದದ ಮೇರೆಗೆ ಈ ದೇಶದ ಯಾವುದೇ ಪ್ರದೇಶದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಗೆ ಸೇರಿರುವ ಒಟ್ಟು ೧೦೧ ಜಾತಿಗಳ

ಜನರಿಗೆ ವಿವಿಧ ವಿಶೇಷ ಸೌಲಭ್ಯಗಳನ್ನು ನೀಡುತ್ತಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿರುವ ಆದಿ ಕರ್ನಾಟಕ, ಆದಿದ್ರಾವಿಡ, ಮಾದಿಗ, ಹೊಲೆಯ, ಛಲವಾದಿ, ಒಕ್ಕಲಿಗ, ಕೊರಮ, ಲಮಾಣಿ, ಹಂದಿಜೋಗಿ, ಭೋವಿ, ಜಾಂಭವ, ಚಮ್ಮಾರ, ಸುಡುಗಾಡುಸಿದ್ಧ ಮುಂತಾದವರಿದ್ದಾರೆ. ೧೯೮೧ರಲ್ಲಿ ತಾಲ್ಲೂಕಿನಲ್ಲಿ ಒಟ್ಟು ೨೯,೪೧೧ ಜನರು ಪರಿಶಿಷ್ಟ ಜಾತಿಯವರಿದ್ದರು. ೧೯೯೧ರಲ್ಲಿ ಈ ಜನಸಂಖ್ಯೆ ೩೬,೩೮೭ ೨೦೦೧ರಲ್ಲಿ ೪೧,೪೯೮ ಹಾಗೂ ೨೦೧೧ರಲ್ಲಿ ೪೮೨೭೨ಕ್ಕೆ (ಇವರಲ್ಲಿ ೪೪೩೪೫ ಗ್ರಾಮೀಣ ಪ್ರದೇಶದಲ್ಲೂ, ೩೯೨೭ ನಗರ ಪ್ರದೇಶದಲ್ಲಿ) ಅಧಿಕಗೊಂಡಿದೆ.

## ಪರಿಶಿಷ್ಟ ಪಂಗಡ

ಭಾರತ ಸಂವಿಧಾನದ ೩೪೨ನೇಯ ಪರಿಚ್ಛೇದದ ಮೇರೆಗೆ, ಒಟ್ಟು ೪೯ ಜಾತಿಗಳನ್ನು ಸರ್ಕಾರವು ಪರಿಶಿಷ್ಟ ಪಂಗಡ ಎಂದು ಒಪ್ಪಿದ್ದು, ಈ ಪಂಗಡದ ಸಮುದಾಯಗಳ ಜನರಿಗೆ ಸರ್ಕಾರವು ವಿಶೇಷ ಪ್ರತ್ಯೇಕ ಸವಲತ್ತುಗಳನ್ನು ಒದಗಿಸುತ್ತಿದೆ. ತಾಲ್ಲೂಕಿನಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿರುವ ನಾಯಕ್, ನಾಯಕ, ವಾಲ್ಮೀಕಿ, ಮೇದಾ, ಎರವ ಮುಂತಾದ ಸಮುದಾಯಗಳು ಇವೆ. ೧೯೮೧ರಲ್ಲಿ ತಾಲ್ಲೂಕಿನಲ್ಲಿ ೧೪,೬೧೮ ಜನಸಂಖ್ಯೆಯಿದ್ದ ಪರಿಶಿಷ್ಟ ಪಂಗಡದ ಜನಸಮೂಹ ೧೯೯೧ರಲ್ಲಿ ೧೫,೧೪೯, ೨೦೦೧ರಲ್ಲಿ ೧೬,೮೫೪ ಹಾಗೂ ೨೦೧೧ರಲ್ಲಿ ೧೮,೯೫೪ (ಇದರಲ್ಲಿ ೧೭,೬೮೪ ಮಂದಿ ಗ್ರಾಮೀಣ ಪ್ರದೇಶದಲ್ಲೂ, ೧,೨೭೦ ಮಂದಿ ನಗರ ಪ್ರದೇಶದಲ್ಲೂ) ವಾಸವಾಗಿದ್ದರು. ಇವರಲ್ಲಿ ಸ್ತ್ರೀ–ಪುರುಷರ ಪ್ರಮಾಣ ೧,೦೧೦ ರಷ್ಟು ಹೆಚ್ಚಳಗೊಂಡಿದೆ.

## ಸಾಕ್ಷರತೆ

ಜನಗಣತಿಯ ಪ್ರಕಾರ ಯಾವುದೇ ಭಾಷೆಯಲ್ಲಿ ಓದಲು ಮತ್ತು ಬರೆಯಲು ಸಮರ್ಥನಾದ ವ್ಯಕ್ತಿಯನ್ನು ಅಕ್ಷರಸ್ಥನೆಂದು ಕರೆಯಲಾಗುತ್ತದೆ. ಇದಕ್ಕೆ ನಿರ್ದಿಷ್ಟವಾದ ಶೈಕ್ಷಣಿಕ ಅರ್ಹತೆ ಅಥವಾ ಸಾಂಪ್ರದಾಯಿಕ ಶಿಕ್ಷಣದ ಅಗತ್ಯವಿರುವುದಿಲ್ಲ. ವಯೋಮಿತಿ ೦–೬ ವರ್ಷದ ವರ್ಗಕ್ಕೆ ಸೇರಿದ ಎಲ್ಲಾ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಲಾಗಿದೆ.

ತಾಲ್ಲೂಕಿನಲ್ಲಿ ೨೦೦೧ರ ಜನಗಣತಿಯಂತೆ ೨,೧೯,೪೪೫ ಜನಸಂಖ್ಯೆಯಿದ್ದು, ಇವರಲ್ಲಿ ೧,೧೧,೩೩೯ ಪುರುಷರು ಹಾಗೂ ೧,೦೮,೧೦೬ ಮಹಿಳೆಯರಿದ್ದರು. ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ೧,೨೫,೬೫೮ ಸಾಕ್ಷರರಿದ್ದು, ಇವರಲ್ಲಿ ೭೩,೬೧೭ ಮಂದಿ ಪುರುಷರು ಹಾಗೂ ೫೨,೦೪೧ ಮಂದಿ ಮಹಿಳಾ ಸಾಕ್ಷರರಿದ್ದರು. ೧,೦೯,೬೩೮ ಮಂದಿ ಗ್ರಾಮೀಣ ಸಾಕ್ಷರರು ಮತ್ತು ೧೬,೦೨೦ ಮಂದಿ ನಗರ ಸಾಕ್ಷರರಿದ್ದರು.

ಇದೇ ಅವಧಿಯಲ್ಲಿ ಒಟ್ಟು ೯೩,೭೮೭ ಅನಕ್ಷರಸ್ಥರಿದ್ದು, ಇವರಲ್ಲಿ ೩೭,೭೨೨ ಮಂದಿ ಪುರುಷರು ಹಾಗೂ ೫೬,೦೬೫ ಮಂದಿ ಮಹಿಳಾ ಅನಕ್ಷರಸ್ಥರಿದ್ದರು. ತಾಲ್ಲೂಕಿನಲ್ಲಿ ೨೦೧೧ರಲ್ಲಿ ೨,೩೫,೧೧೬ ಜನಸಂಖ್ಯೆಯಿದ್ದು, ಇವರಲ್ಲಿ ಒಟ್ಟು ೧,೫೪,೪೯೩ ಮಂದಿ ಸಾಕ್ಷರರಿದ್ದು, ೮೬,೧೩೩ ಮಂದಿ ಪುರುಷರು ಹಾಗೂ ೬೮,೩೬೦ ಮಂದಿ ಮಹಿಳೆಯರಿದ್ದರು. ೧,೩೨,೧೬೧ ಮಂದಿ ಗ್ರಾಮೀಣ ಸಾಕ್ಷರರು ಮತ್ತು ೨೨,೩೩೨ ಮಂದಿ ನಗರ ಸಾಕ್ಷರರಿದ್ದರು.

## ಭಾಷೆಗಳು

ತಾಲ್ಲೂಕಿನಲ್ಲಿ ನಾಡಭಾಷೆ (ರಾಜ್ಯಭಾಷೆ) ಕನ್ನಡವನ್ನು ಮಾತೃಭಾಷೆಯನ್ನಾಗಿ ಹೊಂದಿರುವವರು ಅಂದಾಜು ಶೇ.೯೦ಕ್ಕೂ ಹೆಚ್ಚು ಜನರಿದ್ದಾರೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಶೇ.೬ ರಿಂದ ೧೦ರಷ್ಟು ಜನರು ಬೇರೆ ಭಾಷೆಗಳನ್ನು ತಮ್ಮ ತಮ್ಮ ಮಾತೃ ಭಾಷೆಯನ್ನಾಗಿ ಬಳಸುವವರಿದ್ದಾರೆ. ಅವರಲ್ಲಿ ಮುಖ್ಯವಾಗಿ, ತೆಲುಗು ಭಾಷೆಯನ್ನು ತಮ್ಮ ಮಾತೃ ಭಾಷೆಯನ್ನಾಗಿ ಹೊಂದಿರುವ ಭೋವಿ, ನಾಯ್ಡು, ಆರ್ಯ ವೈಶ್ಯ, ಸುಡುಗಾಡು ಸಿದ್ಧರು, ಚನ್ನದಾಸ, ಕೊರಚ ಇನ್ನೂ ಮುಂತಾದ ಸಮುದಾಯದವರಿದ್ದಾರೆ. ಮರಾಠಿಯನ್ನು ತಮ್ಮ ಮಾತೃಭಾಷೆಯನ್ನಾಗಿ ಹೊಂದಿರುವ ಭಾವಸಾರ ಕ್ಷತ್ರಿಯ, ನಾಮದೇವ ಸಿಂಪಿ, ಲಾಡರು, ಮರಾಠರು, ಕಮ್ಮಾರ ಮುಂತಾದ ಅನೇಕ ಜಾತಿಯವರಿದ್ದಾರೆ. ಲಂಬಾಣಿ ಭಾಷೆಯನ್ನು ಮಾತೃಭಾಷೆಯನ್ನಾಗುಳ್ಳವರು ಬಂಜಾರರು, ಹಿಂದಿಯನ್ನು ಮಾತೃಭಾಷೆಯಾಗಿ ಬಳಸುವ ಶ್ವೇತಾಂಬರ ಜೈನ್, ಕೊಂಕಣಿ ಮಾತೃಭಾಷೆಯ ದೈವಜ್ಞ ಬ್ರಾಹ್ಮಣರು, ತಮಿಳು ಮಾತೃ ಭಾಷಿಕರಾದ ತಮಿಳರು, ತಮಿಳ್ ರೆಡ್ಡಿಗರು, ಉರ್ದು ಮಾತೃ ಭಾಷಿಕರಾದ ಮುಸಲ್ಮಾನರು ಇನ್ನೂ ಮುಂತಾದ ಭಾಷಿಕರು ತಾಲ್ಲೂಕಿನಲ್ಲಿದ್ದಾರೆ. ಇವರೆಲ್ಲ ಕನ್ನಡವನ್ನು ವ್ಯವಹಾರ ಭಾಷೆಯನ್ನಾಗಿ ಮಾತನಾಡುವರು.

### ಹೊಸದುರ್ಗ ತಾಲ್ಲೂಕಿನಲ್ಲಿದ್ದ ವಿವಿಧ ಭಾಷೆಗಳನ್ನಾಡುವವರ ವಿವರ

| ಮಾತೃಭಾಷೆಗಳ ಹೆಸರು | ಒಟ್ಟು | | | ಗ್ರಾಮೀಣ | | | ನಗರ | | |
|---|---|---|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ಅಸ್ಸಾಮಿ | ೭ | ೭ | ೦ | ೭ | ೭ | ೦ | ೦ | ೦ | ೦ |
| ಬೆಂಗಾಲಿ | ೩೨ | ೨೯ | ೩ | ೦ | ೦ | ೦ | ೩೨ | ೨೯ | ೩ |
| ಗುಜರಾತಿ | ೧೧೨ | ೫೭ | ೫೫ | ೪೪ | ೨೪ | ೨೦ | ೬೮ | ೩೩ | ೩೫ |
| ಹಿಂದಿ | ೭೩೪೮ | ೩೬೬೩ | ೩೬೮೫ | ೬೮೯೧ | ೩೪೪೩ | ೩೪೪೮ | ೪೫೭ | ೨೨೦ | ೨೩೭ |

| | | | | | | | | | |
|---|---|---|---|---|---|---|---|---|---|
| ಕನ್ನಡ | ೧೯೯೭೭೨ | ೧೦೧೩೬೨ | ೯೮೪೧೦ | ೧೮೦೨೨೬ | ೯೧೩೨೫ | ೮೮೯೦೧ | ೧೯೫೪೬ | ೧೦೦೩೭ | ೯೫೦೯ |
| ಕಾಶ್ಮೀರಿ | ೩ | ೦ | ೩ | ೧ | ೦ | ೧ | ೨ | ೦ | ೨ |
| ಕೊಂಕಣಿ | ೧೭೯ | ೯೦ | ೮೯ | ೮೧ | ೩೯ | ೪೨ | ೯೮ | ೫೧ | ೪೭ |
| ಮಲಯಾಳಂ | ೨೮ | ೧೮ | ೧೦ | ೧೮ | ೧೨ | ೬ | ೧೦ | ೬ | ೪ |
| ಮರಾಠಿ | ೮೮೨ | ೪೩೮ | ೪೪೪ | ೫೮೦ | ೨೯೭ | ೨೮೩ | ೩೦೨ | ೧೪೧ | ೧೬೧ |
| ನೇಪಾಲಿ | ೩ | ೧ | ೨ | ೦ | ೦ | ೦ | ೩ | ೧ | ೨ |
| ಒಡಿಯಾ | ೮ | ೬ | ೨ | ೮ | ೬ | ೨ | ೦ | ೦ | ೦ |
| ತಮಿಳು | ೧೯೫೪ | ೯೮೫ | ೯೬೯ | ೧೭೦೩ | ೮೬೦ | ೮೪೩ | ೨೫೧ | ೧೨೫ | ೧೨೬ |
| ತೆಲಗು | ೧೩೨೯೧ | ೬೬೪೨ | ೬೬೪೯ | ೧೨೦೩೪ | ೬೦೨೪ | ೬೦೧೦ | ೧೨೫೭ | ೬೧೮ | ೬೩೯ |
| ಉರ್ದು | ೧೧೪೭೧ | ೫೮೩೮ | ೫೬೩೩ | ೫೧೩೨ | ೨೫೫೮ | ೨೫೭೪ | ೬೩೩೯ | ೩೨೮೦ | ೩೦೫೯ |
| ಭಿಲಿ/ಭಿಲೋಡಿ | ೩ | ೧ | ೨ | ೩ | ೧ | ೨ | ೦ | ೦ | ೦ |
| ಕೂರ್ಗಿ/ಕೊಡಗು | ೩ | ೨ | ೧ | ೩ | ೨ | ೧ | ೦ | ೦ | ೦ |
| ಇಂಗ್ಲೀಷ್ | ೮ | ೫ | ೩ | ೬ | ೪ | ೨ | ೨ | ೧ | ೧ |
| ತುಳು | ೮ | ೩ | ೫ | ೫ | ೨ | ೩ | ೩ | ೧ | ೨ |
| ಇತರೆ | ೪ | ೧ | ೩ | ೪ | ೧ | ೩ | ೦ | ೦ | ೦ |

**ಆಧಾರ: ೨೦೧೧ರ ಜನಗಣತಿ**

## ಧರ್ಮ ಮತ್ತು ಜನಸಂಖ್ಯೆ

ತಾಲ್ಲೂಕಿನಲ್ಲಿ ೨೦೧೧ರ ಜನಗಣತಿ ಮೇರೆಗೆ ಹಿಂದೂ ಧರ್ಮೀಯರ ಒಟ್ಟು ಜನಸಂಖ್ಯೆ ೨,೦೬,೫೪೩ ಇದ್ದು, ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಶೇ.೯೪.೧೨ ರಷ್ಟಿದೆ. ಹಾಗೆಯೇ ಮುಸಲ್ಮಾನ ಜನಸಂಖ್ಯೆಯು ೧೦,೪೨೬(ಶೇ.೪.೭೫ ರಷ್ಟು) ಇದ್ದು, ಜೈನರು ೫೦೩(ಶೇ.೦.೨೩ ರಷ್ಟು) ಹಾಗೂ ಕ್ರೈಸ್ತರು ೧೧೭ (ಶೇ.೦.೦೫), ಬೌದ್ಧರು ೧೯ (ಶೇ.೦.೦೧), ಸಿಖ್ಖರು ೫೩(ಶೇ.೦.೦೨), ಇತರೆ ಧರ್ಮೀಯರು ೧,೫೮೦ (ಶೇ.೦.೭೨) ಹಾಗೂ ಧರ್ಮವನ್ನು ತಿಳಿಸದವರು ೨೦೪ (ಶೇ.೦.೦೯) ಇದ್ದರು.

ತಾಲ್ಲೂಕು ಪ್ರದೇಶದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಹಿಂದೂ ಮತ್ತು ಜೈನ ಧರ್ಮಗಳು ಅಸ್ಥಿತ್ವದಲ್ಲಿದ್ದು, ಹಿಂದೂ ಮತ್ತು ಜೈನ ಧರ್ಮಾವಲಂಬಿಗಳು, ಆಗಿನಿಂದಲೂ ಇಲ್ಲಿ ನೆಲೆಸಿರುವರು. ತಾಲ್ಲೂಕಿನಲ್ಲಿ ಈ ಎರಡು ಧರ್ಮಗಳಲ್ಲದೆ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಇವೆ. ಇಸ್ಲಾಂ ಧರ್ಮವು ಇಲ್ಲಿ ಕ್ರಿ.ಶ.೧೮ನೇಯ ಶತಮಾನದಿಂದ ಅಸ್ತಿತ್ವದಲ್ಲಿದ್ದರೆ, ಹಿಂದೂ ಧರ್ಮವು ಇಲ್ಲಿ ಕ್ರಿ.ಪೂ. ೧೬೦ರಲ್ಲಿಯೇ ಅಸ್ಥಿತ್ವದಲ್ಲಿದ್ದಿತು ಎಂಬುದಕ್ಕೆ ಕ್ರಿ.ಪೂ.೧೬೦ರಲ್ಲಿ ಉತ್ತರ ಭಾರತದ (ಉತ್ತರ ದೇಶದ) ದೊರೆಯಾಗಿದ್ದ ರಾಜಾ ಪರಮೇಶ್ವರರಾಯನ ಮಗನಾದ ನೀಲಶೇಖರ ಮಹಾರಾಜನು ಈಗಿನ

ನೀರಗುಂದವಿರುವಲ್ಲಿ ದೊಡ್ಡ ರಾಜಧಾನಿ (ನೀಲಾವತಿ ಪಟ್ಟಣ) ಯನ್ನು ನಿರ್ಮಿಸಿ ಆಳಿದನೆಂಬ ಬಗ್ಗೆ ದಾಖಲೆಗಳಿವೆ. ಜೈನಧರ್ಮವು ಇಲ್ಲಿ ಕ್ರಿ.ಶ. ೮ನೇ ಶತಮಾನಕ್ಕೂ ಹಿಂದೆಯೇ ನೆಲೆಗೊಂಡಿದೆ. ಸುಮಾರು ೧೫೦೦ ವರ್ಷಗಳ ಹಿಂದೆಯೇ ನೀರಗುಂದವು ಜೈನರ ರಾಜಧಾನಿಗಳಲ್ಲೊಂದಾಗಿದ್ದಿತು ಎನ್ನಲಾಗಿದೆ. ೮ನೇ ಶತಮಾನದಲ್ಲಿ ದಿಂಡಿಕ ಹಾಗೂ ನಂತರ ಅವನ ಮಗ ಪರಮಗುಳ ಇಲ್ಲಿ ಆಳಿದರು. ಇಸ್ಲಾಂ ಧರ್ಮವು ಕ್ರಿ.ಶ. ೧೮ನೇ ಶತಮಾನದಲ್ಲಿ ಸಿರಾ ಮೊಗಲರು ಹಾಗೂ ಹೈದರಾಲಿಯ ಕಾಲದಲ್ಲಿ ಇಲ್ಲಿ ನೆಲೆಯೂರಿತು. ಕ್ರೈಸ್ತ ಪ್ರಾಟೆಸ್ಟೆಂಟರು ಸ್ವಾತಂತ್ರ್ಯಾನಂತರ (೭೧ ವರ್ಷಗಳ ಹಿಂದೆ) ಮೈಸೂರು ಕಡೆಯಿಂದ ಬಂದು ಇಲ್ಲಿ ನೆಲೆಸಿದರೆ, ರೋಮನ್ ಕ್ಯಾಥೋಲಿಕ್‌ರು 'ಕ್ರೈಸ್ತ ಮಿಷನ್' ಗಳ ಮೂಲಕ ಬಂದಿರುತ್ತಾರೆ.

## ೨೦೧೧ ರ ಜನಗಣತಿಯಂತೆ ಹೊಸದುರ್ಗ ತಾಲ್ಲೂಕಿನಲ್ಲಿದ್ದ ವಿವಿಧ ಧರ್ಮಿಯರ ವಿವರ

| | ಧರ್ಮ | ಒಟ್ಟು ಜನಸಂಖ್ಯೆ | ಪುರುಷ | ಮಹಿಳೆ |
|---|---|---|---|---|
| ಒಟ್ಟು | ಒಟ್ಟು | ೨೩೫೧೧೬ | ೧೧೯೧೪೮ | ೧೧೫೯೬೮ |
| | ಹಿಂದೂ | ೨೨೨೪೫೦ | ೧೧೨೯೨ | ೧೦೯೭೫೮ |
| | ಮುಸ್ಲಿಂ | ೧೧೫೬೪ | ೫೮೮೭ | ೫೬೭೭ |
| | ಕ್ರೈಸ್ತ | ೩೦೭ | ೧೬೭ | ೧೪೦ |
| | ಸಿಖ್ | ೨೧ | ೧೦ | ೧೧ |
| | ಬೌದ್ಧ | ೮ | ೫ | ೩ |
| | ಜೈನ್ | ೪೪೫ | ೨೨೮ | ೨೧೭ |
| | ಇತರೆ ಧರ್ಮಗಳು | ೨೭ | ೧೪ | ೧೩ |
| | ಧರ್ಮವನ್ನು ತಿಳಿಸದವರು | ೨೯೪ | ೧೪೫ | ೧೪೯ |
| ಗ್ರಾಮೀಣ | ಒಟ್ಟು | ೨೦೬೭೪೬ | ೧೦೪೬೦೫ | ೧೦೨೧೪೧ |
| | ಹಿಂದೂ | ೨೦೧೦೦೦ | ೧೦೧೭೨೭ | ೯೯೨೭೩ |
| | ಮುಸ್ಲಿಂ | ೫೧೯೯ | ೨೫೯೬ | ೨೬೦೩ |
| | ಕ್ರೈಸ್ತ | ೧೫೯ | ೯೩ | ೬೬ |
| | ಸಿಖ್ | ೨೦ | ೧೦ | ೧೦ |

| | | | | |
|---|---|---|---|---|
| | ಬೌದ್ಧ | ೫ | ೨ | ೩ |
| | ಜೈನ್ | ೯೦ | ೪೧ | ೪೯ |
| | ಇತರೆ ಧರ್ಮಗಳು | ೧೭ | ೮ | ೯ |
| | ಧರ್ಮವನ್ನು ತಿಳಿಸದವರು | ೨೫೬ | ೧೨೮ | ೧೨೮ |
| ನಗರ | ಒಟ್ಟು | ೨೮೩೭೦ | ೧೪೫೪೩ | ೧೩೮೨೭ |
| | ಹಿಂದೂ | ೨೧೪೫೦ | ೧೦೯೬೫ | ೧೦೪೮೫ |
| | ಮುಸ್ಲಿಂ | ೬೩೬೫ | ೩೨೯೧ | ೩೦೭೪ |
| | ಕ್ರೈಸ್ತ | ೧೪೮ | ೭೪ | ೭೪ |
| | ಸಿಖ್ | ೧ | ೦ | ೧ |
| | ಬೌದ್ಧ | ೩ | ೩ | ೦ |
| | ಜೈನ್ | ೩೫೫ | ೧೮೭ | ೧೬೮ |
| | ಇತರೆ ಧರ್ಮಗಳು | ೧೦ | ೬ | ೪ |
| | ಧರ್ಮವನ್ನು ತಿಳಿಸದವರು | ೩೮ | ೧೭ | ೨೧ |

**ಆಧಾರ: ೨೦೧೧ ರ ಜನಗಣತಿ**

## ಹಿಂದೂಧರ್ಮ

ಕರ್ನಾಟಕವು ವಿವಿಧ ಧರ್ಮಗಳ ಆಡುಂಬೊಲವಾಗಿದ್ದರೂ, ಹಿಂದೂ ಧರ್ಮೀಯರು ಅಧಿಕ ಪ್ರಮಾಣದಲ್ಲಿದ್ದಾರೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ನೆಲೆಸಿರುವ ಹಿಂದೂ ಧರ್ಮೀಯರು, ಹೊಸದುರ್ಗ ತಾಲ್ಲೂಕಿನಲ್ಲೂ ಅತ್ಯಧಿಕ ಪ್ರಮಾಣದಲ್ಲಿದ್ದಾರೆ. 'ಹಿಂದೂ' ಶಬ್ದವು 'ಸಿಂಧೂ' ಎಂಬ ಮೂಲ ಪದದಿಂದ ಉಂಟಾಗಿದೆ. ವಿಶ್ವದ ಧರ್ಮಗಳಲ್ಲಿ ಹಿಂದೂ ಧರ್ಮವು ಅತೀ ಹೆಚ್ಚು ಪ್ರಾಚೀನವಾದುದು. 'ಹಿಂದೂ ಧರ್ಮವು ವಿಶ್ವದ ಎಲ್ಲಾ ಧರ್ಮಗಳಿಗೆ ಮಾತೃ ಸ್ಥಾನದಲ್ಲಿದೆ' ಎಂದು ಪ್ರಸಿದ್ಧ ಇತಿಹಾಸಕಾರ ಎಲ್.ಡೂರಾಂಟ್ ಅಭಿಪ್ರಾಯಪಟ್ಟಿದ್ದಾನೆ. ಹಿಂದೂ ಧರ್ಮವು ಹಲವಾರು ಋಷಿಮುನಿಗಳಿಂದ ರೂಪಿತವಾಗಿದೆ. ಆದ್ದರಿಂದಲೇ ಇದನ್ನು ಸನಾತನ ಧರ್ಮ ಎನ್ನಲಾಗುತ್ತಿದೆ. ವೇದಗಳು ದೇವಾನು ದೇವತೆಗಳಿಂದ ಮೌಖಿಕವಾಗಿ ಬಂದಿತೆಂಬ ನಂಬಿಕೆ ಹಿಂದೂಗಳಲ್ಲಿದೆ. ಹಿಂದೂ ಧರ್ಮವು ಕೇವಲ ಆಧ್ಯಾತ್ಮ ಕತೆಯಿಂದ ಕೂಡಿದುದಲ್ಲ. ಅದು ಮನುಕುಲದ ಉದ್ಧಾರಕ್ಕಾಗಿ ಹುಟ್ಟಿದೆ ಎಂದು ಅನೇಕ ವಿದ್ವಾಂಸರ ಅಭಿಪ್ರಾಯಗಳಾಗಿವೆ.

ಹಿಂದೂ ಧರ್ಮದ ಪ್ರಮುಖ ಪಂಥಗಳಾದ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಇವು ಕ್ರಿ.ಶ. ೯ನೇಯ ಶತಮಾನದ ನಂತರ ಪ್ರತಿಪಾದನೆಗೊಂಡವು. ಕ್ರಿ.ಶ. ೯ನೇ ಶತಮಾನದಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದ ಆದಿಶಂಕರಾಚಾರ್ಯರು 'ಅದ್ವೈತ' ಮತವನ್ನು ಪ್ರತಿಪಾದಿಸಿದರು. ಇವರು ಪ್ರಥಮ ಬಾರಿಗೆ ಆತ್ಮನಲ್ಲೇ ಪರಮಾತ್ಮನು ಅಸ್ತಿತ್ವದಲ್ಲಿರುವುದರಿಂದ, 'ಅಹಂ ಬ್ರಹ್ಮಾಸ್ಮಿನ್' ಹಾಗೂ 'ತತ್ವಮಸಿ' ತತ್ವಗಳನ್ವಯ ಅದ್ವೈತವನ್ನು ಬೋಧಿಸಿದರು. ದೇವಾನು ದೇವತೆಗಳ ಐಕ್ಯತೆಯನ್ನು ಸಾಮಾನ್ಯರಿಗೆ ದರ್ಶನ ಮಾಡಿಸಿದರು. ಆಕಾಶದಿಂದ ಭೂಮಿಗೆ ಬಿದ್ದ ಸಹಸ್ರಾರು ಮಳೆಯ ಹನಿಗಳು ಏಕರೂಪವಾಗಿ ಹರಿದು ಸಾಗರಕ್ಕೆ ಸೇರುವ ರೀತಿಯಲ್ಲಿ ಸರ್ವಶಕ್ತನಾದ ಬ್ರಹ್ಮನೊಬ್ಬನೇ ಸತ್ಯ. ಜಗತ್ತು ಮಿಥ್ಯ ಹಾಗೂ ಪುನರ್ ಜನ್ಮವು ಸಹಜವಾದ ಪ್ರಕ್ರಿಯೆ ಎಂದು ಪ್ರತಿಪಾದಿಸಿದ ಕಾರಣ ಈ ಪಂಥಕ್ಕೆ 'ಅದ್ವೈತ'ವೆಂಬ ಹೆಸರು ರೂಢಿಗೆ ಬಂದಿತು. ಎಲ್ಲಾ ಆತ್ಮರೂ ಏಕ ರೀತಿಯ ಮೋಕ್ಷ ಪಡೆಯುವರು ಎಂಬುದು ಆದಿ ಶಂಕರಾಚಾರ್ಯರ ದೃಢವಾದ ಅಭಿಪ್ರಾಯವಾಗಿತ್ತು.

ಕ್ರಿ.ಶ.೧೧ನೇ ಶತಮಾನದಲ್ಲಿ ತಮಿಳುನಾಡಿನ ಶ್ರೀ ಪೆರಂಬದೂರಿನಲ್ಲಿ ಜನ್ಮತಾಳಿದ ರಾಮಾನುಜಾಚಾರ್ಯರು ಬ್ರಹ್ಮನು 'ಚಿತ್' ಮತ್ತು 'ಸಚಿತ್' ಎಂಬ ವಿಶೇಷವಾದ ಗುಣಗಳನ್ನು ಹೊಂದಿರುವುದರಿಂದ ಆತನ ಸಾಕ್ಷಾತ್ಕಾರವು ಸಾಧ್ಯವೇ ಹೊರತು, ಆತನೊಂದಿಗೆ ಮಿಲನ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ಕರ್ನಾಟಕದ ಉಡುಪಿಯ ಬಳಿಯ ಪಾಜಕ (ಬೆಳ್ಳೆ)ದಲ್ಲಿ ಜನ್ಮತಾಳಿದ ಮಧ್ವಾಚಾರ್ಯರು ಆತ್ಮ ಮತ್ತು ಪರಮಾತ್ಮರ ನಡುವೆ ಇರುವ ಪಂಚಭೇದ ತಾರತಮ್ಯಗಳನ್ನು ಪ್ರತಿಪಾದಿಸಿದರು. ಈ ಕಾರಣದಿಂದ ಈ ಪಂಥಕ್ಕೆ 'ದ್ವೈತಮತ'ವೆಂದು ಕರೆಯಲಾಯಿತು. ಈ ಪಂಥದ ಪ್ರಕಾರ, ಆತ್ಮ ಮತ್ತು ಪರಮಾತ್ಮನ ಸಂಬಂಧಗಳು ಸಂಪೂರ್ಣವಾಗಿ ದಾಸತ್ವದ ಸಂಕೇತವಾಗಿದ್ದು, ಸರ್ವಶಕ್ತನಾದ ವಿಷ್ಣುವಿನ ಹರಿಸರ್ವೋತ್ತಮತ್ವವನ್ನು ಮಧ್ವಾಚಾರ್ಯರು ಬೋಧಿಸಿದರು. ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಅವನ ಮಟ್ಟಿಗೆ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ಯಾವುದೇ ಕಾರಣಕ್ಕೂ ಸರ್ವಗುಣ ಪರಿಪೂರ್ಣನಾದ ಬ್ರಹ್ಮನು (ಭಗವಂತನು) ಆತ್ಮನಿಗೆ ಸಮಾನವಾಗುವುದಿಲ್ಲ. ಆತ್ಮನು ಇಹ ಮತ್ತು ಪರಲೋಕಗಳಲ್ಲಿ ಪರಮಾತ್ಮನ ಅಧೀನವಾಗಿರುತ್ತೇನೆಂಬ ದಾಸತ್ವ ಭಾವವನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿದರು. ಅಲ್ಲದೆ, ಆಯಾ ವ್ಯಕ್ತಿಯ ಸಾಧನೆಯ ಮೇರೆಗೆ ಯೋಗ್ಯಾನುಸಾರ ಮೋಕ್ಷವು ಲಭಿಸುತ್ತದೆಂದೂ ಬೋಧಿಸಿದರು. ದ್ವೈತ ಧರ್ಮವು ದೃಢವಾಗಿ ಹೊಂದಿದ್ದ ದಾಸತ್ವ ಮನೋಭಾವದ ಫಲವಾಗಿ ಹರಿದಾಸ ಸಾಹಿತ್ಯವು ವಿಫುಲವಾಗಿ ಕರ್ನಾಟಕದಲ್ಲಿ ಬೆಳೆಯಲು ಸಾಧ್ಯವಾಯಿತು. ಪ್ರಸ್ತುತ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಪಂಥಗಳು ಸಂಪೂರ್ಣವಾಗಿ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ (ಭಗವದ್ಗೀತೆ) ಮುಂತಾದವುಗಳ ಆಧ್ಯಾತ್ಮಿಕ ಅಧ್ಯಯನಗಳ

ಪ್ರತಿರೂಪವೇ ಆಗಿ ಪ್ರತಿಪಾದಿತವಾಗಿದ್ದು, ಹಿಂದೂಧರ್ಮದ ಆಧ್ಯಾತ್ಮಿಕ ಬೆಳವಣಿಗೆಗೆ ದಾರಿದೀಪಗಳಾಗಿವೆ.

ಹಿಂದೂ ಧರ್ಮ ಅನೇಕ ಪಂಥಗಳ ನಂಬಿಕೆಗಳನ್ನು ಒಳಗೊಂಡಿದೆ. ಹಿಂದೂಗಳಲ್ಲಿ ಹತ್ತಾರು ಜಾತಿ ಹಾಗೂ ಉಪಜಾತಿಗಳು ಇದ್ದು, ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಅವರ ಅವತಾರಗಳನ್ನು ಇವರು ಪೂಜಿಸುವರು. ತಾಲ್ಲೂಕಿನಲ್ಲಿ ಅಂತಹ ದೇವ–ದೇವಿಯರ ಅನೇಕ ದೇವಾಲಯಗಳಿವೆ. ಅವುಗಳ ಜೊತೆಗೆ ಗ್ರಾಮ ದೇವತೆಗಳನ್ನು ಮನೆ ದೇವರುಗಳನ್ನು ಇಲ್ಲಿನ ಹಿಂದೂಗಳು ತಮ್ಮ ತಮ್ಮ ಸಂಪ್ರದಾಯಕ್ಕೆ ತಕ್ಕಂತೆ ಪೂಜಿಸುತ್ತಾರೆ. ತಾಲ್ಲೂಕು ಪ್ರಾಚೀನ ಕಾಲದಿಂದಲೂ ಬೇರೆ–ಬೇರೆ ರಾಜರುಗಳ ಆಡಳಿತಕ್ಕೆ ಒಳಪಟ್ಟಾಗ, ಪ್ರಜೆಗಳೂ ಆಯಾ ರಾಜರ ಧರ್ಮದ ಪ್ರಭಾವಕ್ಕೆ ಒಳಗಾಗುತ್ತಿದ್ದದು ಸಹಜವಾಗಿದ್ದಿತು. ಕ್ರಿ.ಶ. ೧೧೯೦ರ, ಹೊಯ್ಸಳರ ಕಾಲದ ಶಾಸನದಲ್ಲಿ (ಬೂದಿಹಾಳು) ಬೂದಿಹಾಳಿನ ಕೇತಗೌಡ, ಮಾಚಿಗೌಡರು, ಬ್ರಾಹ್ಮಣ ಮಹಾದೇವರಸನ ಕಾಲು ತೊಳೆದು ಗದ್ದೆಯನ್ನು ದಮ್ಮೇಶ್ವರ ದೇವರ ಸೇವೆಗಾಗಿ ದಾನ ಪಡೆದುದನ್ನು ಹೇಳಲಾಗಿದೆ. (ಎಕ. ತುಮಕೂರು ಜಿಲ್ಲೆ: ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೂದಿಹಾಳ ಶಾಸನ ೯) ಇದಕ್ಕೂ ನಾಲ್ಕು ಶತಮಾನಗಳ ಹಿಂದೆ, ಕ್ರಿ.ಶ.೮ನೇ ಶತಮಾನದಲ್ಲಿ ನೀರಗುಂದನಾಡನ್ನಾಳುತ್ತಿದ್ದ ಶ್ರೀಪುರುಷನು ಮೂಷವ ವಿಷಯವನ್ನು ಜಯಿಸಿದಾಗ ಪೊದಲ ಶರ್ಮ ಎಂಬ ಬ್ರಾಹ್ಮಣನಿಗೆ ಗ್ರಾಮ ದತ್ತಿ ನೀಡಿದನು (ಬಂಡಿಹೊಳೆ ತಾಮ್ರ ಶಾಸನ).

ಕರ್ನಾಟಕದಲ್ಲಿ ಕ್ರಿ.ಶ.೧೧ನೇ ಶತಮಾನದಲ್ಲಿ ಆದ್ಯವಚನಕಾರ ದೇವರ ದಾಸಿಮಯ್ಯನವರು, ಸರಳವಾದ ಕನ್ನಡದಲ್ಲಿ ಮೊದಲಿಗೆ ವಚನಗಳನ್ನು ಬರೆದರು. ಕ್ರಿ.ಶ.೧೨ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಪಾದಿಸಿದ ವೀರಶೈವ(ಶಕ್ತಿ ವಿಶಿಷ್ಟಾದ್ವೈತ) ಧರ್ಮವು ಹಿಂದೂ ಧರ್ಮದಲ್ಲಿ ಅಡಕವಾಗಿದ್ದ ಸತ್ವ ಸಾರಗಳನ್ನು ವಚನಗಳ ಮೂಲಕ ಪ್ರತಿಪಾದಿಸಿ ಜನಪ್ರಿಯಗೊಳಿಸಿದರು. ಸಾಮಾಜಿಕ ಜೀವನಕ್ಕೆ ಅವಶ್ಯವಾದ ನೀತಿ ಭೋಧನೆಗಳಿಂದ ಕೂಡಿದ್ದು, ಆಧ್ಯಾತ್ಮಿಕ ವಿಚಾರಗಳು ಸಂಸ್ಕೃತಕ್ಕೆ ಬದಲಾಗಿ ಸರಳ ಕನ್ನಡದಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೆ ಇತರೆ ಪ್ರದೇಶಗಳಿಗೂ ಪಸರಿಸಿತು. ಈ ಧರ್ಮದಲ್ಲಿ ಬೆಳೆದು ಬಂದ ವಚನ ಸಾಹಿತ್ಯವು ಕನ್ನಡಭಾಷೆ ಮತ್ತು ಸಾಹಿತ್ಯದ ಧೀರೋದ್ಧಾತ್ತ ಅಭಿವೃದ್ಧಿಗೆ ಕಾರಣವಾಯಿತೆಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

**ಮಠಗಳು**

ಕ್ರಿ.ಶ.೧೫ನೇ ಶತಮಾನದಲ್ಲಿ ಬೂದಿಹಾಳು ಪಾಳೆಯಗಾರರ ಕಾಲದಲ್ಲಿ ಬೂದಿಹಾಳು (ಶ್ರೀರಾಂಪುರ)ದಲ್ಲಿ ನಿರಾಸೆ ಮಠ ಇದ್ದ ಬಗ್ಗೆ ಸಾಂಗತ್ಯದಲ್ಲಿ ಉಲ್ಲೇಖವಿದೆ. ಕ್ರಿ.ಶ.೧೬–

೧೭ನೇ ಶತಮಾನದಲ್ಲಿ ಮತ್ತೋಡು ಪಾಳೆಯಗಾರರು ಮತ್ತೋಡಿನಲ್ಲಿ ಮುರುಘಾ ಮಠ ಕಟ್ಟಿಸಿ ಅರೆಹಳ್ಳಿಯನ್ನು ದತ್ತಿ ನೀಡಿದ್ದ ಬಗ್ಗೆ ಶಾಸನಾಧಾರವಿದೆ. ಬಾಗೂರಿನಲ್ಲಿ ಹಿಂದಿನ ಕಾಲದಲ್ಲಿ ಮುರುಘಾ ಮಠ, ಮಂಡಳ ಮಠ, ಚರಂತಿ ಮಠ, ಸೂಗೂರಯ್ಯನ ಗದ್ದುಗೆ ಇದ್ದವು. ಮತ್ತೋಡಿನಲ್ಲಿ ಸುಣ್ಣದ ಕೂಳೆ ಮಠ ಇದ್ದಿತು. ಚಿಕ್ಕ ಬ್ಯಾಲದ ಕೆರೆಯಲ್ಲಿ ಪಲ್ಲಾರದಯ್ಯನ ಮಠ ಇದೆ.

**ಶ್ರೀಗುರು ಒಪ್ಪೊತ್ತಿನ ಸ್ವಾಮಿ ಮಠ**: ಇದು ಹೊಸದುರ್ಗ ಪಟ್ಟಣದಲ್ಲಿರುವ ಐತಿಹಾಸಿಕ ಹಿನ್ನೆಲೆಯ ಮಠ (ಗದ್ದುಗೆ)ವಾಗಿದೆ. ಕ್ರಿ.ಶ.೧೬೩೪ ರಲ್ಲಿ ಚಿತ್ರದುರ್ಗದ ಪಾಳೆಯಗಾರ ಚಿಕ್ಕಣ್ಣನಾಯಕನು, ಶಿರಾ ಮಹಮದೀಯರ ವಶದಲ್ಲಿದ್ದ ಬಾಗೂರು ಕೋಟೆಯನ್ನು ವಶಪಡಿಸಿಕೊಳ್ಳಲು, ಈಗಿನ ಭೈರವನ ಬೆಟ್ಟದ ಮೇಲೆ ಕೋಟೆ ಕಟ್ಟಿಕೊಂಡು ಸೇನಾ ಸಮೇತನಾಗಿ ತಂಗಿದ್ದನು. ಅದೇ ವೇಳೆಗೆ, ಬಾಗೂರು ಕೋಟೆಯಿಂದ ಹೊರದೂಡಲ್ಪಟ್ಟ ಜಂಗಮರೊಬ್ಬರು, ಪ್ರಸ್ತುತ ಚಿಕ್ಕಣ್ಣನಾಯಕನ ನೆರವು ಪಡೆದು, ಭೈರವನ ಬೆಟ್ಟದ ತಪ್ಪಲಲ್ಲಿ 'ಪೇಟೆ'ಯನ್ನು ಕಟ್ಟಿಸಿದರು. ಈ ಕೋಟೆ ಮತ್ತು ಪೇಟೆ ಪ್ರದೇಶಕ್ಕೆ ನಾಯಕನು 'ಹೊಸದುರ್ಗ' ಎಂದು ಹೆಸರಿಟ್ಟನು. ಪಟ್ಟಣದ ನಿರ್ಮಾಣಕ್ಕೆ ಕಾರಣರಾದ ಆ 'ಸ್ವಾಮಿ'ಗಳು ಒಪ್ಪೊತ್ತು ಮಾತ್ರ ಆಹಾರ ಸೇವಿಸುತ್ತಾ ಇದ್ದು, ಕ್ರಮೇಣ ಸ್ವಇಚ್ಛೆಯಿಂದ, 'ಜೀವಂತ ಸಮಾಧಿ' ಹೊಂದಿದರು. ಆ ಸಮಾಧಿ ಜಾಗದಲ್ಲಿ ಭಕ್ತರು 'ಕರ್ತೃ ಗದ್ದುಗೆ' ನಿರ್ಮಿಸಿ ಪೂಜಿಸತೊಡಗಿದರು. ಅದೇ ಕ್ರಮೇಣ, 'ಒಪ್ಪೊತ್ತಿನ ಸ್ವಾಮಿ ಮಠ' ಎಂದು ಪ್ರಸಿದ್ಧಿ ಪಡೆಯಿತು.

ಈ ಮಠದ ಜಯದೇವ ವಿದ್ಯಾರ್ಥಿನಿಲಯವು ೧೯೫೪ ರಲ್ಲಿ ದುರ್ಗದ ಅಜಯ ದೇವ ಜಗದ್ಗುರುಗಳವರಿಂದ ಸ್ಥಾಪನೆಗೊಂಡಿದೆ. ಈ ಹಾಸ್ಟೆಲ್‌ಗಾಗಿ ಸರ್ಕಾರವು ಹುಣಸೇಕಟ್ಟೆ ಹತ್ತಿರ ೮೦ ಎಕರೆ ಜಮೀನನ್ನು ನೀಡಿರುತ್ತದೆ. ಎಸ್.ಜೆ.ಎಂ.ಕಾಲೇಜು ಹೊಸದುರ್ಗ ಪಟ್ಟಣದಲ್ಲಿದೆ. ಶ್ರೀ ಒಪ್ಪೊತ್ತಿನಸ್ವಾಮಿ ಮಠದ ಸಮಿತಿ ಹಾಗೂ ಶ್ರೀಜಯದೇವ ಹಾಸ್ಟೆಲ್ ಸಮಿತಿಗಳ ಮಠ, ಹಾಸ್ಟೆಲ್, ಕಾಲೇಜು, ಜಮೀನುಗಳ ಉಸ್ತುವಾರಿ ನೋಡಿಕೊಳ್ಳುತ್ತಿವೆ. ಭಕ್ತರು ಸಹ ತೋಟ, ಜಮೀನು ದೇಣಿಗೆ ಕೊಟ್ಟಿರುತ್ತಾರೆ. ಮಠಕ್ಕೆ ಸೇರಿದ ವಾಣಿಜ್ಯ ಮಳಿಗೆಗಳ ಸಂಕೀರ್ಣ ಪಟ್ಟಣದಲ್ಲಿದೆ.

ಚಿತ್ರದುರ್ಗದ ಶ್ರೀ ಮುರುಘಾ ಶರಣರಿಂದ ೧೯೯೭ರಲ್ಲಿ ದೀಕ್ಷೆ ಪಡೆದಿದ್ದ ಶ್ರೀ (ಬಸವ) ಶಾಂತವೀರಸ್ವಾಮಿಯವರು ೨೦೦೨ ರಿಂದ ೨೦೦೯ರವರೆಗೆ ಶ್ರೀ ಗುರು ಒಪ್ಪೊತ್ತಿನ ಸ್ವಾಮಿ ಮಠದ ಪಟ್ಟಾಧ್ಯಕ್ಷರಾಗಿದ್ದರು. ತದನಂತರ, ಶ್ರೀ ಶಿವಬಸವಸ್ವಾಮಿಗಳು ಈ ಮಠದ ಪಟ್ಟಾಧ್ಯಕ್ಷರಾಗಿದ್ದಾರೆ. ಮಠದ ವತಿಯಿಂದ ಅನೇಕ ಧಾರ್ಮಿಕ ಕಾರ್ಯಗಳು ಜರುಗುತ್ತವೆ.

**ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠ**: ಹೊಸದುರ್ಗದಲ್ಲಿರುವ ಈ ಮಠವನ್ನು 'ವಿಜಯಸಂಗಮ ಕುಂಚಿಟಿಗ ಮಹಾಸಂಸ್ಥಾನ ಮಠ' ಎಂದೂ ಕರೆಯುವರು.

ಶ್ರೀ ಮಠದ ಪೀಠಾಧ್ಯಕ್ಷರಾಗಿ ಶ್ರೀ ಡಾ.ಶಾಂತವೀರಸ್ವಾಮಿಗಳು (೨೦೧೧ ರಿಂದ) ರಾಜ್ಯಾದ್ಯಂತ ಕುಂಚಿಟಿಗ ಜನಾಂಗದ ಸಂಘಟನೆ, ಶಿಕ್ಷಣ, ಧಾರ್ಮಿಕ ಪ್ರೇರಣೆ ಕಾರ್ಯಗಳನ್ನು ಹಮ್ಮಿಕೊಂಡಿದ್ದಾರೆ. ರಾಜ್ಯದ ಪ್ರಥಮ ಕುಂಚಿಟಿಗ ಮಠ ಇದಾಗಿದ್ದು, ವಿವಿಧೆಡೆಗಳಲ್ಲಿ ಒಟ್ಟು ೧೬ ಶಾಖಾ ಮಠಗಳನ್ನು ಮಾಡಲು ಉದ್ದೇಶಿಸಿದ್ದು, ಈಗಾಗಲೇ ಬೆಂಗಳೂರು, ಸಂತೆಬೆನ್ನೂರು, ಚಿತ್ರದುರ್ಗ, ಐಮಂಗಲ, ಶಿವಮೊಗ್ಗ ಮತ್ತು ಕಡೂರು ಈ ಸ್ಥಳಗಳಲ್ಲಿ ಸಾಕಷ್ಟು ಜಾಗ ದೊರೆತಿರುತ್ತದೆ.

ಸ್ವಾಮೀಜಿಯವರು ೪೦ ಎಕರೆ ಜಮೀನಿನಲ್ಲಿ ೨೦೧೦ ರಿಂದ ದಾಳಿಂಬೆ ಕೃಷಿ ಮಾಡಿ, ಅದರಿಂದ ಬಂದ ಆದಾಯದಿಂದ, ಹೊಸದುರ್ಗದಲ್ಲಿ ೨ ಕೋಟಿ ವೆಚ್ಚದಲ್ಲಿ ಮಹಾಸಂಸ್ಥಾನ ಮಠವನ್ನು ನಿರ್ಮಿಸಿದರು. ಕೃಷಿ ಸಾಧನೆ ಹಾಗೂ ಸಮಾಜ ಸೇವೆಗಾಗಿ ಶ್ರೀ ಗಳಿಗೆ ೨೦೧೨ ರಲ್ಲಿ ಗೌರವ ಡಾಕ್ಟರೇಟ್ ಪದವಿ ದೊರೆತಿರುತ್ತದೆ. ತಾಲ್ಲೂಕಿನಲ್ಲಿ ಅಂದಾಜು ೨೫ ಸಾವಿರ ಜನ ಕುಂಚಿಟಿಗ ಭಕ್ತರಿದ್ದಾರೆಂದು ಹೇಳುವ ಶ್ರೀಗಳು, ಮಠದ ೧೨ ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಎಲ್.ಕೆ.ಜಿ.ಯಿಂದ ಇಂಜಿನಿಯರಿಂಗ್ ಅಥವಾ ಡಿಪ್ಲೊಮೊವರೆಗಿನ ಶಾಲಾ-ಕಾಲೇಜುಗಳ ಕಟ್ಟಡ ಸಂಕೀರ್ಣ (೬೦X೩೬೦ವಿಸ್ತೀರ್ಣ) ನಿರ್ಮಿಸುವ ಯೋಜನೆ ಹಮ್ಮಿಕೊಂಡಿದ್ದಾರೆ. ತಿಂಗಳಿಗೊಮ್ಮೆ ಮಠದಲ್ಲಿ 'ಸುಜ್ಞಾನ ಸಂಗಮ' ಕಾರ್ಯಕ್ರಮ ನಡೆಯುತ್ತದೆ. ವರ್ಷಕ್ಕೊಮ್ಮೆ ಶ್ರೀ ವಿಜಯರಾಯ ಸಂಗಮೇಶ್ವರ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಮತ್ತಿತರ ಕಾರ್ಯಕ್ರಮಗಳು ನಡೆಯುತ್ತವೆ.

ಮಠದ ವತಿಯಿಂದ ಈಗಾಗಲೇ ಶಾಲೆ ನಡೆಯುತ್ತಿದೆ. ಶಾಂತವೀರ ಶ್ರೀ ಸೌಹಾರ್ದ ಸಹಕಾರ ಸಂಘ, ಸ್ವಾಮಿ ವಿವೇಕಾನಂದ ಮಹಿಳಾ ಪದವಿ ಪೂರ್ವ ಕಾಲೇಜು, ಕುಂಚ ಶ್ರೀ ಮಹಿಳಾ ಸಂಘ, ಸಂಗಮೇಶ್ವರ ಯುವ ವೇದಿಕೆ, ಸಂಗಮೇಶ್ವರ ಪತ್ತಿನ ಬ್ಯಾಂಕ್ ಹೊಸದುರ್ಗದಲ್ಲಿವೆ. ಬೆಂಗಳೂರು ತಿಗಳರಪಾಳ್ಯದಲ್ಲಿ ಜೆ.ಬಿ.ಕಾವಲ್ ಪ್ರೌಢಶಾಲೆ ಹಾಗೂ ಹೊಳಲ್ಕೆರೆಯಲ್ಲಿ ಸಂಗಮೇಶ್ವರ ಪತ್ತಿನ ಸಹಕಾರ ಸಂಘ ಇವೆ. ೨೦೧೧ ರಲ್ಲಿ ಹೊಸದುರ್ಗದ ಸಂಗಮ ನಗರದಲ್ಲಿ ತಾತ್ಕಾಲಿಕವಾಗಿ ಇದ್ದ ಪ್ರಸ್ತುತ ಶ್ರೀಮಠ, ೨೦೧೫ ರಲ್ಲಿ ಇಲ್ಲಿನ ದೊಡ್ಡ ಗುಡ್ಡದ ಪ್ರದೇಶವಾದ ಕುಂಚಗಿರಿಯಲ್ಲಿ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡು, ಮುಖ್ಯಮಂತ್ರಿಗಳಿಂದ ಉದ್ಘಾಟಿಸಲ್ಪಟ್ಟಿರುತ್ತದೆ. ಮಾಂಸಾಹಾರಿಗಳು ಮತ್ತು ಸಸ್ಯಾಹಾರಿಗಳು ಇರುವ ಕುಂಚಿಟಿಗ ಜನಾಂಗವು, ಬುಡಕಟ್ಟು ಸಮುದಾಯವಾಗಿದ್ದು,'ಹಿಂದುಳಿದ ವರ್ಗ'ಕ್ಕೆ ಸೇರಿಸುವುದು ಅಗತ್ಯವಾಗಿದೆ ಎಂದು ಶ್ರೀಗಳು ಹೇಳುತ್ತಾರೆ (ಹೆಚ್ಚಿನ ವಿವರಗಳನ್ನು ಮುಂದಿನ ಪುಟದಲ್ಲಿ ಗಮನಿಸಿ).

**ಸಾಣೇಹಳ್ಳಿ ಮಠ**: 'ತರಳಬಾಳು ಜಗದ್ಗುರು ಬೃಹನ್ಮಠ'ದ ಶಾಖಾಮಠವು ಸಾಣೇಹಳ್ಳಿಯಲ್ಲಿದ್ದು, ಇದರ ಅಸ್ತಿತ್ವವು ಅನೇಕ ಶತಮಾನಗಳ ಹಿಂದಿನಿಂದಲೂ ಇದೆ. ಕ್ರಿ.ಶ.೧೭ನೇ ಶತಮಾನದಲ್ಲಿ ಬಾಗೂರನ್ನು ಆಳುತ್ತಿದ್ದ ಹನುಮಪ್ಪನಾಯಕನು

ಶ್ರೀಮಠಕ್ಕೆ ೬೫ ಎಕರೆ ಜಮೀನನ್ನು ದತ್ತಿ ನೀಡಿದ್ದನೆನ್ನಲಾಗಿದೆ. ಆದರೆ ಇದಕ್ಕೆ ಯಾವುದೇ ಲಿಖಿತ ಆಧಾರಗಳಿರುವುದಿಲ್ಲ. ಶ್ರೀಮಠದ ಒಂಭತ್ತನೇ ತಲೆಮಾರಿನ ಪಟ್ಟಾಧ್ಯಕ್ಷರಾಗಿ ದಿ:೨೫-೧೨-೭೭ರಂದು ನಿಯುಕ್ತರಾಗಿರುವ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ತತ್ವಶಾಸ್ತ್ರ, ಸಾಹಿತ್ಯ, ನಾಟಕ ಕಲೆಯಲ್ಲಿ ಆಸಕ್ತಿಯುಳ್ಳವರಾಗಿದ್ದು, ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ವಿಚಾರ ಸಂಕಿರಣಗಳನ್ನು ನಡೆಸಿದ್ದಾರೆ. ಇವರು ೧೯೮೭ ರಲ್ಲಿ ಸ್ಥಾಪಿಸಿದ ಶಿವಕುಮಾರ ಹವ್ಯಾಸಿ ಕಲಾಸಂಘವು ರಾಜ್ಯದ ಹಲವೆಡೆ 'ಶಿವಸಂಚಾರ' (೧೯೯೭ರಿಂದ) ಪ್ರಾರಂಭಿಸಿ ನಾಟಕಗಳನ್ನು ಪ್ರದರ್ಶಿಸುತ್ತಿದೆ. ಶ್ರೀಮಠದ ಆವರಣದಲ್ಲಿ ನಿರ್ಮಿಸಲಾಗಿರುವ ಗ್ರೀಕ್ ಮಾದರಿಯ ಬಯಲು ರಂಗಮಂದಿರ ನಾಡಿನ ಹೆಮ್ಮೆಯಾಗಿದೆ. ಶ್ರೀಮಠದ ಆವರಣದಲ್ಲಿ ಶಾಲೆ, ವಿದ್ಯಾರ್ಥಿ ನಿಲಯ, ಒಳಾಂಗಣ ಕ್ರೀಡಾಂಗಣ, ಉದ್ಯಾನವನ ಮುಂತಾದವುಗಳು ಇವೆ.

**ರಾಜ್ಯದ ಉಪವೀರ ಬೃಹನ್ಮಠ ಭಗೀರಥ ಪೀಠ:**

ಶ್ರೀ ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನದ ಶ್ರೀ'ಭಗೀರಥಪೀಠ'ವು ಹೊಸದುರ್ಗ ತಾಲ್ಲೂಕು ಬ್ರಹ್ಮ ವಿದ್ಯಾನಗರದಲ್ಲಿದೆ. ಇದು ರಾಜ್ಯದ ಉಪ್ಪಾರ ಜನಾಂಗದ ಏಕೈಕ (ಮೂಲ) ಮಠವಾಗಿದ್ದು, ಅತ್ಯಂತ ಪ್ರಾಚೀನ ಮಠವೆಂದು ಹಾಗೂ ಭಾರತ ದೇಶದ ಉಪ್ಪಾರ ಜನಾಂಗಕ್ಕೆ ಇರುವುದು ಇದೊಂದೇ ಗುರುಪೀಠವೆಂದು ಹೇಳಲಾಗಿದೆ. ಮೊದಲಿಗೆ ಈ ಮೂಲಮಠವು ಚಿತ್ರದುರ್ಗದಲ್ಲಿದ್ದು, ತದನಂತರದಲ್ಲಿ ನಾಲ್ಕು ಶತಮಾನಗಳ ಹಿಂದೆ ಚಿತ್ರದುರ್ಗ ತಾಲ್ಲೂಕಿನ ಕರಲಹಟ್ಟಿ (ಉಪ್ಪಾರರ ಹಟ್ಟಿ) ಗೆ ಸ್ಥಳಾಂತರಗೊಂಡಿತು.

ಈ ಮಠದ ಗುರು ಪರಂಪರೆಗೆ ಮೊದಲಿನಿಂದಲೂ ಶ್ರೀಪದ್ಮ ಮಹಾಋಷಿ ಗೋತ್ರದವರನ್ನೆ ಉತ್ತರಾಧಿಕಾರಿಗಳನ್ನಾಗಿ ಮಾಡಲಾಗುತ್ತಿದೆ. ೧೯೨೮ರಲ್ಲಿ ಶ್ರೀಮಠದ ೧೧ನೇ ಉಪವೀರ ಜಗದ್ಗುರುಗಳಾದ ಶ್ರೀ ಚಪ್ಪರದಪ್ಪಯ್ಯ ಸ್ವಾಮಿಗಳ ನಂತರ, ೧೨ನೇ ಜಗದ್ಗುರು ಶ್ರೀಲೇಪಾಕ್ಷಿ ಮಹಾಸ್ವಾಮಿಗಳು ೧೯೫೪ರಲ್ಲಿ ಪಟ್ಟಾಭಿಷಿಕ್ತರಾಗಿ, ೧೯೬೬ರಲ್ಲಿ ಶ್ರೀಮಠವನ್ನು ಕರಲಹಟ್ಟಿಯಿಂದ ಪ್ರಸ್ತುತ ಹೊಸದುರ್ಗ ತಾಲ್ಲೂಕಿನ ಬ್ರಹ್ಮ ವಿದ್ಯಾನಗರಕ್ಕೆ ಸ್ಥಳಾಂತರಿಸಿ ಸ್ಥಾಪಿಸಿದರು. ಇಲ್ಲಿ ಅವರು ೫೦೦ ಎಕರೆ ಭೂಮಿಯನ್ನು ಸರ್ಕಾರದಿಂದ ಕರಾರಿನ ಮೇಲೆ ಪಡೆದು ಕೂಡೊಕ್ಕಲು ವ್ಯವಸಾಯ ಪದ್ಧತಿಯಡಿ ೧೦೦ ಬಡ ಕುಟುಂಬಗಳಿಗೆ ಆಶ್ರಯ ಕಲ್ಪಿಸಿದರು. ಇವರ ನಂತರ, ೧೩ನೇ ಜಗದ್ಗುರುವಾಗಿ ಡಾ॥ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು ದಿ: ೧೦-೨-೨೦೦೦ರಂದು ಪಟ್ಟಾಭಿಷಿಕ್ತರಾದರು.

೧೯೪೪ರಲ್ಲಿ 'ಶ್ರೀಭಗೀರಥ ಪೀಠ'ಕ್ಕೆ ಮೈಸೂರು ಸರ್ಕಾರವು ರಾಜ ಮನ್ನಣೆ ನೀಡಿ ಆದೇಶ ಹೊರಡಿಸಿದೆ. ಈಗಿನ ಗುರುಗಳು ಸಹ ರಾಷ್ಟ್ರ ವ್ಯಾಪಿ ಸಂಚರಿಸಿ,

ಜನಾಂಗದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರಲ್ಲದೆ, ಅನೇಕ ಶಾಲಾ ಕಾಲೇಜುಗಳನ್ನು ತೆರೆದು ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿರುತ್ತಾರೆ. ಭಗೀರಥ ಸಾಂಸ್ಕೃತಿಕ ಭವನ, ಭುವನೇಶ್ವರಿ ಪ್ರತಿಮೆ, ದೇವಾಲಯಗಳು, ಕಲ್ಲಿನ ರಥ, ವಸ್ತು ಸಂಗ್ರಹಾಲಯ, ಆರ್ಯುವೇದಿಕ್ ಕಾಲೇಜು, ಔಷಧಿ ಸಸ್ಯವನ ಮುಂತಾದ ಅಭಿವೃದ್ಧಿ ಕಾರ್ಯಗಳು ಮಠದ ಆವರಣದಲ್ಲಿ ಆಗಲಿವೆ. ನಾಡಿನ ಪ್ರಾಚೀನ ಹಾಗೂ ಆಧುನಿಕ ಹಿರಿಯ ಕವಿವರೇಣ್ಯರು/ಸಾಹಿತಿಗಳ ಸೀಮೆಂಟ್ ಕಲಾಕೃತಿಗಳು ಶ್ರೀಮಠದ ಆವರಣದಲ್ಲಿ ಮೈದಾಳಿದ್ದು, ಇದೊಂದು ಪ್ರವಾಸಿ ತಾಣವಾಗಿ ರೂಪುಗೊಂಡಿದೆ.

### ಕುರುಬರ ಗುರುಮಠ

ಹೊಸದುರ್ಗದಲ್ಲಿರುವ 'ಶ್ರೀಮದ್ ಜಗದ್ಗುರು ರೇವಣ ಸಿದ್ದೇಶ್ವರ ಸಿಂಹಾಸನ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠ'ದ ಶಾಖಾಮಠವು ದಿನಾಂಕ ೧೫ನೇ ಜೂನ್ ೨೦೦೨ರಿಂದ, ಬೆಂಗಳೂರು ವಿಭಾಗದ ಕುರುಬರ ಗುರುಪೀಠವಾಗಿ ಪ್ರಾರಂಭವಾಗಿದ್ದು, ಶ್ರೀಈಶ್ವರಾನಂದಪುರಿ ಸ್ವಾಮಿಗಳು ಪೀಠಾಧ್ಯಕ್ಷರಾಗಿದ್ದಾರೆ. ಕಾರೇಹಳ್ಳಿ, ಶ್ರೀರಾಂಪುರ, ದೊಡ್ಡತೇಕಲವಟ್ಟಿ ಮತ್ತು ಬಾಗೂರು ಗ್ರಾಮಗಳಲ್ಲಿ ರೇವಣ ಸಿದ್ದೇಶ್ವರ ಮಠಗಳು ಶತಮಾನಗಳಿಂದಲೂ ಇವೆ. ಇವುಗಳು 'ಬೀರಲಿಂಗೇಶ್ವರನ ಗದ್ದುಗೆ'ಗಳೆಂದೂ ಹೇಳುವರು. ಶ್ರೀರಾಂಪುರದ ಮಠವು 'ನಾಲ್ಕುನಿಟ್ಟು-ನಲವತ್ತೆಂಟು ಹರಿವಾಣದ ಮಠ'ವೆಂದು ಪ್ರಖ್ಯಾತವಾಗಿದೆ. ಕಡ್ಲೆ ಕಂಸಾಗರದ ಗದ್ದುಗೆಯು ಮೂಲ 'ಕಂಸಾರ ಲಿಂಗನ ಗದ್ದುಗೆ' ಎಂದು ಹೆಸರಾಗಿದೆ. ಮತ್ತೋಡು ಬಳಿ ಸವಾರಿ ರೇವಣಪ್ಪನ ಮಠವಿದೆ. ಕಾರೇಹಳ್ಳಿಯಲ್ಲಿರುವ ಮಠವು ಮೂಲಗದ್ದುಗೆಯಾಗಿದ್ದು, ಚಿಕ್ಕಮಠ-ದೊಡ್ಡಮಠವೆಂಬ ಜೋಡಿಮಠಗಳನ್ನು ಹೊಂದಿದೆ. ಶ್ರೀರಾಂಪುರದಲ್ಲಿ ಉತ್ಸವಮೂರ್ತಿ ಇದೆ. ಕುರುಬ ಸಮಾಜವು ಮೂಲತಃ ಶೈವಪಂಥೀಯ ಸಮಾಜವಾಗಿದ್ದು, ಕುಲಗುರುವಾಗಿ ರೇವಣಸಿದ್ಧರು, ಕುಲದೇವರಾಗಿ ವೀರಭದ್ರನ ಅಂಶವಾದ ಬೀರಲಿಂಗೇಶ್ವರನನ್ನು ಆರಾಧಿಸುತ್ತಾರೆ. ವಿಭೂತಿ-ಭಂಡಾರವನ್ನು ಹಣೆಗೆ ಧರಿಸುತ್ತಾರೆ. ಮತ್ತೋಡು ಪಾಳೆಯಗಾರರು (ಕ್ರಿ.ಶ.೧೭ನೇ ಶತಮಾನ) ಪ್ರಸ್ತುತ ಕಾರೇಹಳ್ಳಿಯ ರೇವಣ ಸಿದ್ದೇಶ್ವರ ಮಠಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು(ಈ ಬಗ್ಗೆ ತಾಮ್ರ ಶಾಸನದಲ್ಲಿ ಉಲ್ಲೇಖವಿದೆ). ಕಡ್ಲೆಕಂಸಾಗರದ ರೇವಣಸಿದ್ದೇಶ್ವರ ಗುರು 'ಕಂತೆಸೇವೆ'ಯು ೧೯೯೨ರಲ್ಲಿ ನಡೆದಿತ್ತು. ಕುರುಬ ಮತಸ್ಥರ ಶುಭಕಾರ್ಯಗಳನ್ನು ಕುರುಬರ ಜಂಗಮಯ್ಯಗಳಾದ 'ಒಡಯರ್' ವಂಶದವರು ನಡೆಸಿಕೊಡುತ್ತಾರೆ. ಪ್ರಸ್ತುತದಲ್ಲಿ ಹೊಸದುರ್ಗದ ಕನಕ ಗುರುಪೀಠ ಶಾಖಾಮಠವು, ರಾಷ್ಟ್ರದಲ್ಲೇ ಅತ್ಯಂತ ಎತ್ತರವಾದ ಕನಕದಾಸ ಶಿಲಾ ವಿಗ್ರಹವನ್ನು ಸಮೀಪದ (ಕೆಲ್ಲೋಡು ಹತ್ತಿರ) ವೇದಾವತಿ ನದಿಯ ದಡದಲ್ಲಿ ಪ್ರತಿಷ್ಠಾಪಿಸುವ ಬೃಹತ್ ಯೋಜನೆಯನ್ನು

ಹಮ್ಮಿಕೊಂಡಿದೆ. ವಿಗ್ರಹದ ಎತ್ತರ ೩೪ ಅಡಿ, ಗಾತ್ರ ೧೪ ಅಡಿ ಹಾಗೂ ವ್ಯಾಸ ೮ ಅಡಿಯ ಏಕಶಿಲಾ ವಿಗ್ರಹ. ಅಲ್ಲಿನ ೨೦ ಎಕರೆ ವಿಶಾಲ ಪ್ರದೇಶದಲ್ಲಿ ರೇವಣಸಿದ್ಧೇಶ್ವರ, ಬೀರಲಿಂಗೇಶ್ವರ, ಮೈಲಾರಲಿಂಗ, ಚಾಮುಂಡೇಶ್ವರಿ, ಲಕ್ಷ್ಮೀದೇವಸ್ಥಾನ, ಕನಕವಿಗ್ರಹ, ಕಲ್ಯಾಣ ಮಂದಿರ, ಸಭಾ ಭವನ, ದಾಸೋಹ ಭವನ, ಶಿಕ್ಷಣ ಸಂಸ್ಥೆ, ಉದ್ಯಾನವನ, ಶಾಲಾ ಕಾಲೇಜು, ವಿದ್ಯಾರ್ಥಿ ನಿಲಯ ಹಾಗೂ ಶಾಖಾಮಠ ಸ್ಥಾಪನೆಗೊಳ್ಳಲಿವೆ. ೮ ಕೋಟಿ ರೂ.ವೆಚ್ಚದ ಅಂದಾಜಿನಲ್ಲಿ ಇಲ್ಲಿ 'ಕನಕನಗರ' ಮೈದಾಳಲಿದೆ. ಶ್ರೀ ಶ್ರೀ ಈಶ್ವರಾನಂದಪುರಿ ಸ್ವಾಮಿಯವರು ಮಠದ ಪೀಠಾಧ್ಯಕ್ಷರಾಗಿದ್ದಾರೆ.

### ಇತರೆ ಮಠಗಳು

ವಿಶ್ವಕರ್ಮ ಜನಾಂಗದ ಮಠ ಬುರುಡೇ ಕಟ್ಟೆಯಲ್ಲಿದೆ. ಪರಿಶಿಷ್ಟ ಜನಾಂಗವಾದ ಆದಿ ಕರ್ನಾಟಕದವರ 'ಆದಿ ಜಾಂಭವ ಮಹಾ ಸಂಸ್ಥಾನ ಶಾಖಾಮಠ' ಕಂಚೀಪುರದಲ್ಲಿದೆ. ಹೊಸದುರ್ಗದಲ್ಲಿ ಶ್ರೀಕಾಂತ ಗುರೂಜಿಯವರ 'ಸದ್ಗುರು ಆಶ್ರಮ' ಇದೆ. ಶ್ರೀರಾಂಪುರದಲ್ಲಿ 'ಅವಧೂತ ಪರಪ್ಪಸ್ವಾಮಿ ಮಠ' (ಮೂಲಗದ್ದುಗೆ) ಬಾಗೂರಿನಲ್ಲಿ ಶರಣಮ್ಮನ ಗದ್ದುಗೆ ಹೀಗೆ ಇನ್ನೂ ಅನೇಕ ಮಠ–ಗದ್ದುಗೆಗಳು ತಾಲ್ಲೂಕಿನಾದ್ಯಂತ ಇವೆ. ಹಿಂದಿನ ಕಾಲದಲ್ಲಿ ಬಾಗೂರಿನಲ್ಲಿ ಮಡಿವಾಳರ ಮಠವೂ, ಮತ್ತೋಡಿನಲ್ಲಿ ಸುಣ್ಣದಕೂಳೆ ಮಠವು ಇದ್ದುವೆನ್ನಲಾಗಿದೆ.

### ಜೈನ

ಹೊಸದುರ್ಗ ತಾಲ್ಲೂಕಿನಲ್ಲಿ ಇಂದಿಗೂ ೩೦೦ ಜನ ಜೈನರಿದ್ದಾರೆ. ಹೊಸದುರ್ಗ ಪಟ್ಟಣ ಮತ್ತಿತರ ಗ್ರಾಮಗಳಲ್ಲಿ ಇವರು ನೆಲೆಸಿದ್ದಾರೆ. ಇದೇ ತಾಲ್ಲೂಕಿನ ದುಗ್ಗಾವರ ದಲ್ಲಿ ಇತ್ತೀಚೆಗೆ ಬಸದಿಯೊಂದು ನಿರ್ಮಿಸಲ್ಪಟ್ಟಿದೆ. ಇಲ್ಲಿನ ಜೈನಮತೀಯರು ದೀಪಾವಳಿ ಯನ್ನು 'ಮಹಾವೀರ ನಿರ್ವಾಣೋತ್ಸವ'ವನ್ನಾಗಿ ಆಚರಿಸುತ್ತಾರೆ.

### ಮುಸಲ್ಮಾನ

ಇಸ್ಲಾಂ ಧರ್ಮೀಯರಲ್ಲಿ ೧.ಶೇಖ್ (ಮಹ್ಮದ್) ಸೈಯದ್, ೨.ಪಠಾಣ್ (ಖಾನ್) ಮತ್ತು ೩.ಸುನ್ನಿ ಎಂದು ಮೂರು ಪಂಗಡಗಳಿದ್ದು, ಹೊಸದುರ್ಗ ತಾಲ್ಲೂಕಿನಲ್ಲಿ ಸುನ್ನಿ ಪಂಗಡದವರಿದ್ದಾರೆ. ಇವರು ರಂಜಾನ್, ಬಕ್ರೀದ್, ಮೊಹರಂ, ಗ್ಯಾರ್ವಿ, ಶಾಬಾನ್ ಹಬ್ಬಗಳನ್ನು ಆಚರಿಸುತ್ತಾರೆ. ಇಸ್ಲಾಂ ಧರ್ಮದ ಯಾವುದೇ ಪಂಗಡದವರು ಮೃತಪಟ್ಟರೂ ಸಹ ಶವ ಹೊತ್ತೊಯ್ಯಲು ಹೆಗಲು ಕೊಡುತ್ತಾರೆ. ನಂತರ ಜೊತೆಯಲ್ಲಿ ಗೋರಿ (ಖಬರಸ್ಥಾನ)ವರೆಗೆ ಹೋಗುತ್ತಾರೆ. ಇವರಲ್ಲಿ ಮೃತಪಟ್ಟವರನ್ನು ಹೂಳುವ

ಪದ್ಧತಿ ಇದೆ. ಇವರ ಮಸೀದಿಗಳಲ್ಲಿ ಮೂರು ವಿಧಗಳಿವೆ. ಸುನ್ನಿಜಮಾತ್, ಬಲೇರ್ ಜಮಾತ್ ಹಾಗೂ ಅಹಲೇ ಹದೀಸ್. ಇವರ ಪೂರ್ವಜರು ಸೂಫೀ ಸಂತರ ಅನುಯಾಯಿಗಳಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಈ ತಾಲ್ಲೂಕಿಗೆ (೩೦೦ ವರ್ಷಗಳ ಹಿಂದೆ) ಮೊದಲಿಗೆ ಗವ್ಹಾಡಿಯವರು, ಪಠಾಣ್‌ರು (ಹರಪನಹಳ್ಳಿ) ಮತ್ತು ಸೈಯದ್ ಖಾನ್ ಬಂದಿರುತ್ತಾರೆ. ವ್ಯಾಪಾರ, ಪಾತ್ರೆ ಕಲಾಯಿ, ಎತ್ತುಗಳಿಗೆ ಅಳ್ಳೆ (ಲಾಳ) ಕಟ್ಟುವುದು ಇತ್ಯಾದಿ ಕಸುಬು ಮಾಡುತ್ತಿದ್ದರು. ಈಗ ವ್ಯಾಪಾರ, ಕರಕುಶಲ, ವ್ಯವಸಾಯ, ಮೆಕ್ಯಾನಿಕ್ ಇತ್ಯಾದಿ ಕಸುಬುಗಳಲ್ಲಿ ತೊಡಗಿದ್ದಾರೆ. ಇವರ ಧಾರ್ಮಿಕ ಭಾಷೆ ಅರೆಬಿಕ್, ಮಾತೃಭಾಷೆ ಉರ್ದು ಹಾಗೂ ವ್ಯಾವಹಾರಿಕ ಭಾಷೆ ಕನ್ನಡ. ಇವರಲ್ಲಿ ಒಳಪಂಗಡಗಳು ಶೇಖ್, ಸೈಯದ್, ಪಠಾಣ್, ಖಾನ್, ಲದಾಫ್ ಎಂದು ಐದು ಇವೆ. ಇವರು ಧಾರ್ಮಿಕ ಯಾತ್ರೆಯನ್ನು ಮಕ್ಕಾ-ಮದೀನ (ಸೌದಿ ಅರೇಬಿಯ, ಅಜ್ಮೀರ್), ಬಾಬಾಬುಡನ್‌ಗಿರಿ ಹಾಗೂ ಕಲಬುರಗಿ ಬಂದೇ ನವಾಜ್ ದರ್ಗಾಕ್ಕೆ ಧಾರ್ಮಿಕ ಯಾತ್ರೆ ಹೋಗಿ ಬರುತ್ತಾರೆ. ಇವರ ಗುರುಪೀಠಗಳು: ಖಾದ್ರಿಯಾ, ಜಿಸ್ತಿಮಾ, ನಕ್ಷಬಂಧಿ ಹಾಗೂ ಶಯದ್‌ವರ್ದಿ. ವಿವಾಹ (ನಿಖಾ) ಸಂಬಂಧಗಳನ್ನು ಎಲ್ಲಾ ಒಳಪಂಗಡಗಳೊಂದಿಗೆ ಬೆಳೆಸುತ್ತಾರೆ. ಸಹೋದರ, ಸಹೋದರಿಯ ಮಕ್ಕಳಿಗೆ ವಿವಾಹ ಮಾಡುವುದಿಲ್ಲ. ನಿಖಾಗಳನ್ನು ಇವರ ಮಸೀದಿಗಳ ಖಾಜಿ ಗುರುಗಳು ಪೌರೋಹಿತ್ಯ ವಹಿಸುವ ಮೂಲಕ ನಡೆಸಿಕೊಡುವರು. ಇವರಲ್ಲಿ ವರದಕ್ಷಿಣೆ ಸಾಮಾನ್ಯ ಮಟ್ಟದಲ್ಲಿದೆ. ನವಜಾತ ಶಿಶುವಿಗೆ ಜೇನುತುಪ್ಪ ನೆಕ್ಕಿಸುತ್ತಾರೆ. ಮಗುವಿಗೆ ಹುಟ್ಟಿದ ನಲವತ್ತು ದಿನಗಳಲ್ಲಿ ನಾಮಕರಣ ಮಾಡುತ್ತಾರೆ. ಗಂಡು ಮಗುವಿಗೆ, ೫ನೇ ವರ್ಷಕ್ಕೆ 'ಮುಂಜಿ' ಮಾಡಿಸುತ್ತಾರೆ. ರಂಜಾನ್ ಹಬ್ಬದಲ್ಲಿ ಒಂದು ತಿಂಗಳು ಒಂದ್ಹೊತ್ತು ಉಪವಾಸ ಆಚರಿಸುವರು (ವ್ರತ). ಮೊಹರಂ ಹಬ್ಬದಲ್ಲಿ ಕೆಂಡ ತುಳಿಯುವ ಸಂಪ್ರದಾಯವಿದೆ. ಸೂಫೀ ಸಂತರ ಸ್ಮರಣಾರ್ಥ ಹಬ್ಬಗಳನ್ನು ಆಯಾ ದರ್ಗಾಗಳ ನಿಯಮದ ಪ್ರಕಾರ ಆಚರಿಸುತ್ತಾರೆ. ಝೂಂಡೇವ್ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಇವರು ಪ್ರತಿದಿನ ೫ ಬಾರಿ ನಮಾಜು ಮಾಡುತ್ತಾರೆ. ಹೆಣ್ಣುಮಕ್ಕಳು ಮನೆಯಲ್ಲಿ ನಮಾಜು ಮಾಡುತ್ತಾರೆ. ಶುಕ್ರವಾರ ಇವರಿಗೆ ವಿಶೇಷ ಪ್ರಾರ್ಥನಾ ದಿನ. ಹೊಸದುರ್ಗದಲ್ಲಿ 'ಅಹಲೇಸುನ್ನತ್ ಜಮಾತ್' ಮೂಲ ಜಾಮಿಯಾ ಮಸೀದಿ ಇದೆ. ಇತರ ನಾಲ್ಕು ಮಸೀದಿಗಳು ಹಾಗೂ 'ಅಬೂಷಾ ಖಾದ್ರಿ ರಹಮತ್ ಉಲ್ಲಾ ಅಲೆ' ದರ್ಗಾ ಇಲ್ಲಿದೆ.

## ಕ್ರೈಸ್ತ

ಕ್ರಿ.ಶ.೨೦ನೇಯ ಶತಮಾನದಲ್ಲಿ, ತಾಲ್ಲೂಕಿಗೆ ಕ್ರೈಸ್ತರ ಆಗಮನವಾಯಿತು. ಸ್ವಾತಂತ್ರ್ಯಾನಂತರದಲ್ಲಿ ಇವರು ತಾಲ್ಲೂಕಿನಲ್ಲಿ ನೆಲೆಸಿದರು. ಪ್ರಾಟೆಸ್ಟೆಂಟರು ಮತ್ತು ರೋಮನ್ ಕ್ಯಾಥೋಲಿಕರು ಈ ಎರಡೂ ಪಂಗಡಗಳ ಕ್ರೈಸ್ತರೂ ಇಲ್ಲಿದ್ದಾರೆ.

ಪ್ರಾಟೆಸ್ಟೆಂಟರು ಜೀಸಸ್‌ಗೆ ಪ್ರಾಶಸ್ತ್ಯ ನೀಡುವರು. ರೋಮನ್ ಕ್ಯಾಥೋಲಿಕರು ಮೂರ್ತಿ ಪೂಜಕರಾಗಿದ್ದಾರಲ್ಲದೆ ಇವರು ಮೇರಿಗೆ ಪ್ರಾಶಸ್ತ್ಯ ನೀಡುವರು. 'ಎವೆರಿ ಹೋಮ್ ಕ್ರೂಸೇಡ್' (ಇ.ಎಚ್.ಸಿ.) ಎಂಬುದು ಪ್ರಾಟೆಸ್ಟೆಂಟ್‌ರ ತತ್ತ್ವ. ಪ್ರಾಟೆಸ್ಟೆಂಟರು ಮೈಸೂರು ಕಡೆಯಿಂದ ಹೊಸದುರ್ಗ ದತ್ತ ವಲಸೆ ಬಂದವರಾಗಿದ್ದಾರೆ. ರೋಮನ್ ಕ್ಯಾಥೋಲಿಕ್‌ರು 'ಮಿಷನ್'ಗಳ ಮೂಲಕ ಬಂದಿದ್ದಾರೆ. ಈ ಎರಡೂ ಪಂಗಡದವರೂ ಮಾಂಸಾಹಾರಿಗಳಾಗಿದ್ದಾರೆ. ಆದರೆ ಈ ಎರಡೂ ಪಂಗಡದವರಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳಿರುವುದಿಲ್ಲ. ಹಿಂಧೂಧರ್ಮದ ಬೇರೆ ಬೇರೆ ಜಾತಿಗಳ ಅನೇಕರು ರೋಮನ್ ಕ್ಯಾಥೋಲಿಕ್ ಕ್ರೈಸ್ತರಾಗಿ ಮತಾಂತರಗೊಂಡಿರುವುದು ಇಲ್ಲಿ ಕಂಡುಬರುತ್ತಿದೆ.

## ತಾಲ್ಲೂಕಿನ ಪ್ರಮುಖ ಜಾತಿ, ಬುಡಕಟ್ಟುಗಳು

ಕರ್ನಾಟಕದ ಎಲ್ಲಾ ತಾಲ್ಲೂಕುಗಳಲ್ಲಿ ಇರುವಂತೆಯೇ ತಾಲ್ಲೂಕಿನಲ್ಲಿಯೂ ಅನೇಕ ಜಾತಿಗಳನ್ನು ಹಾಗೂ ಉಪಜಾತಿಗಳನ್ನು ಕಾಣಬಹುದಾಗಿದೆ. ತಾಲ್ಲೂಕಿನಲ್ಲಿರುವ ಕೆಲವು ಪ್ರಮುಖ ಜನಸಮುದಾಯಗಳ ಜಾತಿ, ಉಪಜಾತಿಗಳ ಪರಿಚಯವನ್ನು ಅಕಾರಾದಿಯಾಗಿ ಈ ಅಧ್ಯಾಯದಲ್ಲಿ ನೀಡಲಾಗಿದೆ.

### ಈಡಿಗ

ಸುಮಾರು ೧೨೦ ವರ್ಷಗಳ ಹಿಂದೆ ಈಡಿಗರು ಆಂಧ್ರದಿಂದ ಇಲ್ಲಿಗೆ ವಲಸೆ ಬಂದು ನೆಲೆಸಿದ್ದಾರೆ. ಹೊಸದುರ್ಗ ಮತ್ತು ಕಗ್ಗಲಕಟ್ಟೆ ಗ್ರಾಮದಲ್ಲಿ ಮಾತ್ರ ಇದ್ದಾರೆ. ಇವರ ಮೂಲವೃತ್ತಿ ಸೇಂದಿ ಉದ್ಯಮವಾಗಿದ್ದಿತು. ಈಗಿನ ವೃತ್ತಿಯು ವ್ಯಾಪಾರ ಮತ್ತು ನೌಕರಿ ಆಗಿದೆ. ಇವರ ಮಾತೃ ಭಾಷೆ ಕನ್ನಡವಾಗಿದೆ. ಇವರಲ್ಲಿ ಸಾಸ್ವೇರು ಮತ್ತು ಬಡ್ಡೇರು ಎಂದು ಎರಡು ಬೆಡಗುಗಳಿವೆ. ಹೊಳಲ್ಕೆರೆ ತಾಲ್ಲೂಕಿನ ಕೊಳಾಳ್‌ತೇಕಲವಟ್ಟಿ ಗ್ರಾಮದ ನರಸಿಂಹಸ್ವಾಮಿ ಇವರ ಮನೆದೇವರು. ಕುಲದೇವರು ಓಬಳೇಶ್ವರಸ್ವಾಮಿ (ಕುಂಕಾನಾಡು ಗ್ರಾಮ, ಕಡೂರು ತಾಲ್ಲೂಕು) ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಸುಕ್ಷೇತ್ರದಲ್ಲಿ ಇವರ ಗುರುಪೀಠವಾದ 'ಆರ್ಯ ಈಡಿಗ ಮಹಾಸಂಸ್ಥಾನ'ವಿದ್ದು, ಶ್ರೀರೇಣುಕಾನಂದಸ್ವಾಮಿಗಳು ಪೀಠಾಧ್ಯಕ್ಷರಾಗಿದ್ದಾರೆ. (೨೦೧೦ರಿಂದ ಈ ಮಠ ಪ್ರಾರಂಭವಾಗಿದೆ). ಮಾಂಸಾಹಾರಿಗಳಾಗಿರುವ ಇವರು ಬೇರೆ ಬೆಡಗಿನವರೊಂದಿಗೆ ವೈವಾಹಿಕ ಸಂಬಂಧ ಮಾಡುತ್ತಾರೆ. ವಧುವಿನ ಮನೆಯಲ್ಲಿ ಮದುವೆ ಕಾರ್ಯ ಇಟ್ಟುಕೊಳ್ಳುವರು. ವರದಕ್ಷಿಣೆ ಪದ್ಧತಿ ಇವರಲ್ಲಿ ಇಲ್ಲ. ಮೃತರನ್ನು ಹೂಳುವ ಪದ್ಧತಿ ಇವರಲ್ಲಿದೆ.

**ಉಪ್ಪಾರ**

ಉಪ್ಪಾರ ಜನಾಂಗಕ್ಕೆ ತನ್ನದೇ ಆಗಿರುವ ಪುರಾಣ, ಇತಿಹಾಸ ಹಾಗೂ ಜಾನಪದ ನೆಲೆಗಟ್ಟುಗಳಿವೆ. ಉಪ್ಪು ತಯಾರು ಮಾಡಲು ಶಿವನೇ ಇವರನ್ನು ಸೃಷ್ಟಿಸಿ ಭೂಮಿಗೆ ಕಳುಹಿಸಿದವನೆಂಬ ದಂತಕಥೆ ಇದೆ. ಉಪ್ಪಾರರ ಮೂಲಪುರುಷ ಸಗರ ಎನ್ನಲಾಗಿದೆ. ಸಗರ ಮತ್ತು ಈತನ ವಂಶಸ್ಥನಾದ ಭಗೀರಥನನ್ನು ಉಪ್ಪಾರರು ಪೂಜಿಸುವರು. ಸಗರನ ಅರವತ್ತು ಸಾವಿರ ಮಕ್ಕಳನ್ನು ಸಕಾರಣದಿಂದ ಕಪಿಲ ಋಷಿ ಸುಟ್ಟುಬೂದಿ ಮಾಡಿದನೆಂದೂ, ಭಗೀರಥನ ಬೇಡಿಕೆಯಂತೆ ಮುನಿಯನ್ನು ಒಲಿಸಿ ದೇವ ಗಂಗೆಯನ್ನು ಆ ಬೂದಿಯ ಮೇಲೆ ಹರಿಯುವಂತೆ ಮಾಡಿದ್ದರಿಂದ ಭಸ್ಮವು ನೀರಿನಲ್ಲಿ ಸೇರಿ ಸಾಗರವೆಲ್ಲ ಉಪ್ಪಾಯಿತೆಂದೂ ಪುರಾಣಕಥೆ ಇದೆ. ಉಪ್ಪಾರರಲ್ಲಿ ಶೈವಾಚರಣೆಯವರು ಹಾಗೂ ವೈಷ್ಣವಾಚರಣೆಯವರು ಇದ್ದಾರೆ. ಶೈವ ಉಪ್ಪಾರರು ಉತ್ತರ ಕರ್ನಾಟಕದಲ್ಲೂ, ವೈಷ್ಣವ ಉಪ್ಪಾರರು ದಕ್ಷಿಣ ಕರ್ನಾಟಕದಲ್ಲೂ ಇದ್ದಾರೆ. ವೈಷ್ಣವರಲ್ಲಿ ನಾಮದವರು ಹಾಗೂ ಜನಿವಾರದವರಿದ್ದು, ಚನ್ನಕೇಶವ, ಕರಿಯಮ್ಮ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ.

ಕ್ರಿ.ಶ.೧೪೫೪ರ ಬೂದಿಹಾಳು ತಾಮ್ರಶಾಸನದಲ್ಲಿ ಕೃಷ್ಣರಾಯನಸಮುದ್ರ (ಲಖುಮಾಪುರ) ಅಗ್ರಹಾರದ ಸೀಮಾವಿವರದಲ್ಲಿ 'ಈಶಾನ್ಯಕ್ಕೆ..... ರೆಯಹಳ್ಳಿಯ ಉಪ್ಪಿನ ಮೋಳೆಯ ನಟ್ಟಕಲ್ಲು' ಎಂದಿದೆ. ಇದರಿಂದಾಗಿ ಇಲ್ಲೆಲ್ಲ ಉಪ್ಪಿನ ಮಾಳೆಗಳಿದ್ದ ಸಂಗತಿ ಖಚಿತವಾಗುತ್ತದೆ. ವಿಜಯನಗರ ಕಾಲದಲ್ಲಿ ಉಪ್ಪಾರರು ಕಲ್ಲುಕೆತ್ತನೆ ಕೆಲಸದಲ್ಲಿ ನಿಪುಣರಾಗಿದ್ದರು. ಕ್ರಿ.ಶ.೧೫ನೇ ಶತಮಾನದ ಚಿತ್ರದುರ್ಗದ ಕೋಟೆ, ಕಲ್ಲುಕಂಬ, ಉಯ್ಯಾಲೆಕಂಬ, ವಿಗ್ರಹಗಳು, ದೇವಾಲಯಗಳು ಉಪ್ಪಾರರಿಂದ ಆಗಿವೆ ಎನ್ನಲಾಗಿದೆ. ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ, ಕ್ರಿ.ಶ.೧೬ನೇ ಶತಮಾನದಲ್ಲಿ ೫೦೦ ಜನ ಉಪ್ಪಾರರನ್ನು ಮತ್ತು ೫೦೦ ಕೋಣಗಳನ್ನು ಸಕಾರಣದಿಂದಾಗಿ ದುರ್ಗದ ಸೆರೆಮನೆಯಲ್ಲಿಡಲಾಗಿದ್ದಿತು. ಆಗ ದುರ್ಗದವರಲ್ಲಿ ಕೆಲಸಕ್ಕಿದ್ದ ಉಪ್ಪಾರರ ತಿಮ್ಮಣ್ಣನು, ಪ್ರಾಮಾಣಿಕನಾಗಿದ್ದರಿಂದ, ಅವನ ಕೋರಿಕೆಯಂತೆ ೫೦೦ ಜನ ಉಪ್ಪಾರರ ಹಾಗೂ ೫೦೦ ಕೋಣಗಳ ಬಿಡುಗಡೆ ಮಾಡಲಾಯಿತು. ಇದರಿಂದಾಗಿ ಅವನನ್ನು ಉಪ್ಪಾರ ಕುಲದ ಯಜಮಾನನ್ನಾಗಿ ಸಭೆಯಲ್ಲಿ ತೀರ್ಮಾನಿಸಲಾಯಿತು. ಪ್ರಸ್ತುತ ಸಭೆಯಲ್ಲಿ ಕೊಂಡಾಪುರದ ಉಪ್ಪಾರರ ಯಜಮಾನರೂ ಸಹ ಭಾಗವಹಿಸಿದ್ದರು. ಉಪ್ಪಾರ ತಿಮ್ಮಣ್ಣನಿಗೆ 'ಉಪ್ಪಾರ ಶಿಖಾಮಣಿ' ಎಂಬ ಬಿರುದು ನೀಡಲಾಯಿತು. ಕ್ರಿ.ಶ. ೧೫ನೇ ಶತಮಾನದಲ್ಲಿ ಆಳಿದ ಬೂದಿಹಾಳು ಸಿರುಮ ನಾಯಕನನ್ನು ಕುರಿತ ಸಾಂಗತ್ಯ ಕೃತಿಯಲ್ಲೂ ಉಪ್ಪಿನ ಮಾಳೆಯ ಪ್ರಸ್ತಾಪವಿದೆ. ಕ್ರಿ.ಶ.೧೭-೧೮ನೇ ಶತಮಾನದಲ್ಲಿ ಆಳಿದ ಮತ್ತೋಡು ಪಾಳೆಯಗಾರರ ಕಾಲದಲ್ಲಿ ಸುತ್ತಲ ೫೨ ಗ್ರಾಮಗಳ ಉಪ್ಪಾರರು, ಉಪ್ಪಿನ ಮಾಳೆ ಒಂದಕ್ಕೆ ೧೨ ಸೇರು ಉಪ್ಪುಸುಂಕ ಸಲ್ಲಿಸಬೇಕಾಗಿದ್ದಿತು.

ಗಂಗರ ಕೊನೆಯ ಅರಸ ಶ್ರೀಪುರುಷನ ಸಾಮಂತನಾದ ದಿಂಡಿಕನು ನೀರಗುಂದ ನಾಡನ್ನು ಆಳದ ತರುವಾಯ, ದಿಂಡಿಕನ ಮಗ ಪರಮಗುಳನು ಆಳಿದ್ದು, ಇವನ ಪಟ್ಟದ ರಾಣಿ ಕುಂದಾಚ್ಚಿಯು ಸಗರ ವಂಶದ ಮರುವರ್ಮನ ಮಗಳೆಂಬ ಬಗ್ಗೆ ಶಾಸನಾಧಾರವಿದೆ.

ತಾಲ್ಲೂಕಿನ ಅಕ್ಕಿತಿಮ್ಮಯ್ಯನ ಹಟ್ಟಿ, ಅಜ್ಜಿಕಂಸಾಗರ, ಅರೇಹಳ್ಳಿ, ಅರಲಹಳ್ಳಿ, ಐಲಾಪುರ, ಕರ್ಪೂರಕಟ್ಟೆ, ಕಬ್ಬಳ, ಕೃಷ್ಣಾಪುರ, ಕಡಿವಾಣಕಟ್ಟೆ, ಕೊಂಡಾಪುರ, ಕಾನುಬೇನಹಳ್ಳಿ, ಕುರುಬರಹಳ್ಳಿ, ಕೋಡಿಹಳ್ಳಿ, ಗರಗ, ಗರೀಂಬೀಳು, ತಂಡಗ, ತಾರೀಕೆರೆ, ದೇವಪುರ, ಮಲ್ಲೇನಹಳ್ಳಿ, ಮಲ್ಲಿಹಳ್ಳಿ, ಮಧುರೆ, ಮಂಟೇನಹಳ್ಳಿ, ಬ್ರಹ್ಮವಿದ್ಯಾ ನಗರ, ಯಾಲಕ್ಕಪ್ಪನಹಟ್ಟಿ, ಶ್ರೀರಂಗಪುರ, ಸೊಪ್ಪಿನ ಗುಡ್ಲು, ಸೋಮಸಂದ್ರ, ಸೋಮೇನಹಳ್ಳಿ, ಹಳೇಕುಂದೂರು, ಹೊಸಕುಂದೂರು ಹೀಗೆ ಒಟ್ಟು ೩೮ ಗ್ರಾಮಗಳಲ್ಲಿ ಶತಮಾನಗಳಿಂದ ಉಪ್ಪಾರರು ನೆಲೆಸಿದ್ದಾರೆ. ಇವರು ಭಗೀರಥ ಜಯಂತಿಯನ್ನು (ಮೇ-ಜೂನ್ ತಿಂಗಳು) ವಿಶೇಷವಾಗಿ ಆಚರಿಸುವರು. ತಾಲ್ಲೂಕಿನಲ್ಲಿರುವ ಅನೇಕ ಕರಿಯಮ್ಮ ದೇವರಗಳು, ಮತ್ತೋಡಿನ ಭಾಗೀಮರದಮ್ಮ, ಕಬ್ಬಳದ ಕತ್ತಿಕಲ್ಲಾಂಬ, ಅಂತರಘಟ್ಟಮ್ಮ ದೇವಿ, ಮೈಲಾರದೇವರು, ಗಂಗಮಾಳಮ್ಮ, ಮಸಿಯಮ್ಮದೇವಿ ಮುಂತಾದವುಗಳಿಗೆ ಉಪ್ಪಾರರೇ ಪೂಜಾರರಾಗಿದ್ದು, ಆ ದೇವರುಗಳ ಪೂಜೆ-ಉತ್ಸವ-ಜಾತ್ರೆ ಮಾಡುವರು. ಜೀವಿನಳ್ಳಮ್ಮ, ದುರ್ಗಮ್ಮ, ಮಾರಿಕಣಿವೆಮ್ಮ, ಚೌಡಮ್ಮ, ಭೈರವ, ಸೋಮೇಶ್ವರ, ರಂಗನಾಥ, ಪ್ಲೇಗಿನಮ್ಮ ಮುಂತಾದ ದೇವರು-ದೇವಿಯರನ್ನು ಆರಾಧಿಸುವರು. ಮಾರೀಕಣಿವೆಮ್ಮ, ಬೇವಿನಳ್ಳಮ್ಮ, ಮಳಲಿ ಕರಿಯಮ್ಮ, ಆದ್ರಿಕಟ್ಟೆ ಹುಲಿಗೆಮ್ಮ, ಕಲ್ಕೆರೆ ಕರಿಯಮ್ಮ, ನಂದೀಪುರದ ಅರೇಕಲ್ಲಮ್ಮ, ಅಂತರಘಟ್ಟಮ್ಮ ಇವರು ಏಳು ಜನ ಅಕ್ಕತಂಗಿಯರೆಂಬ ದಂತಕಥೆಯಿದೆ. ತಾಲ್ಲೂಕಿನ ಉಪ್ಪಾರರಲ್ಲಿ ೪೦ ಬೆಡಗುಗಳು ಕಂಡು ಬಂದಿವೆ. ಬೇರೆ ಬೇರೆ ಬೆಡಗಿನವರಲ್ಲಿ ವೈವಾಹಿಕ ಸಂಬಂಧ ಮಾಡುತ್ತಾರೆ. ಈ ಜನಾಂಗದ ೬ ಜನರು ಸ್ವಾತಂತ್ರ್ಯ ಹೋರಾಟಗಾರರಾಗಿ ದೇಶಪ್ರೇಮ ಮೆರೆದಿದ್ದಾರೆ. ಕರಡೆಮೇಳ, ಕೋಲಾಟ, ಭಜನೆ ಮುಂತಾದ ಜಾನಪದ ಕಲಾವಿದರಿದ್ದಾರೆ.

ಮಧುರೆ ಕಣಿವೆ ಪ್ರದೇಶದಲ್ಲಿ, ಉಪ್ಪಾರ ಜನಾಂಗದ ಭಗೀರಥ ಪೀಠದ ೧೨ನೇ ಜಗದ್ಗುರುಗಳಾದ ಶ್ರೀ ಲೇಪಾಕ್ಷಿ ಮಹಾಸ್ವಾಮಿಗಳು, ೧೯೬೬ರಲ್ಲಿ ಚಿತ್ರದುರ್ಗದ ಕರ್ಲಹಟ್ಟಿಯಿಂದ ಜಗದ್ಗುರು ಪೀಠವನ್ನು ಸ್ಥಳಾಂತರಿಸಿ ಸ್ಥಾಪಿಸಿ, ಆ ಸ್ಥಳಕ್ಕೆ 'ಬ್ರಹ್ಮವಿದ್ಯಾನಗರ'ವೆಂದು ಹೆಸರಿಟ್ಟರು. ಹಾಗೂ ಸರ್ಕಾರದಿಂದ ಕರಾರಿನ ಆಧಾರದಲ್ಲಿ ಪಡೆದ ೩೦೦ ಎಕರೆ ಭೂಮಿಯಲ್ಲಿ ೧೦೦ ಕುಟುಂಬಗಳ ಜನರಿಂದ ಕೂಡೊಕ್ಕಲು ವ್ಯವಸಾಯದ ಪದ್ಧತಿಯನ್ನು ಜಾರಿಗೊಳಿಸಿ ಅಭಿವೃದ್ಧಿ ಪಡಿಸಿದರು. ಈಗ ಅಲ್ಲಿ ೩೨,೦೦೦ ತೆಂಗಿನ ಮರಗಳಿವೆ. ಈಗ ೧೩ನೇ ಜಗದ್ಗುರು ಡಾ॥ಪುರಷೋತ್ತಮಾನಂದ ಪುರಿ ಮಹಾಸ್ವಾಮಿಗಳು (೨೦೦೦ ದಿಂದ) ಶಿಕ್ಷಣ ಸಂಸ್ಥೆ ಹಾಗೂ ಜನಾಂಗದ

ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಂ॥ ಲೇಪಾಕ್ಷಿ ಸ್ವಾಮಿಗಳು ಬರೆದಿದ್ದ 'ಶ್ರೀ ಉಪ್ಪಾರ ಚರಿತಾಮೃತ' ಗ್ರಂಥವನ್ನು ಮುದ್ರಣಗೊಳಿಸಿದ್ದಾರೆ. ೧೯೫೫ ರಲ್ಲಿ ಪ್ರಸ್ತುತ ಬೃಹನ್ಮಠಕ್ಕೆ ಆಗಿನ ಮೈಸೂರು ಸರ್ಕಾರವು ರಾಜಮರ್ಯಾದೆ ನೀಡುವ ಕುರಿತು ಹೊರಡಿಸಿರುವ ನಿರೂಪಣೆ ಪತ್ರವು ಹೀಗಿದೆ.

ನಂ:ಆರ್.ಡಿಐಎಸ್–ಎಂ–೧೧೪–೫೧–೫೫.

ಮೈಸೂರು ಸೀಮೆಯ ಮುಜರಾಯಿ ಕಮೀಷನ್ ರವರ ಆಫೀಸಿನಿಂದ ಮೈಸೂರು ಸೀಮೆಯ ಎಲ್ಲಾ ತಾಲ್ಲೂಕು ಅಮಲ್ದಾರರು ವಗೈರೆಯವರಿಗೆ ಬರೆಸಿ ಕಳುಹಿಸಿದ ನಿರೂಪ, ಚಿತ್ರದುರ್ಗ ತಾಲ್ಲೂಕು ಕರ್ಲಹಟ್ಟಿ ಗ್ರಾಮದಲ್ಲಿ ಶ್ರೀ ಚಿನ್ಮೂಲಾದ್ರಿ ಶಿಲಾಪುರಿ ಮಠದ ಶ್ರೀ ಶ್ರೀ ಶ್ರೀ ಲೇಪಾಕ್ಷಿ ಸ್ವಾಮಿಗಳವರು ಮೈಸೂರು ದೇಶದಲ್ಲಿ ಸಂಚಾರ ಮಾಡುವಾಗ ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ ಅವರನ್ನು ಮಾಮೂಲು ಪ್ರಕಾರ ಮರ್ಯಾದೆಯಿಂದ ಕಂಡು ಖೈದುವಾರ ಜಾಗದಲ್ಲಿ ಇಳಿಸಿ, ಇಳಿದ ಬಳಿಯಲ್ಲಿ ರಾತ್ರಿವೇಳೆ ಕಳ್ಳಕಾಕರ ಉಪದ್ರವವಾಗದಂತೆ ಖಬೂರುದಾರು ಮಾಡಿಸಿ ಲವಾಜಮಿ ಖರೀದಿಗೆ ಅವರಿಗೆ ಬೇಕಾದ ಸಾಮಾನುಗಳನ್ನು ಕೊಡಿಸಿಕೊಟ್ಟು ಆ ಬಗ್ಗೆ ಕ್ರಯದ ಹಣವನ್ನು ಮಾಲೀಕರಿಗೆ ಕೊಡಿಸಿಕೊಡುವುದು ಶ್ರೀಶ್ರೀ ಸ್ವಾಮಿಗಳವರ ಸಂಗಡ ಸರ್ಕಾರದಿಂದ ಮಂಜೂರಾಗಿ ಈ ಕೆಳಗೆ ನಮೂದಿಸಿರುವ ಬಿರುದು–ಬಾವಲಿಗಳು ಬರುತ್ತಾದುದರಿಂದ ನಿಮ್ಮ ನಿಮ್ಮ ಗಡಿಗಳ ಮಾರ್ಗಗಳಲ್ಲಿ ಆಟಕಾಯಿಸದೆ ಬಿಟ್ಟು ಬಿಡುವುದು.

**ರಾಜ ಚಿಹ್ನೆ**: ೧. ಪಂಚಕಳಶ, ೨. ಪಂಚಕಳಶದ ಶ್ವೇತಛತ್ರಿ, ೩. ಮಕರತೋರಣ, ೪. ಹಗಲು ದೀವಟಿಗೆ

**ವಿಶೇಷ ಚಿಹ್ನೆ**: ೧. ಸಿಂಹ ಲಲಾಟದ ಪಲ್ಲಕ್ಕಿ, ೨. ಚಾಮರ, ೩. ಭೂಚಕ್ರದ ಕೊಡೆ, ೪. ಚಂದ್ರವಾದ್ಯ, ೫. ಸೂರ್ಯವಾದ್ಯ, ೬. ನಿಶಾನಿ.

**ಸಾಧಾರಣ ಚಿಹ್ನೆ**: ೧. ನಗಾರಿ ಮತ್ತು ಡೋಲುಗಳು, ೨. ಕುದುರೆಗಳು, ೩. ಆನೆ.

The Rahadari is issued under the authority G.D.No.RS 5202/ 14- Muz, 86-54-4, dated 8th July, 1955. G.N.Nagaraja Rao, Muzarai Commissioner, Bangalore, 21th July 1955.

ಪ್ರಸ್ತುತ ಸರ್ಕಾರದ ನಿರೂಪದಿಂದ, ಹಿಂದಿನ ಕಾಲದಿಂದಲೂ ಉಪ್ಪಾರ ಜನಾಂಗದ ಮೇಲ್ಕಂಡ ಮಠವು ಹೆಚ್ಚು ಪ್ರಾಮುಖ್ಯತೆ ಹಾಗೂ ಗೌರವಕ್ಕೆ ಪಾತ್ರವಾಗಿದ್ದದನ್ನು ಹಾಗೂ ಆಗಿನ ಕಾಲದಲ್ಲಿಯೂ ಶ್ರೀಮಠದ ಜಗದ್ಗುರುವು ರಾಜ್ಯಾದ್ಯಂತ ಸಂಚರಿಸುತ್ತಿದ್ದರೆಂಬ ಚಿತ್ರವನ್ನು ಕಾಣಬಹುದು. ೧೯೭೨ರಲ್ಲಿ "ಕರ್ನಾಟಕ ರಾಜ್ಯ ಉಪ್ಪಾರರ ಸಂಘ" ಸ್ಥಾಪನೆಗೊಂಡಿತು. ೧೯೮೬ರಲ್ಲಿ 'ಭಗೀರಥ ಧಾರ್ಮಿಕ ಟ್ರಸ್ಟ್'

ನೋಂದಾಯಿಸಲ್ಪಟ್ಟಿತು. ೧೯೯೯ರಲ್ಲಿ ಕುಷ್ಟಗಿಯಲ್ಲಿ 'ರಾಜ್ಯ ಮಟ್ಟದ ಭಗೀರಥ ಜಯಂತಿ' ಆಚರಿಸಲಾಯಿತು. ಈಗ ತಾಲ್ಲೂಕಿನಲ್ಲಿ ಜನಾಂಗದ ಅನೇಕ ಸಂಘ-ಸಂಸ್ಥೆಗಳು, ಶಾಲಾ-ಕಾಲೇಜುಗಳಿವೆ.

**ಬೆಡಗುಗಳು** : ಮುಚ್ಚಳದರು, ಗೆರ್ಸೆರು, ಕೊಸರಿನರು, ರಾಯರು, ಗಂಗಳದರು, ಕಗ್ಗದರು, ಹೂಗಾರ್ರು, ಸಕ್ರೆರು, ಸುಂಕದರು, ಕಾಲ್ಯೇದವ್ರು, ಸೆಟ್ಟರು, ಗಂಗತ್ರಯರು, ಮಲ್ಲೇರು, ಮುತ್ತಿನರು, ಕ್ವಾಣನೋರು ಮುಂತಾದ ೪೦ ಬೆಡಗುಗಳಿವೆ. ಹಿಂದಿನ ಕಾಲದಲ್ಲಿ ಉಪ್ಪಾರರು ಇಲ್ಲಿನ ಉಪ್ಪಿನ ಮಾಳೆಗಳಲ್ಲಿ ಉಪ್ಪು ತಯಾರಿಸಿ ಮಾರಾಟ ಮಾಡುತ್ತಿದ್ದರು. ಇದರಿಂದಾಗಿ 'ಮೇಲು ಸಕ್ಕರೆಯವರು' ಎಂದು ಜನಾಂಗಕ್ಕೆ ಹೆಸರಿದೆ. ಹಿಂದೆ ತಾನು ಹೇಳಿದ್ದ ಅವಧಿಗೆ ಮಳೆ ಬಾರದುದಕ್ಕೆ ಜನರಿಗೆ ಕೊಟ್ಟ ಮಾತಿನಂತೆ ಶೂಲಕ್ಕೇರಿದ ಅರಲಹಳ್ಳಿಯ ಉಪ್ಪಲಿಕರ ಗೊರವಯ್ಯನ ಸಮಾಧಿಗೆ 'ಶೂಲದಗುಡ್ಡೆ' ಎಂಬ ಹೆಸರಿದ್ದು, ಇದಕ್ಕೆ ಪೂಜೆ ಸಲ್ಲಿಸುವರು. ಮತ್ತೋಡಿನ ಅಜ್ಜಿ ಕಂಸಾಗರದಲ್ಲಿ ಉಪ್ಪಾರ ಚಿಕ್ಕಣ್ಣನ ಗುಡಿ ಇದೆ. 'ಪಾತಲಿಂಗ/ಉಪ್ಪಾರ ಚಿಕ್ಕಣ್ಣಗೆ ಒಲುದಾನು' ಎಂಬ ಜಾನಪದ ತ್ರಿಪದಿಯಲ್ಲಿ ಉಲ್ಲೇಖಿಸಬಹುದು. ಮತ್ತೋಡು ಗ್ರಾಮದೇವತೆ ಭಾಗೀಮರದಮ್ಮ ದೇವಿಯನ್ನು ಸ್ಥಾಪಿಸಿದವರು ನಿಡುಗಲ್ಲು ವಂಶದ ಉಪ್ಪಾರರೆನ್ನಲಾಗಿದ್ದು, ಆ ವಂಶಸ್ಥರು ಮತ್ತೋಡು ಮತ್ತು ಅರೆಹಳ್ಳಿ ಗ್ರಾಮದಲ್ಲಿದ್ದಾರೆ. ಶ್ರೀಮಠದ ಆಶ್ರಯದಲ್ಲಿ ಭಗೀರಥ ಜಾನಪದ ಸಾಂಸ್ಕೃತಿಕ ಕೇಂದ್ರ ಎಂಬ ಸಂಸ್ಥೆಯು ೨೦೦೬ರಲ್ಲಿ ಪ್ರಾರಂಭವಾಗಿದೆ.

### ಕಮ್ಮಾರ

ಬ್ರಿಟೀಷರ ಕಾಲದಲ್ಲಿ ಹೊಸದುರ್ಗವು ಉತ್ತಮ ಕಬ್ಬಿಣ ಕೆಲಸಗಾರರಿಗೆ ಹೆಸರಾಗಿದ್ದಿತು. ಇಲ್ಲಿನ ಕಮ್ಮಾರರು ಕ್ರಿ.ಶ.೧೮೯೮ರ ಹೊತ್ತಿಗೆ ತಮ್ಮ ಮೂಲಸ್ಥಳವಾದ ಮಹಾರಾಷ್ಟ್ರದ ಹಳಗುಂಡಿ ಗ್ರಾಮದಿಂದ, ಇಲ್ಲಿನ ಹಾರನ ಕಣಿವೆಯ ಬಳಿ ಮಾರೀಕಣಿವೆಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ ಕಾರ್ಯ ಪ್ರಾರಂಭವಾದಾಗ, ರೈಲು ಮಾರ್ಗದಲ್ಲಿ ಹೊಸದುರ್ಗ ರೋಡ್‌ಗೆ ಬಂದು ಹೊಸದುರ್ಗದ ಮೂಲಕ ಹಾರನ ಕಣಿವೆಗೆ ಹೋಗಿ ಆ ಕೆಲಸಕ್ಕೆ ಸೇರಿಕೊಂಡರು. ೧೯೦೭ಕ್ಕೆ ಡ್ಯಾಂ ನಿರ್ಮಾಣ ಮುಗಿದ ಮೇಲೆ ಹೊಸದುರ್ಗ ಮತ್ತು ಇಲ್ಲಿನ ಕೆಲ್ಲೋಡು, ಕಲ್ಕೆರೆ, ಕಬ್ಬಳ, ಜಾನಕಲ್ಲು, ಶ್ರೀರಾಂಪುರ ಮುಂತಾದೆಡೆ ಬೈಲು ಕಮ್ಮಾರರಾಗಿ ಬಂದು ಸೇರಿದರು. ಮಹಾರಾಷ್ಟ್ರದಲ್ಲಿ ಆಗ ಬರಗಾಲವಿದ್ದುದರಿಂದ ನಮ್ಮ ಹಿರಿಯರು ಹೀಗೆ ವಲಸೆ ಬಂದುದಾಗಿ ಹೊಸದುರ್ಗದ ಕಮ್ಮಾರರು ಹೇಳುತ್ತಾರೆ. ತಮ್ಮ ಹಿರಿಯರ ಹೆಸರುಗಳು ಭೀಮಜ್ಜ ಲೋಹಾರ್, ಪಾಪಣ್ಣ ಲೋಹಾರ, ಶಂಕರಜ್ಜ ಲೋಹಾರ್ ಮುಂತಾಗಿ ಇದ್ದವೆಂದೂ ಹಾಗೂ ಬೆಳಗಾಂ ಕಡೆಯಿಂದ ಇತ್ತೀಚೆಗೆ ೫ ಮನೆಯವರು ಬಂದು ನೆಲೆಸಿದ್ದಾರೆಂದೂ ಅವರು ವಿವರಿಸುವರು. ಇವರದು ಮರಾಠಿ-ಹಿಂದಿ ಮಿಶ್ರಿತ ಭಾಷೆ

(ಲಿಪಿ ಇಲ್ಲ). ಇವರ ಹಿರಿಯರು ವಾಣೀವಿಲಾಸ ಡ್ಯಾಂ ನಿರ್ಮಾಣದಲ್ಲಿ ಕಟ್ಟಡ ಮತ್ತು ಕಬ್ಬಿಣ ಕೆಲಸ ಮಾಡಿದ್ದರಿಂದ, ಬೇರೆಲ್ಲರಿಗೂ ಕೊಟ್ಟಂತೆ ಇವರಿಗೂ ಅಲ್ಲಿ ತಲಾ (ಕುಟುಂಬಕ್ಕೆ) ೫ ಎಕರೆ ಜಮೀನನ್ನು ಮಹಾರಾಜರು ಕೊಟ್ಟಿದ್ದು, ಅನೇಕ ವರ್ಷ ಕಂದಾಯ ಕಟ್ಟದೆ ಇದ್ದುದರಿಂದಾಗಿ, ಜಮೀನು ಹರಾಜಾಗಿ ಹೋಯಿತೆಂದು ನೋವಿನಿಂದ ಹೇಳುತ್ತಾರೆ. ಇವರು ಛತ್ರಪತಿ ಶಿವಾಜಿ ಮರಾಠಿಗರ ವರ್ಗದವರು. ಎತ್ತಿನಗಾಡಿ, ರೈತರ ನೇಗಿಲು, ಹಾರೆ, ಗುದ್ದಲಿ ಮತ್ತಿತರ ಕೃಷಿ ಉಪಕರಣಗಳನ್ನು ಇವರು ತಯಾರಿಸುತ್ತಾರೆ. ಇತ್ತೀಚೆಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಅಲ್ಲದೇ ಕನ್ನಡ ಮಾಧ್ಯಮದಲ್ಲಿ ಓದಿಸಲು ಪ್ರಾಶಸ್ತ್ಯ ನೀಡಿದ್ದಾರೆ. ಶ್ರೀರಾಂಪುರದಲ್ಲಿರುವವರು ಬೈಲು ಕಮ್ಮಾರರು (ಊರಿಂದೂರಿಗೆ ಹೋಗುವವರು), ಕೆಲವರಿಗೆ ಮಾತ್ರ ಭೂಮಿ–ಮನೆ ಇದೆ. ಸರ್ಕಾರದಿಂದ ನೆರವು ಅಗತ್ಯವೆಂಬುದು ಅವರ ಒತ್ತಾಯ. ಇಲ್ಲಿರುವವರು 'ಬಾಳ್ವರೀಸ್' ಪಂಗಡದವರು ಇವರಲ್ಲಿ ಎಮ್ಮಿನರು, ಹೂವಿನರು ಮುಂತಾದ ಬೆಡಗುಗಳಿವೆ. ಇವರು ಸೌದತ್ತಿ ಯಲ್ಲಮ್ಮ ದೇವಿಗೆ ನಡೆದುಕೊಳ್ಳುವರು. ಇವರಲ್ಲಿ ವರದಕ್ಷಿಣೆ ಇಲ್ಲ. ಸರಳ ವಿವಾಹ ಮಾಡುತ್ತಾರೆ. ವಿಶೇಷ ಸಂಗತಿಯೆಂದರೆ ಮದುವೆ ಖರ್ಚನ್ನು ವರನ ಕಡೆಯವರೇ ವಹಿಸಿಕೊಂಡು ವರನ ಮನೆಯಲ್ಲೇ ಲಗ್ನಕಾರ್ಯ ನಡೆಸುತ್ತಾರೆ. ಅಲ್ಲದೇ ಈ ಜನಾಂಗದಲ್ಲಿ ಯಾರಾದರೂ ಸತ್ತರೇ ಶವ ದಹನಕ್ಕೆ ಗಂಧದ ಕಟ್ಟಿಗೆಯೊಂದಿಗೆ ಇತರ ಕಟ್ಟಿಗೆಯನ್ನು ಬಳಸುತ್ತಾರೆ. ಅಂದರೆ, ಗಂಧದ ಚಕ್ಕೆಯನ್ನು ಚಿತೆಯಲ್ಲಿರಿಸುವುದು ಕಡ್ಡಾಯ ಸಂಪ್ರದಾಯವಾಗಿದೆ.

ಕೆಲ್ಲೋಡು ಹತ್ತಿರ ಒಮ್ಮೆ 'ಜಿಲ್ಲಾ ಕಮ್ಮಾರರ ಸಮಾವೇಶ' ಹಾಗೂ ೨೦೧೦ರಲ್ಲಿ ಚಿತ್ರದುರ್ಗದಲ್ಲಿ ಮುರುಘಾ ಮಠದ ಶರಣರ ನೇತೃತ್ವದಲ್ಲಿ 'ರಾಜ್ಯಮಟ್ಟದ ಕಮ್ಮಾರರ ಸಮಾವೇಶ' ನಡೆದಿವೆ.

**ಕುರುಬ**

ಕುರುಬ ಸಮುದಾಯವು ಪ್ರಾಚೀನ ಪರಂಪರೆಯುಳ್ಳದ್ದಾಗಿದೆ. ಈ ಜನಾಂಗದವರಿಗೆ ತಮ್ಮದೇ ಆಗಿರುವ ಪುರಾಣ–ಪುಣ್ಯಕಥೆಗಳು, ಇತಿಹಾಸ, ಸಂಪ್ರದಾಯಗಳು ಇವೆ. ಇವರಲ್ಲಿ ಕುಲಗುರು ಶ್ರೀ ರೇವಣಸಿದ್ಧ, ಕುಲದೈವ ಶ್ರೀ ಬೀರಲಿಂಗೇಶ್ವರ, ಮುನಿದೇವ, ಮೈಲಾರಲಿಂಗ, ಛಲವಂತ ಮಾಳಿಂಗರಾಯ, ಪ್ರಾಚೀನ ಕವಿಗಳಲ್ಲಿ ಕನಕದಾಸ, ಕಾಳಿದಾಸ, ಸಿದ್ಧರಲ್ಲಿ ಅಮೋಘಸಿದ್ಧ, ಧರ್ಮದಲ್ಲಿ ಇಟಗಿ ಭೀಮಾಂಬಿಕೆ, ಶರಣರಲ್ಲಿ ಸಜ್ಜಲಗುಡ್ಡದ ಶರಣಮ್ಮ, ರಾಜರಲ್ಲಿ ಹಕ್ಕ–ಬುಕ್ಕರು, ಚಂದ್ರಗುಪ್ತಮೌರ್ಯ, ಸಾಮ್ರಾಟ ಅಶೋಕ, ಸಂಗೊಳ್ಳಿ ರಾಯಣ್ಣ, ಅವಧೂತರಲ್ಲಿ ಲಡ್ಡುಮುತ್ಯ, ಬಾಳ್ಳುಮಾಮಾ, ಕುರುಬ ಗೋಲ್ಲಾಳ ಮುಖ್ಯರು. ಕುರುಬರ ಗುರುಪೀಠ ಕಾಗಿನೆಲೆಯಲ್ಲಿದೆ. ಇವರಲ್ಲಿ ಹಂಡೆಕುರುಬ, ಹಾಲುಕುರುಬ ಮುಂತಾದ ಒಳ ಪ್ರಭೇಧಗಳಿವೆ. ಹಿಂದಿನ

ಕಾಲದಲ್ಲಿ ಕುರಿ ಸಾಕುವುದು, ಉಣ್ಣೆಯಿಂದ ಕಂಬಳಿ ನೇಯುವುದು ಇವರ ಮೂಲ ಕಸುಬಾಗಿದ್ದಿತು. ಇವರಲ್ಲಿ ಬ್ಯಾಲನಕೊಲ, ಗೌಡಕೊಲ, ಬೆಳ್ಳಿಕೊಲ, ಹಾರೆಗೊಲ, ಅಗ್ನಿಕೊಲ, ಧಾರೆಕೊಲ, ತೋಯಿನ ಕುರುಬರು, ಶಾಂತಕೊಲ ಹೀಗೆ ಎರಡು ನೂರಕ್ಕೂ ಹೆಚ್ಚು ಕೊಲ (ಗೋತ್ರ)ಗಳಿವೆ. ಪಿತೃಪ್ರಧಾನ ಕೊಲಗಳು ಆಚರಣೆಯಲ್ಲಿವೆ. ಅಲ್ಲದೆ ಒಟ್ಟು ೪೬೧ ಬೆಡಗುಗಳಿವೆ. ಬೇರೆ ಬೇರೆ ರಾಜ್ಯಗಳಲ್ಲಿ ಇವುಗಳ ಹೆಸರು ಹಾಗೂ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. 'ಕುರುಬರುಹುಟ್ಟು ಲಿಂಗದವರು' ಎಂಬ ನಂಬಿಕೆ ಇವರಲ್ಲಿದೆ. ತಮ್ಮನ್ನು 'ಹಾಲುಮತ' ದವರೆಂದು ಹೇಳುತ್ತಾರೆ. ರೇವಣಸಿದ್ದೇಶ್ವರ, ಬೀರದೇವರು, ಮೈಲಾರದೇವರು, ಮಲಿಯಮ್ಮದೇವಿ, ಓರುಗಲ್ಲಮ್ಮ ದೇವಿ ಮೊದಲಾದ ದೇವರುಗಳನ್ನು ಆರಾಧಿಸುತ್ತಾರೆ. ಕನಕಜಯಂತಿ ಆಚರಿಸುವರು. ಮತ್ತೋಡು ತಾಮ್ರ ಶಾಸನದಲ್ಲಿ ಇವರನ್ನು 'ಹಾಲುಮತ'ದವರು ಎಂದು ಉಲ್ಲೇಖಿಸಲಾಗಿದೆ. ಬಾಣಿಗೆರೆಶಾಸನ (ಕ್ರಿ.ಶ.೧೬೭೦)ದಲ್ಲಿ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಗೆ 'ಕುರಿದೆರೆ' ಯನ್ನು ದತ್ತಿ ನೀಡಿದ ಬಗ್ಗೆ ಹೇಳಲಾಗಿದೆ. ಅರಸೀಕೆರೆ ಹೋಬಳಿ ತಿರುಪತಿ ದೇವಸ್ಥಾನದ ಕ್ರಿ.ಶ.೨೦೪೪ರ ಶಾಸನದಲ್ಲಿ 'ಕುರುಬರಮಗ್ಗವೊಂದಕ್ಕೆ ೯' ಎಂದು ವಿಧಿಸಿರುವ ಸುಂಕವನ್ನು ಹೇಳಲಾಗಿದೆ. ಕ್ರಿ.ಶ.೧೬ನೇ ಶತಮಾನದಲ್ಲಿ ಬಾಗೂರನ್ನು ಆಳಿದ ಎರೆಕೃಷ್ಣಪ್ಪನಾಯಕನು ಬಾಗೂರಿನ ಕೆರೆಗಳನ್ನು ದುರಸ್ತಿ ಮಾಡಿಸಿದನಲ್ಲದೆ, ಬಿಳಿಚೋಡು ಗ್ರಾಮದ ಕುರುಬರಿಗೆ 'ಕುರಿತೆರೆ' ಮನ್ನಾ ಮಾಡಿದರು. ಕುರುಬರ ಶುಭಕಾರ್ಯ ನಡೆಸಲು ಹಾಗೂ ಮೈಲಿಗೆ ನಿವಾರಿಸಲು ಇವರಲ್ಲಿ 'ಒಡೆಯರ್' ಪಂಗಡದ ಗುರುಗಳು (ಪುರೋಹಿತ) ಇರುತ್ತಾರೆ.

ಕೆಲವು ಹಳ್ಳಿಗಳಲ್ಲಿ ಒಂದು ರೇವಣ ಸಿದ್ದೇಶ್ವರ ಸಿಂಹಾಸನಕ್ಕೆ ಒಬ್ಬರು ಒಡೆಯರ್ ಇರುತ್ತಾರೆ. ಒಡೆಯರ್ ಸಸ್ಯಾಹಾರಿಗಳಾಗಿದ್ದಾಗ್ಯೂ, ಮಾಂಸಹಾರಿಗಳಾದ ಕುರುಬರೊಂದಿಗೆ ವೈವಾಹಿಕ ಸಂಬಂಧ ನಡೆಸುತ್ತಾರೆ. ಬಾಗೂರು, ಶ್ರೀರಾಂಪುರ, ಕಾರೇಹಳ್ಳಿ, ದೊಡ್ಡತೇಕಲವಟ್ಟಿ, ಹೆಗ್ಗೆರೆ, ಅರಳಿಹಳ್ಳಿ, ಗೊರವಿನಕಲ್ಲು ಮುಂತಾದ ಗ್ರಾಮಗಳಲ್ಲಿ ಇವರು ಪೂಜಿಸುವ ಬೀರದೇವರು/ರೇವಣ ಸಿದ್ದೇಶ್ವರ ಮುಂತಾದ ದೇವರುಗಳಿವೆ. ರಂಗಾಪುರ ಗ್ರಾಮವನ್ನು ಮೈಲಾರದೇವರಿಗೆ ದತ್ತಿ ನೀಡಲಾಗಿದ್ದ ಬಗ್ಗೆ ಹೊಸದುರ್ಗದ ವೀರಭದ್ರೇಶ್ವರ ದೇವಾಲಯದ ಆವರಣದಲ್ಲಿ ಶಾಸನವಿದೆ. ಕಾರೇಹಳ್ಳಿಯಲ್ಲಿ ೨ ರೇವಣಸಿದ್ದೇಶ್ವರ ಗದ್ದುಗೆಗಳಿವೆ. ಹೊಸದುರ್ಗದಲ್ಲಿ ಈ ಜನಾಂಗದವರ ಕನಕಗುರುಪೀಠದ ಶಾಖಾಮಠವಿದೆ (೨೦೦೨ರಲ್ಲಿ ಸ್ಥಾಪನೆಗೊಂಡಿದೆ). ಈ ಸಮುದಾಯದ ವ್ಯವಸ್ಥೆಯಲ್ಲಿ ಒಡೆಯರು, ಗುಡಿಗೌಡ, ಭಂಢಾರ, ಬಳಗ, ಸಾವಿರದವರು, ಕೋಲ್ಕಾರ ಹಾಗೂ ಬುದ್ಧಿವಂತ ಇರುತ್ತಾರೆ. ಬಾಗೂರು, ಕಾರೇಹಳ್ಳಿ ಮತ್ತು ದೊಡ್ಡತೇಕಲವಟ್ಟಿ ಗ್ರಾಮಗಳಲ್ಲಿ ರೇವಣಸಿದ್ದೇಶ್ವರ ಸಿಂಹಾಸನಗಳಿವೆ. ಇವುಗಳಿಗೆ ಐದಾರು ಶತಮಾನಗಳ ಇತಿಹಾಸವಿದೆ ಎನ್ನಲಾಗಿದೆ. ದಶಕಗಳಿಗೊಮ್ಮೆ 'ಶ್ರೀಗುರುಕಂತೆ ಸೇವೆ' ನಡೆಯುತ್ತದೆ.

**ಕುಂಚಿಟಿಗ ಲಿಂಗಾಯ್ತ**

ತಾಲ್ಲೂಕಿನಲ್ಲಿ ಕಳೆದ ಮೂರು ಶತಮಾನಗಳಿಂದಲೂ ಕುಂಚಿಟಿಗ ಲಿಂಗಾಯ್ತರು ನೆಲೆಸಿದ್ದಾರೆ. ಈ ಜನಾಂಗದ ಹೆಸರನ್ನು ಬೇರೆ-ಬೇರೆ ಪ್ರಾಂತ್ಯಗಳಲ್ಲಿ ಸ್ವಲ್ಪ ವ್ಯತ್ಯಾಸದೊಂದಿಗೆ ಇದೇ ನಾಮ ರೂಪದಲ್ಲಿ ಬಳಸುವರು. ಮೈಸೂರು, ಬೆಂಗಳೂರು ಭಾಗಗಳಲ್ಲಿ 'ಕುಂಟಿಗರು', 'ಕುಂಚಿಟಿಗರು' ಎಂದೂ, ತುಮಕೂರು, ಚಿತ್ರದುರ್ಗ ಜಿಲ್ಲೆಯ ಗ್ರಾಮಾಂತರಗಳಲ್ಲಿ 'ಕುಂಚಿಟಿಗ ಒಕ್ಕಲಿಗ' ಎಂದೂ, ಶಿವಮೊಗ್ಗದ ಚನ್ನಗಿರಿ, ಶಿಕಾರಿಪುರ, ದಾವಣಗೆರೆಯ ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳಲ್ಲಿ 'ನಾಮಧಾರಿ ಕುಂಚಿಟಿಗ' (ನಾಮಧಾರಿ ಲಿಂಗಾಯಿತ) ರೆಂದೂ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ 'ಲಿಂಗಧಾರಿ ಕುಂಚಿಟಿಗ', 'ಕುಂಚಿಗ ಲಿಂಗಾಯತ' ರೆಂದೂ, ಧಾರವಾಡ, ಕಾರವಾರ ಜಿಲ್ಲೆಗಳಲ್ಲಿ 'ಕಾಮಾಟಿ ಕುಂಚಿಟಿಗ' ರೆಂದೂ ಕರೆಯುವರು. ಮಧುರೈ ಪ್ರಾಂತ್ಯದ ಹಳೆಯ ದಾಖಲೆಗಳಲ್ಲಿ 'ಕುಂಚಿಟಿಗ' ಎಂದೇ ಕರೆಯಲಾಗಿದೆ. ವ್ಯವಸಾಯವು ಇವರ ಮೂಲ ಕಸುಬು. ಕುಂಚಿಟಿಗರ ಬಗ್ಗೆ ದಂತ ಕಥೆಗಳು, ಪುರಾಣಕಥೆ ಮುಂತಾದವು ಪ್ರಚಲಿತದಲ್ಲಿವೆ. ಇವರ ಮಾತೃಭಾಷೆ ಕನ್ನಡ. ಇದರಲ್ಲಿ ಸಾವಿರದೋರು, ಬೆಳ್ಳೇನೋರು, ಒಳಕಲ್ಲೋರು, ಜಾನಕಲ್ಲೋರು, ಅಳುವನೋರು, ಹುಳಿಯಾರೋರು, ಜಲಧೇನೋರು ಮುಂತಾದ ಒಟ್ಟು ೭ಲ ಗೋತ್ರಗಳು (ಕೊಲ) ಇವೆ. ಮತ್ತೋಡಿನ ಕ್ರಿ.ಶ.೧೮ನೇ ಶತಮಾನದ ತಾಮ್ರ ಶಾಸನದಲ್ಲಿ, 'ಜಲಧೇರು ವಕ್ಕಲು ಗೌಡರು' ಹಾಗೂ 'ನಾಮಧಾರಿ ವಕ್ಕಲು ಗೌಡರು' ಎಂಬ ಕೊಲಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ (ಗ್ರಾಮ ದೇವರುಗಳ ಪೂಜಾ ಪಟ್ಟಾಧಿಕಾರ ಹಂಚಿಕೆ ಸಂದರ್ಭದಲ್ಲಿ). ಕುಂಚಿಟಿಗರ ಪುರಾಣದಲ್ಲಿ ಜಾನಕಲ್ಲು ವುಂಡೆಯೆತ್ತ ರಾಯನೇ ೭ಲ ಕುಲಗಳಿಗೂ ದೊರೆ ಎಂದು ಹೇಳಲಾಗಿದೆ. ಕ್ರಿ.ಶ.೧೩೩೨ರ ತಾಮ್ರ ಶಾಸನದಲ್ಲಿ ಹೊಯ್ಸಳ ದೊರೆ ದೋರಸಮುದ್ರದ ಬಲ್ಲಾಳರಾಯನು, ಕುಂಚಿಟಿಗರ ೧೦೧ ಹುಂಡೆ ಹೆತ್ತರಾಯನಿಗೆ ಅನೇಕ ಬಿರುದುಗಳನ್ನಿತ್ತು, ಅವನಿಗೆ ಬಲ್ಲಾಳ ಸಮುದ್ರ ಮುಂತಾದ ೨೫ ಹಳ್ಳಿಗಳನ್ನು ವಹಿಸಿಕೊಟ್ಟನು. ಇವರು ತಿರುಪತಿ ತಿಮ್ಮಪ್ಪ, ಕದಿರೆ ನರಸಿಂಹಸ್ವಾಮಿ, ಚನ್ನಕೇಶವ, ಬಾದಾಮಿ ಬನಶಂಕರಿ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ತಾಲ್ಲೂಕಿನ ಮಾಡದ ಕೆರೆ, ಮಲ್ಲಾಪುರ, ರಾಮಜ್ಜನ ಹಳ್ಳಿ, ಲಕ್ಕೀಹಳ್ಳಿ, ಮಾದಿಹಳ್ಳಿ, ರಂಗವ್ವನಹಳ್ಳಿ, ಸಂಗೇನಹಳ್ಳಿ, ದೊಡ್ಡಘಟ್ಟ ಮುಂತಾದ ೫೩ ಗ್ರಾಮಗಳಲ್ಲಿ ಈ ಜನಾಂಗದವರು ನೆಲೆ ನಿಂತಿದ್ದಾರೆ. 'ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠ'ವು ಹೊಸದುರ್ಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ಥಾಪನೆಗೊಂಡಿದ್ದು, ಡಾ|| ಶಾಂತವೀರ ಮಹಾಸ್ವಾಮಿಗಳು ಇದರ ಪಟ್ಟಾಧ್ಯಕ್ಷರಾಗಿದ್ದಾರೆ. ಪ್ರತಿವರ್ಷ ಫೆಬ್ರವರಿಯಲ್ಲಿ ಸಂಗಮೇಶ್ವರ ಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ಅಲ್ಲದೆ, ಹಿಂದೂಗಳ ಮುಖ್ಯ ಹಬ್ಬಗಳನ್ನು ಆಚರಿಸುವರು.

**ಕುಂಬಾರ**

ಹೆಗ್ಗೆರೆಯಲ್ಲಿರುವ ಹೊಯ್ಸಳರ ಕಾಲದ (ಪರಿಧಾವಿ ಸಂ॥) ಶಾಸನದಲ್ಲಿ, ಕುಂಬಾರ ಪಣಮಯ್ಯ ಮತ್ತು ಮಲ್ಲವ್ವ ದಂಪತಿಗಳ ಮಗ ಮಾಕಯ್ಯನು ಕಲ್ಲೇಶ್ವರ ದೇವಾಲಯದ ದೇವರ ಪೀಠ, ಜಾಲಾಂದರ ಮತ್ತು ದ್ವಾರ ವಂದಗಳನ್ನು ಮಾಡಿಸಿದನೆಂದು ಉಲ್ಲೇಖಿಸಲಾಗಿದೆ.

ಚಿಕ್ಕಜಾಜೂರಿನ ಕ್ರಿ.ಶ.೧೬೬೪ರ ಶಾಸನದಲ್ಲಿ ಕುಂಬಾರ ಅರುವ ಸೆಟ್ಟಿಯು ಕೇಶವ ದೇವರಿಗೆ ತಾಲ್ಲೂಕಿನ ಕೊತ್ತಂಗೆರೆಯ ಕ್ರಿ.ಶ.೧೬೬೪ರ ಶಾಸನದಲ್ಲಿ ಕುಂಬಾರ ಸುಂಕವನ್ನು ಕೇಶವ ದೇವರಿಗೆ ದತ್ತಿಬಿಟ್ಟ ಬಗ್ಗೆ ಹೇಳಿದೆ. ದೇವಿಗೆರೆ, ಅತ್ತಿಮಗೆ, ದೇವಪುರ, ಮುದ್ದಯ್ಯನಹಟ್ಟಿಯಲ್ಲಿ ಕುಂಬಾರರಿದ್ದಾರೆ. ಇವರ ಕುಲಕಸುಬು ಮಡಿಕೆಗಳನ್ನು ತಯಾರಿಸುವುದು.

**ಗಾಣಿಗ**

ಗಾಣಿಗ ಲಿಂಗಾಯ್ತ ಎಂದು ಕರೆಯುವರು. ಅನೇಕ ಶತಮಾನಗಳಿಂದ ಇವರು ತಾಲ್ಲೂಕಿನಲ್ಲಿ ನೆಲೆಸಿದ್ದಾರೆ. ಕ್ರಿ.ಶ.೧೧೬೧ರ ಹೆಗ್ಗೆರೆ ಶಾಸನದಲ್ಲಿ 'ಎತ್ತಿನ ಗಾಣಕ್ಕೆಸೊಳ೨, ಕೈಗಾಣಕ್ಕೆಸೊಳ೧' ಸುಂಕ ವಿಧಿಸಿದ್ದ ಬಗ್ಗೆ ಪುರಾವೆ ಇದೆ. ಬೂದಿಹಾಳು (ಶ್ರೀರಾಂಪುರ) ಶಾಸನದಲ್ಲಿಯೂ ಗಾಣದ ಸುಂಕ ಪ್ರಸ್ತಾಪಿಸಲ್ಪಟ್ಟಿದೆ. ಕುಣಿಗಲ್ ತಾಲ್ಲೂಕಿನ ಕೊತ್ತಂಗೆರೆ ಕೇಶವ ದೇವರಿಗೆ 'ಗಾಣಿಗ ಸುಂಕ' ದತ್ತಿ ನೀಡಿದ್ದ ವಿಚಾರವು ಕ್ರಿ.ಶ.೧೧೫೮ರ ಶಾಸನದಲ್ಲಿದೆ. ಮಂಡ್ಯದ ಮಳವಳ್ಳಿ ಕೊನ್ನಾಪುರ ಶಾಸನವೊಂದರಲ್ಲಿ ಅಲ್ಲಿನ ವೈದ್ಯನಾಥ ದೇವರಿಗೆ 'ಗಾಣದ ತೆರೆ' ದತ್ತಿ ನೀಡಿದ್ದ ಸಂಗತಿಯನ್ನು ಉಲ್ಲೇಖಿಸಲಾಗಿದೆ. ಹೀಗೆ ಅನೇಕ ದೇವಾಲಯಗಳಿಗೆ ದೇವರ ನಂದಾದೀಪ ಸೇವೆಗಾಗಿ ಕೈಗಾಣಗಳನ್ನು ದತ್ತಿ ಬಿಡಲಾಗಿದ್ದ ಐತಿಹಾಸಿಕ ಪುರಾವೆಗಳಿವೆ. ಗಾಣಿಗರ ಈಗಿನ ವೃತ್ತಿ ಎಣ್ಣೆ ವ್ಯಾಪಾರ, ಎಣ್ಣೆಗಾಣ (ಈಗ ಯಂತ್ರ) ನಡೆಸುವುದು. ಇವರು ದುರ್ಗದ ಮುರುಘಾ ಮಠಕ್ಕೆ ನಡೆದುಕೊಳ್ಳುವರು. ಇವರ ಬೆಡಗುಗಳು: ಜ್ಯೋತೆರು, ಮುತ್ತುಗದರು, ಜೋಡು ಕಡಗದರು, ಸಜ್ಜನರು, ಹೊಳೆ ಹೊನ್ನೂರರು ಕಣ್ಕುಪ್ಪೆರು ಮತ್ತು ತೇರರು (ಒಟ್ಟು ೭). ಇವರಲ್ಲಿ ಕೆಲವರು, ಭೀಮ ಸಮುದ್ರದ ಬಸವೇಶ್ವರ ಜಾತ್ರೆಗೆ ಹೋಗುತ್ತಾರೆ. ಹಿರಿಯೂರು ತೇರು ಮಲ್ಲೇಶ್ವರ, ಬೂದಾಳು ಪರಪ್ಪಸ್ವಾಮಿ, ಮತ್ತೋಡು ಪರ್ವತ ಮಲ್ಲಿಕಾರ್ಜುನಸ್ವಾಮಿ ಈ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಹೊಸದುರ್ಗ, ಲಕ್ಕೀಹಳ್ಳಿ, ಮಧುರೆ, ಜಿ.ಎನ್.ಕೆರೆ, ಕೆಲ್ಲೋಡು, ಗೊರವಿಗೊಂಡನಹಳ್ಳಿ ಇಲ್ಲಿ ಗಾಣಿಗರು ನೆಲೆಸಿದ್ದಾರೆ.

### ಗೂರ್ಖ

ನೇಪಾಳದಿಂದ ವಲಸೆ ಬಂದಿರುವ ಇವರ ಮಾತೃಭಾಷೆ ನೇಪಾಳಿ. ಇವರ ಮೂಲವೃತ್ತಿ ಕಾವಲು ಕಾಯುವುದು. ವ್ಯಾವಹಾರಿಕ ಭಾಷೆ ಕನ್ನಡವಾಗಿದ್ದು, ಮಕ್ಕಳನ್ನು ಕನ್ನಡ ಶಾಲೆಗಳಲ್ಲಿ ಓದಿಸುತ್ತಿದ್ದಾರೆ. ಇವರಲ್ಲಿ ಕೆಲವರು ಮಾತ್ರ ಜನಿವಾರ ಹಾಕುತ್ತಾರೆ.

### ಗೊಲ್ಲ

ಗೊಲ್ಲರನ್ನು ಯಾದವರು, ಯದು ಕುಲಜರು ಎನ್ನುವರು. ಪುರಾಣ ಕಾಲದ ಬುಡಕಟ್ಟಿನ ಜನಾಂಗವಿದಾಗಿದೆ. ಹಿಂದಿನ ಕಾಲದಲ್ಲಿ ಇವರ ಮೂಲ ಕಸುಬು ಪಶುಪಾಲನೆಯಾಗಿದ್ದಿತು. ದ್ವಾಪರಯುಗದ ಶ್ರೀಕೃಷ್ಣನು ಗೊಲ್ಲನೆಂದು ಧರ್ಮಗ್ರಂಥವಾದ 'ಮಹಾಭಾರತ'ವು ಸಾರಿದೆ. ಉತ್ತರ ಭಾರತದಲ್ಲಿದ್ದ ಯಾದವರು ಇತಿಹಾಸ ಕಾಲದಲ್ಲಿ ಮಹಮದ್ ಘಜನಿಯ ದೌರ್ಜನ್ಯದಿಂದ ಬೇಸತ್ತು ಬಿಹಾರದ ಕಡೆಯಿಂದ ಪಶ್ಚಿಮ ಘಟ್ಟಗಳನ್ನು ತಲುಪಿ, ದಕ್ಷಿಣದ ಕಡೆಬಂದು ತಮಿಳ್ನಾಡಿನ ತಂಜಾವೂರಿನಲ್ಲಿ ನೆಲೆಸಿ, ಶ್ರೀಗುರು ಯಾದವ ಪ್ರಕಾಶರ ಅನುಯಾಯಿಗಳಾದರು. ಇವರಲ್ಲಿ ಕಂಬೆರು, ಕರಡಿ ಗೊಲ್ಲರು, ಸೋಮನಗೊಲ್ಲರು, ಚಿತ್ತನಗೊಲ್ಲರು, ಚಂದಮುತ್ತಿ, ಚಿತ್ತಮುತ್ತಿ ಎಂಬ ಒಳಪಂಗಡಗಳಿವೆ. ಇವರಲ್ಲಿ ಒಟ್ಟು ೩೬೬ ಕೊಲಗಳಿವೆ. ಅಂಬೆರಾಯ, ತುಂಬೆರಾಯ, ಕರಡಿ ಬುಳ್ಳಪ್ಪ (ಮುಖಂಡ). ಅಲ್ಲದೆ, ಕ್ರಿ.ಶ.೧೫ನೇಯ ಶತಮಾನದಲ್ಲಿ ಬೂದಿಹಾಳು ಸೀಮೆಯನ್ನು ಆಳಿದ ಅರಸ ಸಿರುಮಣ ನಾಯಕನು ಗೊಲ್ಲ ಜನಾಂಗದವನೆಂದು ಸಾಂಗತ್ಯಗಳಲ್ಲಿ ಹೇಳಲಾಗಿದೆ. ಸಿರುಮನ ಕಾಲದ ಕೊಳದ ಗೋಪಾಲ ವಿಗ್ರಹವು ಈಗಲೂ ಬೂದಾಳನಲ್ಲಿದೆ. ಬೂದಾಳನಲ್ಲಿ ಪ್ರತಿವರ್ಷ ವಿಜಯದಶಮಿಯಲ್ಲಿ ನಡೆಯುವ ಕುಮಾರಮಲ್ಲನ ಅಂಬು ವಿಶೇಷವಾಗಿರುತ್ತದೆ. ಕುಮಾರಮಲ್ಲನ ವೀರಗಲ್ಲ ಆಗಿನ ಕಾಲದ ಹಾಳುಗುಡಿಯಲ್ಲಿದೆ (ಅವನ ಸಮಾಧಿಯ ಮೇಲೆ). ಕಂಚೀಪುರದ ಶಾಸನದಲ್ಲಿ ಗೊಲ್ಲರ ತಿರುಮಲ ದೇವರ ಹೆಸರಿದೆ. ಕ್ರಿ.ಶ.೧೨ನೇ ಶತಮಾನದಲ್ಲಿ ತುರುಗಾಹಿ ರಾಮಣ್ಣನು ಬಸವಣ್ಣನವರಿಗೆ ಆಪ್ತನಾಗಿದ್ದನು. ಮತ್ತೋಡು ಪಾಳೆಯಗಾರರ ಕಾಲದಲ್ಲಿ ಕುರಿ ಸಾಕಿದ್ದ ಗೊಲ್ಲರು (೭೨ ಗ್ರಾಮಗಳವರು) ಒಂದು ಹುದಿ ಕುರಿಗಳಿಗೆ ಒಂದು ಕುರಿಯನ್ನು ಸುಂಕವನ್ನಾಗಿ ಕೊಡಬೇಕಾಗಿದ್ದಿತು ಎಂದು ಆಧಾರಗಳಿಂದ ತಿಳಿಯುವುದು. ಹಾರನಕಣಿವೆ ರಂಗನಾಥಸ್ವಾಮಿಯು ಹೊಸದುರ್ಗ ಸೀಮೆಯ ಕಾಡುಗೊಲ್ಲರ ಆರಾಧ್ಯ ದೈವವಾಗಿದ್ದು, ವಿಜಯದಶಮಿ ಸಂದರ್ಭದಲ್ಲಿ ಭಾರೀ ಜಾತ್ರೆ ನಡೆಯುತ್ತದೆ. ತಾಲ್ಲೂಕಿನ ವಿವಿಧೆಡೆಗಳಲ್ಲಿ ಜುಂಜಪ್ಪನ ಜಾತ್ರೆ ನಡೆಯುತ್ತವೆ. ತಾಲ್ಲೂಕಿನಲ್ಲಿ ನಲವತ್ತಕ್ಕೂ ಹೆಚ್ಚು ಸಂಖ್ಯೆಯ ಗೊಲ್ಲರಹಟ್ಟಿಗಳಿವೆ. ಇವರು ವೈವಾಹಿಕ ಸಂಬಂಧಗಳನ್ನು ಹಿರಿಯೂರು, ಹೊಳಲ್ಕೆರೆ, ಚಿತ್ರದುರ್ಗದಲ್ಲಿ

ಹೆಚ್ಚಾಗಿ ಮಾಡಿದ್ದಾರೆ. ಚಳ್ಳಕೆರೆ, ಚಿಕ್ಕನಾಯ್ಕನಹಳ್ಳಿ, ಅರಸೀಕೆರೆ ಮತ್ತು ಕಲಬುರಗಿ ಮುಂತಾದೆಡೆಗಳಲ್ಲೂ ಸಂಬಂಧ ಬೆಳೆಸಿದ್ದಾರೆ. ಇವರ ಕುಟುಂಬಗಳು ತುಂಬಾ ಸಂಪ್ರದಾಯಸ್ಥ ಕಟ್ಟುಪಾಡುಗಳಿಂದ ಕೂಡಿವೆ. ದೀಪಾವಳಿ, ಯುಗಾದಿ ಮುಂತಾದ ಹಬ್ಬಗಳಲ್ಲದೆ ಮಾರಿಹಬ್ಬಗಳನ್ನು ಆಚರಿಸುತ್ತಾರೆ. ಹಿಂದಿನ ಕಾಲದ ಇವರ ಗುರುಪೀಠವು ಮಂಗಳೂರು ತಾಲ್ಲೂಕಿನ ಕೊಲ್ಯದಲ್ಲಿದೆ. ಇತ್ತೀಚೆಗೆ ಚಿತ್ರದುರ್ಗದಲ್ಲಿ ಯಾದವಾನಂದ ಸಂಸ್ಥಾನ (ಗುರುಪೀಠ) ಆಗಿದೆ. ಈ ಜನಾಂಗದವರು ದೇವರ ಪೂಜೆ, ಉತ್ಸವ ಮುಂತಾದ ಸಂದರ್ಭಗಳಲ್ಲಿ ಉರುಮೆ ವಾದ್ಯ ಬಳಸುತ್ತಾರೆ. ಹಾವು–ಚೇಳಿನ ಕಾಟವಿದ್ದವರು ಜುಂಜಪ್ಪ ದೇವರಿಗೆ ಹರಕೆ ಸಲ್ಲಿಸುವುದುಂಟು.

ಮತ್ತೋಡು ತಾಮ್ರಶಾಸನದಲ್ಲಿ 'ಗೊಲ್ಲರಹಳ್ಳಿ' ಯ ಹೆಸರು ಉಲ್ಲೇಖಗೊಂಡಿದೆ (ಕ್ರಿ.ಶ.೧೮ನೇ ಶತಮಾನ). ಹಿಂದಿನ ಕಾಲದಲ್ಲಿ ಕಂಚೀಪುರ ಗ್ರಾಮದಲ್ಲಿ ಗೊಲ್ಲರು ಅಧಿಕ ಪ್ರಮಾಣದಲ್ಲಿ ನೆಲೆಸಿದ್ದು, ಅಲ್ಲಿ ಅವರ ಕುಲದೈವ ತಿಮ್ಮಪ್ಪ (ರಂಗನಾಥ) ದೇವರಿದ್ದಿತು. ನಂತರದಲ್ಲಿ ಕಂಚೀಪುರಕ್ಕೆ ಬೇರೆ ಜನರು ಬಂದು ನೆಲೆಸಲಾರಂಭಿಸಿದರು. ಆ ವೇಳೆಗೆ ತಮ್ಮ ದೇವರಿಗೆ ಮೈಲಿಗೆಯಾಗುತ್ತದೆಂದು ಗೊಲ್ಲರು ಕಂಚೀಪುರದಿಂದ ತಮ್ಮ ದೇವರೊಂದಿಗೆ ಬೇರೆಡೆಗೆ ಹೋಗಿ ನೆಲೆಸಿದರು. ಗೊಲ್ಲರ ದೇವರ ಗೌರವ ಸೂಚಕವಾಗಿ ಕಂಚೀದೇವರ ಗುಡಿಯಲ್ಲಿ 'ಯಜಮಾನರು' ಎಂಬ ದ್ವಿಶೂಲಾಕಾರದ ಆಯುಧವನ್ನೇ ಜನರು ಪೂಜಿಸುತ್ತಿದ್ದಾರೆ. ಕಂಚೀದೇವರು ಹೊರಟಾಗ ಈ 'ಯಜಮಾನ' ದೇವರೂ ಹೊರಟು ಮುಂದೆ ಸಾಗುತ್ತದೆಂಬುದು ಗಮನಾರ್ಹ.

## ಚನ್ನದಾಸ

ಪರಿಶಿಷ್ಟ ಜಾತಿಯಾಗಿ ಪರಿಗಣಿಸಲ್ಪಟ್ಟಿರುವ ಚನ್ನದಾಸ ಜನಾಂಗದವರು ತಾಲ್ಲೂಕಿನ ಸೀರನಕಟ್ಟೆ (ಕೋಡಿಹಳ್ಳಿಹಟ್ಟಿ), ಹೊಸದುರ್ಗ, ಮತ್ತೋಡು, ಎಸ್.ನೇರಲಕೆರೆ ಈ ಸ್ಥಳಗಳಲ್ಲಿ ನೆಲೆಸಿದ್ದಾರೆ. ಹಿಂದಿನ ಕಾಲದಲ್ಲಿ ಈ ಜನಾಂಗಕ್ಕೆ 'ದೊಂಬಿದಾಸ' ಎಂಬ ಹೆಸರಿದ್ದು, 'ದಾಸ'ಎಂದೂ ಕರೆಯಲಾಗುತ್ತಿದ್ದಿತು. ಈ ಹೆಸರಿನ ಬಗ್ಗೆ ಮುಜುಗರಕ್ಕೀಡಾದ ಇವರು ತಮ್ಮ ಜನಾಂಗದ ಹೆಸರನ್ನು 'ಚನ್ನದಾಸ' ಎಂದು ಬದಲಾಯಿಸಿ ಕೊಂಡರು. ಸರ್ಕಾರದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 'ಚನ್ನದಾಸ' ಎಂದೇ ನಮೂದಾಗಿರುತ್ತದೆ. ಈ ಜನಾಂಗದ ಮೂಲವೃತ್ತಿ ನಾಟಕ/ ಬೀದಿನಾಟಕ/ ಗೊಂಬೆಮೇಳ (ಸೂತ್ರದ ಗೊಂಬೆ) ಕಲೆಯಾಗಿದ್ದಿತು. ಇತ್ತೀಚಿನ ದಶಕಗಳಲ್ಲಿ ಇವರು ಸಣ್ಣ ಪ್ರಮಾಣದ ಕಿರಾಣಿ ವ್ಯಾಪಾರಿಗಳಾಗಿದ್ದಾರೆ. ಇವರ ಮಾತೃಭಾಷೆ ತೆಲುಗು ಆಗಿದ್ದು, ಇವರಲ್ಲಿ ಮೈಲಾರರು, ಪಾಯಿಲರು, ಆಚಾರರು, ದಾಸಸೆಟ್ರು ಎಂಬ ಒಳಪಂಗಡಗಳಿವೆ. ಮಾಂಸಾಹಾರವನ್ನೂ ಇವರು ಸೇವಿಸುವರು. ಇವರ ಮನೆ ದೇವರು ಕೂಡ್ಲಿಗಿ ತಾಲ್ಲೂಕಿನ ಬೊಮ್ಮಗಟ್ಟದ ಆಂಜನೇಯ ಆಗಿದ್ದು, ದೇವರಿಗೆ ಶ್ರಾವಣದಲ್ಲಿ, ಯುಗಾದಿ ಸಂದರ್ಭದಲ್ಲಿ ನಡೆಯುವ

ಜಾತ್ರೆಗೆ ಹೋಗಿ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಶುಭ ಕಾರ್ಯಗಳಲ್ಲಿ ಇವರ ಬುದ್ಧಿವಂತ ಮುಖಂಡರು ಪೌರೋಹಿತ್ಯ ಮಾಡುತ್ತಾರೆ ಅಥವಾ ಬೇರೆ ಜಾತಿಯ ಪುರೋಹಿತರನ್ನು ಕರೆಸುವುದಿದೆ. ಮೃತಪಟ್ಟವರನ್ನು ಹೂಳುವ ಪದ್ಧತಿ ಇವರಲ್ಲಿದೆ.

### ಛಲವಾದಿ

ಪರಿಶಿಷ್ಟ ಜಾತಿಗೆ ಸೇರಿರುವ ಇವರನ್ನು 'ಬಲಗೈ' ನವರೆನ್ನಲಾಗುತ್ತದೆ. ಆದಿದ್ರಾವಿಡ, ಹೊಲೆಯ ಎಂಬಿತ್ಯಾದಿ ಪರ್ಯಾಯ ಹೆಸರುಗಳೂ ಇವೆ. ತಾಲ್ಲೂಕಿನಲ್ಲಿ ನಾಲ್ಕು ಶತಮಾನಗಳಿಂದ ಇವರು ನೆಲೆಸಿದ್ದಾರೆ. ಇವರ ಮೂಲ ವೃತ್ತಿ ಉರುಮೆ ಬಾರಿಸುವುದು, ಕಹಳೆ ಊದುವುದು, ಬಟ್ಟೆ ನೇಯುವುದು ಇತ್ಯಾದಿ ಆಗಿವೆ. ಈಗಿನ ವೃತ್ತಿಗಳು ಉರುಮೆ ವಾದ್ಯ ನುಡಿಸುವುದು, ವ್ಯವಸಾಯ, ನೌಕರಿ ಇತ್ಯಾದಿ ಆಗಿವೆ. ಇವರ ಮಾತೃಭಾಷೆ ಕನ್ನಡವಾಗಿದ್ದು, ಇವರಲ್ಲಿನ ಬೆಡಗುಗಳು ಹೀಗಿವೆ: ಮುಚ್ಚಳದವರು, ಕೋಟೆಕೆರೆ, ಮಲ್ಲೂರರು, ಬೆಜ್ಜೆಳ್ಳೆರು, ಹೊಲಸೇರು, ತೊಡಕಲೂರರು ಇತ್ಯಾದಿ ೫೦ ಬೆಡಗುಗಳಿವೆ. ಮನೆದೇವರು ಕದಿರೆ ಲಕ್ಷ್ಮೀನರಸಿಂಹಸ್ವಾಮಿ ಹಾಗೂ ತಿರುಪತಿ ತಿಮ್ಮಪ್ಪ. ಕುಲದೇವತೆ ಯಲ್ಲಮ್ಮ. ಗುರುಪೀಠ 'ಛಲವಾದಿ ಮಹಾಸಂಸ್ಥಾನ'ವು ಚಿತ್ರದುರ್ಗದಲ್ಲಿದೆ. ಈ ಪೀಠದ ಸ್ವಾಮಿಗಳು ಶ್ರೀ ಬಸವನಾಗಿದೇವ ಮಹಾಸ್ವಾಮಿಗಳು. ಈ ಜನಾಂಗದವರು ಮಾಂಸಾಹಾರಿಗಳಾಗಿದ್ದು, ಬೆಡಗು ಆಧಾರದಿಂದ ವೈವಾಹಿಕ ಸಂಬಂಧ ಮಾಡುವರು. ವಧುವಿನ ಮನೆಯಲ್ಲಿ ಮದುವೆ ಮಾಡುತ್ತಾರೆ. ಒನಕೆ ಓಬವ್ವನ ಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ಅಲ್ಲದೆ ಮುಖ್ಯವಾದ ಎಲ್ಲಾ ಹಿಂದೂ ಹಬ್ಬಗಳನ್ನೂ ಮಾಡುವರು. ಹೊಸದುರ್ಗ, ದೇವಪುರ ಕಾಲೋನಿ, ಜಾನಕಲ್ಲು, ಕಪ್ಪಗೆರೆ, ದೇವಿಗೆರೆ, ಶ್ರೀರಾಂಪುರ, ಬೆಲಗೂರು ಮುಂತಾದ ಸ್ಥಳಗಳಲ್ಲಿ ಈ ಜನಾಂಗದವರು ನೆಲೆಸಿದ್ದಾರೆ. ಹೊಸದುರ್ಗದಲ್ಲಿ 'ಛಲವಾದಿ ಮಹಾಸಭಾ' ಶಾಖೆ ಇದೆ. ಮೃತರಾದವರನ್ನು ಹೂಳುವ ಪದ್ಧತಿ ಇವರಲ್ಲಿದೆ.

### ಜಂಗಮ

ಎಲ್ಲಾ ವೀರಶೈವ-ಲಿಂಗಾಯ್ತ ಪಂಗಡಗಳಿಗೆ ಇವರು ಗುರುಗಳಾಗಿದ್ದು, ಅವರ ಮನೆಗಳಲ್ಲಿ ಜರುಗುವ ಶುಭಕಾರ್ಯಗಳನ್ನು ನಡೆಸಿಕೊಡುವರು ಹಾಗೂ ಮೈಲಿಗೆಯನ್ನು ನಿವಾರಿಸುವರು. ಆಡುಭಾಷೆಯಲ್ಲಿ ಇವರನ್ನು 'ಅಯ್ನೋರು' ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಇವರಲ್ಲಿ 'ಕೋರಣ್ಯಭಿಕ್ಷೆ' ಮಾಡುವ ಪದ್ಧತಿಯಿದ್ದಿತು. ಜಂಗಮರು ರಂಭಾಪುರಿ ಜಗದ್ಗುರುಗಳಿಗೆ ನಡೆದುಕೊಳ್ಳುವರು. ತಾಲ್ಲೂಕಿನಲ್ಲಿ ಈ ಜನಾಂಗದವರು ಕಳೆದ ಮೂರು ಶತಮಾನಗಳಿಂದ ನೆಲೆ ನಿಂತಿದ್ದಾರೆ. ಪ್ರಾಚೀನ

ಕಾಲದಲ್ಲಿ ಇವರು ಆಂಧ್ರ ಮೂಲದವರಾಗಿದ್ದರೆನ್ನಲಾಗಿದೆ. ಇವರಲ್ಲಿ ಗುರುಸ್ಥಳ ಮತ್ತು ಆರಾಧ್ಯರು ಎಂಬ ಒಳಪಂಗಡಗಳಿವೆ. ಶತಮಾನಗಳಿಂದಲೂ ಪೌರೋಹಿತ್ಯ ಮತ್ತು ವ್ಯಾಪಾರ ಇವರ ಮುಖ್ಯ ಕಸುಬಾಗಿರುತ್ತದೆ. ವ್ಯವಸಾಯವನ್ನೂ ಮಾಡುವರು. ಅನೇಕರು ಸರ್ಕಾರಿ ನೌಕರಿಯಲ್ಲಿದ್ದಾರೆ. ಜಂಗಮರಿಗೆ ಸಂಬಂಧಪಟ್ಟಂತೆ ಇರುವ ಪಂಚಪೀಠಗಳು: ೧.ರಂಭಾಪುರಿ ಪೀಠ, ಬಾಳೆಹೊನ್ನೂರು, ೨.ಉಜ್ಜಯಿನಿ ಪೀಠ, ಕೂಡ್ಲಿಗಿ, ೩.ಶ್ರೀಶೈಲ ಪೀಠ, ಶ್ರೀಶೈಲ, ೪.ಕಾಶಿ ಪೀಠ ಮತ್ತು ೫.ಕೇದಾರ ಪೀಠಗಳು. ಜಂಗಮರ ಮನೆದೇವರುಗಳು: ೧.ಕರಿಸಿದ್ದೇಶ್ವರ, ೨.ವೀರಭದ್ರೇಶ್ವರ, ೩.ಕಲ್ಲೇಶ್ವರ ಮತ್ತು ೪.ಬಸವೇಶ್ವರ. ತಾಲ್ಲೂಕಿನ ಅನೇಕ ಶಿಲಾಶಾಸನಗಳಲ್ಲಿ ಕಲ್ಲೇಶ್ವರ ದೇವರನ್ನು ಕಲಿದೇವರು, ಕಲ್ಲಿನಾಥ ಎಂದು ಉಲ್ಲೇಖಿಸಲಾಗಿದೆ. ಇವರ ಮಾತೃಭಾಷೆ ಕನ್ನಡ. ಇವರಲ್ಲಿ ಶಿಶು ಹುಟ್ಟಿದ ೯ ದಿನದಲ್ಲಿ ನಾಮಕರಣ ಹಾಗೂ ಲಿಂಗಧಾರಣೆಯನ್ನು ಮಾಡುತ್ತಾರೆ. ವಿವಾಹ ಕಾರ್ಯ ವಧುವಿನ ಮನೆಯವರು ನಡೆಸುವುದು ರೂಢಿ. ಹಿಂದೂಗಳ ಎಲ್ಲಾ ಮುಖ್ಯ ಹಬ್ಬಗಳನ್ನು ಇವರು ಆಚರಿಸುತ್ತಾರೆ. ಶಿವರಾತ್ರಿ ಇವರ ಮುಖ್ಯವಾದ ಹಬ್ಬ. ಮೃತಪಟ್ಟವರನ್ನು ಹೂಳುವ ಪದ್ಧತಿ ಇವರಲ್ಲಿದೆ.

## ಜೈನ

ಇವರಲ್ಲಿ ಇಳ್ಕಲ್ ಮನೆತನ, ಬರಿಗಾಲಿ ಮನೆತನ, ಪ್ರಥಮಸೆಟ್ಟಿ ಮನೆತನ, ಇಜಾರಿ ಮನೆತನ, ಗಸಿ ಮನೆತನದವರು ತಾಲ್ಲೂಕಿನಲ್ಲಿದ್ದಾರೆ. ಇಳ್ಕಲ್‌ನವರು ಮೂಲತಃ ಮೀರಾಕೋರ ಮನೆತನದವರು. ಇಷ್ಟಲ್ಲದೆ ಕಂಚೀಕೆರೆ, ಚಿವಟಿ, ಪುರೋಹಿತ, ಗೌಡಿಕೆ, ಬಾಗಲಕೋಟೆ ಮತ್ತು ಹೂಲಿ ಇತ್ಯಾದಿ ಮನೆತನಗಳು ಇವರಲ್ಲುಂಟು. ಇವರಲ್ಲಿ ಬೆಡಗುಗಳಿಲ್ಲ. ಗೋತ್ರ/ಮನೆತನಗಳ ಆಧಾರದಲ್ಲಿ ವೈವಾಹಿಕ ಸಂಬಂಧ ಮಾಡುವರು. ಸ್ವಗೋತ್ರ ವಿವಾಹ ಪದ್ಧತಿ ಇಲ್ಲ. ಪಾತ್ರೆ, ಬಳೆ, ಕಬ್ಬಿಣ ಮತ್ತಿತರ ವ್ಯಾಪಾರ, ಬಸ್ಸುಗಳ ವಹಿವಾಟು, ದಿನಸಿ ಅಂಗಡಿ, ಬೇಸಾಯ ಮುಂತಾದ ಕಸುಬುಗಳನ್ನು ಇವರು ಅವಲಂಬಿಸಿದ್ದಾರೆ. ಕೆಲವರು ನೌಕರಿಯಲ್ಲಿದ್ದಾರೆ. ಶತಮಾನಗಳ ಕಾಲದಿಂದ ಜೈನರು ತಾಲ್ಲೂಕಿನಲ್ಲಿ ನೆಲೆಸಿದ್ದಾರೆ. ಇವರ ಮೂಲನಾಯಕ ಪಾರ್ಶ್ವನಾಥ (ಹೊಸದುರ್ಗ), ಸುಪಾರ್ಶ್ವನಾಥ (ಹೆಗ್ಗೆರೆ) ಹಾಗೂ ನೇಮಿನಾಥ ತೀರ್ಥಂಕರ (ಜಾನಕಲ್ಲು) ಹಾಗೂ ಇತ್ತೀಚೆಗೆ ಸ್ಥಾಪನೆಗೊಂಡಿರುವ ಶಾಂತಿನಾಥ (ದುಗ್ಗಾವರ). ಇವರಲ್ಲಿ ವರ್ಷಪೂರ್ತಿ ಪೂಜಾವಿಧಿಗಳು ಜರುಗುತ್ತವೆ. ಇವರು ಹೊಂಬುಜ ಕ್ಷೇತ್ರದ ಜೈನಮಠದ ಅನುಯಾಯಿಗಳಾಗಿ ನಡೆದುಕೊಳ್ಳುವರು. ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ೧೦ ದಿನಗಳು ದಶಲಕ್ಷಣ ಮಹಾಪರ್ವ, ನಾಲ್ಕು ತಿಂಗಳಿಗೊಮ್ಮೆ (೮ ದಿನಗಳ ಕಾಲ) ಅಷ್ಟಾನಿಕ ಪೂಜೆ, ಅನಂತನ ನೋಂಪಿ, ಮಹಾವೀರ ಜಯಂತಿ, ತೀರ್ಥಂಕರರ ಮೋಕ್ಷ ಕಲ್ಯಾಣ ಇತ್ಯಾದಿ ನಡೆಸುವರು.

ದೀಪಾವಳಿಯನ್ನು ಮಹಾವೀರನ ನಿರ್ವಾಣೋತ್ಸವವನ್ನಾಗಿ ಆಚರಿಸುತ್ತಾರೆ. ಇವರಲ್ಲಿ ವ್ರತಗಳು ಹೆಚ್ಚು. ದಿನದಲ್ಲಿ ಸೂರ್ಯಾಸ್ತದಿಂದ ಮರುದಿನ ಸೂರ್ಯೋದಯದವರೆಗೆ (ಕೈಯಲ್ಲಿನ ಗೆರೆಗಳು ಕಾಣದಷ್ಟು ಸಮಯ) ಊಟ–ನೀರು ಸೇವಿಸುವುದಿಲ್ಲ. ನಿತ್ಯ ಆಹಾರದಲ್ಲಿ ಕಂದಮೂಲಗಳಾದ ಈರುಳ್ಳಿ–ಬೆಳ್ಳುಳ್ಳಿ–ಗೆಣಸು–ಆಲೂಗೆಡ್ಡೆ ಇವುಗಳನ್ನು ಸೇವಿಸುವುದಿಲ್ಲ. ಅಲ್ಲದೇ ಈ ಜನಾಂಗದ ಮಹಿಳೆಯರು ರೇಷ್ಮೆ ಸೀರೆ ಉಡುವುದಿಲ್ಲ (ರೇಷ್ಮೆ ಹುಳುಗಳ ಪ್ರಾಣಿ ಹಿಂಸೆಯ ಕಾರಣದಿಂದ). ಅಲ್ಲದೆ ಇವರಲ್ಲಿ ವರದಕ್ಷಿಣೆ ಪದ್ಧತಿ ಇಲ್ಲ. ಮದುವೆಯನ್ನು ವಧುವಿನ ಮನೆಯಲ್ಲಿ ನಡೆಸುವರು. ಮದುವೆ ಸಂದರ್ಭದಲ್ಲಿ ಬಸದಿಗೆ ಕಾಣಿಕೆ ಕಟ್ಟುತ್ತಾರೆ. ಬಸದಿಗಳಲ್ಲಿ ನಿರಂತರ ಪೂಜಾ ಕಾರ್ಯಕ್ರಮಗಳು ನಡೆಯುವುದರಿಂದ ಜನಾಂಗದ ಸಂಘಟನೆಗೆ ಸಹಕಾರಿಯಾಗಿದೆ. ಹೊಸದುರ್ಗವು ಮುನಿಗಳು, ತ್ಯಾಗಿಗಳು ಸದಾ ಸಂಚರಿಸುವ ಮುಖ್ಯ ಮಾರ್ಗವಾಗಿದೆ. ಈ ಜನಾಂಗದ ಇಜಾರಿ ಭೂಪಾಲಪ್ಪ ಹಾಗೂ ಬರಿಗಾಲಿ ಕುಬೇರಪ್ಪ ಸ್ವಾತಂತ್ರ್ಯ ಹೋರಾಟಗಾರರಾಗಿ ದೇಶ ಪ್ರೇಮ ಮೆರೆದಿದ್ದಾರೆ. ಈ ಜನಾಂಗದ ಒಬ್ಬರು (ಇಲ್ಲಿನವರು) ನಿರ್ವಾಣ ದೀಕ್ಷೆ ಹೊಂದಿ 'ಶ್ರೀ ೧೦೮ ಕುಂದಕುಂದ ನಂದಿಮುನಿ ಮಹಾರಾಜ'ರಾಗಿ ಮುನಿ ಪದವಿ ಪಡೆದಿದ್ದಾರೆ (೧೯೮೫). ಇತರರೊಂದಿಗೆ ಸಾಮರಸ್ಯದ ಜೀವನ ನಡೆಸುವುದು ಈ ಜನಾಂಗದವರ ಧ್ಯೇಯವಾಗಿದೆ. ಮೃತಪಟ್ಟವರನ್ನು ದಹನ ಮಾಡುವ ಪದ್ಧತಿ ಇವರಲ್ಲಿದೆ.

**ಜೋಗಿ**

ಇದೊಂದು ಅಲೆಮಾರಿ ಜನಾಂಗವಾಗಿದ್ದು, ಮಹಾರಾಷ್ಟ್ರದ ಕಡೆಯಿಂದ ನೂರಾರು ವರ್ಷಗಳ ಹಿಂದೆ ಇಲ್ಲಿಗೆ ವಲಸೆ ಬಂದಿದ್ದಾರೆ. ಇವರಲ್ಲಿ ಕಿಂದರಿಜೋಗಿ, ಅಂಡಿಜೋಗಿ ಮತ್ತು ಬಳೆಗಾರ ಜೋಗಿ ಎಂಬ ಒಳಪಂಗಡಗಳು ಇವೆ. ಇವರು ತಗಡಿನಿಂದ ಜರಡಿ, ಕೊಬ್ಬರಿ ತುರಿಯುವ ಮಣೆ ಮುಂತಾದುವನ್ನು ತಯಾರಿಸುತ್ತಾರೆ (ಟಿನ್‌ಮೇಕರ್ಸ್). ಕೆಲವರು ಕೊಡೆ ರಿಪೇರಿ, ಬೀಗದ ರಿಪೇರಿ ಮಾಡುತ್ತಾರೆ. ಕೆಲವರು ವೆಲ್ಡಿಂಗ್ ಕೆಲಸ, ಸ್ಟೌವ್ ರಿಪೇರಿ ಮುಂತಾದುವನ್ನು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇವರದು ಮರಾಠಿ ಮಾತೃಭಾಷೆಯಾಗಿದ್ದು, ವ್ಯಾವಹಾರಿಕ ಭಾಷೆ, ಮಕ್ಕಳ ಶಿಕ್ಷಣ ಮಾಧ್ಯಮ ಕನ್ನಡವಾಗಿದೆ. ಇವರಲ್ಲಿ ಬಾಬನಿ, ಪಾರ್ಸಿ, ಮಧುರ್‌ಕರ್, ಪರ್‌ಬೆಳ್‌ಕರ್, ವಾಟ್ಕರ್ ಮುಂತಾದ ಗೋತ್ರಗಳಿವೆ. ಇವರ ಕುಲದೇವತೆ ಸೌದತ್ತಿ ಯಲ್ಲಮ್ಮ ಹಾಗೂ ಮನೆದೇವರು ಹೊಸಪೇಟೆಯ ಹುಲಿಗೆಮ್ಮ ಮತ್ತು ಸೌದತ್ತಿ ಯಲ್ಲಮ್ಮ. ಅಲ್ಲದೆ, ಇವರ ಗುರುಪೀಠದ ಹೆಸರು ರಾಜ್‌ಪೀರ್ ಮಹಾರಾಜ್‌ಗುರುಪೀಠ (ಕದಿರಿ, ಮಂಗಳೂರು). ಮೊಳಕಾಲ್ಮೂರುನಲ್ಲಿ ಶಾಖಾಮಠವಿದೆ. ೧೨ ವರ್ಷಕ್ಕೊಮ್ಮೆ ಹೊಸ ಗುರುವನ್ನು ಆಯ್ಕೆಮಾಡಿ ದೀಕ್ಷೆ ಮಾಡುವ ಪದ್ಧತಿ ಇವರಲ್ಲಿದೆ. ಮಾಂಸಾಹಾರಿಗಳಾಗಿರುವ

ಇವರು, ಹೊಸದುರ್ಗ ಮತ್ತು ಅರಳೀ ಹಳ್ಳಿಯಲ್ಲಿದ್ದಾರೆ. ಬೇರೆ ಗೋತ್ರಗಳಲ್ಲಿ ವಿವಾಹ ಸಂಬಂಧ ಬೆಳೆಸುತ್ತಾರೆ. ವಧು ಮತ್ತು ವರನ ಕಡೆಯವರು ಮದುವೆಯ ಖರ್ಚನ್ನು ಸಮಭಾಗವಾಗಿ ಭರಿಸುತ್ತಾರೆ. ಇವರಲ್ಲಿ ಮಕ್ಕಳಿಗೆ ೫–೧೦ ವಯಸ್ಸಿಗೆ ಕಿವಿ ಚುಚ್ಚಿಸಿ ದೀಕ್ಷೆ ಕೊಡಿಸಲು ಗುರುಪೀಠಕ್ಕೆ ಹೋಗಿ ಬರುತ್ತಾರೆ. ಹಿಂದೂ ಸಂಪ್ರದಾಯದ ರೀತ್ಯಾ ಎಲ್ಲಾ ಹಬ್ಬಗಳನ್ನು ಸರಳವಾಗಿ ಆಚರಿಸುತ್ತಾರೆ. ಹುಬ್ಬಳ್ಳಿಯ ಪಾಂಡುರಂಗ ವಿಠಲ ದೇವರಿಗೆ ಇವರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇವರಲ್ಲಿ ಮೃತಪಟ್ಟವರನ್ನು ಹೂಳುತ್ತಾರೆ.

## ತಮಿಳ್ ರೆಡ್ಡಿ

ತಮಿಳು ಮಾತನಾಡುವ ರೆಡ್ಡಿ ಜನಾಂಗದವರು ಪ್ರಾಚೀನ ಕಾಲದಲ್ಲಿ ಬಾಗೂರಿನ ಚನ್ನಕೇಶವ ದೇವರ ದೇವಾಲಯದ ನಿರ್ಮಾಣದ ಸಂದರ್ಭದಲ್ಲಿ ಕೆಲಸಗಾರರಾಗಿ ದುಡಿಯಲು ತಮಿಳ್ನಾಡಿನಿಂದ ಬಂದವರು, ಬಾಗೂರು, ಕೋಡಿಹಳ್ಳಿ, ಕಡಿವಾಣಕಟ್ಟೆ, ದೊಡ್ಡರಂಗಯ್ಯನಹಳ್ಳಿ ಈ ಸ್ಥಳಗಳಲ್ಲಿ ನೆಲೆಸಿದರು. ಇವರ ಮಾತೃಭಾಷೆ ತಮಿಳು. ಮನೆ ದೇವರು ತಿರುಪತಿ ತಿಮ್ಮಪ್ಪ ಮತ್ತು ಸೌದತ್ತಿ ಯಲ್ಲಮ್ಮ. ಇವರಲ್ಲಿ ಮೊದಲಿಯಾರ್, ಗೌಂಡರ್ ಮತ್ತು ತಮಿಳ್‌ರೆಡ್ಡಿ ಎಂಬ ಒಳಪಂಗಡಗಳಿವೆ. ಜನವರಿಯಲ್ಲಿ ಪೊಂಗಲ್ (ಸಂಕ್ರಾಂತಿ) ಹಾಗೂ ಸೆಪ್ಟೆಂಬರ್‌ನಲ್ಲಿ 'ತೈಮಾಸ' (ಹಿರಿಯರಪೂಜೆ) ಆಚರಿಸುತ್ತಾರೆ. ಇನ್ನುಳಿದಂತೆ ಹಿಂದೂಗಳ ಮುಖ್ಯ ಹಬ್ಬಗಳನ್ನು ಮಾಡುತ್ತಾರೆ. ಇವರು ಮಾಂಸಾಹಾರಿಗಳು. ವ್ಯವಸಾಯ, ಗಾರೆಕೆಲಸ, ಬಡಗಿತನ, ಪಶುಪಾಲನೆ (ಕುರಿ–ಹಸು ಸಾಕಣೆ) ಹಾಗೂ ಹೈನುಗಾರಿಕೆ ಇವರ ಮುಖ್ಯ ಕಸುಬು. ಬಾಗೂರು ಚನ್ನಕೇಶವ ದೇವರ ರಥೋತ್ಸವ ಹಾಗೂ ಮುಖ್ಯ ಪೂಜಾ ಕಾರ್ಯಗಳ ಸಂದರ್ಭದಲ್ಲಿ ಮುತುವರ್ಜಿಯಿಂದ ಕೆಲಸ ನಿರ್ವಹಿಸುತ್ತಾರೆ. ಜಾತ್ರೆ ಸಂದರ್ಭದಲ್ಲಿ ದೇವಸ್ಥಾನದಲ್ಲಿ ಈ ಜನಾಂಗಕ್ಕೆ 'ಮುಖ್ಯವೀಳ್ಯ' ಎತ್ತುತ್ತಾರೆ. ಇವರು ವೈವಾಹಿಕ ಸಂಬಂಧಗಳನ್ನು ದೇವರ ಅಪ್ಪಣೆಯ ಆಧಾರದಿಂದ ನಿರ್ಧರಿಸುತ್ತಾರೆ. ದಾಸಯ್ಯಗಳಾಗಿ ಕೊಳಗ ಹೊರಡಿಸುವುದು (ಹಳ್ಳಿ ಆಡುವುದು) ದೇವರ ಸೇವೆಗಳಲ್ಲೊಂದು (ಸಂಪ್ರದಾಯ). ತಮಿಳ್ನಾಡಿಗೆ ಸಂಪರ್ಕ ಇರಿಸಿಕೊಂಡಿದ್ದಾರೆ. ಪೆರಿಗರಂ, ಜೋಲಾರಪೇಟೆ, ತಿರುಪ್ಪೂರು, ತಿರುವಣ್ಣಾಮಲೈ, ಕೃಷ್ಣಗಿರಿ ಮುಂತಾದೆಡೆ ವೈವಾಹಿಕ ಸಂಬಂಧ ನಡೆಸಿರುತ್ತಾರೆ. ಕರ್ನಾಟಕದ ಶಿವಮೊಗ್ಗ, ಭದ್ರಾವತಿ, ತರೀಕೆರೆ, ಚಿಕ್ಕಮಗಳೂರು, ಬಿ.ಆರ್.ಪ್ರಾಜೆಕ್ಟ್, ಲಕ್ಕುವಳ್ಳಿ, ಕಲ್ಲತ್ತಿಗಿರಿಪುರ ಈ ಸ್ಥಳಗಳಲ್ಲೂ ನೆಂಟಸ್ತಿಕೆ ಮಾಡಿದ್ದಾರೆ. ವರನ ಮನೆಯಲ್ಲಿಯೆ ಮದುವೆ ನಡೆಯುವ ಪದ್ಧತಿ ಇದೆ. ಮಾಂಗಲ್ಯವು 'ಚಿಟ್ಟೆ' (ಪತಂಗ) ಮಾದರಿಯಲ್ಲಿದ್ದು, ಅರಿಶಿಣ ದಾರದಲ್ಲಿ ಪೋಣಿಸಿ ಕೊರಳಿಗೆ ಕಟ್ಟಿಕೊಳ್ಳುವುದೇ ಶ್ರೇಷ್ಠವೆಂದು ಭಾವಿಸಿದ್ದಾರೆ.

**ದೇವಾಂಗ**

ಈ ಜನಾಂಗದವರಿಗೆ ತಮ್ಮದೇ ಆಗಿರುವ ಪುರಾಣ–ಇತಿಹಾಸ ಮತ್ತು ಜಾನಪದ ಹಿನ್ನೆಲೆ ಇದೆ. ಪುರಾಣ ಕಾಲದಲ್ಲಿ ದೇವತೆಗಳು ಮತ್ತು ಋಷಿಮಾನವರು ಮೈಗೆ ಮರದ ತೊಗಟೆಗಳನ್ನು, ಎಲೆಗಳನ್ನು, ಪ್ರಾಣಿಗಳ ಚರ್ಮಗಳನ್ನು ಸುತ್ತಿಕೊಳ್ಳುತ್ತಿದ್ದರು. ಶಿವನು ತನ್ನ ದಿವ್ಯಶಕ್ತಿಯಿಂದ ದೇವಾಂಗ ಋಷಿಯನ್ನು ಸೃಷ್ಠಿಸಿ, ದೇವತೆಗಳಿಗೂ–ಋಷಿಮಾನವರಿಗೂ ಬಟ್ಟೆಗಳನ್ನು ನೇಯ್ದುಕೊಡಲು ತಿಳಿಸಿದನು. ಅದರಂತೆ ದೇವಾಂಗ ಋಷಿಯು ಬಟ್ಟೆಗಳನ್ನು ಸೃಷ್ಟಿಸಿ, ದೇವತೆಗಳಿಗೂ ಮಾನವರಿಗೂ ಕೊಟ್ಟು ಮಾನಸಂರಕ್ಷಣೆ ಮಾಡಿದನು ಎಂದು 'ದೇವಾಂಗಪುರಾಣ' ಮತ್ತಿತರ ಆಧಾರ ಗ್ರಂಥಗಳಲ್ಲಿ ಹೇಳಲಾಗಿದೆ. ದೇವಾಂಗ ಋಷಿಯ ಏಳು ಅವತಾರಗಳಲ್ಲಿ ಕಡೆಯ ಅವತಾರವೇ ಕನ್ನಡದ ಆದ್ಯ ವಚನಕಾರ ದೇವರ ದಾಸಿಮಯ್ಯ ಎಂದು ಹೇಳಲಾಗಿದೆ. ಜೇಡರ ದಾಸಿಮಯ್ಯನವರು ದೇವರನ್ನು ಮೆಚ್ಚಿಸಲು ದೇವರ ದಾಸಿಮಯ್ಯ ಆದರೆನ್ನಲಾಗಿದೆ. ದಾಸಿಮಯ್ಯನವರು ಬರೆದಿರುವ ವಚನಗಳು ಮುಂದೆ ಅನೇಕ ವಚನಕಾರರಿಗೆ ಸ್ಫೂರ್ತಿಯ ಸೆಲೆಯಾಗಿವೆ. ತಾಲ್ಲೂಕಿನ ತಂಡಗ ಗ್ರಾಮದ ಹೊಯ್ಸಳರ ಕಾಲದ (ಶುಕ್ಲ ಸಂವತ್ಸರದ) ಶಾಸನದಲ್ಲಿ ದಾಸಿಮಯ್ಯನವರ ಹೆಸರನ್ನು ಸ್ತುತಿಸಲಾಗಿದೆ. ಇತ್ತೀಚೆಗೆ ಹೊಸದುರ್ಗದಲ್ಲಿ ರಾಜ್ಯ ಮಟ್ಟದ ದೇವಾಂಗ ಸಮ್ಮೇಳನ ಜರುಗಿರುತ್ತದೆ.

ದೇವಾಂಗ ಜನಾಂಗದವರು ನೇಕಾರರೆಂದು, ನೇಯ್ಗೆಯವರೆಂದು ಬೇರೆ ಪ್ರದೇಶಗಳಲ್ಲಿ ಗುರುತಿಸಿಕೊಂಡಿದ್ದು, ಉತ್ತರ ಕರ್ನಾಟಕದಲ್ಲಿ ಸಸ್ಯಾಹಾರಿಗಳಾಗಿಯೂ, ದಕ್ಷಿಣ ಕರ್ನಾಟಕದಲ್ಲಿ ಮಾಂಸಾಹಾರಿಗಳಾಗಿಯೂ ಇದ್ದಾರೆ. ತಾಲ್ಲೂಕಿನಲ್ಲಿ ಬಾಗೂರು, ಬುರುಡೇಕಟ್ಟೆ, ಶ್ರೀರಾಂಪುರ, ಬೆಲಗೂರು, ಹೊನ್ನೇನಹಳ್ಳಿ, ಅತ್ತಿಮಗೆ, ಕಾಚಾಪುರ, ಹೊಸದುರ್ಗ, ಕಡದಿನಕೆರೆ, ಮತ್ತೋಡು, ಕಂಚೀಪುರ, ಆನಿವಾಳ, ಮಳಲಿ, ಸಾಣೇಹಳ್ಳಿ, ಜಂತಿಕೊಳಲು, ತೇಕಲವಟ್ಟಿ, ನೀರಗುಂದ, ಮಧುರೆ, ಬೋಕೀಕೆರೆ, ಸೋಮಸಂದ್ರ, ಕಾನ್ಬೇಹಳ್ಳಿ, ಗೂಳೀಹಟ್ಟಿ, ನಾಗನಾಯ್ಕನಕಟ್ಟೆ ಮುಂತಾದ ಸ್ಥಳಗಳಲ್ಲಿ ಶತಮಾನಗಳಿಂದ ನೆಲೆನಿಂತಿದ್ದಾರೆ. ಹಿಂದಿನ ಕಾಲದಲ್ಲಿ ಈ ಜನಾಂಗದ ಮೂಲ ಕಸುಬು ಕೈಮಗ್ಗಗಳಿಂದ ಬಟ್ಟೆ ನೇಯುವುದಾಗಿದ್ದಿತು. ತಾಲ್ಲೂಕಿನಲ್ಲಿ ಶತಮಾನದ ಹಿಂದೆ ಸಾವಿರಾರು ಕೈಮಗ್ಗಗಳಿದ್ದವು. ಮಗ್ಗಗಳಿಂದ ಬರುವ ಆದಾಯ ಜೀವನಕ್ಕೆ ಸಾಲದೆ, ಬೇರೆ–ಬೇರೆ ಉದ್ಯೋಗಗಳು ಹಾಗೂ ವ್ಯಾಪಾರ–ವಹಿವಾಟುಗಳಲ್ಲಿ ತೊಡಗಿಕೊಂಡರು. ಇವರಲ್ಲಿ ಗಂಧದವರು ಮತ್ತು ದಾಸರು ಎಂಬ ಒಳಪಂಗಡಗಳಿವೆ. ತಾಲ್ಲೂಕಿನಲ್ಲಿ ಹೆಚ್ಚಾಗಿರುವ ಗಂಧದವರಲ್ಲಿ ಒಟ್ಟು ೬೪ ಗೋತ್ರಗಳು ಹಾಗೂ ೨೧೫ ಬೆಡಗುಗಳು ಇವೆ. ಇವರಲ್ಲಿ ವೈವಾಹಿಕ ಸಂಬಂಧಕ್ಕೆ ಪಿತೃ ಪ್ರಧಾನ ಗೋತ್ರ ಮುಖ್ಯವಾಗುವುದಿಲ್ಲ. ಮಾತೃ ಪ್ರಧಾನವಾದ ಬೆಡಗುಗಳು ಮುಖ್ಯ. ಬೆಡಗುಗಳು ಪ್ರಾಚೀನಕಾಲದ ಬುಡಕಟ್ಟಿನಿಂದ

ಬಂದವುಗಳಾಗಿವೆ. ಹೊಸದುರ್ಗ ತಾಲ್ಲೂಕಿನಲ್ಲಿ ಮುತ್ತಿನವರು, ಮುಚ್ಚಳ, ಕನಕ, ಅಂಬಲಿ, ಬಣ್ಣದವರು, ಸಪ್ಪೆಯರು, ಏಳುಹೊನ್ನು, ಕಲ್ಲುಕೋಟೆರು, ಗುಡ್ಡದರು, ಕ್ವಾರನ ಹಳ್ಳಿಯವು ಮುಂತಾದ ಬೆಡಗುಗಳಿವೆ. ಸಗೋತ್ರದಲ್ಲಿ ವಿವಾಹ ಸಂಬಂಧ ಇಲ್ಲ. ಇವರು ಬನಶಂಕರಿ ಮತ್ತು ಚೌಡೇಶ್ವರಿ ದೇವಿಯನ್ನು ಕುಲದೇವತೆಯಾಗಿ ಆರಾಧಿಸುತ್ತಾರೆ. ದೇವಲ (ದೇವಾಂಗ) ಮಹರ್ಷಿ ಜಯಂತಿ, ದೇವರ ದಾಸಿಮಯ್ಯ ಜಯಂತಿಗಳನ್ನು ಅನುಕ್ರಮವಾಗಿ ಕಾರ್ತೀಕ ಶುದ್ಧ ದ್ವಾದಶಿಯಲ್ಲಿ ಹಾಗೂ ಚೈತ್ರಶುದ್ಧ ಪಂಚಮಿಯಲ್ಲಿ ಆಚರಿಸುತ್ತಾರೆ. ಬಾದಾಮಿ ಬನಶಂಕರಿ ಕ್ಷೇತ್ರಕ್ಕೆ ಮತ್ತು ತಿರುಪತಿ ತಿಮ್ಮಪ್ಪ ದೇವರಿಗೆ ಯಾತ್ರೆ ಹೋಗುತ್ತಾರೆ. ಈ ಜನಾಂಗದಿಂದ ಬಂದ ಅವಧೂತ ಪರಪ್ಪಸ್ವಾಮಿಗಳ ಮೂಲ ಗದ್ದುಗೆ ಬೂದಾಳು (ಶ್ರೀರಾಂಪುರ) ಗ್ರಾಮದಲ್ಲಿದ್ದು, ಶಿವರಾತ್ರಿ ಸಂದರ್ಭದಲ್ಲಿ ರಥೋತ್ಸವ ಜರುಗುವುದು.

ದೇವಾಂಗದಲ್ಲಿ, ಹುಟ್ಟಿದ ಶಿಶುವಿಗೆ ಒಂದು ತಿಂಗಳಿಂದ ಐದು ತಿಂಗಳ ಒಳಗೆ ನಾಮಕರಣ ಮಾಡುವರು. ಕಂಚೀದೇವರ ಒಕ್ಕಲು ತಮ್ಮ ಮೊದಲ ಮಗುವಿನ ನಾಮಕರಣವನ್ನು ಕಂಚೀಬೆಟ್ಟದ ಮೇಲೆ (ಕಂಚೀ ದೇವರ ದೇವಸ್ಥಾನದಲ್ಲಿ) ನಾಮಕರಣ ಮಾಡಿ ನೆಂಟರಿಷ್ಟರಿಗೆ ಸಿಹಿಯೂಟ ಮಾಡಿಸುತ್ತಾರೆ. ಈ ಜನಾಂಗದವರಲ್ಲಿ ಸ್ವಲ್ಪಮಟ್ಟಿಗೆ ವರದಕ್ಷಿಣೆ ಪದ್ಧತಿ ಇದೆ. ವಧುವಿನ ಮನೆಯಲ್ಲಿ ಮದುವೆ ನಡೆಯುತ್ತೆ. ಇವರು ಹಿಂದೂಗಳ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. 'ಬನದ ಹುಣ್ಣಿಮೆ' ಹಬ್ಬ ಮತ್ತು ಉಪಾ ಕರ್ಮಹಬ್ಬಗಳು ಇವರಲ್ಲಿ ವಿಶೇಷ ಆಚರಣೆಯಾಗಿವೆ. ಬನದ ಹುಣ್ಣಿಮೆಯಂದು ಕುಲದೇವತೆ ಬನಶಂಕರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆ (ಉತ್ಸವ) ಮಾಡುತ್ತಾರೆ. ಬಾಗೂರಿನಲ್ಲಿ ರಥೋತ್ಸವ ನಡೆಯುತ್ತದೆ. ಬೂದಿಹಾಳು ಬನಶಂಕರಿ ಕ್ರಿ.ಶ.೧೫ನೇ ಶತಮಾನದ ಸಿರುಮನ ಕಾಲದ ದೇವರಾಗಿದೆ. ಹೊನ್ನೇನಹಳ್ಳಿ, ಬೆಲಗೂರು, ಮತ್ತೋಡು ನೀರಗುಂದ ಮುಂತಾದೆಡೆ ಬನಶಂಕರಿ ದೇವಾಲಯ ಇವೆ. ಕರ್ನಾಟಕದವರಿಗಷ್ಟೇ ಅಲ್ಲದೇ ಭಾರತದ ಎಲ್ಲಾ ರಾಜ್ಯದ ದೇವಾಂಗದವರಿಗೂ ಏಕೈಕ ಜಗದ್ಗುರು ಪೀಠವಾದ ಶ್ರೀ ಗಾಯಿತ್ರಿ ಪೀಠವು ಹಂಪಿಯಲ್ಲಿದ್ದು, ಶ್ರೀದಯಾನಂದಪುರಿ ಮಹಾಸ್ವಾಮಿಗಳು ಪಟ್ಟಾಧ್ಯಕ್ಷರಾಗಿದ್ದಾರೆ. ೧೯೪೮ರಲ್ಲಿ ಬೆಂಗಳೂರಲ್ಲಿ 'ಅಖಿಲ ಭಾರತ ದೇವಾಂಗ ಸಮ್ಮೇಳನ' ನಡೆದಿದೆ. ಉಪಾ ಕರ್ಮಹಬ್ಬವನ್ನು ಇವರು 'ನೂಲು ಹುಣ್ಣಿಮೆ' ಎಂದು ಆಚರಿಸುತ್ತಾರೆ. ಶ್ರದ್ಧಾಭಕ್ತಿ, ಮಡಿಯಿಂದ 'ಕಳಶ' ಸ್ಥಾಪನೆ (ಶಂಕರಿ) ಮಾಡಿ, ಹಣ, ಒಡವೆ, ಎಡೆ ಇಟ್ಟು ಪೂಜೆ ಸಲ್ಲಿಸಿ ಗಂಡಸರು ಜನಿವಾರ ಧರಿಸುತ್ತಾರೆ. ಇದು ಇಲಿಗಳಿಗೆ ಎಡೆಯಿಡುವ ಹಬ್ಬವಾಗಿರುತ್ತದೆ. ಆದ್ದರಿಂದ ಮನೆಯ ಕಿಟಕಿ–ಬಾಗಿಲು ಮುಚ್ಚಿ ನಿಶ್ಯಬ್ದತೆಯಿಂದ (ಗಂಟೆ ಬಾರಿಸುವಂತಿಲ್ಲ, ಯಾರೂ ಮಾತನಾಡುವಂತಿಲ್ಲ) ಪೂಜೆ ಮಾಡುವರು. ನಂತರ ಎಡೆ (ಸಿಹಿ ಅಡುಗೆ) ಯನ್ನು ಬಾಳೆ ಎಲೆಯಲ್ಲಿ ಕಲೆಸಿ ಇಲಿಗಳು ಇರಬಹುದಾದ ಜಾಗಗಳಿಗೆ ಅರ್ಧರ್ಧ

ಮಿದಿಕೆಯಷ್ಟು ಎಡೆಯನ್ನು ಇಡುತ್ತಾರೆ. ಇದು ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿರುತ್ತದೆ. ಹಿಂದಿನ ಕಾಲದಲ್ಲಿ ಇವರ ಪ್ರತಿಯೊಂದು ಮನೆಯಲ್ಲೂ ಕೈಮಗ್ಗಗಳನ್ನು ಸ್ಥಾಪಿಸಿದ್ದರಾದ್ದರಿಂದ ಮನೆಯಲ್ಲಿ ಎಲ್ಲೆಲ್ಲೂ ನೂಲಿನ ಸಾಮಗ್ರಿಗಳು (ಕಚ್ಚಾನೂಲು ಇತ್ಯಾದಿ) ಯಥೇಚ್ಚವಾಗಿ ದಾಸ್ತಾನು ಇರುತ್ತಿದ್ದು, ಅವುಗಳನ್ನು ಕಡಿಯದಿರಲೆಂದು ಇಲಿಗಳಿಗೆ ಹೀಗೆ ಭಕ್ತಿಯಿಂದ ಎಡೆ ಹಾಕುವ ಸಂಪ್ರದಾಯ ಬೆಳೆದುಬಂದಿರುತ್ತದೆ. ಇಲಿಗಳಿಗೆ ಎಡೆ ಹಾಕಿದ ನಂತರವಷ್ಟೇ ಇವರು ದೇವರ ಪ್ರಸಾದ ಸ್ವೀಕರಿಸುತ್ತಾರೆ. ಇದೊಂದು ವಿಶೇಷವಾದ ಹಬ್ಬವಾಗಿದೆ. ಈಗ ಇವರ ಮನೆಗಳಲ್ಲಿ ಮಗ್ಗಗಳಿಲ್ಲ, ಇಲಿಗಳೂ ಇಲ್ಲ. ಆದರೂ ಸಂಪ್ರದಾಯ ಬಿಡುವಂತಿಲ್ಲ. 'ನೂಲು ಹುಣ್ಣಿಮೆ' ಹಬ್ಬವನ್ನು ಎಂದಿನಂತೆಯೇ ಆಚರಿಸುತ್ತಾರೆ. ಈ ಹಬ್ಬದಲ್ಲಿ ಬೇರೆ ಯಾರನ್ನೂ ಊಟಕ್ಕೆ ಆಹ್ವಾನಿಸುವುದಿಲ್ಲ. ಸಂಜೆಯ ನಂತರ ಪೂಜೆಯ ವೇಳೆಯಲ್ಲಿ ಯಾರು ಬಂದರೂ ಬಾಗಿಲು ತೆರೆಯುವಂತಿಲ್ಲ–ಮಾತಾಡುವಂತಿಲ್ಲ! ಹೀಗೆ ತುಂಬಾ ವಿಚಿತ್ರವಾದ ಆಚರಣೆಯಾಗಿ ಉಳಿದಿದೆ 'ನೂಲು ಹುಣ್ಣಿಮೆ ಹಬ್ಬ'. ಸ್ವಾತಂತ್ರ್ಯ ಪೂರ್ವದಲ್ಲಿ ಹೊಸದುರ್ಗದಲ್ಲಿ ನೂರಾರು ಕೈಮಗ್ಗಗಳಿದ್ದವು. 'ಚೌಡೇಶ್ವರಿ ರೇಷ್ಮೆ ಮತ್ತು ಹತ್ತಿನೂಲಿನ ನೇಕಾರರ ವಿವಿಧೋದ್ದೇಶ ಸಹಕಾರ ಸಂಘವು ಹೊಸದುರ್ಗದಲ್ಲಿ ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಇದೆ.

ಕ್ರಿ.ಶ.೧೧೬೧ರ ಹೆಗ್ಗೆರೆ ಶಾಸನದಲ್ಲಿ ಹತ್ತಿಯ ನೂಲಮೆಳವೆಗೆ ವೀಸಾ ೨ ಸುಂಕ ವಿಧಿಸಲಾಗುತ್ತಿದ್ದ ಬಗ್ಗೆ ಉಲ್ಲೇಖವಿದೆ. ಉತ್ತರ ಕರ್ನಾಟಕದ ದೇವಾಂಗರು ಶೈವಾಚಾರದವರೂ, ದಕ್ಷಿಣ ಕರ್ನಾಟಕದವರು ವೈಷ್ಣವಾಚಾರದವರೂ ಆಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸಸ್ಯಹಾರಿಗಳಾಗಿರುವ ಹಠಗಾರ (ಹಟ್ಟಿಕಾರ) ದೇವಾಂಗದವರಿದ್ದಾರೆ. ನಾಡಿನ ಅನೇಕ ಶಾಸನಗಳಲ್ಲಿ, ಹಿಂದಿನ ಕಾಲದಲ್ಲಿ ಮಗ್ಗ ಸುಂಕವಿದ್ದ ಬಗ್ಗೆ ಹೇಳಲಾಗಿದೆ.

## ದೈವಜ್ಞ ಬ್ರಾಹ್ಮಣ

ಅರವತ್ತು ವರ್ಷಗಳ ಹಿಂದೆ ಕುಮಟಾ ಕಡೆಯಿಂದ ಹೊಸದುರ್ಗಕ್ಕೆ ಈ ಜನಾಂಗದವರು ವಲಸೆ ಬಂದರು. ಇವರ ವೃತ್ತಿ ಚಿನ್ನ–ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಆಭರಣಗಳ ಅಂಗಡಿ ನಿರ್ವಹಣೆ. ಇವರ ಮಾತೃಭಾಷೆ ಕೊಂಕಣಿ (ಲಿಪಿ ಇಲ್ಲ). ಆಡುಭಾಷೆ (ವ್ಯಾವಹಾರಿಕ) ಕನ್ನಡ. ಹೊಸದುರ್ಗ, ಮತ್ತೋಡು, ಗುಡ್ಡದ ನೇರಲಕೆರೆ, ಕಂಚೀಪುರ, ಸಿದ್ಧಗೊಂಡನಹಳ್ಳಿ, ಶ್ರೀರಾಂಪುರ, ಬಾಗೂರು, ಬೆಲಗೂರು, ಗವಿರಂಗನಾಥಸ್ವಾಮಿ ಬೆಟ್ಟ, ಹೊಸದುರ್ಗ ರೈಲ್ವೆಸ್ಟೇಷನ್ ಈ ಸ್ಥಳಗಳಲ್ಲಿ ಇವರು ನೆಲೆಸಿದ್ದಾರೆ. ಇವರಲ್ಲಿ ರಾಯ್ಕರ್, ದಿವಾಕರ್, ವೆರ್ಣೇಕರ್, ವಿಶ್ವಾಮಿತ್ರ, ಪಾಲನ್‌ಕರ್

ಎಂಬ ಗೋತ್ರಗಳಿವೆ. ಸಗೋತ್ರ ವಿವಾಹ ನಿಷಿದ್ಧವಿದೆ. ಮದುವೆಯು ವಧುವಿನ ಮನೆಯಲ್ಲಿ ನಡೆಯುತ್ತದೆ. ಇವರು ಮಾಂಸಾಹಾರಿಗಳು. ಹಿಂದೂ ಸಂಪ್ರದಾಯದಂತೆ ಎಲ್ಲಾ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ. ಈ ಸಮುದಾಯದವರು ಉತ್ತರ ಕನ್ನಡ ಜಿಲ್ಲೆಯ (ಕುಮಟಾ ತಾ||) ಕರ್ಕಿಯ ಜ್ಞಾನೇಶ್ವರ ದೇವರಿಗೆ ಹಾಗೂ ಶ್ರೀ ಸಚ್ಚಿದಾನಂದ ಮಹಾಸ್ವಾಮಿಗಳಿಗೆ ನಡೆದುಕೊಳ್ಳುತ್ತಾರೆ.

**ನಾಮದೇವ ಸಿಂಪಿ**

ಎರಡು ನೂರು ವರ್ಷಗಳ ಹಿಂದೆ ಇವರು ಮಹಾರಾಷ್ಟ್ರದಿಂದ ಈ ಕಡೆ ಬಂದು ನೆಲೆಸಿದ್ದಾರೆ (ಕರ್ನಾಟಕಕ್ಕೆ). ತಾಲ್ಲೂಕಿನಲ್ಲಿ ಬಾಗೂರು ಗ್ರಾಮದಲ್ಲಿ ಮಾತ್ರ ನೆಲೆಸಿದ್ದಾರೆ. ಇವರನ್ನು ದರ್ಜಿಗಳು, ಚಿಪ್ಪಿಗರು ಎನ್ನಲಾಗುತ್ತದೆ. ಇವರ ಮೂಲವೃತ್ತಿ ಬಟ್ಟೆ ಹೊಲಿಗೆ. ಈಗ ಬಟ್ಟೆ ಹೊಲಿಗೆ, ವ್ಯಾಪಾರ, ಸರ್ಕಾರಿ ನೌಕರಿಯಲ್ಲಿ ತೊಡಗಿದ್ದಾರೆ. ಇವರ ಮಾತೃಭಾಷೆ ಮರಾಠಿ ಹಾಗೂ ವ್ಯಾವಹಾರಿಕ ಭಾಷೆ ಕನ್ನಡ. ಇವರಲ್ಲಿ ಐವತ್ತಕ್ಕೂ ಹೆಚ್ಚು ಗೋತ್ರ ಹಾಗೂ ಬೆಡಗುಗಳಿವೆ. ಇವರ ಬೆಡಗು / ಗೋತ್ರಗಳು: ಓವಳೆ, ಪಿಸ್ಸೆ, ಪೇಟಗರ್, ರೇವಳೇಕಾರ್, ಪುಟಾಣಿ, ಸೇಲ್‌ಕರ್, ಕೆಲ್ಕುರ್ ಇತ್ಯಾದಿ. ಇವರ ಮನೆದೇವರು ಮಹಾರಾಷ್ಟ್ರದ ತುಳಜಾಪುರದ ಭವಾನಿ ಹಾಗೂ ಇವರ ಗುರುಪೀಠ ಪೇಟ್ ವಡಗಾಂವ್, ಕೊಲ್ಲಾಪುರ (ಮಹಾರಾಷ್ಟ್ರ). ಕುಲದೇವರು ಪಾಂಡುರಂಗ ವಿಠಲ, ಪಂಡರಾಪುರ. ಇವರು ಮಾಂಸಾಹಾರಿಗಳಾಗಿದ್ದು, ಅನ್ಯಗೋತ್ರಗಳೊಂದಿಗೆ ವೈವಾಹಿಕ ಸಂಬಂಧ ಮಾಡುವರು. ಶುಭಕಾರ್ಯಗಳ ಪೌರೋಹಿತ್ಯಕ್ಕೆ ಬ್ರಾಹ್ಮಣರನ್ನು ಕರೆಸುತ್ತಾರೆ. ಮಗು ಹುಟ್ಟಿದ ೫ ದಿನಕ್ಕೆ ಪಾಚವಿಶಾಸ್ತ್ರ, ನಂತರ ೧೨ ದಿನಕ್ಕೆ ನಾಮಕರಣ ಮಾಡುತ್ತಾರೆ. ಆಷಾಢಮಾಸದಲ್ಲಿ 'ನಾರಾಯಣಸ್ವಾಮಿ' ಗುರುವಿನ ಹಬ್ಬ ಹಾಗೂ ಇನ್ನುಳಿದ ಹಿಂದೂಗಳ ಹಬ್ಬಗಳನ್ನು ಆಚರಿಸುತ್ತಾರೆ. ಮೃತರನ್ನು ದಹನ ಮಾಡುವ ಪದ್ಧತಿ ಇವರಲ್ಲಿದೆ.

**ನಾಯಕ**

ಬೇಡರ ಕಣ್ಣಪ್ಪ, ವಾಲ್ಮೀಕಿ ಮಹರ್ಷಿ, ಕುಮಾರರಾಮ, ಮದಕರಿ ನಾಯಕರನ್ನು ಕೊಟ್ಟ ಜನಾಂಗವಿದು. ಅನೇಕ ಶಾಸನಗಳಲ್ಲಿ ನಾಯಕರ ಉಲ್ಲೇಖಗಳಿವೆ. ಇವರಿಗೆ ಬೇಡ, ವಾಲ್ಮೀಕಿ, ಪಾಳೇಗಾರ, ತಳವಾರ ಮುಂತಾದ ಕುಲನಾಮಗಳಿವೆ. ನಾಯಕ ಸಮುದಾಯದಲ್ಲಿ (೧) ಊರುನಾಯಕ ಮತ್ತು (೨) ಮ್ಯಾಸನಾಯಕ ಎಂಬ ಪಂಗಡಗಳಿವೆ. ವಿಜಯನಗರದವರ ಆಳ್ವಿಕೆಯ ಕಾಲದಲ್ಲಿ ಬಳ್ಳಾರಿ ಕಡೆಯಿಂದ

ಬಂದವರೆಂದು ಹೇಳಿಕೊಳ್ಳುತ್ತಾರೆ. ಇವರ ಮಾತೃಭಾಷೆ ಕನ್ನಡ ಹಾಗೂ ಇವರ ಮೂಲವೃತ್ತಿ ಬೇಟೆಗಾರಿಕೆ ಮತ್ತು ತಳವಾರಿಕೆ. ರಾಜರ ಕಾಲದಲ್ಲಿ ಮೇನೆ ಹೊರುವುದು ಇತ್ಯಾದಿ ಇವರ ವೃತ್ತಿ ಆಗಿದ್ದಿತು. ಈಗ ಇವರ ಕಸುಬು ಬೇಟೆಗಾರಿಕೆ, ಹೈನುಗಾರಿಕೆ, ಕುರಿಸಾಕಣೆ, ವ್ಯವಸಾಯ, ನೌಕರಿ ಇತ್ಯಾದಿ. ಇವರ ಬೆಡಗುಗಳೆಂದರೆ: ಲಚ್ಚಿಮೆಲರು, ಪುವ್ವಲರು, ಮುಚ್ಚಳದೋರು, ಸಾಕೇಲರು, ಮೀನಿಗಲರು, ಲಕ್ಕಿಮೇಲರು, ಕಾಮಗೇತ್ಲರು, ಎನುಮ್ಲರು, ಗುಜ್ಜಲರು, ಪುದುಗ್ಲರು, ಪೋತರಾಜ ಇತ್ಯಾದಿ ಒಟ್ಟು ೪೦ ಬೆಡಗುಗಳಿವೆ. ಇವರಲ್ಲಿನ ಉಪಪಂಗಡಗಳು: ತಳವಾರ, ತಳಾರ, ತಲವಾರ, ಕಾವಲುಗಾರ, ಗುರಿಕಾರ ಪರಿವಾರದವರು, ಬೋಯಾ, ಬೋಯಿ. ಇವರು ಓಬಳ ನರಸಿಂಹಸ್ವಾಮಿ (ಆಂಧ್ರ), ಗಾದ್ರಿ ಓಬಳ ನರಸಿಂಹಸ್ವಾಮಿ, ತಿರುಪತಿ ತಿಮ್ಮಪ್ಪ, ಆಂಜನೇಯ ದೇವರುಗಳನ್ನು ತಮ್ಮ ಮನೆದೇವರಾಗಿಯೂ, ಕರಿಯಮ್ಮ, ದುರ್ಗಮ್ಮ, ಉಚ್ಚಂಗಿ ಯಲ್ಲಮ್ಮ ದೇವರುಗಳನ್ನು ತಮ್ಮ ಕುಲ ದೇವರುಗಳೆಂದೂ ಆರಾಧಿಸುವರು. ಇವರ ಗುರು ಪೀಠವು ಹರಿಹರ ತಾಲ್ಲೂಕು ರಾಜನಹಳ್ಳಿಯಲ್ಲಿದೆ. ಮಾಂಸಹಾರಿಗಳಾಗಿರುವ ಇವರು ಬೇರೆ ಬೇರೆ ಬೆಡಗುಗಳಲ್ಲಿ ವೈವಾಹಿಕ ಸಂಬಂಧ ನಡೆಸುತ್ತಾರೆ. ಇವರಲ್ಲಿ ವರದಕ್ಷಿಣೆ ಕಡ್ಡಾಯವಿಲ್ಲ. ಊರುನಾಯಕ ಮತ್ತು ಮ್ಯಾಸನಾಯಕರಲ್ಲಿ ವೈವಾಹಿಕ ಸಂಬಂಧ ನಡೆಯುವುದಿಲ್ಲ ಹಾಗೂ ಮ್ಯಾಸನಾಯಕರು ಕೋಳಿ ತಿನ್ನುವುದಿಲ್ಲ. ಹಿಂದೂ ಸಂಪ್ರದಾಯದ ಮುಖ್ಯವಾದ ಹಬ್ಬಗಳನ್ನು ನಾಯಕ ಜನಾಂಗದವರು ಆಚರಿಸುತ್ತಾರೆ. ತಮ್ಮ ಮನೆದೇವರ ಜಾತ್ರೆಗಳಲ್ಲಿ ಇವರು (ಪೋತರಾಜ) ಗಾಂವ್‌ಮರಿ (ಗಾವು) ಸಿಗಿಯುವುದು ಹಿಂದಿನ ಕಾಲದಿಂದ ನಡೆದುಕೊಂಡು ಬಂದಿರುವ ಆಚರಣೆಯಾಗಿದೆ. ಇವರು ವಾಲ್ಮೀಕಿ ಜಯಂತಿಯನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ತಾಲ್ಲೂಕಿನ ಒಟ್ಟು ೧೩೭ ಹಳ್ಳಿಗಳಲ್ಲಿ ಇವರು ನೆಲೆಸಿದ್ದಾರೆ. ಹೊಸದುರ್ಗದಲ್ಲಿ 'ವಾಲ್ಮೀಕಿ ಸಮುದಾಯಭವನ', 'ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ', 'ತಾಲ್ಲೂಕು ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘ' ಇವೆ. ಹೊಸದುರ್ಗದ ದುರ್ಗಾಂಬಿಕಾದೇವಿ, ಕಂಚೀಪುರದ ವರದರಾಜಸ್ವಾಮಿಯ ಪೂಜಾರರಾಗಿ ಈ ಜನಾಂಗದವರು ಕಾರ್ಯನಿರ್ವಹಿಸುತ್ತಾರೆ. ಮೃತಪಟ್ಟವರನ್ನು ಹೂಳುವ ಅಥವಾ ದಹನ ಮಾಡುವ ಪದ್ಧತಿಗಳಿವೆ. ತಾಲ್ಲೂಕಿನ ಜಾನಕಲ್ಲು ಗ್ರಾಮವು ಚಿತ್ರದುರ್ಗವನ್ನಾಳಿದ ವೀರಮದಕರಿ ನಾಯಕನ ಜನ್ಮಸ್ಥಳ. ಕ್ರಿ.ಶ.೧೭–೧೮ನೇಯ ಶತಮಾನಗಳಲ್ಲಿ ಮತ್ತೋಡು ಸಂಸ್ಥಾನವನ್ನಾಳಿದ ಪಾಳೆಯಗಾರರು ಮೂಲತಃ ನಾಯಕ ಜನಾಂಗದವರು (ತದನಂತರ ಅವರು ವೀರಶೈವರಾದರು).

ಕೆಲ್ಲೋಡು ಶಾಸನದಲ್ಲಿ ತಳವಾರ ಮಲುಮಾದಿ ನಾಯಕನ ಹೆಸರಿದೆ. ಕ್ರಿ.ಶ.೧೭ನೇಯ ಶತಮಾನದ ಸಿರುಮನ ಸಾಂಗತ್ಯದಲ್ಲಿ 'ಹೆಗ್ಗರೆಯ ತಳವಾರವೀರ'ನ ಹೆಸರಿದೆ.

## ನಾಯ್ಡು

ಕಮ್ಮನಾಯ್ಡು, ಬಲಿಜನಾಯ್ಡು, ರೆಡ್ಡಿ ಎಂದೂ ಇವರ ಕುಲ ನಾಮಗಳಿವೆ. ಸುಮಾರು ೪೦೦ ವರ್ಷಗಳಿಂದ ಇವರು ಈ ತಾಲ್ಲೂಕಿನಲ್ಲಿ ನೆಲೆಸಿದ್ದಾರೆ. ಆಂಧ್ರಪ್ರದೇಶದ ಚಿತ್ತೂರು ಕಡೆಯಿಂದ ಬಂದವರೆಂದು ಇವರು ಹೇಳಿಕೊಳ್ಳುತ್ತಾರೆ. ಇವರ ಮೂಲವೃತ್ತಿ ವ್ಯವಸಾಯವಾಗಿದ್ದು, ಈಗಿನ ವೃತ್ತಿಗಳು ಗುತ್ತಿಗೆ ಕೆಲಸಗಳು, ವ್ಯಾಪಾರ, ಡೈರಿ, ರಿಯಲ್ ಎಸ್ಟೇಟ್ ಮುಂತಾದವುಗಳಾಗಿವೆ. ಇವರ ಮಾತೃಭಾಷೆ ತೆಲುಗು ಆಗಿದ್ದು, ವ್ಯಾವಹಾರಿಕ ಭಾಷೆಯಾಗಿ ಕನ್ನಡವನ್ನು ಆಡುವರು. ಇವರಲ್ಲಿ ಬಂಡೆರು, ಬೀನೀಡಿ, ಸೋನೀಡಿ, ಎನ್ನಮುಂದಲ, ಕರ್ನವಾರು, ಮಾಸಾರ್ಪು ಇತ್ಯಾದಿ ಒಟ್ಟು ೧೫ ಗೋತ್ರಗಳಿವೆ. ತಿರುಪತಿ ವೆಂಕಟೇಶ್ವರ ಸ್ವಾಮಿ, ನಂಜನಗೂಡು ನಂಜುಂಡೇಶ್ವರ ಇವರ ಮನೆದೇವರುಗಳು ಹಾಗೂ ಇವರು ಮಾಂಸಾಹಾರಿಗಳು. ಬೇರೆ ಗೋತ್ರಗಳಲ್ಲಿ ವೈವಾಹಿಕ ಸಂಬಂಧ ನಡೆಸುತ್ತಾರೆ. ವಧುವಿನ ಮನೆಯಲ್ಲಿ ಮದುವೆ ನಡೆಯುತ್ತದೆ. ಹಿಂದೂ ಸಂಪ್ರದಾಯದ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ. ಬಲ್ಲಾಳ ಸಮುದ್ರ, ಉಳ್ಳಾಗೊಂದಿ, ಕೆಲ್ಲೋಡು, ಹೊಸದುರ್ಗ, ಹುಣವಿನೋಡು ಮತ್ತು ಕಲ್ಕೆರೆ ಈ ಸ್ಥಳಗಳಲ್ಲಿ ನಾಯ್ಡು ಜನಾಂಗದವರು ನೆಲೆಸಿದ್ದಾರೆ. ಹೊಸದುರ್ಗದಲ್ಲಿ 'ತಾಲ್ಲೂಕು ಕಮ್ಮವಾರಿ ಸಂಘ' ವಿದೆ. ಬಲ್ಲಾಳ ಸಮುದ್ರದಲ್ಲಿ ಇವರ ಜನಾಂಗದ ಸಮುದಾಯ ಭವನವಿದೆ. ಕರಿಯಮ್ಮದೇವಿ, ಕೊಲ್ಲಾಪುರದಮ್ಮ ಮತ್ತು ಉಮಾಮಹೇಶ್ವರಿ ದೇವರುಗಳಿಗೂ ನಡೆದುಕೊಳ್ಳುವರು. ಇವರ ಜನಾಂಗದಲ್ಲಿ ಮೃತಪಟ್ಟವರನ್ನು ದಹನ ಮಾಡುವರು.

## ನೊಳಂಬ

ಈ ಜನಾಂಗದವರನ್ನು 'ನೊಳಂಬ ವೀರಶೈವ' ಎಂದು ಕರೆಯುವ ರೂಢಿ ಇದೆ. ಹೆಂಜೇರು-ಹೇಮಾವತಿ-ಆಂಧ್ರದಿಂದ ಸುಮಾರು ೩೦೦ ವರ್ಷಗಳ ಹಿಂದೆ ಈ ಕಡೆಗೆ ಬಂದು ನೆಲೆಸಿದ್ದಾರೆ. ಇವರ ಮೂಲ ಕಸುಬು ವ್ಯವಸಾಯ. ಈಗ ಇವರ ವೃತ್ತಿಯೆಂದರೆ: ವ್ಯವಸಾಯ, ವ್ಯಾಪಾರ, ನೌಕರಿ ಇತ್ಯಾದಿ. ಇವರ ಮಾತೃಭಾಷೆ ಕನ್ನಡ. ಇವರಲ್ಲಿರುವ ಕೊಲಗಳು: ಹೂವಿನರು, ಚಿನಕನಹಳ್ಳೇರು, ನೆಲ್ಲರು, ಮಳಲೆರು, ಗೋವಿನವರು, ನಾಮದವರು, ಹುಳಿಸೊಪ್ಪಿನರು, ಹುಲಿಯರು ಮುಂತಾದವು. ಸಿದ್ದರಾಮೇಶ್ವರ, ತಿರುಪತಿ ತಿಮ್ಮಪ್ಪ, ಬನಶಂಕರಿ, ಬಸವೇಶ್ವರ, ಮಲಿಯಮ್ಮ, ಗವಿರಂಗನಾಥಸ್ವಾಮಿ, ಆಂಜನೇಯ, ವೀರಭದ್ರೇಶ್ವರ, ಕಲ್ಲೇಶ್ವರ ಇವು ಅವರ ಮನೆದೇವರುಗಳು. ಗುರುಸಿದ್ಧರಾಮೇಶ್ವರ (ಸೋಲಾಪುರ) ಇವರ ಕುಲದೈವವಾಗಿದೆ. ಗುರುಪೀಠಗಳ ಹೆಸರು: ನಂದಿಗುಡಿ ಮಠ, ಹರಿಹರ ತಾ॥, ಪುಷ್ಪಗಿರಿ, ಕೆರೆಗೋಡು ರಂಗಾಪುರ, ತಮ್ಮಡಿಹಳ್ಳಿ ಮತ್ತು ಬಾಳೇಹೊನ್ನೂರು ಆಗಿದೆ.

ಮಗು ಹುಟ್ಟಿದ ತಕ್ಷಣ ಲಿಂಗಾಧಾರಣೆ ಮಾಡುವ ಸಂಪ್ರದಾಯ ಇವರಲ್ಲಿದೆ. ಇವರು ಮುಖ್ಯವಾದ ಎಲ್ಲಾ ಹಿಂದೂ ಹಬ್ಬಗಳೊಂದಿಗೆ, ಸಿದ್ಧರಾಮ ಜಯಂತಿ ಹಾಗೂ ಸಂಕ್ರಾಂತಿ ಹಬ್ಬ ವಿಶೇಷವಾಗಿ ಆಚರಿಸುವರು. ಇವರಲ್ಲಿ ಮೃತಪಟ್ಟವರನ್ನು ಹೂಳುವ ಅಥವಾ ದಹನ ಮಾಡುವ ಎರಡೂ ಪದ್ಧತಿಗಳಿವೆ. ಈ ಜನಾಂಗದಲ್ಲಿ ಬೇರೆ ಕುಲದವರೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಜಂಗಮರು ಇವರಿಗೆ ಪೌರೋಹಿತ್ಯ ವಹಿಸುತ್ತಾರೆ. ವರದಕ್ಷಿಣೆ ಪದ್ಧತಿ ಇವರಲ್ಲಿಲ್ಲ. ವಧುವಿನ ಮನೆಯಲ್ಲಿ ಮದುವೆ ನಡೆಯುವುದು.

**ಪಂಚಮಸಾಲಿ**

ಇವರಲ್ಲಿ ಒಂದೇ ಪಂಗಡವಿದೆ. ಐದು ಪೀಠದವರನ್ನು 'ಗೋತ್ರ ಪುರುಷರು' (ವೀರ ಗೋಪುರದವರು ಇತ್ಯಾದಿ) ಎನ್ನುತ್ತಾರೆ. ಈ ಜನಾಂಗದವರು ಗುಡ್ಡದನೇರಲಕೆರೆ, ಮತ್ತೋಡು, ಕಂಚೀಪುರ, ಕಿಟ್ಟದ್ಹಾಳು, ಚಿಕ್ಕಬ್ಯಾಲದಕೆರೆ, ಸೋಮೇನಹಳ್ಳಿ, ನಾಗನಾಯ್ಕನಕಟ್ಟೆ, ದೇವಪುರ, ಆನಿವಾಳ, ಶೆಟ್ಟಿಹಳ್ಳಿ, ಹಾಗಲಕೆರೆ, ಮೆಣಸಿನೋಡು, ಮಧುರೆ, ಗೊರವಿಕಲ್ಲು, ತಂಡಗ, ಮೈಲಾರಪುರ, ಬೆಲಗೂರು, ಹೊಸದುರ್ಗ, ಕಂಗುವಳ್ಳಿ, ಹೊಸದುರ್ಗ ರೋಡ್, ತಣಿಗೆಕಲ್ಲು, ಪಂಚಕಳಸದ ಹೂಡಿ ಮುಂತಾದ ಗ್ರಾಮಗಳಲ್ಲಿ ನೆಲೆಸಿದ್ದಾರೆ. ಧಾರ್ಮಿಕ ಕಾರ್ಯ ಮಾಡುವವನು ಇವರಲ್ಲಿ ವಿಶೇಷ. ಪಂಚಪೀಠಗಳು ಇವರಿಗೆ ಗುರುಪೀಠಗಳು. ಹೊಸದುರ್ಗದ ವೀರಭದ್ರ, ಹಾಗಲಕೆರೆ ಕಲ್ಲೇಶ್ವರ, ಬೆಲಗೂರು ಪ್ರಸನ್ನ ರಾಮೇಶ್ವರ, ಹಾಲು ರಾಮೇಶ್ವರ ಮುಂತಾದ ದೇವರಿಗೆ ನಡೆದುಕೊಳ್ಳುತ್ತಾರೆ. ಗಂಡು ಮಕ್ಕಳು ದೇವರ ಕೆಂಡ ಹಾಯುತ್ತಾರೆ. ಒಂದು ಪೀಠದವರು ಬೇರೆ ಪೀಠದವರೊಂದಿಗೆ ವೈವಾಹಿಕ ಸಂಬಂಧ ಮಾಡುತ್ತಾರೆ. ಇವರಲ್ಲಿ ಮೃತರ ದೇಹವನ್ನು ಹೂಳುತ್ತಾರೆ (ದಹನ ಪದ್ಧತಿ ಇಲ್ಲ). ಒಮ್ಮೆ ಶವ ಸಂಸ್ಕಾರ ಮಾಡಿ ಬಂದರೆ ಮತ್ತೆಂದು ಸಮಾಧಿ ಹತ್ತಿರ ಹೋಗುವುದಿಲ್ಲ. ಇವರಲ್ಲಿ ವಿವಾಹ ಮಾಡಿಸಲು ಜಂಗಮರು ಪೌರೋಹಿತ್ಯ ವಹಿಸುತ್ತಾರೆ.

**ಬೆಸ್ತ**

ಇವರದು ಭೀಷ್ಮಸಂತಾನ ಎನ್ನಲಾಗಿದೆ. ಇವರಿಗೆ ಗಂಗಾಮತ, ಸುಣ್ಣಗಾರ ಮುಂತಾದ ಹೆಸರುಗಳಿವೆ. ಇವರು ಸುಮಾರು ೪೦೦ ವರ್ಷಗಳ ಹಿಂದೆ ಈ ಪ್ರದೇಶಕ್ಕೆ ಬೇರೆಡೆಯಿಂದ ಬಂದು ನೆಲೆಸಿದ್ದಾರೆ. ಇವರ ಮೂಲವೃತ್ತಿ ಮೀನುಗಾರಿಕೆ ಮತ್ತು ಸುಣ್ಣ ಸುಡುವುದು ಆಗಿದ್ದು, ಈಗ ಸುಣ್ಣ ಸುಡುವುದರೊಂದಿಗೆ ವ್ಯಾಪಾರ, ವ್ಯವಸಾಯ ಮತ್ತು ನೌಕರಿಗಳನ್ನು ಅವಲಂಬಿಸಿದ್ದಾರೆ. ಅಲ್ಲದೇ ಇವರ ಆಡುಭಾಷೆ ಕನ್ನಡವಾಗಿದೆ. ಇವರಲ್ಲಿ ಸಣ್ಣಕ್ಕಿ, ಗಂಟಾಲೆ, ನಲ್ಲರು, ಶೆಟ್ಟಿಹಳ್ಳಿಯವರು, ಸೇವಂತಿಗೆ,

ಮುಚ್ಚಳ ಮುಂತಾದ ಬೆಡಗುಗಳಿವೆ. ತಿರುಪತಿ ತಿಮ್ಮಪ್ಪ ಮತ್ತು ಹೊರಕೆರೆ ದೇವರಪುರ ಲಕ್ಷ್ಮೀರಂಗನಾಥಸ್ವಾಮಿ ಮತ್ತು ಆದ್ರಿಕಟ್ಟೆ ಹೂಲಮ್ಮದೇವಿ, ಆಂಧ್ರದ ಹೇಮಾವತಿ ಕ್ಷೇತ್ರದ ಹೆಂಜಾರು ಸಿದ್ಧೇಶ್ವರ ಇವು ಇವರ ಮನೆದೇವರುಗಳು. ಇವರ ಕುಲದೇವರು ಗಂಗಾಮಾತೆ. ಇವರ ಗುರುಪೀಠ ಬಳ್ಳಾರಿಯಲ್ಲಿದ್ದದ್ದು, ಈಗ ಹಾವೇರಿ ಜಿಲ್ಲೆಗೆ ಸ್ಥಳಾಂತರಗೊಂಡಿದೆ (ರಾಣೆಬೆನ್ನೂರು ಹತ್ತಿರ). ಬೆಡಗುಗಳ ಆಧಾರದಲ್ಲಿ ವಿವಾಹ ಸಂಬಂಧ ಮಾಡುವರು. ಇವರ ಮಾತೃಭಾಷೆ ಕನ್ನಡವಾಗಿದೆ. ಹೊಸದುರ್ಗದಲ್ಲಿ ವರ್ಷಕ್ಕೊಮ್ಮೆ ಗಂಗಾಮಾತೆಯ ಉತ್ಸವ ಆಚರಿಸುತ್ತಾರೆ. ಶ್ರೀರಾಮಪುರದಲ್ಲಿ ಈ ಜನಾಂಗದವರ ಶ್ರೀ ಗಂಗಾಮಾತೆ ದೇವಸ್ಥಾನ ಹಾಗೂ ಸಮುದಾಯ ಭವನ ಇದೆ. ಹಿಂದೂ ಸಂಪ್ರದಾಯದಂತೆ ಎಲ್ಲಾ ಮುಖ್ಯವಾದ ಹಬ್ಬಗಳನ್ನು ಆಚರಿಸುವ ಇವರು ಮಾಂಸಾಹಾರಿಗಳು. ಮೃತಪಟ್ಟವರನ್ನು ಹೂಳುವ ಪದ್ಧತಿ ಇವರಲ್ಲಿದೆ. ಹೊಸದುರ್ಗ, ಮತ್ತೋಡು, ಆದ್ರಿಕಟ್ಟೆ, ಶ್ರೀರಾಮಪುರ, ಸೂಜಿಕಲ್ಲು ಮುಂತಾದೆಡೆ ಈ ಜನಾಂಗದವರಿದ್ದಾರೆ.

**ಬಂಜಾರ**

ಲಂಬಾಣಿ ಜನಾಂಗ ಎಂಬ ಹೆಸರೂ ಇವರಿಗಿದೆ. ಈ ಜನಾಂಗವನ್ನು ಪರಿಶಿಷ್ಟಜಾತಿ ಗುಂಪಿಗೆ ಸೇರಿಸಲಾಗಿದ್ದು, ತಾಲ್ಲೂಕಿನ ಜಾನಕಲ್ಲು, ಕಂಚೀಪುರ, ಕಿಟ್ಟದಾಳು, ಬುಕ್ಕಸಾಗರ, ತಂಡಗ, ಗುತ್ತಿಕಟ್ಟೆ, ಹೆಬ್ಬಳ್ಳಿ, ಚಿನ್ನಾಪುರ, ಕೃಷ್ಣಾಪುರ, ಗೊಲ್ಲರಹಳ್ಳಿ, ನಾಗನಾಯ್ಕನಕಟ್ಟೆ, ಆಲದಹಳ್ಳಿ, ಕೊಂಡಜ್ಜಿ ಮುಂತಾದೆಡೆ ಲಂಬಾಣಿ ಹಟ್ಟಿಗಳಲ್ಲಿ ಈ ಜನಾಂಗದವರು ನೆಲೆಸಿದ್ದಾರೆ. ಝೂತ್ ಮತ್ತು ಬುಕ್ಯಾ ಇವರಲ್ಲಿರುವ ಪಂಗಡಗಳು. ಈ ಎರಡೂ ಪಂಗಡದವರು ಪರಸ್ಪರ ವೈವಾಹಿಕ ಸಂಬಂಧ ಮಾಡಿಕೊಳ್ಳುವರು. ದೀಪಾವಳಿ, ಹೋಳಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಇವರ ಹೆಣ್ಣುಮಕ್ಕಳ ವೇಷಭೂಷಣಗಳು ವಿಶಿಷ್ಟವಾಗಿರುತ್ತವೆ (ಸಾಂಪ್ರದಾಯಿಕ). ಇವರಲ್ಲಿ ಹೆಣ್ಣುಮಕ್ಕಳು ಹಬ್ಬಗಳಲ್ಲಿ ಮದುವೆಗಳಲ್ಲಿ ನೃತ್ಯ ಮಾಡುತ್ತಾರೆ. ಸೇವಾಲಾಲ್ ಮತ್ತು ಬಾಲಾಜಿ ಇವರ ದೇವರು. ಇವರ ಗುರುಗಳು ಚಿತ್ರದುರ್ಗದಲ್ಲಿದ್ದಾರೆ. ಇತ್ತೀಚೆಗೆ ಇವರ ವೇಷಭೂಷಣಗಳಲ್ಲಿ ಬದಲಾವಣೆಗಳಾಗಿವೆ. ಹಬ್ಬ-ಹರಿದಿನಗಳಲ್ಲಿ ತಮ್ಮ ವಿಶೇಷ ವೇಷಭೂಷಣ ತೊಡುತ್ತಾರೆ. ಮೃತರಾದವರನ್ನು ದಹನಮಾಡುವ ಪದ್ಧತಿ ಇವರಲ್ಲಿದೆ.

**ಬ್ರಾಹ್ಮಣ**

ತಾಲ್ಲೂಕಿನಲ್ಲಿ ಹಿಂದೂ ತ್ರಿಮತಸ್ಥ ಬ್ರಾಹ್ಮಣರಿದ್ದಾರೆ (ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳವರು). ಹೊಸದುರ್ಗ, ಮತ್ತೋಡು, ಶ್ರೀರಾಂಪುರ, ಬಾಗೂರು, ಬೆಲಗೂರು,

ಮಳಲಿ ಮುಂತಾದೆಡೆ ಬ್ರಾಹ್ಮಣ ಕುಟುಂಬಗಳು ನೆಲೆಸಿವೆ. ಅದ್ವೈತ ಮತಸ್ಥರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಊಟ ಉಪಚಾರಕ್ಕೆ ಇವರು ಪ್ರಾಶಸ್ತ್ಯ ನೀಡುತ್ತಾರೆ. ಹಿಂದೂ ಪದ್ಧತಿ ಇರುವ ಬೇರೆ ಜಾತಿಯವರ ಮನೆಗಳಿಗೂ ಪೂಜೆ, ಪೌರೋಹಿತ್ಯ ಮಾಡುವುದಕ್ಕೆ ಹೋಗುವರು. ಮಳಲಿ ತಾಮ್ರಶಾಸನದಲ್ಲಿ ಮತ್ತು ಮತ್ತೋಡು ತಾಮ್ರಶಾಸನದಲ್ಲಿ ಅಗ್ರಹಾರಗಳಲ್ಲಿದ್ದ ಅನೇಕ ಬ್ರಾಹ್ಮಣ ವಿದ್ವಾಂಸರುಗಳ ಹೆಸರು ಹಾಗೂ ಕುಲಗೋತ್ರಗಳನ್ನು ಹೇಳಲಾಗಿದೆ.

ಬ್ರಾಹ್ಮಣರಲ್ಲಿ ಮೃತಪಟ್ಟವರನ್ನು ಸುಡುವ ಪದ್ಧತಿ ಇದೆ. ೧೧ ದಿನ ಶೌಚ, ೧೧ನೇ ದಿನದಿಂದ ಕರ್ಮಾದಿಗಳು ಹಾಗೂ ೧೩ನೇ ದಿನ ಬಳಗದವರಿಗೆ ಅನ್ನಶಾಂತಿ ನಡೆಸಲಾಗುತ್ತದೆ. ಇವರಲ್ಲಿ ಶ್ರಾದ್ಧಕರ್ಮಗಳಿಗೆ ಬಹು ಪ್ರಾಶಸ್ತ್ಯವಿದೆ. ಬಡವರೂ ಸಹ ಅವುಗಳನ್ನು ಆಚರಿಸಲೇಬೇಕು. ಶ್ರಾದ್ಧಕರ್ಮಗಳು ಇವರಿಗೆ ಹಬ್ಬಕ್ಕಿಂತಲೂ ಹೆಚ್ಚು ಶ್ರೇಷ್ಠ. ತಾಲ್ಲೂಕಿನ ಬ್ರಾಹ್ಮಣರು ಮುಖ್ಯವಾಗಿ ಕೆಲ್ಲೋಡು ಆಂಜನೇಯ, ಬೆಲಗೂರು ಪ್ರಾಣದೇವರು, ಹೊನ್ನೇನಹಳ್ಳಿ ಆಂಜನೇಯ ದೇವರುಗಳಿಗೆ ನಡೆದುಕೊಳ್ಳುತ್ತಾರೆ.

## ಭಾವಸಾರ ಕ್ಷತ್ರಿಯ

ಹಿಂದೂ ಧರ್ಮೀಯರಾದ ಇವರು, ೩೦೦ ವರ್ಷಗಳ ಹಿಂದೆ ಮಹಾರಾಷ್ಟ್ರದ ಕಡೆಯಿಂದ ವಲಸೆ ಬಂದು ತಾಲ್ಲೂಕಿನ ಹೊಸದುರ್ಗ, ಬೆಲಗೂರು, ಮತ್ತೋಡು, ಕಂಚೀಪುರ, ಮಾರುಗೊಂಡನದಿಬ್ಬ, ದೊಡ್ಡತೇಕಲವಟ್ಟಿ ಸ್ಥಳಗಳಲ್ಲಿ ನೆಲೆಸಿದ್ದು, ಈ ಜನಾಂಗದ ಒಟ್ಟು ೧೦೫ ಕುಟುಂಬಗಳಿದ್ದು, ಇವರ ಕಸುಬು ಬಟ್ಟೆ ಹೊಲೆಯುವುದು ಹಾಗೂ ವ್ಯಾಪಾರ, ನೌಕರಿಯಲ್ಲೂ ಕೆಲವರಿದ್ದಾರೆ. ಮರಾಠಿ ಇವರ ಮಾತೃಭಾಷೆಯಾಗಿದ್ದು, ವ್ಯಾವಹಾರಿಕ ಭಾಷೆ ಕನ್ನಡವಾಗಿದೆ. ಇವರಲ್ಲಿ ಜಿಗಾಂಡಿ, ಅಗಾಸ್ತಿ, ಗಾದರ್ಭಿ, ದುರ್ವಾಣಿ, ಪಿಲಿ, ಗಣಪತಿ, ಅಂಗಿರಾ ಮುಂತಾದ ಒಂದು ನೂರು ಗೋತ್ರಗಳಿವೆ. ಪಂಡರಾಪುರದ ಪಾಂಡುರಂಗ, ತಿರುಪತಿ ತಿಮ್ಮಪ್ಪ, ದೇವರಗುಡ್ಡದ ಮೈಲಾರಲಿಂಗ ಇವರ ಮನೆದೇವರುಗಳು ಹಾಗೂ ಹುಬ್ಬಳ್ಳಿಯ ಹುಲುಗೆಮ್ಮ ಕುಲದೇವತೆ. ಇವರಲ್ಲಿ ಬೇರೆ ಗೋತ್ರದವರೊಂದಿಗೆ ವಿವಾಹ ನಡೆಸುತ್ತಾರೆ (ಮದುವೆಯು ವಧುವಿನ ಮನೆಯಲ್ಲಿ ನಡೆಯುವುದು). ಉಪಕರ್ಮ ಮತ್ತು ಮದುವೆಯಲ್ಲಿ (ವರ) ಹೊಸಜನಿವಾರ ಧರಿಸುವ ಪದ್ಧತಿ ಇದೆ. ಬ್ರಾಹ್ಮಣರು ಪೌರೋಹಿತ್ಯ ನಡೆಸಿಕೊಡುವರು. ಇವರಲ್ಲಿ ಕುಟುಂಬ ಸದಸ್ಯರು ಮೃತಪಟ್ಟರೆ ದಹನ ಮಾಡುತ್ತಾರೆ ಹಾಗೂ ೧೦ ರಿಂದ ೧೨ ದಿನದಲ್ಲಿ ಶ್ರಾದ್ಧ ಮಾಡುತ್ತಾರೆ. ಇವರು ಪಾಂಡುರಂಗ ದೇವರ ದಿಂಡಿ ಉತ್ಸವವನ್ನು ವಿಶೇಷವಾಗಿ ಆಚರಿಸುತ್ತಾರೆ. ಹೊಸದುರ್ಗದಲ್ಲಿ ಪಾಂಡುರಂಗವಿಠ್ಠಲ ದೇವಸ್ಥಾನ ಹಾಗೂ ಕಲ್ಯಾಣಮಂಟಪವಿದೆ. 'ತುಳಜಾ ಭವಾನಿ ಸೇವಾ ಟ್ರಸ್ಟ್' ಇದ್ದು, ತಮ್ಮ

ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಕಾರ್ಯಕ್ರಮ ಮುಂತಾದ ಸೇವೆಗಳು ಮಾಡುತ್ತಾರೆ.

**ಮಡಿವಾಳ**

ಇವರಿಗೆ ಅಗಸ ಎಂಬ ಮತ್ತೊಂದು ಹೆಸರಿದೆ. ಇವರ ಕುಲಕಸುಬು ಜನರ ಬಟ್ಟೆ ಮಡಿಮಾಡಿ ಕೊಡುವುದು. ಊರ ದೇವರಿಗೆ 'ಮಡಿ' ಹಾಸುವ ಸೇವೆ, ದೇವರಿಗೆ ದೀವಟಿಗೆ ಸೇವೆ ಸಲ್ಲಿಸುವುದು ಇತ್ಯಾದಿ ಆಗಿದ್ದಿತು. ಈಗ ದೋಬಿ ಅಂಗಡಿ ನಡೆಸುವುದರೊಂದಿಗೆ ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸುತ್ತಾರೆ. ಇವರಲ್ಲಿ ಬೆಡಗು-ಗೋತ್ರಗಳಿಲ್ಲ. ಮನೆದೇವರ ಲೆಕ್ಕದಲ್ಲಿ ವೈವಾಹಿಕ ಸಂಬಂಧ ಮಾಡುವರು. ಮನೆದೇವರು ಎರಡೂ ಕಡೆಯವರಲ್ಲಿ ಒಂದೇ ಆಗಿದ್ದಲ್ಲಿ ವಿವಾಹ ಸಂಬಂಧ ಮಾಡುವುದಿಲ್ಲ. ಉದಾಹರಣೆಗೆ: ತಿರುಪತಿ ವೆಂಕಟೇಶ್ವರನ ಒಕ್ಕಲು ಮೈಲಾರದೇವರ ಒಕ್ಕಲಿನೊಂದಿಗೆ ವಿವಾಹ ಸಂಬಂಧ ಮಾಡುತ್ತಾರೆ. ಇವರದು ವೈಷ್ಣವ ಪರಂಪರೆ. ಇವರ ಮನೆ ಶುಭ ಕಾರ್ಯಗಳಿಗೆ ಲಿಂಗಾಯ್ತ ಜಂಗಮರು ಪೌರೋಹಿತ್ಯ ವಹಿಸುವರು. ಇವರ ಕುಲದ ಮೂಲಪುರುಷ ಮಾಚಿದೇವ. ಹಿಂದಿನ ಕಾಲದಲ್ಲಿ ಬಾಗೂರಲ್ಲಿ 'ಮಡಿವಾಳಮಠ' ಇದ್ದಿತು. ಪ್ರಾಚೀನ ಕಾವ್ಯಗಳಲ್ಲಿ ಇವರನ್ನು 'ಅಸಗ' ಎನ್ನಲಾಗಿದೆ ('ಅಸಗ ತಡೆಬಡೆಗೊಂಬಂತೆ...'). ಕ್ರಿ.ಶ.೧೧೫೮ರ ಕುಣಿಗಲ್ ತಾಲ್ಲೂಕು ಕೊತ್ತಂಗೆರೆಯ ಶಾಸನದಲ್ಲಿ ಕೇಶವ ದೇವರಿಗೆ 'ಅಸಗಸುಂಕ'ವನ್ನು ದತ್ತಿ ಬಿಟ್ಟ ಬಗ್ಗೆ ಉಲ್ಲೇಖವಿದೆ. ಈ ಜನಾಂಗದಲ್ಲಿ ಶಿಕ್ಷಣಮಟ್ಟ ತುಂಬಾ ಕಡಿಮೆ ಇದೆ. ಇವರಲ್ಲಿ ಮೃತಪಟ್ಟವರನ್ನು ಹೂಳುವ ಪದ್ಧತಿ ಇದೆ.

**ಮರಾಠ**

ಇವರು ಶಿವಾಜಿ ವಂಶಸಂಜಾತರು. ತಾಲ್ಲೂಕಿನಲ್ಲಿ ಮಾತ್ರ ಈ ಜನಾಂಗದ ೨ ಕುಟುಂಬಗಳಿವೆ. ಇವರ ಮಾತೃಭಾಷೆ ಮರಾಠಿ, ವ್ಯಾವಹಾರಿಕ ಭಾಷೆ ಕನ್ನಡ. ಇವರು ಚಿತ್ರದುರ್ಗ ಮತ್ತು ಅಜ್ಜಂಪುರದಿಂದ ಕೆಲವು ದಶಕದ ಹಿಂದೆ ವಲಸೆ ಬಂದಿದ್ದಾರೆ. ಇವರ ಮೂಲವೃತ್ತಿ ಮಿಲ್ಟ್ರಿ ಹೋಟೆಲ್ ನಡೆಸುವುದು ಹಾಗೂ ಕೆಲವರು ನೌಕರಿಯಲ್ಲಿದ್ದಾರೆ. ಇವರು 'ಮೊಹರೆ' ಪಂಗಡಕ್ಕೆ ಸೇರಿದ್ದು, ಇವರ ಗೋತ್ರಗಳು: ಚವ್ಹಾಣರು, ಯಾದವ್, ಸೂರ್ಯವಂಶಿ, ಸುರಭಿ ಇತ್ಯಾದಿ ಒಟ್ಟು ೩೦ ಗೋತ್ರಗಳಿವೆ. ಇವರಲ್ಲಿ ಬೇರೆ ಬೇರೆ ಗೋತ್ರಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಇವರ ಮನೆದೇವರು ಶ್ರೀ ಪಲ್ಲಾರ ಸಿದ್ಧೇಶ್ವರ, ಎಮ್ಮೇಕಾ ಹಾಗೂ ಮೈಲಾರಲಿಂಗ. ಶಿವರಾತ್ರಿಯಲ್ಲಿ ಮನೆದೇವರ ದೇವಸ್ಥಾನಕ್ಕೆ ಹೋಗುತ್ತಾರೆ. ಹಿಂದೂ ಸಂಪ್ರದಾಯದಂತೆ ಎಲ್ಲಾ ಮುಖ್ಯ ಹಬ್ಬಗಳನ್ನು

ಆಚರಿಸುತ್ತಾರೆ. ಇವರಲ್ಲಿ ಮೃತಪಟ್ಟವರನ್ನು ಹೂಳುತ್ತಾರೆ.

**ಮಾದಿಗ**

ಇವರನ್ನು ಆದಿಜಾಂಬವರು, ಎಡಗೈನವರು, ಮಾತಂಗರು, ಪದ್ಮಜಾತಿಯವರು, ಪಂಚಮರು, ಚಮ್ಮಾರರು ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಚರ್ಮ ಹದಮಾಡುವುದು, ಹಲಗೆ, ಪಾದರಕ್ಷೆ ಮೊದಲಾದ ಚರ್ಮ ಪರಿಕರಗಳನ್ನು ಸಿದ್ಧಗೊಳಿಸುವುದು ಜೊತೆಗೆ ಕೃಷಿ ಉಪಕರಣಗಳಾದ ಮಿಣಿ, ಬಾರುಕೋಲು ಮೊದಲಾದವುಗಳನ್ನು ತಯಾರಿಸುವುದು ಇವರ ಮುಖ್ಯ ಕಸುಬು. ಇವರಲ್ಲಿ ದಂಡಿನ ಮಾದಿಗರು, ಇದ್ದಿಲ ಮಾದಿಗರು, ಕನ್ನಡ ಮಾದಿಗರು, ತೆಲುಗು ಮಾದಿಗರು ಮುಂತಾದ ಒಳಪ್ರಭೇದಗಳಿವೆ.

ಇವರಲ್ಲಿ ಅನೇಕ ಕೊಲ (ಕುಲ) ಗಳಿವೆ: ಮಲ್ಲರು, ಬುದ್ಧಿವಂತರು, ಐಹೊಳೆಯರು, ಎಲುಬಿನರು, ಕುರಿಯರು, ಹೆಗಡೆರು, ಹಟ್ಟೇರು, ಹಂಡೇರು, ಗುಜ್ಜಲರು, ಬಟ್ಟಲರು, ಬೆಳ್ಳೇರು ಮುಂತಾದ ನೂರಾರು ಕೊಲಗಳಿವೆ. ಕ್ರಿ.ಶ.೧೫೨೩ ಬಾಗೂರಿನ ಶಾಸನದಲ್ಲಿ "ಹೊಲೆಮಾದಿಗರು" ಎಂಬ ಉಲ್ಲೇಖವಿದೆ.

ಚಿಕ್ಕಜಾಜೂರಿನ ಕ್ರಿ.ಶ.೧೬೬೪ರ ಶಾಸನದಲ್ಲಿ 'ಮಾದಿಗರ ಹನುಮನ ಮಗ ಬಾಲು' ಎಂಬ ಉಲ್ಲೇಖವಿದೆ (ಗೌಡನ 'ಗೌಡಿಕೆ'ಯ ಅಧಿಕಾರದ ಮಾರಾಟಕ್ಕೆ ಬಾಲು ಸಾಕ್ಷಿದಾರರ ಲ್ಲೊಬ್ಬನಾಗಿದ್ದನು). ಕಂಚೀಪುರದಲ್ಲಿ ಯುಗಾದಿ ನಂತರ ನಡೆಯುವ ಕಂಚೀದೇವರ ತೇರಿನ ನಂತರ ೨ನೇ ದಿನ ಕಂಚೀದೇವರಿಗೆ ಮಣೇಗಾರರ ಉತ್ಸವ ನಡೆಯುತ್ತದೆ. ಕಂಚೀಪುರ, ದೊಡ್ಡ ಬ್ಯಾಲದ ಕೆರೆ ಹಾಗೂ ಚಿಕ್ಕ ಬ್ಯಾಲದ ಕೆರೆ ಗ್ರಾಮಗಳ ಪರಿಶಿಷ್ಟ ಜಾತಿಯ ಮಣೆಗಾರರು ಈ ಉತ್ಸವ ನಡೆಸಿ ಭೂತಪ್ಪಗೆ 'ಮರಿಸೇವೆ' ಮಾಡುತ್ತಾರೆ. ೩ ವರ್ಷಕ್ಕೊಮ್ಮೆ ನಡೆಯುವ ಗವಿರಂಗನಾಥ ಸ್ವಾಮಿ ಜಾತ್ರೆ (ತೇರು) ನಿಮಿತ್ತ ಕಾರ್ಯಕ್ರಮಗಳಲ್ಲಿ ಹರಿಜನರ ವಸಂತ ಸೇವೆಯೂ ಒಂದು. ಹೊನ್ನೇನ ಹಳ್ಳಿಯಲ್ಲಿ ಜರುಗುವ ಕೆರಳಮ್ಮ ದೇವಿಯ ಆರತಿ ಬಾನೋತ್ಸವದಲ್ಲಿ ಹರಿಜನ ಹೆಣ್ಣುಮಕ್ಕಳು ಶ್ರದ್ಧಾ ಭಕ್ತಿಯಿಂದ ಆರತಿ ಹೊರುತ್ತಾರೆ. ಬೂದಾಳು ಅವಧೂತ ಶ್ರೀಗುರು ಪರಪ್ಪಸ್ವಾಮಿ ಜಾತ್ರೋತ್ಸವದಲ್ಲೂ ಈ ಜನಾಂಗದವರು ಸೇವೆ ಸಲ್ಲಿಸುತ್ತಾರೆ. ಮಾದಿಗ ಜನಾಂಗದವರ ಮನೆದೇವರು ಹಾಗೂ ಕುಲದೇವರು ಕಬ್ಬಳದ ಮಾತೆಂಗಮ್ಮ, ದೊಡ್ಡಘಟ್ಟದ ದುರ್ಗಮ್ಮ, ಗೂಳೀಹಟ್ಟಿ ಮಾರಮ್ಮ ಆಗಿವೆ. ಇವರು ಹಟ್ಟಿಮಾರಮ್ಮನ ಪರಿಷೆಯನ್ನು ವಿಶೇಷವಾಗಿ ಆಚರಿಸುವರು. ಇವರ ಮಾತೃಭಾಷೆ ಕನ್ನಡ. ಹೊಸದುರ್ಗದ ಕೊಬ್ಬರಿ ಪೇಟೆಯಲ್ಲಿ ಆದಿಜಾಂಬವ ವಿದ್ಯಾರ್ಥಿ ನಿಲಯವಿದ್ದು, ಈ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮುಂತಾದ ಕಾರ್ಯಗಳನ್ನು ಇಲ್ಲಿ ಸಂಘದ ವತಿಯಿಂದ ನಡೆಸುತ್ತಾರೆ.

**ರೆಡ್ಡಿ ಲಿಂಗಾಯತರು**

'ದೇವಪುರ, ಕೆಲ್ಲೋಡು, ಕಂಚೀಪುರ, ಬೆಲಗೂರು, ಮತ್ತೋಡು, ಗುಡ್ಡದ ನೇರಲಕೆರೆ, ಕಿಟ್ಟದ ಹಳ್ಳಿ ಮುಂತಾದೆಡೆ ಇವರು ನೆಲೆಸಿದ್ದಾರೆ. ಇವರ ಸ್ವಾಮಿಗಳಿಗೆ ದುರ್ಗದ ಮುರುಘಾ ಶರಣರು ದೀಕ್ಷೆ ನೀಡಿದ್ದಾರೆ.

**ಮೇದ**

ಪರಿಶಿಷ್ಟ ಪಂಗಡಕ್ಕೆ ಸೇರಿರುವ ಈ ಜನಾಂಗದವರು, ನೂರಾರು ವರ್ಷಗಳ ಹಿಂದೆ ಆಂಧ್ರದಿಂದ ಪಾವಗಡ ಮೂಲಕ ಇಲ್ಲಿಗೆ ಬಂದು ನೆಲೆಸಿದ್ದಾರೆ. ಇವರ ಕುಲಕಸುಬು ಬಿದಿರಿನಿಂದ ಕುಕ್ಕೆ, ಮೊರ, ತೊಟ್ಟಿಲು ಮುಂತಾದವನ್ನು ಹೆಣೆಯುವುದು. ಈಗಿನ ವೃತ್ತಿಯು ಬೊಂಬು, ಅಡಿಕೆ ಮರ, ಸರ್ವೆಮರ ಮುಂತಾದವುಗಳನ್ನು ತಂದು ಮಾರಾಟ ಮಾಡುವುದಾಗಿರುತ್ತದೆ. ಕನ್ನಡವೇ ಈಗ ಇವರ ಮಾತೃಭಾಷೆ. ಇವರಲ್ಲಿ ನಾಯಕ ಮತ್ತು ಗೌಡ ಎಂಬ ಪಂಗಡಗಳಿವೆ. ಆಂಧ್ರದ ಕದರಿಯ ನರಸಿಂಹಸ್ವಾಮಿ ಇವರ ಮನೆದೇವರು. ಹೊಸದುರ್ಗದ ಕುಕ್ಕವಾಡೇಶ್ವರಿ ಕುಲದೇವರೆಂದು ನಡೆದುಕೊಳ್ಳುತ್ತಾರೆ. ಚಿತ್ರದುರ್ಗದ ಬಳಿಯ ಶೀಬಾರದಲ್ಲಿ ಇವರಿಗೆ ಮೇದಾರ ಗುರುಪೀಠ (ಶ್ರೀಬಸವಪ್ರಭು ಕೇತೇಶ್ವರ ಸ್ವಾಮೀಜಿ) ಮಠ ಇದೆ. ೧೦ ವರ್ಷದಿಂದ ಈ ಪೀಠ ಅಸ್ತಿತ್ವಕ್ಕೆ ಬಂದಿದೆ. ಹೊಸದುರ್ಗ ಪಟ್ಟಣದಲ್ಲಿ ಈ ಜನಾಂಗದವರು ಇದ್ದು, ಮಾಂಸಾಹಾರಿಗಳಾಗಿದ್ದಾರೆ. ಪ್ರತಿವರ್ಷ ಡಿಸೆಂಬರ್‌ನಲ್ಲಿ 'ಎಳೆಬಿದಿರು ಧೂಪದಸೇವೆ' ಎಂಬ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ನಂತರವಷ್ಟೇ ಬಿದಿರು ಕಡಿದು ಮಾರಾಟ ಪ್ರಾರಂಭಿಸುತ್ತಾರೆ. ಇವರಲ್ಲಿ ವರದಕ್ಷಿಣೆ ಇಲ್ಲ. ಜನಾಂಗದ ಬೇರೆ ಗೋತ್ರದವರೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಅಲ್ಲದೆ ಇವರಲ್ಲಿ ವಧುವಿನ ಮನೆಯಲ್ಲಿ ಮದುವೆ ನಡೆಯುವುದು ರೂಢಿ. ಇವರಲ್ಲಿ ಮೃತರಾದವರನ್ನು ಹೂಳುವ ಅಥವಾ ದಹನ ಮಾಡುವ ಸಂಪ್ರದಾಯವಿದೆ.

**ಮೊದಲಿಯರ್**

ಇವರನ್ನು ಅಗಮುಡಿ ಮೊದಲಿಯಾರ್ ಎನ್ನುತ್ತಾರೆ. ಇವರು ಸುಮಾರು ೧೨೦ ವರ್ಷಗಳ ಹಿಂದೆ ತಮಿಳುನಾಡಿನ ವೇಲೂರಿನಿಂದ ವಲಸೆ ಬಂದು ಇಲ್ಲಿ ನೆಲೆಸಿದ್ದಾರೆ. ಹಿಂದಿನ ಕಾಲದಲ್ಲಿ ವ್ಯವಸಾಯ ಮಾಡುತ್ತಿದ್ದ ಇವರು, ಈಗ ವ್ಯಾಪಾರ, ಕಾಂಟ್ರ್ಯಾಕ್ಟ್ ಕೆಲಸ ಹಾಗೂ ಸರ್ಕಾರಿ ಕೆಲಸದಲ್ಲಿದ್ದಾರೆ. ಇವರ ಮಾತೃಭಾಷೆ ತಮಿಳು. ವ್ಯಾವಹಾರಿಕ ಭಾಷೆ ಹಾಗೂ ಶೈಕ್ಷಣಿಕ ಭಾಷೆ ಕನ್ನಡ. ತಿರುಪತಿ ತಿಮ್ಮಪ್ಪನನ್ನು ಮನೆ ದೇವರಾಗಿ ಆರಾಧಿಸುವ ಇವರು ಶಿವಮೊಗ್ಗದ ಗುಡ್ಡೇಕಲ್‌ನ ಸುಬ್ರಹ್ಮಣ್ಯ ಸ್ವಾಮಿಯನ್ನು ಕುಲದೇವರನ್ನಾಗಿ ಪೂಜಿಸುತ್ತಾರೆ. ವಿಷ್ಣುಗೋತ್ರ ಮತ್ತು ಶಿವಗೋತ್ರ ಎಂದು ಇವರಲ್ಲಿ

ಎರಡು ಗೋತ್ರ (ಪಂಗಡ) ಇವೆ. ಮಾಂಸಾಹಾರಿಗಳಾಗಿರುವ ಇವರು ವಧು–ವರರ ಜಾತಕ ನೋಡಿ ವಿವಾಹ ಸಂಬಂಧದ ಬಗ್ಗೆ ನಿರ್ಧರಿಸುತ್ತಾರೆ. ಗೋತ್ರ–ಬೆಡಗು ಇಲ್ಲ. ಇವರು ಜನವರಿಯಲ್ಲಿ ಸಂಕ್ರಾಂತಿಯನ್ನು 'ಪೊಂಗಲ್ ಹಬ್ಬ'ವೆಂಬ ಹೆಸರಿನಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ಇವರು ಸೌರಮಾನ ಯುಗಾದಿ, ಗೌರಿ–ಗಣೇಶ, ದೀಪಾವಳಿ ಇತ್ಯಾದಿ ಅನೇಕ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಈ ಜನಾಂಗದಲ್ಲಿ, ಹಿರಿಯ ಮಗ ಅಥವಾ ಹಿರಿಯ ಮಗಳು ಮೃತಪಟ್ಟರೆ ದಹನ ಮಾಡುತ್ತಾರೆ. ಇತರ ಯಾರೇ ಮೃತಪಟ್ಟರೆ ಹೂಳುತ್ತಾರೆ.

**ರಜಪೂತ್ (ಕ್ಷತ್ರಿಯ)**

ಎರಡು ಶತಮಾನಗಳ ಹಿಂದೆ ಇವರು ರಾಜಾಸ್ಥಾನದಿಂದ ವಲಸೆ ಬಂದು ನೆಲೆಸಿದ್ದಾರೆ. ಇವರ ಮಾತೃಭಾಷೆ ಹಿಂದಿ. ವ್ಯಾವಹಾರಿಕ ಭಾಷೆ ಕನ್ನಡ. ಶಿಕ್ಷಣವನ್ನು ಕನ್ನಡದಲ್ಲಿ ಪಡೆಯುತ್ತಾರೆ. ತಿರುಪತಿ ತಿಮ್ಮಪ್ಪ ಇವರ ಮನೆದೇವರು ಹಾಗೂ ಕುಲದೇವತೆಯಾಗಿ ದೇವಿಯನ್ನು ಆರಾಧಿಸುತ್ತಾರೆ. ಇವರಲ್ಲಿ ಕಶ್ಯಪ್, ಚಾಂದ್ರಮಾನ, ಬಚ್, ವಶಿಷ್ಟ ಇತ್ಯಾದಿ ೧೨ ಬಗೆಯ ಗೋತ್ರಗಳಿವೆ. ಹಿಂದೂ ಸಂಪ್ರದಾಯದಂತೆ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಇವರಲ್ಲಿ ಭಿನ್ನಗೋತ್ರದೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಇವರ ಮೂಲವೃತ್ತಿ ವ್ಯವಸಾಯ. ವ್ಯಾಪಾರ ಮತ್ತು ನೌಕರಿಯಲ್ಲೂ ಇದ್ದಾರೆ. ವಧುವಿನ ಮನೆಯಲ್ಲಿ ಮದುವೆ ನಡೆಯುತ್ತದೆ. ಶುಭಕಾರ್ಯಗಳ ಪೌರೋಹಿತ್ಯಕ್ಕೆ ಬ್ರಾಹ್ಮಣರನ್ನು ಆಹ್ವಾನಿಸುತ್ತಾರೆ. ಮಾಂಸಾಹಾರಿಗಳಾಗಿರುವ ಇವರು ಪಿತೃಪಕ್ಷದಲ್ಲಿ 'ಹಿರಿಯರ ಪೂಜೆ' ನಡೆಸುತ್ತಾರೆ. ಮೃತಪಟ್ಟವರನ್ನು ದಹನ ಮಾಡುತ್ತಾರೆ. ಹೊಸದುರ್ಗ, ಓಬಳಾಪುರ, ಶ್ರೀರಾಂಪುರ ಈ ಸ್ಥಳಗಳಲ್ಲಿ ನೆಲೆಸಿದ್ದಾರೆ.

**ಲಾಡ**

ಸುಮಾರು ಮೂರುನೂರು ವರ್ಷಗಳ ಹಿಂದೆ ಗುಜರಾತ್ ಕಡೆಯಿಂದ ಬಂದು ನೆಲೆಸಿದ್ದಾರೆ. ಇವರದು ಮರಾಠಿ–ಹಿಂದಿ ಮಿಶ್ರಿತ ಮಾತೃಭಾಷೆಯಾಗಿದ್ದು ಲಿಪಿ ಇರುವುದಿಲ್ಲ. ಕೃಷಿ ಮತ್ತು ವ್ಯಾಪಾರ ಇವರ ಮೂಲ ಕಸುಬಾಗಿದ್ದು, ಇತ್ತೀಚೆಗೆ ಕೆಲವರು ನೌಕರಿಗೂ ಸೇರಿದ್ದಾರೆ. ಆಡುಭಾಷೆ ಮತ್ತು ಶಿಕ್ಷಣ ಮಾಧ್ಯಮ ಕನ್ನಡವಾಗಿದೆ. ಇವರಲ್ಲಿ ಭಾರದ್ವಾಜ್, ನಗರಕರ್, ಮುರುತ್‌ಕರ್ ಪಾರ್ಗವ ಮುಂತಾದ ಸುಮಾರು ೧೫ ಗೋತ್ರಗಳಿವೆ. ಇವರಲ್ಲಿ ಎಲಿಗಾರ್ ಲಾಡ್, ಲಾಡರ್ ಮುಂತಾದ ೨೦ ಕ್ಕೂ ಹೆಚ್ಚು ಒಳಪಂಗಡಗಳಿವೆ ಎನ್ನಲಾಗಿದೆ. ಸೌದತ್ತಿ ಯಲ್ಲಮ್ಮ ಇವರ ಮನೆದೇವರು ಹಾಗೂ ಅಂಬಾಭವಾನಿ ಕುಲದೇವತೆಯಾಗಿರುವಳು. ತಾಲ್ಲೂಕಿನಲ್ಲಿ ಹೊಸದುರ್ಗ ಮತ್ತು ಬೆಲಗೂರಿನಲ್ಲಿ ನೆಲೆಸಿರುತ್ತಾರೆ. ಇವರಲ್ಲಿ ಮೃತಪಟ್ಟವರನ್ನು ದಹನ ಮಾಡುವರು.

ಬೆಲಗೂರಿನಲ್ಲಿ ಅಂಬಾಭವಾನಿ ದೇವಸ್ಥಾನ ನಿರ್ಮಿಸಿದ್ದಾರೆ. ಇವರು ಮಾಂಸಾಹಾರಿಗಳು. ಗೋತ್ರಗಳ ಆಧಾರದಲ್ಲಿ ವಿವಾಹ ಸಂಬಂಧ ಮಾಡುವರು. ಈ ಜನಾಂಗದ ಗಂಡಸರು ಜನಿವಾರ ಧರಿಸುವ ಸಂಪ್ರದಾಯವಿದೆ. ಹಿಂದೂ ಸಂಪ್ರದಾಯದಂತೆ ಎಲ್ಲಾ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ. ತಾಲ್ಲೂಕಿನ ಬೆಲಗೂರು ಗ್ರಾಮದಲ್ಲಿ ೨೦೦೬ ರಲ್ಲಿ ರಾಜ್ಯ ಕ್ಷತ್ರೀಯ ಲಾಡರ ಮಹಾ ಸಮ್ಮೇಳನ ಜರುಗಿತು.

## ವಡ್ಡ

ಇವರನ್ನು ಭೋವಿ, ಕಲ್ಲುಕುಟಿಗ ಎಂಬ ಹೆಸರಿನಿಂದಲೂ ಕರೆಯುವರು. ಇವರಲ್ಲಿ ಕಲ್ಲುವಡ್ಡರು, ಮಣ್ಣು ವಡ್ಡರು, ಎತ್ತಿನ ವಡ್ಡರು ಎಂಬ ಪಂಗಡಗಳಿವೆ. ಕಲ್ಲು, ಮಣ್ಣು ಮತ್ತು ಬೇಸಾಯ ವೃತ್ತಿಯ ಆಧಾರದಲ್ಲಿ ಈ ವರ್ಗಗಳು ಏರ್ಪಟ್ಟಿವೆ. ಕತ್ತೆ ವಡ್ಡರು, ಹಂದಿವಡ್ಡರು ಎಂಬ ವರ್ಗಗಳೂ ಇವೆ. ಹಿಂದಿನ ಕಾಲದಲ್ಲಿ ಇವರು ಆಂಧ್ರದ ಕಡೆಯಿಂದ ಇಲ್ಲಿಗೆ ವಲಸೆ ಬಂದಿದ್ದಾರೆ. ಇವರ ಮಾತೃಭಾಷೆ ತೆಲುಗು, ವ್ಯಾವಹಾರಿಕ ಭಾಷೆ ಮತ್ತು ಶಿಕ್ಷಣ ಮಾಧ್ಯಮ ಕನ್ನಡವಾಗಿದೆ. ಇವರ ಮೂಲ ಕಸುಬು ಮಣ್ಣು ಅಗೆಯುವುದು, ಮನೆಕಟ್ಟುವುದು, ಕಲ್ಲುಹೊಡೆಯುವುದು, ವ್ಯವಸಾಯವಾಗಿದ್ದು ನೌಕರಿಯಲ್ಲೂ ಕೆಲವರಿದ್ದಾರೆ. ಮಾಂಸಾಹಾರಿಗಳಾದ ಇವರಲ್ಲಿ ದಂಡಗಲರು, ಹಾಲುಕುಂಟರು, ಪೀಟ್ಲರು, ವಲ್ಲೆಪರು, ಮಲ್ಯೆವರು, ಶಲ್ಯೆವರು, ಸಂಪಂಗಿಯರು, ಗೊಡ್ಡಳ್ಳೆರು, ಇರಗದಿಂಡ್ಲವರು, ರ್‍ಯಾತನರು, ಗುಂಪಲರು, ದ್ಯಾರಂಗ್ಲರು, ಬಂಡೆರು, ಪಂದಿಬಟ್ಲರು, ಕುಂಚುಪರು, ಗುಂಜೆಡರು ಮುಂತಾದ ಗೋತ್ರಗಳಿದ್ದು, ಬೇರೆ–ಬೇರೆ ಗೋತ್ರಗಳಲ್ಲಿ ವಿವಾಹ ಸಂಬಂಧ ಬೆಳೆಸುತ್ತಾರೆ. ಭೋವಿ ಗುರುಪೀಠ ಶಾಖಾಮಠ ಚಿತ್ರದುರ್ಗದಲ್ಲಿದ್ದು, ಮೂಲ ಮಠವು ಬಾಗಲಕೋಟೆಯಲ್ಲಿದೆ. ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಇವರ ಗುರುಗಳು. ತಾಲ್ಲೂಕಿನ ಒಟ್ಟು ೪೯ ಗ್ರಾಮ/ಹಟ್ಟಿಗಳಲ್ಲಿ ಈ ಜನಾಂಗದ 'ಸಿದ್ಧರಾಮೇಶ್ವರ ಸಹಕಾರ ಸಂಘ' ಇದೆ. ಜನಾಂಗದಲ್ಲಿ ಮೃತಪಟ್ಟವರನ್ನು ಹೂಳುವ ರೂಢಿ ಇದೆ. ಇವರ ಮನೆ ದೇವರು/ಕುಲದೇವರು ಸಿದ್ಧರಾಮೇಶ್ವರ. ಈ ಜನಾಂಗದವರು ಯುಗಾದಿ ಮತ್ತು ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಿಶ್ವಕರ್ಮ

ಚಿನ್ನ, ಕಂಚು, ಕಬ್ಬಿಣ, ಮರ ಮತ್ತು ಶಿಲೆ ಈ ಐದು ರೀತಿಯ ಸಾಮಗ್ರಿಗಳಲ್ಲಿ ಕಲಾತ್ಮಕ ಕೆತ್ತನೆ ಕೆಲಸ ಮಾಡುವ ಅಕ್ಕಸಾಲಿಗ, ಕಂಚುಗಾರ, ಕಮ್ಮಾರ, ಬಡಗಿ ಮತ್ತು ಶಿಲ್ಪಿಗಳನ್ನು 'ಪಾಂಚಾಳರು', ಆಚಾರಿಗಳು ಅಥವಾ ವಿಶ್ವಕರ್ಮರು

ಎನ್ನುವರು. ತಾಲ್ಲೂಕಿನಲ್ಲಿ ವಿಶ್ವಕರ್ಮ ಜನಾಂಗ ಹೊಸದುರ್ಗ, ಮಧುರೆ, ದೇವಿಗೆರೆ, ಕಂಗುವಳ್ಳಿ, ಬೋಕಿಕೆರೆ, ಕೊರಟಿಕೆರೆ, ಅರಳಹಳ್ಳಿ, ಮಾರಬಘಟ್ಟ, ಜಾನಕಲ್ಲು, ಕುರುಬರ ಹಳ್ಳಿ ಮುಂತಾದೆಡೆ ನೆಲೆಸಿದ್ದಾರೆ. ಇವರ ಮಾತೃಭಾಷೆ ಕನ್ನಡ. ಇವರು ಶತಮಾನಗಳಿಂದ ತಾಲ್ಲೂಕಿನಲ್ಲಿದ್ದಾರೆ. ಇವರ ಮನೆದೇವರು ವೀರಭದ್ರ ಆಗಿದ್ದು, ಇವರಲ್ಲಿ ಸನಾತನ, ಪ್ರಶ್ನಸ, ಸುಪರ್ಣಸ, ಸಾನಗ, ಅಬುವನೆಸ ಮುಂತಾದ ಗೋತ್ರಗಳಿವೆ. ಇವರ ಗುರುಮಠ ಆನೆಗೊಂದಿ ಸಂಸ್ಥಾನದಲ್ಲಿದೆ. ಕುಲದೇವತೆ ಕಾಳಿಕಾದೇವಿಯಾಗಿದ್ದು, ಕಾಳಿಕಾದೇವಿ ಉತ್ಸವ ಮಾಡುತ್ತಾರೆ. ಸೆಪ್ಟೆಂಬರ್‌ನಲ್ಲಿ ವಿಶ್ವಕರ್ಮ ಪೂಜಾ ಮಹೋತ್ಸವ ಮಾಡುವರು. ಇವರ ಮನೆಗಳಲ್ಲಿ ನಡೆಯುವ ಶುಭ ಕಾರ್ಯಗಳಿಗೆ ಬುರುಡೇ ಕಟ್ಟೆ ವೇದಮೂರ್ತಿಸ್ವಾಮಿಗಳು ಪೌರೋಹಿತ್ಯ ವಹಿಸುತ್ತಾರೆ. ಗದಗ್ ಜಿಲ್ಲೆಯ ವರವಿಯಲ್ಲಿರುವ ಮೌನೇಶ್ವರಗೆ ಮತ್ತು ಶಿರಸಂಗಿಯ ಕಾಳಿಕಾಂಬಾಗೆ ಈ ಜನಾಂಗದವರು ಯಾತ್ರೆ ಹೋಗುವರು. ಇವರ ಮೂಲವೃತ್ತಿ ಚಿನ್ನ, ಬೆಳ್ಳಿ ಕೆಲಸ (ದೇವರ ಮುಖಪದ್ಮ ತಯಾರಿಕೆ ಇತ್ಯಾದಿ) ವಾಗಿದ್ದು, ಇವರ ಇನ್ನಿತರ ವೃತ್ತಿಗಳೆಂದರೆ: ಟೈಲರಿಂಗ್, ಶಿಲ್ಪಕೆತ್ತನೆ, ಬಡಗಿತನ, ಆಭರಣದ ಅಂಗಡಿ, ವ್ಯವಸಾಯ ಆಗಿವೆ. ಇವರ ಗುರುಪೀಠವು ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ಅರಮಾದನ ಹಳ್ಳಿಯಲ್ಲಿದ್ದು, ಶ್ರೀ ಶಿವಸುಜ್ಞಾನ ಮಹಾಸ್ವಾಮಿಗಳು ಈ ಮೂಲಪೀಠದ ಪಟ್ಟಾಧ್ಯಕ್ಷರಾಗಿದ್ದಾರೆ. ಹೊಸದುರ್ಗ ತಾಲ್ಲೂಕಿನ ವಿಶ್ವಕರ್ಮ ಜನಾಂಗದ ಕೈನಡು ಭಾಸ್ಕರಾಚಾರ್, ಸೂರಾಚಾರ್, ಹೊಸದುರ್ಗ ಎಚ್.ಸಿ.ಕಾಳಾಚಾರ್ ಇವರುಗಳು ಸ್ವಾತಂತ್ರ್ಯ ಹೋರಾಟಗಾರರಾಗಿ ದೇಶ ಪ್ರೇಮ ಮೆರೆದಿರುತ್ತಾರೆ.

ಹಿಂದಿನ ಕಾಲದಲ್ಲಿ ಬಾಗೂರಿನ ಬಡಗಿಗಳು ಈ ಸೀಮೆಯಲ್ಲಿ ಹೆಸರಾಗಿದ್ದರು. ಕ್ರಿ.ಶ.೧೫೩೫ರ ಬೂದಿಹಾಳು ಶ್ರೀರಾಂಪುರ ಶಾಸನದಲ್ಲಿ ಪ್ರಧಾನಿ ಬಯಕಾರ ರಾಮಪ್ಪಯ್ಯನು ಅಕ್ಕಸಾಲೆ ಸುಂಕವನ್ನು ರದ್ದುಪಡಿಸಿದನೆಂದು ಉಲ್ಲೇಖವಿದೆ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನ್ಯಾಯ ಪಂಚಾಯಿತಿ ನಡೆಸುವ ಸಂದರ್ಭದಲ್ಲಿ ಹಾಜರಿರುತ್ತಿದ್ದ ೧೨ ಜನ ಕೈವಾಡದಾರರಲ್ಲಿ ಅಕ್ಕಸಾಲಿಗನಿಗೂ ಸ್ಥಾನವಿದ್ದ ಬಗ್ಗೆ ದಾಖಲೆ ಇದೆ. ಕ್ರಿ.ಶ.೧೬೬೪ರ ಚಿಕ್ಕಜಾಜೂರು ಶಾಸನದಲ್ಲಿ, ಅಕ್ಕಸಾಲಿಗರ ಬೈರಂಣನ ಮಗ ಚಿಕ್ಕಂಣನ ಹೆಸರು ಉಲ್ಲೇಖಗೊಂಡಿದೆ. ಕ್ರಿ.ಶ.೧೧೫೮ರ ಕುಣಿಗಲ್ ತಾಲ್ಲೂಕು ಕೊತ್ತಂಗೆರೆ ಶಾಸನದಲ್ಲಿ ಬಡಗಿ ಸುಂಕವನ್ನು ಕೇಶವ ದೇವರಿಗೆ ದತ್ತಿ ಬಿಟ್ಟ ಬಗ್ಗೆ ಹೇಳಲಾಗಿದೆ.

### ವೀರಶೈವ

'ವೀರಶೈವರು ಈಶ್ವರನನ್ನೇ ಮುಖ್ಯವಾಗಿ ಆರಾಧಿಸುವವರಾದರೂ, ಸ್ಥಾವರ ಲಿಂಗಕ್ಕಿಂತ ಇಷ್ಟಲಿಂಗಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಇವರ ಆಚರಣೆಗಳಲ್ಲಿ

ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳು ಮುಖ್ಯವಾಗುತ್ತವೆ. ಹೆಚ್ಚಿನ ಮಂದಿ ಬಸವೇಶ್ವರರನ್ನು ಒಪ್ಪಿಕೊಂಡಿರುವವರಾದರೂ ಬಸವಣ್ಣನವರಿಗಿಂತ ಹಿಂದಿನವರಾದ ರೇಣುಕ, ಪಂಡಿತಾರಾಧ್ಯ, ಮರುಳಾರಾಧ್ಯ, ಏಕೋರಾಮ, ವಿಶ್ವಾರಾಧ್ಯ ಈ ಪಂಚಾಚಾರ್ಯರೇ ಮುಖ್ಯರೆಂದು ಪರಿಗಣಿಸುತ್ತಾರೆ. ಜೊತೆಗೆ ಸಿದ್ದಲಿಂಗೇಶ್ವರ, ನಂಜುಂಡೇಶ್ವರ, ಮಹದೇಶ್ವರ, ವೀರಭದ್ರ, ಮಲ್ಲಿಕಾರ್ಜುನ, ಗಂಗಾಧರ, ಬಸವೇಶ್ವರ, ಮಂಜುನಾಥ ಮುಂತಾದ ದೇವರುಗಳನ್ನು ಮನೆದೇವರೆಂದು ಪೂಜಿಸುವರು. ತಾಲ್ಲೂಕಿನಲ್ಲಿ ವೀರಶೈವರ ಅಸಂಖ್ಯಾತ ದೇವಾಲಯಗಳಿವೆ. ದೇವರುಗಳಿಗೆ ಕೆಂಡ, ಗುಗ್ಗಳ, ಉತ್ಸವ, ಅಭಿಷೇಕ ಮುಂತಾದ ಸೇವೆ ಸಲ್ಲಿಸುತ್ತಾರೆ. ಹೊಸದುರ್ಗ ವೀರಭದ್ರ ದೇವರು, ಕಂಗುವಳ್ಳಿ ಮಹೇಶ್ವರ ದೇವರು, ಮತ್ತೋಡು ಮತ್ತು ಮಧುರೆ ಸಿದ್ಧರಾಮೇಶ್ವರ ದೇವರುಗಳು, ಬಾಗೂರಿನ ಸಂಣಕ್ಕಿ ವೀರಭದ್ರ ಮುಂತಾದ ದೇವರುಗಳು ಉಲ್ಲೇಖನೀಯ.

ಕ್ರಿ.ಶ.೧೭-೧೮ನೇ ಶತಮಾನದಲ್ಲಿ ಮತ್ತೋಡು ಸಂಸ್ಥಾನವನ್ನು ಆಳಿದ ಪಾಳೆಯಗಾರರು ಕಾಶಿಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಮಠ ನಿರ್ಮಿಸಿದರಲ್ಲದೆ ಅವರಿಂದ ದೀಕ್ಷೆ ಪಡೆದು ವೀರಶೈವ ಮತವನ್ನು ಸ್ವೀಕರಿಸಿದರು. ಅಲ್ಲದೆ, ತಮ್ಮ ಸೊಸೆಯಾಗಿ ಬಂದ ದುರ್ಗದ ಹೆಣ್ಣುಮಗಳಿಗೆ (ಸಿದ್ದಪ್ಪ ನಾಯಕನ ಪತ್ನಿ) ವೀರಶೈವ ದೀಕ್ಷೆ ನೀಡಿ ಮತಾಂತರ ಮಾಡಿದರು. ಇಂದಿಗೂ ಈ ಪಾಳೆಯಗಾರರ ವಂಶಸ್ಥರಿದ್ದು, ವೀರಶೈವರಾಗಿಯೇ ಉಳಿದಿದ್ದಾರೆ.

## ವೈಶ್ಯ

ಶೆಟ್ಟರು, ಕೋಮಟಿ, ಶ್ರೇಷ್ಠಿ, ಗುಪ್ತ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇವರ ಮೂಲವೃತ್ತಿ ವ್ಯಾಪಾರ, ಕೃಷಿ ಇತ್ಯಾದಿ. ಇವರದು ವೈದಿಕ ಸಂಪ್ರದಾಯ. ಇವರಲ್ಲಿ ಮಾಲಕುಲ, ಕಾಶ್ಯಪ, ಪೈಡಕುಲ, ಮಿಥುನ ಕುಲ ಮುಂತಾದ ಅನೇಕ ಗೋತ್ರಗಳಿದ್ದು, ಗೋತ್ರಗಳ ಆಧಾರದಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸುವರು. ಮದುವೆಯ ಹಿಂದಿನ ದಿನ ಉಪನಯನ ಮಾಡುತ್ತಾರೆ. ಕನ್ಯಕಾ ಪರಮೇಶ್ವರಿ ಇವರ ಕುಲದೇವತೆ. ವಾಸವಿ ಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ತಾಲ್ಲೂಕಿನಲ್ಲಿ ಶ್ರೀರಾಂಪುರ, ಬೆಲಗೂರು, ಹೊಸದುರ್ಗ ಮುಂತಾದ ಊರುಗಳಲ್ಲಿ ಇವರು ನೆಲೆಸಿದ್ದು, ಇವರಲ್ಲಿ ಮೃತಪಟ್ಟವರನ್ನು ದಹನ ಮಾಡುವ ಸಂಪ್ರದಾಯವಿದೆ. ವೈಷ್ಣವ ಹಾಗೂ ಶೈವ ಎರಡೂ ದೇವರುಗಳನ್ನು ಇವರು ಆರಾಧಿಸುವರು. ಕ್ರಿ.ಶ.೧೦೬೫ರ ನೀರಗುಂದ ಶಾಸನದಲ್ಲಿ, ಪ್ರಭು ನಲ್ಲಸೆಟ್ಟಿಯು ನೀರಗುಂದ ನಾಡಿನ ನಖರ ಮುಮ್ಮರಿ ದಂಡಗಳೆಂಬ ವಾಣಿಜ್ಯ ಸಂಘಗಳ ನೇತೃತ್ವ ವಹಿಸಿಕೊಂಡು ಅಲ್ಲಿನ ಸಿದ್ಧನಾಥ ದೇವರಿಗೆ ಅನೇಕ ಸುಂಕಗಳನ್ನು ದತ್ತಿ ನೀಡಿದನೆಂಬ ಬಗ್ಗೆ ಉಲ್ಲೇಖವಿದೆ.

ಕಬ್ಬಿನಕೆರೆ ಗ್ರಾಮದ ಬಾವಿಯ ಬಳಿ ಇರುವ ಮನ್ಮಥ ಸಂವತ್ಸರದ ಶಾಸನದಲ್ಲಿ ಕೋಮಟಿಗರ ಕೌಸಿಗ ರಾಮಸೆಟ್ಟಿಯ ಮಗ ಕಿರಿಮಲ್ಲಿ ಸೆಟ್ಟಿಯು ಧರ್ಮಾರ್ಥವಾಗಿ ಬಾವಿಯನ್ನು ತೋಡಿಸಿದನೆಂದು ಇದೆ. ಅಂಗಡಿ ಸುಂಕವನ್ನು ಕೇಶವ ದೇವರಿಗೆ ದತ್ತಿ ನೀಡಿದ ಬಗ್ಗೆ ಕುಣಿಗಲ್ ತಾಲ್ಲೂಕಿನ ಕೊತ್ತಂಗೆರೆಯ ಕ್ರಿ.ಶ.೧೧೫೮ರ ಶಾಸನವು ಹೇಳಿದೆ. ಹೊಸದುರ್ಗದಲ್ಲಿ ಕನ್ಯಕಾ ಪರಮೇಶ್ವರಿ ದೇವಸ್ಥಾನ ಹಾಗೂ ವಾಸವಿ ಕಲ್ಯಾಣ ಮಂಟಪ ಇದೆ. ಭೀಮನ ಅಮಾವಾಸ್ಯೆ, ಆಷಾಢ ಶುಕ್ರವಾರ, ವರಮಹಾಲಕ್ಷ್ಮಿ ಮುಂತಾದ ಹಬ್ಬಗಳನ್ನು ಹಾಗೂ ಇನ್ನುಳಿದಂತೆ ಮುಖ್ಯ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಮೇಲುಕೋಟೆ ಚೆಲುವನಾರಾಯಣ, ತಿರುಪತಿ ವೆಂಕಟೇಶ್ವರ ಮುಂತಾದ ದೇವರುಗಳನ್ನು ಆರಾಧಿಸುವರು. ಪಾಳೆಯಗಾರರ ಕಾಲದಲ್ಲಿ ಆತ್ಮಬಲಿದಾನ ಮಾಡಿಕೊಂಡಿರುವ ಭೂಪಾಳಂ ಮನೆತನದ ವೈಶ್ಯ ಹೆಣ್ಣು ಮಗಳ ಸ್ಮಾರಕವಾದ ‘ಬಿಳಿದೇವರ ಗುಡಿ’ಯು ಬಾಗೂರಿನಲ್ಲಿದೆ.

**ಶೀಲವಂತ ಲಿಂಗಾಯಿತ**

ಭಂಡಾರಿ, ಕ್ಷೌರಿಕ, ಶೀಲವಂತ, ಕೆಲಸಿಗ ಮುಂತಾದ ಹೆಸರುಗಳಿಂದ ಇವರನ್ನು ಕರೆಯುತ್ತಾರೆ (ತೆಲುಗು ಕ್ಷೌರಿಕರಿಗೆ ನಾಯಿಂದ ಎನ್ನುವರು). ಇವರ ಕುಲಕಸುಬು ಕ್ಷೌರಿಕ ವೃತ್ತಿ. ದೇವಸ್ಥಾನಗಳಲ್ಲಿ ಉತ್ಸವಕ್ಕೆ ಹಾಗೂ ಮದುವೆ ಮನೆ/ಛತ್ರಗಳಲ್ಲಿ ಮದುವೆ ಕಾರ್ಯಕ್ಕೆ ಕರಡೇ ವಾದ್ಯ ನುಡಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಟೈಲರಿಂಗ್, ವ್ಯವಸಾಯ, ಕಿರಾಣಿ ಅಂಗಡಿ, ಬಾಳೇಕಾಯಿ ವ್ಯಾಪಾರ ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇವರ ಮನೆ ದೇವರುಗಳು ಹೊಸದುರ್ಗ ವೀರಭದ್ರದೇವರು, ಸೂಜಿಕಲ್ಲು ಮೈಲಾರಲಿಂಗ ಹಾಗೂ ಕುಲದೇವರು ತಿರುಪತಿ ತಿಮ್ಮಪ್ಪ. ಇಷ್ಟೇ ಅಲ್ಲದೇ ರಾಮಲಿಂಗೇಶ್ವರ, ಧರ್ಮಸ್ಥಳ ಮಂಜುನಾಥಸ್ವಾಮಿ, ಚಿಕ್ಕಜಾಜೂರು ಬಳಿಯ ಬೆಟ್ಟ ಕಡೂರಿನ ವೀರಭದ್ರ ದೇವರುಗಳಿಗೂ ನಡೆದುಕೊಳ್ಳುವರು. ಹೊಸದುರ್ಗ ವೀರಭದ್ರ ದೇವರ ಕೆಂಡ (ಫೆಬ್ರವರಿ) ಕಾರ್ಯಕ್ಕೆ ಶ್ರದ್ಧಾಭಕ್ತಿಯಿಂದ ಭಾಗವಹಿಸುವರು. ಇವರ ಮನೆಗಳ ಶುಭಕಾರ್ಯಗಳಿಗೆ ಜಂಗಮರು ಪೌರೋಹಿತ್ಯ ವಹಿಸುತ್ತಾರೆ. ಕರಡೇವಾದ್ಯ ಮತ್ತು ತಬಲವಾದ್ಯ ಕಲೆಯಲ್ಲಿ ಕೆಲವರಿಗೆ ಆಸಕ್ತಿ ಇದೆ. ಈ ಜನಾಂಗದವರು ಹೊಸದುರ್ಗ, ತುಂಬಿನಕೆರೆ, ದೇವಿಗೆರೆ, ಹೊನ್ನೇಕೆರೆ, ಬಾಗೂರು, ಅರಳಿಹಳ್ಳಿ, ಕಂಗುವಳ್ಳಿ, ಜಾನಕಲ್ಲು, ದೇವಪುರ, ಬೆಲಗೂರು, ಶ್ರೀರಾಂಪುರ ಮುಂತಾದ ನೂರಾರು ಸ್ಥಳಗಳಲ್ಲಿ ನೆಲೆಸಿದ್ದು, ಇವರಲ್ಲಿ ಮೃತರನ್ನು ಹೂಳುವ ಪದ್ಧತಿ ಇದೆ. ಹಿಂದೂ ಸಂಪ್ರದಾಯದ ಮುಖ್ಯವಾದ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಅಸುಗೂಸುಗಳ ಮೊದಲ ಮುಡಿ ತೆಗೆಯುವಾಗ, ಮದುವೆಗಳಲ್ಲಿ ಹಿಂದಿನ ದಿನ ಮದಲಿಂಗನ ಕ್ಷೌರ ಮಾಡುವಾಗ ಇವರಿಗೆ ವಿಶೇಷ ಮರ್ಯಾದೆ ದೊರೆಯುತ್ತದೆ. ಯಾವುದೇ ಜನಾಂಗದ ಪುರುಷರು ಮೃತಪಟ್ಟಾಗ ಶವದ ಮುಖ ಕ್ಷೌರವನ್ನೂ ಇವರಿಂದ ಮಾಡಿಸುವುದುಂಟು.

ಕೌಂಡಿನ್ಯ ಋಷಿಯು ನಾವಿದನೆಂದು ಬಸವಣ್ಣ ತಮ್ಮ ವಚನದಲ್ಲಿ ಹೇಳಿದ್ದಾರೆ. ಕ್ರಿ.ಶ.೧೫ನೇ ಶತಮಾನದಲ್ಲಿ ಬೂದಿಹಾಳು ಸಂಸ್ಥಾನವನ್ನು ಆಳಿದ ಸಿರುಮನಾಯಕನ ಸೇನಾಪಡೆಗಳಲ್ಲಿದ್ದ ಅಸಂಖ್ಯಾತ ವೀರರಲ್ಲಿ ಹಡಪದ ಹಲಗ, ಹಡಪದ ಸೋಮ, ನಾವಿಂದರ ದೇವುಗ ಎಂಬ ವೀರರು ಇದ್ದ ಬಗ್ಗೆ ಸಿರುಮನ ಸಾಂಗತ್ಯಗಳಲ್ಲಿ ವರ್ಣಿಸಲಾಗಿದೆ. ಕ್ರಿ.ಶ.೧೫ನೇ ಶತಮಾನದಲ್ಲಿ ವಿಜಯನಗರದ ಚಕ್ರವರ್ತಿ ಸದಾಶಿವರಾಯನ ಸಾಮಂತ ದೊರೆಯಾಗಿ ಹಡಪದ ಬೊಮ್ಮನಾಯಕನ ಮಗ ಹಡಪದ ಕೃಷ್ಣಪ್ಪ ನಾಯಕನು ಬಾಗೂರು ಸೀಮೆಯನ್ನು ಆಳಿದ ಬಗ್ಗೆ ಹಾಗೂ ಕ್ರಿ.ಶ.೧೫೪೬ರಲ್ಲಿ ಕೃಷ್ಣಪ್ಪ ನಾಯಕನು ಕ್ಷೌರಿಕ ಸುಂಕವನ್ನು ವಿನಾಯಿತಿ ಮಾಡಿದನೆಂದು ಬಾಗೂರಿನಲ್ಲಿರುವ ಶಿಲಾಶಾಸನ ತಿಳಿಸುತ್ತದೆ. ಮತ್ತೋಡಿನ ಪಾಳೆಯಗಾರನಾದ ದೊಡ್ಡಣ್ಣನಾಯಕ (ದೊಡ್ಡಾಲನಾಯಕ)ನು ಕ್ರಿ.ಶ.೧೬೭೧ರಲ್ಲಿ ತಮಗೆ ಬರಬೇಕಾಗಿದ್ದ ಕ್ಷೌರಿಕರ ಸುಂಕ ೧,೦೦೦ ವರಹವನ್ನು ಮನ್ನಾ ಮಾಡಿದುದಲ್ಲದೆ, ಇನ್ನು ಮುಂದೆಯೂ ಕ್ಷೌರ ಸುಂಕ ಇಲ್ಲವೆಂದು ಹೊರಡಿಸಿದ ಶಾಸನ ಮತ್ತೋಡಿನಲ್ಲಿದೆ (ಇದು ರುಬ್ಬುಗಲ್ಲಿನ ಮೇಲಿರುವ ಶಾಸನ). ಕ್ರಿ.ಶ.೧೫೫೫ರಲ್ಲಿ ಬಾಗೂರು ಚನ್ನಕೇಶವ ದೇವರಿಗೆ ಅನೇಕ ಗ್ರಾಮಗಳನ್ನು ದತ್ತಿ ನೀಡಿರುವ ಶಾಸನ ಬಾಗೂರಿನಲ್ಲಿದೆ. ಈ ದತ್ತಿಗಳನ್ನು ನೀಡಿರುವ ಕೊಂಡರಾಜ (ಕೊಂಡೋಜ) ನು ಸಹ ಕೃಷ್ಣಪ್ಪ ನಾಯಕನಂತೆಯೇ ಹಡಪದ ವಂಶಸ್ಥನೇ ಆಗಿದ್ದಾನೆ. ಹೀಗೆ ಹಿಂದಿನ ಕಾಲದ ಅನೇಕ ಶಾಸನಗಳಲ್ಲಿ (ಚಿಕ್ಕಜಾಜೂರು, ಕೊತ್ತಂಗೆರೆ, ಅರಕಲಗೂಡು ಇತ್ಯಾದಿ) ಕ್ಷೌರಿಕರ ಹಿರಿಮೆಯ ಅಂಶಗಳಿವೆ. ತಾಲ್ಲೂಕಿನಲ್ಲಿ ತೆಲುಗು ನಾಯಿಂದರು ಕಾರೇಹಳ್ಳಿ, ಹೊಸದುರ್ಗ ಮುಂತಾದೆಡೆ ಇದ್ದಾರೆ.

**ಶ್ವೇತಾಂಬರ್ ಜೈನ್(ಮಾರ್ವಾಡಿಗಳು)**

ಹೊಸದುರ್ಗ ಪಟ್ಟಣದಲ್ಲಿ ಮಾತ್ರ ಇವರು ನೆಲೆಸಿದ್ದಾರೆ. ಇವರು ರಾಜಾಸ್ಥಾನದಿಂದ ಇಲ್ಲಿಗೆ ವಲಸೆ ಬಂದು ನೆಲೆಸಿ, ವ್ಯಾಪಾರ, ವ್ಯವಸಾಯ, ತೋಟಗಾರಿಕೆಯಲ್ಲಿ ತೊಡಗಿದ್ದಾರೆ. ಭೋತ್ರ, ಕೊಠಾರಿ, ಗಾಂಧಿ, ಸಿಂಗ್ವಿ ಮುಂತಾದ ೩೫೦ ಗೋತ್ರಗಳಿವೆ. ರಾಜಾಸ್ಥಾನದ ಓಸ್ಯಾಮಾತಾಜಿ ಇವರ ಮನೆದೇವರು. ವರ್ಷಕ್ಕೊಮ್ಮೆ ಹಾಗೂ ಮದುವೆ ನಡೆದಾಗ, ಮಗುವಾದಾಗ ಅಲ್ಲಿಗೆ ಹೋಗಿ ಬರುತ್ತಾರೆ. ಇವರ ಮಾತೃಭಾಷೆ ಹಿಂದಿ. ವ್ಯಾವಹಾರಿಕ ಹಾಗೂ ಶಿಕ್ಷಣ ಭಾಷೆ ಕನ್ನಡ. ಸ್ವಾರಸ್ಯವೆಂದರೆ ಇವರಲ್ಲಿ 'ವಧುದಕ್ಷಿಣೆ' ರೂಢಿಯಲ್ಲಿದೆ. ಅಲ್ಲದೆ, ಮದುವೆ ಕಾರ್ಯಗಳು ವರನ ಗೃಹದಲ್ಲಿ ನಡೆಯುತ್ತವೆ. ರಾಖಿ, ಹೋಳಿ, ನವರಾತ್ರಿ ಮುಂತಾದ ಮುಖ್ಯ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಇವರಲ್ಲಿ ಮರಣ ಹೊಂದಿದವರ ಶವವನ್ನು ದಹನ ಮಾಡುವ ಪದ್ಧತಿ ಇದೆ.

**ಸಮೆರಾಯ**

ಇವರಲ್ಲಿ ವೈಷ್ಣವ ಮತ್ತು ಶ್ರೀವೈಷ್ಣವ ಎಂಬ ಎರಡು ಪಂಗಡಗಳಿವೆ. ಇವರ ಕಸುಬು ಆಂಜನೇಯ ಮುಂತಾದ ದೇವರನ್ನು ಪೂಜೆ ಮಾಡುವುದಾಗಿದೆ. ಇವರ ಮನೆದೇವರು ತಿರುಪತಿ ತಿಮ್ಮಪ್ಪ, ಆಂಜನೇಯ ಮತ್ತು ನರಸಿಂಹಸ್ವಾಮಿ ದೇವರುಗಳು. ಗೋತ್ರಗಳ ಆಧಾರದಲ್ಲಿ ಮದುವೆ ಸಂಬಂಧ ಬೆಳೆಸುತ್ತಾರೆ. ಸಸ್ಯಾಹಾರಿಗಳಾಗಿರುವ ಇವರು ಜನಿವಾರ ಧರಿಸುತ್ತಾರೆ. ಹೊಸದುರ್ಗ, ಕೆಲ್ಲೋಡು, ಕಂಗುವಳ್ಳಿ, ಹೊನ್ನೇನಹಳ್ಳಿ ಮುಂತಾದ ಸ್ಥಳಗಳಲ್ಲಿ ಇವರು ನೆಲೆಸಿದ್ದಾರೆ.

**ಸರ್ಪ ಒಕ್ಕಲಿಗ**

ಇವರನ್ನು 'ಸಲುಪರು' ಎನ್ನುತ್ತಾರೆ. 'ಸಲುಪವಕ್ಕಲಿಗ' ಎಂಬುದೇ ಜನರ ಬಾಯಲ್ಲಿ ಸರುಪ ಅಥವಾ 'ಸರ್ಪವಕ್ಕಲಿಗ' ಎಂದಾಗಿದೆ. ಇವರಲ್ಲಿ ಎರಡು ಪಂಗಡಗಳಿವೆ: ಶೆಟ್ರು ಮತ್ತು ಲಾಢ್ಲೆರು ಎಂದು. ಇವರ ಮಾತೃ ಭಾಷೆ ಕನ್ನಡವಾಗಿದೆ. ಇವರು ವಿಜಯನಗರದ ಕಾಲದಲ್ಲಿ ಕತ್ತಿ, ಗುರಾಣಿಗಳನ್ನು ತಯಾರಿಸುವ ಕಮ್ಮಾರಿಕೆ ಕೆಲಸ ಮಾಡುತ್ತಿದ್ದರು. ಈಗ ಇವರ ಕಸುಬು ವ್ಯವಸಾಯ, ನೌಕರಿ, ಕೂಲಿ ಇತ್ಯಾದಿ. ಇವರ ಮನೆದೇವರು ತಿರುಪತಿ ತಿಮ್ಮಪ್ಪ ಆಗಿದ್ದು, ಮೂರು ವರ್ಷಗಳಿಗೊಮ್ಮೆ ತಿಮ್ಮಪ್ಪ ದೇವರಿಗೆ ಆಯಾ ಊರುಗಳಲ್ಲಿ ಭೂತಪ್ಪನ ಸೇವೆ (ಮರಿಸೇವೆ) ಮಾಡುತ್ತಾರೆ. ಏಪ್ರಿಲ್‌ನಲ್ಲಿ ದೊಡ್ಡಘಟ್ಟದಲ್ಲಿ ಜರುಗುವ ರಾಮದೇವರ ಉತ್ಸವಕ್ಕೆ ಹೋಗುತ್ತಾರೆ. ಹಿಂದಿನ ಕಾಲದಲ್ಲಿ ಇವರನ್ನು 'ಗೌಡರು' ಎಂದೂ ಕರೆಯುತ್ತಿದ್ದರು. ಇವರು ಆದಿಚುಂಚನಗಿರಿ ಮಠಕ್ಕೆ ನಡೆದು ಕೊಳ್ಳುವರು. ಚಿಕ್ಕಬ್ಯಾಲದ ಕೆರೆ, ಕಿಟ್ಟದ್ಹಾಳು ಗ್ರಾಮಗಳಲ್ಲಿ ಇವರ ಮನೆಗಳನ್ನು 'ಕುಲುಮೆ ಮನೆತನದವರು' ಎಂದು ಹೇಳುತ್ತಾರೆ. ಸಲುಪರು ಇದ್ದ ಕಡೆ 'ಕಿಟ್ಟದದಿಬ್ಬ'ಗಳು ಇವೆ, ಇವರು ವಾಸಿಸುವ ಊರುಗಳಿಗೆ 'ಸಲುಪರ ಊರು' ಎನ್ನುವುದು ಉಂಟು. ತಾಲ್ಲೂಕಿನಲ್ಲಿ ಈ ಜನಾಂಗದವರು ದೊಡ್ಡಘಟ್ಟ, ಕಿಟ್ಟದಹಳ್ಳಿ, ಬುಕ್ಕಸಾಗರ, ಚಿಕ್ಕಬ್ಯಾಲದ ಕೆರೆ, ಚಿಕ್ಕತೇಕಲವಟ್ಟಿ, ಜಯ ಸುವರ್ಣಾಪುರ ಮತ್ತು ಹೊಸದುರ್ಗ ಈ ಸ್ಥಳಗಳಲ್ಲಿ ನೆಲೆಸಿದ್ದಾರೆ. ಈ ಜನಾಂಗದವರ ಮೂಲ (ಮನೆ) ದೇವರು ಲಕ್ಷ್ಮೀದೇವರು. ಚಿಕ್ಕ ನಾಯಕನಹಳ್ಳಿ ತಾ॥ ಕಾಮಲಾಪುರ ಲಕ್ಷ್ಮೀದೇವರು, ಚಿಕ್ಕತೇಕಲವಟ್ಟಿ ಲಕ್ಷ್ಮೀದೇವರು, ಚಿಕ್ಕನಾಯ್ಕನಹಳ್ಳಿ ತಾ॥ ನಸೋರಲಮಾವು ಲಕ್ಷ್ಮೀದೇವಿ, ಚಿಕ್ಕಬ್ಯಾಲದಕೆರೆ ಲಕ್ಷ್ಮೀದೇವರುಗಳಿಗೆ ಇವರು ನಡೆದು ಕೊಳ್ಳುತ್ತಾರೆ. ಕರ್ನಾಟಕ, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ಸರ್ಪವಕ್ಕಲಿಗ ಯಾನೆ ಸಲುಪರ ಆಚಾರ–ವಿಚಾರ–ಸಂಪ್ರದಾಯಗಳಲ್ಲಿ ಸಾಮ್ಯತೆ ಇದೆ ಎನ್ನಲಾಗಿದೆ. ಹಿಂದಿನ ಕಾಲದಲ್ಲಿ ಬಳೆಗಾರನೊಬ್ಬನಿಗೂ ಮತ್ತು ಲಾಢ್ಲೆರು ಹೆಣ್ಣು ಮಗಳಿಗೂ ಅಕ್ರಮವಾಗಿ

ಮಗು ಹುಟ್ಟಿದಾಗ ಅದನ್ನು ಅನಾಥವಾಗಿ ಬಿಟ್ಟು ಹೋಗುತ್ತಾರೆ. ಆಗ 'ಸರ್ಪ'ವೊಂದು ಆ ಮಗುವಿಗೆ ಬಿಸಿಲು–ಮಳೆ ತಾಗದಂತೆ ಹೆಡೆ ಬಿಚ್ಚಿ ನೆರಳು ಮಾಡುತ್ತದೆ. ಆದ್ದರಿಂದ 'ಸರ್ಪಒಕ್ಕಲಿಗ' ಎಂದು ಹೆಸರು ಬಂದಿತೆಂಬ ದಂತಕಥೆಯೊಂದು ಈ ಜನಾಂಗದವರಲ್ಲಿ ಪ್ರಚಲಿತದಲ್ಲಿದೆ.

**ಸುಡುಗಾಡುಸಿದ್ಧ**

ಹೊಸದುರ್ಗ ತಾಲ್ಲೂಕಿನ ಒಂದು ಸ್ಥಳ(ಹಟ್ಟಿ)ದಲ್ಲಿ ಮಾತ್ರ ಇದ್ದಾರೆ. ಬಲ್ಲಾಳ ಸಮುದ್ರ ಗ್ರಾಮಕ್ಕೆ ಉಪಗ್ರಾಮವಾಗಿರುವ ಸುಡುಗಾಡು ಸಿದ್ಧರಟ್ಟಿಯಲ್ಲಿ ನೂರಾರು ವರ್ಷಗಳಿಂದ ಇವರು ವಾಸವಾಗಿದ್ದಾರೆ. ಹಿಂದೆ ಇವರು ಬಳ್ಳಾರಿ ಕಡೆಯಿಂದ ಇಲ್ಲಿಗೆ ವಲಸೆ ಬಂದಿರುತ್ತಾರೆ. ತಿಂಗಳಿಗೊಮ್ಮೆ ಊರಿಗೆ ಬರುವ ಇವರು ಕೇರಳ ರಾಜ್ಯದಲ್ಲಿಯೂ ಸಂಚರಿಸುತ್ತಾರೆ. ಇವರ ಮೂಲವೃತ್ತಿ ಭಿಕ್ಷಾಟನೆ. ವಿಭೂತಿ ಬಳದುಕೊಂಡು ಊರಿಂದೂರಿಗೆ ಅಲೆಯುವುದು ಸಹ ಇವರ ವೃತ್ತಿಯೇ ಆಗಿದ್ದಿತು. ಊರಲ್ಲಿ ಹೆಂಗಸರು, ಮಕ್ಕಳು, ವೃದ್ಧರು ಖಾಯಂ ಆಗಿ ವಾಸವಾಗಿರುತ್ತಾರೆ. ಪಿಂಗಾಣಿ ಸಾಮಗ್ರಿಗಳ ಮಾರಾಟಕ್ಕಾಗಿ ಬೇರೆ ಬೇರೆ ಜಿಲ್ಲೆ, ರಾಜ್ಯಕ್ಕೂ ಹೋಗಿ ಬರುತ್ತಾರೆ. ಈಗ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆ. ಇವರ ಮಾತೃಭಾಷೆ ತೆಲುಗು. ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸುತ್ತಾರೆ. ಹಟ್ಟಿಯಲ್ಲಿ ಸುಮಾರು ೫೦ ಮನೆಗಳಿದ್ದು ಶಿವಮೊಗ್ಗ ಜಿಲ್ಲೆಯಲ್ಲಿ ವೈವಾಹಿಕ ಸಂಬಂಧ ಬೆಳೆಸಿದ್ದಾರೆ. ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ.

**ಸಾಮಾಜಿಕ ಜೀವನ**

**ಹಿಂದೂ**

ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಹಿಂದೂಗಳ ಜನಜೀವನದಲ್ಲಿ ಅಪಾರ ಬದಲಾವಣೆಗಳಾಗಿವೆ. ಆದಾಗ್ಯೂ, ಸಂಪ್ರದಾಯಸ್ಥ ಕುಟುಂಬಗಳಲ್ಲಿ ಹಿರಿಯ ತಲೆಮಾರಿನವರು ತಮ್ಮ ಪರಂಪರಾಗತ ಆಚರಣೆಗಳನ್ನು ಬಿಡದೆ ನಡೆಸುತ್ತಿದ್ದಾರೆ. ತಾಂತ್ರಿಕ ಮತ್ತಿತರ ಉನ್ನತ ಶಿಕ್ಷಣಕ್ಕಾಗಿ ಹಾಗೂ ನೌಕರಿಗಾಗಿ ಬೇರೆ ರಾಜ್ಯಗಳಿಗೆ ಬೇರೆ ದೇಶಗಳಿಗೆ ತೆರಳುತ್ತಿರುವ ಹೊಸ ಪೀಳಿಗೆಯವರಲ್ಲಿ ಸಂಪ್ರದಾಯದ ಬೇರುಗಳು ನಿಧಾನವಾಗಿ ಸಡಿಲವಾಗಿ ಅಂತರ್ಜಾತೀಯ–ಅಂತರ್ ಧರ್ಮೀಯ ವಿವಾಹಗಳ ಅನಿವಾರ್ಯತೆಗೆ ತಲೆಬಾಗಿ ವಿದೇಶಿ ಸಂಸ್ಕೃತಿಯ ಬಿರುಗಾಳಿಗೆ ಸಿಕ್ಕಿ ನಮ್ಮ ಸಂಸ್ಕೃತಿ ಮುಕ್ಕಾಗುತ್ತಿದೆ. ಅವಿಭಕ್ತ ಕುಟುಂಬಗಳು ಇಂದು ಕಾಣೆಯಾಗುತ್ತಿವೆ.

ಮೊಮ್ಮಕ್ಕಳೊಂದಿಗೆ ಬಾಳುವ ತಾತ–ಅಜ್ಜಿಯರ ಆಕಾಂಕ್ಷೆಗೆ ಅವಕಾಶವೇ ಇಲ್ಲವಾಗಿದೆ. ವೃದ್ಧಾಶ್ರಮಗಳು ಕಿಕ್ಕಿರಿದು ತುಂಬಿವೆ. ಮತ್ತೊಂದೆಡೆ ದಶಕಗಳ ಹಿಂದಿನ ಜೀವನ ಶೈಲಿಗೂ, ಈಗಿನ ಶೈಲಿಗೂ ಅಜಗಜಾಂತರ ವ್ಯತ್ಯಾಸಗಳಾಗಿವೆ. ಹಿಂದೆ ಇದ್ದ ರೇಡಿಯೋ, ಗ್ರಾಮಾಫೋನ್‌ಗಳು, ಪತ್ರ ಬರೆಯುವ ಸಂಸ್ಕೃತಿ, ಬೀಸುವುದು, ಕುಟ್ಟುವುದು, ನೀರು ಸೇದುವುದು, ಸಗಣಿ ಸಾರಿಸುವುದು, ಬೆಳ್ದಿಂಗಪ್ಪನ ಪೂಜೆ, ಕಪಿಲೆ ಎತ್ತುವುದು, ಕಥೆ ಹೇಳುವ, ಒಗಟು ಬಿಡಿಸುವ, ತ್ರಿಪದಿಗಳನ್ನು ರಾತ್ರಿಯಿಡೀ ಹಾಡುವ ದಿನಗಳು ಕಾಣೆಯಾಗಿವೆ. ಆದಾಗ್ಯೂ ಮನೆಯಲ್ಲಿನ ದೇವರ ಪೂಜೆ, ಹಬ್ಬದ ಆಚರಣೆ, ದೇವಾಲಯಗಳು, ತೇರು, ಜಾತ್ರೆ, ಉತ್ಸವ ಉಳಿದಿವೆ. ಅದಷ್ಟೇ ಹಿಂದೂಗಳ ಸಂಸ್ಕೃತಿಯ ಜೀವಾಳವಾಗಿದೆ. ಮದುವೆ, ಮುಂಜಿ, ಸೀಮಂತ, ನಾಮಕರಣ, ಆರತಕ್ಷತೆ, ಅನ್ನಸಂತರ್ಪಣೆ, ಮುಡಿ ತೆಗೆಸುವುದು, ದೇವರ ಹರಕೆ ತೀರಿಸುವುದು, ಯಾತ್ರೆ ಹೋಗಿಬರುವುದು ಮುಂತಾದ ಆಚರಣೆಗಳನ್ನು ಮಾಡುವ ಕೆಲವು ಅವಿಭಕ್ತ ಕುಟುಂಬಗಳು (ಗ್ರಾಮೀಣರಲ್ಲಿ) ಉಳಿದಿರುವ ಸುಕೃತವನ್ನು ಕಾಣಬಹುದು. ಹಬ್ಬಗಳು, ಜಾತ್ರೋತ್ಸವಗಳು ಹಿಂದೂಗಳ ಜೀವನೋಲ್ಲಾಸದ ಪ್ರತೀಕಗಳಾಗಿವೆ. ಹಿಂದೂಗಳು ಸೌಹಾರ್ದಯುತ ಬಾಳಿಗೆ ಹೆಸರಾದವರು.

### ಮುಸಲ್ಮಾನ

ಅಲ್ಪಸಂಖ್ಯಾತ ಗುಂಪಿಗೆ ಸೇರಿರುವ ಇವರು ಇಲ್ಲಿನ ಭಾಷೆಗೆ, ಈ ನೆಲದ ಗುಣಕ್ಕೆ ಒಗ್ಗಿಕೊಂಡು ಬದುಕು ಸಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರು ರಂಜಾನ್‌ನಲ್ಲಿ ಉಪವಾಸ ವ್ರತ ಆಚರಿಸುತ್ತಾರೆ. ತಮ್ಮ ಧರ್ಮದ ಕಟ್ಟುಪಾಡುಗಳನ್ನು ಪಾಲಿಸುತ್ತಾ, ಪೈಪೋಟಿಯಿಂದ ದುಡಿಯುತ್ತಾ ಸಫಲತೆಯನ್ನು ಕಾಣುತ್ತಿದ್ದಾರೆ. ಹಿಂದೂಗಳೊಂದಿಗೆ ಸೌಹಾರ್ದಯುತವಾಗಿ ಬದುಕುತ್ತಿದ್ದಾರೆ. ಮದುವೆ (ನಿಖಾ), ಶಿಶುಜನನ, ನಾಮಕರಣ, ಹಬ್ಬಗಳು, ಉತ್ಸವಗಳು, ಮೃತರ ಅಂತ್ಯಸಂಸ್ಕಾರ ಮುಂತಾದ ಎಲ್ಲಾ ಪ್ರಕ್ರಿಯೆಗಳನ್ನು ತಮ್ಮ ಧರ್ಮದ ಸಂಪ್ರದಾಯದಂತೆಯೇ ಆಚರಿಸುತ್ತಾರೆ. ಕನ್ನಡ ಮಾಧ್ಯಮದಲ್ಲಿ ಹೆಚ್ಚಿನ ಶಿಕ್ಷಣ ಪಡೆದ ಕೆಲವರು ಸರ್ಕಾರಿ ಉದ್ಯೋಗ ಪಡೆದಿದ್ದಾರೆ. ಇವರು ಆಧುನಿಕತೆಯ ಭರಾಟೆಗೆ ಸಿಕ್ಕರೂ ಅದಕ್ಕೆ ಹೊಂದಿಕೊಂಡು ತಮ್ಮ ಸಂಸ್ಕೃತಿಗೆ ಧಕ್ಕೆಯಾಗದಂತೆ ಎಚ್ಚರ ವಹಿಸಿದ್ದಾರೆ. ಕನ್ನಡದಲ್ಲಿ ವ್ಯವಹರಿಸುತ್ತಾರೆ. ವ್ಯವಸಾಯ ಮಾಡುವವರೂ ಇದ್ದಾರೆ. ಹಿಂದೂಗಳ ಮದುವೆಗಳಲ್ಲಿ ಆಹ್ವಾನಿತರಾಗಿ ಹಾಜರಾಗುತ್ತಾರೆ. ಅಂತೆಯೇ ಇವರ ಹಬ್ಬಗಳಿಗೆ ಹಿಂದೂ ಸ್ನೇಹಿತರನ್ನು ಕರೆಯುತ್ತಾರೆ. ನೂರಾರು ರೀತಿಯ ವ್ಯಾಪಾರಗಳಲ್ಲಿ ತೊಡಗಿಕೊಂಡು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡಿಕೊಂಡಿದ್ದಾರೆ.

**ಕ್ರೈಸ್ತ**

ಸ್ವಾತಂತ್ರ್ಯ ಬಂದಾಗಿನಿಂದ ಹೊಸದುರ್ಗದಲ್ಲಿ ನೆಲಸಿದ್ದಾರೆ. ಇಲ್ಲಿನ ಗಾಳಿ, ನೀರು, ನೆಲದ ತುಡಿತ ಕಂಡುಂಡವರು. ಶಿಕ್ಷಣ ಸಂಸ್ಥೆ ಸ್ಥಾಪಿಸಿ ಶಿಕ್ಷಣ ನೀಡುತ್ತಾರೆ. ಇವರು ತಮ್ಮ ಸಂಪ್ರದಾಯಗಳನ್ನು ಬಿಡದೆ ಆಚರಿಸುತ್ತಾರೆ. ಮಗುವಿನ ನಾಮಕರಣವನ್ನು ಚರ್ಚ್‌ನಲ್ಲೇ ಮಾಡುವರು. ನಿಶ್ಚಿತಾರ್ಥ, ವಿವಾಹ ಮುಂತಾದ ಶುಭಕಾರ್ಯಗಳನ್ನು ತಮ್ಮ ಧರ್ಮಗುರುವಿನ ಸಮ್ಮುಖದಲ್ಲಿ ಮಾಡುವರು. ಸಂಪ್ರದಾಯದ ಉಡುಗೆಯಲ್ಲಿ ಈ ಪ್ರಕ್ರಿಯೆಗಳು ನಡೆಯುವುವು. ಮದುವೆಯಲ್ಲಿ ವಧು-ವರರು ಉಂಗುರಗಳನ್ನು ಬದಲಾಯಿಸಿಕೊಳ್ಳುವುದು ವಿಶೇಷ ರೀತಿಯ ಸಂಪ್ರದಾಯ. ಅಂತೆಯೇ ಇವರು ಮೃತರನ್ನು ಶವಪೆಟ್ಟಿಗೆಯಲ್ಲಿ ಮಲಗಿಸಿ (ಹೊಸಬಟ್ಟೆ-ಸೆಂಟುಹಾಕಿ) ಪೆಟ್ಟಿಗೆ ಸಮೇತ ಹೂಳುವುದು ಬಹು ಅಪರೂಪದ ಆಚರಣೆಯೇ ಆಗಿದೆ. ಮದುವೆಗಳಲ್ಲಿ ಮಾಂಸದೂಟ ಹಾಗೂ ಸಂಗೀತ ಕಾರ್ಯಕ್ರಮಗಳು ಕ್ರೈಸ್ತತನಕ್ಕೆ ಹಿಡಿದ ಕನ್ನಡಿಯಾಗಿವೆ. ಇವರು ಆಚರಿಸುವ 'ಸುಗ್ಗಿಹಬ್ಬ', ಸಮಾಧಿಹಬ್ಬ ಎಲ್ಲವೂ ವಿಶಿಷ್ಟ.

**ಜೈನ**

ಇವರು ವರ್ಷಪೂರ್ತಿ ಬಸದಿಗಳಲ್ಲಿ ವ್ರತ-ಪೂಜೆಗಳ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಕಂದ ಮೂಲಗಳನ್ನು ಸೇವಿಸುವುದಿಲ್ಲ. ಸ್ತ್ರೀಯರು ರೇಷ್ಮೆ ಸೀರೆ ಉಡುವುದಿಲ್ಲ. ಸಂಜೆಯಿಂದ ಬೆಳಗಿನವರೆಗೂ ಆಹಾರ ಹಾಗೂ ನೀರನ್ನು ಸೇವಿಸುವುದಿಲ್ಲ. ಬಹು ಕಠಿಣವಾದ ನಿಯಮಗಳನ್ನು ರೂಢಿಸಿಕೊಂಡಿದ್ದಾರೆ. ದೀಪಾವಳಿಯನ್ನು ಮಹಾವೀರ ನಿರ್ವಾಣೋತ್ಸವವನ್ನಾಗಿ ಆಚರಿಸುತ್ತಾರೆ. ಇತರರೊಂದಿಗೆ ಶಾಂತಿ ಹಾಗೂ ಸಾಮರಸ್ಯದಿಂದ ನಡೆದುಕೊಳ್ಳುವರು. ಆಧುನಿಕತೆಯ ಬದಲಾವಣೆಗಳು ಇವರ ಸಂಪ್ರದಾಯಗಳಿಗೆ ಯಾವುದೇ ಚ್ಯುತಿ ತಂದಿಲ್ಲ.

**ಮನೆಗಳು**

ತಾಲ್ಲೂಕಿನಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕೆಂಪುಹೆಂಚಿನ ಮನೆಗಳು, ಕಪ್ಪುಹೆಂಚಿನ ಮನೆಗಳು, ಬಡವರ ತೆಂಗಿನ ಸೋಗೆ ಗುಡಿಸಲುಗಳು ಕಾಣಸಿಗುತ್ತವೆ. ಇತ್ತೀಚೆಗೆ ಕೆಲವು ತಾರಸಿ ಮನೆಗಳಾಗಿವೆ. ದೊಡ್ಡ ಮನೆಗಳಲ್ಲಿ ಹಾಗೂ ಸಣ್ಣ ಮನೆಗಳಲ್ಲಿ ಅಡುಗೆ ಕೋಣೆ, ನಡುಮನೆ, ಪಡಸಾಲೆ, ಸ್ನಾನದ ಕೊಠಡಿ, ದನಕರುಗಳ ಕೊಟ್ಟಿಗೆ, ಕಾಳು-ಕಡ್ಡಿ ಪೇರಿಸಿಡಲು ಒಂದಿಷ್ಟು ಜಾಗ ಇಷ್ಟು ಇರುತ್ತವೆ. ದನಗಳ ಕೊಟ್ಟಿಗೆಯಲ್ಲಿ ಮುಸುರೆ ಬಾನೆ ಇರುತ್ತದೆ. ಒಂದೆರೆಡು ಕೋಳಿ-ಕುರಿ ಸಾಕಿದ್ದರೆ

ಅವುಗಳನ್ನು ಮನೆಯೊಳಗೆ (ರಾತ್ರಿ) ಇರಿಸಿಕೊಳ್ಳುವರು. ಇತ್ತೀಚೆಗೆ ಹೊಸ ಮನೆಗಳನ್ನು ಕಟ್ಟುವಾಗ ದನದ ಕೊಟ್ಟಿಗೆಯನ್ನು ಪ್ರತ್ಯೇಕವಾಗಿ ಕಟ್ಟಿರುತ್ತಾರೆ. ಹಿಂದೆ ಕಲ್ಲು-ಮಣ್ಣಿನ ಹೆಂಟೆಗಳಿಂದಲೇ ಮನೆ ಕಟ್ಟುತ್ತಿದ್ದರೆ, ಈಗ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ಸುಸಜ್ಜಿತವಾಗಿ ಕಟ್ಟಿಸುತ್ತಿದ್ದಾರೆ. ಪಟ್ಟಣದ ಪ್ರಭಾವದಿಂದಾಗಿ ತಾರಸಿ ಮನೆಗಳನ್ನು ಹಾಗೂ ಅಂತಸ್ತಿನ ಮನೆಗಳನ್ನು ಸಹ ಹಳ್ಳಿಗಳಲ್ಲಿ ಕೆಲವರು ಕಟ್ಟುತ್ತಿದ್ದಾರೆ. ಹೋಬಳಿ ಕೇಂದ್ರದಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ವಿವಿಧ ವಿನ್ಯಾಸದ ಮನೆಗಳನ್ನು ಕಟ್ಟಿದ್ದಾರೆ. ಪೇಟೆಯಲ್ಲಿ ಸ್ವಂತ ವಾಸಕ್ಕಲ್ಲದೆ, ಬೇರೆಯವರಿಗೆ ಬಾಡಿಗೆ ಕೊಡುವ ಉದ್ದೇಶದಿಂದಲೂ ಹೆಚ್ಚು ಮನೆಗಳನ್ನು ಕಟ್ಟಿಸಿರುವುದುಂಟು. ಇತ್ತೀಚೆಗೆ ಮನೆ ಕಟ್ಟಡಕ್ಕೆ ಬ್ಯಾಂಕ್‌ಗಳು ಸುಲಭವಾಗಿ ಸಾಲ ಕೊಡುತ್ತಿರುವುದರಿಂದ, ದೊಡ್ಡ ಊರುಗಳಲ್ಲಿ ಹೆಚ್ಚು ಮನೆಗಳು ಕಟ್ಟಲ್ಪಟ್ಟಿವೆ. ಹೊಸದುರ್ಗ ತಾಲ್ಲೂಕಿನಲ್ಲಿ ಇತ್ತೀಚಿನ ಕೆಲವು ವರ್ಷಗಳಲ್ಲಿ ನೀರುಳ್ಳಿ ಬೆಳೆಯಿಂದ ಹಾಗೂ ಈಚಿನ ಒಂದೆರೆಡು ವರ್ಷಗಳಲ್ಲಿ ಬಹಳ ರೈತರು ದಾಳಿಂಬೆ ತೋಟಗಳನ್ನು ಮಾಡಿ ಶ್ರೀಮಂತರಾಗಿರುವುದರಿಂದಲೂ ದೊಡ್ಡ ವಿನ್ಯಾಸದ ಮನೆಗಳನ್ನು ಕಟ್ಟುತ್ತಿದ್ದಾರೆ.

**ಆಹಾರ**

ತಾಲ್ಲೂಕಿನ ಜನರ ಪ್ರಮುಖ ಆಹಾರವೆಂದರೆ, ರಾಗಿಮುದ್ದೆ, ಜೋಳದ ರೊಟ್ಟಿ, ನೆಲ್ಲಕ್ಕಿಯ ಅನ್ನ ಹಾಗೂ ಕಾಳಿನ ಸಾರು-ಪಲ್ಯಗಳು, ಸೊಪ್ಪು ಇತ್ಯಾದಿಗಳು ಹಳ್ಳಿಗಳ ನಿತ್ಯದ ಆಹಾರ. ಮಾಂಸಾಹಾರಿಗಳು ಕೆಲವು 'ವಾರ'ದ ದಿನಗಳನ್ನು ಹೊರತುಪಡಿಸಿ ತಮಗೆ ಬೇಕಾದಾಗ ಮತ್ತು ನೆಂಟರಿಷ್ಟರು ಬಂದಾಗ ಮಾಂಸಾಹಾರ ಸೇವಿಸುತ್ತಾರೆ. ಸಸ್ಯಾಹಾರಿಗಳು ನೆಂಟರಿಷ್ಟರು ಬಂದಾಗ ಸಿಹಿಯೂಟ ಮಾಡಿ ಬಡಿಸುತ್ತಾರೆ. ಪೇಟೆ ಹಾಗೂ ದೊಡ್ಡ ಊರುಗಳಲ್ಲಿ ಅನುಕೂಲಸ್ಥರು ಗೋಧಿಹಿಟ್ಟಿನ ಚಪಾತಿ ಅಥವಾ ಇಡ್ಲಿ-ಚಟ್ನಿ ಅಥವಾ ಪೂರಿ/ದೋಸೆ ಮುಂತಾದ ಬೆಳಗಿನ ಟಿಫನ್ ಮಾಡುತ್ತಾರೆ. ಮಧ್ಯಾಹ್ನದ ಊಟಕ್ಕೆ ಚಪಾತಿ ಅಥವಾ ರೊಟ್ಟಿ ಅಥವಾ ರಾಗಿಮುದ್ದೆ ಸಾರು-ಪಲ್ಯೆ ಸೇವಿಸುತ್ತಾರೆ. ಸಾಮಾನ್ಯ ದರ್ಜೆಯ ಕುಟುಂಬಗಳಲ್ಲಿ ಬೆಳಗ್ಗೆ ಟಿಫನ್ ಇರುವುದಿಲ್ಲ. ಬೆಳಗ್ಗೆ ೮ರ ವೇಳೆಗೆ ಮುದ್ದೆ ಊಟ ಮಾಡುತ್ತಾರೆ. ಮಧ್ಯಾಹ್ನ ಹಗಲೂಟವನ್ನು ಅನುಕೂಲಸ್ಥರು (ಮಧ್ಯಮ ವರ್ಗದವರು) ಮಾಡುವರು. ರಾತ್ರಿಗೆ ಸಹ ಇದೇ ರೀತಿಯ ಅಡುಗೆ ಮಾಡಿ ಉಣ್ಣುವರು. ಸ್ಥಳೀಯವಾಗಿ ಸಿಗುವ ತರಕಾರಿಗಳನ್ನು ಸಾರು ಮತ್ತು ಪಲ್ಯೆ ತಯಾರಿಸಲು ಬಳಸುವರು. ಹಳ್ಳಿಗಳಲ್ಲಿ ಹಿಂದೆ ಮಾಡುತ್ತಿದ್ದ ರಾಗಿಕೀಲ್ಸ, ಜೋಳದ ಗುಗ್ಗರಿ, ಮಿಟ್ಟಿಗ, ಚಿನಕುರುಳಿ, ತಂಕಟೆ ಹೂವಿನ ಪೇಯ ಈಗ ಕಾಣೆಯಾಗಿವೆ. ಹುರುಳಿತೊಕ್ಕ-ಕಾಯಾಲು ಕಾಣಸಿಗುತ್ತದೆ. ರಾಗಿರೊಟ್ಟಿ ಹುಚ್ಚೆಳ್ಳುಚಟ್ನಿ ವಿಶೇಷವಾಗಿರುತ್ತೆ. ಜೋಳದ ರೊಟ್ಟಿ-ತೆಂಗಿನಕಾಯಿ ಚಟ್ನಿ ಬಲು ರುಚಿಯಾಗಿರುತ್ತದೆ.

ಕಿಚಡಿ, ಶಾವಿಗೆ, ಕಾಯಾಲು ಸಹ ತನ್ನ ಜನಪ್ರಿಯತೆ ಕಳೆದುಕೊಂಡಿಲ್ಲ.

ಮುಸಲ್ಮಾನರು ಹಲಾಲ್ ಮಾಡಿದ ಮಾಂಸವನ್ನು ಊಟಕ್ಕೆ ಬಳಸುತ್ತಾರೆ. ಮೀನಿನ ಮಾಂಸಕ್ಕೆ ಇದು ಅನ್ವಯಿಸುವುದಿಲ್ಲ. ಇವರು ವಿಶೇಷ ಸಂದರ್ಭಗಳಲ್ಲಿ (ಹಬ್ಬ, ಮದುವೆ, ನಾಮಕರಣ, ಮುಂಜಿ) ಬಿರಿಯಾನಿ, ಕೋಳಿ ಪಲಾವ್, ಖೈಮಾ ಮುಂತಾದ ಮಾಂಸದಡುಗೆಯನ್ನು ಅಲ್ಲದೆ ಶಾವಿಗೆ ಪಾಯಸ ಮತ್ತಿತರ ಸಿಹಿ ಅಡುಗೆಯನ್ನು ಮಾಡುವರು. ಕ್ರೈಸ್ತರು ಹಬ್ಬ, ಮದುವೆ ಮುಂತಾದ ಸಂದರ್ಭಗಳಲ್ಲಿ ಬಿರಿಯಾನಿ, ಪಲಾವ್ ಮುಂತಾದ ಮಾಂಸದಡುಗೆ ಹಾಗೂ ಕೇಕ್ ಮತ್ತಿತರ ಸಿಹಿ ತಿಂಡಿಗಳನ್ನು ತಯಾರಿಸುವರು.

**ಉಡುಪು**

ತಾಲ್ಲೂಕಿನ ಹಿಂದೂಗಳ ಉಡುಪಿನಲ್ಲಿ ಕಳೆದ ೨೫ ವರ್ಷಗಳಲ್ಲಿ ಬದಲಾವಣೆಗಳಾಗಿವೆ. ಹಳ್ಳಿಗಳಲ್ಲಿ ಗಂಡಸರು ಅರ್ಧತೋಳಿನ ಅಂಗಿ, ತುಂಬುತೋಳಿನ ಅಂಗಿ, ಪಂಚೆ ಉಡುತ್ತಾರೆ. ಹೆಂಗಸರು ಸಾಧಾರಣ ಸೀರೆ, ಜಾಕೆಟ್ ತೊಡುತ್ತಾರೆ. ಇತ್ತೀಚೆಗೆ ಸಿನಿಮಾ ಮತ್ತು ಟಿ.ವಿ.ಗಳ ಪ್ರಭಾವದಿಂದಾಗಿ ಹೆಂಗಸರು ನೈಟಿ ಹಾಕಿಕೊಳ್ಳುವುದು ಹಾಗೂ ಚೂಡಿದಾರ್ ತೊಡುವುದನ್ನು ರೂಢಿಸಿಕೊಂಡಿದ್ದಾರೆ. ಗಂಡಸರು ಬಹುಮಟ್ಟಿಗೆ ಪಂಚೆ, ಅರ್ಧಪೂರ್ತಿ ತೋಳಿನ ಅಂಗಿ ಧರಿಸುತ್ತಾರೆ. ಪಟ್ಟಣಕ್ಕೆ ಹೋಗುವಾಗ ಕೆಲವರು ಪ್ಯಾಂಟ್-ಷರ್ಟ್ ಹಾಕುವುದನ್ನು ಕಲಿತಿದ್ದಾರೆ. ಹೊಲಗಳಿಗೆ-ತೋಟಗಳಿಗೆ ಹೋಗುವಾಗ ಉದ್ದನೆಯ ಚಡ್ಡಿ ಮತ್ತು ಬನಿಯನ್ ತೊಟ್ಟುಕೊಂಡು ಹೆಗಲ ಮೇಲೊಂದು ಟವೆಲ್ ಹಾಕಿಕೊಂಡಿರುತ್ತಾರೆ. ಪಂಚೆ-ಅಂಗಿ ತೊಟ್ಟಾಗಲೂ ಹೆಗಲ ಮೇಲೆ ಟವೆಲ್ ಇದ್ದೇ ಇರಬೇಕು. ದೊಡ್ಡ ಊರುಗಳಲ್ಲಿ ಇಸ್ತ್ರಿ ಮಾಡಿದ ಬಟ್ಟೆಗಳನ್ನು ತೊಡುವುದು ರೂಢಿಗೆ ಬಂದಿದೆ. ದೇವಸ್ಥಾನ, ಮದುವೆಗಳಿಗೆ ಹೋಗುವಾಗ ಮಡಿಬಟ್ಟೆ ತೊಡುವುದು ಕಡ್ಡಾಯವಾಗಿದೆ. ಜಾತ್ರೆ ಮತ್ತು ಮದುವೆಗಳಿಗೆ ಹೋಗುವಾಗ ಒಳ್ಳೆಯ ಪ್ಯಾಂಟ್ ಅಥವಾ ಪಂಚೆ ಮತ್ತು ಷರ್ಟ್ ತೊಡುವರು. ಈ ಸಂದರ್ಭಗಳಿಗೆ ಹೆಣ್ಣುಮಕ್ಕಳು ರೇಷ್ಮೆ ಸೀರೆ-ಜಾಕೆಟ್, ಒಡವೆ ಧರಿಸುತ್ತಾರೆ. ಹೊಸ-ಹೊಸ ಫ್ಯಾಷನ್‌ಗಳು ಬಂದಂತೆ ಅನುಕೂಲಸ್ಥರ ಮನೆಗಳಲ್ಲಿ ಉಡುಪುಗಳಲ್ಲಿ ಬದಲಾವಣೆಗಳಾಗಿವೆ. ಯುವಕರು ಹೊಸ ಬಗೆಯ ಟೀಷರ್ಟ್-ಪ್ಯಾಂಟ್ ಹಾಕಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಧರಿಸುತ್ತಿದ್ದ ಲಂಗ-ದಾವಣಿ ಸಂಪೂರ್ಣವಾಗಿ ಕಾಣೆಯಾಗಿವೆ. ಈಗ ಸಿದ್ಧ ಉಡುಪುಗಳು ದಾಳಿ ಮಾಡಿವೆ. ಮುಸಲ್ಮಾನರು ಪೈಜಾಮ, ಷರ್ಟ್ ಅಥವಾ ಜುಬ್ಬ ಹಾಗೂ ಟೋಪಿ ಧರಿಸುವುದು ಸಂಪ್ರದಾಯ. ಅವರ ಹೆಣ್ಣುಮಕ್ಕಳು ಹೊರಗೆ ಹೋಗುವಾಗ ಬುರ್ಖಾ ಧರಿಸುವುದುಂಟು. ಇವರಲ್ಲೂ ಫ್ಯಾಷನ್ ಗಾಳಿ ಬೀಸಿದೆ. ಕೆಲವರು ಬುರ್ಖಾ ಧರಿಸದೆ ಸೀರೆ-ಕುಪ್ಪಸ ಮತ್ತಿತರ ಉಡುಪು ಧರಿಸುತ್ತಾರೆ.

ವಿಶೇಷ ಸಂದರ್ಭಗಳಲ್ಲಿ ಗಂಡಸರು ಶೇರ್ವಾಣಿ ಧರಿಸುತ್ತಾರೆ. ಹೆಣ್ಣುಮಕ್ಕಳು ಭರ್ಜರಿ ಸಿದ್ಧ ಉಡುಪು ಹಾಕಿಕೊಳ್ಳುವುದೂ ಉಂಟು. ಬಡ ಕುಟುಂಬಗಳಲ್ಲಿ ಸಾಧಾರಣ ಉಡುಪುಗಳಷ್ಟೇ ಇವೆ. ಕ್ರೈಸ್ತರು ತಮ್ಮದೇ ಸಾಂಪ್ರದಾಯಿಕ ಉಡುಪುಗಳನ್ನು ವಿಶೇಷ ಸಂದರ್ಭಗಳಲ್ಲಿ ಧರಿಸುತ್ತಾರೆ. ಇನ್ನುಳಿದ ದಿನಗಳಲ್ಲಿ ಸಾಧಾರಣ ಪ್ಯಾಂಟ್–ಷರ್ಟ್, ಸೀರೆ–ಕುಪ್ಪಸ ಅಥವಾ ಸಿದ್ಧಉಡುಪು ಧರಿಸುತ್ತಾರೆ. ಮದುವೆಗಳಲ್ಲಿ ವಧು ಬಿಳಿಯ, ಉದ್ದನೆಯ ಲೇಸಿನಿಂದ ಕೂಡಿದ ಸೀರೆಯಿಂದ ಕಂಗೊಳಿಸುವುದು ರೂಢಿ. ಎಲ್ಲಾ ಧರ್ಮಗಳಲ್ಲಿಯೂ ಈಗ ಹೆಣ್ಣುಮಕ್ಕಳು ಮದುವೆ ಸಂದರ್ಭದಲ್ಲಿ ಬ್ಯೂಟಿ ಪಾರ್ಲರ್‌ಗಳಿಗೆ ಹೋಗಿ ಬರುತ್ತಾರೆ. ಕೈತುಂಬ ಮೆಹಂದಿ ಹಾಕಿಸಿಕೊಳ್ಳುತ್ತಾರೆ. ಈಗ ಫ್ಯಾಷನ್‌ನಿಂದಾಗಿ ಅವರ ಉಡುಪುಗಳು ಇನ್ನಷ್ಟು ಕಳೆಗಟ್ಟುತ್ತವೆ.

## ಹಬ್ಬಗಳು

ವರ್ಷದಲ್ಲಿ ಅರ್ಧದಷ್ಟು ಅವಧಿಯಲ್ಲಿ ಒಂದಿಲ್ಲೊಂದು ಹಬ್ಬಗಳು ಇದ್ದೇ ಇರುತ್ತವೆ. ಪ್ರಾಚೀನ ಕಾಲದಿಂದಲೂ ಈ ಹಬ್ಬಗಳನ್ನು ಹೊಸಬಟ್ಟೆ, ಸಿಹಿಯೂಟ, ತಳಿರು–ತೋರಣಗಳೊಂದಿಗೆ ಆಚರಿಸುವುದು ನಡೆದು ಬಂದಿದೆ. ಹಬ್ಬಗಳಲ್ಲಿ ಮನೆಗಳನ್ನು ಶುಭ್ರಗೊಳಿಸಿ, ಎಲ್ಲರೂ ಸ್ನಾನ–ನವ ವಸ್ತ್ರಗಳೊಂದಿಗೆ ದೇವರಿಗೆ ಶ್ರದ್ಧಾಭಕ್ತಿಗಳಿಂದ ಪೂಜೆ ಸಲ್ಲಿಸಿ ಆಚರಿಸಲಾಗುವುದು. ತಾಲ್ಲೂಕಿನಲ್ಲಿಯೂ ಮುಖ್ಯವಾದ ಎಲ್ಲಾ ಹಿಂದೂ ಹಬ್ಬಗಳನ್ನು ಜಾತ್ರೆ–ಉತ್ಸವಗಳನ್ನು ಮಾಡಿ ಸಂತೋಷ–ಸಂಭ್ರಮವನ್ನು ಅನುಭವಿಸುತ್ತಾರೆ. ಅವುಗಳಲ್ಲಿ ಮುಖ್ಯ ಹಬ್ಬಗಳು ಹೀಗಿವೆ. ಹಿಂದೂಗಳಲ್ಲಿ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಗೌರಿಗಣೇಶ, ಮಹಾಲಯ ಅಮಾವಾಸ್ಯೆ, ದೀಪಾವಳಿ ಮುಂತಾದ ಹಬ್ಬಗಳನ್ನು, ಮುಸಲ್ಮಾನರು ರಂಜಾನ್, ಬಕ್ರೀದ್, ಕ್ರೈಸ್ತರು ಕ್ರಿಸ್‌ಮಸ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

## ಜಾತ್ರೆಗಳು

ಪ್ರಾಚೀನ ಕಾಲದಿಂದಲೂ ಹಬ್ಬಗಳಂತೆಯೇ ಜಾತ್ರೆಗಳೂ ನಡೆಯುತ್ತಿವೆ. ಜಾತ್ರೆಗಳಿಗೆ ಜನಾಕರ್ಷಣೆ ಹೆಚ್ಚಾಗಿರುತ್ತದೆ. ಗ್ರಾಮ ದೇವರುಗಳನ್ನು ಮೆರೆಸಿ ಧನ್ಯತೆಯನ್ನು ಕಾಣುವುದು, ತಮ್ಮಲ್ಲಿರುವ ಜಾನಪದ ಕಲೆಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಿ ಸಂಭ್ರಮ ಪಡುವುದು ಜಾತ್ರೆಗಳ ಮೂಲೋದ್ದೇಶವಾಗಿದೆ. ಕೆಲವು ಗ್ರಾಮ ದೇವರುಗಳಿಗೆ ಪ್ರತಿ ವರ್ಷ ಜಾತ್ರೆ ನಡೆದರೆ, ಮತ್ತೆ ಕೆಲವು ದೇವರುಗಳಿಗೆ ಎರಡು, ಮೂರು, ಐದು, ಹತ್ತು, ಹದಿನೈದು ವರ್ಷಗಳಿಗೊಮ್ಮೆ ಅಥವಾ ಅದಕ್ಕೂ ಹೆಚ್ಚು ವರ್ಷಗಳಿಗೊಮ್ಮೆ ಜಾತ್ರೆಗಳು ಜರುಗುತ್ತವೆ. ಗವಿರಂಗನಾಥಸ್ವಾಮಿ ಕ್ಷೇತ್ರದಲ್ಲಿ ಗವಿರಂಗದೇವರ ತೇರು ಮೂರು ವರ್ಷಗಳಿಗೊಮ್ಮೆ ಅಥವಾ ದೇವರು ಅಪ್ಪಣೆ ಕೊಟ್ಟ

ವರ್ಷ ಜರುಗುತ್ತದೆ. ಅರಳಹಳ್ಳಿ ಮಲಿಯಮ್ಮ ದೇವರ ಜಾತ್ರೆಯು ೧೦ ಅಥವಾ ೨೦ ವರ್ಷಗಳಿಗೆ ಅಥವಾ ದೇವಿ ಅಪ್ಪಣೆ ಕೊಟ್ಟ ವರ್ಷ ನಡೆಯುತ್ತದೆ. ಹಿಂದೊಮ್ಮೆ ಈ ದೇವಿಯ ಜಾತ್ರೆ ಎಂಭತ್ತು ವರ್ಷಗಳ ನಂತರ ನಡೆದಿದ್ದಿತು. ಜಾತ್ರೆಗಳ ಮುಖ್ಯ ಲಕ್ಷಣವೆಂದರೆ (ಪದ್ಧತಿ) ಬೇರೆ ಬೇರೆ ಊರುಗಳಲ್ಲಿ ನೆಲೆಸಿರುವ ಆಯಾ ದೇವರುಗಳ ಒಕ್ಕಲುಗಳು ತಮ್ಮ ನೆಂಟರಿಷ್ಟರೊಂದಿಗೆ ಬಂದು ಬಿಡಾರ ಮಾಡಿ, ನಡೆಮಡಿಗಳಿಂದ ದೇವಸ್ಥಾನಕ್ಕೆ ಮೀಸಲಕ್ಕಿ, ಕಾಣಿಕೆಗಳನ್ನು ಒಪ್ಪಿಸುವುದೇ ಆಗಿದೆ. ಅರಳೀಹಳ್ಳಿ ಮಲಿಯಮ್ಮ ದೇವರು ಒಂದು ಕಾಲಕ್ಕೆ ತೊಂಭತ್ತೊಂಭತ್ತು ಗ್ರಾಮಗಳ ದೇವತೆಯಾಗಿದ್ದು, ಅಷ್ಟೂ ಹಳ್ಳಿಗಳ ಒಕ್ಕಲುಗಳು ದೇವಿಗೆ ದೀಪಾರಾಧನೆ, ಹಣ, ಮಕ್ಕಳ ಮುಡಿ, ಮೀಸಲಕ್ಕಿ ಒಪ್ಪಿಸುತ್ತಿದ್ದರು. ತಾಲ್ಲೂಕಿನ 'ರೇವಣಸಿದ್ಧೇಶ್ವರ ದೇವರ ಕಂತೆಸೇವೆ'ಯನ್ನು ಎಷ್ಟೋ ವರ್ಷಗಳಿಗೊಮ್ಮೆ ಮಾಡುತ್ತಾರೆ. ಈ ಸೇವೆ ಬಹಳ ಕಠಿಣವಾದ ಆಚರಣೆಯಾಗಿರುತ್ತದೆ. ಬಾಗೂರು ಹೊನ್ನತ್ತಮ್ಮನ ಜಾತ್ರೆ (ದೇವರು ಮಾಡುವುದು) ಯಲ್ಲೂ ಕಠಿಣವಾದ ಕೆಲವು ಆಚರಣೆಗಳಿವೆ. ಸೂಜಿಕಲ್ಲು ಮೈಲಾರ ದೇವರ ಜಾತ್ರೆಯಲ್ಲಿ ಬಗನೀಗೂಟ ಪವಾಡ ಆಗುತ್ತದೆ.

ಕಂಚೀದೇವರ (ಕಂಚೀಪುರ) ಜಾತ್ರೆಯಲ್ಲಿ ಕಂಚೀದೇವರ ಕುಣಿತ ಅತ್ಯಾಕರ್ಷಕ. ಜಾತ್ರೆಯಲ್ಲಿ ದೇವರ ಮೇಲಕ್ಕೆ ಸಾವಿರಾರು ರೂಪಾಯಿ ಚಿಲ್ಲರೆ ನಾಣ್ಯಗಳನ್ನು ತೂರುವ ಸಂಪ್ರದಾಯ ರಾಜ್ಯದಲ್ಲೇ ವಿಶಿಷ್ಟವಾದುದು. ಈ ದೇವರು ರಾಜ್ಯದಲ್ಲೇ ಮೊದಲು (ಉತ್ತರೇ ಮಳೆ ಸಂದರ್ಭದಲ್ಲಿ) ಅಂಬು ಹೊಡೆಯುವುದು ಸಹ ದಾಖಲೆಯೆ. ಗವಿರಂಗನಾಥ ಸ್ವಾಮಿಯು ರಾಜ್ಯದ ಏಕೈಕ ಕೂರ್ಮಾವತಾರ ಕ್ಷೇತ್ರವೆಂದು ಹೆಸರು ಪಡೆದಿದೆ. ಶ್ರೀರಾಂಪುರ (ಬೂದಿಹಾಳು) ದಲ್ಲಿ ಜರುಗುವ 'ಕುಮಾರಮಲ್ಲ'ನ ಅಂಬು, ಐತಿಹಾಸಿ ಕವೀರನೊಬ್ಬನ ಆರಾಧನೆಯು ಜೀವಂತವಾಗಿರುವುದರ ಸಾಕ್ಷಿಯಾಗಿದೆ. ಮತ್ತೋಡು ಭಾಗೀಮರದಮ್ಮನ ಜಾತ್ರೆಯಲ್ಲಿನ ಬೆಳ್ಳಿಕಣ್ಣಪ್ಪ (ಸೋಮ)ನ ಕುಣಿತ, ಬನಸೀಹಳ್ಳಿ ಏಕನಾಥೇಶ್ವರಿ ಜಾತ್ರೆಯಲ್ಲಿನ ಸೋಮನ ಕುಣಿತ, ದೇವಪುರದ ಕೆರಳಮ್ಮನ ಜಾತ್ರೆಯ ಸೋಮನ ಕುಣಿತ ತಾಲ್ಲೂಕಿನಲ್ಲಿಯೇ ಪ್ರಸಿದ್ಧವಾಗಿವೆ. ಬಾಗೂರು ಅಲ್ಲೂರಮ್ಮನ ಜಾತ್ರೆ, ಇತಿಹಾಸದ ಕಾಲದಲ್ಲಿ 'ಮಹಾಸತಿ' ಯಾದ ಹೆಣ್ಣುಮಗಳೊಬ್ಬಳ ಆರಾಧನೆಗೆ ಇರುವ ಅಪರೂಪದ ಸಾಕ್ಷಿಯಾಗಿದೆ. ಕಬ್ಬಳದ ಕತ್ತಿಕಲ್ಲಾಂಬ ದೇವಿಯ ಜಾತ್ರೆಯಲ್ಲಿ ನಡೆಯುವ 'ಕೊಂಡಿಸಿಡಿ ಸೇವೆ'"ನೋಡುಗರಮೈ 'ಜುಂ' ಅನ್ನಿಸುತ್ತದೆ. ಕಂಗುವಳ್ಳಿಮಹೇಶ್ವರ ದೇವರ ಜಾತ್ರೆ, ಹೊಸದುರ್ಗದ ವೀರಭದ್ರ ದೇವರ ಕೆಂಡ–ಗುಗ್ಗಳೋತ್ಸವ ಅಪರೂಪವಾದ ಆಚರಣೆಗಳು, ಪ್ರಸಿದ್ಧ ತೀರ್ಥಕ್ಷೇತ್ರದಲ್ಲಿ ನಡೆಯುವ ದಶರಥ ರಾಮೇಶ್ವರ ರಥೋತ್ಸವ ರಾಜ್ಯದಲ್ಲಿಯೇ ಅತ್ಯಂತ ವಿಶಿಷ್ಟವಾದ ಜಾತ್ರೆ. ಜಾನಕಲ್ಲು ಶಂಕರಲಿಂಗೇಶ್ವರ ಜಾತ್ರೆ, ಬೂದಾಳು (ಶ್ರೀರಾಂಪುರ) ಅವಧೂತ ಪರಪ್ಪಸ್ವಾಮಿ ಜಾತ್ರೆ–ತೇರು, ಬುರುಡೇಕಟ್ಟೆ ರಂಗನಾಥಸ್ವಾಮಿ ತೇರು, ಅರೇಹಳ್ಳಿ ಕರಿಯಮ್ಮನ ಜಾತ್ರೆ, ಕಡದಿನಕೆರೆ ಆಂಜನೇಯ ದೇವರ ರಥೋತ್ಸವ, ಮಲ್ಲೇನಹಳ್ಳಿ

ತಿಮ್ಮಪ್ಪನ ಜಾತ್ರೆ, ದೊಡ್ಡಗಟ್ಟ ಹಾಗೂ ಗರಗದ ರಾಮದೇವರ ಜಾತ್ರೆ, ಸಂಗೇನಹಳ್ಳಿಯ ಸಂಗಮೇಶ್ವರನ ಜಾತ್ರೆ, ಹಾರಿನ ಕಣಿವೆ ರಂಗನಾಥಸ್ವಾಮಿ ಜಾತ್ರೆ, ಮಾರುಗೊಂಡನ ದಿಬ್ಬದ ಜುಂಜಪ್ಪನ ಜಾತ್ರೆ, ತಂಡಗದ ಆಂಜನೇಯಸ್ವಾಮಿ ಜಾತ್ರೆ, ನಿರುವುಗಲ್ಲಿನ ಹರಿಹರೇಶ್ವರ ರಥೋತ್ಸವ ಮುಂತಾದವು ವೈವಿಧ್ಯಮಯ ಜಾತ್ರೋತ್ಸವಗಳೂ ಹಾಗೂ ಈ ತಾಲ್ಲೂಕಿನ ಧಾರ್ಮಿಕ, ಸಾಂಸ್ಕೃತಿಕ ಚೈತನ್ಯದ ಚಿಲುಮೆಗಳೂ ಆಗಿವೆ.

ಜಾತ್ರೆಗಳಲ್ಲಿ ಸಲ್ಲಿಸಲ್ಪಡುವ ಸರಪಳಿ ಸೇವೆ, ಕತ್ತಿ ಸೇವೆ, ಉರುಪಂಜಿನ ಸೇವೆ, ಪರಾಕು ಸೇವೆ, ಮಣೇವು ಸೇವೆ, ದಾಸಯ್ಯಗಳ ಸೇವೆ, 'ವೀಳ್ಯ' ಎತ್ತುವ ಪ್ರಕ್ರಿಯೆ, ಕೈವಾಡದಾರರ ಜವಾಬ್ದಾರಿಗಳು, ಒಕ್ಕಲುಗಳು ವಾದ್ಯ ಸಮೇತ ಮೀಸಲಕ್ಕಿ ಗೂಡೆಗಳನ್ನು ಹೊತ್ತು ಶ್ರದ್ಧಾ–ಭಕ್ತಿಗಳಿಂದ ಕಳಸದ ಮುತ್ತೈದೆಯರೊಂದಿಗೆ ಸಾಗುವ ದೃಶ್ಯಗಳು ರೋಮಾಂಚನಗೊಳಿಸುವ ಆಚರಣೆಗಳಾಗಿವೆ. ಜಾತ್ರೆಯ ಸಂದರ್ಭಗಳಲ್ಲಿ ಜರುಗುವ ಭಜನೆ, ಕೋಲಾಟ, ಸೋಮನ ಕುಣಿತ ಮುಂತಾದ ಜನಪದ ಕಲೆಗಳ ಪ್ರದರ್ಶನ ಲೋಕವೇ ಸೃಷ್ಟಿಗೊಂಡಿರುತ್ತದೆ. ಜಾತ್ರೆಗಳಲ್ಲಿ ಸೇರುವ ನೂರಾರು ಅಂಗಡಿಗಳ ಸಾಲು, ಪಾನಕ–ಕೋಸಂಬರಿ ಹಂಚುವ ಎತ್ತಿನ ಗಾಡಿಗಳ ಮೆರವಣಿಗೆ ಇವೆಲ್ಲ ನಮ್ಮ ಸಂಸ್ಕೃತಿಯ ಜೀವಂತಿಕೆಯ ಲಕ್ಷಣಗಳಾಗಿವೆ.

## ಹೊಸದುರ್ಗ ತಾಲ್ಲೂಕಿನ ಪ್ರಮುಖ ಜಾತ್ರೆಗಳ ಪಟ್ಟಿ

| ಊರು | ದೇವರು | ನಡೆಯುವ ತಿಂಗಳು | ಅವಧಿ | ಭಾಗವಹಿಸುವವರ ಸಂಖ್ಯೆ | ಹೊಸದುರ್ಗದಿಂದ ದೂರ |
|---|---|---|---|---|---|
| ಹೊನ್ನೇನಹಳ್ಳಿ | ಕೆರಳಮ್ಮದೇವಿ | ಡಿಸೆಂಬರ್ ಅಥವಾ ಜನವರಿ | ೧ ದಿನ ಹಾಗೂ ೧ ರಾತ್ರಿ | ೫೦೦೦ | ೬ ಕಿ.ಮೀ |
| ಜಾನಕಲ್ಲು | ಶಂಕರಲಿಂಗೇಶ್ವರ | ಫೆಬ್ರವರಿ (ಶಿವರಾತ್ರಿ) | ೧ ದಿನ | ೨೦೦೦ | ೧೫ ಕಿ.ಮೀ |
| ದುಗ್ಗಾವರ | ಕೋಟೆಕಲ್ಲು ರಂಗನಾಥಸ್ವಾಮಿ | ಮಾರ್ಚ್ (ಜಾನಕಲ್ಲು ಜಾತ್ರೆ ನಡೆದ ೧೫ ದಿನಕ್ಕೆ) | ೧ ದಿನ | ೨೦೦೦ | ೨೦ ಕಿ.ಮೀ |
| ದೇವಪುರ | ಕೆರಳಮ್ಮದೇವಿ | ಜನವರಿ | ೧೦ ದಿನ | ೫೦೦೦ | ೬ ಕಿ.ಮೀ |

| | | | | | |
|---|---|---|---|---|---|
| ಬನಸೀಹಳ್ಳಿ | ಏಕನಾಥೇಶ್ವರಿ (ಪಾರ್ವತಿದೇವಿ) | ಫೆಬ್ರವರಿ (ಮಾಘ, ಬಹುಳ ಮುಗಿದ ೧ ವಾರಕ್ಕೆ) | ೬ ದಿನ | ೫೦೦೦ | ೧೨ ಕಿ.ಮೀ |
| ದಶರಥ ರಾಮೇಶ್ವರ ಕ್ಷೇತ್ರ | ದಶರಥ ರಾಮೇಶ್ವರ | ಮಾರ್ಚ್ (ಫಾಲ್ಗುಣ ಶುಕ್ಲ) ಶಿವರಾತ್ರಿಯ ನಂತರ ೧೧ನೇ ದಿನಕ್ಕೆ ತೇರು | ೫ ದಿನ | ೧೦೦೦೦ | ೨೭ ಕಿ.ಮೀ |
| ಬಾಗೂರು | ಚನ್ನಕೇಶವ | ಮಾರ್ಚ್ (ಫಾಲ್ಗುಣ ಶುದ್ಧ ಪುಬ್ಬಾ ನಕ್ಷತ್ರದಂದು ತೇರು) | ೧೦ ದಿನ | ೫೦೦೦ | ೬ ಕಿ.ಮೀ. |
| ದೇವಿಗೆರೆ | ಕರಿಯಮ್ಮ | ಏಪ್ರಿಲ್ | ೧ ದಿನ | ೧೦೦೦ | ೭ ಕಿ.ಮೀ. |
| ಮತ್ತೋಡು | ಭಾಗೀಮರದಮ್ಮ | ಏಪ್ರಿಲ್ (ಚೈತ್ರ ಶುದ್ಧ) | ೭ ದಿನ | ೫೦೦೦ | ೧೮ ಕಿ.ಮೀ. |
| ಹೊಸದುರ್ಗ | ದುರ್ಗಾಂಬಿಕೆ | ಏಪ್ರಿಲ್ (ಚೈತ್ರ ಬಹುಳ) | ೧೨ ದಿನ | ೧೦೦೦೦ | – |
| ಶ್ರೀರಾಂಪುರ | ಪರಪ್ಪಸ್ವಾಮಿ | ಮಾರ್ಚ್ (ಪಾಲ್ಗುಣ ಶುದ್ಧ) | ೫ದಿನ | ೧೦೦೦೦ | ೨೨ ಕಿ.ಮೀ. |
| ಕಂಚೀಪುರ | ಕಂಚೀ ವರದರಾಜಸ್ವಾಮಿ | ಮಾರ್ಚ್ (ಚೈತ್ರ ಬಹುಳ) | ೧೧ ದಿನ | ೨೦೦೦೦ | ೨೫ ಕಿ.ಮೀ. |
| ಮೈಲಾರಪುರ ಕ್ಷೇತ್ರ | ಮೈಲಾರ ಲಿಂಗೇಶ್ವರ | ಸೆಪ್ಟೆಂಬರ್–ಅಕ್ಟೋಬರ್ (ವಿಜಯ ದಶಮಿಯ ನಂತರದ ದಿನ) | ೧೩ ದಿನ | ೨೦೦೦೦ | ೨೪ ಕಿ.ಮೀ. |
| ಗವಿರಂಗನಾಥ ಕ್ಷೇತ್ರ | ಗವಿರಂಗನಾಥ ಸ್ವಾಮಿ | ಏಪ್ರಿಲ್ (ಚೈತ್ರಶುದ್ಧ) ಅಥವಾ ೬ ವರ್ಷಕ್ಕೊಮ್ಮೆ | ೧೩ ದಿನ | ೨೫೦೦೦ | ೨೪ ಕಿ.ಮೀ. |
| ಗವಿರಂಗನಾಥ ಕ್ಷೇತ್ರ | ಗವಿರಂಗನಾಥ ಸ್ವಾಮಿ | ಅಕ್ಟೋಬರ್ (ವಿಜಯದಶಮಿ) | ೧೨ ದಿನ | ೧೦೦೦೦ | ೨೪ ಕಿ.ಮೀ. |
| ಹಾರನ ಕಣಿವೆ ಕ್ಷೇತ್ರ | ರಂಗನಾಥಸ್ವಾಮಿ | ಅಕ್ಟೋಬರ್ (ವಿಜಯ ದಶಮಿ) | ೪ ದಿನ | ೨೫೦೦೦ | ೨೮ ಕಿ.ಮೀ. |
| ಕಂಗುವಳ್ಳಿ | ಮಹೇಶ್ವರಸ್ವಾಮಿ | ಜನವರಿ | ೩ ದಿನ | ೧೦೦೦೦ | ೬ ಕಿ.ಮೀ. |
| ಬಾಗೂರು | ಬನಶಂಕರಿ | ಜನವರಿ (ಬನದ ಹುಣ್ಣಿಮೆ) | ೧ ದಿನ | ೫೦೦೦ | ೬ ಕಿ.ಮೀ. |

| | | | | | |
|---|---|---|---|---|---|
| ಕಬ್ಬಳ | ಕತ್ತಿಕಲ್ಲಮ್ಮ | ಮಾರ್ಚಿ (ಫಾಲ್ಗುಣ ಶುಕ್ಲ) | ೩ ದಿನ | ೫೦೦೦ | ೧೨ ಕಿ.ಮೀ. |
| ಕಂಚೀಪುರ | ವರದರಾಜಸ್ವಾಮಿ | ಸೆಪ್ಟೆಂಬರ್ (ಉತ್ತರೇಮಳೆ ಹುಟ್ಟಿದ ಮೊದಲನೆ ಸೋಮವಾರ) | ೭ ದಿನ | ೧೦೦೦೦ | ೨೭ ಕಿ.ಮೀ. |
| ಹೆಗ್ಗೆರೆ | ಕೆಂಪರಾಜೇಶ್ವರಿ | ಮಾರ್ಚ್ (ಫಾಲ್ಗುಣ ಶುದ್ಧ) | ೫ ದಿನ | ೨೦೦೦ | ೨೪ ಕಿ.ಮೀ. |
| ಅರಳಹಳ್ಳಿ | ಮಲಿಯಮ್ಮದೇವಿ | ನವೆಂಬರ್ (ಕಾರ್ತಿಕ) ಹಾಗೂ ಅನೇಕ ವರ್ಷ ಗಳಿಗೊಮ್ಮೆ ಜಾತ್ರೆ | ೪ ದಿನ | ೧೨೦೦೦ | ೭ ಕಿ.ಮೀ. |
| ಬುರುಡೇಕಟ್ಟೆ | ರಂಗನಾಥಸ್ವಾಮಿ | ಏಪ್ರಿಲ್ | ೩ ದಿನ | ೨೦೦೦ | ೧೨ ಕಿ.ಮೀ. |
| ಗೂಳೀಹಟ್ಟಿ | ಕರಿಯಮ್ಮ | ಏಪ್ರಿಲ್ (ಯುಗಾದಿ ನಂತರ) | ೨ ದಿನ | ೧೦೦೦ | ೨೦ ಕಿ.ಮೀ. |
| ಕಡದಿನಕೆರೆ | ಆಂಜನೇಯ | ಏಪ್ರಿಲ್ (ರಾಮ ನವಮಿಯ ನಂತರ) | ೧ ದಿನ | ೧೦೦೦ | ೧೦ ಕಿ.ಮೀ. |
| ಮಲ್ಲೇನಹಳ್ಳಿ | ತಿಮ್ಮಪ್ಪ ದೇವರು | ಏಪ್ರಿಲ್ (ಯುಗಾದಿ ನಂತರದ ೧೫ ದಿನಕ್ಕೆ) | ೧ ದಿನ | ೧೦೦೦ | ೧೪ ಕಿ.ಮೀ. |
| ಮಾರು ಗೊಂಡನದಿಬ್ಬ | ಜುಂಜಪ್ಪ | ನವೆಂಬರ್ (ಕಾರ್ತಿಕ) | ೧ ದಿನ | ೨೦೦೦ | ೭ ಕಿ.ಮೀ. |
| ಹೊಸದುರ್ಗ | ವೀರಭದ್ರಸ್ವಾಮಿ | ನವೆಂಬರ್ (ಕಾರ್ತೀಕ) ಕೆಂಡ, ಗುಗ್ಗಳ ಸೇವೆ | ೧ ದಿನ | ೨೦೦೦ | ಷರಾ : ಗುಗ್ಗಳ, ಕೆಂಡ |
| ಹಳೇ ಕುಂದೂರು | ಶ್ರೀಮದ್ ಆಂಜನೇಯ ಸ್ವಾಮಿ | ಅಕ್ಟೋಬರ್ ಮುಳ್ಳುಪವಾಡ (ವಿಜಯದಶಮಿ) | ೧೦ ದಿನ | ೨೦೦೦ | ೧೦ ಕಿ.ಮೀ. |
| ಬೆಲಗೂರು | ಪ್ರತಾಪಾಂಜನೇಯ ಹಾಗೂ ಲಕ್ಷ್ಮೀ ನಾರಾಯಣಸ್ವಾಮಿ | ಡಿಸೆಂಬರ್ | ೧ ದಿನ | ೧೦೦೦ | ೧೫ ಕಿ.ಮೀ. |

| | | | | | |
|---|---|---|---|---|---|
| ಕುಂದೂರು ಗೊಲ್ಲರಹಟ್ಟಿ | ಅಂಬಾದೇವಿ | ಫೆಬ್ರವರಿ | ೩ ದಿನ | ೧೦೦೦ | ೧೩ ಕಿ.ಮೀ |
| ದುಗ್ಗಾವರ | ಕೋಟೆಕಲ್ಲು ರಂಗನಾಥ | ಅಕ್ಟೋಬರ್ | ೧ ದಿನ | ೧೦೦೦ | |
| ನಾಗರಕಟ್ಟೆ | ಮಲ್ಲಿಕಾರ್ಜುನ ಸ್ವಾಮಿ | ಡಿಸೆಂಬರ್ | ೧ ದಿನ | ೧೦೦೦ | |
| ನಾಕೀಕೆರೆ | ಕಲ್ಲೇಶ್ವರ ಸ್ವಾಮಿ | ಏಪ್ರೀಲ್ ಅಥವಾ ಮೇ | ೧ ದಿನ | ೫೦೦ | |
| ಬುರುಡೇಕಟ್ಟೆ | ಲಕ್ಷ್ಮೀರಂಗನಾಥ ಸ್ವಾಮಿ | ಏಪ್ರೀಲ್ | ೧ ದಿನ | ೨೦೦೦ | ೧೦ ಕಿ.ಮೀ |
| ಚಿಕ್ಕಬ್ಯಾಲದ ಕೆರೆ | ಕರಿಯಮ್ಮದೇವಿ | ಮೇ | ೨ ದಿನ | ೧೫೦೦ | ೨೫ ಕಿ.ಮೀ |
| ಹಳೇಮಳಲಿ | ಕರಿಯಮ್ಮದೇವಿ | ಮಾರ್ಚ್ | ೭ ದಿನ | ೧೦೦೦ | ೮ ಕಿ.ಮೀ |
| ಸೋಮಸಂದ್ರ | ಆಂಜನೇಯ ಸ್ವಾಮಿ | ಡಿಸೆಂಬರ್ | ೨ ದಿನ | ೨೫೦೦ | ೧೫ ಕಿ.ಮೀ |
| ಚಿತ್ತಯ್ಯಹಟ್ಟಿ | ಆಲದ ಮರದ ಜುಂಜಪ್ಪ | ಡಿಸೆಂಬರ್ | ೫ ದಿನ | ೧೦೦೦ | ೫ ಕಿ.ಮೀ |
| ನೀರಗುಂದ | ಯಳಗಂಧೇಶ್ವರಿ | ಏಪ್ರೀಲ್ | ೭ ದಿನ | ೧೦೦೦ | ೧೧ ಕಿ.ಮೀ |
| ಗುಡ್ಡದನೇರಲ ಕೆರೆ | ತಿಪ್ಪೇರುದ್ರಸ್ವಾಮಿ | ಮಾರ್ಚ್ | ೧ ದಿನ | ೧೦೦೦ | ೨೫ ಕಿ.ಮೀ |

**ಆಧಾರ: ಕ್ಷೇತ್ರಕಾರ್ಯದಿಂದ ಸಂಗ್ರಹಣೆ, ಶ್ರೀ ಬಾಗೂರು ನಾಗರಾಜಪ್ಪ ಹಾಗೂ ಇವರ ಹೊಸದುರ್ಗ ಸೀಮೆ ಜಾನಪದ ಕೃತಿ**

## ಅಧ್ಯಾಯ–೪

# ಕೃಷಿ ಮತ್ತು ನೀರಾವರಿ

**ಚಿ**ಕ್ಕಯಗಟಿ (ಹೊಸದುರ್ಗ ತಾಲ್ಲೂಕು)ಯ ಕ್ರಿ.ಶ.೧೯೪೮ರ ಶಾಸನದಲ್ಲಿ ರೈತರನ್ನು 'ದವಸಿಗರು' ಎಂದು ಕರೆಯಲಾಗಿದೆ ಹಾಗೂ ಮಂಡ್ಯ ಜಿಲ್ಲೆ ಮಳವಳ್ಳಿ ತಾ॥ ಚೊಟ್ಟಿನಹಳ್ಳಿಯ ಒಂದು ಶಾಸನದಲ್ಲಿ ರೈತರನ್ನು 'ಆರಂಭಕಾರ' ಎನ್ನಲಾಗಿದೆ.

ಹೊಸದುರ್ಗ ತಾಲ್ಲೂಕು ಕೃಷಿ ಪ್ರಧಾನ ತಾಲ್ಲೂಕು. ಬೇಸಾಯ ಸಂಸ್ಕೃತಿ ಇಲ್ಲಿನ ೨೨೫ ಗ್ರಾಮಗಳಲ್ಲಿ ಮನೆ ಮಾಡಿದೆ. ಇಲ್ಲಿನ ವ್ಯವಸಾಯವು ಮಳೆಯಾಧಾರಿತವಾಗಿದೆ. ಸ್ವಲ್ಪಮಟ್ಟಿಗೆ ಬಾವಿ, ಕೆರೆ, ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಕರ್ಯ ಇರುತ್ತದೆ. ಸಾಮಾನ್ಯವಾಗಿ ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಯುಗಾದಿ ಹಬ್ಬದಂದು 'ಹೊನ್ನಾರು' ಹೂಡುವ ಮೂಲಕ ಪ್ರಾರಂಭಿಸುವುದು ವಾಡಿಕೆಯಾಗಿದೆ. ಬಯಲು ಪ್ರದೇಶವಾದ್ದರಿಂದ ಇಲ್ಲಿ ಮಳೆ ಕಡಿಮೆ. ವಾರ್ಷಿಕ ಸರಾಸರಿ ವಾಡಿಕೆಮಳೆ ೬೨೬ ಮಿ.ಮೀ ಇರುತ್ತದೆ. ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣವು ೧,೧೨,೫೭೪ ಹೆಕ್ಟೇರ್ ಇದ್ದು, ತಾಲ್ಲೂಕಿನ ಒಟ್ಟು ಕೃಷಿ ಭೂಮಿ ೬೪,೦೦೦ ಹೆಕ್ಟೇರ್ ಇದೆ.

### ಭೂಮಿಯ ಬಳಕೆ

೨೦೧೫–೧೬ ರ ವಾರ್ಷಿಕ ಋತು ಮತ್ತು ಬೆಳೆ ವರದಿಯ ಪ್ರಕಾರ ಹೆಕ್ಟೇರುಗಳಲ್ಲಿ– ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೧೨,೫೭೪, ಅರಣ್ಯ ಪ್ರದೇಶ ೧೯,೦೭೪, ಸಾಗುವಳಿ ಲಭ್ಯವಿಲ್ಲದ ಭೂಮಿ–ವ್ಯವಸಾಯೇತರ–೧೧,೪೦೦, ಬಂಜರು ಪ್ರದೇಶ ೨೫೮೪, ಒಟ್ಟು ೧೩೯೮೪–ಸಾಗುವಳಿ ಮಾಡದಿರುವ ಇತರ ಭೂಮಿ, ಸಾಗುವಳಿಗೆ ಯೋಗ್ಯವಾದ ಬಂಜರು ೧೦೩೭, ಖಾಯಂ ಗೋಮಾಳ ೩,೩೯೨, ವೃಕ್ಷ ಮತ್ತು ತೋಪುಗಳು ೧,೪೭೯, ಒಟ್ಟು ೫,೯೦೮. ಬೀಳುಭೂಮಿ: ಚಾಲ್ತಿ ೪,೩೫೮ ಇತರೆ ೪,೫೫೦ ಒಟ್ಟು ೮,೯೦೮. ಬಿತ್ತನೆಯಾದ ಪ್ರದೇಶ: ನಿವ್ವಳ ೬೪,೭೦೦, ಒಂದಕ್ಕಿಂತ ಹೆಚ್ಚು ಬಾರಿ ೧೨,೩೭೧, ಒಟ್ಟು ೭೯,೯೭೧ ಇದೆ.

೨೦೧೫-೧೬ರ ಗಣತಿಯಂತೆ ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ: ಅತಿಸಣ್ಣ ಭೂ ಹಿಡುವಳಿದಾರರು (೧ ಹೆಕ್ಟೇರಿಗಿಂತ ಕಡಿಮೆ) ಸಂಖ್ಯೆ ೨೦,೬೦೯ ಇದ್ದು, ವಿಸ್ತೀರ್ಣ ೧೦,೨೫೪.೭೮ ಹೆ. ಇದೆ. ಸಣ್ಣ (೧ರಿಂದ ೨ ಹೆಕ್ಟೇರ್) ಸಂಖ್ಯೆ–೧೧,೩೪೪, ವಿಸ್ತೀರ್ಣ–೧೫,೭೯೫.೪೩ ಹೆ., ಅರೆಮಧ್ಯಮ (೨ ರಿಂದ ೪ ಹೆಕ್ಟೇರ್) ಸಂಖ್ಯೆ–೭,೦೦೩ ವಿಸ್ತೀರ್ಣ–೧೮,೮೮೪.೧೨ ಹೆಕ್ಟೇರ್ ಇದೆ. ಮಧ್ಯಮ (೪ ರಿಂದ ೧೦ ಹೆಕ್ಟೇರ್) ಸಂಖ್ಯೆ–೩,೦೦೩, ವಿಸ್ತೀರ್ಣ–೧೬,೯೫೨.೨೯ ಹೆಕ್ಟೇರ್ ಇದೆ. ದೊಡ್ಡ (೧೦ ಹೆಕ್ಟೇರ್‌ಗೂ ಹೆಚ್ಚು) ಸಂಖ್ಯೆ–೩೧೯, ವಿಸ್ತೀರ್ಣ–೪,೨೫೧.೫೫ ಹೆಕ್ಟೇರ್ ಇದೆ. ಒಟ್ಟು ಸಂಖ್ಯೆ: ೪೨,೨೭೮, ವಿಸ್ತೀರ್ಣ–೬೬,೧೩೮.೧೭ ಹೆಕ್ಟೇರ್ ಇದೆ.

ಅತಿಸಣ್ಣ ಭೂಹಿಡುವಳಿದಾರರು (ಪರಿಶಿಷ್ಟ ಜಾತಿ) ೧ ಹೆಕ್ಟೇರ್‌ಗಿಂತ ಕಡಿಮೆ: ಸಂಖ್ಯೆ: ೩,೧೯೬, ವಿಸ್ತೀರ್ಣ–೩೪.೪೧ ಹೆಕ್ಟೇರ್, ಪರಿಶಿಷ್ಟ ಪಂಗಡ:ಸಂಖ್ಯೆ: ೧,೩೯೮, ವಿಸ್ತೀರ್ಣ–೫೪.೧೭ ಹೆಕ್ಟೇರ್. ಸಣ್ಣ ಭೂಹಿಡುವಳಿದಾರರು ಪರಿಶಿಷ್ಟ ಜಾತಿ (೧ ರಿಂದ ೨ ಹೆಕ್ಟೇರ್) ಸಂಖ್ಯೆ: ೨,೦೦೧, ವಿಸ್ತೀರ್ಣ–೨,೭೮೯.೮೯ ಹೆಕ್ಟೇರ್, ಪರಿಶಿಷ್ಟ ಪಂಗಡ ಸಂಖ್ಯೆ:೧,೦೦೨, ವಿಸ್ತೀರ್ಣ–೧,೩೯೮.೫೩ ಹೆಕ್ಟೇರ್, ಅರೆಮಧ್ಯಮ ಕೃಷಿ ಹಿಡುವಳಿದಾರರು (೨ ರಿಂದ ೪ ಹೆಕ್ಟೇರ್‌ವರೆಗೆ) ಪರಿಶಿಷ್ಟ ಜಾತಿ ಸಂಖ್ಯೆ ೬೯೪, ವಿಸ್ತೀರ್ಣ–೧,೭೯೩.೪೭ ಹೆಕ್ಟೇರ್, ಪರಿಶಿಷ್ಟ ಪಂಗಡ ಸಂಖ್ಯೆ: ೩೯೮, ವಿಸ್ತೀರ್ಣ–೧೦೭೦.೬೧ ಹೆಕ್ಟೇರ್, ಮಧ್ಯಮ ಭೂ ಹಿಡುವಳಿದಾರರು (೪ ರಿಂದ ೧೦ ಹೆಕ್ಟೇರ್‌ವರೆಗೆ), ಪರಿಶಿಷ್ಟ ಜಾತಿ ಸಂಖ್ಯೆ ೧೫೦, ವಿಸ್ತೀರ್ಣ ೮೧೫.೭೩ ಹೆಕ್ಟೇರ್, ಪರಿಶಿಷ್ಟ ಪಂಗಡ ಸಂಖ್ಯೆ: ೧೧೮, ವಿಸ್ತೀರ್ಣ–೬೫೯.೭೫ ಹೆಕ್ಟೇರ್. ದೊಡ್ಡ ಭೂ ಹಿಡುವಳಿದಾರರು (೧೦ ಹೆಕ್ಟೇರ್‌ಗಿಂತ ಹೆಚ್ಚು) ಪರಿಶಿಷ್ಟ ಜಾತಿ ಸಂಖ್ಯೆ: ೧೦, ವಿಸ್ತೀರ್ಣ ೧೩೬.೯೯ ಹೆಕ್ಟೇರ್, ಪರಿಶಿಷ್ಟ ಪಂಗಡ ಸಂಖ್ಯೆ: ೧೨, ವಿಸ್ತೀರ್ಣ ೧೮೧.೬೨ ಹೆಕ್ಟೇರ್ ಇವೆ. ಒಟ್ಟು ಭೂ ಹಿಡುವಳಿದಾರರು (ಪರಿಶಿಷ್ಟ ಜಾತಿ) ಸಂಖ್ಯೆ: ೬,೦೫೧, ವಿಸ್ತೀರ್ಣ–೭,೨೭೦.೪೭ ಹೆಕ್ಟೇರ್, ಪರಿಶಿಷ್ಟ ಪಂಗಡ ಸಂಖ್ಯೆ: ೨,೯೨೮, ವಿಸ್ತೀರ್ಣ–೪,೦೬೪.೬೮ ಹೆಕ್ಟೇರ್‌ಗಳು.

## ಭೂಮಿಯ ಬಳಕೆ

| | | | ೨೦೧೩–೧೪ರ ಗಣತಿ | ೨೦೧೪–೧೫ರ ಗಣತಿ | ೨೦೧೫–೧೬ರ ಗಣತಿ |
|---|---|---|---|---|---|
| ೧ | ಭೌಗೋಳಿಕ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | | ೧೧೨೫೭೪ | ೧೧೨೫೭೪ | ೧೧೨೫೭೪ |
| ೨ | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | | | |
| | ಎ | ಅರಣ್ಯ | ೧೯೦೭೪ | ೧೯೦೭೪ | ೧೯೦೭೪ |
| | ಬಿ | ವ್ಯವಸಾಯೇತರ | ೧೦೦೮೮ | ೧೦೦೮೮ | ೧೧೪೦೦ |

| | | | | | |
|---|---|---|---|---|---|
| | ಸಿ | ಬಂಜರು | ೨೫೮೪ | ೨೫೮೪ | ೨೫೮೪ |
| | ಡಿ | ಒಟ್ಟು | ೧೨೬೭೨ | ೧೨೬೭೨ | ೧೩೯೮೪ |
| ೩ | ಸಾಗುವಳಿ ಮಾಡದಿರುವ ಇತರೆ ಭೂಮಿ | | | | |
| | ಎ | ಸಾಗುವಳಿಗೆ ಯೋಗ್ಯವಾದ ಬಂಜರು | ೧೦೩೭ | ೧೦೩೭ | ೧೦೩೭ |
| | ಬಿ | ಖಾಯಂ ಗೋಮಾಳ | ೩೩೯೨ | ೩೩೯೨ | ೩೩೯೨ |
| | ಸಿ | ವೃಕ್ಷ ಮತ್ತು ತೋಪುಗಳು | ೧೪೭೯ | ೧೪೭೯ | ೧೪೭೯ |
| | ಡಿ | ಒಟ್ಟು | ೫೯೦೮ | ೫೯೦೮ | ೫೯೦೮ |
| ೪ | ಬೀಳು ಭೂಮಿ | | | | |
| | ಎ | ಚಾಲ್ತಿ | ೧೬೨೨ | ೨೧೮೦ | ೪೩೫೮ |
| | ಬಿ | ಇತರೆ | ೪೫೫೦ | ೪೫೪೦ | ೪೫೫೦ |
| | ಸಿ | ಒಟ್ಟು | ೬೧೭೨ | ೬೭೨೦ | ೮೯೦೮ |
| ೫ | ಬಿತ್ತನೆಯಾದ ಪ್ರದೇಶ | | | | |
| | ಎ | ನಿವ್ವಳ | ೬೮೭೪೮ | ೬೮೨೦೦ | ೬೪೭೦೦ |
| | ಬಿ | ಒಂದಕ್ಕಿಂತ ಹೆಚ್ಚು ಬಾರಿ | ೧೩೩೦೦ | ೧೫೬೩೪ | ೧೨೩೭೧ |
| | ಸಿ | ಒಟ್ಟು | ೮೨೦೪೮ | ೮೩೮೩೪ | ೭೯೯೭೧ |

**ಆಧಾರ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೩-೧೪, ೨೦೧೪-೧೫ ಹಾಗೂ ೨೦೧೫-೧೬**

## ಕೃಷಿ ಬೆಳೆಗಳು-ರಾಗಿ

ಸಮಶೀತೋಷ್ಣವಲಯದಲ್ಲಿ ಸಮೃದ್ಧವಾಗಿ ಬೆಳೆಯುವ ರಾಗಿ ಬೆಳೆಯು, ದಕ್ಷಿಣ ಕರ್ನಾಟಕ ಜನರ ಮುಖ್ಯ ಆಹಾರ ಬೆಳೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಪ್ರಮುಖ ಬೆಳೆ ರಾಗಿಯಾಗಿದ್ದು, ಇಲ್ಲಿನ ಭೂಫಲವತ್ತತೆ ರಾಗಿ ಬೆಳೆಗೆ ಪೂರಕವಾಗಿದೆ. ಹೊಸದುರ್ಗ ಹೋಬಳಿಯ ವ್ಯಾಪ್ತಿಯಲ್ಲಿ ಜಾಳು-ಕಪ್ಪು-ಮರಳು ಮಿಶ್ರಿತ ಕೆಂಪು ಭೂಮಿ ಇದೆ. ಮತ್ತೋಡು-ಹೋಬಳಿ ವ್ಯಾಪ್ತಿಯಲ್ಲಿ ಕೆಂಪು ಮತ್ತು ಮರಳು ಮಿಶ್ರಿತ ಮರಳುಮಣ್ಣು ಇದ್ದು, ಕಬ್ಬಿಣ ಅಂಶವನ್ನು ಒಳಗೊಂಡು ಫಲವತ್ತಾಗಿದೆ. ಶ್ರೀರಾಂಪುರ ಹೋಬಳಿಯ ವ್ಯಾಪ್ತಿಯ ಭೂಮಿಯು ಮರಳು ಮಿಶ್ರಿತ ಕೆಂಪು ಇದ್ದು ಫಲವತ್ತಾಗಿದೆ. ಹೀಗೆ ರಾಗಿ ಬೆಳೆಗೆ ಸೂಕ್ತವಾದ ಭೂಗುಣ ತಾಲ್ಲೂಕಿನಲ್ಲಿದೆ. ಕಪ್ಪು ಎರೆಭೂಮಿಯೂ ಸಾಕಷ್ಟಿದೆ. ಹೊಸದುರ್ಗ ತಾಲ್ಲೂಕು, ಜಿಲ್ಲೆಯಲ್ಲೇ ಅತಿ ಹೆಚ್ಚು ರಾಗಿ ಬೆಳೆಯುವ ತಾಲೂಕಾಗಿರುವುದು ಅಂಕಿ-ಅಂಶಗಳಿಂದ ದೃಢಪಟ್ಟಿರುತ್ತದೆ. ಆ ವಿವರಗಳು

ಹೀಗಿವೆ: ೧೯೯೬-೯೭ನೇ ವರ್ಷದಲ್ಲಿ ರಾಗಿ ಬೆಳೆದ ಒಟ್ಟು ವಿಸ್ತೀರ್ಣ-೨೧,೭೩೭ ಹೆಕ್ಟೇರುಗಳು, ೧೯೯೮-೯೯ರಲ್ಲಿ ೨೦,೯೭೮ ಹೆಕ್ಟೇರ್, ೨೦೧೦-೧೧ರಲ್ಲಿ ೨೧,೯೯೫ ಹೆಕ್ಟೇರು ಹಾಗೂ ೨೦೧೫-೧೬ರಲ್ಲಿ ೨೫೬೩೦ ಹೆಕ್ಟೇರ್‌ಗಳಾಗಿದೆ. ರಾಗಿಯಿಂದ ತಯಾರಾದ ಮುದ್ದೆ, ರೊಟ್ಟಿ, ಅಂಬಲಿ, ಕೀಲ್ಸ, ಸಂಡಿಗೆ ಮುಂತಾದ ಆಹಾರದ ಬಳಕೆ ತಾಲ್ಲೂಕಿನಲ್ಲಿ ರೂಢಿಯಲ್ಲಿದ್ದು, ಸೇವಿಸುವುದು ಅನಿವಾರ್ಯವಾಗಿರುವುದರಿಂದ, ಹಿಂದಿನ ಕಾಲದಿಂದಲೂ ರಾಗಿ ಜನಪ್ರಿಯವಾಗಿದೆ. 'ರಾಗಿಯನು ತಿಂಬುವನು ನಿರೋಗಿ ಎಂದೆನಿಸುವನು' ಎಂಬ ಕೃಷಿ ನಾಣ್ಣುಡಿ ಪ್ರಚಲಿತದಲ್ಲಿದೆ.

### ಇತರೆ ಬೆಳೆಗಳು

ತಾಲ್ಲೂಕಿನಲ್ಲಿ ಬೆಳೆಯುವ ಇತರೆ ಏಕದಳ ಧಾನ್ಯಗಳೆಂದರೆ ಜೋಳ, ಮುಸುಕಿನ ಜೋಳ, ಬತ್ತ ಇತ್ಯಾದಿ. ಜೋಳ ಬೆಳೆಯುವ ಪ್ರದೇಶ ೨೦೧೦-೧೧ರಲ್ಲಿ ೨,೦೬೩ ಹೆಕ್ಟೇರ್‌ನಷ್ಟಿದೆ. ೧೯೯೬-೯೭ರಲ್ಲಿ ೭,೩೦೪ ಹೆಕ್ಟೇರ್ ಹಾಗೂ ೧೯೯೮-೯೯ರಲ್ಲಿ ೭,೯೯೫ ಹೆಕ್ಟೇರ್, ೨೦೧೫-೧೬ರಲ್ಲಿ ೨೪೩ ಹೆಕ್ಟೇರ್ ಇದ್ದಿತು. ಜೋಳ ಬೆಳೆಯುವುದು ತಾಲ್ಲೂಕಿನಲ್ಲಿ ಕಡಿಮೆಯಾಗಿರುವುದನ್ನು ಈ ತಃಖ್ತೆ ತೋರಿಸುತ್ತದೆ. ಮುಸುಕಿನ ಜೋಳ ಬೆಳೆಯನ್ನು ೨೦೧೦-೧೧ರಲ್ಲಿ ೯,೫೭೫ ಹೆಕ್ಟೇರ್, ೨೦೧೫-೧೬ರಲ್ಲಿ ೬೨೧೬ ನಷ್ಟು ಬೆಳೆಯಲಾಗಿದೆ. ೧೯೯೬-೯೭ರಲ್ಲಿ ಕೇವಲ ೮೭ ಹೆಕ್ಟೇರ್‌ನಲ್ಲಿ ಹಾಗೂ ೧೯೯೮-೯೯ರಲ್ಲಿಯೂ ಕೇವಲ ೩೬ ಹೆಕ್ಟೇರ್‌ನಲ್ಲಿ ಮಾತ್ರ ಬೆಳೆಯಲಾಗಿದ್ದಿತು. ಬತ್ತವನ್ನು ೨೦೧೦-೧೧ರಲ್ಲಿ ೭೦೦ ಹೆಕ್ಟೇರ್, ೨೦೧೫-೧೬ರಲ್ಲಿ ೧೧ ಹೆಕ್ಟೇರ್‌ನಷ್ಟು ಬೆಳೆಯಲಾಗಿದ್ದಿತು. ೧೯೯೬-೯೭ರಲ್ಲಿ ೮೭೦ ಹೆಕ್ಟೇರ್‌ನಷ್ಟು ಹಾಗೂ ೧೯೯೮-೯೯ರಲ್ಲಿ ೭೫೮ ಹೆಕ್ಟೇರ್ ಬೆಳೆಯಲಾಗಿದ್ದಿತು. ಹಿಂದಿನ ದಶಕಕ್ಕಿಂತ ಬತ್ತ ಬೆಳೆಯುವುದು ಕಡಿಮೆಯಾಗಿರುವುದು ಗೋಚರಿಸುತ್ತದೆ. ಸಜ್ಜೆ ಬೆಳೆಯನ್ನು ೧೯೯೬-೯೭ರಲ್ಲಿ ೪೬೦ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿದ್ದಿತು. ೧೯೯೮-೯೯ರಲ್ಲಿ ೩೨೭ ಹೆಕ್ಟೇರ್‌ಗೆ ಇಳಿದು, ೨೦೧೦-೧೧ರಲ್ಲಿ ಕೇವಲ ೫ ಹೆಕ್ಟೇರ್ ಹಾಗೂ ೨೦೧೫-೧೬ರಲ್ಲಿ ೨೫ ಹೆಕ್ಟೇರ್‌ಗೆ ಕುಸಿದಿದೆ. ಅಂದರೆ ಸಜ್ಜೆ ಬೆಳೆಯುವುದು ತಾಲ್ಲೂಕಿನ ರೈತರು ಕೈಬಿಟ್ಟು ಬೇರೆ-ಬೇರೆ ಬೆಳೆಗಳತ್ತ ಗಮನ ಕೊಟ್ಟಿದ್ದಾರೆ. ನವಣೆ, ಸಾವೆ, ಹಾರಕ ಮುಂತಾದ ಬೆಳೆಗಳು ಇಲ್ಲವೆಂಬಷ್ಟು ಕಡಿಮೆಯಾಗಿವೆ. ಹೊನ್ನೇಹಳ್ಳಿಯಲ್ಲಿ ನಡೆಯುವ ಕೆರಳಮ್ಮ ದೇವರ ಆರತಿಬಾನದಲ್ಲಿ ನವಣಕ್ಕಿ-ಬೆಲ್ಲವನ್ನು ಕುಟ್ಟಿ ತಯಾರಿಸಿದ ದೊಡ್ಡ ಗಾತ್ರದ ಉಂಡೆಗಳನ್ನು ಆರತಿಯಾಗಿ ಹೊತ್ತು ಹರಕೆ ತೀರಿಸುವ ಪದ್ಧತಿಯಿದೆ. ಇಲ್ಲಿನ ರೈತರು ಆರತಿ ಮಾಡಲು ಅಗತ್ಯವಾಗುವಷ್ಟು ನವಣೆ ಬೆಳೆಯುತ್ತಾರೆ. ಗೋಧಿಯನ್ನು ಸಹ ಬೆಳೆಯುವುದು ತುಂಬ ಕಡಿಮೆ. ೨೦೧೦-೧೧ನೇ ಸಾಲಿನಲ್ಲಿ ಬತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ರಾಗಿ, ಗೋಧಿ ಮತ್ತು ತೃಣಧಾನ್ಯಗಳನ್ನು ಬೆಳೆದ ಒಟ್ಟು ವಿಸ್ತೀರ್ಣ ೪೨,೬೭೩ ಹೆಕ್ಟೇರ್‌ಗಳು ಹಾಗೂ ೨೦೧೫-೧೬ರಲ್ಲಿ ೩೭,೬೦೦ ಹೆಕ್ಟೇರ್‌ಗಳಷ್ಟಿದೆ.

**ದ್ವಿದಳ ಧಾನ್ಯಗಳು**

ತಾಲ್ಲೂಕಿನಲ್ಲಿ ಬೆಳೆಯುವ ದ್ವಿದಳ ಧಾನ್ಯಗಳು ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದಿ, ಕಡಲೆ ಇತ್ಯಾದಿ. ಇವುಗಳಲ್ಲಿ ಹುರುಳಿಯನ್ನು ಜಿಲ್ಲೆಯಲ್ಲಿಯೇ ಹೆಚ್ಚಾಗಿ ಬೆಳೆದಿರುವ ತಾಲ್ಲೂಕು ಇದಾಗಿದೆ. ತಾಲ್ಲೂಕಿನಲ್ಲಿ ಬೆಳೆಯಲಾಗಿರುವ ದ್ವಿದಳ ಧಾನ್ಯಗಳ ವಿವರ (೨೦೧೦-೧೧ನೇ ಸಾಲಿನಲ್ಲಿ) ಹೀಗಿದೆ: ತೊಗರಿ-೭೦೩ ಹೆಕ್ಟೇರ್, ಹುರುಳಿ-೨,೪೫೨ ಹೆಕ್ಟೇರ್, ಉದ್ದು-೨೪ ಹೆಕ್ಟೇರ್, ಹೆಸರು-೩,೩೦೯ ಹೆಕ್ಟೇರ್, ಅವರೆ-೪೭೦ ಹೆಕ್ಟೇರ್, ಅಲಸಂದೆ-೯೪ ಹೆಕ್ಟೇರ್, ಕಡಲೆ-೪೧೮ ಹೆಕ್ಟೇರ್. ಹೀಗೆ ಒಟ್ಟು ೭,೪೭೦ ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲಾಗಿದ್ದು, ೨೦೧೫-೧೬ರಲ್ಲಿ ತೊಗರಿ-೪೪೩ ಹೆಕ್ಟೇರ್, ಹುರುಳಿ-೧೭೯೯ ಹೆಕ್ಟೇರ್, ಹೆಸರು-೪೦೪೧ ಹೆಕ್ಟೇರ್, ಅವರೆ-೩೮೧ ಹೆಕ್ಟೇರ್, ಅಲಸಂದಿ-೯೯ ಹೆಕ್ಟೇರ್, ಕಡಲೆ-೧೪೮೨ ಹೆಕ್ಟೇರ್, ಹೀಗೆ ಒಟ್ಟು ೮೨೪೫ ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲಾಗಿದ್ದಿತು.

**ಎಣ್ಣೆ ಕಾಳುಗಳು**

ತಾಲ್ಲೂಕಿನಲ್ಲಿ ೨೦೧೦-೧೧ನೇ ವರ್ಷದಲ್ಲಿ ಬೆಳೆಯುವ ಎಣ್ಣೆಕಾಳುಗಳ ವಿವರ ಹೀಗಿದೆ: ಶೇಂಗಾ-೩,೧೩೨ ಹೆಕ್ಟೇರ್, ಸೂರ್ಯಕಾಂತಿ-೧,೦೪೬ ಹೆಕ್ಟೇರ್, ಹರಳು-೧೩೬ ಹೆಕ್ಟೇರ್, ಎಳ್ಳು-೨,೪೪೪ ಹೆಕ್ಟೇರ್ ಹಾಗೂ ೨೦೧೫-೧೬ರಲ್ಲಿ ಶೇಂಗಾ-೨೨೫೫ ಹೆಕ್ಟೇರ್, ಸೂರ್ಯಕಾಂತಿ-೧೬೫ ಹೆಕ್ಟೇರ್, ಹರಳು-೧೭೫ ಹೆಕ್ಟೇರ್, ಎಳ್ಳು-೮೧೩ ಹೆಕ್ಟೇರ್, ಹುಚ್ಚೆಳ್ಳು ೧೪ ಹೆಕ್ಟೇರ್‌ಗಳು ಇರುತ್ತದೆ. ಇಡೀ ಜಿಲ್ಲೆಯಲ್ಲಿಯೇ ಎಳ್ಳನ್ನು ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಬೆಳೆದು ೨ನೇ ಸ್ಥಾನ ಪಡೆದಿದೆ. ೧ನೇ ಸ್ಥಾನದಲ್ಲಿ ಹೊಳಲ್ಕೆರೆ (೧,೨೦೧ ಹೆಕ್ಟೇರ್), ಹುಚ್ಚೆಳ್ಳು-೧೪ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದಿತು (ಇದು ಜಿಲ್ಲೆಯಲ್ಲಿ ಹೆಚ್ಚು). ಒಟ್ಟು ಎಲ್ಲಾ ರೀತಿಯ ಎಣ್ಣೆಕಾಳುಗಳನ್ನು ಬೆಳೆಯಲಾಗಿದ್ದ ಪ್ರದೇಶ-೩,೪೩೧ ಹೆಕ್ಟೇರ್‌ಗಳು.

**ಹತ್ತಿ**

೧೯೯೬-೯೭ರಲ್ಲಿ ತಾಲ್ಲೂಕಿನಲ್ಲಿ ೧,೮೭೮ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆಯಲಾಗಿದ್ದಿತು. ೧೯೯೮-೯೯ರಲ್ಲಿ ಹತ್ತಿ ಬೆಳೆದ ಪ್ರದೇಶ-೨,೮೮೬ ಹೆಕ್ಟೇರ್ ಆಗಿದ್ದಿತು. ಆದರೆ ೨೦೧೦-೧೧ರಲ್ಲಿ ಕೇವಲ ೧೬೪ ಹೆಕ್ಟೇರ್ ಹಾಗೂ ೨೦೧೫-೧೬ರಲ್ಲಿ ೧೦೭೨ ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ.

## ಪ್ರಮುಖ ಬೆಳೆಗಳ ವಿಸ್ತೀರ್ಣ

| | ೨೦೧೫-೧೬ |
|---|---|
| **೧) ಏಕದಳ ಧಾನ್ಯಗಳ ವಿಸ್ತೀರ್ಣ(ಹೆ)** | |
| ೧) ಬತ್ತ | ೧೧ |
| ೨) ಜೋಳ | ೨೪೩ |
| ೩) ಸಜ್ಜೆ | ೨೫ |
| ೪) ಮುಸುಕಿನ ಜೋಳ | ೬,೨೧೬ |
| ೫) ರಾಗಿ | ೨೫,೬೩೦ |
| ೬) ಗೋಧಿ | ೦ |
| ೭) ಇತರ ತೃಣ ಧಾನ್ಯಗಳು | ೫,೪೨೩ |
| ೮) ಒಟ್ಟು ಏಕದಳ ಧಾನ್ಯಗಳು | |
| ಮತ್ತು ಉಪತೃಣ ಬೆಳೆಗಳು | ೩೭,೬೦೦ |
| | |
| **೨) ದ್ವಿದಳ ಧಾನ್ಯಗಳ ವಿಸ್ತೀರ್ಣ (ಹೆ)** | |
| ೧) ತೊಗರಿ | ೪೪೩ |
| ೨) ಹುರುಳಿ | ೧,೭೯೯ |
| ೩) ಉದ್ದು | ೦ |
| ೪) ಹೆಸರು | ೪,೦೪೧ |
| ೫) ಅವರೆ | ೩೮೧ |
| ೬) ಅಲಸಂದಿ | ೯೯ |
| ೭) ಕಡಲೆ | ೧,೪೮೨ |
| ೮) ಒಟ್ಟು ದ್ವಿದಳ ಧಾನ್ಯಗಳು | ೮,೨೪೫ |
| ೯) ಒಟ್ಟು ಆಹಾರ ಧಾನ್ಯಗಳು | ೪೫,೮೪೫ |
| ೧೦) ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ೪,೩೪೬ |
| ೧೧) ಒಟ್ಟು ತರಕಾರಿ ಬೆಳೆಗಳ ವಿಸ್ತೀರ್ಣ | ೧,೪೦೮ |
| | |
| **೩) ಪ್ರಮುಖ ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ (ಹೆ)** | |
| ೧) ಶೇಂಗಾ | ೨,೨೫೫ |
| ೨) ಸೂರ್ಯಕಾಂತಿ | ೧೬೫ |

| | |
|---|---|
| ೩) ಕುಸುಮೆ | ೦ |
| ೪) ಹರಳು | ೧೭೫ |
| ೫) ಎಳ್ಳು | ೮೧೩ |
| ೬) ಅಗಸೆ | ೦ |
| ೭) ಸೊಯ ಅವರೆ | ೦ |
| ೮) ಹುಚ್ಚೆಳ್ಳು | ೧೪ |
| ೯) ಇತರೆ | ೦ |
| **೧೦) ಒಟ್ಟು ಎಣ್ಣೆ ಕಾಳುಗಳು** | ೩,೪೩೧ |
| | |
| **೪) ವಾಣಿಜ್ಯ ಬೆಳೆಗಳ ವಿಸ್ತೀರ್ಣ (ಹೆ)** | |
| ೧) ಹತ್ತಿ | ೧,೦೭೨ |
| ೨) ಕಬ್ಬು | ೦ |
| ೩) ತಂಬಾಕು | ೦ |
| ೪) ಒಟ್ಟು ವಾಣಿಜ್ಯ ಬೆಳೆಗಳು | ೧,೦೭೨ |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

**ತರಕಾರಿ-ಹಣ್ಣು**

ಕಳೆದ ದಶಕದಲ್ಲಿ (೧೯೯೮-೯೯ರಲ್ಲಿ) ತಾಲ್ಲೂಕಿನಲ್ಲಿ ಒಟ್ಟು ೧,೪೧೩ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತರಕಾರಿಗಳನ್ನು ಬೆಳೆಯಲಾಗಿದ್ದಿತು. ೨೦೧೦-೧೧ರಲ್ಲಿ ೧,೮೩೮ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಯಿತು. ದಶಕದಲ್ಲಿ ಇತ್ತೀಚೆಗೆ ತರಕಾರಿಯನ್ನು ಬೆಳೆಯಲು ರೈತರು ಹೆಚ್ಚು ಗಮನಹರಿಸಿರುವುದು ಇದರಿಂದ ಮನನವಾಗುತ್ತದೆ. ಇದೇ ರೀತಿ ೧೯೯೮-೯೯ರಲ್ಲಿ ೧೪೮ ಹೆಕ್ಟೇರ್‌ಗಳಲ್ಲಿ ಹಣ್ಣುಗಳನ್ನು ಬೆಳೆಯಲಾಗುತ್ತಿದ್ದು, ೨೦೧೦-೧೧ರಲ್ಲಿ ೧,೦೨೯ ಹೆಕ್ಟೇರ್‌ಗೆ ಅಧಿಕಗೊಂಡಿರುತ್ತದೆ. ತಾಲ್ಲೂಕಿನಲ್ಲಿ ೨೦೧೨-೧೩ರಲ್ಲಿ ಹಸಿರು ಮೆಣಸಿನಕಾಯಿ ವಿಸ್ತೀರ್ಣ-೧೫೫ ಹೆಕ್ಟೇರ್, ಉತ್ಪನ್ನ ೧೨೪೦ ಮೆ. ಟನ್ ಇಳುವರಿ ೮.೦೦ ಮೆ.ಟನ್ ಇದ್ದು ಟೊಮೋಟೋ ವಿಸ್ತೀರ್ಣ ೫೬೪ ಹೆಕ್ಟೇರ್, ಉತ್ಪನ್ನ ೧೧,೧೦೦ ಮೆ.ಟನ್, ಇಳುವರಿ ೧೯.೬೮ ಮೆ.ಟನ್, ಈರುಳ್ಳಿ ವಿಸ್ತೀರ್ಣ ೧೯೫೭ ಹೆಕ್ಟೇರ್, ಉತ್ಪನ್ನ ೩೪,೧೦೦ ಮೆ.ಟನ್, ಇಳುವರಿ ೧೭.೪೨ ಮೆ.ಟನ್, ಹುರುಳಿಕಾಯಿ ವಿಸ್ತೀರ್ಣ ೧೧೭ ಹೆಕ್ಟೇರ್, ಉತ್ಪನ್ನ ೯೭೦ ಮೆ.ಟನ್, ಇಳುವರಿ ೮.೨೯ ಮೆ.ಟನ್ ಇದ್ದು ಸಾಂಬಾರು ಬೆಳೆಯಾದ ಒಣಮೆಣಸಿನಕಾಯಿ ವಿಸ್ತೀರ್ಣ ೭೪೮ ಹೆಕ್ಟೇರ್, ಉತ್ಪನ್ನ ೭೪೮ ಮೆ.ಟನ್, ಇಳುವರಿ ೧.೦೦ ಮೆ.ಟನ್‌ಗಳಾಗಿದ್ದು, ೨೦೧೫-೧೬ ರಲ್ಲಿ

ತಾಲ್ಲೂಕಿನಲ್ಲಿ ಟೊಮೋಟೋ ಅಂದಾಜು ಉತ್ಪಾದನೆಯು ೧೧,೬೨೦ ಮೆ.ಟನ್, ಬದನೆ ೧೩೩೫ ಮೆ.ಟನ್, ಹುರುಳಿಕಾಯಿ ೧೧೪೦ ಮೆ.ಟನ್, ಗೋರಿಕಾಯಿ ೧೭೪ ಮೆ.ಟನ್, ಈರುಳ್ಳಿ ೩೬೧೪೦ ಮೆ.ಟನ್, ಹಸಿರುಮೆಣಸಿನಕಾಯಿ ೧೨೪೮ ಮೆ.ಟನ್, ಒಟ್ಟು ಸೊಪ್ಪಿನ ತರಕಾರಿಗಳು ೫೫೩ ಮೆ.ಟನ್ ಒಟ್ಟು ಕುಂಬಳ ಜಾತಿ ತರಕಾರಿಗಳು ೨೬೨೦ ಮೆ.ಟನ್‌ಗಳಾಗಿವೆ. (ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಸಂಗ್ರಹ).

ಈ ತಾಲ್ಲೂಕಿನ ವಿಶೇಷತೆ ಎಂದರೆ, ಬಹುತೇಕ ಏಕದಳ ಧಾನ್ಯಗಳು, ತೃಣಧಾನ್ಯಗಳು ಹಾಗೂ ದ್ವಿದಳ ಧಾನ್ಯಗಳನ್ನು ಈ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತಿದೆ. ಏಪ್ರಿಲ್‌ನಲ್ಲಿ ಬೇಳೆಕಾಳು ಇತ್ಯಾದಿ ಬೆಳೆದರೆ, ಜೂನ್‌ನಲ್ಲಿ ರಾಗಿ-ಜೋಳ ಇತ್ಯಾದಿ ಬೆಳೆ ಬೆಳೆಯುತ್ತಾರೆ. ಅಕ್ಟೋಬರ್‌ನಲ್ಲಿ ಕಡಲೆಯನ್ನು ಬಿತ್ತುತ್ತಾರೆ. ಇಬ್ಬನಿಗೆ ಆ ಬೆಳೆ ಬರುತ್ತದೆ. ಹೀಗೆ ಮುಂಗಾರು ಪೂರ್ವ ೧ ಬೆಳೆ ಹಾಗೂ ಮುಂಗಾರಿನ ನಂತರ ೧ ಬೆಳೆ ತೆಗೆಯುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ತಾಲ್ಲೂಕಿನಲ್ಲಿ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ರೈತರಿಗೆ ಇಳುವರಿ ಸುಧಾರಣೆ ಬಗ್ಗೆ, ಸಾವಯವ ಗೊಬ್ಬರ ಹಾಗೂ ರಸಗೊಬ್ಬರಗಳ ಬಗ್ಗೆ, ಹೊಸ ತಳಿಗಳು, ಆಧುನಿಕ ಕೃಷಿ ಪರಿಕರಗಳು, ಹೊಸ ಪದ್ಧತಿಗಳ ಬಗ್ಗೆ ಹಾಗೂ ಸರ್ಕಾರದಿಂದ ದೊರೆಯುವ ಸವಲತ್ತುಗಳ ಬಗ್ಗೆ ತಿಳುವಳಿಕೆ ನೀಡುತ್ತವೆ. ಅಲ್ಲದೇ ಆಗ್ರೋ ಕೇಂದ್ರ-ರೈತ ಸಂಪರ್ಕ ಕೇಂದ್ರಗಳ ಮೂಲಕ ಸುಧಾರಿತ ಬಿತ್ತನೆ ಬೀಜ, ರಸಗೊಬ್ಬರಗಳನ್ನು ಒದಗಿಸಲಾಗುತ್ತಿದೆ. ತಾಲ್ಲೂಕಿನಲ್ಲಿ ೪ ರೈತ ಸಂಪರ್ಕ ಕೇಂದ್ರಗಳಿವೆ.

## ರೈತರಿಗೆ ಸವಲತ್ತು

ಸರ್ಕಾರದಿಂದ ನಿಯಮ ಮತ್ತು ನಿಬಂಧನೆಗಳನುಸಾರ ಅರ್ಹ ರೈತರಿಗೆ ಅನೇಕ ಸವಲತ್ತುಗಳಿವೆ (ಯೋಜನೆಗಳು). ೧. ಸಸ್ಯ ಸಂರಕ್ಷಣೆ ಯೋಜನೆಯಡಿ ಶೇ.೫೦% ಸಹಾಯಧನ (ಸಸ್ಯ ಸಂರಕ್ಷಣೆ-ಪೀಡೆ ನಾಶಕಗಳಿಗಾಗಿ), ೨. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ, ೩. ವಿಶೇಷ ಘಟಕ ಯೋಜನೆ ಹಾಗೂ ೪. ಗಿರಿಜನ ಉಪಯೋಜನೆ (ಕೃಷಿ ಪರಿಕರ ವಿತರಣೆ) ೨೦೧೦-೧೧ರಲ್ಲಿ ರೈತರಿಗೆ ವಿತರಿಸಿದ ಸಿಂಪರಣೆಯ ಯಂತ್ರಗಳು-೧೦೨, ಸ್ಪ್ರೇಗಳು-೪೬೭, ನೀರಿನ ಸುರುಳಿ-೨, ಮೇವಿನ ಕತ್ತರಿ-೨ ಹಾಗೂ ಹಸಿರುಗೊಬ್ಬರದ ಬೀಜಗಳು-೯, ಒಟ್ಟು-೩೦೧ ರೈತರಿಗೆ ವಿವಿಧ ತರಬೇತಿ ನೀಡಲಾಗಿದ್ದಿತು. (ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಸಂಗ್ರಹ).

೨೦೧೦-೧೧ರಲ್ಲಿ ೧,೨೮೫ ಕ್ವಿಂಟಾಲ್ ರಾಗಿ, ೩೭೫ ಕ್ವಿಂಟಾಲ್ ಬತ್ತ, ೫೨ ಕ್ವಿಂಟಾಲ್ ಜೋಳ, ೭೮೯ ಕ್ವಿಂಟಾಲ್, ಮುಸುಕಿನ ಜೋಳ, ೧೮೮ ಕ್ವಿಂಟಾಲ್ ಹೆಸರು, ೨೮೮ ಕ್ವಿಂಟಾಲ್ ಕಡಲೆ, ೨೯೧ ಕ್ವಿಂಟಾಲ್ ಶೇಂಗಾ, ೩೦ ಕ್ವಿಂಟಾಲ್

ಸೂರ್ಯಕಾಂತಿ, ೨ ಕ್ವಿಂಟಾಲ್ ಹತ್ತಿ, ೪೭ ಕ್ವಿಂಟಾಲ್ ತೊಗರಿ ಹಾಗೂ ೨ ಕ್ವಿಂಟಾಲ್ ಉದ್ದು ಹಾಗೂ ೨೦೧೫-೧೬ರಲ್ಲಿ ೧೭೫೧.೧೦ ಕ್ವಿಂಟಾಲ್ ರಾಗಿ, ೩೩.೯೭ ಕ್ವಿಂಟಾಲ್ ಬತ್ತ, ೯ ಕ್ವಿಂಟಾಲ್ ಗೋಧಿ, ೨೮.೩೨ ಕ್ವಿಂಟಾಲ್ ಜೋಳ, ೪೫೮.೧೫ ಕ್ವಿಂಟಾಲ್ ಮೆಕ್ಕೆಜೋಳ, ೧೪೩೦.೨೦ ಕ್ವಿಂಟಾಲ್ ಕಡಲೆ, ೨೮.೨೫ ಕ್ವಿಂಟಾಲ್ ತೊಗರಿ, ೬೦.೫೫ ಕ್ವಿಂಟಾಲ್ ಹೆಸರು, ೫೧೩ ಕ್ವಿಂಟಾಲು ಶೇಂಗಾ, ೨೯.೪೦ ಕ್ವಿಂಟಾಲ್ ಸೂರ್ಯಕಾಂತಿ, ೪.೩೫ ಕ್ವಿಂಟಾಲ್ ಅಲಸಂದಿ, ಒಟ್ಟು ೪೩೪೬.೨೬ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗಿತ್ತು.

**ನೀರಾವರಿ**

ಹೊಸದುರ್ಗ ತಾಲ್ಲೂಕಿನ ಏಕೈಕ ನದಿಯಾದ ವೇದಾವತಿಯು, ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯಲ್ಲಿ ಹುಟ್ಟಿ ಪೂರ್ವ ಪಾರ್ಶ್ವದ ಮುಖದಿಂದ ಹರಿದು (ವೇದ ಮತ್ತು ಅವತಿ ಸೇರಿ), ಹಳೇಬೀಡು, ಹಾರ್‍ನಳ್ಳಿ, ಉಬ್ರಾಣಿ ಹೀಗೆ ಅನೇಕ ಪ್ರದೇಶಗಳನ್ನು ಹಾಯ್ದು ಕಡೂರು ಮೂಲಕ ಹೊಸದುರ್ಗ ತಾಲೂಕನ್ನು ಪ್ರವೇಶಿಸುತ್ತದೆ. ನಂತರ ಹೊಸದುರ್ಗ-ಮತ್ತೋಡುಗಳ ಮಧ್ಯೆ ಹರಿದು ಹೊಸದುರ್ಗ-ಹಿರಿಯೂರು ಗಡಿ ಪ್ರದೇಶ ತಲಪುತ್ತದೆ. ಅಲ್ಲಿ ಈ ನದಿಗೆ ಅಣೆಕಟ್ಟನ್ನು ೧೯೦೬ರಲ್ಲಿ ನಿರ್ಮಿಸಲಾಗಿದೆ.

ಪ್ರಸ್ತುತ ವಾಣೀವಿಲಾಸ ಸಾಗರದ ನೀರು ಹಿರಿಯೂರು ತಾಲ್ಲೂಕಿಗೆ ನೀರಾವರಿ ಸೌಕರ್ಯವನ್ನು ಒದಗಿಸಿದೆ. ಅಣೆಯ ಹಿನ್ನೀರು ಹೊಸದುರ್ಗ ತಾಲ್ಲೂಕಿನ ಭೂಪ್ರದೇಶದಲ್ಲಿ ನಿಂತಿದೆ. ಭೂಮಿಯ ಓಟ ಪೂರ್ವ ದಿಕ್ಕಿಗಿರುವುದರಿಂದ ಇದರಿಂದ ಈ ತಾಲ್ಲೂಕಿಗೆ ನೀರಾವರಿ ಲಭಿಸಿರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ತಾಲ್ಲೂಕಿನಲ್ಲಿ ೨೫೦ಕ್ಕೂ ಹೆಚ್ಚು ಚೆಕ್ ಡ್ಯಾಂಗಳು, ಹೊಲಗಳಿಗೆ ೫೦ಕ್ಕೂ ಹೆಚ್ಚು ನಾಲಬದುಗಳು, ೫೦೦ ಕ್ಕೂ ಅಧಿಕ ಕೃಷಿ ಹೊಂಡಗಳು, ೧೫,೦೦೦ಕ್ಕೂ ಹೆಚ್ಚು ಕೊರಕಲು ತಡೆಗಳು ಹಾಗೂ ೨೦೦ ಕ್ಕೂ ಹೆಚ್ಚು ಗೋಕಟ್ಟೆಗಳನ್ನು ಆಗಿನ (೧೯೯೯ ಮತ್ತು ೨೦೧೩) ಶಾಸಕರಾಗಿದ್ದ ಬಿ.ಜಿ. ಗೋವಿಂದಪ್ಪನವರ ಅವಧಿಯಲ್ಲಿ ನಿರ್ಮಿಸಲಾಗಿದೆ. ೨೦೦೮ ರಲ್ಲಿ ಹೊಸದುರ್ಗ ಶಾಸಕರಾಗಿದ್ದ ಗೂಳೀಹಟ್ಟಿ ಡಿ.ಶೇಖರ್ ಅವರು ಸಚಿವರಾದ ತರುವಾಯ ಇಲ್ಲಿನ ಬಲ್ಲಾಳಸಮುದ್ರ ಕೆರೆಗೆ, ಹೇಮಾವತಿ ನದಿ ನಾಲೆಯಿಂದ(ರೂ.೯೯ ಕೋಟಿ ವೆಚ್ಚದಲ್ಲಿ) ಪೈಪ್ ಲೈನ್ ಮೂಲಕ ನೀರು ತುಂಬಿಸುವ ಕಾಮಗಾರಿ ಮಾಡಿದ್ದು, ೨೦೧೮ ರಲ್ಲಿ ಅದೇ ಶಾಸಕರು, ೩೨ ಮಿಲಿಯನ್ ಕ್ಯೂಬಿಕ್ ನೀರನ್ನು ಕೆರೆಗೆ ಹರಿಯುವಂತೆ ಮಾಡಿದ್ದಾರೆ. ಅರಸೀಕೆರೆ ತಾಲ್ಲೂಕು ಕಾಮನಸಮುದ್ರದ ಹೇಮಾವತಿ ನಾಲೆಯಿಂದ ೪೦ ಕಿ.ಮೀ. ದೂರ ಪೈಪ್‌ಲೈನ್ ಅಳವಡಿಸಲಾಗಿದೆ. ಬಲ್ಲಾಳಸಮುದ್ರಕೆರೆ ೮೦೦ ಎಕರೆ ವಿಸ್ತೀರ್ಣದ(ತಾಲ್ಲೂಕಿನ) ದೊಡ್ಡಕೆರೆಯಾಗಿದ್ದು, ಸುತ್ತಲ ಮಲ್ಲೇನಹಳ್ಳಿ, ಹೊಸಟ್ಟಿ, ಕಬ್ಬಳ, ಆಲಘಟ್ಟ ಮುಂತಾದ ಅನೇಕ ಗ್ರಾಮಗಳ

ಅಂತರ್ಜಲವು ಸುಧಾರಿಸಲು ಇದರಿಂದ ಅನುಕೂಲವಾಗಿದೆ.

ತಾಲ್ಲೂಕಿನಲ್ಲಿ ೨೦೧೫-೧೬ನೇ ಸಾಲಿನಲ್ಲಿ ೫೯ ಕೆರೆಗಳು, ೭೭೯ ಬಾವಿಗಳು, ೫ ಏತ ನೀರಾವರಿಗಳು ಇದ್ದು, ೭,೪೩೦ ಕೊಳವೆ ಬಾವಿಗಳು ಕಂಡುಬರುತ್ತವೆ. ಈ ಕೊಳವೆ ಬಾವಿಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ ೧೨,೬೪೪ ಹೆಕ್ಟೇರ್ ನಿವ್ವಳ ನೀರಾವರಿಯಾದ ವಿಸ್ತೀರ್ಣ ೧೦,೮೦೦ ಹೆಕ್ಟೇರ್ ಆಗಿದ್ದು, ಒಟ್ಟು ನೀರಾವರಿಯಾದ ವಿಸ್ತೀರ್ಣ ೧೨,೬೪೪ ಹೆಕ್ಟೇರ್‌ಗಳಾಗಿದೆ.

**ನೀರಾವರಿಯಾದ ನಿವ್ವಳ ಪ್ರದೇಶ, ಹಿರಿಯೂರು ತಾಲ್ಲೂಕು**

| **೧) ಕಾಲುವೆಗಳಿಂದ** | ೨೦೧೫-೧೬ |
|---|---|
| ೧) ಉದ್ದ (ಕಿ.ಮಿ) | ೦ |
| ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೨) ಕೆರೆಗಳಿಂದ** | |
| ೧) ಸಂಖ್ಯೆಗಳು | ೫೯ |
| ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೩) ಬಾವಿಗಳಿಂದ** | |
| ೧) ಸಂಖ್ಯೆಗಳು | ೭೭೯ |
| ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೪) ಕೊಳವೆ ಬಾವಿಗಳಿಂದ** | |
| ೧) ಸಂಖ್ಯೆಗಳು | ೭,೪೩೦ |
| ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೧೨,೬೪೪ |
| ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೧೦,೮೦೦ |

| | |
|---|---|
| **೫) ಏತ ನೀರಾವರಿ** | |
| ೧) ಸಂಖ್ಯೆಗಳು | ೪ |
| ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೬) ಇತರೆ ಮೂಲಗಳಿಂದ** | ೦ |
| **೭) ಒಟ್ಟು ನೀರಾವರಿಯಾದ ಪ್ರದೇಶ** | ೧೨,೬೪೪ |
| **೮) ಒಟ್ಟು ನಿವ್ವಳ** | ೧೦,೮೦೦ |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

ಹೊಸದುರ್ಗ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಕೆರೆಗಳನ್ನು ಕಟ್ಟಿಸಿದ ಬಗ್ಗೆ, ದುರಸ್ತಿ ಪಡಿಸಿದ ಬಗ್ಗೆ ಉಲ್ಲೇಖಗಳಿವೆ. ಕ್ರಿ.ಶ.೧೦೬೫ ನೇ ನೀರಗುಂದದ ಹೊಯ್ಸಳರ ಶಾಸನ 'ತೆಂಕಣ ಅಯ್ಯಾವೊಳೆ' ಎನ್ನಿಸಿದ್ದ ನೀರಗುಂದದ 'ಅಯ್ಯಾವೊಳೆ-೫೦೦' (ವಾಣಿಜ್ಯ ಸಂಘಗಳಾದ ನಖರಮುಮ್ಮರಿ ದಂಡಗಳ)ರ ನೇತೃತ್ವವಹಿಸಿದ್ದ ಪ್ರಭುನಲ್ಲೆ ಸೆಟ್ಟಿಯು ಸಿದ್ಧನಾಥ ದೇವರಿಗೆ ಅನೇಕ ದತ್ತಿಗಳನ್ನು ನೀಡಿದನಲ್ಲದೆ, ಅಲ್ಲಿನ ಕೆರೆಯ ಜೀರ್ಣೋದ್ಧಾರ ಕಾರ್ಯ ಕೈಗೊಂಡು, 'ಒಡಗೆರೆಯಮಲ್ಲ' ಎಂಬ ಬಿರುದಿಗೆ ಪಾತ್ರನಾದನು. ಕ್ರಿ.ಶ.೧೯೬೭೪ರ ಮತ್ತೋಡು ಶಾಸನದಲ್ಲಿ ಹಾಲಪ್ಪ ನಾಯಕನು ಗಂಜಿಗೆರೆ ಅಗ್ರಹಾರವನ್ನು ಮತ್ತು ಅಲ್ಲಿನ ಕೆರೆಯನ್ನು ಜೀರ್ಣೋದ್ಧಾರಗೊಳಿಸಿದ ಬಗ್ಗೆ ಉಲ್ಲೇಖವಿದೆ. ಬಲ್ಲಾಳ ಸಮುದ್ರದ ಕೆರೆ ಒಡೆದಿದ್ದುದನ್ನು ದುರಸ್ತಿಗೊಳಿಸಿದ ಬಗ್ಗೆ ಅಲ್ಲಿನ ಮೊಘಲರ ಕಾಲದ (ಅಂಗೀರಸ ಸಂವತ್ಸರ) ಶಾಸನ ತಿಳಿಸುತ್ತದೆ. ಕ್ರಿ.ಶ.೧೫೧೮ರ ಹೊನ್ನೇನಹಳ್ಳಿ ಶಾಸನವು ಬಾಗೂರು ವಾಮರಸನು ಕೆರೆಯನ್ನು ಕಟ್ಟಿಸಿದನೆಂದು ತಿಳಿಸುವುದು. ಇತಿಹಾಸ ಕಾಲದ ಪುಷ್ಕರಣಿಗಳು ತಾಲ್ಲೂಕಿನ ಗವಿರಂಗನಾಥ ಸ್ವಾಮಿ ಬೆಟ್ಟದ ತಪ್ಪಲಲ್ಲಿ, ಶ್ರೀರಾಂಪುರದಲ್ಲಿ, ಹೊಸದುರ್ಗದಲ್ಲಿ, ಕಂಚೀಬೆಟ್ಟದ ತಪ್ಪಲಲ್ಲಿ ಹಾಗೂ ಬನಸೀಹಳ್ಳಿ ಮುಂತಾದೆಡೆ ಇಂದಿಗೂ ಇವೆ. ಕಬ್ಬಿನ ಕೆರೆಯಲ್ಲಿನ ಬಾವಿಯನ್ನು ಮನ್ಮಥ ಸಂವತ್ಸರದಲ್ಲಿ ಕಿರಿಮಲ್ಲಿ ಸೆಟ್ಟಿಯು ಕಟ್ಟಿಸಿದ ಬಗ್ಗೆ ಶಾಸನವಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ ಮಳೆಯೂ ಕಡಿಮೆ, ನೀರಾವರಿಯೂ ಇಲ್ಲ. ಒಣಬೇಸಾಯ ಪದ್ಧತಿ ಇಲ್ಲದ್ದು, ಮಳೆಯಾಧಾರಿತ ಕೃಷಿ ಅನಿವಾರ್ಯವಾಗಿದೆ. '**ನಂಜುಂಡಪ್ಪ ವರದಿ**'ಯಲ್ಲೂ ಸಹ ಈ ತಾಲ್ಲೂಕು **ಅತೀ ಹಿಂದುಳಿದ ತಾಲ್ಲೂಕು** ಎಂದು ದಾಖಲಿಸಲಾಗಿದೆ. ಆದ್ದರಿಂದ, ತಾಲ್ಲೂಕಿನ ಜನರ ಮಹತ್ವದ ಬೇಡಿಕೆಯಾದ '**ಭದ್ರಾ ಮೇಲ್ದಂಡೆ ಯೋಜನೆ**'ಯು ಶೀಘ್ರವಾಗಿ ಜಾರಿಯಾಗಬೇಕಾಗಿದೆ.

## ರಾಸಾಯನಿಕ ಗೊಬ್ಬರ

ಹಿಂದಿನ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಗೊಬ್ಬರದ ಗುಂಡಿಗಳು, ತಿಪ್ಪೆಗುಂಡಿಗಳು ಇರುತ್ತಿದ್ದವು. ಮನೆಗಳಲ್ಲಿ ದನಕರುಗಳನ್ನು ಹೇರಳವಾಗಿ ಸಾಕುತ್ತಿದ್ದರು. ಅವುಗಳ ಸಗಣಿ-ಗಂಜಲದ ಗೊಬ್ಬರ ವ್ಯವಸಾಯಕ್ಕೆ ಉಪಯೋಗಿಸಲ್ಪಡುತ್ತಿತ್ತು. ಹೆಗ್ಗೆರೆಯ ಕ್ರಿ.ಶ.೧೧೬೧ರ ಹೊಯ್ಸಳರ ಶಾಸನದಲ್ಲಿ **'ತಿಪ್ಪೆ ಸುಂಕ ಹೆಡಿಗೆಗೆ ಮಾ**.' ಸುಂಕವನ್ನು ವಿಧಿಸಿದ್ದರ ಬಗ್ಗೆ ದಾಖಲೆ ಇದೆ. ಇಂದು ವ್ಯವಸಾಯವು ಯಾಂತ್ರೀಕರಣಗೊಂಡು, ದನಕರುಗಳು ಕಡಿಮೆಯಾದ್ದರಿಂದ ಗೊಬ್ಬರ ಉತ್ಪಾದನೆ ಕಡಿಮೆಯಾಗಿದೆ ಹಾಗೂ ಶೀಘ್ರವಾಗಿ ಹೆಚ್ಚು ಇಳುವರಿ ಪಡೆಯಲೆಂದು ರೈತರು ರಾಸಾಯನಿಕ ಗೊಬ್ಬರಗಳಿಗೆ ಮೊರೆ ಹೋಗುತ್ತಿದ್ದಾರೆ. ಇತ್ತೀಚೆಗೆ ಸಾವಯವ ಗೊಬ್ಬರದ ಬಗ್ಗೆ ಪುನಃ ರೈತರ ಒಲವು ಕಾಣಿಸಲಾರಂಭಿಸಿದೆ. ೨೦೧೦-೧೧ರಲ್ಲಿ ತಾಲ್ಲೂಕಿನಲ್ಲಿ ೨,೦೦೪ ಟನ್ ಸಾರಜನಕ (ನೈಟ್ರೋಜನ್), ೧೪೩೫ ಟನ್ ರಂಜಕ (ಪಾಸ್ಫರಸ್) ಹಾಗೂ ೬೭೮ ಟನ್ ಪೊಟ್ಯಾಷ್ ಹೀಗೆ ಒಟ್ಟಾರೆ ೪,೧೧೭ ಟನ್ ರಸಗೊಬ್ಬರವನ್ನು ಬಳಸಿದ್ದು, ೨೦೧೫-೧೬ರಲ್ಲಿ ೩೫೨೦ ಟನ್ ಸಾರಜನಕ (ನೈಟ್ರೋಜನ್), ೨೧೨೨ ಟನ್ ರಂಜಕ (ಪಾಸ್ಫರಸ್) ಹಾಗೂ ೧೩೪೦ ಟನ್ ಪೊಟ್ಯಾಷ್ ಹೀಗೆ ಒಟ್ಟು ೬೯೮೨ ಟನ್‌ಗಳಾಗಿದೆ.

## ತೋಟಗಾರಿಕೆ

ಹೊಸದುರ್ಗ ಸೀಮೆಯು ಚಿತ್ರದುರ್ಗ ಜಿಲ್ಲೆಯಲ್ಲಿನ **'ಕಲ್ಪತರು'** ನಾಡಾಗಿದೆ. ಜಿಲ್ಲೆಯಲ್ಲಿನ ಅತಿ ಹೆಚ್ಚು ತೆಂಗಿನ ಮರಗಳು ಇಲ್ಲಿವೆ. ೧೯೯೬-೯೭ನೇ ವರ್ಷ ತಾಲ್ಲೂಕಿನಲ್ಲಿ ತೆಂಗು ಬೆಳೆಯಲಾಗಿದ್ದ ಒಟ್ಟು ಪ್ರದೇಶ ೧೯,೭೧೩ ಹೆಕ್ಟೇರ್‌ಗಳು, ಅಡಿಕೆ ೨೪೩ ಹೆಕ್ಟೇರ್, ವೀಳ್ಯದೆಲೆ ೨೦ ಹೆಕ್ಟೇರ್, ಹುಣಸೆ ೬ ಹೆಕ್ಟೇರ್, ಆರ್ಥಿಕ ಬೆಳೆಯಾದ ಮೆಣಸಿನಕಾಯಿ ೧,೧೭೮ ಹೆಕ್ಟೇರ್, ಮಾವು ೩೩ ಹೆಕ್ಟೇರ್, ಬಾಳೆ ೧೧ ಹೆಕ್ಟೇರ್, ಬಾಳೆ-ಸಪೋಟ ೪ ಹೆಕ್ಟೇರ್ ಹಾಗೂ ತರಕಾರಿ ಬೆಳೆಗಳಾದ ಈರುಳ್ಳಿ ೯೬೭ ಹೆಕ್ಟೇರ್, ಟೊಮೋಟೋ ೫೨ ಹೆಕ್ಟೇರ್, ಬದನೆ ೩೩ ಹೆಕ್ಟೇರ್ ಹಾಗೂ ಹೂ ಬೆಳೆಗಳಲ್ಲಿ ಸೇವಂತಿಗೆ ೨೧ ಹೆಕ್ಟೇರ್ ಎಂದು ದಾಖಲೆ ಇದೆ. ತಾಲ್ಲೂಕಿನಲ್ಲಿ ೨೦೧೨-೧೩ರಲ್ಲಿ ಮುಖ್ಯ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ, ಉತ್ಪನ್ನ ಹಾಗೂ ಇಳುವರಿ ಈ ರೀತಿ ಕಂಡುಬರುತ್ತದೆ. ಮಾವು ವಿಸ್ತೀರ್ಣ ೩೫೩ ಹೆಕ್ಟೇರ್, ಉತ್ಪನ್ನ ೪೦೯೨ ಮೆ.ಟನ್, ಇಳುವರಿ - ೧೧.೫೯ ಮೆ.ಟನ್, ಬಾಳೆ-ವಿಸ್ತೀರ್ಣ ೮೧೭ ಹೆಕ್ಟೇರ್, ಉತ್ಪನ್ನ ೨೫೨೮೦ ಮೆ.ಟನ್, ಇಳುವರಿ ೩೦.೯೪ ಮೆ.ಟನ್, ದಾಳಿಂಬೆ ವಿಸ್ತೀರ್ಣ ೪೭೫೦ ಹೆಕ್ಟೇರ್, ಉತ್ಪನ್ನ ೨೭೯೮೦ ಮೆ.ಟನ್, ಇಳುವರಿ-೫.೮೯ ಮೆ.ಟನ್ ಹಾಗೂ ೨೦೧೫-೧೬ರಲ್ಲಿ ಬಾಳೆ ೨೦೫೧೪ ಮೆ.ಟನ್, ಮಾವು ೩೩೬೬ ಟನ್, ನಿಂಬೆ ೫೮೫

ಮೆ.ಟನ್, ಸೀಬೆ ೩೦ ಮೆ.ಟನ್, ಸಪೋಟ ೭೨೦ ಮೆ.ಟನ್, ದಾಳಿಂಬೆ ೧,೨೫,೭೨೫ ಮೆ.ಟನ್, ಪಪ್ಪಾಯ ೨೦,೯೭೦ ಮೆ.ಟನ್‌ಗಳಾಗಿವೆ. ಅಲ್ಲದೆ ೨೦೧೫-೧೬ರಲ್ಲಿ ತೋಟದ ಬೆಳೆಗಳಾದ, ತೆಂಗು ವಿಸ್ತೀರ್ಣ ೨೫,೭೦೬ ಹೆಕ್ಟೇರ್ ಉತ್ಪನ್ನ ೧,೨೮೫ (ಲಕ್ಷ ಕಾಯಿಗಳು), ಇಳುವರಿ ೦.೦೬ ಮೆ.ಟನ್ ಮತ್ತು ಅಡಿಕೆ ವಿಸ್ತೀರ್ಣ ೨,೧೫೫ ಹೆಕ್ಟೇರ್, ಉತ್ಪನ್ನ ೨,೫೨೦, ಇಳುವರಿ ೧.೧೭ ಮೆ.ಟನ್‌ಗಳಾಗಿವೆ. ೧,೯೭೯-೮೦ರಲ್ಲಿ ತಾಲ್ಲೂಕಿನ ತೆಂಗು ಬೆಳೆಯುವ ಪ್ರದೇಶ ೧೧,೭೮೮ ಹೆ. ಇದ್ದಿತು. ೨೦೧೦-೧೧ರಲ್ಲಿ ತೆಂಗು ಪ್ರದೇಶವು ೨೫,೦೦೦ ಹೆಕ್ಟೇರ್ ಆಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ೧೩,೦೦೦ ಹೆಕ್ಟೇರ್‌ನಷ್ಟು ತೆಂಗು ಅಧಿಕವಾಗಿದೆ. ತೆಂಗನ್ನು 'ಕಲ್ಪವೃಕ್ಷ' ಎನ್ನುವರು. ತೆಂಗಿನ ಕಾಯಿಗೆ ತೆಂಗಿನಕಡ್ಡಿಗೆ ಭಾರೀ ಬೇಡಿಕೆ ಇದೆ. ೨೦೧೫-೧೬ರಲ್ಲಿ ತಾಲ್ಲೂಕಿನ ತೋಟಗಾರಿಕಾ ಪ್ರದೇಶ ಒಟ್ಟು ೩೭,೬೪೧ ಹೆಕ್ಟೇರ್‌ಗಳು (ಜಿಲ್ಲೆಯಲ್ಲೇ ಹೆಚ್ಚು ಪ್ರದೇಶ), ಅಡಿಕೆ ೨ ಸಾವಿರ ಹೆಕ್ಟೇರ್‌ಗಳಷ್ಟಿದೆ. ಹೊಸದುರ್ಗ ಪ್ರದೇಶದ ತೆಂಗಿನ ಮರಗಳ ಬಗ್ಗೆ ರಾಷ್ಟ್ರಕವಿ ಡಾ|| ಜಿ.ಎಸ್. ಶಿವರುದ್ರಪ್ಪ ಅವರು ತಮ್ಮ ಜೀವನ ಚರಿತ್ರೆಯಲ್ಲಿ ವಿಶೇಷವಾಗಿ ವರ್ಣಿಸಿದ್ದಾರೆ. ತೆಂಗನ್ನು ಹೊರತುಪಡಿಸಿದರೆ ತಾಲ್ಲೂಕಿನಲ್ಲಿ ಈಗ ಅತ್ಯಂತ ಸಮೃದ್ಧವಾಗಿರುವ ತೋಟದ ಬೆಳೆ ಎಂದರೆ ದಾಳಿಂಬೆ. ತಾಲ್ಲೂಕಿನಲ್ಲಿ ಒಟ್ಟು ೩ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ ಬೆಳೆ ಅಭಿವೃದ್ಧಿಪಡಿಸಲಾಗಿದೆ. ೨೦೦೯-೧೦ನೇ ಸಾಲಿನಲ್ಲಿ ೧,೦೦೦ ಹೆಕ್ಟೇರ್‌ನಲ್ಲಿ ದಾಳಿಂಬೆಯಿದ್ದು, ಒಂದು ವರ್ಷದಲ್ಲಿ ೨,೦೦೦ ಹೆಕ್ಟೇರ್ ಜಾಸ್ತಿಯಾಗಿ ಅಭಿವೃದ್ಧಿಯಾಗಿರುತ್ತದೆ. ತಾಲ್ಲೂಕಿನಲ್ಲಿ ಬೆಳೆದ ದಾಳಿಂಬೆ ಹಣ್ಣುಗಳು ಬೆಂಗಳೂರು ಮಾರುಕಟ್ಟೆಗೆ ಸರಬರಾಜಾಗುತ್ತದೆ. ಹೊಸದುರ್ಗ ತಾಲ್ಲೂಕಿನಲ್ಲಿ ದಾಳಿಂಬೆ ತೋಟಗಾರಿಕೆ ರೈತರ ಬಾಳಿನಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿ ಮಾಡಿದೆ. ಹೊಸದುರ್ಗ ತಾಲ್ಲೂಕು ಅತಿ ಹಿಂದುಳಿದ ತಾಲೂಕಾಗಿದ್ದರೂ ಸಹ ತೋಟಗಾರಿಕೆ ವಿಚಾರದಲ್ಲಿ ಅತ್ಯುತ್ತಮ ಯಶಸ್ಸು ಕಂಡಿರುವ ತಾಲೂಕಾಗಿದೆ. ದಾಳಿಂಬೆ ಬೆಳೆಗಾರರಿಗೆ ಸರ್ಕಾರದಿಂದ '**ಸಹಾಯಧನ**' ಸೌಲಭ್ಯವಿದೆ. ಇತ್ತೀಚೆಗೆ ಇಲ್ಲಿ ದಾಳಿಂಬೆಗೆ ಅಂಗಮಾರಿ ರೋಗ ಕಾಣಿಸಿಕೊಂಡಿದ್ದು, ಬೆಳೆಗಾರರಿಗೆ ನಷ್ಟ ಉಂಟಾಗಿದ್ದು, ಹತೋಟಿ ಕ್ರಮವನ್ನು ಕೈಗೊಳ್ಳಲಾಗಿದೆ. ೨೦೧೧ರಲ್ಲಿ ತಾಲ್ಲೂಕಿನಲ್ಲಿ ಅಡಿಕೆ ೨,೦೦೦ ಹೆಕ್ಟೇರ್ ಇದೆ. ಬಾಳೆ ೧,೨೦೦ ಹೆಕ್ಟೇರ್, ಪಪ್ಪಾಯಿ ೧೫ ಹೆಕ್ಟೇರ್, ಈರುಳ್ಳಿ ೧,೮೦೦ ಹೆಕ್ಟೇರ್, ತರಕಾರಿ ೩,೦೦೦ ಹೆಕ್ಟೇರ್, ಹೂವಿನ ಬೆಳೆ (ಆಸ್ಟರ್) ೧೫೦ ಹೆಕ್ಟೇರ್‌ನಲ್ಲಿ ಇದೆ. ಹೂವು ಮೊದಲು ೫೦೦ ಹೆಕ್ಟೇರ್ ಬೆಳೆ ಇದ್ದಿತು (ಸುಗಂಧರಾಜ, ಚೆಂಡುಹೂ, ಮಲ್ಲಿಗೆ). ಒಣಕೊಬ್ಬರಿಗೆ ಪ್ರಾಶಸ್ತ್ಯವಿದ್ದು, ಇದಕ್ಕೆ ಹೊಸದುರ್ಗದಲ್ಲಿ ಮಾರುಕಟ್ಟೆ ವ್ಯವಸ್ಥೆ ಇದೆ. ದಾಳಿಂಬೆ, ಹೂ, ಬಾಳೆ ತೋಟಗಾರಿಕೆಗೆ '**ಹನಿ ನೀರಾವರಿ**' ಪದ್ಧತಿಯು ವರದಾನವಾಗಿದೆ. ೩ ಹೆಕ್ಟೇರ್ ಭೂಮಿ ಇರುವ ಹಾಗೂ ಹನಿ ನೀರಾವರಿ ಮಾಡುವ ರೈತರಿಗೆ ಸರ್ಕಾರದಿಂದ ಶೇ.೫೦ ಸಹಾಯಧನ ಲಭ್ಯವಿದೆ. ಅನೇಕ ತೋಟಗಾರಿಕಾ ಬೆಳೆಗಳಿಗೆ '**ಸುವರ್ಣಭೂಮಿ ಯೋಜನೆ**' ಮತ್ತಿತರ ಯೋಜನೆಗಳಡಿ ರೈತರಿಗೆ ಸಹಾಯಧನ ದೊರಕುತ್ತಿದೆ.

**೨೦೧೪-೧೫ನೇ ಸಾಲಿನ ಹೊಸದುರ್ಗ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು**

| ಹಣ್ಣಿನ ಬೆಳೆಗಳು | | | |
|---|---|---|---|
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೯,೯೭೩ | ೧,೨೧,೩೮೩ | ೧೨.೭೨ | ೬೬,೮೬೪ |
| ತರಕಾರಿ ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೩,೮೯೦ | ೫೨,೯೨೧ | ೧೨.೬೭ | ೯,೧೧೩ |
| ಸಾಂಬಾರು ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೮೨೦ | ೯೦೮ | ೧.೦೪ | ೭೫೮ |
| ವಾಣಿಜ್ಯ ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೧೦೩ | ೮೯೦ | ೮.೬೪ | ೧೧೭ |
| ಒಟ್ಟು ಮೊತ್ತ | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೪೧,೩೧೮ | ೭,೩೩,೯೨೬ | ೫.೬೬ | ೮೮,೯೭೨ |

## ಕೃಷಿ ಮತ್ತು ನೀರಾವರಿ

**೨೦೧೫-೧೬ನೇ ಸಾಲಿನ ಹೊಸದುರ್ಗ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು**

| ಹಣ್ಣಿನ ಬೆಳೆಗಳು | | | |
|---|---|---|---|
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೯,೯೨೩ | ೧,೭೧,೩೮೩ | ೧೭.೨೭ | ೭೯,೬೪೫ |
| ತರಕಾರಿ ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೩,೩೫೮ | ೫೯,೪೮೪ | ೧೭.೭೧ | ೫,೯೯೭ |
| ಸಾಂಬಾರು ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೮೭೦ | ೯೦೮ | ೧.೦೪ | ೪೨೫ |
| ವಾಣಿಜ್ಯ ಬೆಳೆಗಳು | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೧೧೩ | ೮೪೦ | ೭.೪೩ | ೧೨೩ |
| ಒಟ್ಟು ಮೊತ್ತ | | | |
| ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಉತ್ಪನ್ನ (ಮೆ. ಟನ್ನುಗಳಲ್ಲಿ) | ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ) | ಮೌಲ್ಯ (ರೂ. ಲಕ್ಷಗಳಲ್ಲಿ) |
| ೪೧,೩೯೪ | ೩,೦೫,೫೦೯ | ೭.೩೮ | ೯೬,೫೩೫ |

**ಪಶುಸಂಗೋಪನೆ**

ಪ್ರಾಚೀನ ಕಾಲದಲ್ಲಿ ಒಬ್ಬ ರಾಜನು ಎಷ್ಟು ರಾಸುಗಳನ್ನು ಹೊಂದಿದ್ದಾನೆಂಬುದರ ಮೇಲೆ ಅವನ ಸಂಪತ್ತು ಮತ್ತು ಸುಭದ್ರತೆ ನಿರ್ಧರಿತವಾಗಿರುತ್ತಿತ್ತು. ಹೊಸದುರ್ಗ ತಾಲ್ಲೂಕಿನ ಅನೇಕ ವೀರಗಲ್ಲುಗಳು, ಹಿಂದೆ ತುರುಗಳ ರಕ್ಷಣೆಗಾಗಿ ಕಾದು ಮಡಿದವರ ಸ್ಮಾರಕಗಳೇ (ತುರುಗೋಳ್ ವೀರಗಲ್ಲು) ಆಗಿವೆ. ಬಾಗೂರಿನ ಒಂದು ಶಿಲಾಶಾಸನದಲ್ಲಿ ಅರಳಹಳ್ಳಿಯ ಆಕಳುಗಳನ್ನು ಕೇಶವ ದೇವರಿಗೆ ದತ್ತಿ ಬಿಟ್ಟಿದ್ದುದನ್ನು ಹೇಳಲಾಗಿದೆ (ದೇವರ ನೈವೇದ್ಯಕ್ಕಾಗಿ ಹಾಲು–ತುಪ್ಪ–ಮೊಸರು ಮೀಸಲಿಗಾಗಿ). ಹಿಂದಿನ ಕಾಲದಲ್ಲಿ ಹೆಗ್ಗೆರೆ ಕೋಣಗಳನ್ನು ಯುದ್ಧಗಳಿಗೂ ಬಳಸುತ್ತಿದ್ದರೆಂಬ ಐತಿಹ್ಯವಿದೆ. ಚಿತ್ರದುರ್ಗದ ಪಾಳೆಯಗಾರರು ಇಲ್ಲಿನ ಚಿಕ್ಕ ಬ್ಯಾಲದಕೆರೆ ಹಾಗೂ ಬುಕ್ಕಸಾಗರದಿಂದ ಕಬ್ಬಿಣದ ಕಚ್ಚಾಅದಿರನ್ನು ಕೋಣ ಹಾಗೂ ಕತ್ತೆಗಳ ಬಂಡಿಗಳಲ್ಲಿ ಹೊಸದುರ್ಗ–ಜಾನಕಲ್ಲು ಮಾರ್ಗವಾಗಿ ಸಾಗಿಸುತ್ತಿದ್ದರು. ಮತ್ತೋಡು ಪಾಳೆಯಗಾರರ ಕಾಲದಲ್ಲಿ ಗೊಲ್ಲರು ಕುರಿತೆರಿಗೆ ತೆರಬೇಕಾಗಿತ್ತು. ಹೀಗೆ ಸಾಕುಪ್ರಾಣಿಗಳು ಪ್ರಾಚೀನ ಕಾಲದಿಂದ ಜನರಿಗೆ ಅವಿಭಾಜ್ಯ ಆಸ್ತಿ ಎನ್ನಿಸಿವೆ. ವ್ಯವಸಾಯದ ಜೊತೆಯಲ್ಲೇ ಪಶುಪಾಲನೆಯೂ ಬೆಳೆದುಬಂದಿತು. ವಿಜಯನಗರದವರ ಕಾಲ (ಕ್ರಿ.ಶ.೧೬ನೇ ಶತಮಾನ)ದಲ್ಲಿ ರಾಸುಗಳ ಉತ್ತಮ ತಳಿಯನ್ನು ಅಭಿವೃದ್ಧಿಪಡಿಸಲಾಯಿತು. ಆ ತಳಿ **'ಅಮೃತ್‌ಮಹಲ್‌ತಳಿ'** ಎಂದು ಹೆಸರಾಯಿತು. ಮೈಸೂರು ಅರಸರುಗಳು ಶತಮಾನಗಳ ಕಾಲ ಈ ತಳಿಯಲ್ಲಿ **'ಸುಧಾರಣೆ'** ಮಾಡಿದರು. ಸರ್ಕಾರ **'ಬೆಣ್ಣೆಚಾವಡಿ'** ಯೋಜನೆಯಡಿ ಈ ರಾಸುಗಳನ್ನು ಸ್ವಾಧೀನಕ್ಕೆ ಪಡೆದು, ಅವುಗಳಿಗಾಗಿ ೪,೧೩,೫೩೯ ಎಕರೆ (೧,೬೭,೩೫೯ ಹೆಕ್ಟೇರ್) ವಿಸ್ತೀರ್ಣದ ಹುಲ್ಲುಗಾವಲುಗಳನ್ನು (ಅಮೃತ್‌ಮಹಲ್ ಕಾವಲು) ಕಾಯ್ದಿರಿಸಿತು. ಮೈಸೂರು ಹೈದರಾಲಿಯು ಆಳ್ವಿಕೆಗೆ ಬಂದಾಗ ಅವನ ವಶದಲ್ಲಿ ೬೦,೦೦೦ ರಾಸುಗಳಿದ್ದವು. ಹೊಸದುರ್ಗ ತಾಲ್ಲೂಕಿನ ಕೈನಡು ಬಳಿ ಪಶುಪಾಲನಾ ಇಲಾಖೆಯು ಅಮೃತಮಹಲ್ ತಳಿ ಅಭಿವೃದ್ಧಿಯ ಉಪಕೇಂದ್ರವನ್ನು ಆರಂಭಿಸಿದ್ದಿತು. ಈಗ ಇಲ್ಲಿ ಅಮೃತಮಹಲ್ ಕಾವಲು ಕೆಲವು ಎಕರೆ ಇದ್ದು, ಇಲ್ಲಿ ಮೇವು ಬೆಳೆಯಲಾಗುತ್ತಿದ್ದು, ಅಜ್ಜಂಪುರದ ಅಮೃತ್‌ಮಹಲ್ ತಳಿಯ ರಾಸುಗಳು ಇಲ್ಲಿಗೆ ವರ್ಷಕ್ಕೊಮ್ಮೆ ಹುಲ್ಲುಗಾವಲಲ್ಲಿ ಮೇಯಲು ಬರುತ್ತವೆ.

ತಾಲ್ಲೂಕಿನಲ್ಲಿ ೨೦೧೧ ರಲ್ಲಿ ಹೊಸದುರ್ಗ ಮತ್ತು ಮತ್ತೋಡಿನಲ್ಲಿ (ಒಟ್ಟು ೨). ಪಶು ಆಸ್ಪತ್ರೆಗಳಿದ್ದವು. ಪಶುವೈದ್ಯ ಶಾಲೆಗಳು ೭, ಪ್ರಾಥಮಿಕ ಪಶು ಚಿಕಿತ್ಸಾಲಯ ೮, ಕೃತಕ ಗರ್ಭಧಾರಣೆ ಕೇಂದ್ರಗಳು ೪, ಕುರಿ ಮತ್ತು ಉಣ್ಣೆ ಉಪಕೇಂದ್ರಗಳು ೭, ಸಂಚಾರಿ ಪಶು ಚಿಕಿತ್ಸಾಲಯ ೧, ಗೋಶಾಲೆಗಳು ೨, ಹಾಲು ಉತ್ಪಾದಕರ ಸಹಕಾರ ಸಂಘಗಳು ೨೫ ಇವಿಷ್ಟು ತಾಲ್ಲೂಕಿನಲ್ಲಿದ್ದು, ೨೦೧೫–೧೬ರಲ್ಲಿ ೪ ಪಶು ಆಸ್ಪತ್ರೆಗಳು, ೭ ಚಿಕಿತ್ಸಾಲಯಗಳು, ೨೦ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ೧ ಸಂಚಾರಿ ಚಿಕಿತ್ಸಾಲಯಗಳು, ೪ ಕೃತಕ ಗರ್ಭಧಾರಣ ಕೇಂದ್ರ, ೫ ಇತರೆ ಪಶುವೈದ್ಯ

ಶಾಲೆಗಳಿದ್ದು, ಒಟ್ಟು ೪೩ ಇವೆ ಹಾಗೂ ೨೩೧೪೧ ಕೃತಕ ಗರ್ಭಧಾರಣೆ ನೀಡಿದ ಪಶುಗಳಾಗಿದ್ದು, ೧,೦೧,೦೭೧ ಚಿಕಿತ್ಸೆ ನೀಡಲಾದ ಪ್ರಾಣಿಗಳಾಗಿವೆ. ಹಾಲು ಉತ್ಪಾದನೆ ದಿನಕ್ಕೆ ೧೦ ಸಾವಿರ ಲೀಟರ್ ಇದೆ. ೨೦೦೭ರ ಜಾನುವಾರು ಗಣತಿಯಂತೆ, ತಾಲ್ಲೂಕಿನಲ್ಲಿ ೭೮,೧೭೫ ರಾಸುಗಳು, ೪೩,೫೨೧ ಎಮ್ಮೆಗಳು, ೧,೩೨,೨೭೪ ಕುರಿಗಳು, ೫೯,೬೬೧ ಮೇಕೆಗಳು ಹಾಗೂ ೩ ಲಕ್ಷ ಕೋಳಿಗಳಿವೆ. ರಾಸುಗಳು ಮತ್ತು ಎಮ್ಮೆಗಳು ಇಡೀ ಜಿಲ್ಲೆಯಲ್ಲಿಯೇ ಈ ತಾಲ್ಲೂಕಿನಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಹಂದಿಗಳು ೩೪೯ (೩೪೬ ಸ್ಥಳೀಯ ಹಾಗೂ ೩ ಮಿಶ್ರ ತಳಿ), ಮೊಲ ೨೯, ನಾಯಿಗಳು ೯,೬೪೪ ಇದ್ದು, ೨೦೧೫-೧೬ರಲ್ಲಿ ೫೪,೬೪೬ ಸ್ಥಳೀಯ ೪೮೦೩ ಮಿಶ್ರ ತಳಿ ದನಕರುಗಳಿದ್ದು, ಒಟ್ಟು ೫೯೪೪೯ ಆಗಿವೆ. ಅಲ್ಲದೆ ೩೧,೮೬೪ ಎಮ್ಮೆಗಳು, ೧,೩೫,೮೬೩ ಸ್ಥಳೀಯ ಕುರಿಗಳಿದ್ದು, ೩೧,೮೬೨ ಮೇಕೆಗಳು, ೫೩೩ ಸ್ಥಳೀಯ ೧ ಮಿಶ್ರತಳಿ ಹಂದಿಗಳು, ೧೨೪೭ ಮೊಲಗಳು, ೪೮೩೩ ನಾಯಿಗಳು, ೮೯೯ ಇತರೆ ಪ್ರಾಣಿಗಳು, ಹೀಗೆ ೨,೬೬,೫೫೧ ಒಟ್ಟು ಜಾನುವಾರುಗಳು ಇವೆ ಹಾಗೂ ೩,೭೫,೫೮೨ ಕೋಳಿಗಳು ಸಹ ಇವೆ. ಕುರಿ ಮತ್ತು ಮೇಕೆಗಳ ಸಾಕಾಣಿಕೆ ತುಂಬಾ ಪ್ರಗತಿಯಲ್ಲಿದೆ. ತಾಲ್ಲೂಕಿನಲ್ಲಿ ಅಮೃತ್‌ಮಹಲ್ ತಳಿಯ ರಾಸುಗಳಿವೆ. ಪಶುಗಳಿಗೆ ಬರುವ ವಿವಿಧ ರೋಗಗಳಿಗೆ ಲಸಿಕೆ ಹಾಕುವ ಸೌಲಭ್ಯವಿರುತ್ತದೆ. ಹಳ್ಳಿಕಾರ್ ತಳಿಯ ರಾಸುಗಳೂ ತಾಲ್ಲೂಕಿನಲ್ಲಿವೆ. ವ್ಯವಸಾಯಕ್ಕೆ ಯಂತ್ರಗಳು, ಟ್ರ್ಯಾಕ್ಟರ್ ಇತ್ಯಾದಿ ಬಂದಿರುವುದರಿಂದ ದನಕರುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ತಾಲ್ಲೂಕಿನಲ್ಲಿ ೨೦೧೧ರಲ್ಲಿ ೫೫೫.೦೦ ಟನ್ ಮೇವು ಉತ್ಪಾದನೆಯಾಗಿದ್ದಿತು. ಉತ್ಪಾದನೆಯಾದ ಮೊಟ್ಟೆಗಳು ೧,೦೨,೨೯೦, ಉಣ್ಣೆ ಉತ್ಪಾದನೆ ೨೩,೮೬೪ ಕೆ.ಜಿ. ಹಾಗೂ ಮಾಂಸ ಉತ್ಪಾದನೆ ೨೪,೮೦೫ ಟನ್ ಇದ್ದಿತು. ತಾಲ್ಲೂಕಿನಲ್ಲಿರುವ ಕೋಳಿಫಾರಂಗಳು ೩೦.

## ಪಶುಪಾಲನೆ ಮತ್ತು ಪಶುವೈದ್ಯ ಸೇವೆಗಳು

| | ೨೦೦೭ರ ಗಣತಿ |
|---|---|
| ೧) ಜಾನುವಾರು ಗಣತಿ | |
| ೧.೧) ದನಕರುಗಳು | |
| ೧.೨) ಸ್ಥಳೀಯ | ೫೪,೬೪೬ |
| ೧.೩) ವಿದೇಶಿ ತಳಿ | - |
| ೧.೪) ಮಿಶ್ರ ತಳಿ | ೪,೮೦೩ |
| ೧.೫) ಒಟ್ಟು | ೫೯,೪೪೯ |

| | |
|---|---|
| **೨) ಎಮ್ಮೆಗಳು** | ೩೧,೮೬೪ |
| **೩) ಕುರಿಗಳು** | |
| ೩.೧) ಸ್ಥಳೀಯ | ೧,೩೫,೮೬೩ |
| ೩.೨) ವಿದೇಶಿ ತಳಿ | – |
| ೩.೩) ಮಿಶ್ರ ತಳಿ | – |
| ೩.೪) ಒಟ್ಟು | ೧,೩೫,೮೬೩ |
| **೪) ಮೇಕೆಗಳು** | ೩೧,೮೬೨ |
| **೫) ಹಂದಿಗಳು** | |
| ೫.೧) ಸ್ಥಳೀಯ | ೫೩೩ |
| ೫.೨) ವಿದೇಶಿ ತಳಿ | – |
| ೫.೩) ಮಿಶ್ರ ತಳಿ | ೧ |
| ೫.೪) ಒಟ್ಟು | ೫೩೪ |
| **೬) ಮೊಲಗಳು** | ೧,೨೪೭ |
| **೭) ನಾಯಿಗಳು** | ೪,೮೩೩ |
| **೮) ಇತರೆ** | ೮೬೯ |
| **೯) ಒಟ್ಟು ಜಾನುವಾರಗಳು** | ೨,೬೬,೫೫೧ |
| **೧೦) ಒಟ್ಟು ಕೋಳಿಗಳು** | ೩,೭೫,೫೮೨ |
| **೧೧) ಪಶು ವೈದ್ಯ ಶಾಲೆಗಳು** | |
| ೧೧.೧) ಪಶು ಆಸ್ಪತ್ರೆಗಳು | ೪ |
| ೧೧.೨) ಚಿಕಿತ್ಸಾಲಯಗಳು | ೭ |
| ೧೧.೩) ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | ೨೦ |
| ೧೧.೪) ಸಂಚಾರಿ ಚಿಕಿತ್ಸಾಲಯಗಳು | ೧ |
| ೧೧.೫) ಕೃತಕ ಗರ್ಭಧಾರಣ ಕೇಂದ್ರಗಳು | ೪ |

| | |
|---|---|
| ೧೧.೬) ಇತರೆ | ೫ |
| ೧೧.೭) ಒಟ್ಟು | ೪೩ |
| **೧೨) ಇತರೆ ಮಾಹಿತಿ** | |
| ೧೨.೧) ಕೃತಕ ಗರ್ಭಧಾರಣೆ ನೀಡಿದ ಪಶುಗಳ ಸಂಖ್ಯೆ (ಲಕ್ಷಗಳಲ್ಲಿ) | ೨೩,೧೪೧ |
| ೧೨.೨) ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ | ೧,೦೧,೦೭೧ |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

## ಮೀನುಗಾರಿಕೆ

ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲಿಕ್ಕಾಗಿ ೧೯೫೬ರಲ್ಲಿ ಮೀನುಗಾರಿಕೆ ಇಲಾಖೆಯನ್ನು ಸರ್ಕಾರ ಪ್ರಾರಂಭಿಸಿತು. ಬರಪೀಡಿತ ಪ್ರದೇಶದಲ್ಲಿ ಕೆರೆಗಳಲ್ಲಿ ಹೆಚ್ಚುಕಾಲ ನೀರಿರುವುದಿಲ್ಲ. ಕೇವಲ ೬-೭ ತಿಂಗಳು ಮಾತ್ರ ನೀರಿರುತ್ತದೆ. ಈ ರೀತಿ ಅಲ್ಪಕಾಲದಲ್ಲಿ ದೊರೆಯುವ ನೀರಿನ ಸೌಕರ್ಯದಲ್ಲಿ ಬಹುಬೇಗ ಬೆಳೆಯುವ ಮೀನಿನ ತಳಿಗಳನ್ನು ಬೇರೆ ರಾಜ್ಯದಿಂದ ತರಿಸಿ ಅವುಗಳನ್ನು ರಾಜ್ಯದಲ್ಲಿಯೇ ಅಭಿವೃದ್ಧಿಪಡಿಸಲು ಉತ್ಪಾದನಾ ಕೇಂದ್ರಗಳನ್ನು ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ಈ ತಳಿಯ ಮೀನಿನ ಮರಿಗಳು ಕೇವಲ ೬ ಅಥವಾ ೭ ತಿಂಗಳು ನೀರಿರುವ ಕೆರೆ-ಕೊಳಗಳಲ್ಲಿ ಸುಮಾರು ೬೦೦ ರಿಂದ ೯೦೦ ಗ್ರಾಂ. ತೂಕದವರೆಗೆ ಬೆಳೆಯುತ್ತವೆ. ಈ ಮೀನಿನ ಮರಿಗಳನ್ನು ಒಂದು ಹೆಕ್ಟೇರ್ ಜಲಪ್ರದೇಶದಲ್ಲಿ ૩,೦೦೦ ಮೀನಿನ ಮರಿಗಳನ್ನು ಬಿಟ್ಟು ಬೆಳೆಸಬಹುದು. ಇವು ಸಾಮಾನ್ಯಗೆಂಡೆ ಮತ್ತು ದೊಡ್ಡಗೆಂಡೆ ಜಾತಿಯ ಮರಿಗಳು. ಈ ಮೀನಿನ ಸಾಕಣೆ ಲಾಭದಾಯಕವೂ ಹೌದು. ಹೊಸದುರ್ಗ ತಾಲ್ಲೂಕಿನಲ್ಲಿ ೧೮ ದೊಡ್ಡ ಕೆರೆಗಳು ಮತ್ತು ೪೦ ಸಣ್ಣ ಕೆರೆಗಳು ಇದ್ದು, ಒಟ್ಟು ೩,೨೦೦ ಹೆಕ್ಟೇರ್ ಜಲಪ್ರದೇಶವನ್ನು ಮೀನುಗಾರಿಕೆಗೆ ಒಳಪಡಿಸಬಹುದಾಗಿದೆ. ಇಲ್ಲಿನ ಕೆರೆಗಳಲ್ಲಿ ನೀರು ನಿಲ್ಲುವ ಪ್ರದೇಶವು ಕೆಂಪು ಭೂಮಿಯಾಗಿದ್ದು, ಮೀನು ಬೆಳೆಯಲು ಅತ್ಯಂತ ಯೋಗ್ಯವಾಗಿದೆ. ತಾಲ್ಲೂಕಿನಲ್ಲಿ ೨೦೧೦-೧೧ನೇ ವರ್ಷದಲ್ಲಿ ಒಟ್ಟು ೧,೩೧೦ ಟನ್‌ಗಳಷ್ಟು ಮೀನುಗಳನ್ನು ಹಿಡಿಯಲಾಗಿದೆ. ಪಂಚಾಯತ್‌ರಾಜ್ ಸಂಸ್ಥೆಗೆ ಸೇರಿದ ಕೆರೆಗಳು (ಮೀನುಗಾರಿಕೆ ಸಂಬಂಧಿಸಿದಂತೆ) ೩೭, ಸಣ್ಣ ನೀರಾವರಿಗೆ ಸೇರಿದ ಕೆರೆಗಳು ೧೬, ಹಾಗೂ ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ ೨೦೦, ಮತ್ಸ್ಯಾಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ ೫, ಮೀನುಮರಿ ಬಿತ್ತನೆ ಸಂಖ್ಯೆ ೨೭.೧೦ ಲಕ್ಷ ಮರಿಗಳು. ತಾಲ್ಲೂಕಿನಲ್ಲಿರುವ ಮೀನು ಮಾರುಕಟ್ಟೆ ಸಂಖ್ಯೆ- ೧ ಆಗಿದೆ.

ಮೀನುಗಾರರಿಗೆ ವಿಶೇಷ ಯೋಜನೆಯಡಿ ೨೦೧೧ರ ಅಂತ್ಯಕ್ಕೆ ಒಟ್ಟಾರೆ ೦೫ ಮನೆಗಳನ್ನು ಸರ್ಕಾರದಿಂದ ನಿರ್ಮಿಸಿಕೊಡಲಾಗಿದೆ.

**ಮೀನುಗಾರಿಕೆ ವಿವರ**

| | ೨೦೧೫-೧೬ |
|---|---|
| ೧) ಹಿಡಿದ ಮೀನುಗಳು (ಟನ್ನುಗಳಲ್ಲಿ) | ೨೫೦ |
| ೨) ಕೆರೆಗಳ ಸಂಖ್ಯೆ(ಮೀನುಗಾರಿಕೆಗೆ ಸಂಬಂಧಿಸಿದಂತೆ) | |
| ಅ) ಪಂಚಾಯತ್ ರಾಜ್ ಸಂಸ್ಥೆಗೆ ಸೇರಿದ | ೨೭ |
| ಆ) ಸಣ್ಣ ನೀರಾವರಿಗೆ ಸೇರಿದ | ೧೬ |
| ೩) ಮೀನುಗಾರಿಕೆಯಲ್ಲಿ  ತೊಡಗಿರುವ ಕುಟುಂಬಗಳ ಸಂಖ್ಯೆ | |
| ಅ)ಪೂರ್ಣಕಾಲಿಕ | ೧೦೦ |
| ಆ) ಅರೆಕಾಲಿಕ | ೫೦ |
| ೪) ಮತ್ಸ್ಯಾಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ | ೦೫ |
| ೫) ಮೀನು ಮರಿ ಬಿತ್ತನೆ ಸಂಖ್ಯೆ (ಲಕ್ಷಗಳಲ್ಲಿ) | ೧೭.೦೫ |
| ೬) ಮೀನು ಮಾರುಕಟ್ಟೆಗಳ ಸಂಖ್ಯೆ | ೦೧ |

## ಅಧ್ಯಾಯ–೫

# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

**ಹೊ**ಸದುರ್ಗ ತಾಲ್ಲೂಕು ಪ್ರದೇಶದಲ್ಲಿ, ಪ್ರಾಚೀನ ಕಾಲದಲ್ಲಿ ಬಳೆ ಕೈಗಾರಿಕೆ, ಕಬ್ಬಿಣ ಕೈಗಾರಿಕೆ, ಹತ್ತಿನೂಲು–ಬಟ್ಟೆ ನೇಯ್ಗೆ, ಕಸುಬು, ಬಂಡಿಗಳ ತಯಾರಿಕೆ, ಸಾಂಬಾರ ಪದಾರ್ಥಗಳ ಉದ್ಯಮ, ಅಡಿಕೆ ಉದ್ಯಮ, ಕೈಗಾಣಗಳು, ಎತ್ತಿನ ಗಾಣಗಳು, ತಿಪ್ಪೆ ಗೊಬ್ಬರ ತಯಾರಿಕೆ, ಕುಂಬಾರಿಕೆ ಮುಂತಾದವು ಇದ್ದ ಬಗ್ಗೆ, ತಾಲ್ಲೂಕಿನ ಹೆಗ್ಗೆರೆ ಗ್ರಾಮದ ಕ್ರಿ.ಶ.೧೧೩೧ರ ಶಿಲಾಶಾಸನದ ಆಧಾರದಿಂದ ತಿಳಿಯಬಹುದಾಗಿದೆ. ಮತ್ತೋಡು  ಪಾಳೆಯಗಾರರ ಕಾಲ (ಕ್ರಿ.ಶ.೧೭ ಮತ್ತು ೧೮ ನೇ ಶತಮಾನ)ದಲ್ಲಿ ಗಾಜಿನ ಬಳೆ ತಯಾರಿಕೆ ಹೆಸರುವಾಸಿಯಾಗಿದ್ದಿತು. ಅಲ್ಲಿ ತಯಾರಿಸಲಾಗುತ್ತಿದ್ದ ಹಸಿರು, ನೀಲಿ, ಕೆಂಪು, ಕಪ್ಪು ಮತ್ತು ಹಳದಿ ಬಣ್ಣದ ಬಳೆಗಳು ಸೀಮೆಯಲ್ಲೆಲ್ಲ ಮಾರಾಟವಾಗುತ್ತಿದ್ದು, ಕಪ್ಪು ಬಣ್ಣದ ಗಾಜಿನ ಬಳೆಗಳಿಗೆ ಬಹಳ ಬೇಡಿಕೆ ಇದ್ದಿತೆಂದು, ಬಳೆಗಳ ತಯಾರಿಕೆಗಾಗಿ ಗೋಡೆಯ ಒಳಗಡೆ ಎತ್ತರವಾದ ಅಟ್ಟಣಿಗಳ ಮೇಲೆ ಕುಲುಮೆಗಳನ್ನು ಸ್ಥಾಪಿಸಿದ್ದರೆಂದು ಹೇಳಲಾಗಿದೆ. ಬಳೆಗಾರರ ಕೇರಿ ಇದ್ದ ಜಾಗದಲ್ಲಿ ಈಗಲೂ ಬಳೆ ಬಟ್ಟಿ ಒಲೆಗಳು, ಬಣ್ಣ ಬಣ್ಣದ ಗಾಜಿನ ಎರಕದ ಉಂಡೆಗಳ ಅವಶೇಷಗಳನ್ನು ಕಾಣಬಹುದಾಗಿದೆ. ಇದಕ್ಕೆ ಅಗತ್ಯವಾದ ಗಾಜನ್ನು ಸ್ಥಳೀಯ ಪದಾರ್ಥಗಳಿಂದ ತಯಾರಿಸಿಕೊಳ್ಳುತ್ತಿದ್ದರು. ಆನೆವಾಳದಲ್ಲಿಯೂ ಬಳೆ ತಯಾರಿಕೆ ಆಗುತ್ತಿತ್ತು. ಕಂಚೀಪುರ ಮತ್ತು ಕಂಚೀಬೆಟ್ಟದಲ್ಲಿ ಶಾಸನವಿರುವ ನಾಡ ಕಬ್ಬಿಣದ ಗರುಡಗಂಬಗಳು ದೇವಾಲಯಗಳ ಮುಂದೆ ಇದ್ದು, ಇದು ಆ ಕಾಲದಲ್ಲಿನ ಕಬ್ಬಿಣದ ಅದಿರು ಕೈಗಾರಿಕೆಯನ್ನು ಸೂಚಿಸುತ್ತದೆ. ಕ್ರಿ.ಪೂ.ಕಾಲದಲ್ಲಿನ ಇಲ್ಲಿನ ನೀರ್ಗುಂದ ಪ್ರದೇಶದಲ್ಲಿ “ನೀಲಾವತಿ  ಪಟ್ಟಣ” ಕಟ್ಟಲ್ಪಟ್ಟಿದ್ದು, ರಾಜಾಪರಮೇಶ್ವರ ರಾಯನ ಮಗ ನೀಲಶೇಖರನು ವೈಭವದಿಂದ ಆಳಿದನೆಂದು ಆಧಾರಗಳಿಂದ ವ್ಯಕ್ತವಾಗಿದೆ. ಆ ಕಾಲದಲ್ಲಿಯ ಅರಮನೆ–ಗುಡಿ–ಗೋಪುರಗಳನ್ನು, ಸೈನಿಕರ ಯುದ್ಧ ಸಾಮಾಗ್ರಿಗಳನ್ನು ತಯಾರಿಸುವ ಕೈಗಾರಿಕೆಗಳಿದ್ದವೆಂಬುದು ಖಚಿತ. ಬೂದಿಹಾಳು ಪಾಳೆಯಗಾರರು, ಮತ್ತೋಡು, ದೇವಪುರ, ಲಕ್ಕವ್ವನಹಳ್ಳಿ ಕೋಟೆಗಳನ್ನಾಳಿದವರು

ಅನೇಕ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡಿದ್ದರೆಂದು ಹೇಳಬಹುದು. ಕೈಗಾರಿಕೆಗಳಲ್ಲದೆ ಅರಮನೆ ಕಟ್ಟುವುದು, ಯುದ್ಧ ಸಾಮಾಗ್ರಿ ತಯಾರಿಕೆ ಮುಂತಾದವು ಸಾಧ್ಯವಾಗುತ್ತಿರಲಿಲ್ಲ. ಆಗಿನ ಕಾಲದಲ್ಲಿ ಬಾಗೂರು ಮತ್ತು ಮತ್ತೋಡು ನಗರಗಳಲ್ಲಿ ಮುತ್ತು-ರತ್ನ ಅಂಗಡಿಗಳ ಕೇರಿ ಇದ್ದಿತೆಂದು ಆಧಾರಗಳಿಂದ ತಿಳಿದುಬರುತ್ತದೆ. ಹೆಗ್ಗೆರೆಯ ಒಂದು ಶಾಸನದಲ್ಲಿ ಕುಂಬಾರ ಮಲ್ಲವ್ವಳ ಮಗ ಮಾಕಯ್ಯನ ಹೆಸರಿದೆ. ಮತ್ತೋಡು ಪಾಳೆಯಗಾರರ ಸಂಸ್ಥಾನಕ್ಕೆ ಉಪ್ಪಿನಮಾಳೆ ಒಂದಕ್ಕೆ ೧೨ ಸೇರು ಉಪ್ಪು, ಕುರಿ ಆಳತಕ್ಕೆ ಗೊಲ್ಲರು ಹುದಿ ಒಂದಕ್ಕೆ ೧ ಕುರಿಯನ್ನು ಸುಂಕವಾಗಿ ಕೊಡುತ್ತಿದ್ದರು (ಪಾಳೆಯಗಾರರ ವಂಶಸ್ಥರಿಗೆ). (ಮತ್ತೋಡು ಪಾಳೆಯಗಾರರ ವಂಶಜರ ಒಂದು ಪತ್ರ (೧೮೮೨)'-ಪ್ರೊ' ಲಕ್ಷ್ಮಣ್ ತೆಲಗಾವಿ). ಇದರಿಂದ ಉಪ್ಪಿನ ತಯಾರಿಕೆ, ಉಣ್ಣೆಕಂಬಳಿ ತಯಾರಿಕೆ ಹಾಗೂ ಚರ್ಮೋದ್ಯಮ ಇದ್ದ ಬಗೆ ವ್ಯಕ್ತವಾಗುವುದು. ಎಲ್ಲಾ ಕೈಗಾರಿಕೆಗಳಿಗೆ ಕಸುಬುಗಳಿಗೆ ಸುಂಕಗಳನ್ನು ಸಲ್ಲಿಸಬೇಕಾಗಿದ್ದ ಅಂಶವೂ ಗಮನಾರ್ಹ. ಮತ್ತೋಡು ಪಾಳೆಯಗಾರರ ಕಾಲದಲ್ಲಿ ನಾಣ್ಯಗಳನ್ನು (ಬಂಗಾರದ ವರಹಗಳನ್ನು) ತಯಾರಿಸುತ್ತಿದ್ದುದರ ಬಗ್ಗೆ ಆಧಾರವಿದೆ. ಇಲ್ಲಿನ ಕುದುರೆ ಕಣಿವೆ ಮತ್ತು ಬುಕ್ಕಸಾಗರದ ಕಣಿವೆ ಗಣಿಗಳಿಂದ ಕಬ್ಬಿಣದ ಅದಿರು ದೊರೆಯುತ್ತಿದ್ದ ಬಗ್ಗೆ ಮತ್ತು ಆ ಅದಿರನ್ನು ಕಣಿವೆಗಳಿಂದ ಕೋಣ ಮತ್ತು ಕತ್ತೆಗಳ ಮೂಲಕ ಸಾಗಿಸಿ ಚಿಕ್ಕಬ್ಯಾಲದ ಕೆರೆಯಲ್ಲಿದ್ದ ದೊಡ್ಡ-ದೊಡ್ಡ ಕುಲುಮೆಗಳಲ್ಲಿ ಆ ಅದಿರನ್ನು ಕರಗಿಸಲಾಗುತ್ತಿದ್ದ ಬಗ್ಗೆ, ನಾಡ ಕಬ್ಬಿಣವು ಇಲ್ಲಿ ತಯಾರಾಗುತ್ತಿದ್ದ ಬಗ್ಗೆ, ೧೮೦೧ರಲ್ಲಿ ಈ ಪ್ರದೇಶದಲ್ಲಿ ಸಂಚರಿಸಿದ ಫ್ರಾನ್ಸಿಸ್ ಬುಕಾನನ್ ಬರೆದಿದ್ದಾನೆ. ('ಹೊಸದುರ್ಗ ತಾಲ್ಲೂಕ್ ಇತಿಹಾಸ: ಕೆಲವು ಹೊಸ ಸಂಗತಿಗಳು'-ಪ್ರೊ. ಲಕ್ಷ್ಮಣ್ ತೆಲಗಾವಿ). ೧೮೬೩-೬೭ರಲ್ಲಿ ಈ ತಾಲ್ಲೂಕಿನ ಭೂವೈಜ್ಞಾನಿಕ ಪರಿವೀಕ್ಷಣೆಯನ್ನು ಮೈಸೂರು ಭೂಗರ್ಭ ಪರಿವೀಕ್ಷಣ ಇಲಾಖೆಯ ಸಾಂಬಶಿವೈಯರ್‌ರವರು ನಡೆಸಿದ್ದಾರೆ. (ಪೂರ್ವೋಕ್ತ).

**ಖನಿಜ**: ತಾಲ್ಲೂಕಿನಲ್ಲಿ ವಿವಿಧ ಖನಿಜಗಳು ಲಭ್ಯವಿರುವುದಾಗಿ ಭೂವೈಜ್ಞಾನಿಕ ಸಂಶೋಧನೆಗಳು ಖಚಿತ ಪಡಿಸಿವೆ. ಇಲ್ಲಿನ ಬೂದಿಮರಡಿ ನೆಲದಾಳದ ಪದರಗಳಲ್ಲಿ ಚಿನ್ನದ ನಿಕ್ಷೇಪವಿರುವುದಾಗಿ ದೃಢಪಡಿಸಲಾಗಿದೆ. ಹಿಂದಿನ ಕಾಲದಲ್ಲಿಯೂ ಇಲ್ಲಿ ಚಿನ್ನ ತಯಾರಿಸುತ್ತಿದ್ದರೆಂಬ ಐತಿಹ್ಯವಿದೆ. ಇಲ್ಲಿ ದೊರೆಯಬಹುದಾದ ಇನ್ನಿತರ ಖನಿಜಗಳೆಂದರೆ, ಕ್ರೋಮೈಟ್, ಕಬ್ಬಿಣದ ಅದಿರು, ಮ್ಯಾಂಗನೀಸ್, ಆಸ್ಬೆಸ್ಟೋಸ್, ಜಿರೈಟ್ಸ್, ಚೈನಾಕ್ಲೇ, ಡಾಲಮೈಟ್ ಹಾಗೂ ಲೈಮ್‌ಸ್ಟೋನ್. ಕಟ್ಟಡದ ಗ್ರಾನೈಟ್ ಕಲ್ಲುಗಳು ಸಾಧಾರಣ ಮರಳು, ಟ್ಯಾಂಕ್‌ಕ್ಲೇ, ಇನ್ನಿತರ ಭೂವೈಜ್ಞಾನಿಕ ಪರಿವೀಕ್ಷಣ ಇಲಾಖೆಯು ಇಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಬಳಸಿಕೊಂಡು ದೊಡ್ಡ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಿರುತ್ತದೆ. ಇಲ್ಲಿನ ಉಪಯುಕ್ತ ಸುಣ್ಣದ ಕಲ್ಲಿನ ನಿಕ್ಷೇಪದ ಆಧಾರದಿಂದ ತಾಲ್ಲೂಕಿನಲ್ಲಿ ಈಗಾಗಲೇ ಮತ್ತೋಡು, ಕಂಚೀಪುರ, ಮಾಡದ ಕೆರೆಗಳಲ್ಲಿ ಸಿಮೆಂಟ್ ಕಾರ್ಖಾನೆಗಳು ತಲೆಯೆತ್ತಿವೆ.

ತಾಲ್ಲೂಕಿನಲ್ಲಿ ಒಂದು ಬೆಟ್ಟದ ಸಾಲು ಚಿನ್ನಸಮುದ್ರದಿಂದ ಪ್ರಾರಂಭವಾಗಿ, ಬ್ರಹ್ಮವಿದ್ಯಾನಗರ, ಹಾಲುರಾಮೇಶ್ವರ, ಶಬರಿವನದ ಮೂಲಕ ಹಬ್ಬಿದೆ. ಮತ್ತೊಂದು ಬೆಟ್ಟದ ಸಾಲು ಹುಳಿಯಾರು ಕಡೆಯಿಂದ, ಇನ್ನೊಂದು ಬೆಟ್ಟದ ಸಾಲು ಮಾಡದ ಕೆರೆ ಬಳಿ ಹಾದು ಹೋಗಿದೆ. ಅಲ್ಲದೆ, ತಾಲ್ಲೂಕಿನ ಪೂರ್ವಕ್ಕೆ ದಕ್ಷಿಣೋತ್ತರವಾಗಿ ಮಾರಿ ಕಣಿವೆಯ ಬೆಟ್ಟದ ಸಾಲು ಹಬ್ಬಿದೆ. ಬೆಣಚು ಕಲ್ಲು ಇಲ್ಲಿನ ರಾಮಜ್ಜನ ಹಳ್ಳಿ ಬಳಿ ದೊರೆಯುವುದು. ಬುಕ್ಕಸಾಗರ, ಕಡವ ಗೆರೆ, ಕುದುರೆ ಕಣಿವೆ ಕಾವಲು, ಮಾಡದ ಕೆರೆ ಸಮೀಪ ಕಬ್ಬಿಣದ ಅದಿರು ಇದೆ. ಇದು ಉತ್ತಮ ಗುಣಮಟ್ಟದ್ದೆಂದು ಪರಿಗಣಿಸಲ್ಪಟ್ಟಿದೆ. ಗಣಿ ಉದ್ಯಮ ಇಲ್ಲಿ ಪ್ರಾರಂಭವಾಗಿದೆ. ಲಕ್ಕೀಹಳ್ಳಿ ಮತ್ತು ಮಾಡದ ಕೆರೆ ಹತ್ತಿರ ಮ್ಯಾಂಗನಿಸ್ ದೊರೆಯುವುದು. ಇಲ್ಲಿಯೂ ಗಣಿಗಾರಿಕೆ ನಡೆದಿದೆ. ಶಿಲೆಗಳಲ್ಲಿ, ರೂಪಾಂತರ ಶಿಲೆಗಳ– ಇದರಲ್ಲಿ ನೈಸ್ ಶಿಲೆ ಬಹಳ ಕಡೆ ಇದೆ. (ಕಲ್ಕೆರೆ, ಕೊರಟಿಕೆರೆ, ಮಾರಬಗಟ್ಟ ಮುಂತಾದೆಡೆ). ಚಿಕ್ಕಬ್ಯಾಲದ ಕೆರೆ ಹತ್ತಿರ ಷಿಸ್ಟ್‌ಶಿಲೆ ದೊರೆಯುತ್ತದೆ. ಬ್ಯಾಂಡೇಡ್ ಕ್ವಾರ್ಟರ್‌ಜೈಟ್ ಮಾಡದ ಕೆರೆ, ದೊಡ್ಡಕಿಟ್ಟದ ಹಳ್ಳಿ, ಜಾನಕಲ್ಲು ಪ್ರದೇಶದಲ್ಲಿದೆ. ಬುರುಡೇ ಕಟ್ಟೆ ಪಶ್ಚಿಮದಲ್ಲಿ ಸೋಪ್‌ಸ್ಟೋನ್ ದೊರೆಯುವುದು. ಜಾನಕಲ್ಲು, ಪೀಲಾಪುರ ಬಳಿ ಪುಕ್ಸೈಟ್‌ಕ್ವಾರ್ಟರ್ ಜೈಟ್(ಹಸಿರುಕಲ್ಲು) ಸಿಗುತ್ತದೆ. ಅಲಂಕಾರಿಕ ನೈಸಿಕ್ ಗ್ರಾನೈಟ್‌ಗಳು ಚನ್ನಸಮುದ್ರ ಮತ್ತು ಶಬರಿವನದ ಮಧ್ಯೆ ಲಭ್ಯ. ಅಗ್ನಿ ಶಿಲೆಗಳಲ್ಲಿ, ಗ್ರಾನೈಟ್ ಶಿಲೆಗಳು ಗವಿರಂಗಾಪುರ, ಮೈಲಾರಪುರ, ಹೊಸದುರ್ಗ ಮತ್ತು ಹಾಲುರಾಮೇಶ್ವರ ಪರಿಸರದಲ್ಲಿದೆ. ಪಿಂಕ್(ತೆಳುಕೆಂಪು) ಗ್ರಾನೈಟ್ ಶಬರಿವನದ ಪೂರ್ವ–ಉತ್ತರದಲ್ಲಿದೆ. ಡಾಲರೈಟ್‌ಶಿಲೆ ಶೀರನಕಟ್ಟೆ, ಕಾಟೀಹಳ್ಳಿ, ಅತ್ತಿಗಟ್ಟಿಗಳಲ್ಲಿ ಲಭಿಸುವುದು. ಅಗ್ನಿಶಿಲೆಗಳಿಗಿಂತ ರೂಪಾಂತರ ಶಿಲೆಗಳು ಬಹಳ ಪ್ರಾಚೀನ. ('ಭೂವೈಜ್ಞಾನಿಕವಾಗಿ ಹೊಸದುರ್ಗ ತಾಲ್ಲೂಕು': ಕೆ.ಪಿ. ಹನುಮಂತರಾಯಪ್ಪ)

**ಸುಣ್ಣದ ಕಲ್ಲು**: ವಾಣಿವಿಲಾಸ ಸಾಗರ ಡ್ಯಾಂ ಮೇಲ್ಭಾಗದಲ್ಲಿ ಸುಮಾರು ೧೫ ಕಿ.ಮೀ ದೂರದಲ್ಲಿರುವ ಉತ್ತರ–ದಕ್ಷಿಣವಾಗಿ ಹಬ್ಬಿರುವ ಬೆಟ್ಟಗಳ ಸಾಲಿನಲ್ಲಿ ಸುಣ್ಣದ ಕಲ್ಲು ದೊರೆಯುತ್ತದೆ. ಇದು ಕ್ರಿಸ್ಟ್‌ಲೈನ್ ಗುಣವುಳ್ಳದ್ದು. ಈ ಭಾಗದಲ್ಲಿ ಮೆಗ್ನಿಷಿಯಂ ಸುಣ್ಣದ ಕಲ್ಲು ಹೇರಳವಾಗಿದೆ. ಇವುಗಳನ್ನು ಹಳದಿ ಬಣ್ಣದ ಮೇಲಿನ ಹೊದಿಕೆಯಿಂದ ಗುರುತಿಸಬಹುದು. ಆದರೆ, ಸಿಮೆಂಟ್ ಉಪಯುಕ್ತವಾದ ಹೈಕ್ಯಾಲ್ಸಿಯಂ ಸುಣ್ಣದ ಕಲ್ಲು ಕಪ್ಪನಾಯಕನ ಹಳ್ಳಿ, ಮತ್ತೋಡು, ಬೇವಿನಳ್ಳಮ್ಮನ ಗುಡ್ಡ ಮತ್ತು ದೊಣೇಕಲ್ಲು ಭಾಗಗಳಲ್ಲಿ ಗುರುತಿಸಲಾಗಿದೆ. ವೇದಾವತಿ ನದಿಯ ಉತ್ತರ ಭಾಗದಲ್ಲಿ ಮಲ್ಲಾಪುರ ಮತ್ತು ಕೆಂಕೆರೆ ಹತ್ತಿರ ಸಿಮೆಂಟ್ ಗ್ರೇಡ್ ಸುಣ್ಣದ ಕಲ್ಲು ಇದೆ. ತಾಲ್ಲೂಕಿನ ಮೊದಲನೆಯ ಸಿಮೆಂಟ್ ಕಾರ್ಖಾನೆಯಾದ 'ವೇದಾಸಿಮೆಂಟ್ ಕಾರ್ಖಾನೆಯು' ದಿನಾಂಕ: ೯–೫–೧೯೭೯ ರಿಂದ ಪ್ರಾರಂಭಗೊಂಡಿದೆ. ಕಂಚೀಪುರ ಮತ್ತು ಮತ್ತೋಡುಗಳಲ್ಲಿಯೂ ಸಿಮೆಂಟ್ ಕಾರ್ಖಾನೆಗಳಿವೆ. ಮೇಲ್ಕಂಡ 'ವೇದಾ'

(ಮಾಡದಕೆರೆ) ಸಿಮೆಂಟ್ ಕಾರ್ಖಾನೆಯು ಸ್ಥಗಿತಗೊಂಡಿರುತ್ತದೆ. ಕಂಚೀಪುರದ 'ಶಿವಶಕ್ತಿ ಸಿಮೆಂಟ್ ಫ್ಯಾಕ್ಟರಿ' ಮತ್ತು ಮತ್ತೋಡಿನ 'ರ್‍ಯಾಮ್ಕೋ' ಸಿಮೆಂಟ್ ಫ್ಯಾಕ್ಟರಿ ಇವೆರಡು ಚಾಲ್ತಿಯಲ್ಲಿವೆ (ಗೋಕುಲ ಸಿಮೆಂಟ್ ಫ್ಯಾಕ್ಟರಿಯು ರ್‍ಯಾಮ್ಕೋ ಸಿಮೆಂಟ್ ಫ್ಯಾಕ್ಟರಿ ಹೆಸರಿನಲ್ಲಿ ಮುಂದುವರೆದಿದೆ). ಶ್ರೀರಾಂಪುರ ಪ್ರದೇಶದಲ್ಲಿ 'ರೇಯಾನ್ ಸಿಮೆಂಟ್' ಫ್ಯಾಕ್ಟರಿಯನ್ನು ಇಲ್ಲಿ ಸ್ಮರಿಸಬಹುದು. ಸಿಮೆಂಟ್ ಕಾರ್ಖಾನೆಗಳಿಂದ ೧೯೮೦ ರ ದಶಕದಲ್ಲಿ ಪರಿಸರ ಮಾಲಿನ್ಯದ ವಿರುದ್ಧ ತಾಲ್ಲೂಕಿನ ರೈತರು ಪ್ರತಿಭಟನೆ ನಡೆಸಿದ ನಂತರ ತಂತ್ರಜ್ಞಾನ ಸುಧಾರಣೆಯಿಂದ ಪರಿಸರ ಹಾದಿ ತಪ್ಪಿದಂತಾಗಿದೆ. ಲೋಕಂಡಾಪಾಲ, ರಾಯಲ್, ಮಾರೀಸ್ ಮತ್ತು ವೇದಾ ಸಿಮೆಂಟ್ ಫ್ಯಾಕ್ಟರಿಗಳು ಸ್ಥಗಿತಗೊಂಡಿವೆ.

ಬ್ರಿಟೀಷರ ಕಾಲದಲ್ಲಿ ಹೊಸದುರ್ಗ ಪ್ರದೇಶದ ಕಬ್ಬಿಣ ಕೆಲಸಗಾರರು ಹೆಸರುವಾಸಿಯಾಗಿದ್ದರು, ಬಾಗೂರು ಬಡಗಿಗಳು ಪ್ರಸಿದ್ಧರಾಗಿದ್ದರು. ಕುಂಬಾರರು, ಕೈಗಾಣ, ಎತ್ತಿನ ಗಾಣಗಳು ಹಿಂದಿನ ಕಾಲದಿಂದಲೂ ಇವೆ. ಎತ್ತಿನ ಬಂಡಿಗಳ ತಯಾರಿಕೆ, ಹಗ್ಗಗಳ ತಯಾರಿಕೆ, ವಿಗ್ರಹಗಳು, ದೀಪಾಲೆ ಕಂಬಗಳು, ಒರಳು ಕಲ್ಲುಗಳ ತಯಾರಿಕೆ ಹಿಂದಿನ ಕಾಲದಿಂದ ಈಗಲೂ ಉಳಿದಿವೆ. ಬೀಸೆ ಕಲ್ಲುಗಳ ತಯಾರಿಕೆ ದಶಕಗಳ ಹಿಂದೆ ಇದ್ದಿತು. ಈಗ ಮಿಕ್ಸಿ-ಗ್ರೈಂಡರ್‌ಗಳು, ಹಿಟ್ಟಿನ ಗಿರಣಿ ಬಂದ ಮೇಲೆ ಅವು ಮಾಯವಾಗಿವೆ. ಕಂಬಳಿ ನೇಯ್ಗೆ ಹಿಂದಿನ ಕಾಲದಿಂದ ಇದೆ. ವಿಭೂತಿ ತಯಾರಿಕೆ ತಾಲ್ಲೂಕಿನಲ್ಲಿ ಇದ್ದಿತು. 'ಧೂಪದ ಕೊಡ' (ದಶಾಂಗ) ಎಂಬ ಸುಗಂಧ ಸೂಸುವ ಊದುಬತ್ತಿಗಳನ್ನು ತಯಾರಿಸುತ್ತಿದ್ದರು. ಈಗ ಸುಣ್ಣ ತಯಾರಿಕೆ ಸ್ವಲ್ಪ ಮಟ್ಟಿಗೆ ಇದೆ. ಅತಿ ಮುಖ್ಯ ಗುಡಿ ಕೈಗಾರಿಕೆ ಎಂದರೆ, ಬಿದಿರಿನ ಕೈಗಾರಿಕೆ (ಬುಟ್ಟಿಹೆಣೆಯುವುದು). ತೆಂಗಿನ ನಾರಿನ ಕೈಗಾರಿಕೆ ಬಹಳ ಪ್ರಸಿದ್ಧಿ ಪಡೆದಿದೆ. ನಾರು, ಹುರಿ, ಹಗ್ಗ, ಕಾಲೊರಸುಗಳು ಇತ್ಯಾದಿ ತೆಂಗಿನ ನಾರಿನ ಉತ್ಪನ್ನಗಳು. ಇಲ್ಲಿಂದ ಪಂಜಾಬ್, ಗುಜರಾತ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಗೆ ರಫ್ತಾಗುತ್ತವೆ. ಹೊರ ದೇಶಕ್ಕೂ ಹೋಗುತ್ತಿವೆ. ಆಯಿಲ್ ಮಿಲ್‌ಗಳು, ಬೇಕರಿಗಳು, ಇಟ್ಟಿಗೆ ಕಾರ್ಖಾನೆಗಳು ಹೆಚ್ಚು ಸಂಖ್ಯೆಯಲ್ಲಿ ತಲೆಯೆತ್ತಿವೆ. ಮೊಸಾಯಿಕ್, ಟೈಲ್ಸ್ ಕೈಗಾರಿಕೆ, ಮೋಂಬತ್ತಿ ತಯಾರಿಕೆ, ಊದುಬತ್ತಿ ತಯಾರಿಕೆ, ಕಟ್ಟಿಗೆ ಪಿಠೋಪಕರಣ ತಯಾರಿಕೆ, ಕಾಫಿಪುಡಿ ತಯಾರಿಕೆ, ಕಬ್ಬಿಣದ ಗ್ರಿಲ್ಸ್ ತಯಾರಿಕೆ, ಜಲ್ಲಿಕಲ್ಲು ಪುಡಿ ಮಾಡುವ ಕ್ರೆಷರ್ ಕೈಗಾರಿಕೆ, ಗಾರ್ಮೆಂಟ್ಸ್, ಮುದ್ರಣ, ಸಾಮಿಲ್‌ಗಳು, ಪ್ಲೈವುಡ್ ತಯಾರಿಕೆ, ಫೋಟೋಗ್ರಾಫ್, ಹೋಟೆಲ್- ಮೆಸ್ ಉದ್ಯಮ, ಚಪ್ಪಲಿ ತಯಾರಿಕೆ, ಕಮ್ಮಾರಿಕೆ, ಟೈಲರಿಂಗ್, ಚಿನ್ನದ ಆಭರಣಗಳು ಮತ್ತು ಬೆಳ್ಳಿ ಆಭರಣ ಸಾಮಾಗ್ರಿ ತಯಾರಿಕೆ, ಬ್ಯೂಟಿ ಪಾರ್ಲರ್, ಚಕ್ಕಲಿ - ಮಿಠಾಯಿ ತಯಾರಿಕೆ, ಕುಂಬಾರಿಕೆ, ಮನೆಕಟ್ಟಡ, ಕರಕುಶಲ ವಸ್ತುಗಳ ತಯಾರಿಕೆ, ಹಪ್ಪಳ ಶ್ಯಾವಿಗೆ, ಸಂಡಿಗೆ ತಯಾರಿಕೆ, ಚರ್ಮಹದ ಮಾಡುವುದು, ಪೌಲ್ಟ್ರಿ ಮುಂತಾದ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳು ತಾಲ್ಲೂಕಿನಲ್ಲಿವೆ. ಬಟ್ಟೆ ನೇಯ್ಗೆ ಮತ್ತು

ಕಂಬಳಿ ನೇಯ್ಗೆ ಕೈಗಾರಿಕೆಗಳು ಸಹ ತಾಲ್ಲೂಕಿನಲ್ಲಿ ಜೀವಂತವಾಗಿವೆ. ಕರ್ಪೂರ ತಯಾರಿಕೆ ಘಟಕ ಶ್ರೀರಾಂಪುರದಲ್ಲಿದೆ.

೧೯೮೮-೮೯ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿದ್ದ ಕಾರ್ಖಾನೆಗಳ(ಫ್ಯಾಕ್ಟರಿಗಳ) ಸಂಖ್ಯೆ ೧೦, ಹಾಗೂ ಇವುಗಳಲ್ಲಿ ಉದ್ಯೋಗಿಗಳಾಗಿರುವವರ ಸಂಖ್ಯೆ ೧,೧೬೧ ಎಂದು ದಾಖಲೆ ಇದೆ. ಎಣ್ಣೆ ತಯಾರಿಕೆಯ ಕೈ ಗಾಣಗಳು ಹೋಗಿ ಈಗ ಯಂತ್ರದ ಗಾಣಗಳು ಬಂದಿವೆ. ಕೊಬ್ಬರಿ ಎಣ್ಣೆ ಹಾಗೂ ಹರಳೆಣ್ಣೆ ತಯಾರಿಸಲಾಗುತ್ತದೆ. ೨೦೧೨-೧೩ನೇ ಸಾಲಿನಲ್ಲಿ ಒಟ್ಟು ೬೯ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಂಡಿದ್ದು ೩೨೫ ಮಂದಿಗೆ ಉದ್ಯೋಗ ಒದಗಿಸಿದ್ದವು. ಇಲ್ಲಿಯವರೆಗೆ ಒಟ್ಟಾರೆ (ಕ್ಯುಮ್ಯುಲೇಟಿವ್) ೧೨೪೯ ಘಟಕಗಳು ತಾಲ್ಲೂಕಿನಲ್ಲಿದ್ದು, ೫೮೦೭ ಮಂದಿಗೆ ಉದ್ಯೋಗ ಒದಗಿಸಿದ್ದವು. ೨೦೦೫-೦೬ರ ಆರ್ಥಿಕ ಗಣತಿಯಂತೆ ತಾಲ್ಲೂಕಿನಲ್ಲಿ ೮೭೧೮ ವ್ಯಾಪಾರ, ಹೋಟೆಲ್ ಮತ್ತು ಸಾರಿಗೆ ಚಟುವಟಿಕೆಗಳ ಉದ್ದಿಮೆಗಳಿದ್ದವು. ೨೦೧೫-೧೬ ನೇ ಸಾಲಿನಲ್ಲಿ ೫೦ ಸಣ್ಣ ಪ್ರಮಾಣದ ಉದ್ದಿಮೆಗಳು ನೋಂದಣಿಗೊಂಡಿದ್ದು, ೨೬೦ ಮಂದಿಗೆ ಉದ್ಯೋಗ ಒದಗಿಸಿದ್ದವು. ಒಟ್ಟಾರೆ ೧೩೭೪ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ೬೩೩೧ ಮಂದಿಗೆ ಉದ್ಯೋಗ ನೀಡಿದ್ದವು.

**ವಿದ್ಯುತ್**: ತಾಲ್ಲೂಕಿನಲ್ಲಿ ೧೯೫೮ನೇ ಸಾಲಿನಲ್ಲಿ ಬಾಗೂರು ಮೂಲಕ ಹೊಸದುರ್ಗ, ಕೆಲ್ಲೋಡು ಹಾಗೂ ಶ್ರೀರಾಂಪುರದವರೆಗೆ ವಿದ್ಯುತ್ ಸರಬರಾಜು ಆಗುತ್ತಿತ್ತು. ಎಲ್.ಟಿ.ಸಿಂಗಲ್‌ಫೇಸ್‌ನಲ್ಲಿ ಈ ಸಂಪರ್ಕ ಇತ್ತು. ಕೆ.ಎಸ್.ಇ.ಬಿ. ಎಂದು (ಕರ್ನಾಟಕ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್) ಇದ್ದ ಹೆಸರು ದಿನಾಂಕ: ೦೧-೧೧-೧೯೭೬ರಿಂದ ಕೆ.ಇ.ಬಿ (ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್) ಎಂದು ನಾಮಕರಣಗೊಂಡಿತು. ೧೯೮೨ರಲ್ಲಿ ಹಿರಿಯೂರಿನಿಂದ ಮತ್ತೋಡು ಮಾರ್ಗವಾಗಿ ೬೬ ಕೆ.ವಿ.ಎ ಮಾರ್ಗ ರಚಿಸಿ, ಮತ್ತೋಡಿನಲ್ಲಿ ಒಂದು ೬೬/೧೧ ಕೆ.ವಿ ೨೬.೩ ಎಂವಿಎ ಪರಿವರ್ತಕಗಳನ್ನು ಅಳವಡಿಸಿ ವಿದ್ಯುತ್ ವಿತರಣಾ ಕೇಂದ್ರ ಪ್ರಾರಂಭಗೊಂಡಿತು. ನಂತರ ಹೊಸದುರ್ಗ ವಿತರಣಾ ಕೇಂದ್ರದಲ್ಲಿ ೧೧೨.೫ ಮತ್ತು ೧.೮ ಎಂವಿಎ ಪರಿವರ್ತಕಗಳನ್ನು ಅಳವಡಿಸಿದೆ. ೫ನೇ ಜನವರಿ ೨೦೦೬ರಂದು ಹಾಲುರಾಮೇಶ್ವರದ ಬಳಿ ಮತ್ತೆ ೬೬ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಿದ್ದು, ಅದು ಚಾಲನೆಯಲ್ಲಿದೆ. ಇಲ್ಲಿ ೨.೮ ಎಂವಿಎ ಪರಿವರ್ತಕಗಳನ್ನು ಅಳವಡಿಸಲಾಗಿದೆ. ಶ್ರೀರಾಂಪುರ ಹೋಬಳಿ ಗರಗದ ಬಳಿ ೬೬ ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ೧೮ ಎಂ.ವಿ.ಎ ಪರಿವರ್ತಕ ಸ್ಥಾಪನೆಯೊಂದಿಗೆ ಕಾರ್ಯಾರಂಭಗೊಂಡಿದೆ. ಬಾಗೂರು, ಕಂಚೀಪುರ ಹತ್ತಿರ ೬೬ ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಾಗಿವೆ. ಹೀಗೆ ತಾಲ್ಲೂಕಿನ ವಿದ್ಯುತ್ ಪೂರೈಕೆ ಉತ್ತಮಗೊಂಡಿರುತ್ತದೆ. ಬ್ರಹ್ಮವಿದ್ಯಾನಗರದಲ್ಲಿ ೨೨೦ ಕೆ.ವಿ. ವಿದ್ಯುತ್ ಪ್ರಸರಣ ಕೇಂದ್ರ ಆರಂಭಗೊಂಡಿರುತ್ತದೆ. ಉಪವಿಭಾಗ ಎಚ್.ಟಿ.ಮಾರ್ಗದ ಉದ್ದ ೯೧೭.೭೨೮ ಕಿ.ಮೀ. ಹಾಗೂ ಎಲ್.ಟಿ. ಮಾರ್ಗದ ಉದ್ದ ೧,೨೫೮.೧೧ ಕಿ.ಮೀ. ಇದೆ.

**೬೬/೧೧ ಕೆವಿ ವಿದ್ಯುತ್ ಕೇಂದ್ರಗಳು ೩:**

೧) ಹೊಸದುರ್ಗ – ೧ x ೧೨.೫, ೧x೮ ಎಂವಿಎ

೨) ಮತ್ತೋಡು – ೨ x ೬.೩ ಎಂ.ವಿ.ಎ

೩) ಹಾಲುರಾಮೇಶ್ವರ – ೨ x ೮ ಎಂ.ವಿ.ಎ ಎಂದು ಇದ್ದವು.

ತಾಲ್ಲೂಕಿನಲ್ಲಿರುವ ಶಾಖೆಗಳೆಂದರೆ ಹೊಸದುರ್ಗ ೨ ಶಾಖೆಗಳು, ಮತ್ತೋಡು ೧ ಮತ್ತು ಶ್ರೀರಾಂಪುರ ೧ ಹೀಗೆ ಒಟ್ಟು ೪ ಶಾಖೆಗಳಿವೆ. ಒಟ್ಟು ಸಿಬ್ಬಂದಿ ೧೧೦ ಇದ್ದಾರೆ. ತಾಲ್ಲೂಕಿನ ಇನ್ನಿತರ ಕೆಲವು ಸಾಮಾನ್ಯ ಅಂಕಿ ಅಂಶಗಳು ಹೀಗಿವೆ ೨೦೧೩–೧೪ ರಲ್ಲಿ ತಾಲ್ಲೂಕಿನಲ್ಲಿ ೨೭,೧೧೮ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿದ್ದರು. ೧೯೨ ಜನವಸತಿ ಗ್ರಾಮಗಳು ಹಾಗೂ ೪೯ ಉಪಗ್ರಾಮಗಳು ವಿದ್ಯುತ್ ಸಂಪರ್ಕ ಪಡೆದಿದ್ದವು. ಹಾಗೆಯೇ ೨೦೧೫–೧೬ರಲ್ಲಿ ೨೭,೧೧೮ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿದ್ದು, ೨೨೫ ಜನವಸತಿ ಗ್ರಾಮಗಳು ಹಾಗೂ ೭೭ ಉಪಗ್ರಾಮಗಳು, ೧೫,೬೮೩ ಐ.ಪಿ. ಸೆಟ್ಟುಗಳು ವಿದ್ಯುತ್ ಸಂಪರ್ಕ ಪಡೆದಿದ್ದವು. ಇದೇ ಅವಧಿಯಲ್ಲಿ ೩೯೯೦.೮೧ ಲಕ್ಷ ರೂಗಳು ವಿದ್ಯುಚ್ಛಕ್ತಿ ಬಳಕೆಯಿಂದ ಆದಾಯ ಬಂದಿತ್ತು.

**ಕೈಗಾರಿಕಾ ನೀತಿ–೨೦೧೪–೧೯**

ರಾಜ್ಯ ಸರ್ಕಾರವು ೧೯೮೮, ೧೯೯೦, ೧೯೯೩, ೧೯೯೬, ೧೯೯೮, ೨೦೦೧, ೨೦೦೬, ೨೦೦೯–೧೪ ಹಾಗೂ ೨೦೧೪–೧೯ರ ಕೈಗಾರಿಕಾ ನೀತಿಗಳಲ್ಲಿ ಹೆಚ್ಚು ಸವಲತ್ತು ಮತ್ತು ವಿಶೇಷ ರಿಯಾಯಿತಿಗಳನ್ನು ಘೋಷಿಸಿತು. ಆದ್ದರಿಂದ ದೊಡ್ಡ, ಮಧ್ಯಮ, ಸಣ್ಣ ಮತ್ತು ಅತೀ ಸಣ್ಣ ಪ್ರಮಾಣಗಳ ಕೈಗಾರಿಕೆ ಸ್ಥಾಪನೆಗೆ ಅವಕಾಶ ದೊರೆಯಿತು. ೨೦೧೪–೧೯ರ ಕೈಗಾರಿಕಾ ನೀತಿಯಂತೆ ಹೊಸದುರ್ಗ ತಾಲ್ಲೂಕು ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳಲ್ಲಿ ವರ್ಗ–೨ಕ್ಕೆ ಸೇರಿದೆ.

**ದೃಷ್ಟಿಕೋನ**

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಿ ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

**ಧ್ಯೇಯ**

- ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ, ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು.

## ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

- ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
- ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.
- ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

**ಉದ್ದೇಶಗಳು**

- ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ ೧೨ರ ಗತಿಯಲ್ಲಿ ಮುಂದುವರೆಸುವುದು.
- ರಾಜ್ಯ ಜಿ.ಡಿ.ಪಿ ಯಲ್ಲಿ ಪ್ರಸಕ್ತ ಶೇ. ೧೬.೮೭ ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ ಶೇ.೨೦ ಕ್ಕೆ ಹೆಚ್ಚಿಸುವುದು.
- ರೂ. ೫ ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು.
- ೧೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು. ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ-ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು.

**ಕಾರ್ಯತಂತ್ರಗಳು**

- ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು
- ಸಾಮರ್ಥ್ಯ ವರ್ಧನೆ ಮತ್ತು ಕುಶಲತೆಯ ಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು
- ಅನುಕೂಲಕರ ವ್ಯವಸ್ಥೆ ಮತ್ತು ನೀತಿ ನಿಯಮಗಳ ಸುಧಾರಣೆ.
- ತಾಲ್ಲೂಕುಗಳ ವರ್ಗೀಕರಣ
- ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನ
- ಎಮ್.ಎಸ್.ಎಮ್.ಇಗಳಿಗೆ ಉತ್ತೇಜನ
- ಪರಿಶಿಷ್ಟಜಾತಿ/ ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು

- ಮಹಿಳಾ ಉದ್ಯಮಶೀಲರಿಗೆ ಉತ್ತೇಜನ
- ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿ ಯೋಧ ಉದ್ಯಮಶೀಲರಿಗೆ ಉತ್ತೇಜನ
- ಅನಿವಾಸಿ ಕನ್ನಡಿಗರಿಗೆ (ಎನ್ ಆರ್‌ಕೆ ಗಳು) ಉತ್ತೇಜನ
- ರಫ್ತು ವಲಯಕ್ಕೆ ಉತ್ತೇಜನ
- ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ
- ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ
- ಪರಿಸರಸ್ನೇಹಿ ಹಸಿರು ಮತ್ತು ಸ್ವಚ್ಛ ಯೋಜನೆಗಳಿಗೆ ಉತ್ತೇಜನ
- ಆರ್ ಅಂಡ್ ಡಿ ಹಾಗೂ ಡಿಜಿಟಲ್ ಡೈರೆಕ್ಟ್ ತಯಾರಿಕೆಗೆ ಬೆಂಬಲ
- ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉಪಕ್ರಮ
- ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ
- ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ
- ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು
- ಪ್ರಮುಖ ಒತ್ತಾಸೆಯ ಕೈಗಾರಿಕೆಗಳು
- ಆಯವ್ಯಯದ ಬೆಂಬಲ

**ಕೈಗಾರಿಕಾ ಕಾರಿಡರ್‌ಗಳ ಸ್ಥಾಪನೆ**

- ಚೆನ್ನೈ- ಬೆಂಗಳೂರು- ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ)-ಇವುಗಳ ಮೇಲಿನ ಕಾರ್ಯವನ್ನು ದೆಹಲಿ-ಮುಂಬೈ ಕೈಗಾರಿಕಾ ಕಾರಿಡಾರ್ ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್ ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೆಐಸಿಎ)ಗಳನ್ನು ಸ್ಥಾಪಿಸಲು ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.
- (i) ಬೆಂಗಳೂರು-ಮಂಡ್ಯ-ಮೈಸೂರು-ಚಾಮರಾಜನಗರ

  (ii) ಚಿತ್ರದುರ್ಗ-ಬಳ್ಳಾರಿ-ಕಲಬುರಗಿ-ಬೀದರ

  (iii) ಧಾರವಾಡ-ಕೊಪ್ಪಳ-ರಾಯಚೂರು

(iv) ಬೆಂಗಳೂರು–ಹಾಸನ–ಮಂಗಳೂರು

(v) ಚಿತ್ರದುರ್ಗ–ಹಾವೇರಿ–ಕಾರವಾರ

(vi) ತುಮಕೂರು–ಶಿವಮೊಗ್ಗ–ಹೊನ್ನಾವರ

(vii) ರಾಯಚೂರು–ಬಾಗಲಕೋಟೆ–ಬೆಳಗಾವಿ

- ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ ಕಾರಿಡಾರ್ ಜ್ಞಾನ ಆಧಾರಿತ ಕೈಗಾರಿಕಾ ಕಾರಿಡಾರ್ ಆಗಿ ಸ್ಥಾಪಿತವಾಗಲು ಸೂಕ್ತವಾಗಿದೆ.
- ಭಾರತ ಸರ್ಕಾರವು ತುಮಕೂರು, ಕೋಲಾರ, ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತು ಉತ್ಪಾದನಾ ವಲಯಗಳ (ಎನ್‌ಐಎಮ್‌ಜೆಡ್) ಸ್ಥಾಪನೆಗೆ ತತ್ವಶಃ ಅನುಮತಿ ನೀಡಿದೆ. ಸಿಬಿಸಿಐಸಿ/ ಎಸ್‌ಐಸಿಯ ಉದ್ದಕ್ಕೆ ಈ ಸ್ಥಳಗಳಲ್ಲಿನ ಎನ್‌ಐಎಮ್‌ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.
- ಎನ್‌ಐಎಮ್‌ಜಡ್‌ಗಳನ್ನು ಭಾರತ ಸರ್ಕಾರದ ರಾಷ್ಟ್ರೀಯ ಉತ್ಪಾದನಾ ನೀತಿಯ ಮಾರ್ಗದರ್ಶನಗಳಡಿ ವಿಶೇಷ ಉದ್ದೇಶದ ಸಂಸ್ಥೆಗಳ (ಎಸ್‌ಪಿವಿಗಳು) ಮುಖೇನ ಅಭಿವೃದ್ಧಿ ಪಡಿಸಲಾಗುವುದು. ರಾಜ್ಯ ಸರ್ಕಾರವು ಈ ಎಸ್‌ಪಿವಿಗಳನ್ನು ಈಕ್ವಿಟಿ ಭಾಗವಹಿಸುವಿಕೆಯ ಮೂಲಕ (ಪ್ರತಿ ಎನ್‌ಐಎಮ್‌ಜೆಡ್‌ಗಾಗಿ ರೂ.೫೦೦ ಕೋಟಿ ಮೀರದಂತೆ) ಬೆಂಬಲಿಸುತ್ತದೆ. ಎಸ್‌ಪಿವಿಗಳು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಸಾಧ್ಯವಾಗಿಸಲು ರಾಜ್ಯವು ಅಗತ್ಯ ಕಾನೂನುಗಳನ್ನು ಜಾರಿಗೊಳಿಸುತ್ತದೆ.
- ರಸ್ತೆಗಳು, ನೀರು ಪೂರೈಕೆ, ವಿದ್ಯುತ್ ಮತ್ತು ಬಂದರುಗಳಿಗೆ ಒಳಪಟ್ಟಂತೆ ಕೈಗಾರಿಕಾ ಮೂಲ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವತ್ತ ಹೆಚ್ಚುವರಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು ಪಿಪಿಪಿ ವಿಧಾನವನ್ನು ಪ್ರೋತ್ಸಾಹಿಸಲಾಗುವುದು.
- ರಾಜ್ಯ ಸರ್ಕಾರವು ಮಂಗಳೂರು ಬಂದರು ಸಾಮರ್ಥ್ಯವನ್ನು ಗರಿಷ್ಠವಾಗಿ ಬಳಸಿಕೊಂಡು, ತದಡಿ ಬಂದರನ್ನು ಸರ್ವ ಋತುಗಳ ಬಂದರಾಗಿ ಅಭಿವೃದ್ಧಿ ಪಡಿಸುತ್ತದೆ. ನವ ಮಂಗಳೂರಿನ ಬಂದರನ್ನು ಆಧುನೀಕರಿಸಿ, ಎನ್.ಐ.ಎಮ್.ಜೆಡ್ ತುಮಕೂರು ಮತ್ತು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವುದನ್ನು ಸಿಬಿಸಿಐಸಿ ಯೋಜನೆಯ ಒಂದು ಮುಖ್ಯ ಅಂಗವನ್ನಾಗಿ ಮಾಡಲಾಗುವುದು.

## ತಾಲ್ಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲ್ಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದು ಬಂದಿದೆ.

- ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲ್ಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲ್ಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ.
- ಸಂವಿಧಾನದ ಅನುಚ್ಛೇದ ೩೭೧(ಜೆ)ನ ಕಲಂಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್ ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್-ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್-ಕರ್ನಾಟಕಯೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ.
- ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲ್ಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ.

i) ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ೨ ವಲಯಗಳಾಗಿ ಅಂದರೆ ಹೆಚ್‌ಕೆ ವಲಯ-೧ ಮತ್ತು ಹೆಚ್‌ಕೆವಲಯ-೨ ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್-ಕರ್ನಾಟಕೇತರ ಪ್ರದೇಶದಲ್ಲಿನ ತಾಲ್ಲೂಕುಗಳನ್ನು ೪ ವಲಯಗಳಾಗಿ ಅಂದರೆ ವಲಯ-೧, ೨, ೩, ಮತ್ತು ೪ ಎಂದು ವರ್ಗೀಕರಿಸಲಾಗಿದೆ.

iii) ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ವಲಯ-೧ ರಲ್ಲೂ, ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದಿರುವ ತಾಲ್ಲೂಕುಗಳನ್ನು ವಲಯ-೨ ರಲ್ಲೂ, ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳನ್ನು ವಲಯ-೩ ರಲ್ಲೂ ಮತ್ತು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳನ್ನು ವಲಯ-೪ ಕ್ಕೆ ಸೇರಿಸಲಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕೆಯಲ್ಲಿ ಅತ್ಯಂತವಾಗಿ ಹಿಂದುಳಿದ ತಾಲ್ಲೂಕುಗಳನ್ನು ಹೆಚ್‌ಕೆ ವಲಯ-೧ ಕ್ಕೂ ಮತ್ತು

ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದ ತಾಲ್ಲೂಕುಗಳನ್ನು ಹೆಚ್‌ಕೆವಲಯ-೨ ಕ್ಕೆ ಸೇರಿಸಲಾಗಿದೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ-೨ ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲ್ಲೂಕುಗಳನ್ನು ವಲಯ-೩ಕ್ಕೆ ಒಳಪಡಿಸಲಾಗಿದೆ.

v) ತಾಲ್ಲೂಕುಗಳ ವರ್ಗೀಕರಣ ಈ ಕೆಳಗಿನಂತೆ ಇದೆ:

ಹೈದರಾಬಾದ್-ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳನ್ನು ನಾಲ್ಕು ವಲಯಗಳನ್ನಾಗಿ ಅಂದರೆ ವಲಯ-೧,೨,೩ ಮತ್ತು ೪ ಎಂದು ವರ್ಗೀಕರಿಸಲಾಗಿದೆ. ಅದರಂತೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕನ್ನು ವಲಯ-೧ಕ್ಕೆ ಸೇರಿಸಲಾಗಿದೆ. ವಲಯ-೧ರಲ್ಲಿ ಬರುವ ತಾಲ್ಲೂಕುಗಳು ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿವೆ. ಕೈಗಾರಿಕೆಗಳಲ್ಲಿ ಸ್ವಲ್ಪ ಹಿಂದುಳಿದ ತಾಲ್ಲೂಕುಗಳನ್ನು ವಲಯ-೨ಕ್ಕೆ ಸೇರಿಸಲಾಗಿದೆ. ಹಿರಿಯೂರು, ಮೊಳಕಾಲ್ಮೂರು, ಚಿತ್ರದುರ್ಗ ಮತ್ತು ಹೊಸದುರ್ಗ ತಾಲ್ಲೂಕುಗಳನ್ನು ವಲಯ-೨ ಕ್ಕೆ ಸೇರಿಸಲಾಗಿದೆ. ವಲಯ-೩ರಲ್ಲಿ ಬರುವ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಿದೆ. ವಲಯ-೩ಕ್ಕೆ ಚಳ್ಳಕೆರೆ ತಾಲ್ಲೂಕು ಸೇರಿದೆ. ವಲಯ-೪ರಲ್ಲಿ ಬರುವ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳೆಂದು ಪರಿಗಣಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ವಲಯ-೪ಕ್ಕೆ ಸೇರಿದ ಯಾವುದೇ ತಾಲ್ಲೂಕುಗಳಿರುವುದಿಲ್ಲ.

| ಕ್ರ. ಸಂ. | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್-ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ಪ-೧ | ಹೆಚ್‌ಕೆ ಪ-೨ | ವ-೧ | ವ-೨ | ವ-೩ | ವ-೪ |
| ೧ | ಚಿತ್ರದುರ್ಗ | ೬ | - | - | ಹೊಳಲ್ಕೆರೆ | ಹಿರಿಯೂರು, ಮೊಳಕಾಲ್ಮೂರು, ಚಿತ್ರದುರ್ಗ, ಹೊಸದುರ್ಗ | ಚಳ್ಳಕೆರೆ | - |

**ಆಧಾರ: ಕೈಗಾರಿಕಾ ನೀತಿ ೨೦೧೪-೧೯**

**ರೇಷ್ಮೆ:** ಗೃಹ ಕೈಗಾರಿಕೆಗಳಲ್ಲಿ ರೇಷ್ಮೆಯೂ ಒಂದು ಹಾಗೂ ಇದು ವ್ಯವಸಾಯಕ್ಕೆ ಪೂರಕವಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕರಿಗೆ ಸಾಕಷ್ಟು ಉದ್ಯೋಗಾವಕಾಶ ಒದಗಿಸುವುದರೊಂದಿಗೆ ಗ್ರಾಮೀಣ ಪ್ರದೇಶದ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದೆ.

ರೇಷ್ಮೆ ವ್ಯವಸಾಯವು ಪ್ರಕೃತಿ ದತ್ತ ಕೊಡುಗೆಯಾಗಿದ್ದು, ತಾಲ್ಲೂಕಿನ ವಾತಾವರಣ ಮತ್ತು ವಾಯುಗುಣ ರೇಷ್ಮೆ ಹುಳು ಸಾಕಾಣಿಕೆಗೆ ಹಿತಕರವಾಗಿದೆ. ೧೯೭೮-೭೯ರ ಸಾಲಿನಲ್ಲಿ ತಾಲ್ಲೂಕಿನಲ್ಲಿ ಜಾನಕಲ್ಲು, ಕೋಡಿಹಳ್ಳಿ, ಬೆನಕನಹಳ್ಳಿ, ಬೊಮ್ಮೇನಹಳ್ಳಿ, ಬೋಚೇನಹಳ್ಳಿ, ಆನಿವಾಳ, ಕ್ಯಾದಿಗೆರೆ, ಮಾಡದಕೆರೆ ಮುಂತಾದೆಡೆ ರೇಷ್ಮೆ ವ್ಯವಸಾಯವನ್ನು ಕೈಗೊಂಡಿದ್ದು, ಒಟ್ಟು ೧೨.೧೪ ಹೆಕ್ಟೇರ್ ವಿಸ್ತೀರ್ಣದಲ್ಲಿ ಹಿಪ್ಪು ನೇರಳೆ ಬೆಳೆಯಲಾಗಿದ್ದಿತು. ಹಾಗೂ ೪,೪೩೦ ಮೊಟ್ಟೆಗಳನ್ನು ರೈತರಿಗೆ ವಿತರಣೆ ಮಾಡಲಾಗಿದ್ದಿತು. ಇದರಿಂದ ೧,೩೦೮ ಕೆ.ಜಿ.ಗೂಡು ಉತ್ಪಾದನೆಯಾಗಿದ್ದು, ಸರಾಸರಿ ಇಳುವರಿ ೧೦೦ ಮೊಟ್ಟೆಗೆ ೪೫.೬೪ ಕೆ.ಜಿ.ಇಳುವರಿ ಬಂದಿದ್ದಿತು.

ತರುವಾಯ, ೧೯೯೬-೯೭ರಲ್ಲಿ ಹಿಪ್ಪು ನೇರಳೆ ಕ್ಷೇತ್ರ ೭೯.೪ ಹೆಕ್ಟೇರ್ ಇದ್ದಿತು ಹಾಗೂ ಚಾಕಿ ಸಾಕಾಣಿಕೆ ಕೇಂದ್ರಗಳು ೭ ಇದ್ದು, ಉತ್ಪಾದನೆಯಾದ ಗೂಡು ೧೩.೩೮ ಟನ್ ಆಗಿತ್ತು. ೧೯೯೯-೨೦೦೦ದಲ್ಲಿ ಹಿಪ್ಪು ನೇರಳೆ ವ್ಯವಸಾಯಕ್ಕೆ ಬಳಸಿದ ರಾಸಾಯನಿಕ ಗೊಬ್ಬರಗಳು-ಸಾರಜನಕ (೩೭೭)ಟನ್, ರಂಜಕ (೭೦೮) ಟನ್ ಹಾಗೂ ಪೊಟ್ಯಾಷ್ (೧೨೧)ಟನ್ ಒಟ್ಟು ೧,೨೦೬ ಟನ್ ಆಗಿದ್ದಿತು. ಹಿಪ್ಪು ನೇರಳೆ ಬೆಳೆಯ ವಿಸ್ತೀರ್ಣ ೫೭ ಹೆಕ್ಟೇರ್ ಇದ್ದು, ರೇಷ್ಮೆಗೂಡು ಉತ್ಪಾದನೆ ೭ ಟನ್ ಆಗಿದ್ದಿತು. ೨೦೦೯-೧೦ರಲ್ಲಿ ತಾಲ್ಲೂಕಿನಲ್ಲಿ ಬೆಳೆದ ಹಿಪ್ಪು ನೇರಳೆ ವಿಸ್ತೀರ್ಣ ಒಟ್ಟು ೨೨.೭ ಹೆಕ್ಟೇರ್ ಆಗಿದ್ದು, ಒಟ್ಟು ೭.೯೩೭ ಟನ್ ರೇಷ್ಮೆಗೂಡು ಉತ್ಪಾದನೆಯಾಗಿದ್ದಿತು. ೭೦ ರೈತರು ರೇಷ್ಮೆ ಕೃಷಿ ಕೈಗೊಂಡಿದ್ದರು. ೧೭.೧೨೯ ಲಕ್ಷ ರೂ.ಗಳ ಮೌಲ್ಯದ ರೇಷ್ಮೆ ಉತ್ಪಾದಿಸಲಾಗಿತ್ತು. ೨೦೧೩-೧೪ ರಲ್ಲಿ ತಾಲ್ಲೂಕಿನಲ್ಲಿ ೧೦೪.೩೦ ಹೆಕ್ಟೇರ್‌ನಲ್ಲಿ ಹಿಪ್ಪು ನೇರಳೆ ಬೆಳೆಯಲಾಗಿತ್ತು. ೧೮.೦೬ ಟನ್ ರೇಷ್ಮೆಗೂಡು ಉತ್ಪಾದಿಸಲಾಗಿತ್ತು. ೪೨ ಗ್ರಾಮಗಳು ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ಕೈಗೊಂಡಿದ್ದವು. ೩೦ ಮಂದಿ ಪರಿಶಿಷ್ಟ ಜಾತಿಯವರು, ೧೨ ಮಂದಿ ಪರಿಶಿಷ್ಟ ಪಂಗಡದವರು, ೧೪೭ ಇತರೆ ಹೀಗೆ ಒಟ್ಟು ೧೮೯ ಮಂದಿ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದರು. ೬೬.೪೦ ಲಕ್ಷ ರೂ ಮೌಲ್ಯದ ರೇಷ್ಮೆಯನ್ನು ಉತ್ಪಾದಿಸಿ, ರೈತರು ತಮ್ಮ ಜೀವನ ಮಟ್ಟ ಸುಧಾರಿಸಿಕೊಂಡಿದ್ದಾರೆ. ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ೧೩ ಮಂದಿ ಪರಿಶಿಷ್ಟ ಜಾತಿಯವರು, ಇಬ್ಬರು ಪರಿಶಿಷ್ಟ ಪಂಗಡದವರು ಹಾಗೂ ೫೫ ಮಂದಿ ಇತರರು ಸೇರಿದಂತೆ ೭೦ ಮಂದಿ ಇತರರು ಸೌಲಭ್ಯ ಪಡೆದಿರುತ್ತಾರೆ. ತಾಲ್ಲೂಕಿನಲ್ಲಿ ೨೦೧೫-೧೬ ರಲ್ಲಿ ಒಟ್ಟು ೧೪೩.೫೦ ಹೆಕ್ಟೇರ್‌ನಲ್ಲಿ ರೇಷ್ಮೆ ಬೆಳೆಯಲಾಗಿದ್ದು, ೪೨ ಗ್ರಾಮಗಳು ಸದರಿ ಕೃಷಿಯಲ್ಲಿ ತೊಡಗಿದ್ದವು. ೧೬ ಮಂದಿ ಪರಿಶಿಷ್ಟ ಜಾತಿಯವರು, ೯ ಮಂದಿ ಪರಿಶಿಷ್ಟ ಪಂಗಡದವರು, ೧೭೯ ಇತರರು ಸೇರಿದಂತೆ ಒಟ್ಟು ೨೦೪ ಮಂದಿ ರೇಷ್ಮೆ ಕೃಷಿಯಲ್ಲಿ ತೊಡಗಿ ೨೩.೨೪೬ ಟನ್ ರೇಷ್ಮೆಗೂಡು ಉತ್ಪಾದನೆ ಮಾಡಿ ೭೦.೫೨ ಲಕ್ಷ ರೂ. ಆದಾಯ ಗಳಿಸಲಾಗಿತ್ತು. ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಒಟ್ಟು ೭ ಮಂದಿ

ಸಹಾಯ ಪಡೆದಿದ್ದರು. ವಂದನಾ ಯೋಜನೆಯಡಿ ೫೬ ಮಂದಿ ಪರಿಶಿಷ್ಟ ಜಾತಿ, ೦೭ ಮಂದಿ ಪರಿಶಿಷ್ಟ ಪಂಗಡ, ೮೦೬ ಇತರೆಯವರು ಸೇರಿದಂತೆ ಒಟ್ಟು ೮೬೯ ಮಂದಿ ಸಹಾಯ ಪಡೆದಿದ್ದರು ವಿಶೇಷ ಘಟಕ ಯೋಜನೆಯಡಿ ೪ ಮಂದಿ ಪರಿಶಿಷ್ಟ ಜಾತಿ ೨ ಮಂದಿ ಪರಿಶಿಷ್ಟ ಪಂಗಡದವರು ಸಹಾಯ ಪಡೆದಿದ್ದರು.

**ಹೈನುಗಾರಿಕೆ**

ಹೈನುಗಾರಿಕೆಯು ರೈತರ ಜೀವನಾಡಿಯಾಗಿದ್ದು, ‘ಕ್ಷೀರಕ್ರಾಂತಿ’ಯ ಮೂಲಕ ಜನರ ಆರ್ಥಿಕ ಸುಧಾರಣೆಗೆ ನಾಂದಿಯಾಗಿದೆ. ಹೈನುಗಾರಿಕೆಯಿಂದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿಯೂ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳಲು ಸಹಾಯವಾಗಿದೆ. ತಾಲ್ಲೂಕಿನಲ್ಲಿ ೨೦೦೭ ರ ಜಾನುವಾರು ಗಣತಿಯಂತೆ ಒಟ್ಟು ೫೯,೪೮೯ ದನಗಳು, ೩೧,೮೬೪ ಎಮ್ಮೆಗಳು, ೧,೩೫,೮೬೩ ಕುರಿಗಳು, ೩೧,೮೬೨ ಮೇಕೆಗಳು, ೫೩೪ ಹಂದಿಗಳು, ೧,೨೪೭ ಮೊಲಗಳು, ೪,೮೩೩ ನಾಯಿಗಳು, ೮೯೯ ಇತರೆ ಸೇರಿದಂತೆ ಒಟ್ಟು ೨,೬೬,೫೫೧ ಜಾನುವಾರುಗಳಿದ್ದವು. ೩,೭೫,೫೮೨ ಕೋಳಿಗಳಿದ್ದವು. ತಾಲ್ಲೂಕಿನಲ್ಲಿ ೨೦೧೫–೧೬ರಲ್ಲಿ ನಾಲ್ಕು ಪಶು ಆಸ್ಪತ್ರೆಗಳು, ಏಳು ಚಿಕಿತ್ಸಾಲಯ, ೨೦ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಚಿಕಿತ್ಸಾಲಯಗಳು ನಾಲ್ಕು ಕೃತಕ ಗರ್ಭಧಾರಣ ಕೇಂದ್ರಗಳಿದ್ದವು. ಶಿವಮೊಗ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಈ ತಾಲ್ಲೂಕಿನ ಹಾಲು ಉತ್ಪಾದಕರ ಸಂಘಗಳು ನಿತ್ಯ ಹಾಲು ಸರಬರಾಜು ಮಾಡುತ್ತವೆ. ಅಲ್ಲದೆ, ಕೆಲವು ಗ್ರಾಮಗಳ ರೈತರು ನೇರವಾಗಿ ಹೋಟೆಲ್‌ಗಳಿಗೆ, ಮನೆಗಳಿಗೆ ‘ನಿತ್ಯವರ್ತನೆ’ ಕರಾರಿನ ಮೇಲೆ ಹಾಲು ಮಾರಾಟ ಮಾಡುತ್ತಾರೆ. ಹಳ್ಳಿಗಳಲ್ಲಿ ಕುರಿ ಸಾಕಾಣಿದಾರರು, ಕುರಿ ಮತ್ತು ಮೇಕೆಗಳಿಂದ ಸಿಗುವ ಹಾಲನ್ನು ತಮ್ಮ ಮನೆಗಳಿಗೆ ಸಾಕಾಗುವಷ್ಟು ಬಳಸಿಕೊಂಡು, ಹೆಚ್ಚಾದ ಹಾಲನ್ನು ಮಾರುವುದುಂಟು. ಗಾಂಧೀಜಿಯವರು ತಮ್ಮ ನಿತ್ಯ ಜೀವನದಲ್ಲಿ ಮೇಕೆಯ ಹಾಲನ್ನು ಉಪಯೋಗಿಸುತ್ತಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದು. ರಾಸುಗಳು ಕರು ಹಾಕಿದ ಕೆಲವು ದಿನಗಳಲ್ಲಿ ಕರು ಕುಡಿದು ಕೆಚ್ಚಲಲ್ಲಿ ಹೆಚ್ಚುವರಿಯಾದ ಗಿಣ್ಣು ಹಾಲನ್ನು ಹಳ್ಳಿಗರು ‘ಗಿಣ್ಣು’ ಅಡುಗೆ ಮಾಡಿಕೊಂಡು ವಿಶೇಷವಾಗಿ ಸವಿಯುತ್ತಾರೆ. ಹಾಲು, ತುಪ್ಪ, ಬೆಣ್ಣೆ, ಮಜ್ಜಿಗೆಗೆ ಪಟ್ಟಣದಲ್ಲಿ ಹೆಚ್ಚು ಬೇಡಿಕೆ ಇದೆ. ಪಟ್ಟಣದಲ್ಲಿ ಕೆಲವರು ಅಡುಗೆಗೆ ಬೆಣ್ಣೆ ಅಥವಾ ತುಪ್ಪವನ್ನು ಬಳಸುತ್ತಾರೆ. ಕೆಲವು ಸಿಹಿ ತಿಂಡಿಗಳ ತಯಾರಿಕೆಗೂ ಬಳಸುವುದುಂಟು. ಅನೇಕ ದೇವಸ್ಥಾನಗಳಲ್ಲಿ ದೇವರುಗಳ ವಿಗ್ರಹಗಳಿಗೆ ಕ್ಷೀರಾಭಿಷೇಕ ಮಾಡುವ ಪದ್ಧತಿ ಹಿಂದಿನ ಕಾಲದಿಂದಲೂ ರೂಢಿಯಲ್ಲಿದೆ. ಅಲ್ಲದೆ ನಾಗರ ಪಂಚಮಿ ಮುಂತಾದ ಹಬ್ಬಗಳಲ್ಲಿ ನಾಗರಪೂಜೆ

ಮಾಡಲು ಜನರು ಹುತ್ತಕ್ಕೆ ಅಥವಾ ನಾಗರಕಲ್ಲಿಗೆ ಹಾಲು ಎರೆಯುವ ಪದ್ಧತಿಯೂ ಬಹಳ ಇದೆ. ಇತ್ತೀಚೆಗೆ ಚಿತ್ರದುರ್ಗ ಮುರುಘಾ ಶ್ರೀಗಳು 'ಹುತ್ತಕ್ಕೆ ಹಾಕುವ ಹಾಲನ್ನು ಬಡ ಮಕ್ಕಳಿಗೆ ಕೊಡಿ' ಎಂಬ ಚಳುವಳಿ ಪ್ರಾರಂಭಿಸಿದ್ದಾರೆ. ಬಾಗೂರಿನ ಚನ್ನಕೇಶವ ದೇವರಿಗೆ ದಧ್ಯಾನ್ನ, ಪರಮಾನ್ನ ಮುಂತಾದ ಸೇವೆಗಳಿಗಾಗಿ ಬೇಕಾಗುವ ಹಾಲು-ತುಪ್ಪ-ಮೊಸರಿಗಾಗಿ ಅರಳ ಹಳ್ಳಿಯ ಆಕಳುಗಳನ್ನು ದತ್ತಿ ಬಿಟ್ಟಿದ್ದ ಬಗ್ಗೆ ಕ್ರಿ.ಶ. ೧೩ನೇ ಶತಮಾನದ ಶಾಸನದಿಂದ ತಿಳಿಯುವುದು. ಕ್ರಿ.ಶ. ೧೭೪೩ರ ಮತ್ತೋಡು ಶಿಲಾಶಾಸನದಲ್ಲಿ ಸಿದ್ಧರಾಮಪ್ಪನಾಯಕನು ತನ್ನ ಮಗ ಸಿದ್ಧರಾಮಪ್ಪಗೆ ಹಾಲು-ಬೆಣ್ಣೆಯನ್ನು ನಿರಂತರವಾಗಿ ಸಾಕಾಗುವಷ್ಟು ಕಾಲ ತಂದುಕೊಟ್ಟ ಮತ್ತು ನಡುವಿನ ಕಲ್ಲಯ್ಯಗೆ ಅರಮನೆ ತೋಟದ ಮೂಲೆಯ ಭೂಮಿ ಚೌಕವನ್ನು ದತ್ತಿ ನೀಡಿದ್ದನೆಂದು ತಿಳಿಯುವುದು.

ತಾಲ್ಲೂಕಿನಲ್ಲಿ ವಿಶೇಷರಾಸು ತಳಿ ಅಭಿವೃದ್ಧಿ ಯೋಜನೆ ಮತ್ತು ಮೇವು ಅಭಿವೃದ್ಧಿ-ಮೇವು ಪೌಷ್ಠೀಕರಣ ಯೋಜನೆ ಜಾರಿಯಲ್ಲಿರುತ್ತದೆ. ಅಲ್ಲದೆ ತಾಲ್ಲೂಕಿನಲ್ಲಿ ಸ್ವಲ್ಪ ಮಟ್ಟಿನ ಅಮೃತ್‌ಮಹಲ್ ಕಾವಲು ಇದ್ದು, ಪಶುಪಾಲನೆಗೆ ವಿಫುಲವಾಗಿ ಮೇವು ಬೆಳೆಯುವ ಅನುಕೂಲತೆ ಇದೆ.

ತಾಲ್ಲೂಕಿನಲ್ಲಿ ಪಶುಪಾಲನೆ ಇನ್ನಷ್ಟು ಸದೃಢವಾದಲ್ಲಿ ಜನ ಜೀವನದಲ್ಲಿ ಆರ್ಥಿಕ ಸುಧಾರಣೆ ಇನ್ನಷ್ಟು ಆಗುವುದಲ್ಲದೆ, ತಾಲ್ಲೂಕಿನ ಆರ್ಥಿಕ ಅಭಿವೃದ್ಧಿಯೂ ಆಗುತ್ತದೆ. ಮಿಶ್ರತಳಿ ಹಸು ದಿನಕ್ಕೆ ೧೦ ಲೀಟರ್‌ವರೆಗೆ ಹಾಲು ಕರೆಯುತ್ತದೆ ಹಾಗೂ ಪ್ರತಿ ಸಾಲಿನಲ್ಲಿ ೮-೧೦ ತಿಂಗಳವರೆಗೆ ಹಾಲು ಒದಗಿಸುತ್ತವೆ. ೩ ತಿಂಗಳು ಮಾತ್ರ ಬರಡಾಗಿರುತ್ತವೆ. ೨ನೇ ವಯಸ್ಸಿನಲ್ಲೇ ಗರ್ಭಧರಿಸಬಲ್ಲವು. ಮಿಶ್ರತಳಿ ಅಲ್ಲದೆ ಇನ್ನಿತರ ತಳಿಗಳೂ ತಾಲ್ಲೂಕಿನಲ್ಲಿವೆ. ಒಟ್ಟಾರೆ 'ಕ್ಷೀರಕ್ರಾಂತಿ' ತಾಲ್ಲೂಕಿನಲ್ಲಿ ಆಗುತ್ತಿದೆ ಎಂಬುದು ಗಮನಾರ್ಹ.

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಆಟೋಮೊಬೈಲ್, ಎಲೆಕ್ಟ್ರಿಕಲ್ಸ್, ಮತ್ತು ಎಲೆಕ್ಟ್ರಾನಿಕ್ಸ್, ಕೆಮಿಕಲ್ಸ್, ಫೆರಸ್ ಮತ್ತು ನಾನ್ ಫೆರಸ್, ಆಹಾರ ಮತ್ತು ಮಾದಕ ವಸ್ತುಗಳು, ಗ್ಲಾಸ್ ಮತ್ತು ಸಿರಾಮಿಕ್ಸ್ ಜಾಬ್ ವರ್ಕ್ ಮತ್ತು ರಿಪೇರಿ, ಚರ್ಮ, ಮೆಕಾನಿಕಲ್ ಇಂಜಿನಿಯರಿಂಗ್, ಕಾಗದ ಮತ್ತು ಮುದ್ರಣ, ರಬ್ಬರ್ ಮತ್ತು ಪ್ಲಾಸ್ಟಿಕ್, ಟೆಕ್ಸ್‌ಟೈಲ್ಸ್, ಮರ ಹಾಗೂ ಇತರೆ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಲ್ಲಿ ನೋಂದಣಿಗೊಂಡಿದ್ದವು.

## ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

### ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ (ಸಂಖ್ಯೆಗಳಲ್ಲಿ)

| ಕ್ರ ಸಂ | ವಿವರ | | ೨೦೧೩-೧೪ | ೨೦೧೫-೧೬ |
|---|---|---|---|---|
| ೧ | ೨ | ೩ | ೪ | ೫ |
| ೧ | ಆಟೋಮೋಬೈಲ್ | ಸಂಖ್ಯೆ | ೦೨ | ೦೫ |
| | | ಕೆಲಸಗಾರರು | ೦೮ | ೨೪ |
| ೨ | ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ | ಸಂಖ್ಯೆ | ೦೪ | ೦೨ |
| | | ಕೆಲಸಗಾರರು | ೧೫ | ೧೨ |
| ೩ | ಕೆಮಿಕಲ್ಸ್ | ಸಂಖ್ಯೆ | ೦೦ | ೦೧ |
| | | ಕೆಲಸಗಾರರು | ೦೦ | ೦೫ |
| ೪ | ಫೆರಸ್ ಮತ್ತು ನಾನ್ ಫೆರಸ್ | ಸಂಖ್ಯೆ | ೦೦ | ೦೦ |
| | | ಕೆಲಸಗಾರರು | ೦೦ | ೦೦ |
| ೫ | ಆಹಾರ ಮತ್ತು ಮಾದಕ ವಸ್ತುಗಳು | ಸಂಖ್ಯೆ | ೧೦ | ೦೫ |
| | | ಕೆಲಸಗಾರರು | ೩೦ | ೩೦ |
| ೬ | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ | ೦೦ | ೦೦ |
| | | ಕೆಲಸಗಾರರು | ೦೦ | ೦೦ |
| ೭ | ಜಾಬ್ ವರ್ಕ್ಸ್ ಮತ್ತು ರಿಪೇರಿ | ಸಂಖ್ಯೆ | ೦೦ | ೦೦ |
| | | ಕೆಲಸಗಾರರು | ೦೦ | ೦೦ |
| ೮ | ಚರ್ಮ | ಸಂಖ್ಯೆ | ೦೮ | ೦೫ |
| | | ಕೆಲಸಗಾರರು | ೩೫ | ೨೨ |
| ೯ | ಮೆಕ್ಯಾನಿಕಲ್ ಇಂಜಿನಿಯರಿಂಗ್ | ಸಂಖ್ಯೆ | ೦೦ | ೦೦ |
| | | ಕೆಲಸಗಾರರು | ೦೦ | ೦೦ |
| ೧೦ | ಕಾಗದ ಮತ್ತು ಮುದ್ರಣ | ಸಂಖ್ಯೆ | ೦೧ | ೦೧ |
| | | ಕೆಲಸಗಾರರು | ೦೬ | ೧೦ |

| | | | | |
|---|---|---|---|---|
| ೧೧ | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ | ೦೧ | ೦೩ |
| | | ಕೆಲಸಗಾರರು | ೧೦ | ೧೮ |
| ೧೨ | ಟೆಕ್ಸ್‌ಟೈಲ್ಸ್ | ಸಂಖ್ಯೆ | ೨೦ | ೧೫ |
| | | ಕೆಲಸಗಾರರು | ೭೮ | ೮೦ |
| ೧೩ | ಮರ | ಸಂಖ್ಯೆ | ೧೫ | ೧೦ |
| | | ಕೆಲಸಗಾರರು | ೯೮ | ೭೦ |
| ೧೪ | ಇತರೆ | ಸಂಖ್ಯೆ | ೦೪ | ೦೪ |
| | | ಕೆಲಸಗಾರರು | ೨೫ | ೨೦ |
| ೧೫ | ಇತರೆ ಸೇವಾ ಚಟುವಟಿಕೆಗಳು | ಸಂಖ್ಯೆ | ೪ | ೨ |
| | | ಕೆಲಸಗಾರರು | ೨೦ | ೧೫ |
| | **ಒಟ್ಟು** | ಸಂಖ್ಯೆ | ೬೯ | ೬೦ |
| | | ಕೆಲಸಗಾರರು | ೩೨೫ | ೩೦೬ |

**ಆಧಾರ: ಚಿತ್ರದುರ್ಗ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೧೩-೧೪ ಮತ್ತು ೨೦೧೫-೧೬**

**ಹೋಟೆಲ್ ಉದ್ಯಮ:** ತಾಲ್ಲೂಕಿನಲ್ಲಿ ಮೊದಲು ಹೊಸದುರ್ಗದಲ್ಲಿ ಹೋಟೆಲ್‌ಗಳು ಅಂದಾಜು ೫೦ ವರ್ಷಗಳಷ್ಟು ಹಿಂದೆ ಪ್ರಾರಂಭವಾದವು. ಆಗ ಪಟ್ಟಣದಲ್ಲಿ ಜನಜಂಗುಳಿ ಹೆಚ್ಚು ಇರುತ್ತಿರಲಿಲ್ಲ. ಮೊಟ್ಟಮೊದಲು ಶ್ರೀನಿವಾಸ ಭಟ್ ಅವರು ಮುಖ್ಯ ರಸ್ತೆಯ ಒಂದು ಕಪ್ಪು ಹೆಂಚಿನ ಮನೆಯಲ್ಲಿ ಹೋಟೆಲ್ ಶುರು ಮಾಡಿದರು. ಅದನ್ನು 'ಭಟ್ಟರ ಹೋಟೆಲ್' ಎನ್ನುತ್ತಿದ್ದರು. ನಂತರ ಹೊಸದುರ್ಗದ ಎರಡನೆಯ ಹೋಟೆಲ್ 'ಗೋಕುಲ ಭವನ್', ಅರಳೀ ಮರದ ಬಳಿ ಮನೆಯಲ್ಲಿ ಪ್ರಾರಂಭಗೊಂಡಿತು. ನಂತರ ತೆರೆಯಲ್ಪಟ್ಟ ಸ್ವಲ್ಪ ದೊಡ್ಡ ಕಟ್ಟಡದ ಹೋಟೆಲ್ 'ಚನ್ನಗಿರಿ ಲಾಡ್ಜ್', ಇದು ಶುಚಿ ಮತ್ತು ರುಚಿಗೆ ಹೆಸರಾಗಿ ಬಹಳ ವರ್ಷಗಳು ನಡೆಯಿತು (ಮುಖ್ಯ ರಸ್ತೆಯಲ್ಲಿತ್ತು). ಸ್ವಲ್ಪ ಕಾಲದಲ್ಲಿ ಅದೇ ರಸ್ತೆಯಲ್ಲಿ ಬಸ್‌ಸ್ಟ್ಯಾಂಡ್‌ಗೆ ಸಮೀಪದಲ್ಲಿ 'ಸೆಂಟ್ರಲ್ ಕೆಫೆ' ಬಂದಿತು. ಇದನ್ನು ಜನ 'ಅಜ್ಜಂಪುರದ ಸುಬ್ಬಣ್ಣನ ಹೋಟ್ಲು' ಎನ್ನುತ್ತಿದ್ದರು. ಇದು ಸಹ ಅನೇಕ ದಶಕಗಳ ವರೆಗೆ ಭರ್ಜರಿಯಾಗಿ ನಡೆಯಿತು. ಈಗ ಹೊಸದುರ್ಗದ ಚಿತ್ರಣವೇ ಬದಲಾಗಿದೆ. ದಿನವೂ ನೂರಾರು ಹಳ್ಳಿಗಳಿಂದ ಸಾವಿರಾರು ಜನ ಪಟ್ಟಣಕ್ಕೆ ಬಂದು ಬೆಳಗ್ಗೆಯಿಂದ ಸಂಜೆಯ ಕೊನೆಯ ಬಸ್‌ಗಳವರೆಗೂ ಇರುತ್ತಾರೆ. ಇದರಿಂದ ಹೋಟೆಲ್‌ಗಳು,

ಕ್ಯಾಂಟೀನ್‌ಗಳು, ಮೆಸ್‌ಗಳು ಹಾಗೂ ಪುಟ್ಟ-ಪುಟ್ಟ ತಿಂಡಿ ಅಂಗಡಿಗಳಿಗೆ ವಿಪರೀತ ವ್ಯಾಪಾರವಾಗುತ್ತಿದೆ. ಎಲ್ಲಾ ಹಳ್ಳಿಗಳಿಂದ ಬಸ್ಸುಗಳು, ಆಟೋಗಳು, ಟೆಂಪೋ, ಸ್ವಂತ ವಾಹನಗಳ ಸೌಕರ್ಯವಿರುವುದರಿಂದ ವ್ಯಾಪಾರಗಳಿಗೆ, ಕಛೇರಿಗಳಿಗೆ, ಕೋರ್ಟ್‌ಗೆ, ಆಸ್ಪತ್ರೆಗಳಿಗೆ, ಸಿನಿಮಾಕ್ಕೆ, ಶಾಲಾ-ಕಾಲೇಜುಗಳಿಗೆ, ಕೂಲಿ ಕೆಲಸಗಳಿಗೆ ಬರುವ ಜನರ ಸಾಗರವೇ ಇಲ್ಲಿ ನಿತ್ಯ ತುಂಬಿರುತ್ತದೆ. ವ್ಯಾಪಾರಗಳ ಭರಾಟೆಯೂ ಅಧಿಕವಾಗಿದೆ. ಹಿಂದಿನ ಕಾಲಕ್ಕಿಂತ ಈಗ ಜನರ ಕೈಯಲ್ಲಿ ದುಡ್ಡು ಚೆನ್ನಾಗಿ ಹರಿದಾಡುತ್ತಿದೆ. ಈಗ ಗುರುಪ್ರಸಾದ್ ಮತ್ತಿತರ ಸಾಧಾರಣ ಮಟ್ಟದ ಹೋಟೆಲ್‌ಗಳು ಕೆಲವೇ ಇದ್ದು, ಸಣ್ಣ-ಸಣ್ಣ ಕ್ಯಾಂಟೀನ್‌ಗಳು ಐವತ್ತು ಸಂಖ್ಯೆಯನ್ನು ಮೀರುವಷ್ಟಿವೆ. ಮೆಸ್‌ಗಳೂ ಸಾಕಷ್ಟು ಜನಪ್ರಿಯಗೊಂಡಿವೆ. ತಿಂಡಿ ಅಂಗಡಿ ನೂರಾರಿವೆ. ಎಲ್ಲವಕ್ಕೂ ಭರ್ಜರಿ ವ್ಯಾಪಾರವಾಗುವಷ್ಟು ಜನಸಂದಣಿ ಹೊಸದುರ್ಗದಲ್ಲಿರುತ್ತದೆ. ಸೋಮವಾರ ಹೊಸದುರ್ಗದ ಸಂತೆಯ ದಿನ. ಅಂದು ಎಂದಿಗಿಂತಲೂ ಅತ್ಯಧಿಕ ಜನದಟ್ಟಣೆ ಇದ್ದು, ಹೋಟೆಲ್-ಅಂಗಡಿ-ಮೆಸ್‌ಗಳಿಗೆ ಬಿಡುವಿಲ್ಲದ ದುಡಿಮೆಯಾಗುತ್ತದೆ. ಶ್ರೀರಾಂಪುರ, ಮತ್ತೋಡು, ಬಾಗೂರು, ಜಾನಕಲ್ಲು ಮುಂತಾದ ಕೆಲವು ಹಳ್ಳಿಗಳಲ್ಲಿ ಅತೀ ಸಣ್ಣ ಹೋಟೆಲ್ (ಕ್ಯಾಂಟೀನ್)ಗಳಿವೆ. ಹೊಸದುರ್ಗದಲ್ಲಿ ಪ್ರವಾಸಿಗರಿಗೆ ಉತ್ತಮವಾದ ಹೋಟೆಲ್ ಮತ್ತು ಲಾಡ್ಜ್‌ನ ಕೊರತೆ ಇದೆ. ಹೋಟೆಲ್, ಕ್ಯಾಂಟೀನ್, ಮೆಸ್ ಮತ್ತು ತಿಂಡಿ ಅಂಗಡಿಗಳಲ್ಲಿ ಸಾಕಷ್ಟು ಜನರಿಗೆ ಉದ್ಯೋಗ ದೊರೆತಿದೆ. ತಾಲ್ಲೂಕಿನಲ್ಲಿ ಹಾಲು ರಾಮೇಶ್ವರ, ದಶರಥ ರಾಮೇಶ್ವರ ಪುಣ್ಯಕ್ಷೇತ್ರಗಳು ಹಾಗೂ ನೋಡಬೇಕಾದ ಸಾಣೇಹಳ್ಳಿಮಠ ಬಯಲು ರಂಗಮಂದಿರ, ಕನಕನಗರ (ಕೆಲ್ಲೋಡ) ದ ಬೃಹತ್ ಕನಕನ ಶಿಲಾವಿಗ್ರಹ, ಬ್ರಹ್ಮವಿದ್ಯಾ ನಗರದಲ್ಲಿನ ಸಾಂಸ್ಕೃತಿಕ ಕೇಂದ್ರ, ಸಿಮೆಂಟ್ ಕಲಾಕೃತಿಗಳು ಇರುವುದರಿಂದ, ಅಲ್ಲದೆ ಸದ್ಯದಲ್ಲಿ ಬೆಲಗೂರಿನಲ್ಲಿ ಬೃಹತ್ ಪ್ರಮಾಣದ ಪ್ರತಾಪಾಂಜನೇಯ ವಿಗ್ರಹ ಆಗುತ್ತಿರುವುದರಿಂದ ಹೊರ ಜಿಲ್ಲೆಗಳಿಂದ ಬರುವ ಪ್ರಯಾಣಿಕರು ತಂಗಲು ಹೊಸದುರ್ಗದಲ್ಲಿ ಸುಸಜ್ಜಿತವಾದ ಲಾಡ್ಜ್ ಮತ್ತು ಊಟ-ಉಪಹಾರಕ್ಕೆ ಉತ್ತಮವಾದ ಹೋಟೆಲ್‌ಗಳು ಆಗಬೇಕಾದ ಅಗತ್ಯವಿದೆ.

**ಕೈಗಾರಿಕಾಭಿವೃದ್ಧಿ ಸಾಧ್ಯತೆಗಳು**: ಹೊಸದುರ್ಗ ತಾಲ್ಲೂಕು ಪ್ರದೇಶದಾದ್ಯಂತ ಅನೇಕ ಕಡೆಗಳಲ್ಲಿ ರೂಪಾಂತರ ಶಿಲೆಗಳಾದ ಗ್ರಾನೈಟ್, ನೈಸ್‌ಸ್ಟೋನ್, ಷಿಸ್ಟ್‌ಸ್ಟೋನ್, ಬ್ಯಾಂಡೇಡ್ ಕ್ವಾರ್ಟಜೈಟ್, ಸೋಪ್‌ಸ್ಟೋನ್, ಪುಕ್ಸೈಟ್ ಕ್ವಾರ್ಟಜೈಟ್ (ಹಸಿರುಕಲ್ಲು) ಮುಂತಾದ ಶಿಲಾಪದರಗಳು ಇರುವುದು ದೃಢಪಟ್ಟಿರುತ್ತದೆ. ಈ ಶಿಲೆಗಳು ಶಿಷ್ಟ್‌ಬೆಲ್ಟ್ ಶಿಲಾ ಸಮೂಹವಾಗಿದ್ದು, ಇವು ಲಕ್ಷಾಂತರ ವರ್ಷಗಳಷ್ಟು ವಯಸ್ಸಿನ ಶಿಲೆಗಳಾದ ಪೆರೇಂಬಿಯನ್ ಕಾಲದವು. ಇವಲ್ಲದೆ ಅಗ್ನಿಶಿಲೆಗಳಾದ ಗ್ರಾನೈಟ್, ಪಿಂಕ್ ಗ್ರಾನೈಟ್ (ತೆಳು ಕೆಂಪುಶಿಲೆ), ಡಾಲರೈಟ್ ಹಾಗೂ ಉನಕೈಟ್ ಶಿಲಾ ಪ್ರಬೇಧಗಳು ಸಹ ತಾಲ್ಲೂಕಿನ ಸರಹದ್ದಿನಲ್ಲಿವೆ. ಪಿಂಕ್‌ಗ್ರಾನೈಟ್ ಅಲಂಕಾರಿಕ ಶಿಲೆಯಾಗಿ ಬಳಸುವುದಕ್ಕೆ ಅರ್ಹವಾಗಿದೆ. ಈ ಶಿಲೆಗಳಿಂದ ಅನೇಕ ಉತ್ಪನ್ನಗಳನ್ನು ತಯಾರಿಸುವ

ಕೈಗಾರಿಕೆಗಳನ್ನು ಕೈಗೊಳ್ಳಬಹುದು. ಸಿಮೆಂಟ್ ಪೈಪ್‌ಗಳನ್ನು ತಯಾರಿಸಲು ಸಾಕಷ್ಟು ಅಗತ್ಯ ಕಚ್ಚಾವಸ್ತುಗಳು ಇಲ್ಲಿನ ನೆಲದಲ್ಲಿವೆ. ತಾಲ್ಲೂಕಿನಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ದೂರದಿಂದ ಬರುವ ಪ್ರವಾಸಿಗರಿಗೆ ಒಂದೆರಡು ದಿನದಲ್ಲಿ ಎಲ್ಲಾ ತಾಣಗಳನ್ನು ವೀಕ್ಷಿಸಿಕೊಂಡು ಬರುವ ಪ್ಯಾಕೇಜ್ ಒಳಗೊಂಡ 'ಟೂರಿಸ್ಟ್ ಉದ್ಯಮ' ಪ್ರಾರಂಭಿಸಬಹುದು. ಹಾಲು ರಾಮೇಶ್ವರ, ದಶರಥ ರಾಮೇಶ್ವರ, ಗವಿರಂಗನಾಥಸ್ವಾಮಿ ಕ್ಷೇತ್ರ, ಸಾಣೇಹಳ್ಳಿ ಬಯಲು ರಂಗ ಮಂದಿರ, ಪ್ರಾಚೀನ ಸ್ಥಳ ನೀರಗುಂದ, ಬಾಗೂರು ಸಿದ್ದಪ್ಪನ ಬೆಟ್ಟದ ಪ್ರಾಚೀನ ಶಿಲ್ಪಗಳು, ಕೆಲ್ಲೋಡು ಬಳಿಯ ಬೃಹತ್ ಶಿಲಾಕನಕ ವಿಗ್ರಹ, ಬ್ರಹ್ಮವಿದ್ಯಾನಗರ, ನಿರುವುಗಲ್ಲು ಸ್ಮಾರಕಗಳು, ಹೆಗ್ಗೆರೆಯ ಪ್ರಾಚೀನ ಜೈನಬಸದಿ ಹಾಗೂ ಶಿವಾಲಯಗಳು, ಶ್ರೀರಾಂಪುರದ ಪರಪ್ಪ ಸ್ವಾಮಿ ಮಠ ಹಾಗೂ ಕುಮಾರ ಮಲ್ಲನ ವೀರಗಲ್ಲುಗುಡಿ–ಮರದರುಂಡ, ಸೂಜಿಕಲ್ಲು ಬಳಿಯ ಮೈಲಾರ ದೇವರ ಕ್ಷೇತ್ರ, ವೀರ ಮದಕರಿ ನಾಯಕನ ಜನ್ಮಸ್ಥಳ ಜಾನಕಲ್ಲು, ಬೆಲಗೂರು ಮಾನಸ ಮಂದಿರ ಹಾಗೂ ಆಗಲಿರುವ ಬೃಹತ್ ಪ್ರತಾಪಾಂಜನೇಯ ಶಿಲಾವಿಗ್ರಹ ಮುಂತಾದವನ್ನು ಪ್ರವಾಸಿಗರಿಗೆ ತೋರಿಸುವ ಪ್ಯಾಕೇಜ್ ಯೋಜನೆಯೊಂದಿಗೆ ಪ್ರವಾಸೋದ್ಯಮ ಪ್ರಾರಂಭಿಸಬಹುದು. ಇಲ್ಲಿ ಅನೇಕ ಮಠಗಳಿರುವುದರಿಂದ ಸದಾ ನಡೆಯುವ ಒಂದಿಲ್ಲೊಂದು ಕಾರ್ಯಕ್ರಮಗಳಿಗೆ ದೂರದ ಪ್ರಯಾಣಿಕರು ಬರುತ್ತಿರುತ್ತಾರೆ. ಗ್ರಿಲ್ಸ್, ಆಟೋಮೊಬೈಲ್ ಬಿಡಿಭಾಗಗಳ ಮಾರಾಟ, ವೆಲ್ಡಿಂಗ್, ಲಾಂಡ್ರಿ, ಟಿ.ವಿ.ರಿಪೇರಿ, ಕಂಪ್ಯೂಟರ್ ತರಬೇತಿ ಶಾಲೆ, ಕಂಪ್ಯೂಟರ್ ರಿಪೇರಿ, ಮೊಬೈಲ್ ಫೋನ್ ರಿಪೇರಿ, ಬ್ಯಾಟರಿ ರೀಚಾರ್ಜಿಂಗ್, ರೀವೈಂಡಿಂಗ್, ಟರ್ನಿಂಗ್, ಆಟೋ ಝೆರಾಕ್ಸ್, ಡಿ.ಟಿ.ಪಿ ಮೊದಲಾದವನ್ನು ಸ್ಥಾಪಿಸ ಬಹುದಾಗಿದೆ. ಪೌಲ್ಟ್ರಿ, ಊದು ಬತ್ತಿ ಉದ್ಯಮ ನಡೆಸಬಹುದು. ಬೆಂಕಿಪೊಟ್ಟಣ ತಯಾರಿಕೆ ಪ್ರಾರಂಭಿಸಬಹುದು.

ಅಲಂಕಾರಿಕ ಶಿಲೆಗಳಿಂದ ಕರಕುಶಲ ವಸ್ತುಗಳನ್ನು ಸಿದ್ಧಪಡಿಸಬಹುದು. ಐಸ್‌ಕ್ರೀಂ ತಯಾರಿಕೆ, ಬ್ರೆಡ್ ತಯಾರಿಕೆ, ಪೇಡಾ, ಉಪ್ಪಿನಕಾಯಿ–ಹಪ್ಪಳ ತಯಾರಿಕೆ, ಊಟದ ಎಲೆ ತಯಾರಿಕೆ (ಮುತ್ತುಗದ ಎಲೆಗಳಿಂದ), ಚಪ್ಪಲಿ ತಯಾರಿಕೆ ಮತ್ತು ಚರ್ಮ ಹದ ಮಾಡುವ ಘಟಕಗಳನ್ನು ಸ್ಥಾಪಿಸಬಹುದು. ಹಾಲಿನಪುಡಿ ತಯಾರಿಕೆ, ತೆಂಗಿನ ಕಾಯಿತುರಿಯ ಪುಡಿ ತಯಾರಿಸುವ ಘಟಕ ಸ್ಥಾಪಿಸಬಹುದು. ಹೀಗೆ ತಾಲ್ಲೂಕಿನಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ ಯಶಸ್ಸು ಸಾಧಿಸಬಹುದಾಗಿದೆ. ಅಪಾರ್ಟ್‌ಮೆಂಟ್‌ಗಳನ್ನು ಪಟ್ಟಣದಲ್ಲಿ ನಿರ್ಮಿಸಬಹುದಾಗಿದೆ.

## ಭೂ ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು

ನಡೆಯುವುದು ಭೂಮಿಯ ಮೇಲೆ. ಹೊಸದುರ್ಗ ತಾಲ್ಲೂಕು ೨೦೧೫-೧೬ರಲ್ಲಿ ೧೧೨೫೭೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ೧೯೦೭೪ ಹೆ. ಅರಣ್ಯ ಪ್ರದೇಶವಿದೆ. ೧೩೯೮೪ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ ಹೊಂದಿದ್ದು, ಇದರಲ್ಲಿ ೧೧೪೦೦ ಹೆ. ವ್ಯವಸಾಯೇತರ ಭೂಮಿ ಹಾಗೂ ೨೫೮೪ ಹೆಕ್ಟೇರ್ ಬಂಜರು ಭೂಮಿಯೂ ಸೇರಿತ್ತು. ೫೯೦೮ ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದ್ದು, ಇದರಲ್ಲಿ ೧೦೩೭ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು, ೩೩೯೨ ಹೆಕ್ಟೇರ್ ಖಾಯಂ ಗೋಮಾಳ ಹಾಗೂ ೧೪೭೯ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿದ್ದವು. ೮೯೦೮ ಹೆಕ್ಟೇರ್ ಬೀಳು ಭೂಮಿಯಾಗಿದ್ದು, ಇದರಲ್ಲಿ ೪೩೫೮ ಹೆಕ್ಟೇರ್ ಚಾಲ್ತಿ ಬೀಳುಭೂಮಿ ಹಾಗೂ ೪೫೫೦ ಹೆಕ್ಟೇರ್ ಇತರೆ ಬೀಳು ಭೂಮಿ ಸೇರಿದೆ. ೭೯೯೭೧ ಹೆಕ್ಟೇರ್ ಬಿತ್ತನೆಯಾದ ಪ್ರದೇಶವಾಗಿದ್ದು, ಇದರಲ್ಲಿ ೬೪೭೦೦ ಹೆಕ್ಟೇರ್ ನಿವ್ವಳ, ೧೨೩೭೧ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆ ಪ್ರದೇಶವಾಗಿತ್ತು.

**ಭೂ-ಹಿಡುವಳಿ**

ಕೃಷಿ ಗಣತಿ ಪ್ರತಿ ಐದು ವರ್ಷಗಳಿಗೊಮ್ಮೆ ಜರುಗುತ್ತದೆ. ತಾಲ್ಲೂಕಿನಲ್ಲಿ ೨೦೦೫-೨೦೦೬ ರ ಕೃಷಿ ಗಣತಿಯಂತೆ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂ-ಹಿಡುವಳಿ ಹೊಂದಿರುವವರನ್ನು ಅತಿ ಸಣ್ಣ ಭೂ ಹಿಡುವಳಿದಾರರು ಎಂತಲೂ ಇವರ ಸಂಖ್ಯೆ ೨೩೧೪೦ ಆಗಿದ್ದು, ೧೧೯೪೮ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೧ ರಿಂದ ೨ ಹೆ. ಭೂ ವಿಸ್ತೀರ್ಣವನ್ನು ಸಣ್ಣ ಭೂ-ಹಿಡುವಳಿ ಎಂತಲೂ ಇವರ ಸಂಖ್ಯೆ ೧೪೨೦೨ ಆಗಿದ್ದು, ೨೦೧೪೦ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೨ ರಿಂದ ೪ ಹೆ. ಭೂ ಹಿಡುವಳಿ ಹೊಂದಿರುವವರನ್ನು ಅರೆ ಮಧ್ಯಮ ಭೂ ಹಿಡುವಳಿದಾರ ಎಂತಲೂ ಇವರ ಸಂಖ್ಯೆ ೮೨೭೬ ಆಗಿದ್ದು, ೨೨೬೪೪ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೪ ರಿಂದ ೧೦ ಹೆ. ಭೂ ಹಿಡುವಳಿ ಹೊಂದಿರುವವರನ್ನು ಮಧ್ಯಮ ಭೂ ಹಿಡುವಳಿದಾರ ಎಂತಲೂ, ಇವರ ಒಟ್ಟು ಸಂಖ್ಯೆ ೩೬೪೫ ಆಗಿದ್ದು, ೨೦೯೫೬ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೧೦ ಹೆ ಮತ್ತು ಅದಕ್ಕಿಂತ ಹೆಚ್ಚು ಭೂ ಹಿಡುವಳಿ ಹೊಂದಿರುವವರನ್ನು ದೊಡ್ಡ ಭೂ ಹಿಡುವಳಿದಾರ ಎಂತಲೂ ಇವರ ಸಂಖ್ಯೆ ೪೭೫ ಆಗಿದ್ದು, ೬೬೭೧ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ಹೀಗೆ ತಾಲ್ಲೂಕಿನಲ್ಲಿ ೪೯೭೩೮ ಒಟ್ಟು ಭೂ ಹಿಡುವಳಿದಾರರಿದ್ದು, ೮೨೩೫೯ ಹೆ. ಭೂ ವಿಸ್ತೀರ್ಣವನ್ನು ಹೊಂದಿದ್ದರು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

## ಕೃಷಿಗಣತಿಯಂತೆ (೨೦೧೦-೧೧) ಭೂ ಹಿಡುವಳಿದಾರರ ಸಂಖ್ಯೆ ಮತ್ತು ವಿಸ್ತೀರ್ಣ

| ಕ್ರ. ಸಂ. | ವರ್ಗ | | ಹಿಡುವಳಿದಾರರ ಸಂಖ್ಯೆ | | | | ಭೂ ಹಿಡುವಳಿ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | | | |
|---|---|---|---|---|---|---|---|---|---|---|
| | | | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು |
| **ಅತಿಸಣ್ಣ** | | | | | | | | | | |
| ೧ | ೦.೫ ಕ್ಕಿಂತ ಕಡಿಮೆ | ಪು | ೧೦೪೦೬ | ೦ | ೦ | ೧೦,೪೦೬ | ೨,೯೮೯.೮೯ | ೦.೦೦ | ೦.೦೦ | ೨,೯೮೯.೮೯ |
| | | ಮ | ೨೩೩೪ | ೦ | ೦ | ೨,೩೩೪ | ೬೬೪.೭೪ | ೦.೦೦ | ೦.೦೦ | ೬೬೪.೭೪ |
| | | ಒಟ್ಟು | ೧೨೭೪೦ | ೦ | ೦ | ೧೨,೭೪೦ | ೩,೬೫೪.೬೩ | ೦.೦೦ | ೦.೦೦ | ೩,೬೫೪.೬೩ |
| | (೦.೫ – ೧.೦) | ಪು | ೧೦೨೯೧ | ೦ | ೦ | ೧೦,೨೯೧ | ೭,೪೯೬.೧೧ | ೦.೦೦ | ೦.೦೦ | ೭,೪೯೬.೧೧ |
| | | ಮ | ೨೧೭೨ | ೦ | ೦ | ೨,೧೭೨ | ೧,೫೯೨.೬೨ | ೦.೦೦ | ೦.೦೦ | ೧,೫೯೨.೬೨ |
| | | ಒಟ್ಟು | ೧೨೪೬೩ | ೦ | ೦ | ೧೨,೪೬೩ | ೯,೦೮೮.೭೩ | ೦.೦೦ | ೦.೦೦ | ೯,೦೮೮.೭೩ |
| | ಒಟ್ಟು | ಪು | ೨೦೬೯೭ | ೦ | ೦ | ೨೦,೬೯೭ | ೧೦,೪೮೬.೦೦ | ೦.೦೦ | ೦.೦೦ | ೧೦,೪೮೬.೦೦ |
| | | ಮ | ೪೫೦೬ | ೦ | ೦ | ೪,೫೦೬ | ೨,೨೫೭.೩೬ | ೦.೦೦ | ೦.೦೦ | ೨,೨೫೭.೩೬ |
| | | ಒಟ್ಟು | ೨೫೨೦೩ | ೦ | ೦ | ೨೫,೨೦೩ | ೧೨,೭೪೩.೩೬ | ೦.೦೦ | ೦.೦೦ | ೧೨,೭೪೩.೩೬ |
| **ಸಣ್ಣ** | | | | | | | | | | |
| ೨ | (೧.೦ – ೨.೦) | ಪು | ೧೧೯೨೩ | ೯೩ | ೦ | ೧೨೦೧೬ | ೧೬೬೪೧.೨೩ | ೧೩೩.೨೧ | ೦.೦೦ | ೧೬,೭೭೪.೪೪ |
| | | ಮ | ೨೩೩೧ | ೦ | ೦ | ೨೩೩೧ | ೩,೨೦೯.೩೯ | ೦.೦೦ | ೦.೦೦ | ೩,೨೦೯.೩೯ |
| | | ಒಟ್ಟು | ೧೪೨೫೪ | ೯೩ | ೦ | ೧೪೩೪೭ | ೧೯೮೫೦.೬೨ | ೧೩೩.೨೧ | ೦.೦೦ | ೧೯,೯೮೩.೮೩ |

| | | | | | | | | | | |
|---|---|---|---|---|---|---|---|---|---|---|
| | ಒಟ್ಟು | ಪು | ೧೧,೯೨೩ | ೯೩ | ೦ | ೧೨,೦೧೬ | ೧೬,೬೪೧.೨೩ | ೧೩೩.೨೧ | ೦.೦೦ | ೧೬,೭೭೪.೪೪ |
| | | ಮ | ೨,೩೩೧ | ೦ | ೦ | ೨,೩೩೧ | ೩,೨೦೯.೩೯ | ೦.೦೦ | ೦.೦೦ | ೩,೨೦೯.೩೯ |
| | | ಒಟ್ಟು | ೧೪,೨೫೪ | ೯೩ | ೦ | ೧೪,೩೪೭ | ೧೯,೮೫೦.೬೨ | ೧೩೩.೨೧ | ೦.೦೦ | ೧೯,೯೮೩.೮೩ |
| **ಅರೆ ಮಧ್ಯಮ** | | | | | | | | | | |
| ೩ | (೨.೦ – ೩.೦) | ಪು | ೪,೮೧೩ | ೦ | ೦ | ೪,೮೧೩ | ೧೧,೪೨೨.೧೧ | ೦.೦೦ | ೦.೦೦ | ೧೧,೪೨೨.೧೧ |
| | | ಮ | ೭೫೦ | ೦ | ೦ | ೭೫೦ | ೧,೭೭೫.೮೯ | ೦.೦೦ | ೦.೦೦ | ೧,೭೭೫.೮೯ |
| | | ಒಟ್ಟು | ೫,೫೬೩ | ೦ | ೦ | ೫,೫೬೩ | ೧೩,೧೯೮.೦೦ | ೦.೦೦ | ೦.೦೦ | ೧೩,೧೯೮.೦೦ |
| | (೩.೦ – ೪.೦) | ಪು | ೨,೨೧೩ | ೦ | ೦ | ೨,೨೧೩ | ೭,೪೬೬.೫೦ | ೦.೦೦ | ೦.೦೦ | ೭,೪೬೬.೫೦ |
| | | ಮ | ೩೧೯ | ೦ | ೦ | ೩೧೯ | ೧,೦೮೩.೭೦ | ೦.೦೦ | ೦.೦೦ | ೧,೦೮೩.೭೦ |
| | | ಒಟ್ಟು | ೨,೫೩೨ | ೦ | ೦ | ೨,೫೩೨ | ೮,೫೫೦.೨೦ | ೦.೦೦ | ೦.೦೦ | ೮,೫೫೦.೨೦ |
| | ಒಟ್ಟು | ಪು | ೭,೦೨೬ | ೦ | ೦ | ೭,೦೨೬ | ೧೮,೮೮೮.೬೧ | ೦.೦೦ | ೦.೦೦ | ೧೮,೮೮೮.೬೧ |
| | | ಮ | ೧,೦೬೯ | ೦ | ೦ | ೧,೦೬೯ | ೨,೮೫೯.೫೯ | ೦.೦೦ | ೦.೦೦ | ೨,೮೫೯.೫೯ |
| | | ಒಟ್ಟು | ೮,೦೯೫ | ೦ | ೦ | ೮,೦೯೫ | ೨೧,೭೪೮.೨೦ | ೦.೦೦ | ೦.೦೦ | ೨೧,೭೪೮.೨೦ |

| | | | | | | | | | |
|---|---|---|---|---|---|---|---|---|---|
| ಮಧ್ಯಮ | | | | | | | | | |
| ೪ | (೪.೦ – ೫.೦) | ಪು | ೧,೨೪೪ | ೦ | ೦ | ೧,೨೪೪ | ೫,೪೬೦.೧೫ | ೦.೦೦ | ೦.೦೦ | ೫,೪೬೦.೧೫ |
| | | ಮ | ೧೪೭ | ೦ | ೦ | ೧೪೭ | ೬,೪೧.೦೧ | ೦.೦೦ | ೦.೦೦ | ೬೪೧.೦೧ |
| | | ಒಟ್ಟು | ೧,೩೯೧ | ೦ | ೦ | ೧,೩೯೧ | ೬,೧೦೧.೧೬ | ೦.೦೦ | ೦.೦೦ | ೬,೧೦೧.೧೬ |
| | (೫.೦ – ೭.೫) | ಪು | ೧,೨೪೯ | ೦ | ೦ | ೧,೨೪೯ | ೭,೩೭೩.೧೮ | ೦.೦೦ | ೦.೦೦ | ೭,೩೭೩.೧೮ |
| | | ಮ | ೧೫೯ | ೦ | ೦ | ೧೫೯ | ೯,೪೬.೬೦ | ೦.೦೦ | ೦.೦೦ | ೯೪೬.೬೦ |
| | | ಒಟ್ಟು | ೧,೪೦೮ | ೦ | ೮ | ೧,೪೧೬ | ೮,೩೧೯.೭೮ | ೦.೦೦ | ೪೫.೩೪ | ೮,೩೬೫.೧೨ |
| | (೭.೫ –೧೦.೦) | ಪು | ೪೨೬ | ೦ | ೦ | ೪೨೬ | ೩,೬೨೦.೬೪ | ೦.೦೦ | ೦.೦೦ | ೩,೬೨೦.೬೪ |
| | | ಮ | ೪೬ | ೦ | ೦ | ೪೬ | ೩೮೬.೧೯ | ೦.೦೦ | ೦.೦೦ | ೩೮೬.೧೯ |
| | | ಒಟ್ಟು | ೪೭೨ | ೦ | ೪ | ೪೭೬ | ೪,೦೦೬.೮೩ | ೦.೦೦ | ೩೦.೭೩ | ೪,೦೩೭.೫೬ |
| | ಒಟ್ಟು | ಪು | ೨,೯೧೯ | ೦ | ೦ | ೨,೯೧೯ | ೧೬,೪೫೩.೯೭ | ೦.೦೦ | ೦.೦೦ | ೧೬,೪೫೩.೯೭ |
| | | ಮ | ೩೫೨ | ೦ | ೦ | ೩೫೨ | ೧,೯೭೩.೮೦ | ೦.೦೦ | ೦.೦೦ | ೧,೯೭೩.೮೦ |
| | | ಒಟ್ಟು | ೩,೨೭೧ | ೦ | ೧೨ | ೩,೨೮೩ | ೧೮,೪೨೭.೭೭ | ೦.೦೦ | ೭೬.೦೭ | ೧೮,೫೦೩.೮೪ |
| ದೊಡ್ಡ | | | | | | | | | | |
| ೫ | (೧೦.೦–೨೦.೦) | ಪು | ೨೮೪ | ೦ | ೦ | ೨೮೪ | ೩,೫೨೦.೫೧ | ೦.೦೦ | ೦.೦೦ | ೩,೫೨೦.೫೧ |

| | | | | | | | | | | |
|---|---|---|---|---|---|---|---|---|---|---|
| | | ಮ | ೩೦ | ೦ | ೦ | ೩೦ | ೩೮೦.೦೪ | ೦.೦೦ | ೦.೦೦ | ೩೮೦.೦೪ |
| | | ಒಟ್ಟು | ೩೧೪ | ೦ | ೪ | ೩೧೮ | ೩,೯೦೦.೫೫ | ೦.೦೦ | ೪೯.೩೦ | ೩,೯೪೯.೮೫ |
| | ೨೦ ಮತ್ತು ಅದಕ್ಕಿಂತ ಹೆಚ್ಚು | ಪು | ೨೬ | ೦ | ೦ | ೨೬ | ೬೪೮.೨೬ | ೦.೦೦ | ೦.೦೦ | ೬೪೮.೨೬ |
| | | ಮ | ೧ | ೦ | ೦ | ೧ | ೨೧.೩೫ | ೦.೦೦ | ೦.೦೦ | ೨೧.೩೫ |
| | | ಒಟ್ಟು | ೨೭ | ೦ | ೪ | ೩೧ | ೬೬೯.೬೧ | ೦.೦೦ | ೨೭೦.೫೮ | ೯೪೦.೧೯ |
| | ಒಟ್ಟು | ಪು | ೩೧೦ | ೦ | ೦ | ೩೧೦ | ೪,೧೬೮.೭೭ | ೦.೦೦ | ೦.೦೦ | ೪,೧೬೮.೭೭ |
| | | ಮ | ೩೧ | ೦ | ೦ | ೩೧ | ೪೦೧.೩೯ | ೦.೦೦ | ೦.೦೦ | ೪೦೧.೩೯ |
| | | ಒಟ್ಟು | ೩೪೧ | ೦ | ೮ | ೩೪೯ | ೪,೫೭೦.೧೬ | ೦.೦೦ | ೩೧೯.೮೮ | ೪,೮೯೦.೦೪ |
| | ಎಲ್ಲಾ ವರ್ಗದವರು | ಪು | ೪೨,೮೭೫ | ೯೩ | ೦ | ೪೨೯೬೮ | ೬,೬೬೩೮.೫೮ | ೧೩೩.೨೧ | ೦.೦೦ | ೬೬,೭೭೧.೭೯ |
| | | ಮ | ೮,೨೮೯ | ೦ | ೦ | ೮೨೮೯ | ೧೦,೭೦೧.೫೩ | ೦.೦೦ | ೦.೦೦ | ೧೦,೭೦೧.೫೩ |
| | | ಒಟ್ಟು | ೫೧,೧೬೪ | ೯೩ | ೨೦ | ೫೧೨೭೭ | ೭೭,೩೪೦.೧೧ | ೧೩೩.೨೧ | ೩೯೫.೯೫ | ೭೭,೮೬೯.೨೭ |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

## ಕೆಲಸಗಾರರು

ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೭೩೧೯೬ ಮುಖ್ಯ ಕೆಲಸಗಾರರಿದ್ದು, ಅವರಲ್ಲಿ ೫೬,೦೮೭ ಪುರುಷರು ಮತ್ತು ೧೭೧೦೯ ಮಹಿಳೆಯರು ಸೇರಿದ್ದರು. ೩೮೦೨೨ (೩೨೧೫೦ ಪುರುಷರು, ೫೮೭೨ ಮಹಿಳೆಯರು) ವ್ಯವಸಾಯಗಾರರು, ೧೬೦೭೯ (೮೧೯೬ ಪುರುಷರು, ೭,೮೮೩ ಮಹಿಳೆಯರು) ಕೃಷಿ ಕಾರ್ಮಿಕರು, ೩,೧೫೪ (೨೭೦೭ ಪುರುಷರು, ೪೪೭ ಮಹಿಳೆಯರು) ಜಾನುವಾರು, ಅರಣ್ಯ, ಮೀನುಗಾರಿಕೆ, ಬೇಟೆ, ಪ್ಲಾಂಟೇಷನ್, ಹಣ್ಣಿನ ತೋಟ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲೂ, ೫೨೯ (೩೭೨ ಪುರುಷರು, ೧೫೭ ಮಹಿಳೆಯರು) ಗಣಿಗಾರಿಕೆಯಲ್ಲೂ, ೩೩೧೪( ೨೬೦೧ ಪುರುಷರು, ೭೧೩ ಮಹಿಳೆಯರು) ಕೈಗಾರಿಕೆಗಳಲ್ಲೂ, ೧೦೩೩ (೮೭೭ ಪುರುಷರು, ೧೫೬ ಮಹಿಳೆಯರು) ನಿರ್ಮಾಣದಲ್ಲೂ, ೫೦೨೭ (೪೩೦೭ ಪುರುಷರು, ೭೨೦ ಮಹಿಳೆಯರು) ವ್ಯಾಪಾರ ಮತ್ತು ವಾಣಿಜ್ಯದಲ್ಲೂ, ೬೩೪ (೬೨೮ ಪುರುಷರು, ೬ ಮಹಿಳೆಯರು) ಸಾರಿಗೆ ಸಂಗ್ರಹಣೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲೂ ಹಾಗೂ ೫೧೦೪ (೩೯೪೯ ಪುರುಷರು, ೧೧೫೫ ಮಹಿಳೆಯರು) ಇತರೆ ಸೇವೆಗಳಲ್ಲೂ ಕಾರ್ಯ ನಿರ್ವಹಿಸುತ್ತಿದ್ದರು. ತಾಲ್ಲೂಕಿನಲ್ಲಿ ೧೭೨೬೮ (೯೧೪ ಪುರುಷರು, ೧೬೩೫೪ ಮಹಿಳೆಯರು) ಸೀಮಾಂತ(ಮಾರ್ಜಿನಲ್) ಕೆಲಸಗಾರರು ಹಾಗೂ ೧೦೯೩೮೫ (೪೪,೧೫೮ ಪುರುಷರು, ೬೫೨೨೭ ಮಹಿಳೆಯರು) ಕೆಲಸಗಾರರಲ್ಲದವರಿದ್ದರು.

ತಾಲ್ಲೂಕಿನಲ್ಲಿ ೨೦೧೧ ರ ಜನಗಣತಿಯಂತೆ ೧೨೬೫೨೭ (೭೫೪೬೭ ಪುರುಷರು, ೫೧೦೬೦ ಮಹಿಳೆಯರು) ಮಂದಿ ಒಟ್ಟು ಕೆಲಸಗಾರರಿದ್ದರು. ಇವರಲ್ಲಿ ೧೦೦೨೧೮ (೬೭೧೩೩ ಪುರುಷರು, ೩೩೦೮೫ ಮಹಿಳೆಯರು) ಮುಖ್ಯ ಕೆಲಸಗಾರರು, ೨೬೩೦೯ (೮೩೩೪ ಪುರುಷರು, ೧೭೯೭೫ ಮಹಿಳೆಯರು) ಸೀಮಾಂತ ಕೆಲಸಗಾರರು ಸೇರಿದ್ದರು. ೧೦೦೨೧೮ ಮುಖ್ಯ ಕೆಲಸಗಾರರಲ್ಲಿ ೫೧೬೪೭ ವ್ಯವಸಾಯಗಾರರು, ೨೦೫೮೧ ಕೃಷಿ ಕಾರ್ಮಿಕರು, ೯೮೭ ಗೃಹ ಕೈಗಾರಿಕೆಗಳಲ್ಲಿ, ೨೭೦೦೩ ಇತರೆ ಕೆಲಸಗಾರರು ಸೇರಿದ್ದರು. ೨೬೩೦೯ ಸೀಮಾಂತ ಕೆಲಸಗಾರರಲ್ಲಿ ೫೭೨೧ ವ್ಯವಸಾಯಗಾರರು, ೧೧೫೬೯ ಕೃಷಿ ಕಾರ್ಮಿಕರು, ೧೦೬೭ ಗೃಹ ಕೈಗಾರಿಕೆಗಳಲ್ಲಿ ಹಾಗೂ ೭೯೫೭ ಇತರೆ ಕೆಲಸಗಾರರು ಸೇರಿದ್ದರು. ತಾಲ್ಲೂಕಿನಲ್ಲಿ ೧,೦೮,೫೮೯ ಕೆಲಸಗಾರರಲ್ಲದವರಿದ್ದರು.

## ಉದ್ಯೋಗ

ತಾಲ್ಲೂಕಿನ ಜನಸಂಖ್ಯೆ ಒಟ್ಟು ೨,೧೯,೪೪೫ (೨೦೦೧ರ ಜನಗಣತಿ ಮೇರೆಗೆ) ಇದ್ದು ತಾಲ್ಲೂಕಿನಲ್ಲಿ ೨೦೦೧ ರ ಜನಗಣತಿಯಂತೆ ೧,೦೮,೯೯೧ ಒಟ್ಟು ಕೆಲಸಗಾರರಿದ್ದು, ಇವರಲ್ಲಿ ೮೫,೫೧೨ ಮುಖ್ಯ ಕೆಲಸಗಾರರು, ೨೩,೪೨೪ ಸೀಮಾಂತ ಕೆಲಸಗಾರರು ಸೇರಿದ್ದರು. ೮೫,೫೧೨ ಮಂದಿ ಮುಖ್ಯ ಕೆಲಸಗಾರರಿದ್ದು, ಅವರಲ್ಲಿ ೪೪,೨೧೧ ಮಂದಿ ಸಾಗುವಳಿದಾರರು, ೧೬,೫೩೧ ಮಂದಿ ಕೃಷಿ ಕಾರ್ಮಿಕರು, ೯೩೩ ಮಂದಿ ಗೃಹ

ಕೈಗಾರಿಕೆಗಳಲ್ಲೂ, ೨೨,೮೪೨ ಮಂದಿ ಇತರೆ ಕೆಲಸಗಾರರಿದ್ದರು. ೨೩೪೭೪ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರಲ್ಲಿ ೮,೨೬೫ ಮಂದಿ ಸಾಗುವಳಿದಾರರು, ೧೨,೯೬೦ ಕೃಷಿ ಕಾರ್ಮಿಕರು, ೪೩೧ ಗೃಹ ಕೈಗಾರಿಕೆಗಳು ಹಾಗೂ ೧,೮೧೮ ಮಂದಿ ಇತರೆ ಕೆಲಸಗಾರರು ಸೇರಿದ್ದರು. ತಾಲ್ಲೂಕಿನಲ್ಲಿ ೧,೧೦,೪೫೪ ಮಂದಿ ಕೆಲಸಗಾರರಲ್ಲದವರಿದ್ದರು. ಇತ್ತೀಚೆಗೆ ತಾಲ್ಲೂಕಿನಲ್ಲಿ ಶಾಲಾ-ಕಾಲೇಜುಗಳು ಮತ್ತು ತರಬೇತಿ ಕೇಂದ್ರಗಳಲ್ಲಿನ ಅಧಿಕ ವಿದ್ಯಾವಂತ ನಿರುದ್ಯೋಗಿಗಳು ಪಟ್ಟಣದತ್ತ ಮುಖ ಮಾಡಿದ್ದಾರೆ. ಅವಿದ್ಯಾವಂತರು ಹಾಗೂ ವಿದ್ಯಾವಂತ ಸಾವಿರಾರು ನಿರುದ್ಯೋಗಿ ಜನರು ಬೆಂಗಳೂರಲ್ಲಿ ಗಾರ್ಮೆಂಟ್ಸ್‌ಗೆ ಸೇರಿಕೊಳ್ಳಲು ಗುಳೇ ಹೋಗಿದ್ದಾರೆ. ಗಾರೆ ಕೆಲಸಗಾರರು, ಪೇಂಟ್ ಮಾಡುವವರು, ಟೈಲರ್‌ಗಳು ಸಹ ಅನೇಕರು ಬೆಂಗಳೂರು ಸೇರಿದ್ದಾರೆ. ಕೃಷಿ ಕೆಲಸಗಳಿಗೆ ಹಳ್ಳಿಗಳಲ್ಲಿ ಕೂಲಿ ಕೆಲಸಕ್ಕೆ ಜನರು ಸಿಗುತ್ತಿಲ್ಲ. ಬ್ರಹ್ಮವಿದ್ಯಾ ನಗರದಲ್ಲಿ ಮಾತ್ರ ನೂರು ಕುಟುಂಬಗಳ ರೈತರು 'ಕೂಡೊಕ್ಕಲು ಬೇಸಾಯ' ಪದ್ಧತಿ ಅನುಸರಿಸಿದ್ದಾರೆ. ಹೊಸದುರ್ಗದಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಅವಕಾಶವಿದೆ.

ಸ್ವ-ಉದ್ಯೋಗಗಳಾದ ದೋಬಿ, ದರ್ಜಿ, ಗಾಣಿಗ, ಚಮ್ಮಾರ, ಕ್ಷೌರಿಕ, ಬುಟ್ಟಿ ಹೆಣಿಗೆ, ಕಮ್ಮಾರ, ಅಕ್ಕಸಾಲಿ, ಗೃಹನಿರ್ಮಾಣ, ಪ್ಲಂಬರ್‌ಗಳು, ವೈರಿಂಗ್, ಪೇಂಟ್ ಮಾಡುವವರು, ಅಂಗಡಿ, ಕ್ಯಾಂಟೀನ್, ಡಿ.ಟಿ.ಪಿ, ಝೆರಾಕ್ಸ್, ಬಸ್ ಏಜೆಂಟ್ಸ್, ಹಮಾಲರು, ವಕೀಲರು, ಖಾಸಗಿ ವೈದ್ಯರು, ಟ್ಯೂಷನ್ ಇನ್ಸ್‌ಟಿಟ್ಯೂಟ್, ಪೌರೋಹಿತ್ಯ, ಜ್ಯೋತಿಷಿಗಳು ಮುಂತಾದವರು ಪಟ್ಟಣದಲ್ಲಿ ಇದ್ದಾರೆ. ವಾದ್ಯಗಾರರು, ಶಾಮಿಯಾನ, ಅಡುಗೆ ಗುತ್ತಿಗೆದಾರರು, ಮೈಕ್‌ಸೆಟ್, ಪೀಠೋಪಕರಣ ಗುತ್ತಿಗೆದಾರರು, ಕಾರುಬಾಡಿಗೆ, ಟ್ರ್ಯಾಕ್ಟರ್ ಬಾಡಿಗೆ, ಪಾತ್ರೆ ಕಲಾಯಿ ಮಾಡುವವರು, ಬ್ಯೂಟಿ ಪಾರ್ಲರ್ ಮುಂತಾದ ಸ್ವಂತ ಉದ್ಯಮಗಳಲ್ಲಿ ಕೆಲವರು ತೊಡಗಿದ್ದಾರೆ. ಮುಂದೆ ಹೊಸ ಹೊಸ ಉದ್ಯೋಗ ಆವಿಷ್ಕಾರಕ್ಕೆ ಇಲ್ಲಿ ಅವಕಾಶಗಳಿವೆ. ತೇಕಲವಟ್ಟಿಯಲ್ಲಿ ನಾಟಕದ ಸೀನರಿಗಳನ್ನು ಅನೇಕ ದಶಕಗಳಿಂದ ಬಾಡಿಗೆ ಕೊಡುವ ಮನೆತನವಿದೆ. ತಬಲ ಮಾಸ್ಟರ್, ಡ್ರಾಮಾ ಮಾಸ್ತರರಿಗೆ ಸ್ವಲ್ಪ ಮಟ್ಟಿನ ಬೇಡಿಕೆ ಉಳಿದಿದೆ. ಬ್ಯಾಂಡ್‌ಸೆಟ್, ಆರ್ಕೆಸ್ಟ್ರಾ ಕಲಾವಿದರೂ ವೃತ್ತಿ ಕಲಾವಿದರಾಗಿದ್ದಾರೆ. ಕುರಿ ತುಪ್ಪಟ ಕತ್ತರಿಸುವುದು, ಎತ್ತುಗಳಿಗೆ ಲಾಳ (ಅಳ್ಳೆ) ಕಟ್ಟುವುದು, ಹಚ್ಚೆ ಹೊಯ್ಯುವುದು ಇವೆಲ್ಲ ಸಣ್ಣ ವೃತ್ತಿಗಳು. ಹೇರ್‌ಪಿನ್ ಮಾರುವವರು, ಚಿಲ್ಲರೆಯಾಗಿ ಹುರಿದ ಶೇಂಗಾ ಮಾರುವವರು, ಪೇಪರ್ ಹಾಕುವವರು, ಆಯಾ ಕೆಲಸಗಳಲ್ಲಿಯೇ ಜೀವನಕ್ಕೆ ಮಾರ್ಗ ಕಂಡುಕೊಂಡಿದ್ದಾರೆ. ತಗಡುಗಳ ಜರಡಿ, ಕೊಬ್ಬರಿ ತುರಿಯುವ ಮಣೆ ಮಾಡುವವರು, ಬೀಗ ರಿಪೇರಿ, ಛತ್ರಿ ರಿಪೇರಿ ಮಾಡುವವರು, ಗುಜರಿ ವಸ್ತುಗಳನ್ನು ಕೊಂಡು-ಮಾರುವವರು, ಸೈಕಲ್ ಬಾಡಿಗೆ ಕೊಡುವವರು, ಸೈಕಲ್ ರಿಪೇರಿ ಹೀಗೆ ಸ್ವ-ಉದ್ಯೋಗಗಳ ಪಟ್ಟಿ ಬೆಳೆಯುತ್ತದೆ.

## ಬಡತನ ನಿರ್ಮೂಲನ ಕಾರ್ಯಕ್ರಮಗಳು

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಇದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ

ಮಹಾ ನಿರ್ದೇಶಕರಾಗಿದ್ದ ಲಾರ್ಡ್ ಬಾಯಿಡಾರ್ ಅವರು ೧೯೪೫ ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖಾನಿಸುತ್ತಾ, 'ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨,೩೦೦ ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಗಣಿಸಬೇಕಾಗುತ್ತದೆ' ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ೨,೪೦೦ ಕ್ಯಾಲರಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ೨,೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಸೇವಿಸುತ್ತಿರುವವರನ್ನು ಬಡತನ ರೇಖೆಗಿಂತಲೂ ಕೆಳಗಿರುವವರೆಂದು ಪರಿಗಣಿಸಲಾಗುತ್ತದೆ.

ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಆದಾಯ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಟ ಅನುಭೋಗ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ, ರಾಜಕೀಯ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ. ಹಾಗಾಗಿ ಐದನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ. ಅಲ್ಲದೆ ವ್ಯಾಪಕವಾಗಿಯೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ ಕಾರ್ಯಕ್ರಮಗಳೊಂದಿಗೆ ಕನಿಷ್ಟ ಅವಶ್ಯಕತೆ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ದೃಢೀಕರಣ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗ ತರಬೇತಿ ಯೋಜನೆ, ದಶಲಕ್ಷ ಬಾವಿ ಯೋಜನೆ, ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ ಮುಂತಾದವುಗಳನ್ನು ಜಾರಿಗೆ ತರಲಾಯಿತು. ಚಿತ್ರದುರ್ಗದ ಜಿಲ್ಲೆಯಲ್ಲಿಯೂ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಜಾರಿಗೆ ತಂದಿರುವ ಪ್ರದೇಶಾಭಿವೃದ್ಧಿ ಯೋಜನೆಯ (ಎ.ಡಿ.ಪಿ) ಕಾರ್ಯಕ್ರಮಗಳ ಸಂಕ್ಷಿಪ್ತ ವಿವರವನ್ನು ಮುಂದೆ ನೀಡಲಾಗಿದೆ.

**ಇಂದಿರಾ ಆವಾಸ್ ಯೋಜನೆ**

ಹಳ್ಳಿಗಳ ಬಡ ವಸತಿ ಹೀನರಿಗೆ ಮನೆ ಕಟ್ಟಿಕೊಡುವ ಯೋಜನೆ ಇದಾಗಿದೆ. ಸರ್ಕಾರದ ವತಿಯಿಂದ ಈ ಯೋಜನೆಯಡಿ ರೂ.೨೦,೦೦೦/- ಸಹಾಯಧನ ನೀಡುತ್ತಿದೆ. ಫಲಾನುಭವಿಯೇ ಸ್ವತಃ ಮನೆ ಕಟ್ಟಿಕೊಳ್ಳಬೇಕು. ಅಲ್ಲದೆ, ಕಾರ್ಯಕ್ರಮದನ್ವಯ ರೂ. ೧೦,೦೦೦/- ಸಬ್ಸಿಡಿ ವಿತರಿಸಲಾಗುತ್ತದೆ. ಇಂಥ ಮನೆಗಳಲ್ಲಿ ಕಡ್ಡಾಯವಾಗಿ ಶೌಚಾಲಯ ಇರಬೇಕೆಂಬ ನಿಬಂಧನೆ ಇರುತ್ತದೆ. ತಾಲ್ಲೂಕಿನಲ್ಲಿ ಈ ಯೋಜನೆ

ಯಡಿಯಲ್ಲಿ ೨೦೧೩-೧೪ ರಲ್ಲಿ ೨೫೨ ಪರಿಶಿಷ್ಟ ಜಾತಿಯವರಿಗೆ, ೧೦೪ ಪರಿಶಿಷ್ಟ ಪಂಗಡದವರಿಗೆ, ೩೯ ಇತರೆ ಹಿಂದುಳಿದ ವರ್ಗದವರಿಗೆ ಹಾಗೂ ೨೧೨ ಇತರೆಯವರಿಗೆ ಮನೆಗಳನ್ನು ನಿರ್ಮಿಸಿ ವಿತರಿಸಲಾಗಿದೆ. ೨೦೧೫-೧೬ ರಲ್ಲಿ ೨೧೦ ಪರಿಶಿಷ್ಟ ಜಾತಿ, ೧೩೧ ಪರಿಶಿಷ್ಟ ಪಂಗಡ ಹಾಗೂ ೧೦೯ ಇತರೆಯವರೂ ಸೇರಿದಂತೆ, ೪೫೦ ಫಲಾನುಭವಿಗಳಿಗೆ ನೀಡಲಾಗಿದೆ.

## ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮಗಳು

ಹಳ್ಳಿಗಳಲ್ಲಿನ ಇಂಧನ ಸಮಸ್ಯೆ ನಿವಾರಣೆಗಾಗಿ ಸರ್ಕಾರ ಸರಳ ಒಲೆ ಮತ್ತು ಗೋಬರ್‌ಗ್ಯಾಸ್ ಸ್ಥಾವರಗಳಿಗೆ ಸಹಾಯಧನ ನೀಡುತ್ತದೆ. ಸರಳ ಒಲೆಗೆ ರೂ. ೬೩ ಸಹಾಯಧನ ಸಿಗುತ್ತದೆ. ದನಕರುಗಳಿರುವ ರೈತರಿಗೆ ಗೊಬ್ಬರ ಅನಿಲ ಯಂತ್ರ ನಿರ್ಮಿಸಿಕೊಳ್ಳಲು ಸಬ್ಸಿಡಿ ನೀಡಲಾಗುವುದು. ತಾಲ್ಲೂಕಿನಲ್ಲಿ ೨೦೧೧ರ ಜನ ಗಣತಿಯಂತೆ ಒಟ್ಟು ೫೨೫೮೭ ಕುಟುಂಬಗಳು ಇದ್ದು, ಇವರಲ್ಲಿ ಶೇ.೮೪ ರಷ್ಟು ಸೌದೆ, ಶೇ.೧.೦೩ ರಷ್ಟು ಸೀಮೆಎಣ್ಣೆ, ಶೇ.೧೨.೭೦ ರಷ್ಟು ಅಡುಗೆ ಅನಿಲ, ಶೇ.೦.೦೪ ರಷ್ಟು ವಿದ್ಯುತ್, ಶೇ.೦.೨೪ ಗೋಬರ್ ಅನಿಲ ಹಾಗೂ ಶೇ.೧.೮೦ ಇತರೆ ಮಂದಿ ಅಡುಗೆ ಸಿದ್ಧಪಡಿಸಲು ವಿವಿಧ ರೀತಿಯ ಇಂಧನ ಬಳಸುತ್ತಿದ್ದರು. ಶೇ.೦.೨೦ ರಷ್ಟು ಅಡುಗೆ ಮಾಡದಿರುವವರಿದ್ದರು.

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ಹಳ್ಳಿಗಳಲ್ಲಿರುವ ಕೃಷಿ ಕೆಲಸಗಾರರಿಗೆ ನೂರು ದಿನ ಉದ್ಯೋಗ ಒದಗಿಸಲಾಗುತ್ತದೆ. ಅರೆ ಉದ್ಯೋಗಿ, ನಿರುದ್ಯೋಗಿಗಳಿಗೆ ಹಳ್ಳಿಗಳಲ್ಲಿ ಕೆಲಸ ಸಿಕ್ಕಂತಾಗುವುದು. ಈ ಯೋಜನೆಯಡಿ ಅಂಗನವಾಡಿ ಕಟ್ಟಡ, ರಸ್ತೆ ಕೆಲಸ, ಶಾಲೆ ನಿರ್ಮಿಸುವುದು, ಜಲಸಂರಕ್ಷಣೆ, ಭೂ ಸಂರಕ್ಷಣೆಗೆ ಸಂಬಂಧಪಟ್ಟ ಕಾರ್ಯಕ್ರಮಗಳಿರುತ್ತವೆ. ೨೦೧೦-೧೧ರಲ್ಲಿ ಕೆಲಸಕ್ಕಾಗಿ ಒಟ್ಟು ೧೭,೦೨೪ ಕುಟುಂಬಗಳು ಬೇಡಿಕೆ ಸಲ್ಲಿಸಿದ್ದು, ಈ ಯೋಜನೆಯಡಿ ಕೆಲಸ ನಿರ್ವಹಿಸಿದ ಕುಟುಂಬಗಳ ಸಂಖ್ಯೆ ೮,೩೭,೧೯ ಇದ್ದಿತು. ೧೦೦ ದಿನಗಳ ಉದ್ಯೋಗವನ್ನು ಪಡೆದ ಕುಟುಂಬಗಳ ಸಂಖ್ಯೆ ೨೦೯ ಆಗಿತ್ತು. ೨೦೧೩-೧೪ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ೩೪,೩೨೯ ಮಂದಿಗೆ ಕೆಲಸದ ಚೀಟಿಗಳನ್ನು ವಿತರಿಸಿದ್ದು, ೧೫,೦೨೮ ಮಂದಿ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿರುವ ಕುಟುಂಬಗಳಾಗಿದ್ದು, ೩೧,೧೦೫ ಮಂದಿ ಕೆಲಸ ನಿರ್ವಹಿಸಿದ ವ್ಯಕ್ತಿ/ಕುಟುಂಬಗಳಾಗಿದ್ದವು. ೧,೧೧೮ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿ ಕೊಂಡಿದ್ದವು. ಈ ಯೋಜನೆಯಡಿಯಲ್ಲಿ ಒಟ್ಟು ೬,೨೨,೦೮೯ ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ೨೦೧೫-೧೬ ರಲ್ಲಿ ಈ ಯೋಜನೆಯಡಿ ೩೪,೪೪೦ ಕೆಲಸದ ಚೀಟಿಗಳನ್ನು ವಿತರಿಸಲಾಯಿತು. ೧೪,೮೮೧

ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದವು. ೧೧,೩೭೬ ಮಂದಿ ಕೆಲಸ ನಿರ್ವಹಿಸಿದ ಕುಟುಂಬಗಳಾಗಿವೆ. ೧,೪೩೭ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿಕೊಂಡಿದ್ದರು. ಈ ಯೋಜನೆಯಡಿ ಒಟ್ಟು ೬,೬೧,೨೩೩ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

### ಜವಾಹರ್‌ಗ್ರಾಮ ಸಮೃದ್ಧಿ ಯೋಜನೆ

ಈ ಯೋಜನೆಯು ೨೦೦೦ದಿಂದ ಅನುಷ್ಠಾನಕ್ಕೆ ಬಂದಿದೆ. ಇದರನ್ವಯ ಗ್ರಾಮ ಪಂಚಾಯ್ತಿಗಳಿಗೆ ಪೂರ್ಣ ಅನುದಾನ ನೀಡಲಾಗುವುದು. ಹಳ್ಳಿಗಳಲ್ಲಿ ರಸ್ತೆ ಸಂಪರ್ಕ, ನೈರ್ಮಲ್ಯತೆ, ಚರಂಡಿ ವ್ಯವಸ್ಥೆ, ಸರ್ಕಾರಿ ಸ್ವತ್ತು ರಕ್ಷಣೆಗಾಗಿ ಅನುದಾನ ವಿನಿಯೋಗಿಸ ಬೇಕಾಗಿರುತ್ತೆ. ರೂ.೫೦,೦೦೦ ವರೆಗಿನ ಕೆಲಸಗಳಿಗೆ ಈ ಅನುದಾನವನ್ನು ಸದ್ಬಳಕೆ ಮಾಡಬಹುದಾಗಿರುತ್ತದೆ.

### ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ (SJSRY)

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಸೇರಿಸಿ ಈ ಯೋಜನೆಯನ್ನು ೨೦೦೦ದಿಂದ ಜಾರಿಗೊಳಸಲಾಗಿದೆ. ಹಳ್ಳಿಗಳಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಸ್ವಸಹಾಯ ಗುಂಪುಗಳನ್ನು ಬ್ಯಾಂಕ್‌ಗಳ ಸಹಾಯದಿಂದ ಗುರುತಿಸಿ ಸಾಲ ಮಂಜೂರು ಮಾಡಲಾಗುವುದು. ೩ ವರ್ಷಗಳ ತರುವಾಯ ಈ ಗುಂಪಿನ ಪ್ರತಿ ವ್ಯಕ್ತಿಯ ಆದಾಯವು ಕನಿಷ್ಟ ರೂ.೨,೦೦೦/– ಗಳಾಗಿರಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳು ಈ ಯೋಜನೆಯನ್ನು ಸಾಕಾರಗೊಳಸುವವು.

### ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಈ ಯೋಜನೆಯಡಿ ತಾಲ್ಲೂಕಿನಲ್ಲಿ ೨೦೧೩–೧೪ ರಲ್ಲಿ ೭೫ ಮಹಿಳಾ ಗುಂಪು ಪ್ರಯೋಜನ ಪಡೆದಿದ್ದರೆ, ೨೦೧೫–೧೬ ರಲ್ಲಿ ೨,೨೦೯ ಮಹಿಳಾ ಗುಂಪುಗಳು ಪ್ರಯೋಜನ ಪಡೆದಿದ್ದರು.

### ಶೌಚಾಲಯಗಳು

ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ. ಅದರಂತೆ ೨೦೧೩–೧೪ ರಲ್ಲಿ ೧೯೭೫ ವೈಯಕ್ತಿಕ, ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ೨೦೧೫–೧೬ ರಲ್ಲಿ ೪,೩೭೯ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳು, ೧೫ ಸಾಮೂಹಿಕ ಶೌಚಾಲಯಗಳು, ೬೨೦ ಶಾಲಾ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು.

ಅಧ್ಯಾಯ–೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

**ಯಾ**ವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳವನ್ನು ಪೂರೈಸುವಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬ್ಯಾಂಕಿಂಗ್ ವ್ಯವಹಾರವೆಂದರೆ ಬಂಡವಾಳದ ಸಂಗ್ರಹಣೆ ಮತ್ತು ವಿತರಣೆ. ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಸಂಸ್ಥೆಗಳು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾಗುವ ಬಂಡವಾಳವನ್ನು ಒದಗಿಸುವ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ, ಕೃಷಿ, ವ್ಯಾಪಾರ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಸಾಲವನ್ನು ಪೂರೈಸಿದರೆ, ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಪರಿವರ್ತನೆಗೊಳ್ಳುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಕೂಡ ಸಾಲನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಗ್ರಾಮ ಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ್ ವ್ಯವಸ್ಥೆ ಸಹಾಯಕವಾಗುತ್ತಿದೆ. ರಾಜ್ಯದ ಇತರೆ ಭಾಗಗಳಲ್ಲಿ ಕಾಣುತ್ತಿರುವಂತೆ ಹೊಸದುರ್ಗ ತಾಲ್ಲೂಕಿನಲ್ಲೂ ಸಹ ಬ್ಯಾಂಕಿಂಗ್ ವ್ಯವಸ್ಥೆಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಪ್ರಧಾನವಾದ ಪಾತ್ರವಹಿಸುತ್ತಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಲ್ಲಿ ರಾಜರ ಹಣಕಾಸಿನ ವ್ಯವಹಾರದ ಹೊಣೆಯನ್ನು ಸುಂಕ ವೆಗ್ಗಡೆ, ಪ್ರಧಾನಿ, ಬೊಕ್ಕಸದ ಅಧಿಕಾರಿ ಮುಂತಾದವರು ವಹಿಸಿಕೊಂಡು ನಿರ್ವಹಿಸುತ್ತಿದ್ದರು. ಹಾಗೂ ಹಣದ ಖಜಾನೆಯ ಭದ್ರತೆಯನ್ನು ನೋಡಿಕೊಳ್ಳುತ್ತಿದ್ದರು. ಕ್ರಿ.ಶ. ೧೪ ನೇಯ ಶತಮಾನದ ಬಲ್ಲಾಳ ಸಮುದ್ರ ಶಾಸನದಲ್ಲಿ, ಸಾಮಂತನ ಅಧಿಕಾರಿ

ಪೆದ್ದರಸನ ಹೆಸರು, ಕ್ರಿ.ಶ. ೧೬ ನೇಯ ಶತಮಾನದ ಬೂದಿಹಾಳು ರಾಜನ ಅಧಿಕಾರಿ ಬಯಕಾರ ರಾಮಪ್ಪಯ್ಯನ ಹೆಸರು (ಕಲ್ಲಕೆರೆ ಶಾಸನದಲ್ಲಿಯೂ ಇವನ ಹೆಸರಿದೆ) ಬಲ್ಲಾಳ ಸಮುದ್ರದ ಮೊಗಲರ ಕಾಲದ ಶಾಸನದಲ್ಲಿ ಜಾಗೀರದಾರ, ಹವಾಲದಾರ ಹಾಗೂ ಮುಜುಂದಾರರ ಹೆಸರುಗಳು, ಕ್ರಿ.ಶ. ೧೭ನೇ ಶತಮಾನದ ಗುಂಡಸಮುದ್ರ ಶಾಸನದಲ್ಲಿ ಬಾಗೂರಿನ ರುದ್ರಪ್ಪ ದೇವರಿಗೆ ಬಾಗೂರಿನ ವೀರಾಪುರ ಗ್ರಾಮವನ್ನು ದತ್ತು ನೀಡಿದ ಬೊಕ್ಕಸದ ರುದ್ರಪ್ಪ ದೇವರಿಗೆ ಅಧಿಕಾರಿ ಮುದ್ದಣ್ಣನ ಹೆಸರು, ಕ್ರಿ.ಶ.೧೫ನೇ ಶತಮಾನದ ಹೊನ್ನೇನಹಳ್ಳಿ ಶಾಸನದಲ್ಲಿ ಪ್ರಧಾನಿ ಬಾಗೂರು ಮಾರಸಯ್ಯ, ಕೆಲ್ಲೋಡು ಶಾಸನದಲ್ಲಿ ಕರಣಿಕ ಚಿಕ್ಕರಸಪ್ಪ ಮುಂತಾದವರ ಹೆಸರುಗಳನ್ನು ಗಮನಿಸಬಹುದು. ಅಲ್ಲದೆ ಅನೇಕ ಸಂತೆಯ ಸುಂಕಗಳ ವಿವರಗಳನ್ನು ಶಾಸನಗಳಲ್ಲಿ ಗಮನಿಸಬಹುದು. ಮತ್ತೋಡು ಶಾಸನದಲ್ಲಿ ಕ್ಷೌರಿಕರ ಸುಂಕದ ಬಾಕಿ ಸಾವಿರ ವರಹಗಳನ್ನು ಮನ್ನಾ ಮಾಡಿದ ವಿಚಾರವಿದೆ. ಇದೆಲ್ಲವು ಹಣದ ಬೊಕ್ಕಸಕ್ಕೆ ಸಂಬಂಧಿಸಿದುದೇ ಆಗಿದೆ. ಮತ್ತೋಡು ಪಾಳೆಯಗಾರರ ಕಾಲದಲ್ಲಿ ಚಿನ್ನದ ವರಹಗಳನ್ನು ತಯಾರಿಸುತ್ತಿದ್ದ ಬಗ್ಗೆ ದಾಖಲೆ ಇದೆ. ಇವೆಲ್ಲವೂ ಪ್ರಾಚೀನ ಕಾಲದ ಬ್ಯಾಂಕಿಂಗ್ ಮತ್ತು ವಾಣಿಜ್ಯದ ಸಂಗತಿಗಳು.

ವಾಣಿಜ್ಯ ಬ್ಯಾಂಕುಗಳು ಮತ್ತಿತರ ಹಣಕಾಸು ಸಂಸ್ಥೆಗಳು ಒಂದು ಪ್ರದೇಶದ ಆರ್ಥಿಕ ಅಭ್ಯುದಯಕ್ಕೆ ಬಂಡವಾಳವನ್ನು ಒದಗಿಸುವ ಮೂಲಕ ನೆರವಾಗುತ್ತವೆ. ಬಂಡವಾಳದ ಕ್ರೋಢಿಕರಣ, ವಿತರಣೆ ಹಾಗೂ ವಸೂಲಾತಿ ಜವಾಬ್ದಾರಿ ಇವು ಬ್ಯಾಂಕಿಂಗ್‌ನ ಮೂಲ ಲಕ್ಷಣಗಳಾಗಿವೆ. ಬ್ಯಾಂಕ್‌ಗಳು ಮತ್ತು ಹಣಕಾಸಿನ ಇತರ ಸಂಸ್ಥೆಗಳು ಜನರಿಗೆ ಬಂಡವಾಳಗಳನ್ನು ಪ್ರೋತ್ಸಾಹಿಸಿ ಒದಗಿಸಿ, ವ್ಯಾಪಾರ, ಕೈಗಾರಿಕೆ, ಗೃಹ ನಿರ್ಮಾಣ, ಶಿಕ್ಷಣ ಮುಂತಾದವುಗಳನ್ನು ಜನರಿಗೆ ಆರ್ಥಿಕ ಚೈತನ್ಯವನ್ನು ತುಂಬುವುದಲ್ಲದೆ ಆ ಪ್ರದೇಶದ ವಿಕಾಸಕ್ಕೂ ಪರೋಕ್ಷವಾಗಿ ಕಾರಣವಾಗುತ್ತವೆ. ಅಲ್ಲದೆ, ತನ್ನಲ್ಲಿ ಇಡುವ ನಿಧಿಗಳಿಗೆ ನಿಗಧಿತ ಬಡ್ಡಿಯನ್ನು ಆಯಾ ವ್ಯಕ್ತಿ ಅಥವಾ ಘಟಕಗಳಿಗೆ ಕಾಲಕ್ಕೆ ಸರಿಯಾಗಿ ವಿತರಿಸುತ್ತವೆ. ಇದರೊಂದಿಗೆ ಸರ್ಕಾರದ ಅನೇಕ ಯೋಜನೆಗಳಿಗೆ ಬರುವ ಅನುದಾನದ ಮೊತ್ತವನ್ನು ನಿಯಮಾನುಸಾರ (ಖಜಾನೆ ಮೂಲಕ) ಒದಗಿಸುತ್ತವೆ. ಪ್ರಚಲಿತ ಆರ್ಥಿಕ ವಿದ್ಯಮಾನಗಳನುಸಾರ ಸಮಕಾಲೀನ ಬ್ಯಾಂಕಿಂಗ್ ವ್ಯವಸ್ಥೆಯು ಸಹ ಸಾಲ ನಿಯಮಾವಳಿಗಳನ್ನು ರೂಪಿಸಿಕೊಂಡಿವೆ. ಗ್ರಾಮೀಣ ಪ್ರದೇಶದ ಪುರೋಭಿವೃದ್ಧಿಗಾಗಿ ಇರುವ ಸರ್ಕಾರದ ಪರಮೋದ್ದೇಶದ ಯೋಜನೆಗಳನ್ನು ಜಾರಿಗೆ ತರುವಲ್ಲಿ ಪ್ರಸ್ತುತ ಬ್ಯಾಂಕಿಂಗ್ ವ್ಯವಸ್ಥೆಯು ಅನಿವಾರ್ಯವೆನ್ನಿಸಿದೆ. ರಾಜ್ಯದ ಇತರ ತಾಲ್ಲೂಕುಗಳಲ್ಲಿ ಇರುವಂತೆಯೇ, ಹೊಸದುರ್ಗ ತಾಲ್ಲೂಕಿನಲ್ಲಿಯೂ ಬ್ಯಾಂಕುಗಳು, ಸ್ಥಳೀಯ ಸಹಕಾರ ಬ್ಯಾಂಕ್‌ಗಳು ಸೊಸೈಟಿಗಳು, ಎ.ಪಿ.ಎಂ.ಸಿ. ಮುಂತಾದ ಸಂಸ್ಥೆಗಳು ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯಕ್ಕೆ ನಾಂದಿ ಹಾಡಿವೆ.

## ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

ಈಗಿನ ಬ್ಯಾಂಕಿಂಗ್ ವ್ಯವಸ್ಥೆಯು ಅನುಷ್ಠಾನಕ್ಕೆ ಬರುವ ಮೊದಲು, ಕಳೆದ ಶತಮಾನದ ಮೊದಲಲ್ಲಿ, ಕೃಷಿ ಅಭಿವೃದ್ಧಿಗೆ ಮತ್ತು ವ್ಯಾಪಾರ ವಹಿವಾಟುಗಳಿಗೆ ಸಾಲ ನೀಡುವ ಕ್ರಮವು ರೂಢಿಯಲ್ಲಿದ್ದಿತು. ಗ್ರಾಮಗಳೇ ಅಧಿಕವಾಗಿರುವ ಈ ತಾಲ್ಲೂಕಿನಲ್ಲಿ, ಕೃಷಿಕರೇ ಹೆಚ್ಚು ಜನರಿದ್ದು, ಇವರು ತಮಗೆ ಬೇಕಾದ ಸಾಲಗಳನ್ನು, ಶ್ರೀಮಂತರಿಗೆ ತಮ್ಮ ಆಸ್ತಿಯನ್ನು ಅಥವಾ ಒಡವೆ ಕಾಗದ ಪತ್ರ ಗಿರವಿ ಒತ್ತೆ ಇಟ್ಟು ಅವರಿಂದ ಬಡ್ಡಿಯ ಹಾಗೂ ಗಡುವಿನ ಲೆಕ್ಕಾಚಾರದಲ್ಲಿ ಪಡೆಯುತ್ತಿದ್ದರು. ಪ್ರತಿಯೊಂದು ಹಳ್ಳಿಗಳಲ್ಲಿಯೂ ಇರುತ್ತಿದ್ದ ಪರಿಚಿತ ಶ್ರೀಮಂತರಿಂದ ಬಡ ರೈತರು, ಮಧ್ಯಮ ವರ್ಗದ ರೈತರು ಸಾಲ ಪಡೆಯುತ್ತಿದ್ದು, ಸಾಲ ಕೊಡುತ್ತಿದ್ದವರು ತಮಗೆ ತೋಚಿದಷ್ಟು ಬಡ್ಡಿಯನ್ನು ಅವರಿಗೆ ವಿಧಿಸುತ್ತಿದ್ದರು. ಗಡುವಿನಲ್ಲಿ ಸಾಲ ತೀರಿಸದಿದ್ದರೆ, ಬಡ್ಡಿಗೆ ಚಕ್ರಬಡ್ಡಿ ಸೇರಿಸಿ ಸಾಲ ವಸೂಲಿಗಾಗಿ ಸಾಲಗಾರರ ಬಳಿಗೆ ಬರುತ್ತಿದ್ದರು. ಅಥವಾ ತಮ್ಮ ಆಳುಗಳನ್ನು ಕಳುಹಿಸಿ ಸಾಲಗಾರರ ಮನೆ ಜಪ್ತಿ ಮಾಡಿಸುತ್ತಿದ್ದು ಉಂಟು ಅಥವಾ ಸಾಲಗಾರನು ಬರೆದು ಕೊಟ್ಟಿದ್ದ ಜಮೀನು ಅಥವಾ ಒಡವೆಗಳನ್ನು ಮುಟ್ಟುಗೋಲು ಹಾಕಿಕೊಂಡು ಕ್ರಯಪತ್ರಕ್ಕೆ ಸಹಿ ಪಡೆಯುತ್ತಿದ್ದರು. ಇದರಿಂದಾಗಿ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿ, ಬಡವರು ನಿರ್ಗತಿಕರಾಗುತಿದ್ದದೂ ಉಂಟು. ಹಿಂದಿನ ಕಾಲದಲ್ಲಿ ರೋಗರುಜಿನಗಳು ಹೆಚ್ಚು ಇದ್ದು, ರೈತರು ಉತ್ತಮ ಚಿಕಿತ್ಸೆಗಾಗಿ ನಗರಗಳಿಗೆ ಹೋಗಲು ಚೈತನ್ಯವಿಲ್ಲದೆ ಬಳಲಿ, ವ್ಯವಸಾಯ ಮಾಡಲೂ ಆಗದೆ, ದುಡಿಮೆ ಇಲ್ಲದಂತಾಗಿ ಸಾಲ ಮಾಡುತ್ತಿದ್ದರು. ದನಕರುಗಳೂ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದವು. ಹೀಗಾಗಿ ಸಾಮಾನ್ಯ ರೈತರು ಸಾಲಗಳನ್ನು ಮಾಡುವುದು ಅನಿವಾರ್ಯವಾಗುತ್ತಿತ್ತು. ವರದಕ್ಷಿಣೆ, ದೇವರ ಯಾತ್ರೆ, ತಿಥಿ, ನಾಮಕರಣ, ಮಾರಿ ಹಬ್ಬ ಮುಂತಾದ ಹೆಚ್ಚುವರಿ ಖರ್ಚುಗಳಿಗಾಗಿ ಸಾಮಾನ್ಯ ರೈತ ಸಾಲ ಮಾಡುತ್ತಿದ್ದ ಹಾಗೂ ಬರಗಾಲ ಬಂದಾಗ ಜೀವನಕ್ಕಾಗಿ ಅವನು ಸಾಲದ ಮೊರೆ ಹೋಗಲೇಬೇಕಿತ್ತು.

### ಹಣಕಾಸು ಸಂಸ್ಥೆಗಳು

ಗಿರವಿದಾರರು ಮತ್ತು ಖಾಸಗಿಯಾಗಿ ಸಾಲ ನೀಡುವ ವ್ಯಕ್ತಿಗಳಲ್ಲದೆ, ಅನೇಕ ಹಣಕಾಸು ವ್ಯವಹಾರದ ಸಂಸ್ಥೆಗಳು ತಾಲ್ಲೂಕಿನಲ್ಲಿ ಪ್ರಾರಂಭಗೊಂಡಿವೆ. ಇಂತಹ ಸಂಸ್ಥೆಗಳು ಠೇವಣಿ ಇರಿಸುವ ಅರ್ಹ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವ ಮೂಲಕ ಬಂಡವಾಳವನ್ನು ಮೂಲ ಧನವನ್ನಾಗಿ ಸಂಗ್ರಹಿಸಿ, ಅನೇಕರಿಗೆ ವ್ಯಾಪರಕ್ಕಾಗಿ, ಮನೆ ಕಟ್ಟಡಕ್ಕಾಗಿ, ಆಸ್ತಿ ಖರೀದಿಗೆ, ಮದುವೆ ವೆಚ್ಚ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಟ್ರ್ಯಾಕ್ಟರ್ ಖರೀದಿ, ವಾಹನ ಖರೀದಿ ಮುಂತಾದವುಕ್ಕಾಗಿ ಸಾಕಷ್ಟು ಭದ್ರತೆ ಮತ್ತು ಸಾಕ್ಷಿಗಳನ್ನು ಲಿಖಿತ ರೂಪದಲ್ಲಿ ಪಡೆದುಕೊಂಡು ನಿಯಮಾನುಸಾರ ಬಡ್ಡಿಯ ಲೆಕ್ಕಾಚಾರದಂತೆ ಸಾಲ ನೀಡುತ್ತಿವೆ. ಸದಸ್ಯರುಗಳಿಂದ ಬರುವ ಷೇರು

ಬಂಡವಾಳದ ಜೊತೆಗೆ, ನೀಡಿದ ಸಾಲದ ಮೊತ್ತಗಳಿಗೆ ಬರುವ ಬಡ್ಡಿಯ ಮೊತ್ತಗಳೂ ಸೇರಿ ಇವು ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತವೆ. ಕೆಲವರು ಖಾಸಗಿಯಾಗಿ ಕೆಲ ಜನರನ್ನು ಸಂಪರ್ಕಿಸಿ ತಿಂಗಳಿಗೊಮ್ಮೆ ಒಂದೆಡೆ ಸಭೆ ಸೇರಿ ಚೀಟಿ ವ್ಯವಹಾರವನ್ನು ನಡೆಸುವುದೂ ಉಂಟು. ಚೀಟಿ ವ್ಯವಹಾರವು ಅವರವರ ಪರಸ್ಪರ ನಂಬಿಕೆಯ ಮೇಲೆ ನಡೆಯುತ್ತವೆ. ಹೆಚ್ಚು ಬಡ್ಡಿ ಕೂಗುವವರಿಗೆ (ಹರಾಜಿನಲ್ಲಿ) ಸಾಲದ ಮೊತ್ತ ಕೊಡುತ್ತಾರೆ. ಕಡೆಯಲ್ಲಿ ಲಾಭವನ್ನು ಎಲ್ಲಾ ಸದಸ್ಯರಿಗೆ ಹಂಚಬೇಕಾಗುತ್ತದೆ. ಆದರೆ ಚೀಟಿ, ವ್ಯವಹಾರಕ್ಕಿಂತಲೂ ಮೇಲ್ಕಂಡ ಖಾಸಗಿ ಹಣಕಾಸು ಸಂಸ್ಥೆಗಳತ್ತ ಜನರು ಆಸಕ್ತಿ ತೋರಿದ್ದಾರೆ. ಖಾಸಗಿ ಉದ್ಯೋಗಿಗಳು, ಸರ್ಕಾರಿ ನೌಕರರು ಹಾಗೂ ವ್ಯಾಪಾರಸ್ಥರು, ಕಂಟ್ರಾಕ್ಟರುಗಳು, ಗುಡಿಕೈಗಾರಿಕೆ ಮಾಡುವವರು, ಕರಕುಶಲ ವಸ್ತುಗಳನ್ನು ತಯಾರಿಸುವವರು, ವಾಹನ ಖರೀದಿಸುವವರು ಮುಂತಾದ ಅರ್ಹ ಜನರು ಇವುಗಳಿಂದ ನಿಯಮಗಳನುಸಾರ ಸಾಲ ಪಡೆದು ಬಡ್ಡಿ ಕಟ್ಟುತ್ತಾರೆ. ಹಾಗೂ ನಿಗದಿತ ಗಡುವಿನಲ್ಲಿ ಸಾಲ ಹಿಂತಿರುಗಿಸಿ ಋಣ ಮುಕ್ತರಾಗುತ್ತಾರೆ. ಈ ರೀತಿಯ ಚಿಟ್‌ಫಂಡ್ಸ್, ಫೈನಾನ್ಸ್ ಸಂಸ್ಥೆಗಳು ತಾಲ್ಲೂಕಿನಲ್ಲಿ ಸಾಕಷ್ಟು ಆರ್ಥಿಕ ಚಟುವಟಿಕೆ ನಡೆಸುತ್ತಿವೆ.

**ವಾಣಿಜ್ಯ ಬ್ಯಾಂಕುಗಳು**

ಆಧುನಿಕ ಜೀವನ ವ್ಯವಸ್ಥೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನು ಸಹ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಜೀವನದಲ್ಲಿ ಬ್ಯಾಂಕ್‌ಗಳ ಪಾತ್ರ ಬಹಳ ಮಹತ್ವದ್ದು. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಉತ್ತಮಗೊಂಡಂತೆಲ್ಲಾ ಬ್ಯಾಂಕ್‌ಗಳ ಅವಶ್ಯಕತೆಯು ಹೆಚ್ಚುತ್ತದೆ. ಬ್ಯಾಂಕ್‌ಗಳು ಜನಸಮುದಾಯದ ಉಳಿತಾಯವನ್ನು ಸಂಗ್ರಹಿಸಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ವ್ಯವಸಾಯ ಕ್ಷೇತ್ರಗಳಿಗೂ ಹಾಗೂ ಸರ್ಕಾರದ ನಾನಾ ಉತ್ಪಾದನಾ ಯೋಜನೆಗಳ ಉದ್ದೇಶಗಳಿಗೂ ಹಣವನ್ನು ಒದಗಿಸುತ್ತವೆ.

ತಾಲ್ಲೂಕಿನಲ್ಲಿ ಅನೇಕ ವಾಣಿಜ್ಯ ಬ್ಯಾಂಕ್‌ಗಳಿವೆ. ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಪ್ರಸ್ತುತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಎಸ್.ಬಿ.ಐ. ನಲ್ಲಿ ವಿಲೀನಗೊಂಡಿದೆ). ಕರ್ನಾಟಕ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ವಿಜಯ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಮುಂತಾದವು ಇದ್ದು, ಇವುಗಳಲ್ಲಿ ಕೆಲ ಬ್ಯಾಂಕುಗಳ ಶಾಖೆಗಳು ಹೊಸದುರ್ಗದಲ್ಲಿದ್ದು, ಶಾಖೆಗಳನ್ನು ಶ್ರೀರಾಂಪುರ, ಮತ್ತೋಡು, ಬೆಲಗೂರು, ಬಾಗೂರು, ಮಲ್ಲಪ್ಪನಹಳ್ಳಿ ಮುಂತಾದ ಹಳ್ಳಿಗಳಲ್ಲಿ ತೆರೆದಿವೆ. ೧೯೭೯–೮೦ರಲ್ಲಿ ಕೇವಲ ೫ ವಾಣಿಜ್ಯ ಬ್ಯಾಂಕುಗಳಿದ್ದು, ೧೯೯೮ರ ವೇಳೆಗೆ ಇವುಗಳ ಸಂಖ್ಯೆ ೯ಕ್ಕೆ ಏರಿದವು. ೧೯೯೯ ಮತ್ತು ೨೦೦೦ ವರ್ಷಗಳಲ್ಲಿಯೂ ಇವುಗಳ

ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇರಲಿಲ್ಲ. ಆದರೆ ೨೦೧೧ರ ಹೊತ್ತಿಗೆ ಇವುಗಳ ಸಂಖ್ಯೆ ೧೧ ಕ್ಕೆ ಹೆಚ್ಚಳಗೊಂಡಿತು. ವಾಣಿಜ್ಯ ಬ್ಯಾಂಕುಗಳಿಂದ ರೈತರಿಗೆ ಮತ್ತಿತರ ಜನರಿಗಷ್ಟೇ ಅಲ್ಲದೆ, ತಾಲ್ಲೂಕಿನ ವಿದ್ಯಾರ್ಥಿಗಳಿಗೂ ಸ್ವಲ್ಪ ಮಟ್ಟಿಗೆ ಸಹಾಯಕವಾಗಿವೆ. ನೌಕರರಿಗೆ ಸಂಬಳ – ಸಾರಿಗೆ ಇತರ ಫಲಾನುಭವಿಗಳ ಚೆಕ್ಕುಗಳು, ವೃದ್ಧಾಪ್ಯ ವೇತನ ಮತ್ತಿತರ ಸೌಲಭ್ಯಗಳ ಮೊತ್ತವನ್ನು ಸರ್ಕಾರವು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ವಿತರಿಸುತ್ತದೆ. ಕೆನರಾ ಬ್ಯಾಂಕ್ ಲೀಡ್‌ಬ್ಯಾಂಕ್ ಆಗಿದ್ದು, ಕೆಲವು ಮುಖ್ಯ ನಿಯಮಗಳನ್ನು ಪಾಲಿಸುವಂತೆ ಇತರ ಬ್ಯಾಂಕ್‌ಗಳಿಗೆ ಸಲಹೆ–ಸೂಚನೆಗಳನ್ನು ನೀಡುತ್ತದೆ. ಸರ್ಕಾರಿ ಸಭೆಗಳಿಗೆ ಇತರ ವಾಣಿಜ್ಯ ಬ್ಯಾಂಕ್‌ಗಳ ಪ್ರತಿನಿಧಿಯಾಗಿ ಈ ಬ್ಯಾಂಕಿನ ಮುಖ್ಯಾಧಿಕಾರಿಯು ಹಾಜರಾಗುತ್ತಾರೆ. ತಾಲ್ಲೂಕಿನಲ್ಲಿ ೨೦೧೩–೧೪ ರಲ್ಲಿ ೧೩ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕ್‌ಗಳಿದ್ದು ರೂ. ೩೧,೯೧೫ ಮಿಲಿಯನ್ ಠೇವಣಿ ಸಂಗ್ರಹಿಸಿದ್ದು, ರೂ. ೨೭,೫೮೨ ಮಿಲಿಯನ್ ಸಾಲ ನೀಡಿದ್ದವು. ೧೪ ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳಿದ್ದು, ರೂ. ೯,೫೪೧ ಮಿಲಿಯನ್ ಠೇವಣಿ ಸಂಗ್ರಹಿಸಿ, ರೂ. ೧೩,೩೫೬ ಮಿಲಿಯನ್ ಸಾಲ ನೀಡಿದ್ದವು. ಒಂದು ಖಾಸಗಿ ಕ್ಷೇತ್ರ ಬ್ಯಾಂಕಿದ್ದು ರೂ. ೧,೬೬೦ ಮಿಲಿಯನ್ ಠೇವಣಿ ಸಂಗ್ರಹಿಸಿ ರೂ. ೧,೫೮೯ ಮಿಲಿಯನ್ ಸಾಲ ನೀಡಿತ್ತು. ೨೦೧೫–೧೬ ರಲ್ಲಿ ೧೫ ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳಿದ್ದು, ರೂ. ೧,೩೧೭ ಮಿಲಿಯನ್ ಸಾಲ ನೀಡಿದ್ದವು. ೧೪ ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳಿದ್ದು ರೂ. ೧,೨೦೭ ಮಿಲಿಯನ್ ಸಾಲ ನೀಡಿದ್ದವು. ಹಾಗೆಯೇ ಒಂದು ಖಾಸಗಿ ಕ್ಷೇತ್ರದ ಬ್ಯಾಂಕಿದ್ದು ರೂ. ೪೦ ಮಿಲಿಯನ್ ಸಾಲ ನೀಡಿತ್ತು.

**ಸಹಕಾರ ಸಂಘಗಳು**

ತಾಲ್ಲೂಕಿನಲ್ಲಿ ೨೦೧೩–೧೪ರಲ್ಲಿ ಒಂದು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ (ಡಿ.ಸಿ.ಸಿ. ಬ್ಯಾಂಕ್) ಇದ್ದು, ಇದರಲ್ಲಿ ೭,೪೪೦ ಸಾಲ ಪಡೆದ ಸದಸ್ಯರಿದ್ದರು. ಇದು ೧೮೯೬.೬೧ ಲಕ್ಷ ರೂಗಳ ಕೃಷಿ ಸಾಲವನ್ನು ಮತ್ತು ೬೭೩.೨೩ ಲಕ್ಷ ರೂಗಳ ಇತರೆ ಸಾಲವನ್ನು ನೀಡಿತ್ತು. ಈ ಬ್ಯಾಂಕ್ ೧,೭೮೭.೦೯ ಲಕ್ಷ ಠೇವಣಿ ಸಂಗ್ರಹಿಸಿತ್ತು. ಒಂದು ಕಾಸ್‌ಕಾರ್ಡ್ (KSCARD) ಬ್ಯಾಂಕ್‌ಯಿದ್ದು, ೭೧ ಮಂದಿ ಸಾಲ ಪಡೆದ ಸದಸ್ಯರಿದ್ದರು. ಇದು ೪೪.೯೧ ಲಕ್ಷ ರೂಗಳ ಕೃಷಿಸಾಲ ಮತ್ತು ೬.೮೫ ಲಕ್ಷ ರೂಗಳ ಇತರೆ ಸಾಲವೂ ಸೇರಿದಂತೆ ಒಟ್ಟು ೫೧.೭೬ ಲಕ್ಷ ರೂಗಳ ಸಾಲ ವಿತರಿಸಿತ್ತು.

ತಾಲ್ಲೂಕಿನಲ್ಲಿ ೨೬ ವ್ಯವಸಾಯ ಪತ್ತಿನ ಸಹಕಾರ ಸಂಘಗಳು ಇದ್ದು, ೫೧,೧೧೦ ಸದಸ್ಯರಿದ್ದರು. ೧೬ ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳಿದ್ದು, ಇದರಲ್ಲಿ ೧೭,೬೮೫ ಸದಸ್ಯರಿದ್ದರು. ಪತ್ತೇತರ ಸಹಕಾರಗಳಲ್ಲಿ ಒಂದು ಮಾರುಕಟ್ಟೆ ಸಹಕಾರ ಸಂಘ ( ೧,೧೨೨), ೨ ಗೃಹ ನಿರ್ಮಾಣ ಸಹಕಾರ ಸಂಘಗಳು (೬೯೨),

೬೬ ಹಾಲು ಉತ್ಪಾದಕರ ಸಹಕಾರ ಸಂಘಗಳು (೫,೪೬೨) ಹಾಗೂ ೪೦ ಇತರೆ ಸಹಕಾರ ಸಂಘಗಳಿದ್ದವು (೧೮,೪೦೬). ಆವರಣದಲ್ಲಿ ನೀಡಿರುವ ಸಂಖ್ಯೆ ಅವುಗಳು ಹೊಂದಿರುವ ಸದಸ್ಯರನ್ನು ಸೂಚಿಸುತ್ತವೆ.

ತಾಲ್ಲೂಕಿನಲ್ಲಿ ೨೦೧೫-೧೬ ರಲ್ಲಿ ಒಂದು ಡಿ.ಸಿ.ಸಿ. ಬ್ಯಾಂಕ್ ಇದ್ದು, ಇದರಲ್ಲಿ ೭.೨೩೦ ಸಾಲ ಪಡೆದ ಸದಸ್ಯರಿದ್ದರು. ಇದು ೩,೧೨೩.೫೪ ಲಕ್ಷ ರೂಗಳ ಕೃಷಿ ಸಾಲ ಮತ್ತು ೭೬೦.೧೧ ಲಕ್ಷ ರೂಗಳು ಇತರೆ ಸಾಲ ಸೇರಿದಂತೆ ಒಟ್ಟು ೩,೮೮೩.೬೫ ಲಕ್ಷ ರೂಗಳ ಸಾಲ ನೀಡಿತ್ತು. ಇದು ೨,೪೭೨.೦೪ ಲಕ್ಷ ಠೇವಣಿ ಹೊಂದಿತ್ತು. ಒಂದು ಕಾಸ್‌ಕಾರ್ಡ್ ಬ್ಯಾಂಕಿದ್ದು ಇದರಲ್ಲಿ ೭ ಸದಸ್ಯರು ಸಾಲ ಪಡೆದಿದ್ದರು. ಇದು ೧೨.೯ ಲಕ್ಷ ರೂ ಕೃಷಿ ಸಾಲ ನೀಡಿತ್ತು. ಪತ್ತಿನ ಸಹಕಾರ ಸಂಘಗಳಲ್ಲಿ ೨೫ ವ್ಯವಸಾಯ ಸಹಕಾರ ಸಂಘಗಳು (೪೬,೫೦೦), ೧೭ ವ್ಯವಸಾಯೇತರ ಸಹಕಾರ ಸಂಘಗಳು (೧೦,೮೫೦) ಹೀಗೆ ಒಟ್ಟು ೪೨ ಪತ್ತಿನ ಸಹಕಾರ ಸಂಘಗಳು (೫೭,೩೫೦) ಇದ್ದವು. ಪತ್ತ್ಯೇತರ ಸಹಕಾರ ಸಂಘಗಳಲ್ಲಿ ಒಂದು ಮಾರುಕಟ್ಟೆ ಸಹಕಾರ ಸಂಘ (೧,೦೬೯), ಮೂರು ಗೃಹನಿರ್ಮಾಣ ಸಹಕಾರ ಸಂಘ (೧೪೪), ೬೫ ಹಾಲು ಉತ್ಪಾದಕರ ಸಹಕಾರ ಸಂಘಗಳು (೮,೩೬೭) ಹಾಗೂ ೪೮ ಇತರೆ ಸಹಕಾರ ಸಂಘಗಳು (೨೨,೦೫೫) ಹೀಗೆ ಒಟ್ಟು ೧೧೭ (೩೧,೬೩೫) ಪತ್ತ್ಯೇತರ ಸಹಕಾರ ಸಂಘಗಳಿದ್ದವು.

ತಾಲ್ಲೂಕಿನಲ್ಲಿ ಒಂದು ನಿಯಂತ್ರಿತ ಮಾರುಕಟ್ಟೆ ಇದ್ದು, ನಿಯಂತ್ರಿತ ಉಪ ಮಾರುಕಟ್ಟೆಗಳ ಒಟ್ಟು ವಹಿವಾಟು ರೂ. ೫,೪೪,೬೨೮ ಮಿಲಿಯನ್ ಮೆಟ್ರಿಕ್ ಟನ್‌ಗಳಾಗಿತ್ತು. ತಾಲ್ಲೂಕಿನಲ್ಲಿ ಮೂರು ಕೃಷಿ ಸಂಸ್ಕರಣ ಘಟಕಗಳಿದ್ದವು.

## ಸಂತೆಗಳು

ತಾಲ್ಲೂಕಿನಲ್ಲಿ ವಿವಿಧ ಸ್ಥಳಗಳಲ್ಲಿ ದಿನಸಿ ಸಂತೆ, ದನಗಳ ಸಂತೆ, ತೆಂಗಿನಕಾಯಿ ಸಂತೆ, ಒಣಕೊಬ್ಬರಿ ಸಂತೆ ಹಾಗೂ ಕುರಿಗಳ ಸಂತೆ ಹೀಗೆ ವೈವಿಧ್ಯಮಯ ಸಂತೆಗಳು ನಡೆಯುತ್ತವೆ. ಹೀಗೆ, ತಾಲ್ಲೂಕಿನಲ್ಲಿ ನಡೆಯುವ ಒಟ್ಟು ಸಂತೆಗಳ ಸಂಖ್ಯೆ ಹತ್ತಕ್ಕೂ ಹೆಚ್ಚು, ಸೋಮವಾರ ಹೊಸದುರ್ಗದಲ್ಲಿ ಎರಡು ಸಂತೆಗಳು ನಡೆಯುತ್ತವೆ. (೧) ಪಟ್ಟಣದೊಳಗೆ ದಿನಸಿ ಸಂತೆ ಮತ್ತು (೨) ಪಟ್ಟಣದ ಹೊರಗಿರುವ ಎ.ಪಿ.ಎಂ.ಸಿ. ಯಲ್ಲಿ ದನಗಳ ಸಂತೆ, ಬುಧವಾರ, ಹೊಸದುರ್ಗದಲ್ಲಿ ಎ.ಪಿ.ಎಂ.ಸಿ. ಆವರಣದಲ್ಲಿ ಭರ್ಜರಿ ಕುರಿ ಸಂತೆಯು ನಡೆಯುತ್ತಿದ್ದು, ಸಾವಿರಾರು ಕುರಿಗಳು ಈ ಸಂತೆಯಲ್ಲಿ ಮಾರಾಟಕ್ಕಾಗಿ ಬರುತ್ತವೆ. ಕುರಿ ಖರೀದಿಗಾಗಿ ಭದ್ರಾವತಿ, ಹಾಸನ, ಚಿಕ್ಕಮಗಳೂರು ಮುಂತಾದ ದೂರದ ಪಟ್ಟಣಗಳಿಂದ ಜನರು ಬರುತ್ತಾರೆ. ಬುಧವಾರ ತಾಲ್ಲೂಕಿನಲ್ಲಿ ನಡೆಯುವ ಮತ್ತೊಂದು ಸಂತೆ, ಹೊಸದುರ್ಗ ರೋಡ್‌ನಲ್ಲಿ ಜರುಗುವುದಾಗಿದೆ. ಅದೇ ದಿನ (ಬುಧವಾರ) ಶ್ರೀರಾಂಪುರದಲ್ಲಿ ತೆಂಗಿನಕಾಯಿ, ಒಣಕೊಬ್ಬರಿ ಸಂತೆ

ನಡೆಯುತ್ತದೆ. ದಿನಸಿ ಸಂತೆಯೂ ನಡೆಯುತ್ತದೆ. ಬಾಗೂರಲ್ಲಿ ಶನಿವಾರ ಸಂತೆ, ಅದೇ ದಿನ ಮತ್ತೋಡಿನಲ್ಲಿಯೂ ಸಂತೆ ಇರುತ್ತದೆ. ಅಲ್ಲದೇ ಗವಿರಂಗನಾಥ ಸ್ವಾಮಿ ಬೆಟ್ಟದಲ್ಲಿ ಅಂದು ದನಗಳ ಸಂತೆ ಜರುಗುವುದು. ಭಾನುವಾರ ಬೆಲಗೂರಿನಲ್ಲಿ ದಿನಸಿ ಸಂತೆ ಹಾಗೂ ತೆಂಗಿನಕಾಯಿ ಮಾರ್ಕೆಟ್ ವಿಶೇಷವಾದುದು. ಜಾನಕಲ್ಲು ಗ್ರಾಮದಲ್ಲಿ ಪ್ರತಿ ಶುಕ್ರವಾರ ಸಂತೆ ಜರುಗುವುದು. ಹೊಸದುರ್ಗದಲ್ಲಿ ಬಂಡೆಯ ಮೇಲೆ (ಆಂಜನೇಯ ದೇವಸ್ಥಾನದ ಎದುರು) ಬೆಳಗಿನ ೬ ಗಂಟೆಯಿಂದ ೧೧ ಗಂಟೆಯವರೆಗೆ ನಡೆಯುವ ನಿತ್ಯಸಂತೆಯು ತರಕಾರಿ, ಹೂವು, ಹಣ್ಣು, ಕಾಳು, ಬೇಳೆ ಮುಂತಾದವುಗಳು ಮಾರಾಟವಾಗುತ್ತಿದ್ದು, ರೈತರೇ ನೇರವಾಗಿ ತರಕಾರಿ, ಸೊಪ್ಪು ಮುಂತಾದವನ್ನು ಇಲ್ಲಿ ಮಾರುತ್ತಾರೆ. ತಾಲ್ಲೂಕಿನ ಸಂತೆಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

**ತಾಲ್ಲೂಕಿನಲ್ಲಿ ನಡೆಯುವ ಸಂತೆಗಳ ವಿವರ**

| ಕ್ರ. ಸಂ. | ಸ್ಥಳ | ಸಂತೆ ನಡೆಯುವ ದಿನ | ನಡೆಯುವ ಸಂತೆ | ಷರಾ |
|---|---|---|---|---|
| ೧ | ಹೊಸದುರ್ಗ | ಸೋಮವಾರ | ದಿನಸಿ ಸಂತೆ | ಪಟ್ಟಣದಲ್ಲಿ |
| ೨ | ಹೊಸದುರ್ಗ | ಸೋಮವಾರ | ದನಗಳ ಸಂತೆ | ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ |
| ೩ | ಹೊಸದುರ್ಗ | ಬುಧವಾರ | ಕುರಿಗಳ ಸಂತೆ | ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ |
| ೪ | ಹೊಸದುರ್ಗ ರೋಡ್ | ಬುಧವಾರ | ದಿನಸಿ ಸಂತೆ | ರಸ್ತೆ ಪಕ್ಕದಲ್ಲಿ |
| ೫ | ಶ್ರೀರಾಂಪುರ | ಬುಧವಾರ | ಒಣಕೊಬ್ಬರಿ ಸಂತೆ | ರಸ್ತೆ ಪಕ್ಕದಲ್ಲಿ |
| ೬ | ಕಿಟ್ಟದ ಹಾಳ್ | ಶನಿವಾರ | ದಿನಸಿ ಸಂತೆ | ರಸ್ತೆ ಪಕ್ಕದಲ್ಲಿ |
| ೭ | ಜಾನಕಲ್ಲು | ಶುಕ್ರವಾರ | ದಿನಸಿ ಸಂತೆ | ರಸ್ತೆ ಪಕ್ಕದಲ್ಲಿ |
| ೮ | ಗವಿರಂಗನಾಥ ಸ್ವಾಮಿ ಕ್ಷೇತ್ರ | ಶನಿವಾರ | ದನಗಳ ಸಂತೆ | ತೋಪಿನಲ್ಲಿ |
| ೯ | ಬಾಗೂರು | ಶನಿವಾರ | ದಿನಸಿ ಸಂತೆ | ಕೇಶವಗುಡಿ ಬಳಿ |
| ೧೦ | ಗುಡ್ಡದ ನೇರಲ ಕೆರೆ | ಭಾನುವಾರ | ದಿನಸಿ ಸಂತೆ | ರಸ್ತೆ ಬದಿ |
| ೧೧ | ಮತ್ತೋಡು | ಶುಕ್ರವಾರ | ದಿನಸಿ ಸಂತೆ | ರಸ್ತೆ ಬದಿಗಳಲ್ಲಿ |

| | | | | |
|---|---|---|---|---|
| ೧೨ | ಬೆಲಗೂರು | ಭಾನುವಾರ | ತೆಂಗಿನ ಕಾಯಿ ಮಾರ್ಕೆಟ್ | ರಸ್ತೆ ಬದಿಗಳಲ್ಲಿ |
| ೧೩ | ಬೆಲಗೂರು | ಭಾನುವಾರ | ದಿನಸಿ ಸಂತೆ | ರಸ್ತೆ ಬದಿಗಳಲ್ಲಿ |
| ೧೪ | ಮಾಡದ ಕೆರೆ | ಭಾನುವಾರ | ದಿನಸಿ ಸಂತೆ | ರಸ್ತೆ ಬದಿಗಳಲ್ಲಿ |
| ೧೫ | ಕಂಚೀಪುರ | ಮಂಗಳವಾರ | ದಿನಸಿ ಸಂತೆ | ರಸ್ತೆ ಬದಿಗಳಲ್ಲಿ |
| ೧೬ | ಹೊಸದುರ್ಗ | ಪ್ರತಿದಿನ ಬೆಳಗ್ಗೆ ೬ ರಿಂದ ೧೦ ಗಂಟೆವರೆಗೆ | ದಿನಸಿ-ತರಕಾರಿ ಸಂತೆ (ರೈತ ಸಂತೆ) | ಬಂಡೆಯ ಮೇಲೆ (ಆಂಜನೇಯ ಗುಡಿ ಹತ್ತಿರ) |

**ಆಧಾರ: ಕ್ಷೇತ್ರ ಕಾರ್ಯ, ಶ್ರೀ ಬಾಗೂರು ನಾಗರಾಜಪ್ಪ.**

ಬೆಲಗೂರಿನಲ್ಲಿ ನಡೆಯುವ ತೆಂಗಿನಕಾಯಿ ಮಾರ್ಕೆಟ್ ತಾಲ್ಲೂಕಿನಲ್ಲಿ ವಿಶೇಷ ಸ್ಥಾನ-ಮಾನ ಪಡೆದಿದೆ. ರಾಜ್ಯದಲ್ಲೇ ದೊಡ್ಡ ತೆಂಗಿನಕಾಯಿ ವರ್ತಕರು ಬೆಲಗೂರು, ಹೊಸದುರ್ಗ ಮತ್ತಿತ್ತರ ಕಡೆಗಳಲ್ಲಿದ್ದಾರೆ. ಇಲ್ಲಿಂದ ಬೇರೆ ರಾಜ್ಯಗಳಿಗೆ ತೆಂಗಿನಕಾಯಿ ರಫ್ತಾಗುತ್ತದೆ. ಹೊಸದುರ್ಗದ ಕುರಿಸಂತೆಗೆ ಬೇರೆ ಜಿಲ್ಲೆಗಳಿಂದ ಗ್ರಾಹಕರು ಬರುತ್ತಾರೆ. ಇಲ್ಲಿನ ಪ್ರತಿದಿನದ ತರಕಾರಿ ಮಾರ್ಕೆಟ್ (ಸಂತೆ) ಸಹ ತುಂಬ ಹೆಸರುವಾಸಿಯಾಗಿದೆ. ಇಲ್ಲಿನ ಸಂತೆಗಳಲ್ಲಿ ದವಸ-ಧಾನ್ಯಗಳು ರೈತರಿಂದ ಗ್ರಾಹಕರಿಗೆ ನೇರವಾಗಿ ಮಾರಲ್ಪಡುತ್ತವೆ. ಕ್ರಿ.ಶ. ೧೦೯೪ರ ಚಿಕ್ಕಯಗಟಿ ಶಾಸನ (೧೦೯೪)ದಲ್ಲಿ ರೈತರನ್ನು 'ಧವಸಿಗರು' ಎನ್ನಲಾಗಿದೆ. ಚಿಕ್ಕಯಗಟಿ-ಶಾಸನ(೧೦೯೪), ನೀರಗುಂದ-ಶಾಸನ (೧೦೯೫), ಹುಣವಿನಡು-ಶಾಸನ (೧೨೨೮) ಹೆಗ್ಗೆರೆ ಶಾಸನ (೧೧೬೧) ಮುಂತಾದ ಶಾಸನಗಳಲ್ಲಿ ಅನೇಕ ಸಂತೆ ಸುಂಕಗಳನ್ನು ದೇವರುಗಳಿಗೆ ದತ್ತಿ ಬಿಟ್ಟಿದ್ದ ಬಗ್ಗೆ ವಿವರಗಳಿವೆ. ಪ್ರಾಚೀನ ಕಾಲದಲ್ಲಿ ಸಂತೆಗಳಲ್ಲಿರುತ್ತಿದ್ದ ಸಾಮಗ್ರಿಗಳ ವಿವರ ಇವುಗಳಿಂದ ತಿಳಿದುಬರುವುದು.

## ಸ್ತ್ರೀ ಶಕ್ತಿ ಸಂಘಗಳು

ತಾಲ್ಲೂಕಿನಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ೧೯೮೩ರಲ್ಲಿ ಪ್ರಾರಂಭಗೊಂಡಿರುತ್ತದೆ. ೨೦೧೦-೧೧ರಲ್ಲಿದ್ದ ಸ್ತ್ರೀ ಶಕ್ತಿ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೧೭,೧೦೨. ಇವರಲ್ಲಿ ೩,೨೮೪ ಪರಿಶಿಷ್ಟ ಜಾತಿ ಮಹಿಳೆಯರು ೧,೩೦೦ ಪರಿಶಿಷ್ಟ ಪಂಗಡದ ಮಹಿಳೆಯರ ಹಾಗೂ ೧೨,೫೧೮ ಇತರ ಮಹಿಳೆಯರು ಸೇರಿದ್ದರು.

ಬ್ಯಾಂಕ್‌ಗಳಲ್ಲಿ ಉಳಿತಾಯ ಪ್ರಾರಂಭಿಸಿದ ಗುಂಪುಗಳು ಒಟ್ಟು ೯೯೦ ಆಗಿದ್ದು, ಇವುಗಳಲ್ಲಿ ಸಂಗ್ರಹವಾದ ಒಟ್ಟು ಉಳಿತಾಯ ಮೊತ್ತ ರೂ. ೧೦೨.೫೬ ಲಕ್ಷಗಳು, ಹಾಗೂ ಬ್ಯಾಂಕ್‌ಗಳಿಂದ ಸಾಲ ಪಡೆದವರ ಒಟ್ಟು ಸಂಖ್ಯೆ ೧,೬೦೦, ಬ್ಯಾಂಕ್‌ನಿಂದ ಸಾಲ ಪಡೆದ ಒಟ್ಟು ಮೊತ್ತ ರೂ. ೧೩೩.೯೩ ಲಕ್ಷಗಳು. ಅರ್ಹ ಮಹಿಳೆಯರಿಗೆ ಉದ್ಯೋಗ ಯೋಜನೆ ಆಧರಿಸಿ ಬ್ಯಾಂಕ್ ಮೂಲಕ ಸಾಲ ನೀಡಲಾಗುತ್ತದೆ. ಸ್ತ್ರೀ ಶಕ್ತಿ ಸಂಘಗಳಿಗೆ ಗರಿಷ್ಠ ೧ ಲಕ್ಷ ರೂ.ವರೆಗೆ ಸಾಲ ಸೌಲಭ್ಯವಿದ್ದು ೧೦ ಕಂತುಗಳಲ್ಲಿ ಸಾಲ ತೀರಿಸಬೇಕಾಗುತ್ತದೆ. ೨೦೧೩-೧೪ ರಲ್ಲಿ ೧೦೪೨ ಸ್ತ್ರೀ-ಶಕ್ತಿ ಸಂಘಗಳಿದ್ದು, ಇದರಲ್ಲಿ ೩,೩೦೯ ಪರಿಶಿಷ್ಟಜಾತಿಯ ಮಹಿಳೆಯರು, ೧,೨೧೧ ಪರಿಶಿಷ್ಟ ಪಂಗಡದ ಮಹಿಳೆಯರು, ೧೩,೩೯೨ ಇತರೆ ಮಹಿಳೆಯರು ಸೇರಿದಂತೆ ೧೭,೯೧೨ ಮಹಿಳಾ ಸದಸ್ಯರುಗಳಿದ್ದರು. ೨೦೧೫-೧೬ ನೇ ಸಾಲಿನಲ್ಲಿ ೧,೦೪೨ ಸ್ತ್ರೀ ಶಕ್ತಿ ಸಂಘಗಳಿದ್ದು, ಇದರಲ್ಲಿ ೨,೪೫೮ ಪರಿಶಿಷ್ಟ ಜಾತಿಯ, ೧,೩೮೬ ಪರಿಶಿಷ್ಟ ಪಂಗಡದ ಹಾಗೂ ೯,೩೫೩ ಇತರೆ ಸೇರಿದಂತೆ ಒಟ್ಟು ೧೩,೧೯೭ ಮಹಿಳಾ ಸದಸ್ಯರಿದ್ದರು.

### ಸರ್ಕಾರಿ ವಿಮೆ

ಕೆ.ಜಿ.ಐ.ಡಿ (ಕರ್ನಾಟಕ ಸರ್ಕಾರಿ ವಿಮಾ ಇಲಾಖೆ)ಯು ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ಸೀಮಿತವಾಗಿದೆ. ಇದು ಸರ್ಕಾರಿ ನೌಕರರ ವಿಮೆ, ವಾಹನ ವಿಮೆಗಳನ್ನು ನಿರ್ವಹಿಸುತ್ತದೆ. ಅಧಿಕಾರಿಗಳ ಹಾಗೂ ಮೂರನೇ ಮತ್ತು ನಾಲ್ಕನೇ ದರ್ಜೆಯ ನೌಕರರ ವಿಮಾ ಖಾತೆಗಳನ್ನು ಜಿಲ್ಲಾ ವಿಮಾ ಕಛೇರಿಯು ನಿರ್ವಹಿಸುತ್ತದೆ. ತಮ್ಮ ವಿಮಾ ಬಾಂಡ್‌ಗಳ ಆಧಾರದಲ್ಲಿ ನೌಕರನು ಸಾಲ ಸೌಲಭ್ಯ ಪಡೆದು ೫೫ನೇ ವಯಸ್ಸಿನೊಳಗೆ ಸಾಲ ತೀರಿಸುವ ಸೌಲಭ್ಯವಿದೆ. ನೌಕರರು ೫೫ ವಯಸ್ಸು ದಾಟಿದಾಗ ನೌಕರರಿಗೆ ವಿಮೆಯ ಮೊತ್ತವು ಬಡ್ಡಿ ಸಹಿತವಾಗಿ ದೊರಕುತ್ತದೆಯಲ್ಲದೆ, ನಿಯಮಾನುಸಾರ ಬೋನಸ್ ಸಹ ಸಿಗುವುದು.

೧೮೮೨ರಲ್ಲಿ ಅಂಚೆ ಕಛೇರಿಗಳಲ್ಲಿ ಗ್ರಾಹಕರಿಗಾಗಿ ಉಳಿತಾಯ ಖಾತೆಗಳನ್ನು ಪ್ರಾರಂಭಿಸಲಾಗಿದ್ದಿತು. ಕನಿಷ್ಟ ನಾಲ್ಕಾಣೆಯಿಂದ ಗರಿಷ್ಠ ರೂ. ೫.೦೦ರ ವರೆಗೆ ಠೇವಣಿ ಇಡಬಹುದಾಗಿದ್ದಿತು. ಅಂಚೆ ಇಲಾಖೆಯು ಈಗ ಉಳಿತಾಯ ಖಾತೆ, ಆರ್.ಡಿ., ಸಿ.ಟಿ.,ಡಿ., ರಾಷ್ಟ್ರೀಯ ಉಳಿತಾಯ ಪತ್ರ, ಇಂದಿರಾ ವಿಕಾಸ್, ಮುಂತಾದ ವಿವಿಧ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡಿದೆ. ಈ ಹಿಂದೆ ನೌಕರರಿಗೆ ಬರುತ್ತಿದ್ದ ವೇತನ ಮತ್ತು ತುಟ್ಟಿ ಭತ್ಯೆ ಹೆಚ್ಚಳದ ಶಿಲ್ಕು ಮೊತ್ತವನ್ನು ಎನ್.ಎಸ್.ಸಿ.ಯಲ್ಲಿ ತೊಡಗಿಸುವುದು ಕಡ್ಡಾಯವಾಗಿದ್ದಿತು. ನೌಕರರಿಗೆ ಸಾಮಾನ್ಯ ಭವಿಷ್ಯನಿಧಿ ಖಾತೆಗಳೂ ಇವೆ.

## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಹೊಸದುರ್ಗದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ದಿನಾಂಕ ೧೮-೦೨-೧೯೫೫ರಂದು ಸ್ಥಾಪನೆಗೊಂಡಿರುತ್ತದೆ. ಇದು ತಾಲ್ಲೂಕಿನ ಮುಖ್ಯ ಮಾರುಕಟ್ಟೆ ಪ್ರಾಂಗಣವಾಗಿದ್ದು, ಶ್ರೀರಾಂಪುರ ಮತ್ತು ಬೆಲಗೂರು ಗ್ರಾಮಗಳಲ್ಲಿ ಉಪ ಮಾರುಕಟ್ಟೆ ಪ್ರಾಂಗಣಗಳಿವೆ. ಹೊಸದುರ್ಗ ಕೃ.ಉ.ಮಾ. ಸಮಿತಿಯಲ್ಲಿ ವಿವಿಧ ಅನುಕೂಲತೆಗಳು ಇವೆ. ರೈತ ಭವನ, ಸಣ್ಣ ಮಳಿಗೆ, ಗೋದಾಮುಗಳು, ಶ್ರಮಿಕ ಭವನ, ಕುಡಿಯುವ ನೀರು ಇತ್ಯಾದಿ. ದಾನಿಗಳಾದ ಡಿ.ಕೆ. ಗೋವಿಂದಪ್ಪನವರು ದಾನವಾಗಿ ನೀಡಿರುವ ಜಾಗದಲ್ಲಿ ಹೊಸದುರ್ಗ ಎ.ಪಿ.ಎಂ.ಸಿ. ಕಟ್ಟಡವು ೧೯೭೭ರಲ್ಲಿ ಆಗಿರುತ್ತದೆ. ಇಲ್ಲಿನ ಎ.ಪಿ.ಎಂ.ಸಿ ಯಲ್ಲಿರುವ ಜನಶ್ರೀ ವಿಮಾ ಯೋಜನೆಯ ವಿವರ ಈ ಕೆಳಗಿನಂತಿದೆ.

**ಎ.ಪಿ.ಎಂ.ಸಿ ಯಲ್ಲಿರುವ ಜನಶ್ರೀ ವಿಮಾ ಯೋಜನೆಯ ವಿವರ.**

| ಕ್ರ.ಸಂ. | ವರ್ಷ | ಗಂಡಸರು | ಹೆಂಗಸರು | ಒಟ್ಟು |
|---|---|---|---|---|
| ೧ | ೨೦೦೬-೦೭ | ೮೯ | - | ೮೯ |
| ೨ | ೨೦೦೭-೦೮ | ೮೯ | - | ೮೯ |
| ೩ | ೨೦೦೮-೦೯ | ೮೯ | ೫೧ | ೧೪೦ |
| ೪ | ೨೦೦೯-೧೦ | ೯೦ | ೫೧ | ೧೪೧ |
| ೫ | ೨೦೧೦-೧೧ | ೯೩ | ೫೧ | ೧೪೪ |
| ೬ | ೨೦೧೨-೧೩ | ೪೨ | ೫೧ | ೯೩ |
| ೭ | ೨೦೧೩-೧೪ | ೪೧ | ೪೮ | ೮೯ |
| ೮ | ೨೦೧೪-೧೫ | ೪೦ | ೪೬ | ೮೬ |
| ೯ | ೨೦೧೫-೧೬ | ೩೭ | ೪೬ | ೮೩ |
| ೧೦ | ೨೦೧೬-೧೭ | ೩೭ | ೪೬ | ೮೩ |
| ೧೧ | ೨೦೧೭-೧೮ | ೩೬ | ೪೫ | ೮೧ |

**ಆಧಾರ: ಹೊಸದುರ್ಗ ಎ.ಪಿ.ಎಂ.ಸಿ, ತಃಖ್ತೆ.**

ರೈತ ಸಂಜೀವಿನಿ ವಿಮಾ ಪರಿಹಾರ ಯೋಜನೆಯಡಿ ೧೯೯೮-೯೯ನೇ ಸಾಲಿನಿಂದ ೨೦೧೮-೧೯ನೇ ಸಾಲಿನ ಜೂನ್ ವರೆಗೆ ಒಟ್ಟು ೧೦೯ ಪ್ರಕರಣಗಳಲ್ಲಿ ಫಲಾನುಭವಿಗಳಿಗೆ ರೂ.೪೧,೨೭,೦೦೦-೦೦ನ್ನು ಮಂಜೂರು ಮಾಡಿ ವಿತರಿಸಲಾಗಿದೆ.

ಈ ಮಾರುಕಟ್ಟೆಯಲ್ಲಿ ಮಾರಾಟವಾಗುವ ಕೃಷಿ ಹುಟ್ಟುವಳಿಗಳು ರಾಗಿ, ತೆಂಗಿನಕಾಯಿ, ಸಾಮೆ, ನವಣೆ, ಹುರುಳಿ, ಮೆಕ್ಕೆಜೋಳ, ಎಳ್ಳು, ಶೇಂಗಾ, ಸೂರ್ಯಕಾಂತಿ ಮತ್ತು ಹೆಸರು. ಪ್ರತಿ ಸೋಮವಾರ, ಕೃಷಿ ಹುಟ್ಟುವಳಿಗಳ ಟೆಂಡರ್ ಪ್ರಕ್ರಿಯೆ ಜರುಗಿಸಲಾಗುತ್ತದೆ. ೨೦೧೦-೧೧ನೇ ಸಾಲಿನಲ್ಲಿ ಹೊಳಲ್ಕೆರೆ ತಾಲ್ಲೂಕನ್ನು ಒಳಗೊಂಡಿದ್ದು, ರೂ. ೧.೬೨ ಕೋಟಿ ಮೊತ್ತದ ವಹಿವಾಟು ಇದ್ದು, ೨೦೧೧ನೇ ಮಾರ್ಚ್ ಮಾಹೆಯಲ್ಲಿ ಹೊಳಲ್ಕೆರೆ ಉಪ ಮಾರುಕಟ್ಟೆ ವಿಭಜನೆಗೊಂಡ ನಂತರ, ರೂ. ೧.೨೩ ಕೋಟಿಯಷ್ಟು ವಹಿವಾಟು ಹೊಸದುರ್ಗ ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿ ಆಗಿರುತ್ತದೆ. ಎ.ಪಿ.ಎಂ.ಸಿ. ಆವರಣದಲ್ಲಿ ೧೦೦೦ ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣವಿದೆ. ಇಲ್ಲಿ ಸೀಮೆಂಟ್ ರಸ್ತೆ ಆಗಿರುತ್ತದೆ. ಮುಚ್ಚು ಹರಾಜು ಕಟ್ಟೆ ರೂ.೨೫ ಲಕ್ಷ ವೆಚ್ಚದಲ್ಲಿ ಆಗಲಿದೆ.

**ನಾಣ್ಯ ಪದ್ಧತಿ** : ತಾಲ್ಲೂಕಿನ ಚಿಕ್ಕಯಗಟಿ, ನೀರಗುಂದ, ಹುಣವಿನಡು, ಹೊನ್ನೇಕೆರೆ, ಹೆಗ್ಗೆರೆ, ಮತ್ತೋಡು ಮುಂತಾದ ಸ್ಥಳಗಳಲ್ಲಿನ ಶಾಸನಗಳಲ್ಲಿ, ಆಗಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ವೀಸ, ಹಾಗ, ಪಣ, ವರಹ ಗದ್ಯಾಣ ಮುಂತಾದ ವಿವಿಧ ಲೋಹಗಳ ನಾಣ್ಯಗಳ ಉಲ್ಲೇಖಗಳಿವೆ. ಅಲ್ಲದೆ ತಾಲ್ಲೂಕಿನ ವಿವಿಧೆಡೆ ಮನೆ ಕಟ್ಟಲು ಬುನಾದಿ (ಹದಿ) ತೋಡುವ ಸಂದರ್ಭಗಳಲ್ಲಿ ವಿವಿಧ ರೀತಿಯ ನಾಣ್ಯಗಳು ಕಂಡು ಬಂದಿರುವ ಉದಾಹರಣೆಗಳಿವೆ. ಮತ್ತೋಡು ಪಾಳೆಯಗಾರರ ಕಾಲದಲ್ಲಿ ಚಿನ್ನದ ವರಹ ಮತ್ತಿತರ ನಾಣ್ಯಗಳು ಇದ್ದವೆಂದು ದಾಖಲೆಗಳು ತಿಳಿಸುತ್ತವೆ. ಕ್ರಿ.ಶ. ಹದಿನೈದನೇ ಶತಮಾನದ ಬೂದಿಹಾಳು ಪಾಳೆಯಗಾರರ ಕಾಲದಲ್ಲಿ ಹೊನ್ನುಗಳು ಚಲಾವಣೆಯಲ್ಲಿದ್ದ ಬಗ್ಗೆ ಸಾಂಗತ್ಯದಿಂದ ತಿಳಿಯುತ್ತದೆ. ಕಾಲಾಣೆ, ಅರ್ಧ ಆಣೆ ಹಾಗೂ ಒಂದು ಆಣೆ ನಾಣ್ಯಗಳನ್ನು ಬಳಕೆಗೆ ತರಲಾಯಿತು. ಮುಂದೆ ಸಂಸ್ಥಾನವು ಬ್ರಿಟೀಷ್ ಕಮಿಷನ್ನರುಗಳ ಆಡಳಿತಕೊಳ್ಳಪಟ್ಟ ನಂತರ, ಭಾರತೀಯ ನಾಣ್ಯ ಕಾಯ್ದೆ (೧೮೭೦) ಯನ್ನು ಸಂಸ್ಥಾನಕ್ಕೂ ವಿಸ್ತರಿಸಲಾಯಿತು. ಈ ಮೂಲಕ ಬ್ರಿಟೀಷ್ ನಾಣ್ಯಗಳು ಸಂಸ್ಥಾನದ ಅಧಿಕೃತ ನಾಣ್ಯಗಳಾದವು. ೧೮೮೧ರಲ್ಲಿ ಸಂಸ್ಥಾನದ ಆಡಳಿತವು ಮೈಸೂರು ಅರಸರಿಗೆ ಹಸ್ತಾಂತರಗೊಂಡ ಮೇಲೂ ಬ್ರಿಟೀಷ್ ನಾಣ್ಯಗಳು ಅಧಿಕೃತ ನಾಣ್ಯಗಳಾಗಿ ಮುಂದುವರೆದವು. ಮುಂದೆ ೧೯೧೮ರಲ್ಲಿ ಕಾಗದದ ನೋಟುಗಳ ಚಲಾವಣೆ ಪ್ರಾರಂಭಗೊಂಡಿತು. ಅಲ್ಲದೆ, ಬ್ರಿಟೀಷರು ಚಲಾವಣೆಗೆ ತಂದಿದ್ದ ಕಾಸು, ಮೂರು ಕಾಸು, ಆರು ಕಾಸು (ಅರ್ಧ ಆಣೆ) ಮೌಲ್ಯದ ತಾಮ್ರದ ನಾಣ್ಯಗಳು ಚವಿ ಹಾಗೂ ಪಾವಲಿ, ಆಣೆಯ ನಿಕಲ್ ನಾಣ್ಯ ಪದ್ಧತಿ ಹಾಗೂ ಅರ್ಧ ಹಾಗೂ ಒಂದು ರೂಪಾಯಿ ಮೌಲ್ಯದ ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದವು. ಸ್ವಾತಂತ್ರ್ಯ ನಂತರ, ಕೇಂದ್ರ ಸರ್ಕಾರದ ಲಾಂಛನದೊಂದಿಗೆ ನಾಣ್ಯ ಮತ್ತು ಕಾಗದದ ನೋಟು ಚಲಾವಣೆಗೆ ಬಂದವು. ಆದಾಗ್ಯೂ, ಹದಿನಾರಾಣೆಯ ರೂಪಾಯಿ ಮತ್ತು ೧೨ ಕಾಸಿನ ಆಣೆಯು ಮುಂದುವರೆಯಿತು. ಮುಂದೆ ೧೯೫೭ರಲ್ಲಿ ನಾಣ್ಯ ಪದ್ಧತಿಯಲ್ಲಿ

ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು. ಅಲ್ಲಿಂದೀಚೆಗೆ ಭಾರತೀಯ ನಾಣ್ಯ ಪ್ರಗತಿ ಉತ್ತಮವಾಗಿದೆ. ಇಂದು ಆಣೆ ಪೈಸೆಗಳ ಚಲಾವಣೆ ಗೌಣವಾಗಿದ್ದು, ಅರ್ಧರೂಪಾಯಿ ಒಂದು ರೂಪಾಯಿ, ಎರಡು, ಐದು, ಹತ್ತು ರೂಪಾಯಿ ನಾಣ್ಯಗಳು ಚಲಾವಣೆಯಲ್ಲಿವೆ. ನೋಟುಗಳಲ್ಲಿ ೧,೨,೫,೧೦,೨೦,೫೦,೧೦೦,೨೦೦,೫೦೦ ಹಾಗೂ ೨,೦೦೦ ರೂಪಾಯಿ ಮೌಲ್ಯದವು ಜಾರಿಯಲ್ಲಿವೆ. ಕೆಲವು ಸಂದರ್ಭಗಳಲ್ಲಿ ವಿಶೇಷ ನಾಣ್ಯಗಳನ್ನು ಸಂದರ್ಭಕ್ಕೆ ಸೀಮಿತವಾಗಿ ಬಿಡುಗಡೆಗೊಳಿಸಲಾಗಿರುತ್ತದೆ.

**ಸಾರ್ವಜನಿಕ ಪಡಿತರ ವಿತರಣೆ**: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಸಾರ್ವಜನಿಕ ಪಡಿತರ ವ್ಯವಸ್ಥೆಯು ೧೯೪೪ರಷ್ಟು ಹಿಂದೆಯೇ ಅಸ್ತಿತ್ವಕ್ಕೆ ಬಂದಿದ್ದರೂ, ೧೯೪೮ ರಲ್ಲಿ ಅದನ್ನು ರದ್ದುಗೊಳಿಸಲಾಯಿತು. ೧೯೬೫ರಲ್ಲಿ ಇದರ ಅಗತ್ಯತೆಯನ್ನು ಮನಗಂಡು ಆಯ್ದ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಆರಂಭಿಸಲಾಯಿತು.

ಹಿಂದಿನ ಕಾಲದಲ್ಲಿ ದವಸ ಧಾನ್ಯಗಳನ್ನು ಮಾನ, ಕೊಳಗ ಬಳ್ಳ, ಹೇರು ಮುಂತಾದ ಸಾಧನಗಳಿಂದ ಅಳತೆ ಪ್ರಮಾಣಗಳನ್ನು ಗುರ್ತಿಸುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಎಣ್ಣೆ ಮುಂತಾದ ದ್ರವ ಪದಾರ್ಥಗಳನ್ನು ಸೊಳ/ಸೊಲಗ ಮುಂತಾದ ಅಳತೆ ಪ್ರಮಾಣದಿಂದ ಅಳೆಯುತ್ತಿದ್ದರು. ೨೦೧೩-೧೪ರ ಅಂತ್ಯಕ್ಕೆ ತಾಲ್ಲೂಕಿನಲ್ಲಿದ್ದ ೯೫ ಪಡಿತರ ಅಂಗಡಿಗಳಲ್ಲಿ, ಗ್ರಾಮೀಣ ಪ್ರದೇಶದಲ್ಲಿ ೯೦ ಮತ್ತು ನಗರ ಪ್ರದೇಶದಲ್ಲಿ ೦೫ ಇದ್ದವು. ಬಿಪಿಎಲ್ ಪಡಿತರ ಚೀಟಿದಾರರಲ್ಲಿ ೫,೬೯೫ ಅಂತ್ಯೋದಯ ಕಾರ್ಡುದಾರರಿದ್ದು, ಅವರಲ್ಲಿ ಗ್ರಾಮಾಂತರದಲ್ಲಿ ೫,೨೪೫ ಮತ್ತು ಪಟ್ಟಣದಲ್ಲಿ ೪೫೦ ಮಂದಿ ಸೇರಿದ್ದರು. ಒಟ್ಟು ೫,೮೧೫ ಅಕ್ಷಯ ಸಿಲಿಂಡರ್ ಸಹಿತ ಕಾರ್ಡುದಾರರಿದ್ದು, ಇವರಲ್ಲಿ ಗ್ರಾಮೀಣದಲ್ಲಿ ೩,೮೩೬, ಪಟ್ಟಣದಲ್ಲಿ ೧,೯೭೯ ಸೇರಿದ್ದರು. ಒಟ್ಟು ೪೧,೨೭೮ ಅಕ್ಷಯ ಸಿಲಿಂಡರ್ ರಹಿತ ಕಾರ್ಡುದಾರರಿದ್ದು, ೩೮,೯೦೩ ಗ್ರಾಮೀಣ ಹಾಗೂ ೨,೩೭೫ ನಗರ ಕಾರ್ಡುದಾರರು ಸೇರಿದ್ದರು. ಎ.ಪಿ.ಎಲ್. (ಬಡತನ ರೇಖೆಗಿಂತ ಮೇಲ್ಮಟ್ಟದಲ್ಲಿರುವಂತಹ) ಪಡಿತರ ಚೀಟಿದಾರರಲ್ಲಿ ಒಟ್ಟು ೨೨೪೬ ಸಿಲಿಂಡರ್ ಸಹಿತ ಕಾರ್ಡುದಾರರಿದ್ದು, ಅವರಲ್ಲಿ ೧೬೧೬ ಗ್ರಾಮೀಣ ಮತ್ತು ೬೩೦ ನಗರ ಪ್ರದೇಶದ ಕಾರ್ಡುದಾರರಿದ್ದರು. ಒಟ್ಟು ೩,೩೭೬ ಸಿಲಿಂಡರ್ ರಹಿತ ಕಾರ್ಡುದಾರರಿದ್ದು, ಅವರಲ್ಲಿ ೩,೨೨೧ ಗ್ರಾಮೀಣ ಮತ್ತು ೧೫೫ ನಗರ ಕಾರ್ಡುದಾರರಿದ್ದರು. ಹೀಗೆ ೫೮,೪೧೦ ಒಟ್ಟು ಭಾವಚಿತ್ರ ಹೊಂದಿರುವ ಪಡಿತರ ಕಾರ್ಡುದಾರರಿದ್ದು, ಇವರಲ್ಲಿ ೫೨,೮೨೧ ಗ್ರಾಮೀಣ ಮತ್ತು ೫,೫೮೯ ನಗರ ಪ್ರದೇಶದ ಕಾರ್ಡುದಾರರಿದ್ದರು. ೨೦೧೫-೧೬ರಲ್ಲಿ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ೯೨, ನಗರ ಪ್ರದೇಶದಲ್ಲಿ ೫ ಒಟ್ಟು ೯೭ ಪಡಿತರ ಅಂಗಡಿಗಳಿದ್ದವು. ಬಿ.ಪಿ.ಎಲ್ ಪಡಿತರ ಚೀಟಿದಾರರಲ್ಲಿ ೨,೯೧೨ ಮಂದಿ ಅಂತ್ಯೋದಯ ಪಡಿತರ ಚೀಟಿದಾರರು, ೯,೫೨೩ ಮಂದಿ ಅಕ್ಷಯ ಸಿಲಿಂಡರ್

ಸಹಿತ ಪಡಿತರದಾರರು, ೪೩,೨೩೩ ಮಂದಿ ಅಕ್ಷಯ ಸಿಲಿಂಡರ್ ರಹಿತ ಪಡಿತರ ಚೀಟಿದಾರರಿದ್ದರು. ಹಾಗೇಯೇ ಎ.ಪಿ.ಎಲ್. ಪಡಿತರ ಚೀಟಿದಾರರಲ್ಲಿ ೨೦೪ ಮಂದಿ ಸಿಲಿಂಡರ್ ಸಹಿತ, ೩,೩೪೮ ಸಿಲಿಂಡರ್ ರಹಿತ ಪಡಿತರ ಚೀಟಿದಾರರಿದ್ದರು. ಒಟ್ಟು ೫೯,೨೨೦ ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು.

**ಉಗ್ರಾಣ ವ್ಯವಸ್ಥೆ** : ಹಿಂದಿನ ಕಾಲದಲ್ಲಿ ವಾಡೇವು, ಪಣತ, ಮುಂತಾದವುಗಳಲ್ಲಿ ದವಸ ಧಾನ್ಯಗಳನ್ನು ತುಂಬಿಸಿಡುತ್ತಿದ್ದರು. ಎಪ್ಪತ್ತು ವರ್ಷಗಳಷ್ಟು ಹಿಂದೆ, ರೈತರು ನೆಲದ ಹಗೇವುಗಳಲ್ಲಿ ಹೀಗೆ ದವಸ ಧಾನ್ಯಗಳನ್ನು ತುಂಬಿ ಹುಲ್ಲು ಪದರ ಹಾಕಿ ಮಣ್ಣಿನಿಂದ ಮುಚ್ಚಿಡುತ್ತಿದ್ದರು. ಶುದ್ಧವಾದ ಗಾಳಿ ಇಲ್ಲದೆ, ಭೂಮಿಯ ಶಾಖಕ್ಕೆ ಅಥವಾ ಮಳೆಗಾಲದ ತೇವಾಂಶ ಭೂಮಿಗಿಳಿದು ಸಂಗ್ರಹಿಸಿಟ್ಟಿದ್ದ ದವಸ ಧಾನ್ಯಗಳು ಕೆಟ್ಟು ಹೋಗುವ ಪ್ರಸಂಗವೇ ಹೆಚ್ಚಾಗಿರುತ್ತಿದ್ದವು. ೧೯೬೨ರಲ್ಲಿ ಸರ್ಕಾರವು ರೈತರ ಅನುಕೂಲಕ್ಕಾಗಿ ಅಲ್ಲಲ್ಲಿ ಉಗ್ರಾಣಗಳನ್ನು ಅಸ್ತಿತ್ವಕ್ಕೆ ತಂದಿತು. ಹೊಸದುರ್ಗ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ೧೦೦೦ ಮೆಟ್ರಿಕ್ ಟನ್ ಸಾಮರ್ಥ್ಯದ ಗೋದಾಮು ವ್ಯವಸ್ಥೆ ಇದೆ. ಗೋದಾಮುಗಳಲ್ಲಿನ ದಾಸ್ತಾನುಗಳಿಗೆ ಧೂಮೋಪಚಾರ, ಔಷಧ ಸಿಂಪಡಣೆ ಮುಂತಾದ ವಿಧಾನಗಳಿಂದ ದವಸಗಳನ್ನು ರಕ್ಷಿಸಲಾಗುವುದು. ಇತ್ತೀಚೆಗೆ ಕೆಲವು ಗ್ರಾಮಗಳಲ್ಲಿಯೂ ಗೋದಾಮುಗಳನ್ನು ನಿರ್ಮಿಸಲಾಗಿದೆ.

**ತೂಕ ಮತ್ತು ಅಳತೆ** : ತಾಲ್ಲೂಕಿನ ಹೆಗ್ಗೆರೆ, ಚಿಕ್ಕಯಗಟಿ, ಹುಣವಿನಡು, ನೀರಗುಂದ, ಹೊನ್ನೇಕೆರೆ ಮತ್ತು ಇತರೆ ಶಾಸನಗಳಲ್ಲಿ ಆಗಿನ ಕಾಲದಲ್ಲಿದ್ದ ಅಳತೆಯ ವಿವಿಧ ಹೆಸರುಗಳನ್ನು ಅರಿತುಕೊಳ್ಳಬಹುದು. ಕೊಳಗ, ಮಾನ, ಬಳ್ಳ ಮುಂತಾದವುಗಳನ್ನು ದವಸಗಳ ಅಳತೆಯಲ್ಲೂ, ಸೊಳ ಮುಂತಾದವುಗಳನ್ನು ದ್ರವ ಪದಾರ್ಥಗಳ ಅಳತೆಯಲ್ಲೂ ಬಳಸುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಭೂಮಿಯನ್ನು ಅಳೆಯಲು ಕೈಯ್ಯಳತೆ, (ಮಾರು, ಒತ್ತೋಳು ಇತ್ಯಾದಿ) ಮಾಣಿಕದ ಕೋಲು, ಗಡಿಂಬದ ಕೋಲು ಮುಂತಾದವುಗಳನ್ನು ಬಳಸುತ್ತಿದ್ದರು. ಕಂಬದ ಹೆಸರಿನಲ್ಲಿ ಭೂಮಾಪನ ಮಾಡುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆ. ಚಿಕ್ಕಯಗಟಿಯ ಕ್ರಿ.ಶ. ೧೧೯೪ರ ಶಾಸನದಲ್ಲಿ ಹನ್ನೊಂದು ಮಾರು ವೊತ್ತೋಳು ಎಂದು ಮಾವಿನ ಕೆರೆಯ ಉಂಬಳಿಯ ಗದ್ದೆ-ಬೆದ್ದಲು ಭೂಮಿಯ ಅಳತೆಯನ್ನು ತಿಳಿಸಲಾಗಿದೆ. ಹೊನ್ನೇಕೆರೆಯ ಕ್ರಿ.ಶ. ೧೩೦೬ರ ಶಾಸನದಲ್ಲಿ ಮನೆಯೊಂದರ ದತ್ತಿ ವಿಚಾರದಲ್ಲೂ ಕೈ ಅಳತೆಯನ್ನು ಬಡಗ ಅಗಲ ೧೦ ಕಯಿ, ಉದ್ದ ೨೦ ಕಯಿ.......ಮುಂತಾಗಿ ತಿಳಿಸಿದ್ದಾರೆ. ಕ್ರಿ.ಶ. ೧೫೬೬ರ ಬಲ್ಲಾಳ ಸಮುದ್ರದ ಶಾಸನದಲ್ಲಿ, 'ಬೀಜವರಿ ಬೆದ್ದಲು ಹಾಲಪ್ಪನ ಗುಡ್ಡೆಗೆ ತೆಂಕಲು ಒಂದು ದಿನ ಒಂದು ಕೂರಿಗೇಲಿ ಬಿತ್ತುವಷ್ಟು ಭೂಮಿ' ಎಂದು ಹೇಳಲಾಗಿರುವುದು ಸ್ವಾರಸ್ಯವಾಗಿದೆ. ಕಾಲಾನಂತರ, ಅಳತೆ ಕೋಲುಗಳನ್ನು ನಿಗದಿಪಡಿಸಿ ದೇವಸ್ಥಾನಗಳಲ್ಲಿ ಇರಿಸಲಾಗಿರುತ್ತಿತ್ತು ಎಂದು ತಿಳಿದು ಬರುತ್ತದೆ. ೧೯೫೮ರ ಕಾಯ್ದೆಯನ್ವಯ ಮೆಟ್ರಿಕ್ ಪದ್ಧತಿಯನ್ನು ೧೯೬೦ರಲ್ಲಿ ಜಾರಿಗೊಳಿಸಿ ೧೯೬೨ರಲ್ಲಿ

ಕಡ್ಡಾಯಗೊಳಿಸಲಾಯಿತು. ದ್ರವ ಮಾಪನದಲ್ಲಿ ಸೇರು, ಪಾವು, ಚಟಾಕುಗಳ ಬದಲಾಗಿ, ಲೀಟರ್, ವೀಸೆಗೆ ಬದಲು ಕಿಲೋ ಗ್ರಾಮ್ (ಕೆ.ಜಿ.) ಉದ್ದದ ಅಳತೆಗೆ ಗೇಣು, ಮಾರು, ಗಜಕ್ಕೆ ಬದಲಾಗಿ ಸೆಂ.ಮೀ. ಮೀಟರುಗಳು ಬಳಕೆಗೆ ಬಂದವು. ಹಿಂದಿನ ಕಾಲದಲ್ಲಿ ತೆರಿಗೆಯನ್ನು ದವಸ ಧಾನ್ಯಗಳ ರೂಪದಲ್ಲಿ ಸಂಗ್ರಹಿಸುತ್ತಿದ್ದು, ಬರಗಾಲ ಸಂದರ್ಭದಲ್ಲಿ ಜನರಿಗೆ ಪರಿಹಾರವಾಗಿ ನೀಡಲಾಗುತ್ತಿತ್ತು. ಮತ್ತೋಡು ಪಾಳೆಯಗಾರರ ಕಾಲ ಕ್ರಿ.ಶ. ೧೬ ರಿಂದ ೧೭ ನೇ ಶತಮಾನದಲ್ಲಿ ಒಕ್ಕಲುತನ ಮಾಡುವ ರೈತರು ಒಂದು ಬೆಳೆಗೆ ೬ ಸೇರು ದವಸದಂತೆ ಸುಂಕ ಸಲ್ಲಿಸಬೇಕಾಗಿತ್ತು. ಒಂದು ಕುರಿಹುದಿಗೆ ಒಂದು ಕುರಿಯನ್ನು ತೆರಿಗೆಯಾಗಿ ಕೊಡಬೇಕಾಗಿದ್ದಿತು.

ಈಗ ತೂಕ ಮತ್ತು ಅಳತೆಯ ನಿಖರತೆಗಾಗಿ ಅವುಗಳನ್ನು ಪರಿಶೀಲಿಸಲು ತೂಕ ಮತ್ತು ಅಳತೆ ಇಲಾಖೆ, (ಕಾನೂನು ಮಾಪನ ಇಲಾಖೆ) ಕಾರ್ಯ ನಿರ್ವಹಿಸುತ್ತಿದೆ. ವರ್ತಕರು ಹೊಂದಿರುವ ತೂಕ-ಅಳತೆಯ ಸಲಕರಣೆ ಕರಾರುವಾಕ್ಕಾಗಿರುವ ಬಗ್ಗೆ ಆಗಾಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳಲಾಗುತ್ತದೆ. ತಪ್ಪಿತಸ್ಥರಿಗೆ ದಂಡ ವಿಧಿಸುವ ಇಲ್ಲವೆ ಅವರಲ್ಲಿ ಅಳತೆ ಮತ್ತು ತೂಕದ ಸಾಮಗ್ರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಕ್ರಮ ತೆಗೆದುಕೊಳ್ಳಲಾಗುತ್ತದೆ. ತೂಕಕ್ಕಾಗಿ ಇತ್ತೀಚಿನ ವರ್ಷಗಳಲ್ಲಿ ಎಲೆಕ್ಟ್ರಾನಿಕ್ ತಕ್ಕಡಿಗಳನ್ನು ಕಡ್ಡಾಯಗೊಳಿಸಲಾಗಿದೆ. ಬೆಳ್ಳಿ-ಬಂಗಾರದ ಅಂಗಡಿಗಳಲ್ಲಿ, ದಿನಸಿ ಅಂಗಡಿಗಳಲ್ಲಿ ಮುಂತಾದೆಡೆ ಈ ತೂಕದ ಯಂತ್ರಗಳನ್ನು ಕಾಣಬಹುದಾಗಿದೆ. ಆದರೆ ಹೂವಿನ ವ್ಯಾಪಾರಿಗಳು ಇನ್ನು ಮಾರು, ಮೊಳ ಗೇಣಿನ ಅಳತೆಯಲ್ಲಿ ಹೂಗಳನ್ನು ಮಾರುವುದು ವ್ಯಾಪಕವಾಗಿದೆ. ಸಾರಾಸಗಟಾಗಿ ರೈತರಿಂದ ಹೂಗಳನ್ನು ಕೊಳ್ಳುವಾಗ ತೂಕ ಮಾಡುತ್ತಾರೆ. ಅಥವಾ ಗುತ್ತಿಗೆ ಲೆಕ್ಕದಲ್ಲಿ ಪಡೆಯುತ್ತಾರೆ.

## ಅಧ್ಯಾಯ–೭

# ಸಾರಿಗೆ ಮತ್ತು ಸಂಪರ್ಕ

**ಮಾ**ನವ ಸಮಾಜದ ಸರ್ವಾಂಗೀಣ ಪ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯು ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಲಭ್ಯವಿರುವ ಭೌಗೋಳಿಕ ಸಂಪನ್ಮೂಲಗಳ ಸದ್ಬಳಕೆ, ಕಾರ್ಯಶೀಲ ಕೃಷಿರಂಗ, ಉದ್ಯಮಶೀಲ ಕೈಗಾರಿಕಾ ರಂಗ, ಯೋಜನಾಶೀಲ ವಾಣಿಜ್ಯ, ವ್ಯಾಪಾರ, ವಿವೇಚನಾಶೀಲ ಬ್ಯಾಂಕಿಂಗ್, ಪ್ರಗತಿಶೀಲ ಸಾರಿಗೆ ಸಂಪರ್ಕ ವ್ಯವಸ್ಥೆ ಹಾಗೂ ಸೃಜನಶೀಲ ತಾಂತ್ರಿಕ ಬೆಳವಣಿಗೆಗಳು ಅತ್ಯಗತ್ಯವಾಗಿದ್ದು, ಇವುಗಳ ಅರ್ಥಪೂರ್ಣ ಪ್ರಗತಿ, ಆರ್ಥಿಕ ಅಭಿವೃದ್ಧಿಗೆ ಪೂರಕವಾಗುತ್ತದೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ಆರ್ಥಿಕ ಅಂಶಗಳನ್ನು ಪರಸ್ಪರ ಜೋಡಿಸುವಲ್ಲಿ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಅದರಲ್ಲೂ ಈ ರಂಗಕ್ಕೆ ಸಂಬಂಧಿಸಿದಂತೆ ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಾಗಿರುವ ವೈಜ್ಞಾನಿಕ ಪ್ರಗತಿ ಮತ್ತು ಕಂಪ್ಯೂಟರ್ ತಂತ್ರಜ್ಞಾನದ ವಿಸ್ಮಯಗಳು, ಸಾರಿಗೆ–ಸಂಪರ್ಕ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿವೆ. ಸಂಪರ್ಕ ಮಾಧ್ಯಮ ರಂಗಕ್ಕೆ ಸಂಬಂಧಿಸಿದಂತೆ, ಅದರಲ್ಲೂ ಕಂಪ್ಯೂಟರ್ ಅಂತರ್ಜಾಲ ವ್ಯವಸ್ಥೆ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಗಿರುವ ಸಂಶೋಧನೆಗಳಿಂದಾಗಿ ವಿಶಾಲ ಪ್ರಪಂಚವಿಂದು ಕಿರಿದಾಗುತ್ತಿದೆಯೇನೋ ಎಂಬ ಭಾವನೆ ಮೂಡುತ್ತಿದ್ದು, ಸಾವಿರಾರು ಕಿ.ಮೀ.ಗಳ ದೂರ, ಅಂತರ ಎಂದು ಅನಿಸದಂತಾಗಿದೆ. ಇಂದು ಸಂಪರ್ಕ ಮಾಧ್ಯಮದ ಸಕಲ ಸಾಧನಗಳು ಒಂದಲ್ಲಾ ಒಂದು ರೀತಿಯ ತಾಂತ್ರಿಕ ಅಭಿವೃದ್ಧಿಯಿಂದಾಗಿ ಮಾನವನ ದೈನಂದಿನ ಬದುಕನ್ನು ಗಣನೀಯ ಪ್ರಮಾಣದಲ್ಲಿ ಮಾರ್ಪಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

ಕ್ರಿ.ಶ.೧೩೦೩ರ ಜಾನಕಲ್ಲಿನ ಒಂದು ವೀರಗಲ್ಲಿನಲ್ಲಿ, ಕುಮ್ಮಟ ದುರ್ಗದ ಕಂಪಿಲ ದೇವನು ತನ್ನ ಪದಾತಿ ದಳದೊಂದಿಗೆ (ನಡೆದು) ಹೊಳಲಕೆರೆಗೆ ಬಂದಿದ್ದನೆಂದು ಅಲ್ಲಿ

ನಡೆದ ಕಾದಾಟದಲ್ಲಿ ಕೆಂದಾರಿ ದೇವರಸನ ಮಯ್ದುನ ಮಡಿದ ಬಗ್ಗೆ ಹೇಳಲಾಗಿದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ಆಳಿದ ಬೂದಾಳು ಕೋಟೆಯ ಸಿರುಮನನ್ನು ಕುರಿತ ಸಾಂಗತ್ಯದಲ್ಲಿ ಬಾಗೂರಿನಿಂದ ಹಿಂತಿರುಗುವ ಕಾಚನು ವೇದಾವತಿ ನದಿಯನ್ನು ದಾಟಿ ಬೂದಿ ಹಾಳಿಗೆ ಬಂದನೆಂದಿದೆ. ಬಾಗೂರಿನಿಂದ ಚಂದ್ರಾಪುರಿಯನ್ನು, ಆನೆವಾಳವನ್ನು ಹಾಯ್ದು ಶತೃಸೇನೆಯ ದಾರಿ ತಪ್ಪಿಸಲು ನೀರಗುಂದ ನೇರಲ ಕೆರೆಯ ಮಾರ್ಗವಾಗಿ–ಬೂದಿಹಾಳು ತಲುಪಿದ ಬಗ್ಗೆ ಮತ್ತೊಂದು ಸಾಂಗತ್ಯದಲ್ಲಿ ಹೇಳಿದೆ. ಹೀಗೆ ವಿಜಯನಗರದ ಸಾಳುವ ನರಸಿಂಹನ ಸೇನೆಯು ಬೂದಿಹಾಳು ಕೋಟೆಗೆ ಮುತ್ತಿಗೆ ಹಾಕಲು ಬಂದಿದ್ದ ಬಗ್ಗೆ ಆಧಾರಗಳಿಂದ ತಿಳಿಯುತ್ತದೆ. ಹೈದರಾಲಿ ಸೇನೆಯು ಹೊಸದುರ್ಗ–ಬಾಗೂರುಗಳನ್ನು ಮುತ್ತಿಗೆ ಹಾಕಿದ್ದಿತು.

ಪ್ರಾಚೀನ ಕಾಲದಲ್ಲಿದ್ದ ಮಾರ್ಗಗಳ ಬಗ್ಗೆ ಶಾಸನ–ಸಾಂಗತ್ಯಗಳಲ್ಲಿ ಸುಳಿವು ಸಿಗುತ್ತದೆ. ಅಲ್ಲದೆ, ಸೈನಿಕರು, ರಾಜರು ಕುದುರೆಗಳಲ್ಲಿ ಸಾಮಾನ್ಯ ಜನರು ಮತ್ತು ಕಾಲ್ದಳದವರು ನಡೆದುಕೊಂಡು ಹೋಗುತ್ತಿದ್ದರೆಂದು ಮನನವಾಗುವುದು. ಕ್ರಿ.ಶ. ೧೮೦೦ರಲ್ಲಿ ಫ್ರಾನ್ಸಿಸ್ ಬುಕಾನನ್ (ಬ್ರಿಟೀಷ್ ಪ್ರತಿನಿಧಿ) ಮೇ ತಿಂಗಳಲ್ಲಿ ಹೊಸದುರ್ಗ ತಾಲ್ಲೂಕಿನ ಚಿಕ್ಕಬ್ಯಾಲದಕೆರೆ, ಕುದುರೆಕಣಿವೆ, ಕಗ್ಗಲಕಟ್ಟೆ, ಲಕ್ಕೇಹಳ್ಳಿ, ಮತ್ತೋಡು, ಕೆಲ್ಲೋಡು, ಸಿದ್ಧಗೊಂಡನಹಳ್ಳಿ, ಕಂದಿಕೆರೆ, ಚಿಕ್ಕತೇಕಲವಟ್ಟಿ, ಮಾವಿನ ಕಣಿವೆ, ದೊಡ್ಡತೇಕಲವಟ್ಟಿ ಮತ್ತು ಬೆಲಗೂರು ಗ್ರಾಮಗಳನ್ನು ಹಾಗೂ ಅಲ್ಲಿನ ಕಣಿವೆ ಪ್ರದೇಶಗಳಿಗೆ ಭೇಟಿಯಿತ್ತು ಅಧ್ಯಯನ ಮಾಡಿ, ಹಿಂದಿನ ಕಾಲದಲ್ಲಿ ಕುದುರೆ ಕಣಿವೆಯ ಗಣಿಗಳಿಂದ ಕಬ್ಬಿಣದ ಅದಿರು ಕರಗಿಸುವ ಕುಲುಮೆಗಳಲ್ಲಿ ಅದಿರು ಕರಗಿಸಲಾಗುತ್ತಿತ್ತು ಎಂದು ಬರೆದಿದ್ದಾನೆ. ಇದರಿಂದ ಆ ಕಾಲದಲ್ಲಿ ಸರಕು ಸಾಗಣೆಗೆ ಕತ್ತೆ, ಕುದುರೆ, ಕೋಣಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರೆಂಬ ಅಂಶ ದೃಢಪಡುವುದು. ಬಾಗೂರಲ್ಲಿ ಆಗಿನ ಕಾಲದಲ್ಲಿ ಬೆಳೆಯುತ್ತಿದ್ದ ಸಣ್ಣಕ್ಕಿಯನ್ನು ಕತ್ತೆಗಳ ಮೇಲೆ ಹೇರಿಕೊಂಡು ಮಲೆನಾಡಿಗೆ ಹೋಗಿ ಅಲ್ಲಿಂದ ಬೇರೆ ಬೇರೆ ದಿನಸಿಗಳನ್ನು ವಿನಿಮಯ ಮಾಡಿಕೊಂಡು ತರುತ್ತಿದ್ದ ಬಗ್ಗೆ ಐತಿಹ್ಯವಿದೆ. ಚೌಳು, ಕಟಕ, ರಂಗೋಲಿ, ಉಪ್ಪನ್ನು ಸಹ ಇದೇ ರೀತಿ ಸಾಗಾಣಿಕೆ ಮಾಡಲಾಗಿತ್ತಿದ್ದಿತು. ಕಾಡುದಾರಿಗಳಲ್ಲಿ ಸಾಗಲು ಕತ್ತೆಗಳ ಮೇಲೆ ಸವಾರಿ ಮೂಲಕ ಪ್ರಯಾಣ ಮಾಡುತ್ತಿದ್ದದೂ ಉಂಟು. ಕ್ರಿ.ಶ. ೧೭–೧೮ನೇ ಶತಮಾನಗಳಲ್ಲಿ ಚಿತ್ರದುರ್ಗದ ಪಾಳೆಯಗಾರರು ಕಬ್ಬಿಣದ ಅದಿರನ್ನು ಚಿಕ್ಕಬ್ಯಾಲದ ಕೆರೆಯಿಂದ ಕೋಣದ ಬಂಡಿಗಳಲ್ಲಿ ಹೊಸದುರ್ಗ–ಜಾನಕಲ್ಲು ಮಾರ್ಗವಾಗಿ ಚಿತ್ರದುರ್ಗಕ್ಕೆ ತರಿಸಿಕೊಳ್ಳುತ್ತಿದ್ದರು.

ಸುಮಾರು ಅರವತ್ತು ವರ್ಷಗಳಿಗೂ ಹಿಂದೆ ಹೊಸದುರ್ಗದಲ್ಲಿ ಚಾರ್ಕೋಲು, ಇದ್ದಿಲು ಬಳಸಿ ಓಡಿಸುತ್ತಿದ್ದ ಬಸ್ಸುಗಳು ಇದ್ದ ಬಗ್ಗೆ ಜನರು ಮಾತಾಡುತ್ತಾರೆ. ಹೊಸದುರ್ಗದಿಂದ ಹೊಸದುರ್ಗರೋಡ್‌ಗೆ ಇಂಥ ಒಂದು ಬಸ್ಸು ಓಡಾಡುತ್ತಿದ್ದಿತು.

ಹೊಯ್ಸಳರ ಕಾಲದ ನೀರಗುಂದದ ಗಣೇಶ ವಿಗ್ರಹವನ್ನು ೧೯೨೩ರಲ್ಲಿ ಹೊಸದುರ್ಗಕ್ಕೆ ಸಾಗಿಸಲು ಅಮಲ್ದಾರ್ ಸುಬ್ರಹ್ಮಣ್ಯಶಾಸ್ತ್ರಿಯವರು ಎರಡು ಬಂಡಿಗಳನ್ನು ಒಂದರ ಹಿಂದೆ ಒಂದನ್ನು ಕಟ್ಟಿ ನಾಲ್ಕಾರು ಎತ್ತುಗಳನ್ನು ಬಳಸಿದ್ದರು. ೧೮೮೬ರಲ್ಲಿಯೇ ಹೊಸದುರ್ಗ ರೋಡ್‌ಗೆ ಸಂಪರ್ಕ ಆಗಿದ್ದಿತೆನ್ನಲಾಗಿದೆ. ೧೯೩೭ರಲ್ಲಿ ಹೊಸದುರ್ಗದಿಂದ ಹೊಸದುರ್ಗ ರೈಲ್ವೆ ಸ್ಟೇಷನ್‌ಗೆ ರಸ್ತೆಯ ನಿರ್ಮಾಣವಾಯಿತು. ಈ ರಸ್ತೆ ನಿರ್ಮಾಣ ಸಂದರ್ಭದಲ್ಲಿ ಬಾಗೂರಿನ ಚನ್ನಕೇಶವ ಗುಡಿ ಎದುರಿಗಿದ್ದ ಬತೇರಿಯನ್ನು ನೆಲಸಮಗೊಳಿಸಲಾಯಿತು. ರೈಲು ಮಾರ್ಗವು ಮೊದಲಿದ್ದ ನೀಲಿ ನಕ್ಷೆ ಪ್ರಕಾರ ಹೊಸದುರ್ಗ ಮತ್ತು ಬಾಗೂರು ಮಧ್ಯದಲ್ಲಿ ಹಾಯ್ದು ಹೋಗುವಂತೆ ಇದ್ದಿತೆಂದೂ, ರೈಲು ಬಂದರೆ ಕಾಯಿಲೆಗಳು (ಪ್ಲೇಗು ಮುಂತಾದವು) ಹೆಚ್ಚಾಗುತ್ತವೆಂದು ಜನರು ಹೆದರಿ ಎರಡೂ ಊರುಗಳಿಂದ ದೂರಕ್ಕೆ, ಹೊಸದುರ್ಗ ತಾಲ್ಲೂಕಿನ ಗಡಿಯಾಚೆಗೆ ಹೋಗುವಂತೆ ಒತ್ತಾಯಿಸಿ ಮನವಿ ಸಲ್ಲಿಸಿ, ಊರ ಹೊರಗೆ ಹೋಗುವಂತೆ ರೈಲು ಮಾರ್ಗ ಹಾಕಿಸಿದರು ಎಂಬ ಮಾತಿದೆ. ಹಿಂದೆ ಆಲಂಪಲ್ಲಿ ನೀಲಕಂಠಶೆಟ್ಟರ ಸಿದ್ದೇಶ್ವರ ಬಸ್, ಹೊಸದುರ್ಗದಿಂದ ಹೊಸದುರ್ಗ ರೈಲ್ವೆ ಸ್ಟೇಷನ್‌ಗೆ ರೈಲಿನ ವೇಳೆಗೆ ಸರಿಯಾಗಿ ಹೋಗಿ ಬರುತ್ತಿದ್ದಿತು. ಮಂಟೇನ ಹಳ್ಳಿಯವರು ಸಹ ಒಂದು ಬಸ್ ಓಡಿಸುತ್ತಿದ್ದರು. ಕಾಳಿಸೆಟ್ಟೆಪ್ಪನವರ ಅಶೋಕ ಬಸ್ ಇದ್ದಿತು. ಬುಡ್ಡಾಂಜನೇಯ ಬಸ್ ಹೊಸದುರ್ಗದಿಂದ ಚಿಕ್ಕಮಗಳೂರಿಗೆ ಹೋಗಿ ಬರುತ್ತಿತ್ತು. ಕೆಲವು ಬಸ್‌ಗಳಿಗೆ ಎಂಜಿನ್‌ನ ಮುಂದೆ ರಾಡ್ ಹಾಕಿ ತಿರುವಿದಾಗ ಸ್ಟಾರ್ಟ್ ಆಗುವ ಸಿಸ್ಟಮ್ ಇದ್ದಿತು.

ತಾಲ್ಲೂಕಿನಲ್ಲಿ ಹರಿಯುವ ವೇದಾವತಿ ನದಿಗೆ ಮೊದಲು ಸೇತುವೆ ಇರಲಿಲ್ಲ. ಕೆಲ್ಲೋಡು ಬಳಿ ನದಿಗೆ ಸೇತುವೆ ನಿರ್ಮಿಸಲು ಮೈಸೂರು ಒಡೆಯರ್ ಸಂಸ್ಥಾನವು ತೀರ್ಮಾನಿಸಿದ್ದರಿಂದ, ದಿನಾಂಕ ೮-೨-೧೯೩೭ರಂದು ಸೇತುವೆ ನಿರ್ಮಾಣ ಕಾಮಗಾರಿಗೆ ಆಗಿನ ಮೈಸೂರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರು ಶಂಕು ಸ್ಥಾಪನೆಯನ್ನು ನೆರವೇರಿಸಿದರು. ವಾಣಿವಿಲಾಸ ಸಾಗರದ ಅಣೆಕಟ್ಟೆಯ ನಿರ್ಮಾಣದಲ್ಲಿ ಉಳಿದಿದ್ದ ಸಾಮಗ್ರಿಗಳನ್ನು ಬಳಸಿಕೊಂಡು, ಈ ಸೇತುವೆಯನ್ನು ಕಟ್ಟಲಾಗಿದೆ ಎನ್ನಲಾಗಿದ್ದು, ದಿನಾಂಕ ೨೪-೦೨-೧೯೪೦ ರಂದು ಮೈಸೂರು ಸಂಸ್ಥಾನದ ಮಹಾರಾಜರಾದ ಕೃಷ್ಣರಾಜ ಒಡೆಯರ್ ಅವರು ಸೇತುವೆಯನ್ನು ಉದ್ಘಾಟಿಸಿದರು. ಈ ಸೇತುವೆಗೆ ಶ್ರೀ ಕೃಷ್ಣರಾಜೇಂದ್ರ ಸೇತುವೆ ಎಂದು ಹೆಸರಿಡಲಾಗಿದ್ದು, ಮೇಲ್ಕಂಡ ಮೂರು ಫಲಕಗಳು ಸೇತುವೆಯ ಬಳಿ ಇಂದಿಗೂ ಇವೆ. ಜನರು ಮಾತ್ರ ಈ ಸೇತುವೆಯನ್ನು ಕೆಲ್ಲೋಡು ಸೇತುವೆ ಎಂದೇ ಕರೆಯುವುದು ರೂಢಿಯಾಗಿದೆ. ಸ್ವಾತಂತ್ರ್ಯ ನಂತರದ ಕಾಲದಲ್ಲಿ ತಾಲ್ಲೂಕಿನ ಅನೇಕ ರಸ್ತೆಗಳು ನಿರ್ಮಾಣಗೊಂಡಿದ್ದು, ರಸ್ತೆಗೆ ಅಡ್ಡವಾಗಿ ಹರಿಯುತ್ತಿದ್ದ ಕೆಲವು ಹಳ್ಳ, ತೊರೆ, ಝರಿ ಮುಂತಾದ ಕೊರಕಲು ಪ್ರದೇಶಗಳಲ್ಲಿ ಸೇತುವೆಗಳನ್ನು ನಿರ್ಮಿಸಿ ಸುಗಮ ಸಂಚಾರಕ್ಕೆ ಅಣಿಗೊಳಿಸಲಾಗಿದೆ. ಮಹಾರಾಜರ

ಕಾಲದಲ್ಲಿ ಇಲ್ಲಿನ ಗವಿರಂಗನಾಥಸ್ವಾಮಿ ಹಾಗೂ ಮೈಲಾರಲಿಂಗ ಬೆಟ್ಟಕ್ಕೆ ಹತ್ತಲು ಸಹಾಯಕವಾಗುವಂತೆ ಮೆಟ್ಟಿಲುಗಳನ್ನು ಹಾಕಿಸಿದ್ದರೆನ್ನಲಾಗಿದೆ.

**ಪ್ರಾದೇಶಿಕ ಸಾರಿಗೆ ಕಛೇರಿ**

ಈ ಇಲಾಖೆಯ ಹೆಸರು ಸಾರಿಗೆ ಇಲಾಖೆ ಎಂದು ಬದಲಾಗುವುದಕ್ಕೆ ಮೊದಲು 'ಮೋಟಾರ್ ವಾಹನಗಳ ಇಲಾಖೆ' ಎಂದೇ ಚಿರಪರಿಚಿತವಾಗಿತ್ತು. ರಾಜ್ಯದ ಬೊಕ್ಕಸಕ್ಕೆ ಅಧಿಕ ಆದಾಯ ತರುವ ಕೆಲವೇ ಇಲಾಖೆಗಳಲ್ಲಿ ಒಂದಾಗಿರುವ ಈ ಇಲಾಖೆಯು ಮೋಟಾರು ವಾಹನಗಳ ನೋಂದಣಿ, ನಿಯಂತ್ರಣ, ತೆರಿಗೆ ಸಂಗ್ರಹ, ಚಾಲಕರಿಗೆ, ನಿರ್ವಾಹಕರಿಗೆ ಪರವಾನಗಿ ನೀಡಿಕೆ ಮುಂತಾದ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತದೆ. i) ೧೯೩೯ರ ಮೋಟಾರು ವಾಹನಗಳ ಕಾಯ್ದೆ, ೧೯೩೯ರ ಕೇಂದ್ರ ಕಾಯ್ದೆ IV, ii), ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮ ಕಾಯ್ದೆ ೧೯೫೭, iii) ೧೯೬೩ರ ಕರ್ನಾಟಕ ಮೋಟಾರು ವಾಹನಗಳ ನಿಯಮ, iv) ಮೋಟಾರು ವಾಹನಗಳ ಅಧಿನಿಯಮ, (೧೯೮೮ರ ೫೯ನೇ ಕೇಂದ್ರ ಅಧಿನಿಯಮ), v) ಕರ್ನಾಟಕ ಮೋಟಾರು ವಾಹನಗಳ ನಿಯಮ ೧೯೮೯, vi) ಕೇಂದ್ರ ಸರ್ಕಾರದ ಮೋಟಾರು ವಾಹನಗಳ ಅಧಿನಿಯಮ ೧೯೮೯ ಮುಂತಾದ ಕಾಯ್ದೆ ನಿಯಮಗಳನ್ವಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಎಲ್ಲಾ ಕಾರ್ಯಗಳ ಜೊತೆಗೆ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ರೂಪಿಸುವ ಕಾಯ್ದೆಗಳನ್ನು ಜಿಲ್ಲಾಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಅನುಷ್ಠಾನಗೊಳಿಸುತ್ತವೆ.

ಈ ಇಲಾಖೆಯು ಕಾರ್ಯಾರಂಭ ಮಾಡುವುದಕ್ಕೆ ಪೂರ್ವದಲ್ಲಿ ಸಾರಿಗೆ ಸಂಚಾರ, ವಾಹನ ನಿಯಂತ್ರಣಗಳಂತಹ ಕಾರ್ಯಗಳನ್ನು ಜಿಲ್ಲಾ ಬೋರ್ಡು, ಪುರಸಭೆಗಳು–ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ನಿರ್ವಹಿಸುತ್ತಿದ್ದವು. ೧೯೧೧ರ ಮೈಸೂರು ಸಾರ್ವಜನಿಕ ಸಂಚಾರ ನಿಯಂತ್ರಣ ಕಾಯ್ದೆಯಂತೆ ಸಾರ್ವಜನಿಕ ವಾಹನ ಸಂಚಾರದ ನಿಯಂತ್ರಣ ಕಾಯ್ದೆಯನ್ವಯ ವಾಹನಗಳ ನೋಂದಣಿ ಹಾಗೂ ವಾಹನ ಚಾಲನಾ ಪರವಾನಗಿಯನ್ನು ಕಡ್ಡಾಯ ಮಾಡಿ ವಾಹನ ಚಾಲಕರಿಗೆ ಪರವಾನಗಿ ನೀಡಲಾಗುತ್ತಿತ್ತು.

ಮೋಟಾರು ವಾಹನಗಳಿಗೆ ಸಂಚಾರ ಪರವಾನಗಿ ನೀಡುವ ಅಧಿಕಾರ ೧೯೨೯ರ ಮೈಸೂರು ಮೋಟಾರು ವಾಹನ ಕಾಯ್ದೆಯಂತೆ ಬೆಂಗಳೂರಿನಲ್ಲಿದ್ದ ಐ.ಜಿ.ಪಿಯವರಿಗೆ ಇತ್ತು. ಜಿಲ್ಲಾ ದಂಡಾಧಿಕಾರಿಗಳಿಗೆ ಆಯಾ ಜಿಲ್ಲೆಗಳಲ್ಲಿ ವಾಹನಗಳಿಗೆ ಲೈಸೆನ್ಸ್ ನೀಡುವ ಅಧಿಕಾರವನ್ನು ೧೯೩೭ರಲ್ಲಿ ವಹಿಸಲಾಯಿತು. ಪ್ರಜಾ ಪ್ರತಿನಿಧಿ ಸಭೆಯ

ನಾಯಕ, ಅಧಿಕಾರಿ ಹಾಗೂ ಅಧಿಕಾರೇತರರನ್ನು ಸದಸ್ಯರನ್ನಾಗಿ ಒಳಗೊಂಡಿದ್ದ ಮೈಸೂರು ಸಾರಿಗೆ ಬೋರ್ಡು, ಮೈಸೂರು ರಸ್ತೆ ಸಾರಿಗೆ ಹಾಗೂ ತೆರಿಗೆ ನಿಯಂತ್ರಣ ಕಾಯ್ದೆಯನ್ನು ೧೯೩೬ರ ಜನವರಿ ೧ ರಂದು ಜಾರಿಗೆ ತರುವ ಮೂಲಕ ಮೋಟಾರು ಸಾರಿಗೆ ನಿಯಂತ್ರಣ ಹಾಗೂ ತೆರಿಗೆ ಕಾಯ್ದೆಗಳಲ್ಲಿ ಏಕರೂಪತೆ ತರಲು ಯತ್ನಿಸಿತು. ತತ್ಪರಿಣಾಮವಾಗಿ ಜಿಲ್ಲಾ ಬೋರ್ಡಿನ ಹಾಗೂ ಪುರಸಭೆಗಳಿಗೆ ಆವರೆಗೆ ಇದ್ದ ತೆರಿಗೆ ವಿಧಿಸುವ ಅಧಿಕಾರ ರದ್ದಾಯಿತು. ಅದಕ್ಕಾಗಿ ಪುರಸಭೆಗಳಿಗೆ ಪರಿಹಾರವನ್ನು ನೀಡಲಾಯಿತು. ಅಲ್ಲದೇ ಪ್ರತ್ಯೇಕ ರಸ್ತೆ ನಿಧಿಯನ್ನೂ ಆರಂಭಿಸಲಾಯಿತು. ಈ ಬೋರ್ಡು ಮೇಲಿಂದ ಮೇಲೆ ಸಭೆ ಸೇರಿ ಕ್ರಮಕೈಗೊಳ್ಳುತ್ತಿತ್ತು. ತೆರಿಗೆ ಸಂಗ್ರಹಕ್ಕಾಗಿ ಟೋಲ್‌ಗಳನ್ನು ತೆರೆಯಲಾಯಿತು. ಮೋಟಾರು ವಾಹನಗಳ ಪ್ರವಾಸಿಗರಿಗೆ ಅನುಕೂಲವಾಗಲೆಂದು, ಸಂಸ್ಥಾನದ ಗಡಿಗಳಲ್ಲಿದ್ದ ಟೋಲ್ ಗೇಟಿನ ಮುತ್ಸದ್ಧಿಗಳಿಗೆ ಅಲ್ಪಾವಧಿಯ ಪರ್ಮಿಟ್ ನೀಡುವ ಅಧಿಕಾರವಿತ್ತು. ೧೯೨೭ರಲ್ಲಿ ಸಂಸ್ಥಾನದಲ್ಲಿ ಒಟ್ಟು ೮೨ ಉಕ್ಕಡಗಳಿದ್ದವು. ಮೋಟಾರು ಸೈಕಲ್ ಹಾಗೂ ಕಾರುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಾಯಿತು (೧೯೨೭). ಮೋಟಾರು ಸೈಕಲ್ ಹೊರತುಪಡಿಸಿ ಉಳಿದೆಲ್ಲಾ ವಾಹನಗಳಿಗೂ ಹಿಂಗನ್ನಡಿಯನ್ನು ಕಡ್ಡಾಯ ಮಾಡಲಾಯಿತು. ಬಸ್ಸು ನಿರ್ವಾಹಕರ ಪರವಾನಗಿಗಳನ್ನು ನವೀಕರಿಸಲಾಯಿತು. ಅಪಘಾತ ತಡೆಗಟ್ಟಲು ನಗರ ವ್ಯಾಪ್ತಿಯಲ್ಲಿ ಕಾರುಗಳಿಗೆ ಗಂಟೆಗೆ ೩೦ ಮೈಲಿ, ಬಸ್ಸು, ಲಾರಿಗಳಿಗೆ ಗಂಟೆಗೆ ೨೦ ಮೈಲಿ ವೇಗವನ್ನು ೧೯೨೯ರಲ್ಲಿ ನಿಗದಿಪಡಿಸಲಾಯಿತು. ರಾಜ್ಯ ಸಾರಿಗೆ ಇಲಾಖೆಯನ್ನು ದಕ್ಷಿಣ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ನಡೆಸಲು ೧೯೪೦ರಲ್ಲಿ ತೀರ್ಮಾನಿಸಲಾಯಿತು. ಸಾರ್ವಜನಿಕ ಸೇವಾ ಮೋಟಾರು ಹಾಗೂ ಖಾಸಗಿ ಸ್ಥಿತಿ-ಗತಿ ಅರಿಯಲು ಅಚ್ಚರಿ ತಪಾಸಣೆ ಮಾಡುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಕೋರಲಾಯಿತು. ಅದೇ ವರ್ಷ ಚಾಲಕರು ಹಾಗೂ ನಿರ್ವಾಹಕರುಗಳಿಗೆ ಪ್ರಥಮ ಚಿಕಿತ್ಸೆ ತರಬೇತಿಯನ್ನು ಕಡ್ಡಾಯ ಮಾಡಲಾಯಿತು. ಬಸ್ಸುಗಳ ಆಸನ ಸಾಮರ್ಥ್ಯ, ಟ್ಯಾಕ್ಸಿಗಳಿಗೆ ಮೀಟರ್ ಜೋಡಣೆ ಹಾಗೂ ಬಾಡಿಗೆಗಳನ್ನು ೧೯೪೨ರಲ್ಲಿ ನಿಗದಿಪಡಿಸಲಾಯಿತು.

ಯುರೋಪಿನಲ್ಲಿ ೧೯೪೨-೪೫ರಲ್ಲಿ ಎರಡನೆಯ ಜಾಗತಿಕ ಯುದ್ಧ ನಡೆದಿದ್ದಾಗ, ಮೈಸೂರು ರಸ್ತೆ ವರ್ಗೀಕರಣ ಸಮಿತಿಯ ಸಲಹೆಯಂತೆ ಸಂಸ್ಥಾನದ ಒಳಗಿದ್ದ ಟೋಲ್‌ಗಳನ್ನು ರದ್ದುಪಡಿಸಲಾಯಿತು. ಅದರಿಂದ ಉಂಟಾಗುವ ನಷ್ಟವನ್ನು ಭರಿಸಲು ಮೋಟಾರು ವಾಹನ ತೆರಿಗೆಯನ್ನು ಹೆಚ್ಚಿಸಲು ಮೈಸೂರು ಸಾರಿಗೆ ಬೋರ್ಡು ಒಪ್ಪಿತು. ಟೈರು, ಪೆಟ್ರೋಲ್‌ಗಳನ್ನು ಪಡಿತರ ವ್ಯವಸ್ಥೆಗೆ ಒಳಪಡಿಸಲಾಯಿತು. ಆದರೂ ಸಾರ್ವಜನಿಕ ಬಸ್ ಸಂಚಾರ ಮಾರ್ಗಗಳನ್ನೂ ಯಥಾ ರೀತಿಯಲ್ಲಿ ಮುಂದುವರಿಸಲಾಯಿತು. ೧೯೪೬ರ ಮೋಟಾರ್ ವಾಹನ ಹಾಗೂ ರಸ್ತೆ ಸಾರಿಗೆ ಕಾಯ್ದೆಯಂತೆ ಮೂರನೇಯ ಪಾರ್ಟಿಗೆ ಜೀವವಿಮೆ ಮಾಡುವುದನ್ನು

ಕಡ್ಡಾಯಗೊಳಿಸಲಾಯಿತು. ೧೯೪೮ರಲ್ಲಿ ಜಿಲ್ಲಾ ಪೋಲೀಸ್ ಕಮೀಷನರು ಪಾರ್ಟಿಗೆ ಜೀವ ವಿಮೆ ಮಾಡುವುದನ್ನು ಕಡ್ಡಾಯಗೊಳಿಸಲಾಯಿತು. ೧೯೪೮ರಲ್ಲಿ ಜಿಲ್ಲಾ ಪೋಲೀಸ್ ಕಮೀಷನರು ಮೂರನೇಯ ಚಾಲಕರಿಗೆ ಪರವಾನಿಗೆ ನೀಡುವ ಅಧಿಕಾರ ಹೊಂದಿದ್ದು, ಐಜಿಪಿಯವರು ವಾಹನ ನೋಂದಣಿ ಅಧಿಕಾರಿಗಳಾಗಿದ್ದರು. ೧೯೪೮–೪೯ರಲ್ಲಿ ಪೆಟ್ರೋಲ್ ಕೊರತೆ ಹಾಗೂ ರಸ್ತೆ ಸಾರಿಗೆ ರಾಷ್ಟ್ರೀಕರಣ ನೀತಿಗಳಿಂದಾಗಿ ಬಸ್ ಪರ್ಮಿಟ್‌ಗಳನ್ನು ನಿಯಂತ್ರಿಸಲಾಯಿತು. ೧೯೫೦ರಲ್ಲಿ ಆಟೋರಿಕ್ಷಾಗಳಿಗೆ ಪರ್ಮಿಟ್ ನೀಡಿ ತೆರಿಗೆಗಳನ್ನು ನಿಗದಿಪಡಿಸಿ, ಕನಿಷ್ಟ ಪ್ರಯಾಣ ದರವನ್ನೂ ನಿರ್ಧರಿಸಲಾಯಿತು. ಹೀಗೆ ೧೯೪೪ರಲ್ಲಿ ಸ್ಥಾಪಿಸಲ್ಪಟ್ಟ ಮೈಸೂರು ಸಾರಿಗೆ ಬೋರ್ಡು ೧೯೫೭ ರವರೆಗೆ ಅಸ್ತಿತ್ವದಲ್ಲಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿತು. ಮುಂದೆ ಮೋಟಾರು ವಾಹನ ಇಲಾಖೆಯು ೧೯೫೭ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಐದು ವಿಭಾಗೀಯ ಕಛೇರಿಗಳನ್ನು ಆರಂಭಿಸಲಾಯಿತು. ೧೯೫೭ರ ಏಪ್ರಿಲ್ ೧ ರಂದು ಮೈಸೂರು ಪ್ರಾದೇಶಿಕ ಸಾರಿಗೆ ವಿಭಾಗದ ವ್ಯಾಪ್ತಿಗೆ ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳೊಳಪಟ್ಟಿದ್ದವು. ಹಿಂದೆಯೇ ಜಿಲ್ಲೆಗೊಂದೊಂದು ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ತೆರೆಯಲು ಸರ್ಕಾರವು ಮುಂದಾಯಿತು.

ಮೋಟಾರು ವಾಹನ ಇಲಾಖೆಯ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಜಿಲ್ಲಾಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವನ್ನು ೧೯೫೮ರ ಜನವರಿ ೧ ರಂದು ಆರಂಭಿಸಲಾಯಿತು. ಜಿಲ್ಲಾಧಿಕಾರಿಯು ಅದರ ಅಧ್ಯಕ್ಷರಾಗಿದ್ದು, ಜಿಲ್ಲಾ ಪೋಲೀಸ್ ಅಧೀಕ್ಷಕರು ಸದಸ್ಯರಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಯು ಪದನಿಮಿತ್ತ ಕಾರ್ಯದರ್ಶಿಯಾಗಿದ್ದು, ಇದು ಭಾಗಶಃ ನ್ಯಾಯಾಂಗದಂತೆ ಕಾರ್ಯನಿರ್ವಹಿಸುತ್ತಿತ್ತು. ವಾಹನಗಳ ಮಾಲೀಕರಿಗೆ ಆಗಬಹುದಾದ ಅನಗತ್ಯ ವಿಳಂಬವನ್ನು ತಡೆಗಟ್ಟಲು ೧೯೫೭ರ ಮೋಟಾರು ಕಾಯ್ದೆಯನ್ವಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳೂ ಸೇರಿದಂತೆ ಎಲ್ಲಾ ತಾಲ್ಲೂಕು ಖಜಾನಾಧಿಕಾರಿಗಳಿಗೂ ಲೈಸೆನ್ಸ್ ನೀಡುವ ಅಧಿಕಾರವಿತ್ತು. ಸಂಚಾರ ನಿಯಂತ್ರಣ ಪೋಲೀಸ್ ಇಲಾಖೆಯದಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಾಹನ ನೋಂದಣಿ ಹಾಗೂ ಪರವಾನಗಿ (ಪರ್ಮಿಟ್) ನೀಡುತ್ತಿದ್ದರು. ಕಡ್ಡಾಯ ವಿಮೆ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ಚಾಲಕರು ಹಾಗೂ ನಿರ್ವಾಹಕರುಗಳಿಗೆ ಲೈಸೆನ್ಸ್ ನೀಡುವುದರ ಜೊತೆಗೆ ವಾಹನಗಳನ್ನು ನೋಂದಾಯಿಸಬೇಕಾಗಿತ್ತು. ಆ ಪ್ರಕಾರ ಇಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನೋಂದಾಯಿಸಲ್ಪಡುವ ವಾಹನಗಳಿಗೆ ಜಿಲ್ಲಾ ಕೋಡನ್ನು ನೀಡಲಾಗುತ್ತದೆ.

## ಭೂ ಸಾರಿಗೆ

ಭೂ ಸಾರಿಗೆಯು ದೇಶ, ರಾಜ್ಯ, ಜಿಲ್ಲೆಯ ಮತ್ತು ತಾಲ್ಲೂಕಿನ ಪ್ರಗತಿಯಲ್ಲಿ ಹಂತ ಹಂತವಾಗಿ ಪಾತ್ರ ನಿರ್ವಹಿಸುತ್ತಾ ಬಂದಿದೆ. ರಸ್ತೆ ಸಾರಿಗೆ ಜವಾಬ್ದಾರಿಯನ್ನು ರಾಜರ ಕಾಲದಿಂದಲೂ ಗಮನಿಸಿ ಪ್ರಗತಿಗೆ ಶ್ರಮಿಸಲಾಗುತ್ತಿದೆ. ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆಗಳು, ನೀರಾವರಿ ಇಲಾಖೆಯ ರಸ್ತೆಗಳು, ಅರಣ್ಯ ರಸ್ತೆಗಳು ಹೀಗೆ ವಿವಿಧ ರೀತಿಯ ರಸ್ತೆಗಳಿವೆ. ರಾಷ್ಟ್ರೀಯ ಹೆದ್ದಾರಿಯು ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ವಹಿಸಲ್ಪಡುತ್ತದೆ. ಕೇಂದ್ರ ಸರ್ಕಾರವು ಈ ಇಲಾಖೆಗೆ ಹಣಕಾಸನ್ನು ಒದಗಿಸುತ್ತದೆ. ಪೂನಾ–ಬೆಂಗಳೂರು ರಸ್ತೆಯು ಹೊಸದುರ್ಗ ಮೂಲಕ ಹಾದು ಹೋಗುತ್ತದೆ. ನಗರವು ಕೈಗಾರಿಕಾ, ವಾಣಿಜ್ಯ, ವಿದ್ಯಾನಗರಿಯಾಗಿ ರೂಪುಗೊಳ್ಳಲು ಈ ರಸ್ತೆಯು ಪೂರಕವಾಗಿದೆ.

## ರಾಷ್ಟ್ರೀಯ ಹೆದ್ದಾರಿ

ದೇಶದ ವಿವಿಧ ಭಾಗಗಳೊಂದಿಗೆ ಹಾಗೂ ವಿವಿಧ ರಾಜ್ಯ ಹೆದ್ದಾರಿಗಳೊಂದಿಗೆ ಸಂಪರ್ಕ ಕಲ್ಪಿಸಲು ರಾಷ್ಟ್ರ ವ್ಯಾಪಿ ಇರುವ ರಸ್ತೆ ಜಾಲವೆ ರಾಷ್ಟ್ರೀಯ ಹೆದ್ದಾರಿಗಳಾಗಿದ್ದು, ಇವು ರಾಷ್ಟ್ರೀಯ ಐಕ್ಯತೆಗೆ ಅತ್ಯಗತ್ಯವಾಗಿವೆ. ಆಯಾ ರಾಜ್ಯಗಳಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಯನ್ನು ಆಯಾ ರಾಜ್ಯಗಳ ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತದೆ.

ತಾಲ್ಲೂಕಿನಲ್ಲಿ ೩೧.೩.೨೦೧೬ರ ಅವಧಿಯಲ್ಲಿ ಒಟ್ಟು ೬೩ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಇದ್ದು, ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ವಸೂಲಿ ಪದ್ಧತಿ ಆರಂಭವಾಗಿದೆ. ರಸ್ತೆಗಳ ಗುಣಮಟ್ಟ ಕಾಪಾಡುವಲ್ಲಿ ಎಲ್ಲರೂ ಇಂತಿಷ್ಟು ಕಿ.ಮೀ. ಅಂತರದಲ್ಲಿ ಟೋಲ್ ಹಣ ನೀಡಬೇಕಾಗಿದೆ. ಈ ವ್ಯಾಪ್ತಿಯ ರಸ್ತೆಗಳು ಉತ್ತಮವಾಗಿ ನಿರ್ವಹಣೆ ಮಾಡಲ್ಪಡುತ್ತಿವೆ.

## ರಾಜ್ಯ ಹೆದ್ದಾರಿ

ತಾಲ್ಲೂಕಿನಲ್ಲಿ ೨೦೦೯–೧೦ರಲ್ಲಿದ್ದ ರಾಜ್ಯ ಹೆದ್ದಾರಿಗಳ ಒಟ್ಟು ಉದ್ದ ೯೯.೮೬ ಕಿ.ಮೀ, ಮುಖ್ಯ ಜಿಲ್ಲಾ ರಸ್ತೆಗಳ ಒಟ್ಟು ಉದ್ದವು ೨೩೦.೬೪ ಕಿ.ಮೀ. ಇದ್ದು, ಹಳ್ಳಿಗಳ ರಸ್ತೆಗಳು ಒಟ್ಟು ೯೦೬.೪ ಕಿ.ಮೀ. ಟಿ.ಡಿ.ಬಿ. ರಸ್ತೆಯ ಒಟ್ಟು ಉದ್ದ ೮೦ ಕಿ.ಮೀ. ಅರಣ್ಯ ರಸ್ತೆಗಳ ಉದ್ದವು ೧೦.೨ ಹಾಗೂ ಮುಖ್ಯ ಸೇತುವೆಗಳ ಸಂಖ್ಯೆ ೪ ಆಗಿತ್ತು. ೨೦೧೧ರ ಮಾರ್ಚಿ ಅಂತ್ಯಕ್ಕೆ ರಸ್ತೆ ಮತ್ತು ರೈಲ್ವೆ ಬ್ರಾಡ್‌ಗೇಜ್ ಮಾರ್ಗಗಳ ಉದ್ದ ಅಳತೆಗಳ

ವಿವರಗಳು ಹೀಗಿವೆ. ರೈಲ್ವೆ ಬ್ರಾಡ್‌ಗೇಜ್ ಉದ್ದ ತಾಲ್ಲೂಕಿನಲ್ಲಿ ೨೦ ಕಿ.ಮೀ. ಹಾಗೂ ರೈಲ್ವೆ ನಿಲ್ದಾಣ ಸಂಖ್ಯೆ ೧ ಇರುತ್ತದೆ. ರಾಜ್ಯ ಹೆದ್ದಾರಿಯ ಉದ್ದ ಒಟ್ಟು ೧೧೪.೬೩ ಕಿ.ಮೀ. ಮುಖ್ಯ ಜಿಲ್ಲಾ ರಸ್ತೆಗಳ ಒಟ್ಟು ಉದ್ದ ೨೧೩.೪೬ ಕಿ.ಮೀ. ಹಾಗೂ ಇತರ ಜಿಲ್ಲಾ ರಸ್ತೆಗಳ ಉದ್ದ (ಒಟ್ಟು) ೩೨೮.೦೯ ಕಿ.ಮೀ. ಇದೆ. ಒಟ್ಟಾರೆ ರಸ್ತೆಗಳ ಉದ್ದ ೮೫೬.೧೮ ಕಿ.ಮೀ. ಆಗಿತ್ತು. ಅಲ್ಲದೆ ಭಾರೀ ಸೇತುವೆಗಳ ಸಂಖ್ಯೆ ೨ ಇದ್ದವು. ಮುನಿಸಿಪಾಲಿಟಿ ವ್ಯಾಪ್ತಿಯ ರಸ್ತೆಗಳು ೮೦.೦ ಕಿ.ಮೀ. ನೀರಾವರಿ ಇಲಾಖೆ ರಸ್ತೆಗಳು ೫೬.೨೫ ಕಿ.ಮೀ, ಅರಣ್ಯ ರಸ್ತೆಗಳು ೧೦.೨ ಕಿ.ಮೀ. ಅಲ್ಲದೆ ಪಂಚಾಯತ್‌ನ ಪಕ್ಕಾ ರಸ್ತೆಗಳ ಉದ್ದ ಒಟ್ಟು ೪೮೪.೫೭ ಕಿ.ಮೀ. ಕಚ್ಚಾ ರಸ್ತೆಗಳು ೯೭೦ ಕಿ.ಮೀ. ಹೀಗೆ ಒಟ್ಟು ೧೪೫೪.೫೭ ಕಿ.ಮೀ.ಗಳಿದ್ದವು. ನೀರಾವರಿ ರಸ್ತೆಗಳ ಉದ್ದ ೫೬.೩೫ ಕಿ.ಮೀ.ಗಳಾಗಿತ್ತು.

ತಾಲ್ಲೂಕಿನ ೨೦೧೩–೧೪ರಲ್ಲಿ ೧೧೪.೯೩ ಕಿ.ಮೀ ರಾಜ್ಯ ಹೆದ್ದಾರಿ, ೨೧೪.೧೪ ಕಿ.ಮೀ ಮುಖ್ಯ ಜಿಲ್ಲಾ ರಸ್ತೆ, ಒಂದು ಭಾರಿ ಸೇತುವೆ, ೨೪೨.೬೭ ಕಿ.ಮೀ ಪಕ್ಕಾ(ಡಾಂಬರು) ರಸ್ತೆಗಳು, ೧೦೧.೨೨ ಕಿ.ಮೀ ಜಲ್ಲಿ ರಸ್ತೆ, ೫೬೩.೯ ಕಿ.ಮೀ ಕಚ್ಚಾ ರಸ್ತೆಗಳು (ಮಣ್ಣಿನ ರಸ್ತೆ) ಇದ್ದು, ಒಟ್ಟು ೯೦೭.೭೯ ಕಿ.ಮೀ ರಸ್ತೆಗಳನ್ನು ಹೊಂದಿತ್ತು. ಹಾಗೆಯೇ ೨೦೧೫–೧೬ ರಲ್ಲಿ ೧೧೦.೫೬ ಕಿ.ಮೀ ರಾಜ್ಯ ಹೆದ್ದಾರಿ, ೨೧೩.೩೬ ಕಿ.ಮೀ ಮುಖ್ಯ ಜಿಲ್ಲಾ ರಸ್ತೆ, ೨೫೦.೮೧ ಕಿ.ಮೀ ಪಕ್ಕಾ(ಡಾಂಬರು) ರಸ್ತೆಗಳು, ೧೦೧.೨೨ ಕಿ.ಮೀ ಜಲ್ಲಿ ರಸ್ತೆ, ೫೬೩.೯ ಕಿ.ಮೀ ಕಚ್ಚಾ ರಸ್ತೆಗಳು (ಮಣ್ಣಿನ ರಸ್ತೆ) ಇದ್ದು, ಹೀಗೆ ಒಟ್ಟು ೯೧೫.೯೩ ಕಿ.ಮೀ ರಸ್ತೆಗಳು ಸೇರಿದ್ದವು.

**ತಾಲ್ಲೂಕಿನಲ್ಲಿರುವ ಮೋಟಾರು ವಾಹನಗಳ ವಿವರ**

| ಸರಕು ಸಾಗಿಸುವ ವಾಹನಗಳು | ೨೦೧೩–೧೪ | ೨೦೧೫–೧೬ |
|---|---|---|
| ಮಲ್ಟಿ ಆಕ್ಸಲ್ಡ್/ ಆರ್ಟಿಕ್ಯುಲೇಟೆಡ್ ವಾಹನಗಳು | ೨೨ | ೩೪ |
| ಟ್ರಕ್ಸ್ ಮತ್ತು ಲಾರಿಗಳು | ೧೭೨ | ೧೭೩ |
| ನಾಲ್ಕು ಚಕ್ರಗಳ ವಾಹನಗಳು | ೧೨೦ | ೧೪೬ |
| ಮೂರು ಚಕ್ರಗಳ ವಾಹನಗಳು | ೧೩೪ | ೧೭೫ |
| ಒಟ್ಟು | ೪೪೮ | ೫೨೮ |
| ಸ್ಟೇಜ್ ಕ್ಯಾರೇಜ್‌ಗಳು | ೧೬೫ | ೧೬೫ |
| ಒಪ್ಪಂದದ ವಾಹನಗಳು | ೪ | ೪ |

| | | | |
|---|---|---|---|
| ಖಾಸಗಿ ಸೇವಾ ವಾಹನಗಳು | | ೩ | ೩ |
| ವಿದ್ಯಾ ಸಂಸ್ಥೆ ವಾಹನಗಳು | | ೪೭ | ೪೭ |
| ಇತರೆ | | ೪ | ೪ |
| ಟ್ಯಾಕ್ಸಿಗಳು | ಮೋಟಾರು ಕ್ಯಾಬ್ | ೧೧೮ | ೧೪೩ |
| | ಮ್ಯಾಕ್ಸಿಕ್ಯಾಬ್ | ೧೧೨ | ೧೪೧ |
| | ಇತರೆ ಕ್ಯಾಬ್‌ಗಳು | – | ೩೩೨ |
| ಆಟೋರಿಕ್ಷಾಗಳು/ ಮೂರು ಆಸನಗಳ ವಾಹನಗಳು | | ೫೬೫ | ೬೪೦ |
| ನಾಲ್ಕರಿಂದ ಆರು ಆಸನಗಳ ವಾಹನಗಳು | | ೧೨ | ೧೨ |
| ದ್ವಿಚಕ್ರ ವಾಹನಗಳು | ಸ್ಕೂಟರ್‌ಗಳು | ೧೨,೦೨೨ | ೧೬,೯೨೨ |
| | ಮೋಪೆಡ್‌ಗಳು | ೨,೯೮೧ | ೨೯೮೧ |
| | ಮೋಟರ್ ಸೈಕಲ್‌ಗಳು | ೨೮೮ | ೨೯೩ |
| ನಾಲ್ಕು ಚಕ್ರದ ವಾಹನಗಳು | ಕಾರುಗಳು | ೭೩೪ | ೮೮೭ |
| | ಜೀಪುಗಳು | ೫೨ | ೫೫ |
| | ಓಮ್ನಿ ಬಸ್ಸುಗಳು | ೩೪ | ೩೪ |
| ಟ್ರಾಕ್ಟರ್‌ಗಳು | | ೧೦೨೦ | ೧೩೭೦ |
| ಟ್ರಿಲ್ಲರ್‌ಗಳು | | ೯೭೨ | ೧೧೦೪ |
| ಅಂಬುಲೆನ್ಸ್ | | – | ೦ |
| ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು | | ೭ | ೭ |
| ಇತರೆ | | ೧ | ೧ |
| ಒಟ್ಟು | | ೨೮೨೦ | ೩೪೫೮ |

**ಆಧಾರ: ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೩-೧೪ ಹಾಗೂ ೨೦೧೫-೧೬**

**ಸಾರ್ವಜನಿಕ ಸಂಚಾರ**

ಹಿಂದಿನ ಕಾಲದಲ್ಲಿ ಕುದುರೆ, ಒಂಟೆ, ಆನೆಗಳ ಮೇಲೆ ಸವಾರಿ ಮಾಡುವ ಮೂಲಕ ಅನುಕೂಲಸ್ಥರು, ರಾಜರು ಹಾಗೂ ಸೈನಿಕರು ಸಂಚರಿಸುತ್ತಿದ್ದರು. ಜನ ಸಾಮಾನ್ಯರು ಮತ್ತು ಸಾಧಾರಣ ವ್ಯಾಪಾರಿಗಳು ಎತ್ತಿನ ಮೇಲೆ, ಕತ್ತೆಗಳ ಮೇಲೆ ಕುಳಿತು ಸಂಚರಿಸುತ್ತಿದ್ದರು. ಹಾಗೂ ಕೋಣಗಳ ಮತ್ತು ಕತ್ತೆಗಳ ಮೇಲೆ ಸಾಮಗ್ರಿಗಳ ಹೇರನ್ನು ಹೊರಿಸಿ ಸಾಗಾಣಿಕೆ ಮಾಡುತ್ತಿದ್ದರು. ಕ್ರಿ.ಶ. ೧೫ನೇ ಶತಮಾನದಲ್ಲಿ ಬೂದಿಹಾಳುಕೋಟೆಯ ರಾಜನಾಗಿದ್ದ ಸಿರುಮಣ ನಾಯಕನ ಬಳಿ ೩೦ ಬಲಿಷ್ಠವಾದ ಕುದುರೆಗಳಿದ್ದವೆಂದೂ ೩೦೦ ಜನ ಕಾಲ್ದಳದ ವೀರರು (ಸೇನಾನಿಗಳು) ಇದ್ದರೆಂದು ಆಧಾರಗಳಿಂದ ತಿಳಿಯುವುದು. ಕುಮ್ಮಟ ದುರ್ಗದಿಂದ ಹಿಂದಿನ ಕಾಲದಲ್ಲಿ (ಕ್ರಿ.ಶ.೧೪ನೇ ಶತಮಾನ) ಕಂಪಿಲದೇವನು ಸೇನೆಯೊಂದಿಗೆ ಹೊಳಲಕೆರೆಗೆ ನಡೆದು (ಕಾಲ್ದಳದೊಂದಿಗೆ) ಬಂದಿದ್ದನೆಂದು ದೊಡ್ಡತೇಕಲವಟ್ಟಿಯ ಶಾಸನ ಕ್ರಿ.ಶ. ೧೩೮೪ರಲ್ಲಿ ಬುಕ್ಕರಾಯನು ಓರುಗಲ್ಲು ದೇಶಕ್ಕೆ ದಂಡು ಒಡಗೂಡಿ ಹೋಗಿದ್ದ ಬಗ್ಗೆ ಹೇಳಿದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ವಿಜಯನಗರದ ಸಾಳುವ ನರಸಿಂಹರಾಯನು ತನ್ನ ಅಪಾರ ಸೈನ್ಯದೊಂದಿಗೆ ಬಾಗೂರು ಕೋಟೆ ಮತ್ತು ಬೂದಾಳು ಕೋಟೆಗೆ ಮುತ್ತಿಗೆ ಹಾಕಿದನೆಂದೂ, ಕ್ರಿ.ಶ. ೧೮ನೇ ಶತಮಾನದಲ್ಲಿ ಹೈದರಾಲಿಯು ಹೊಸದುರ್ಗ, ಜಾನಕಲ್ಲು ಮತ್ತು ಬಾಗೂರು ಠಾಣೆಗಳನ್ನು ತನ್ನ ಲಕ್ಷ ಸೇನೆಯೊಂದಿಗೆ ಮುತ್ತಿದನೆಂದು ದಾಖಲೆಗಳು ತಿಳಿಸುತ್ತವೆ. ಶತಮಾನಗಳು ಉರುಳಿದಂತೆ, ಹೊಸ ಹೊಸ ರಸ್ತೆಗಳು ನಿರ್ಮಾಣವಾಗಿ, ರಸ್ತೆಗಳು ಸುಧಾರಣೆಗೊಂಡವು. ಅಲ್ಲಲ್ಲಿ ಮುಖ್ಯ ಸೇತುವೆಗಳು ವಾಹನಗಳೂ ಆವಿಷ್ಕಾರಗೊಂಡಂತೆ ಜನರು ದುಡಿದು ಹಣವಂತರಾಗಿ ವಾಹನಗಳನ್ನು ಖರೀದಿಸಿ ಅವುಗಳಲ್ಲಿ ಸಂಚರಿಸಲು ಆರಂಭಿಸಿದರು. ಒಂದು ಕಾಲದಲ್ಲಿ ಬೈಸಿಕಲ್ ಹೊಂದಿರುವವರೇ ಶ್ರೀಮಂತರು ಎಂಬ ಭಾವನೆ ಇದ್ದಿತು. ನಂತರದಲ್ಲಿ ಬೈಕು, ಕಾರು, ಜೀಪು, ಟ್ರ್ಯಾಕ್ಟರ್, ಲಾರಿ, ಸುಧಾರಿತ ಬಸ್ಸುಗಳು ಇತ್ಯಾದಿ ವಾಹನಗಳ ಕ್ರಾಂತಿಯೇ ಆಯಿತು. ರಸ್ತೆಗಳೂ ಕ್ರಾಂತಿಕಾರಿಯಾಗಿ ವಿಸ್ತಾರಗೊಂಡವು. ತಾಲ್ಲೂಕಿನಿಂದ ನೇರವಾಗಿ ಬಾಂಬೆ, ಕಲ್ಕತ್ತಾ ಮುಂತಾದೆಡೆಗೆ ತೆಂಗಿನಕಾಯಿ, ತೆಂಗಿನ ಕಡ್ಡಿ ಹಾಗೂ ಕಾಯಿರ್ ಪ್ರಾಡಕ್ಟ್ಸ್ ರಫ್ತಾಗುತ್ತಿವೆ. ಜನರೂ ಬೇಕಾದಲ್ಲಿಗೆ ಸಂಚರಿಸಲು ಸಾಧ್ಯವಾಗಿದೆ.

ಸುಮಾರು ಐವತ್ತು ವರ್ಷಗಳಿಂದಲೂ ಹೊಸದುರ್ಗ ತಾಲ್ಲೂಕಿನಲ್ಲಿ ಖಾಸಗಿ ಬಸ್ಸುಗಳದ್ದೇ ಪ್ರಧಾನತ್ವ ಇದ್ದಿತು. ಬೇರೆ ಬೇರೆ ಪಟ್ಟಣಗಳಿಗೆ ಹಾಗೂ ಬೆಂಗಳೂರು ಮತ್ತಿತರ ನಗರಗಳಿಗೆ ಇಲ್ಲಿಂದ ನೇರವಾಗಿ ಖಾಸಗಿ ಬಸ್‌ಗಳೇ ಇದ್ದವು. (ಭದ್ರಾವತಿ–ಶಿವಮೊಗ್ಗ, ತರೀಕೆರೆ, ತಿಪಟೂರು, ಹಿರಿಯೂರು, ಹೊಳಲ್ಕೆರೆ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಬೆಂಗಳೂರು ಮುಂತಾದೆಡೆಗೆ) ಮರ್ಚೆಂಟ್ಸ್ ವಿಜಯ, ರಿಲಯೆಬಲ್,

ಎಚ್.ಐ.ಎಚ್. ಆಂಜನೇಯ, ಎಸ್.ಬಿ. ಜಯಪದ್ಮ, ತಿಪ್ಪೇಸ್ವಾಮಿ, ಷಹಜಾನ್, ಸಿದ್ಧರಾಮೇಶ್ವರ, ಮಹದೇವ, ಅಶೋಕ, ಹೀಗೆ ನೂರಾರು ಬಸ್ಸುಗಳ ಹೆಸರು ಪಟ್ಟಿ ಬೆಳೆಯುತ್ತದೆ. ಇವೆಲ್ಲ ಹೊಸದುರ್ಗ ಪಟ್ಟಣದಿಂದ ಬೇರೆ ಪಟ್ಟಣ ನಗರಗಳಿಗಷ್ಟೇ ಅಲ್ಲದೆ ತಾಲ್ಲೂಕಿನ ಅನೇಕ ಗ್ರಾಮಗಳಿಗೂ ಸಂಚರಿಸುತ್ತಿದ್ದವು. ಇತ್ತೀಚೆಗೆ ಪಟ್ಟಣದಲ್ಲಿ ನೂರಾರು ಸಂಖ್ಯೆಯ ಆಟೋಗಳಿದ್ದು, ಇವೂ ಸಹ ಹಳ್ಳಿಗಳಿಗೆ ನಿತ್ಯ ಓಡಾಡುತ್ತವೆ. ಸರ್ಕಾರಿ ಬಸ್ಸುಗಳು ಒಂದೆರಡು ಮಾತ್ರ ಮೊದಲು ಓಡಾಡುತ್ತಿದ್ದವು. ಇತ್ತೀಚೆಗೆ, ಸರ್ಕಾರಿ ರಸ್ತೆ ಸಾರಿಗೆ ನಿಗಮದ ತುಮಕೂರು ವಿಭಾಗದಿಂದ ಅನೇಕ ಸರ್ಕಾರಿ ಬಸ್ಸುಗಳು ಹೊಸದುರ್ಗ ಮಾರ್ಗವಾಗಿ ಬೇರೆ ಬೇರೆ ಜಿಲ್ಲೆಗಳಿಗೆ ಹಾಗೂ ಬೆಂಗಳೂರಿಗೆ ಹಾಗೂ ಗ್ರಾಮಾಂತರ ಪ್ರದೇಶಗಳಿಗೂ ಸಂಚರಿಸಲಾರಂಭಿಸಿ ಸಾರ್ವಜನಿಕರಿಗೆ ಹೆಚ್ಚಿನ ಸೌಕರ್ಯ ಒದಗಿಸಿವೆ. ಮತ್ತು ಶೀಘ್ರವಾಗಿ ನಿಗದಿತ ವೇಳೆಗೆ ಸಂಚರಿಸುವಲ್ಲಿ ಸಫಲವಾಗಿದ್ದು. ಸಾರಿಗೆ ಸಂಪರ್ಕದಲ್ಲಿ (ತಾಲ್ಲೂಕಿನಲ್ಲಿ) ಹೊಸ ಅಧ್ಯಾಯವನ್ನು ಆಂಭಿಸಿವೆ. ಸಂಚರಿಸುವ ಸರ್ಕಾರಿ ಬಸ್‌ಗಳ ಮಾರ್ಗದ ವಿವರ ಹೀಗಿದೆ (ಟ್ರಿಪ್‌ಗಳ ವಿವರ) ಬೆಂಗಳೂರು–ಹೊಸದುರ್ಗ–ಬೆಂಗಳೂರು (೬೦), ತಿಪಟೂರು–ಹೊಸದುರ್ಗ (೬೪), ತುರುವೇಕೆರೆ–ಹೊಸದುರ್ಗ (೦೨), ತಿರುಪತಿ–ಹೊಸದುರ್ಗ (೦೧), ಹೊಸದುರ್ಗ–ಅಜ್ಜಂಪುರ (೦೨), ಹೊಸದುರ್ಗ –ಚನ್ನಗಿರಿ (೦೪), ಹೊಸದುರ್ಗ–ಗೂಳಿಹಟ್ಟಿ(೦೨), ಹೊಸದುರ್ಗ–ಬುಕ್ಕಾಂಬುದಿ (೦೨), ಮತ್ತೋಡು–ಬೆಂಗಳೂರು (೦೧), ದೊಡ್ಡಘಟ್ಟ–ಬೆಂಗಳೂರು(೦೧), ಚಿತ್ರದುರ್ಗ–ಧರ್ಮಸ್ಥಳ (೦೫), ಹೊಸದುರ್ಗ– ಶಿವಮೊಗ್ಗ (೦೧), ಅರಸೀಕೆರೆ–ಬೆಲಗೂರು (೦೭), ದುರ್ಗ–ಮೈಸೂರು (೦೧), ಚಿತ್ರದುರ್ಗ–ಹಾಸನ (೦೧), ಬೆಲಗೂರು–ಕಡೂರು (೦೪), ಹೊಸದುರ್ಗ–ದಾವಣಗೆರೆ (೦೬) ಇತ್ಯಾದಿ ಸಾರ್ವಜನಿಕ ಅನುಕೂಲಕ್ಕಾಗಿ ನಿಗಮವು ಹೊಸದುರ್ಗ ಖಾಸಗಿ ಬಸ್‌ನಿಲ್ದಾಣದಲ್ಲಿ ಸಂಚಾರ ಬಿಂದುವನ್ನು ದಿನಾಂಕ ೩–೩–೨೦೧೨ರಂದು ಪ್ರಾರಂಭಿಸಿದೆ. ಅಂದಾಜು ೨೦೦ ಖಾಸಗಿ ಬಸ್ಸುಗಳು ಪಟ್ಟಣದಿಂದ ವಿವಿಧೆಡೆಗೆ ಸಂಚರಿಸುತ್ತವೆ. ಹೊಸದುರ್ಗ ಬಸ್‌ನಿಲ್ದಾಣವು ಇತ್ತೀಚೆಗೆ ನವೀಕರಣಗೊಂಡಿದ್ದು, ಪಟ್ಟಣದ ಮುಖ್ಯ ರಸ್ತೆಯ ಅಗಲೀಕರಣವಾಗಿದೆ.

### ಅಂಚೆ ತಂತಿ–ದೂರವಾಣಿ

ಹಿಂದಿನ ಕಾಲದಲ್ಲಿ ಪತ್ರಗಳನ್ನು, ಸಾಕಿದ ಪಾರಿವಾಳಗಳು ಮತ್ತು ಸಾಕಿದ ಗಿಳಿಗಳ ಮೂಲಕ ರವಾನಿಸುತ್ತಿದ್ದರೆಂದು ಹೇಳಲಾಗಿದೆ. ಸಾಕಿದ ನಾಯಿಗಳ ಮೂಲಕವೂ ಕಳುಹಿಸುತ್ತಿದ್ದದುಂಟು ಎನ್ನಲಾಗಿದೆ. ತದನಂತರ ರಾಜರುಗಳು ತಮ್ಮ ನಂಬಿಗಸ್ಥ ಸೇನಾನಿಯ ಮೂಲಕ ಮತ್ತೊಂದು ಆಸ್ಥಾನಕ್ಕೆ ಪತ್ರ ಕಳುಹಿಸುತ್ತಿದ್ದ ಬಗ್ಗೆ ಇತಿಹಾಸದ ಪುಟಗಳಲ್ಲಿದೆ. ಬೂದಿಹಾಳಿನ ಸಿರುಮನಾಯಕನು (ಕ್ರಿ.ಶ. ೧೫ನೇ ಶತಮಾನ)

ತನ್ನ ಮಿತ್ರನಾದ ಬಾಗೂರು ಗೋವಿಂದನಿಗೆ ಪತ್ರ ಕಳುಹಿಸಿದ ಬಗ್ಗೆ ಸಾಂಗತ್ಯದಲ್ಲಿ ಉಲ್ಲೇಖವಿದೆ. (ಗೋವಿಂದನೂ ಸಹ ಸಿರುಮನಿಗೆ ಪತ್ರ ಕಳುಹಿಸುತ್ತಿದ್ದನು.) ಅಗ್ರಹಾರಗಳಲ್ಲಿ ಶಿಕ್ಷಣ ವ್ಯವಸ್ಥೆ ಇದ್ದುದರಿಂದ, ವಿದ್ಯಾವಂತರು ಹೀಗೆ ಪತ್ರ ವ್ಯವಹರಿಸುತ್ತಿದ್ದರು. ಮುಖ್ಯ ಪ್ರಜೆಗಳು ರಾಜನಿಗೂ ಪತ್ರ ಬರೆಯುತ್ತಿದ್ದುದುಂಟು. (ತಮ್ಮ ಸಮಸ್ಯೆ ಇತ್ಯಾದಿ ಬಗ್ಗೆ) ಕ್ರಿ.ಶ. ೧೮ನೇ ಶತಮಾನದಲ್ಲಿ ಮತ್ತೋಡು ಪಾಳೆಯಗಾರರು ಒಟ್ಟು ೧೭೫ ವರ್ಷ ಕಾಲ ಸಂಸ್ಥಾನವನ್ನು ಆಳಿದರು. ಅವರ ಸಂಸ್ಥಾನ ಕೊನೆಗೊಂಡ ತರುವಾಯ ಆ ಪಾಳೆಯಗಾರರ ವಂಶಸ್ಥರಾದ ರಾಚಪ್ಪ ನಾಯಕರು ದಿನಾಂಕ ೮-೧೨-೧೮೮೨ ರಂದು ಮೈಸೂರು ಅರಸರಿಗೆ ಬರೆದುಕೊಂಡಿರುವ ಪತ್ರದಲ್ಲಿ, ತಮಗೆ ಆಗಿರುವ ನಷ್ಟವನ್ನು ಪುನರ್ ಪರಿಶೀಲಿಸಿ ತುಂಬಿಕೊಡಲು (ಮತ್ತೋಡಿಗೆ ಸೇರಿದ್ದ ೭೨ ಗ್ರಾಮಗಳನ್ನು ಬೇರೆ ತಾಲ್ಲೂಕಿಗೆ ಸೇರಿಸಿರುವ ಬಗ್ಗೆ ಆಕ್ಷೇಪಣೆಯೊಂದಿಗೆ) ಕೋರಿಕೊಂಡಿದ್ದರು. ಇದಕ್ಕೆ ಮೈಸೂರು ಸಂಸ್ಥಾನದಿಂದ ರಾಚಪ್ಪನಾಯಕರಿಗೆ ದಿನಾಂಕ ೨೮-೩-೧೮೮೩ ರಂದು ಉತ್ತರ ಬಂದಿರುತ್ತದೆ (ಆಧಾರ: ಪ್ರೊ.ಲಕ್ಷ್ಮಣ್ ತೆಲಗಾವಿ ಅವರ ಲೇಖನ).

ಇಷ್ಟಲ್ಲದೆ, ಜನರು ಬೇರೆ ಊರಲ್ಲಿನ ತಮ್ಮ ಬಂಧುಗಳಿಗೆ, ವ್ಯಾಸಂಗದಲ್ಲಿರುವ ತಮ್ಮ ಮಕ್ಕಳಿಗೆ ಪತ್ರ ಬರೆಯುವ ಸಂಸ್ಕೃತಿ ಕಳೆದ ೨೫ ವರ್ಷದವರೆಗೂ ಇದ್ದಿತು. ದೂರವಾಣಿ ಹಾಗೂ ಮೊಬೈಲ್ ಫೋನ್‌ಗಳು ಬಂದ ಮೇಲೆ ಯೋಗ-ಕ್ಷೇಮಕ್ಕಾಗಿ ಮತ್ತು ಸಾಂಪ್ರದಾಯಿಕವಾಗಿ ಪತ್ರ ಬರೆಯುವ ಸಂಸ್ಕೃತಿ ಜನರಿಂದ ಕಣ್ಮರೆಯಾಗಿದ್ದು, ಸಂವಹನ ಸಂಕ್ಷಿಪ್ತ ರೂಪದಲ್ಲಿ ನಡೆಯುತ್ತದೆ. ಕಛೇರಿ ಸುತ್ತೋಲೆಗಳು ಅಂಚೆ ಮೂಲಕ ಬರುತ್ತಿದ್ದವು. ಈಗ ಮೇಲ್‌ನಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ. ಅಲ್ಲದೆ, ಕೊರಿಯರ್ ಸೇವೆಗಳು ಪ್ರಾರಂಭಗೊಂಡು ಅಂಚೆ ಸೇವೆಗೆ ಪೈಪೋಟಿ ಒಡ್ಡಿವೆ. ತಾಲ್ಲೂಕಿನಲ್ಲಿ ೧೮೮೬ರಲ್ಲಿ ರೈಲ್ವೆ ಸಂಪರ್ಕ ಆದಾಗಿನಿಂದ ತಂತಿ ಸೇವೆ ಇಲ್ಲಿಗೆ ಬಂದಿದೆ ಎನ್ನಲಾಗಿದೆ.

೨೦೦೯-೧೦ ರಲ್ಲಿ ತಾಲ್ಲೂಕಿನಲ್ಲಿ ೫೮ ಅಂಚೆ ಕಛೇರಿಗಳಿದ್ದು, ೧೪ ದೂರವಾಣಿ ವಿನಿಮಯ ಕೇಂದ್ರಗಳಿದ್ದವು. ಏಳು ವಿಲ್ ಮೊಬೈಲ್ ಕೇಂದ್ರಗಳಿದ್ದವು. ೪,೦೮೮ ಸ್ಥಿರ ದೂರವಾಣಿಗಳು ಇದ್ದವು. ೨೦೧೫-೧೬ ರಲ್ಲಿ ೫೬ ಅಂಚೆ ಕಛೇರಿಗಳು, ೧೪ ದೂರವಾಣಿ ವಿನಿಮಯ ಕೇಂದ್ರಗಳು, ೯೭೭ ಸ್ಥಿರ ದೂರವಾಣಿಗಳಿದ್ದು, ೩೨೪ ಅಂತರಜಾಲ ಸಂಪರ್ಕಗಳಿದ್ದವು.

ಮೊಬೈಲ್ ಫೋನ್‌ಗಳು ಬಂದ ನಂತರದಲ್ಲಿ ಸ್ಥಿರ ದೂರವಾಣಿಗಳ ಜನಪ್ರಿಯತೆ ನಶಿಸುತ್ತಿದೆ. ಚರ ದೂರವಾಣಿ (ಮೊಬೈಲ್) ಕಂಪನಿಗಳು ಈಗ ಪಟ್ಟಣದಲ್ಲಷ್ಟೇ ಅಲ್ಲದೆ, ಗ್ರಾಮಾಂತರ ಪ್ರದೇಶದಲ್ಲಿಯೂ ತಮ್ಮ ಪ್ರಸಾರ ವ್ಯಾಪ್ತಿಯನ್ನು ವಿಸ್ತರಿಸುತ್ತಿವೆ. ಮೊಬೈಲ್ ಸೆಲ್ ಕಂಪನಿಗಳ ಟವರ್‌ಗಳು ಎಲ್ಲೆಡೆಯೂ ತಲೆಯೆತ್ತಿವೆ. ಆದರೆ

ಮೊಬೈಲ್ ಫೋನ್‌ಗಳು ಮತ್ತು ಟವರ್‌ಗಳು ಬಿತ್ತರಿಸುವ ತರಂಗಗಳು ಪಕ್ಷಿ ಸಂಕುಲಕ್ಕೆ ಮಾರಕವಾಗಿವೆ ಎಂಬ ವೈಜ್ಞಾನಿಕ ವರದಿಗಳಿವೆ. ಪುಟ್ಟ ಮಕ್ಕಳಿಗೆ, ಗರ್ಭಿಣಿಯರಿಗೆ, ಮೊಬೈಲ್‌ಫೋನ್ ಬಳಕೆಯಿಂದ ತೊಂದರೆ ಎನ್ನಲಾಗಿದೆ.

## ಆಕಾಶವಾಣಿ ಮತ್ತು ದೂರದರ್ಶನ

೨೦೧೧ರ ಸಮೀಕ್ಷೆ ಮೇರೆಗೆ, ರೇಡಿಯೋ ಮತ್ತು ಟ್ರಾನ್ಸಿಸ್ಟರ್‌ಗಳ ಒಟ್ಟು ಸಂಖ್ಯೆ ೧೮೬೩೬ ಇದ್ದು ಅದರಲ್ಲಿ ೨,೨೦೮ ನಗರಗಳಲ್ಲಿ ಹಾಗೂ ೧೬,೪೨೮ ಗ್ರಾಮೀಣ ಪ್ರದೇಶದಲ್ಲಿದ್ದವು. ಈ ಸಂಖ್ಯೆಯು ತಾಲ್ಲೂಕಿನ ಒಟ್ಟು ಕುಟುಂಬಗಳ ಶೇ. ೪೧.೮೮ ರಷ್ಟಿದೆ. ಅಂತೆಯೇ ದೂರದರ್ಶನ ಬಳಕೆದಾರರ (ವೀಕ್ಷಕರ) ಕುಟುಂಬಗಳು ಪಟ್ಟಣದಲ್ಲಿ ೨,೫೬೧ ಹಾಗೂ ಗ್ರಾಮೀಣ ಪ್ರದೇಶದಲ್ಲಿ ೬,೩೨೪ ಇದ್ದು, ಇದು ತಾಲ್ಲೂಕಿನ ಒಟ್ಟು ಕುಟುಂಬಗಳ ಶೇಕಡಾ ೧೯.೯೭ ರಷ್ಟಿದೆ.

ಹೊಸದುರ್ಗ ತಾಲ್ಲೂಕು ಪ್ರದೇಶದಲ್ಲಿ ಯಾವುದೇ ಆಕಾಶವಾಣಿ ಪ್ರಸಾರ ಕೇಂದ್ರವಿರುವುದಿಲ್ಲ. ಜಿಲ್ಲಾ ಕೇಂದ್ರವಾದ ಚಿತ್ರದುರ್ಗದಲ್ಲಿ ಆಕಾಶವಾಣಿ ಪ್ರಸಾರ ಕೇಂದ್ರವಿದ್ದು, ಇಲ್ಲಿ ತಾಲ್ಲೂಕಿನ ಅನೇಕ ಪ್ರತಿಭಾವಂತರಿಗೆ ಅವಕಾಶಗಳು ದೊರೆತಿವೆ. ಅಲ್ಲದೆ, ತಾಲ್ಲೂಕಿನ ಐತಿಹಾಸಿಕ ಸ್ಥಳಗಳ ಬಗ್ಗೆ ಅನೇಕ ಮಾಹಿತಿ ಕಾರ್ಯಕ್ರಮಗಳನ್ನು ಚಿತ್ರದುರ್ಗ ಆಕಾಶವಾಣಿಯು ಬಿತ್ತರಿಸಿದೆ. ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಆಕಾಶವಾಣಿಯ ಕಾರ್ಯಕ್ರಮ ನಿರ್ದೇಶಕರು ನಿರೂಪಣೆಕಾರರು ಬಂದು, ರೈತರ ಸಂದರ್ಶನ, ಮಕ್ಕಳ ಕಾರ್ಯಕ್ರಮ, ವಿದ್ಯಾರ್ಥಿ ಪ್ರತಿಭೆಗಳ ಕಾರ್ಯಕ್ರಮ, ಹಳ್ಳಿಗರಿಂದ ಜಾನಪದ ಹಾಡುಗಳು, ಭಜನೆ ಮುಂತಾದುವನ್ನು ಧ್ವನಿ ಮುದ್ರಿಸಿಕೊಂಡು ನಿಲಯದಿಂದ ಪ್ರಸಾರ ಮಾಡುತ್ತಾ ಬಂದಿದ್ದಾರೆ. ಅಲ್ಲದೆ, ತಾಲ್ಲೂಕಿನ ಬರಹಗಾರರಿಗೂ ಆಕಾಶವಾಣಿಯಲ್ಲಿ ಅವಕಾಶ ನೀಡಿ ಪ್ರೋತ್ಸಾಹಿಸಿರುತ್ತಾರೆ. ಹೊಸದುರ್ಗ ತಾಲ್ಲೂಕು ಗುಡ್ಡಗಾಡು ಪ್ರದೇಶವಾದುದರಿಂದಾಗಿ, ಚಿತ್ರದುರ್ಗ ಆಕಾಶವಾಣಿಯ ತರಂಗಗಳು ರೇಡಿಯೋಗಳನ್ನು/ಗ್ರಾಹಕರನ್ನು ತಲುಪುವಲ್ಲಿ ಪೂರ್ಣವಾಗಿ ಸಫಲವಾಗಿರುವುದಿಲ್ಲ. ಭದ್ರಾವತಿ ಆಕಾಶವಾಣಿಯ ಕಾರ್ಯಕ್ರಮಗಳು ರೇಡಿಯೋದಲ್ಲಿ ಚೆನ್ನಾಗಿ ಪ್ರಸಾರಗೊಳ್ಳುತ್ತಿದೆ. ಧಾರವಾಡ ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳ ಕಾರ್ಯಕ್ರಮಗಳೂ ಇಲ್ಲಿನ ರೇಡಿಯೋಗಳಲ್ಲಿ ಪ್ರಸಾರಗೊಳ್ಳುತ್ತಿವೆ. ದೂರದರ್ಶನ ಬಂದ ತರುವಾಯದಲ್ಲಿ, ರೇಡಿಯೋಗಳು ತನ್ನ ಜನಪ್ರಿಯತೆಯನ್ನು ಕಳೆದುಕೊಂಡು ಕಾಣೆಯಾಗಿವೆ. ಕೇವಲ ಕುಗ್ರಾಮಗಳಲ್ಲಿ, ಕೆಲ ಬಡ ಕುಟುಂಬಗಳಲ್ಲಿ ಹಾಗೂ ಅಲೆಮಾರಿ ಜನಾಂಗದವರಲ್ಲಿ ಮಾತ್ರ ಟ್ರಾನ್ಸಿಸ್ಟರ್‌ಗಳನ್ನು ಕಾಣಬಹುದಾಗಿದೆ. ೧೯೪೦ ರಿಂದ ೧೯೮೪ ರವರೆಗೆ ರೇಡಿಯೋ ಮಾಲೀಕರು ಲೈಸೆನ್ಸ್ ಮಾಡಿಸಿ ಪ್ರತಿ ವರ್ಷ

ನವೀಕರಿಸಿಕೊಳ್ಳಬೇಕಾಗುತ್ತಿದ್ದಿತು. ಒಂದು ಕಾಲದಲ್ಲಿ ಭದ್ರಾವತಿ ಆಕಾಶವಾಣಿ ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳು ಪ್ರಸಾರ ಮಾಡುತ್ತಿದ್ದ ನಿಮ್ಮ ಮೆಚ್ಚಿನ ಚಿತ್ರಗೀತೆಗಳು ಕಾರ್ಯಕ್ರಮ ಮತ್ತು ಚಲನಚಿತ್ರ ಧ್ವನಿವಾಹಿನಿ ಪ್ರಸಾರ ಕಾರ್ಯಕ್ರಮಗಳು ಬಹಳ ಜನಪ್ರಿಯವಾಗಿದ್ದವು (ರೇಡಿಯೋಗಳಗಿಂತ ಮೊದಲು ಗ್ರಾಮಾಫೋನ್‌ಗಳು ಹೆಸರುವಾಸಿಯಾಗಿದ್ದವು).

೧೯೮೪ರಲ್ಲಿ ದೂರದರ್ಶನ ಕಾರ್ಯಕ್ರಮ ವಿವಿಧ ಸ್ಥಳಗಳಲ್ಲಿನ ಟ್ರಾನ್ಸ್‌ಮಿಟರ್‌ಗಳ ಮೂಲಕ ಪ್ರಸಾರವಾಗಿ ಎಲ್ಲೆಡೆಗೂ ಮುಟ್ಟುವಂತಾಯಿತು. ತಾಲ್ಲೂಕಿನಲ್ಲಿ ಮೊದಲು ಆಂಟೆನಾಗಳ ಮೂಲಕ ಬೆಂಗಳೂರು ದೂರದರ್ಶನ ಹಾಗೂ ದೆಹಲಿ ದೂರದರ್ಶನ ಕಾರ್ಯಕ್ರಮಗಳನ್ನು ಜನರು ವೀಕ್ಷಿಸುತ್ತಿದ್ದರು. ತದನಂತರದಲ್ಲಿ ಕೆಲವರು ಕೇಬಲ್ ಮೂಲಕ ದೂರದರ್ಶನ ಸೌಲಭ್ಯಗಳನ್ನು ಸುಲಭವಾಗಿ ಮತ್ತು ಸ್ಪಷ್ಟವಾಗಿ ದೊರಕುವಂತೆ ಮಾಡಿದರು. ಮೊದಲು ಚಂದನ ವಾಹಿನಿಯನ್ನು ಮಾತ್ರ ನೋಡುತ್ತಿದ್ದ ಜನರು, ಕೇಬಲ್ ಸೌಲಭ್ಯದಲ್ಲಿ ಸಿಗುತ್ತಿದ್ದ ವಿವಿಧ ಚಾನೆಲ್‌ಗಳಲ್ಲಿ ತಮಗೆ ಇಷ್ಟವಾಗುವ ಕಾರ್ಯಕ್ರಮಗಳನ್ನು ವೀಕ್ಷಿಸಲಾರಂಭಿಸಿದರು. ಇದರಿಂದಾಗಿ ಸರ್ಕಾರಿ ಚಾನೆಲ್ ಆದ ಬೆಂಗಳೂರು ದೂರದರ್ಶನ ಹಾಗೂ ಚಂದನ ವಾಹಿನಿಗಳ ಕಾರ್ಯಕ್ರಮಗಳನ್ನು ಜನರು ನೋಡುವುದು ಕಡಿಮೆಯಾಗಿ, ಖಾಸಗಿ ಚಾನೆಲ್‌ಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೋಡುವುದು ಜಾಸ್ತಿಯಾಯಿತು. ಆದರೆ, ಚಂದನ ವಾಹಿನಿಯು ಎಂದಿಗೂ ಸಭ್ಯತೆಯ ಗೆರೆಯನ್ನು ದಾಟದೆ, ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಚಂದನದಲ್ಲಿ ಪ್ರಸಾರಗೊಳ್ಳುವ ಥಟ್ ಅಂತ ಹೇಳಿ ಹಾಗೂ ರೈತರ ಕಾರ್ಯಕ್ರಮಗಳು (ಕೃಷಿ ಸಂಬಂಧ) ಇಂದಿಗೂ ತನ್ನ ಛಾಪನ್ನು ಉಳಿಸಿಕೊಂಡಿವೆ. ಡಿ.ಟಿ.ಎಚ್. ತಟ್ಟೆಯ ಮೂಲಕವೂ ದೂರದರ್ಶನದ ವಾಹಿನಿಗಳಲ್ಲಿ ಕೆಲವನ್ನು ಆಯ್ಕೆ ಮಾಡಿಕೊಂಡು ವೀಕ್ಷಿಸುವುದು ಕೆಲವು ವರ್ಷ ಜನಪ್ರಿಯವಾಗಿ ನಂತರ ಜನಪ್ರಿಯತೆ ಕಳೆದುಕೊಂಡಿತು. ಈಗ ಕೇಬಲ್ ಮೂಲಕ ದೂರದರ್ಶನ ವಾಹಿನಿಗಳನ್ನು ವೀಕ್ಷಿಸುವುದೇ ಹೆಚ್ಚು ಜನಪ್ರಿಯವಾಗಿದೆ. ಈಗ ಮೊಬೈಲ್ ಫೋನ್‌ಗಳಲ್ಲಿಯೂ ತಮಗಿಷ್ಟವಾದ ಟಿ.ವಿ.ಚಾನಲ್‌ನ ಆಯ್ದ ಕಾರ್ಯಕ್ರಮಗಳನ್ನು ವೀಕ್ಷಿಸಬಹುದಾಗಿದೆ.

## ಅಧ್ಯಾಯ-೮

# ಸಾರ್ವತ್ರಿಕ ಆಡಳಿತ

**ಇ**ತಿಹಾಸ ಕಾಲದ ಆಡಳಿತ ಕ್ರಮವನ್ನು ಆಯಾ ಕಾಲದ ಶಾಸನಗಳಿಂದ ಇನ್ನಿತರ ದಾಖಲೆಗಳ ಆಧಾರದಿಂದ ಮನನ ಮಾಡಿಕೊಳ್ಳಬಹುದು. ತಾಲ್ಲೂಕಿನ ಅನೇಕ ಶಾಸನಗಳಲ್ಲಿ, ಚಕ್ರಾಧಿಪತಿ ಅವನ ಕೆಳಗೆ ಸಾಮಂತ ಅರಸ, ಅವನ ಅಧೀನದಲ್ಲಿ ಪ್ರಧಾನಿ, ಅವನ ಅಧೀನದಲ್ಲಿ ನಾಡ ಹೆಗ್ಗಡೆ, ತದನಂತರ ಮಾಂಡಳಿಕ, ಬೊಕ್ಕಸದ ಅಧಿಕಾರಿ, ಕರಣಿಕ, ಕಾರ್ಯಕರ್ತ, ಗೌಡ, ಸೇನಭೋವ, ತಳವಾರ ಹೀಗೆ ಆಡಳಿತದ ವಿವಿಧ ಅಧಿಕಾರಗಳನ್ನು ನಡೆಸುತ್ತಿದ್ದರೆಂದು ಹೇಳಲಾಗಿದೆ. ಬಲ್ಲಾಳ ಸಮುದ್ರದ ಶಾಸನದಲ್ಲಿ ಮೊಘಲರ ಆಡಳಿತ ವ್ಯವಸ್ಥೆಯ ಕಲ್ಪನೆ ಸಿಗುತ್ತದೆ. ಮೊಘಲ್ ಅರಸ, ಅವನ ಅಧೀನದಲ್ಲಿ ಜಾಗೀರದಾರ, ಅವನ ಕೈ ಕೆಳಗೆ ಹವಾಲದಾರ, ನಂತರ ಗೌಡರು ಇತ್ಯಾದಿಗಳು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದರು. ಶಾಸನಗಳನ್ನು ಹೊರಡಿಸುವುದು, ಸುಂಕಗಳನ್ನು ವಸೂಲಿ ಮಾಡುವುದು, ರಾಜ್ಯದ ಜನರ ರಕ್ಷಣೆ ಮಾಡುವುದು, ಸೇನಾನಿಗಳ ಬಲಸಂವರ್ಧನೆ, ಗೋವು, ಕುದುರೆ, ಆನೆಗಳ ಸಂಖ್ಯೆ ಹೆಚ್ಚುವುದಕ್ಕೆ ಕಾರ್ಯಕ್ರಮ ಇತ್ಯಾದಿ ಕರ್ತವ್ಯಗಳು ಇರುತ್ತಿದ್ದವು. ಧಾರ್ಮಿಕತೆ, ಭದ್ರತೆ, ನ್ಯಾಯ ತೀರ್ಮಾನಗಳು ಮುಂತಾದ ವಿಚಾರಗಳಲ್ಲಿ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ರಾಜ್ಯದ ಆದಾಯವನ್ನು ಹೆಚ್ಚಿಸುವುದಕ್ಕೂ ಕ್ರಮ ತೆಗೆದುಕೊಳ್ಳಲಾಗುತ್ತಿದ್ದಿತು. ಏಕೆಂದರೆ, ಸಾಮಂತ ಅರಸರು ತಮ್ಮ ಚಕ್ರಾಧಿಪತಿಗೆ ಪ್ರತಿವರ್ಷ ಮತ್ತು ಯುದ್ಧ ಸಂದರ್ಭಗಳಲ್ಲಿ 'ಕಪ್ಪ' ಸಲ್ಲಿಸಬೇಕಾಗುತ್ತಿದ್ದಿತು. ದಕ್ಷ ಸಾಮಂತರಸರಿಗೆ ಚಕ್ರಾಧಿಪತಿಯಿಂದ 'ವಳಿತೋತ್ತುಂಗ' ಮುಂತಾದ ಬಿರುದುಗಳು ಸಿಗುತ್ತಿದ್ದವು. ವಿಜಯನಗರದ ಅಚ್ಯುತರಾಯನ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ಈ ರೀತಿ ಉತ್ತಮ ಹೆಸರಿಗೆ ಪಾತ್ರನಾಗಿದ್ದನು. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಿತ್ರದುರ್ಗ ತುಕಡಿಯ ೧೩ ತಾಲ್ಲೂಕುಗಳಲ್ಲಿ ತಾಲ್ಲೂಕು ಸ್ಥಾನ ಪಡೆದಿದ್ದ ಹೊಸದುರ್ಗ ಮತ್ತು ಮತ್ತೋಡು ತಾಲ್ಲೂಕುಗಳಲ್ಲಿ ತಲಾ ಒಬ್ಬ ಪೇಶ್ವೆದಾರ, ಇಬ್ಬರು

ಸುಬೇದಾರರು, ಒಬ್ಬೊಬ್ಬ ಗುಮಾಸ್ತರು, ತಲಾ ಒಬ್ಬ ಮುನ್ಷಿ ಇರುತ್ತಿದ್ದು, ಇವರೊಂದಿಗೆ ಓಲೆಕಾರ, ಕಿಲ್ಲೆದಾರ, ಠಾಣಾದಾರ, ಅಂಚೆ ಮುತ್ಸದ್ದಿ, ಗೌಡ, ಶಾನುಭೋಗ, ಶೇಖದಾರ ಮತ್ತು ಫೌಜುದಾರ ಇರುತ್ತಿದ್ದರು.

ಈಗಿನ ಸಾರ್ವತ್ರಿಕ ಆಡಳಿತ ವ್ಯವಸ್ಥೆಯಲ್ಲಿ ಸರ್ಕಾರವು ಜನರಿಗೆ ರಕ್ಷಣೆ ನೀಡಲು ಹಾಗೂ ಅವರ ಮೂಲಭೂತ ಹಕ್ಕುಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಲು ಬದ್ಧವಾಗಿದೆ. ಅದೇ ರೀತಿ ಜನರಿಂದ ನಿಗದಿತ ತೆರಿಗೆಗಳನ್ನು ವಸೂಲಿ ಮಾಡುವ ಅಧಿಕಾರವನ್ನು ಹೊಂದಿದೆ. ಇದರೊಂದಿಗೆ ನ್ಯಾಯಾಡಳಿತ ಮತ್ತು ಕಾನೂನು ರಕ್ಷಣೆಗಾಗಿ ಆರಕ್ಷಕ ಸಿಬ್ಬಂದಿಯನ್ನು ಅಗತ್ಯ ಪ್ರಮಾಣದಲ್ಲಿ ಹೊಂದಿರುತ್ತದೆ. ಸರ್ಕಾರದ ಆಸ್ತಿ ಪಾಸ್ತಿಗಳನ್ನು ರಕ್ಷಿಸಿಕೊಳ್ಳುವುದು ಸಹ ಸರ್ಕಾರದ ಹೊಣೆಗಾರಿಕೆಯಾಗಿದೆ. ಈಗಿನ ಚಿತ್ರದುರ್ಗ ಜಿಲ್ಲೆಯು ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳನ್ನೊಳಗೊಂಡ ಜಿಲ್ಲೆಯಾಗಿ ಸರ್ಕಾರದ ಅಧಿಸೂಚನೆ ಸಂ. ಆರ್.ಡಿ/೪೨/ಎಲ್.ಆರ್.ಡಿ /೮೭/ಭಾಗ-೩ ದಿನಾಂಕ ೨-೮-೧೯೯೭ ರಂತೆ ದಿನಾಂಕ ೧೫-೮-೧೯೯೭ ರಂದು ಪುನರ್ವಿಂಗಡಣೆ ಗೊಂಡು ಆರು ತಾಲ್ಲೂಕುಗಳ ಜಿಲ್ಲೆಯಾಗಿ ಉಳಿಯಿತು.

ಕಂದಾಯ ಇಲಾಖೆಯಲ್ಲಿ ಜಿಲ್ಲಾಧಿಕಾರಿಯ ಒಟ್ಟು ೧೭ ಸಾಮಾನ್ಯ ಕಾರ್ಯಗಳು, ೧೧ ಕಂದಾಯ ಆಡಳಿತ, ೩೦ ಕಾನೂನು ಆಡಳಿತ ಹಾಗೂ ೮೧ ನಾಗರೀಕ ಸನ್ನದು ವಿತರಿಸುವ ಅಧಿಕಾರವನ್ನು ನಿರ್ವಹಿಸುತ್ತಾರೆ. ಹಾಗೂ ೨೪ ಬಗೆಯ ಅಧಿನಿಯಮಗಳ ಮೇಲೆ ಕ್ರಮ ಜರುಗಿಸುವರು. ಅಲ್ಲದೆ, ೫೧ ವಿವಿಧ ಜಿಲ್ಲಾ ಮಟ್ಟದ ಸಮಿತಿಗಳಿಗೆ ಅಧ್ಯಕ್ಷರಾಗಿದ್ದಾರೆ ಮತ್ತು ಎಂಟು ಮುಖ್ಯ ಕಾಯ್ದೆ ಕಾನೂನುಗಳ ಅಧಿಕಾರ ಹೊಂದಿರುತ್ತಾರೆ. ಉಪ ವಿಭಾಗ ಮಟ್ಟದ ಉಪವಿಭಾಗಾಧಿಕಾರಿಯು ಒಟ್ಟು ೧೨ ಬಗೆಯ ಅಧಿಕಾರಗಳನ್ನು ಹೊಂದಿರುತ್ತಾರೆ. ಇವರ ಕೈ ಕೆಳಗೆ ತಹಸೀಲ್ದಾರ್ ೧೮ ಬಗೆಯ ಅಧಿಕಾರ ಮುಖ್ಯ ಕಾಯಿದೆ ಕಾನೂನು ಅಧಿಕಾರ ಹೊಂದಿರುತ್ತಾರೆ ಹಾಗೂ ದಂಡಾಧಿಕಾರಿಯಾಗಿ ಈ ವಿವಿಧ ಕಾಯ್ದೆಗಳಡಿಯಲ್ಲಿ ಅಧಿಕಾರ ಕರ್ತವ್ಯಗಳನ್ನು ಹೊಂದಿರುತ್ತಾರೆ. ಜಿಲ್ಲೆಯಲ್ಲಿ ಕಂದಾಯ ಉಪವಿಭಾಗವು ಒಂದೇ ಇದ್ದು, ಹೊಸದುರ್ಗವು ಚಿತ್ರದುರ್ಗ ಕಂದಾಯ ಉಪವಿಭಾಗಕ್ಕೆ ಸೇರಿದೆ. ತಾಲ್ಲೂಕಿನಲ್ಲಿರುವ ಮುಖ್ಯ ಕಂದಾಯ ಅಧಿಕಾರಿ ಹಾಗೂ ಇನ್ನಿತರ ಕಛೇರಿಗಳ ವಿವರ ಹೀಗಿವೆ.

**ತಹಶೀಲ್ದಾರರು**

ತಹಶೀಲ್ದಾರರು ತಾಲ್ಲೂಕಿನ ಮುಖ್ಯ ಕಂದಾಯಾಧಿಕಾರಿಯಾಗಿದ್ದು, ತಮ್ಮದೇ ಆಗಿರುವ ಸಿಬ್ಬಂದಿಯ ಮೂಲಕ ಕರ್ತವ್ಯ ನಿರ್ವಹಿಸುತ್ತಾರೆ. ಶಿರಸ್ತೇದಾರ್‌ಗಳು,

ಉಪತಹಶೀಲ್ದಾರ್‌ಗಳು, ಕಂದಾಯ ವೃತ್ತ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ಅಭಿಲೇಖಪಾಲಕ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವನ್ನು ತಹಶೀಲ್ದಾರರು ಹೊಂದಿದ್ದಾರೆ.

**ತಹಶೀಲ್ದಾರರು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆ ಮತ್ತು ಕಾನೂನುಗಳು ಹೀಗಿವೆ**: (೧) ಕರ್ನಾಟಕ ಭೂಸುಧಾರಣಾ ಅಧಿನಿಯಮ ೧೯೬೧ ಮತ್ತು ನಿಯಮಾವಳಿ ೧೯೭೪, (೨) ಕರ್ನಾಟಕ ಹಲವು ಇನಾಂ ರದ್ಧತಿ ಅಧಿನಿಯಮ ೧೯೭೭, (೩) ಕರ್ನಾಟಕ ಗ್ರಾಮ ನೌಕರಿಗಳ ರದ್ಧತಿ ಅಧಿನಿಯಮ ೧೯೬೧, (೪) ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪, (೫) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ ೧೯೭೪ ಮತ್ತು ನಿಯಮಾವಳಿ ೧೯೭೫, (೬) ವೃದ್ಧಾಪ್ಯ ವೇತನ ಮಂಜೂರು ಮಾಡುವುದು, (೭) ನಿರ್ಗತಿಕ ವಿಧವಾ ವೇತನ ನಿಯಮಾವಳಿ ೧೯೭೬, (೮) ಮತದಾರರ ನೋಂದಣಿ ನಿಯಮಾವಳಿ ೧೯೬೦, (೯) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ ೧೯೬೬, (೧೦) ಕರ್ನಾಟಕ ನೀರಾವರಿ ಅಧಿನಿಯಮ ೧೯೬೪, (೧೧) ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಾವಳಿ ೧೯೬೫, (೧೨) ಕರ್ನಾಟಕ ಅರಣ್ಯ ನಿಯಮಾವಳಿ ೧೯೬೯, (೧೩) ಉದ್ದಿಮೆಗಳಿಗೆ ಕರ್ನಾಟಕ ರಾಜ್ಯದ ನೆರವು ನಿಯಮಾವಳಿ ೧೯೬೬, (೧೪) ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ ೧೯೬೬, (೧೫) ಏಲಕ್ಕಿ ಅಧಿನಿಯಮ ೧೯೬೫, (೧೬) ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ ೧೯೭೪ ಮತ್ತು ಅದರಡಿಯ ನಿಯಮಾವಳಿ.

**ಇಷ್ಟೇ ಅಲ್ಲದೆ ತಾಲ್ಲೂಕಿನ ದಂಡಾಧಿಕಾರಿಯಾಗಿ ತಹಶೀಲ್ದಾರರು ಹೊಂದಿರುವ ಅಧಿಕಾರ ಮತ್ತು ಕರ್ತವ್ಯಗಳು ಹೀಗಿವೆ**: ೧) ದಂಡ ಪ್ರಕ್ರಿಯೆ ಸಂಹಿತೆ ೧೯೭೪, ೨) ಭಾರತ ಸಾಕ್ಷ್ಯ ಅಧಿನಿಯಮ ೧೯೬೩, ೩) ಕರ್ನಾಟಕ ಪೋಲಿಸ್ ಅಧಿನಿಯಮ, ೪) ಜೀತದಾಳು ಪದ್ಧತಿ (ನಿರ್ಮೂಲನ) ಅಧಿನಿಯಮ ೧೯೭೬, ೫) ಪ್ರಮಾಣವಚನ ಅಧಿನಿಯಮ ೧೯೯೯, ೬) ಭಾರತ-ಮುದ್ರಾಂಕ ಅಧಿನಿಯಮ ೧೮೯೯, ೭) ಭಾರತೀಯ ತಂತಿ ಅಧಿನಿಯಮ ೧೯೮೫, ೮) ನ್ಯಾಯಾಧೀಶರ (ರಕ್ಷಣೆ) ಅಧಿನಿಯಮ ೧೯೬೫, ೯) ಪ್ರಾಣಿಹಿಂಸೆ ತಡೆ ಅಧಿನಿಯಮ ೧೯೬೦, ೧೦) ಕರ್ನಾಟಕ ಭಿಕ್ಷಾಟನಾ (ನಿರ್ಮೂಲನ) ಅಧಿನಿಯಮ ೧೯೭೫, ೧೧) ಸಾರ್ವಜನಿಕ ಆರೋಗ್ಯ ಅಧಿನಿಯಮ ೧೯೪೪, ೧೨) ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೭, ೧೩) ನ್ಯಾಯವಾದಿಗಳ ಅಧಿನಿಯಮ ೧೯೬೧, ೧೪) ವಿದ್ಯುಚ್ಛಕ್ತಿ ಅಧಿನಿಯಮ ೧೯೧೦, ೧೫) ಸತಿ ಹೋಗುವ (ನಿಷೇಧ) ಅಧಿನಿಯಮ ೧೯೮೭, ೧೬) ನ್ಯಾಯಾಲಯ ನಿಂದನ (ಪ್ರತಿಬಂಧಕ) ಅಧಿನಿಯಮ ೧೯೭೧, ೧೭) ಖೈದಿಗಳನ್ನು ಗುರುತಿಸುವ ಅಧಿನಿಯಮ ೧೯೨೯, ೧೮) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ

ನಿಷೇಧ) ಅಧಿನಿಯಮ ೧೯೮೯, ೧೯) ಕರ್ನಾಟಕ ಆಹಾರ ಮತ್ತು ನಾಗರೀಕ ಸೇವಾ ಅಧಿನಿಯಮ ೧೯೮೯, ೨೦) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ, ೨೧) S.I.T.A. ಅಧಿನಿಯಮ (Suppression of immoral Traffic Act).

(ಆಕರ: ಮಾಹಿತಿ ಹಕ್ಕು ಅಧಿನಿಯಮ ೨೦೦೫ ರನ್ವಯ ಕಛೇರಿ ಮಾಹಿತಿ ಕೈಪಿಡಿ, ಜಿಲ್ಲಾಡಳಿತ, ದಾವಣಗೆರೆ ಮತ್ತು ಸರ್ಕಾರಿ ಸುತ್ತೋಲೆಗಳು)

೨೦೦೫ರಿಂದ ತಹಶೀಲ್ದಾರರು ಭೂಮಾಪನ ಸಿಬ್ಬಂದಿಯನ್ನು ಸಹ ಹೊಂದಿದ್ದಾರೆ. ಅಲ್ಲದೆ, ಮಾಹಿತಿ ಹಕ್ಕು ಅಧಿನಿಯಮ ೨೦೦೫ರ ಪ್ರಕಾರ ತಹಶೀಲ್ದಾರರು 'ಸಾರ್ವಜನಿಕ ಮಾಹಿತಿ ಅಧಿಕಾರಿ'ಯಾಗಿದ್ದು, ಕಛೇರಿಯ ತಾಲ್ಲೂಕು ಶಿರಸ್ತೆದಾರನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾನೆ ಹಾಗೂ ಕಂದಾಯ ಉಪವಿಭಾಗಾಧಿಕಾರಿಯು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ. ಕರ್ನಾಟಕ ನಾಗರಿಕ ಸೇವೆಗಳ ಖಾತರಿ ಅಧಿನಿಯಮ ೨೦೧೧ರ ಮೇರೆಗೆ, ಕಂದಾಯ ಇಲಾಖೆಗೆ ಸಂಬಂಧಪಟ್ಟ ಒಟ್ಟು ೧೯ ಸೇವೆಗಳ ದಾಖಲೆಗಳನ್ನು ನಿಗದಿತ ಗಡುವಿನಲ್ಲಿ ಒದಗಿಸುವ ಅಧಿಕಾರಿಯಾಗಿ ತಹಶೀಲ್ದಾರರು ಜವಾಬ್ದಾರಿ ಹೊಂದಿರುತ್ತಾರೆ. ಹಕ್ಕುಗಳ ಪ್ರಮಾಣಪತ್ರ ದಾಖಲೆ, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ, ಜನಸಂಖ್ಯೆ ಪ್ರಮಾಣಪತ್ರ, ನಿವಾಸಿ ಪ್ರಮಾಣಪತ್ರ, ಟೆನೆನ್ಸಿ ಇಲ್ಲದ ಪ್ರಮಾಣಪತ್ರ, ಜೀವಂತ ಪ್ರಮಾಣಪತ್ರ, ಕೃಷಿಕುಟುಂಬ ಸದಸ್ಯ ಪ್ರಮಾಣಪತ್ರ, ಮರುವಿವಾಹ ಅಲ್ಲದ ಪ್ರಮಾಣಪತ್ರ, ಭೂರಹಿತ ಪ್ರಮಾಣಪತ್ರ, ಜೀವಿತ ಕುಟುಂಬ ಸದಸ್ಯ ಪ್ರಮಾಣಪತ್ರ, ನಿರುದ್ಯೋಗಿಯ ಪ್ರಮಾಣಪತ್ರ, ಸರ್ಕಾರಿ ಕೆಲಸದಲ್ಲಿಲ್ಲದ ಪ್ರಮಾಣಪತ್ರ, ಕೃಷಿಕ ಪ್ರಮಾಣಪತ್ರ, ಸಣ್ಣ/ಮಧ್ಯಮ ರೈತ ಪ್ರಮಾಣಪತ್ರ, ಕೃಷಿಕಾರ್ಮಿಕ ಪ್ರಮಾಣಪತ್ರ, ಕೆನೆಪದರ ಅಲ್ಲದ ಪ್ರಮಾಣಪತ್ರ, ವಾಸಸ್ಥಳದ ಪ್ರಮಾಣಪತ್ರ, ಪರಿವರ್ತನೆಯ ಉದ್ಧೃತ–ಇವುಗಳನ್ನು ನಿಗದಿತ ಗಡುವಿನಲ್ಲಿ ತಹಶೀಲ್ದಾರರು ವಿತರಿಸಲು ಬದ್ಧರಾಗಿರುತ್ತಾರೆ.

**ತಹಶೀಲ್ದಾರರ ಕಛೇರಿಯಲ್ಲಿನ ಶಾಖೆಗಳು ಹೀಗಿವೆ**: ಭೂಮಂಜೂರಾತಿ, ಭೂಸುಧಾರಣೆ, ಭೂಸ್ವಾಧೀನ, ಲೆಕ್ಕಶಾಖೆ, ಪ್ರಕೃತಿ ವಿಕೋಪ, ಹಕ್ಕು ದಾಖಲೆ, ಸಿಬ್ಬಂದಿ ಶಾಖೆ, ನಗರ ಭೂಪರಿಮಿತಿ, ಅಭಿಲೇಖಾಲಯ, ಭೂಪರಿವರ್ತನೆ, ಸ್ವಾತಂತ್ರ್ಯ ಹೋರಾಟಗಾರರ ಗೌರವಧನ, ಚುನಾವಣೆ, ಆಡಳಿತ, ಮೆಜಿಸ್ಟೀರಿಯಲ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಸ್ಥಿರಾಸ್ತಿ ಪರಭಾರೆ ನಿಷೇಧ, ಗಡಿಪ್ರದೇಶಾಭಿವೃದ್ಧಿ, ಕರ್ನಾಟಕ ಗ್ರಾಮರದ್ದಿಯಾತಿ ಕಾಯ್ದೆ, ಪ್ರಕೃತಿ ವಿಕೋಪ ಮುಂತಾದ ೨೮ ಶಾಖೆಗಳಿರುತ್ತವೆ. ಮೇಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಬರುವ ಆದೇಶಗಳನ್ನು ಸಹ ತಹಶೀಲ್ದಾರರು ಅನುಷ್ಠಾನಗೊಳಿಸುತ್ತಾರೆ. ತಹಶೀಲ್ದಾರರ ಅಧೀನದಲ್ಲಿ ೩ ನಾಡ ಕಛೇರಿಗಳಿದ್ದು, ಕಂದಾಯ ನಿರೀಕ್ಷಕರು ೦೪, ಗ್ರಾಮಲೆಕ್ಕಾಧಿಕಾರಿಗಳು ೪೪,

ಶಿರಸ್ತೇದಾರರು ೦೪, ಗ್ರಾಮಸಹಾಯಕರು ೪೫ ಸಂಖ್ಯೆಯಲ್ಲಿದ್ದಾರೆ. ಇವರ ಕರ್ತವ್ಯ ಉಸ್ತುವಾರಿಯನ್ನು ತಹಶೀಲ್ದಾರ್ ನಿರ್ವಹಿಸುತ್ತಾರಲ್ಲದೆ ತಾಲ್ಲೂಕಿನ ಶಾಂತಿ–ಸುವ್ಯವಸ್ಥೆಯ ಹೊಣೆ ಹೊತ್ತಿರುತ್ತಾರೆ. ಅಲ್ಲದೆ ಚುನಾವಣೆಗಳ ಸಂದರ್ಭದಲ್ಲಿ ಸಹಾಯಕ ನಿರ್ವಚನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾರೆ. ಹೊಸದುರ್ಗದಲ್ಲಿ 'ಮಿನಿ ವಿಧಾನಸೌಧ'ವು ದಿನಾಂಕ: ೧೫–೦೧–೧೯೯೮ ರಂದು ಪ್ರಾರಂಭಗೊಂಡಿರುತ್ತದೆ.

**ತಾಲ್ಲೂಕು ಪಂಚಾಯಿತಿ ಕಛೇರಿ**: ದಿನಾಂಕ:೦೧–೦೪–೧೯೫೮ರಲ್ಲಿ 'ತಾಲ್ಲೂಕು ಅಭಿವೃದ್ಧಿ ಮಂಡಳಿ'ಯು ಪ್ರಾರಂಭಗೊಂಡಿತು. ಈ ಕಛೇರಿಯಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಕಾರ್ಯನಿರ್ವಹಿಸುತ್ತಿದ್ದುದರಿಂದ 'ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಛೇರಿ' ಎಂದು ಹೆಸರಾಯಿತು. ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಹಾಗೂ ನಿರ್ವಹಣೆ ಈ ಅಧಿಕಾರಿಯ ಜವಾಬ್ದಾರಿಯಾಗಿದ್ದು, ತಾಲ್ಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರಾಗಿರುತ್ತಿದ್ದರು. ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ಹಾಗೂ ೧೯೯೩ರ ಜಿಲ್ಲಾ ಪಂಚಾಯತ್ ಕಾಯ್ದೆಗಳಿಂದಾಗಿ ಇಂದು 'ತಾಲ್ಲೂಕು ಪಂಚಾಯಿತಿ ಸಮಿತಿ' ಎಂದು ನಾಮಾಂಕಿತಗೊಂಡಿದೆ. ಇಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾಪಂಚಾಯಿತಿಯ ಉಸ್ತುವಾರಿಯಲ್ಲಿ ಕರ್ತವ್ಯ ನಿರ್ವಹಿಸುವರು. ಇವರಿಗೆ ಅಗತ್ಯವಾದ ಸಿಬ್ಬಂದಿ ಸೌಕರ್ಯಗಳು ಇರುತ್ತವೆ. ತಾಲ್ಲೂಕು ಪಂಚಾಯತ್‌ನಲ್ಲಿ ಒಟ್ಟು ೨೦ ಜನ ಚುನಾಯಿತ ಸದಸ್ಯರಿರುತ್ತಾರೆ (ಪುರುಷರು–೧೦ ಮತ್ತು ಮಹಿಳೆಯರು–೧೦). ಇವರಲ್ಲಿ ಪರಿಶಿಷ್ಟ ಜಾತಿ ಸದಸ್ಯರು ೨ (ಪುರುಷರು–೧ ಮತ್ತು ಮಹಿಳೆಯರು–೧), ಇತರ ಹಿಂದುಳಿದ ವರ್ಗಗಳ ಸದಸ್ಯರು ೬ (ಪುರುಷರು–೨ ಮತ್ತು ಮಹಿಳೆಯರು–೪) ಹಾಗೂ ಸಾಮಾನ್ಯ ಸದಸ್ಯರು ಒಟ್ಟು ೭ (ಪುರುಷರು–೫ ಮತ್ತು ಮಹಿಳೆಯರು–೨). ತಾಲ್ಲೂಕು ಪಂಚಾಯಿತಿಯಿಂದ **'ಗಿರಿಜನ ಉಪಯೋಜನೆ', 'ವಿಶೇಷ ಘಟಕಯೋಜನೆ'** ಮತ್ತಿತರ ಯೋಜನೆಯಡಿ ಸರ್ಕಾರದಿಂದ (ಜಿಲ್ಲಾ ಪಂಚಾಯತ್ ಮೂಲಕ) ಬಂದ ಅನುದಾನಗಳನ್ನು ತಾಲ್ಲೂಕಿನ ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆಗೊಳಿಸುತ್ತದೆ.

ಹೀಗೆ ತಾಲ್ಲೂಕು ಪಂಚಾಯಿತಿಯಿಂದ ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಸಹಕಾರ, ರೇಷ್ಮೆ, ಜಲಾನಯನ ಅಭಿವೃದ್ಧಿ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮತ್ತಿತರ ಇಲಾಖೆಗಳು ಅನುದಾನ ಪಡೆಯುತ್ತವೆ ಹಾಗೂ ಅನುದಾನದ ಸಮರ್ಪಕ ಬಳಕೆ ಬಗ್ಗೆ, ಉಳಿದ ಅನುದಾನ ಹಾಗೂ ಅಗತ್ಯವಿರುವ ಅನುದಾನದ ಬಗ್ಗೆ ತಾಲ್ಲೂಕು ಪಂಚಾಯಿತಿಗೆ ಈ ಇಲಾಖೆಗಳು ವರದಿ ಸಲ್ಲಿಸುವುವು.

**ಕಂದಾಯ ನಿರೀಕ್ಷಕರು**: ತಾಲ್ಲೂಕಿನಲ್ಲಿ ಹೊಸದುರ್ಗ ಕಸಬಾ, ಮತ್ತೋಡು, ಶ್ರೀರಾಂಪುರ ಮತ್ತು ಮಾಡದಕೆರೆ ಎಂದು ನಾಲ್ಕು ಕಂದಾಯ ಹೋಬಳಿಗಳಿದ್ದು, ಈ ಕಂದಾಯ ವೃತ್ತಗಳ ಆಡಳಿತ ನಿರ್ವಹಿಸಲು ಕಂದಾಯ ನಿರೀಕ್ಷಕರು ಪ್ರತಿ ಹೋಬಳಿಗೆ ಒಬ್ಬರಂತೆ ಇರುತ್ತಾರೆ. ಇವರು ತಹಶೀಲ್ದಾರರ ನೇರ ಉಸ್ತುವಾರಿಯಲ್ಲಿ ಕರ್ತವ್ಯ ನಿರ್ವಹಿಸುವರು. ಮುಖ್ಯವಾಗಿ ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ, ಭೂಕಂದಾಯ ಮುಂತಾದ ತೆರಿಗೆಗಳು, ಸರ್ಕಾರಿ ಬಾಕಿ ಸಾಲ ಹಾಗೂ ಮುಂಗಡಗಳ ವಾಪಸಾತಿ ಮುಂತಾದವುಗಳ ಶೇಖರಣೆ, ಆಹಾರ ಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಕಂದಾಯ ನಿರೀಕ್ಷಕರು ಗ್ರಾಮಲೆಕ್ಕಿಗರ ಕೆಲಸಗಳ ಮೇಲ್ವಿಚಾರಕರಾಗಿದ್ದು ಸರ್ಕಾರಿ ಜಮೀನಿನ ನಿವೇಶನಗಳ ಒತ್ತುವರಿ, ಗ್ರಾಮ ಗಡಿಯ ತಪಾಸಣೆ ಮುಂತಾದವುಗಳ ಬಗ್ಗೆ ನಿಗಾ ವಹಿಸುತ್ತಾರೆ. ದತ್ತಿ ಜಮೀನು ದಾಖಲೆಗಳ ಕ್ರೋಢೀಕರಣ, ಭೂಸ್ವಾಧೀನ ಮುಂತಾದ ಕಂದಾಯ ವಿಷಯಗಳ ಜೊತೆಗೆ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಮುಂತಾದವುಗಳ ಬಗ್ಗೆ ತಪಾಸಣೆ ಕಾರ್ಯ ನಡೆಸುವುದು ಇವರ ಜವಾಬ್ದಾರಿಯಾಗಿರುತ್ತದೆ.

**ನಾಡಕಛೇರಿ**: ತಾಲ್ಲೂಕಿನ ಹೋಬಳಿ ಕೇಂದ್ರದಲ್ಲಿ ಉಪತಹಶೀಲ್ದಾರರು ೧೯೮೬ರಿಂದ ಮುಖ್ಯಸ್ಥರಾಗಿ, ತಹಶೀಲ್ದಾರರ ಒಂಬತ್ತು ಕಂದಾಯದ ಕರ್ತವ್ಯಗಳನ್ನು ಉಪ ತಹಶೀಲ್ದಾರರು ನಿರ್ವಹಿಸುತ್ತಾರೆ. ತಾಲ್ಲೂಕಿನಲ್ಲಿ ಒಟ್ಟು ನಾಲ್ಕು ನಾಡ ಕಛೇರಿಗಳಿವೆ. ಉಪತಹಶೀಲ್ದಾರ್‌ರ ನೆರವಿಗೆ ಸೂಕ್ತ ಸಿಬ್ಬಂದಿ ವರ್ಗವಿರುತ್ತದೆ. ತಹಶೀಲ್ದಾರರು ಆಗಾಗ್ಗೆ ನಾಡಕ ಛೇರಿಗಳಿಗೆ ಭೇಟಿ ನೀಡಿ, ಕಾರ್ಯವೈಖರಿಯನ್ನು ಪರಿಶೀಲಿಸುವರಲ್ಲದೆ, ಕ್ಲಿಷ್ಟ ವಿಷಯ ಪ್ರಕರಣಗಳಲ್ಲಿ ಮಾರ್ಗದರ್ಶನ ಮಾಡುವರು. ಉಪವಿಭಾಗಾಧಿಕಾರಿ ಅಥವಾ ಜಿಲ್ಲಾಧಿಕಾರಿಗಳು ಕೆಲವೊಮ್ಮೆ ನಾಡಕಛೇರಿಗೆ ದಿಢೀರ್ ಭೇಟಿ ನೀಡಿ ಕಾರ್ಯಗಳನ್ನು ಪರಿಶೀಲಿಸುವುದುಂಟು.

**ಗ್ರಾಮಪಂಚಾಯಿತಿಯ ಗ್ರಾಮಲೆಕ್ಕಿಗರು**: ೧೯೫೧ರ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದಡಿ ಗ್ರಾಮ ಪಂಚಾಯಿತಿಗಳು ರಚನೆಗೊಂಡು ೧೯೮೭ ರವರೆಗೆ ಕಾರ್ಯನಿರ್ವಹಿಸಿದವು. ಶೇ.೩೦ ಹಾಗೂ ಶೇ.೧೦ರಷ್ಟು ಭೂಕಂದಾಯ ಅನುದಾನ ಮತ್ತು ಗ್ರಾಮಪಂಚಾಯಿತಿಯ ಮನೆ, ನಿವೇಶನ, ಬಂಡಿ ಮುಂತಾದ ತೆರಿಗೆಗಳೇ ಸಂಪನ್ಮೂಲವಾಗಿದ್ದವು. ಸರಾಸರಿ ೫೦೦ರಿಂದ ೨,೦೦೦ರ ವರೆಗೆ ಪ್ರತಿ ಗ್ರಾಮ ಪಂಚಾಯಿತಿ ಆದಾಯ ಹೊಂದಿದ್ದಿತು. ಬೆಲಗೂರು ಅತ್ಯಂತ ಹೆಚ್ಚು ಆದಾಯ ಮತ್ತು ದಕ್ಷ ಆಡಳಿತ ಹೊಂದಿದ ಪಂಚಾಯಿತಿ ಆಗಿದ್ದು, ಗ್ರಾಮ ರಚನೆ, ಶಿಕ್ಷಣ ಮತ್ತು ಆರೋಗ್ಯ ವಿಚಾರದಲ್ಲಿ ಅತ್ಯಂತ ಅಧಿಕ ಕಾರ್ಯ ಮಾಡಿದ್ದ ಪಂಚಾಯಿತಿ ಎಂದು ಕಂಡು ಬಂದಿತು. ಆಗಿನ ಒಟ್ಟು ಗ್ರಾಮಪಂಚಾಯಿತಿಗಳ ಸಂಖ್ಯೆ

೩೮ ಇದ್ದವು. ೧೯೮೭ರಿಂದ ೧೯೯೩ರ ವರೆಗೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಕಾಯ್ದೆ ಜಾರಿಗೆ ಬಂದಿತು. ಈ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಆರ್ಥಿಕ ಸ್ಥಿತಿ ಸುಧಾರಣೆಗೊಂಡಿತಲ್ಲದೆ ಅಧಿಕಾರವೂ ಹೆಚ್ಚಾಯಿತು. ಆದರೆ ಮಂಡಲ ಪಂಚಾಯಿತಿಗಳ ರಚನೆಯಲ್ಲಿ ಆದ ಮಹತ್ತರವಾದ ಬದಲಾವಣೆಗಳಿಂದ ಗ್ರಾಮಾಂತರ ಪ್ರದೇಶದ ಜನರು ಮಂಡಲ ವ್ಯಾಪ್ತಿಯ ಗ್ರಾಮಗಳಲ್ಲಿ ತಮ್ಮ ಮಾನಸಿಕ ಹೊಂದಾಣಿಕೆ ಮಾಡಿಕೊಳ್ಳುವಷ್ಟರಲ್ಲಿ ಆ ಕಾಯ್ದೆಯು ಹೊರಟುಹೋಯಿತು.

ಅಧಿಕಾರ ವಿಕೇಂದ್ರೀಕರಣವಾಗಿದ್ದರೂ, ಆ ವ್ಯವಸ್ಥೆಯಿಂದ ಹೆಚ್ಚಿನ ಪ್ರಯೋಜನ ವನ್ನು ಕಾಣುವುದು ಸಾಧ್ಯವಾಗಲಿಲ್ಲ. ೧೯೯೩ರ ನಂತರ, ಜನಸಂಖ್ಯೆಯ ಸರಾಸರಿ ೩,೦೦೦ ದಿಂದ ೭,೫೦೦ ರ ವರೆಗೆ ಒಂದು ಗ್ರಾಮ ಪಂಚಾಯಿತಿಯಂತೆ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶವನ್ನು ೩೩ ಗ್ರಾಮ ಪಂಚಾಯಿತಿಗಳನ್ನಾಗಿ ರಚನೆ ಮಾಡಲಾಗಿರುತ್ತದೆ (ಪಂಚಾಯತ್‌ರಾಜ್ ಕಾಯ್ದೆ ೧೯೯೩ರಡಿ). ಈ ಕಾಯ್ದೆಯಡಿ ಪಂಚಾಯಿತಿಗಳ ವ್ಯಾಪ್ತಿ ಸೀಮಿತಗೊಂಡಿದ್ದರಿಂದಾಗಿ ಹಾಗೂ ಯಥೇಚ್ಛ ಅನುದಾನಗಳು ದೊರಕುವುದರಿಂದ ಪಂಚಾಯಿತಿಗಳು ಗ್ರಾಮೀಣ ಅಭಿವೃದ್ಧಿಯ ಎಲ್ಲಾ ರೀತಿಯ ಯೋಜನೆಗಳನ್ನು ಹಮ್ಮಿಕೊಳ್ಳುವ ಅಧಿಕಾರವನ್ನು ಹೊಂದಿ ಪ್ರಗತಿಯ ಹಾದಿಯಲ್ಲಿವೆ. ಆನಿವಾಳ, ದೊಡ್ಡ ಕಿಟ್ಟದಹಳ್ಳಿ, ಚಿಕ್ಕಬ್ಯಾಲದಕೆರೆ ಇವು ಅತಿ ಚಿಕ್ಕ ಗ್ರಾಮ ಪಂಚಾಯಿತಿಗಳಾಗಿದ್ದು, ಗುಡ್ಡದನೇರಲಕೆರೆ, ಬೆಲಗೂರು, ಜಾನಕಲ್ಲು, ದೊಡ್ಡಘಟ್ಟ, ಸಾಣೇಹಳ್ಳಿ, ಕಂಗುವಳ್ಳಿ ಮುಂತಾದವು ದೊಡ್ಡ ಗ್ರಾಮಪಂಚಾಯಿತಿಗಳಾಗಿವೆ.

ಪ್ರತಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಚುನಾವಣೆ ಮೂಲಕ ಕೃಷಿ, ಆರೋಗ್ಯ, ಗ್ರಾಮ ಕೈಗಾರಿಕೆ, ಸಾಮಾಜಿಕ ಸಮಿತಿ ರಚಿಸಿ ಕಾರ್ಯ ನಿರ್ವಹಿಸಬೇಕಾಗಿದ್ದು, ತಿಂಗಳಿಗೊಮ್ಮೆ ಗ್ರಾಮಪಂಚಾಯಿತಿ ಸಭೆ ನಡೆಸಬೇಕಾಗಿತ್ತು. ಈಗಲೂ ಗ್ರಾಮಪಂಚಾಯಿತಿ ವ್ಯವಸ್ಥೆ ಮುಂದುವರೆದಿದೆ. ತಾಲ್ಲೂಕಿನಲ್ಲಿ ಒಟ್ಟು ೩೮ ಗ್ರಾಮಲೆಕ್ಕಿಗರಿದ್ದು, ಪ್ರಾಚೀನ ಕಾಲದಲ್ಲಿ ಆಡಳಿತ ನಿರ್ವಹಣೆಗೆ ವಿವಿಧ ಕಾರ್ಯಕರ್ತರು ಗ್ರಾಮಗಳಲ್ಲಿ ಅನೇಕ ಕರ್ತವ್ಯಗಳನ್ನು ಮಾಡುತ್ತಿದ್ದರು. ಇವರನ್ನು 'ಹದಿನೆಂಟು ಸಮೆಯಿಗಳು" ಎನ್ನಲಾಗುತ್ತಿತ್ತು.

೧೯೪೭ರ ಸ್ವಾತಂತ್ರ್ಯ ಬರುವವರೆಗೆ ಗೌಡ, ಶ್ಯಾನುಭೋಗ, ತೋಟಿ, ತಳವಾರ, ನೀರಗಂಟಿ ಮುಂತಾದವರು ಉಳಿದಿದ್ದರು. ವಂಶವಾರು ಇದ್ದ ಈ ಕರ್ತವ್ಯದವರನ್ನು ೧೯೪೭ರ ವೇಳೆಗೆ ಕಾನೂನುಬದ್ಧವಾಗಿ ತೆಗೆದು ಹಾಕಿ ಗ್ರಾಮಾಡಳಿತವನ್ನು ಗ್ರಾಮಲೆಕ್ಕಾಧಿಕಾರಿಗೆ ವಹಿಸಲಾಯಿತು. ಕಂದಾಯ ಶೇಖರಣೆ, ಗ್ರಾಮ ದಾಖಲೆಗಳ ಸಂರಕ್ಷಣೆ–ನಿರ್ವಹಣೆ ಇವರ ಜವಾಬ್ದಾರಿಯಾಗಿದ್ದು, ಇವರು ಜನರಿಗೂ ಸರ್ಕಾರಕ್ಕೂ ಇರುವ ಕೊಂಡಿಯಾಗಿದ್ದಾರೆ. ಗ್ರಾಮ ಸಹಾಯಕರು ಇವರ ಅಧೀನದಲ್ಲಿ ಪೂರಕವಾಗಿ ಕೆಲಸ ಮಾಡುವರು.

**ಗ್ರಾಮ ಸಹಾಯಕರು**: ತಾಲ್ಲೂಕಿನಲ್ಲಿ ಒಟ್ಟು ೪೫ ಜನ ಗ್ರಾಮ ಸಹಾಯಕರಿದ್ದಾರೆ. ಹಿಂದಿನ ಕಾಲದಲ್ಲಿ '೧೮ ಸಮೆಯಿಗಳು' ಮಾಡುತ್ತಿದ್ದ ಕೆಲಸಗಳನ್ನು ಇವರು ಗ್ರಾಮಲೆಕ್ಕಿಗರ ಅಧೀನದಲ್ಲಿ ಮಾಡುವರು. ಗ್ರಾಮಲೆಕ್ಕಿಗರ ಸಹಾಯಕರಾಗಿ, ಟಪಾಲು ಮುಟ್ಟಿಸುವವರಾಗಿ, ದಫ್ತರ್‌ಗಳನ್ನು ಸಾಗಿಸುವವರಾಗಿ ಮುಂತಾದ ಅನೇಕ ಕೆಲಸಗಳನ್ನು ಮಾಡಿಕೊಡುತ್ತಾರೆ.

**ಭೂಮಾಪಕರು**: ೨೦೦೫ರಿಂದ ಭೂಮಾಪನ ಇಲಾಖೆಯು ಕಂದಾಯ ಇಲಾಖೆಯಲ್ಲಿ ವಿಲೀನಗೊಂಡಿದ್ದು, ಭೂಮಾಪಕರು ತಹಶೀಲ್ದಾರರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವರು. ಜಮೀನುಗಳ ಹದ್ದುಬಸ್ತು, ಅಳತೆ, ಪೋಡು-ದುರಸ್ತಿ, ಸರ್ಕಾರಿ ಆಸ್ತಿಗಳ ಅಳತೆ (ಕೆರೆ, ಶಾಲೆಯ ಜಮೀನು ಇತ್ಯಾದಿ) ಮುಂತಾದ ಕೆಲಸವನ್ನು ಭೂಮಾಪಕರು ನಿರ್ವಹಿಸುವರು. ಇವರ ತಾಂತ್ರಿಕ ವಿಚಾರಗಳ ಉಸ್ತುವಾರಿಗಾಗಿ ಭೂಮಾಪನ ತಪಾಸಕರು (ಪರ್ಯಾವೇಕ್ಷಕರು), ಅಧೀಕ್ಷಕರು ಹಾಗೂ ಸಹಾಯಕ ನಿರ್ದೇಶಕರು ಇರುತ್ತಾರೆ. ಇತ್ತೀಚೆಗೆ ಸರ್ಕಾರಿ ಭೂಮಾಪಕರಲ್ಲದೆ ಖಾಸಗಿ ಭೂಮಾಪಕರು ಸಹ ನೋಂದಣಿಯಾಗುವ ಜಮೀನುಗಳ ಅಳತೆ ಮಾಡಿ ನಕ್ಷೆ ತಯಾರಿಸಿಕೊಡುವ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಭೂಮಾಪಕರು ಜಮೀನು ಅಳೆಯಲು ಬೇಕಾಗುವ ಸರಪಳಿ, ಕ್ರಾಸ್‌ಸ್ಟಾಫ್ ಮುಂತಾದ ಸಲಕರಣೆ ಒಯ್ಯಲು ಹಾಗೂ ಜಮೀನಿನಲ್ಲಿ ಸರಪಳಿ ಹಿಡಿಯಲು ಇವರಿಗೆ ಬಾಂದು ಜವಾನ ಎಂಬ ಸೇವಕನಿರುತ್ತಾನೆ. ಜಮೀನುದಾರನಿಗೆ ಹಾಗೂ ಜಮೀನಿನ ಬಾಜೂದಾರರಿಗೆ ಅಳತೆ ಬಗ್ಗೆ ಮುಂಚಿತವಾಗಿ ನೋಟಿಸು ತಲುಪಿಸುವುದು ಸಹ ಬಾಂದು ಜವಾನನ ಕೆಲಸವಾಗಿರುತ್ತದೆ. ಭೂಮಾಪಕರು ಹೊಸದಾಗಿ ನೇಮಕಗೊಂಡಾಗ ಅವರಿಗೆ ಭೂಮಾಪನದ ಬಗ್ಗೆ ತರಬೇತಿ ನೀಡಲು ಮೈಸೂರಿನಲ್ಲಿ ಭೂಮಾಪನ ತರಬೇತಿ ಕೇಂದ್ರವಿದ್ದು, ಅಲ್ಲಿ ಹೊಸ ಅಭ್ಯರ್ಥಿಗಳಿಗೆ ಆರು ತಿಂಗಳು ತರಬೇತಿಯನ್ನು ಕರಾರುವಕ್ಕಾಗಿ ನೀಡುತ್ತದೆ. ವಿವಿಧ ಅಧಿಕಾರಿಗಳಿಗೂ ಸಹ ಅಲ್ಲಿ ಆಗಾಗ್ಗೆ ತರಬೇತಿ ನೀಡುವ ಯೋಜನೆ ಇದೆ. ಪ್ರತಿ ವರ್ಷ ಏಪ್ರಿಲ್ ೧೦ ಭೂಮಾಪಕರ ದಿನಾಚರಣೆ ಆಚರಿಸುತ್ತಾರೆ.

**ನ್ಯಾಯಾಡಳಿತ**:

ಹಿಂದಿನ ಕಾಲದಲ್ಲಿ ಬೂದಿಹಾಳು ಪಾಳೆಯಗಾರರು, ಮತ್ತೋಡು ಪಾಳೆಯಗಾರರು, ಅದಕ್ಕೂ ಪ್ರಾಚೀನದಲ್ಲಿ ನೀರಗುಂದದ ರಾಜಾಧಿರಾಜರುಗಳು ತಮ್ಮ-ತಮ್ಮ ಆಡಳಿತದಲ್ಲಿ ವಿವಿಧ ನ್ಯಾಯ ತೀರ್ಮಾನಗಳನ್ನು ನೀಡಿ ಶಾಸನಗಳನ್ನು ಹೊರಡಿಸಿರುವ ಉದಾಹರಣೆಗಳನ್ನು ಕಾಣಬಹುದು. ಸಿರುಮನ ಸಾಂಗತ್ಯಗಳಲ್ಲೂ

ಈ ಅಂಶ ಗೋಚರಿಸುತ್ತದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ತಾಲೂಕಿನಾದ್ಯಂತ ಗ್ರಾಮಗಳಲ್ಲಿ ಕಟ್ಟೆಮನೆಗಳಿರುತ್ತಿದ್ದವು. ನ್ಯಾಯದ ಕಟ್ಟೆಗಳಲ್ಲಿ 'ಪಂಚಾಯಿತಿ' ನಡೆಸಿ ತೀರ್ಮಾನ ಮಾಡುತ್ತಿದ್ದರು. ೧೮೬೨ ರಿಂದ ೧೮೮೨ ರವರೆಗೆ ಹೊಸದುರ್ಗವು ಹೊಳಲ್ಕೆರೆ ತಾಲ್ಲೂಕಿಗೆ ಸೇರಿದ ಒಂದು 'ಸಮ್ಮತು' ಆಗಿದ್ದಿತು. ಹೊಸದುರ್ಗ ಪ್ರದೇಶದ ಖಟ್ಲೆಗಳು ಹೊಳಲ್ಕೆರೆ ನ್ಯಾಯಾಲಯದಲ್ಲಿ ನಡೆಯುತ್ತಿದ್ದವು. ೧೯೬೬ರ ವರೆಗೆ ಇಲ್ಲಿನ ಪ್ರಕರಣಗಳು ದಾವಣಗೆರೆ ಸಿವಿಲ್ ಕೋರ್ಟ್‌ನಲ್ಲಿ ಹಾಗೂ ಚಿತ್ರದುರ್ಗ ಜೆ.ಎಂ. ಎಫ್.ಸಿ. ಯಲ್ಲಿ ನಡೆಯುತ್ತಿದ್ದವು. ೧೯೬೯ರಲ್ಲಿ ಚಿತ್ರದುರ್ಗದ ಸಿವಿಲ್ ಕೋರ್ಟ್‌ನಲ್ಲಿ ಮಾತ್ರ ನಡೆಯುತ್ತಿದ್ದವು. ಚಿತ್ರದುರ್ಗ ಜೆ.ಎಂ.ಎಫ್.ಸಿ.ಯಲ್ಲಿ ೧೯೬೯ ರಿಂದ ೧೦–೦೪–೧೯೭೨ ರವರೆಗೆ ಮುಂದುವರೆಯಿತು.

ದಿನಾಂಕ ೧೦ನೇ ಏಪ್ರಿಲ್ ೧೯೭೨ರಿಂದ ಹೊಸದುರ್ಗದಲ್ಲಿ ಸಿವಿಲ್ ಕೋರ್ಟ್ ಮತ್ತು ಜೆ.ಎಂ.ಎಫ್.ಸಿ. ಎರಡೂ ನ್ಯಾಯಾಲಯಗಳು ಪ್ರಾರಂಭಗೊಂಡವು. ಸಿವಿಲ್ ಪ್ರಕರಣಗಳ ಮೇಲ್ಮನವಿ ನ್ಯಾಯಾಲಯವು ಚಿತ್ರದುರ್ಗದಲ್ಲೇ ೧೯೯೦ರ ವರೆಗೆ ಮುಂದುವರೆಯಿತು. ೧೯೯೦ ರಿಂದ ಮೇಲ್ಮನವಿ ನ್ಯಾಯಾಂಗವು ನೆರೆಯ ತಾಲೂಕಾದ ಹೊಳಲ್ಕೆರೆಯಲ್ಲಿ ನಡೆಯತೊಡಗಿತು. ತರುವಾಯ ೨೦೦೮ರಿಂದ ಹೊಸದುರ್ಗದಲ್ಲಿ 'ಇಟನರರಿ ಸಿವಿಲ್ ಕೋರ್ಟ್' (ಹಂಗಾಮಿ ನ್ಯಾಯಾಲಯ ಪೀಠ) ವಾರದಲ್ಲಿ ಮೂರು ದಿನ (ಗುರುವಾರ, ಶುಕ್ರವಾರ ಮತ್ತು ಶನಿವಾರ) ಇಲ್ಲಿ ಕಲಾಪ ನಡೆಸುತ್ತಿದೆ. ಬಹಳ ಪ್ರಕರಣಗಳು ಇರುವುದರಿಂದ ಈ ನ್ಯಾಯಾಲಯವು ಹೊಸದುರ್ಗದಲ್ಲಿ ಖಾಯಂ ಆಗಬೇಕಾದ ಬಗ್ಗೆ ಜನರ ಒತ್ತಾಯವಿದೆ. ಹೊಸದುರ್ಗದಲ್ಲಿ ೧೯೭೨ರಿಂದ ಪುರಸಭೆ ಕಟ್ಟಡದಲ್ಲಿ ಕಲಾಪ ನಡೆಸಿದ ನ್ಯಾಯಾಲಯವು, ೨೦೦೦ರಲ್ಲಿ ನೂತನ ನ್ಯಾಯಾಲಯ ಕಟ್ಟಡಕ್ಕೆ ಸ್ಥಳಾಂತರಗೊಂಡಿದ್ದು, ಕಲಾಪ ನಡೆಸುತ್ತಿದೆ. ಪ್ರಿನ್ಸಿಪಾಲ್ ಜಡ್ಜ್‌ರವರಿಗೆ ವಸತಿ ಸೌಲಭ್ಯವಿದೆ. ಹೆಚ್ಚುವರಿ ಸಿವಿಲ್ ಜಡ್ಜ್ ಕೋರ್ಟ್ ೧೯೯೭ರಿಂದ ಪ್ರಾರಂಭಗೊಂಡಿದೆ. ಹೊಸದುರ್ಗದಲ್ಲಿ ಒಟ್ಟು ೩ ಜನ ನೋಟರಿಗಳು ಇದ್ದಾರೆ. (ಹಿಂದೆ ಒಬ್ಬರು ಮಾತ್ರ ನೇಮಕಗೊಂಡಿದ್ದರು).

**ಹೊಸದುರ್ಗ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ಮತ್ತು ಬಾಕಿ ಇರುವ ಪ್ರಕರಣಗಳು (ಖಟ್ಲೆಗಳು) ಈ ರೀತಿಯಾಗಿವೆ** : ಸಿವಿಲ್ ಪ್ರಕರಣಗಳು ೨೦೦೫ರಲ್ಲಿ ಅಂದಾಜು ೨೫೦ ಪ್ರಕರಣಗಳು ದಾಖಲಾಗಿದ್ದು, ೧ ಬಾಕಿ ಇದೆ. ೨೦೦೬ರಲ್ಲಿ ೩೨೦ ದಾಖಲು (೩ ಬಾಕಿ), ೨೦೦೭ರಲ್ಲಿ ೨೩೦ ದಾಖಲಾತಿ (೫ ಬಾಕಿ), ೨೦೦೮ರಲ್ಲಿ ೩೨೦ ಪ್ರಕರಣ ದಾಖಲು (ಬಾಕಿ ೨೦), ೨೦೦೯ರಲ್ಲಿ ೨೯೯ ದಾಖಲಾತಿ (ಬಾಕಿ ೩೮), ೨೦೧೦ರಲ್ಲಿ ೩೦೫ ಪ್ರಕರಣ ದಾಖಲಾತಿ (ಬಾಕಿ ೪೧), ೨೦೧೧ರಲ್ಲಿ ೩೦೯ ದಾಖಲಾತಿ (ಬಾಕಿ ೭೭) ಹಾಗೂ ೨೦೧೨ರಲ್ಲಿ (ಅಕ್ಟೋಬರ್ ೧೨ರವರೆಗೆ) ೩೧೦ ಪ್ರಕರಣ ದಾಖಲಾತಿ (ಬಾಕಿ ೧೨೮), ಕ್ರಿಮಿನಲ್ ಖಟ್ಲೆಗಳ ಸಂಖ್ಯೆ ೨೦೦೭ರಲ್ಲಿ ಅಂದಾಜು ೬೫೦ ದಾಖಲಾಗಿದ್ದು,

ಬಾಕಿ ೫ ಇವೆ, ೨೦೦೮ರಲ್ಲಿ ೫೫೦ ಖಟ್ಲೆಗಳು ದಾಖಲಾಗಿದ್ದು ಬಾಕಿ ೩ ಉಳಿದಿವೆ, ೨೦೦೯ರಲ್ಲಿ ೬೮೦ ದಾಖಲಾತಿ (ಬಾಕಿ ೩೦), ೨೦೧೦ರಲ್ಲಿ ೭೧೦ ದಾಖಲು (ಬಾಕಿ ೭೫), ೨೦೧೧ರಲ್ಲಿ ೬೦೦ ದಾಖಲಾತಿಯಾಗಿದ್ದು, ಬಾಕಿ ೧೬೩ ಉಳಿದಿವೆ.

ಬ್ರಿಟೀಷರ ಕಾಲದಲ್ಲಿ ಮತ್ತೋಡು ಸಹ ತಾಲ್ಲೂಕು ಕೇಂದ್ರವಾಗಿದ್ದು, ಅಲ್ಲಿ 'ಕೋರ್ಟ್‌ಬೆಂಚ್' ಇದ್ದಿತು. ಸದರಿ ಬೆಂಚ್ ಕೋರ್ಟ್‌ಗೆ ಸಾರ್ವಜನಿಕ ಗಣ್ಯವ್ಯಕ್ತಿಯೊಬ್ಬರನ್ನು ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಗುತ್ತಿದ್ದಿತು. ಸ್ಥಳೀಯರಲ್ಲಿಯೇ ಆ ರೀತಿ ಗಣ್ಯರನ್ನು ಆಯ್ಕೆ ಮಾಡಲಾಗುತ್ತಿದ್ದಿತು.

## ಪೋಲೀಸ್ ವ್ಯವಸ್ಥೆ

೧೮೩೦ರಲ್ಲಿ ಬೂದಿಹಾಳು ಶ್ರೀರಾಂಪುರದಲ್ಲಿ ಬೂದಿ ಬಸಪ್ಪನ ನೇತೃತ್ವದಲ್ಲಿ ಉಂಟಾದ 'ರೈತರ ದಂಗೆ'ಯನ್ನು ಶಮನಗೊಳಿಸಲು ಆಗಿನ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮಧ್ಯೆ ಪ್ರವೇಶಿಸಿದ್ದರು. ಈಗ, ಹೀಗೆ ಉಂಟಾಗುವ ಸಾಮೂಹಿಕ ಗಲಭೆಗಳನ್ನಾಗಲಿ, ಕಳವು, ಕೊಲೆ, ದರೋಡೆ ಮುಂತಾದ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಿ, ಅದಕ್ಕೆ ಕಾರಣರಾದ ಅಪರಾಧಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವುದು, ಸಣ್ಣ-ಪುಟ್ಟ ಪ್ರಕರಣಗಳನ್ನು ತಮ್ಮ ಹಂತದಲ್ಲಿಯೆ ಇತ್ಯರ್ಥ ಪಡಿಸುವುದು (ಉದಾ: ಹಳ್ಳಿಗಳ ಎರಡು ಗುಂಪು ಅಥವಾ ಅಣ್ಣ-ತಮ್ಮಂದಿರ ಜಗಳ) ಪೋಲಿಸ್ ಇಲಾಖೆಯ ಕರ್ತವ್ಯವಾಗಿದೆ. ಅಲ್ಲದೆ ಗೌರವಾನ್ವಿತ ನ್ಯಾಯಾಧೀಶರು ಮುಂತಾದ ಗಣ್ಯವ್ಯಕ್ತಿಗಳಿಗೆ ರಕ್ಷಣೆ ಒದಗಿಸುವುದು ಸಹ ಪೋಲೀಸರ ಜವಾಬ್ದಾರಿಯೆ ಆಗಿದೆ.

ತಾಲ್ಲೂಕಿನ ಹೊಸದುರ್ಗ ಮತ್ತು ಶ್ರೀರಾಂಪುರ ಸ್ಥಳಗಳಲ್ಲಿ ಒಟ್ಟು ಎರಡು ಮುಖ್ಯ ಪೋಲಿಸ್ ಠಾಣೆಗಳು ಹಾಗೂ ಜಾನಕಲ್ಲು, ಬಾಗೂರು ಮತ್ತು ಮತ್ತೋಡು ಈ ಗ್ರಾಮಗಳಲ್ಲಿ ತಲಾ ಒಂದರಂತೆ ಒಟ್ಟು ಮೂರು ಉಪಠಾಣೆಗಳಿವೆ. ಹೊಸದುರ್ಗ ಪೋಲಿಸ್ ಠಾಣೆಯು ದಿನಾಂಕ: ೧೩-೧೧-೧೯೭೮ರಲ್ಲಿ ಪ್ರಾರಂಭಗೊಂಡಿರುತ್ತದೆ. ಇಲ್ಲಿ ಪೋಲೀಸ್ ವೃತ್ತ ನಿರೀಕ್ಷಕರ ಕಛೇರಿ ಸಹ ಇದೆ. ಪೊಲೀಸ್ ಇಲಾಖೆ ವ್ಯಾಪ್ತಿಗೆ ಒಳಪಡುವ ಅಪರಾಧಗಳೆಂದರೆ: ಲಾಭಕ್ಕಾಗಿ ಕೊಲೆ, ಡಕಾಯಿತಿ, ಕೊಲೆ, ದರೋಡೆ. ರಾತ್ರಿ ಕಳವು, ಹಗಲು ಕಳವು, ಮನೆ ಕಳವು, ವಾಹನ ಕಳವು, ಸಾಧಾರಣ ಕಳವು, ಹಸು ಕಳ್ಳತನ, ಕಳ್ಳತನದ ಮಾಲು ಖರೀದಿ, ಮೋಸ, ನಂಬಿಕೆ ದ್ರೋಹ, ಖೋಟಾನಾಣ್ಯ-ನೋಟು ತಯಾರಿಕೆ/ಚಲಾವಣೆ, ಮೃತಪಟ್ಟವರು (ಅನಾಥವಾಗಿ), ಸಾಧಾರಣ ಅಪಘಾತ, ದೊಂಬಿ, ಹೊಡೆದಾಟ, ಅರ್ಧಕೊಲೆ, ಮಾನಭಂಗ, ವರದಕ್ಷಿಣೆ, ನ್ಯಾಯಾಲಯದಿಂದ ಬಂದ ಪ್ರಕರಣ, ಗೋ ನಿಷೇಧ ಕಾಯ್ದೆ, ವೇಶ್ಯಾವಾಟಿಕೆ, ಪರವಾನಗಿ ರಹಿತ ಆಯುಧ, ಅಸ್ಪೃಶ್ಯತೆ, ಅಗತ್ಯ ವಸ್ತು ಅಕ್ರಮ ದಾಸ್ತಾನು, ಸ್ಫೋಟಕ

ವಸ್ತು ನಿಷೇಧ, ವನ್ಯಜೀವಿ ರಕ್ಷಣೆ, ಗಾಂಜಾ, ಜೂಜಾಟ, ಕಾಣೆಯಾದವರು ಇತ್ಯಾದಿ ಒಟ್ಟು ೪೮ ರೀತಿಯವುಗಳಾಗಿವೆ. ೨೦೧೦ರಲ್ಲಿ ಸ್ವೀಕೃತವಾದ ಒಟ್ಟು ೩೯೭ ವಿವಿಧ ಪ್ರಕರಣಗಳಲ್ಲಿ ಕೆಲವು ಸುಳ್ಳಾಗಿವೆ. ಕೆಲವು (೩೭೩) ನಿಜವಾಗಿದ್ದು, ಅವುಗಳಲ್ಲಿ ಯಾವುದೂ ರಾಜಿ ಆಗಿರುವುದಿಲ್ಲ. ೮೬ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಸಜಾ ಆಗಿದೆ ಹಾಗೂ ೧೫೯ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೊಳಪಟ್ಟಿವೆ. ಒಂದು ಪ್ರಕರಣ ತನಿಖೆಯಾಗಿದ್ದು, ೧೧ ಪ್ರಕರಣ ಪತ್ತೆ ಆಗಿರುವುದಿಲ್ಲ ಹಾಗೂ ೫೨ ಪ್ರಕರಣಗಳು ಇತರೆ ವಿಲೇವಾರಿ ಆಗಿವೆ. ೨೦೧೧ರಲ್ಲಿ ಒಟ್ಟು ೩೩೬ ಪ್ರಕರಣಗಳು ಸ್ವೀಕೃತವಾಗಿವೆ. ೨೨ ಸುಳ್ಳಾಗಿವೆ, ೩೧೩ ನಿಜ ಆಗಿವೆ, ೬೨ ಸಜಾ ಆಗಿವೆ, ೧೫ ಪತ್ತೆ ಆಗದವು ಹಾಗೂ ೪೩ ಇತರ ವಿಲೇವಾರಿ ಕೇಸುಗಳಾಗಿವೆ. ೨೦೧೨ರಲ್ಲಿ ೩೧೫ ಕೇಸ್‌ಗಳು ಸ್ವೀಕೃತಿ, ೧ ಸುಳ್ಳು, ೩೧೪ ನಿಜವೆಂದು ಸಾಬೀತು, ೨೯ ಸಜಾ ಆಗಿವೆ. ೫ ಬಿಡುಗಡೆ, ೧೮೧ ನ್ಯಾಯಾಲಯ ವಿಚಾರಣೆ, ೪೧ ತನಿಖೆ, ೧೦ ಪತ್ತೆ ಆಗದವು ಹಾಗೂ ೪೦ ಇತರ ವಿಲೇವಾರಿ ಆಗಿವೆ. ಇಲ್ಲಿ ೨ ಸಬ್‌ಇನ್ಸ್‌ಪೆಕ್ಟರ್, ೪ ಸಹಾಯಕ ಸಬ್‌ಇನ್ಸ್‌ಪೆಕ್ಟರ್, ೧೪ ಮುಖ್ಯಪೇದೆಗಳು ಹಾಗೂ ೪೪ ಪೇದೆಗಳು ಇದ್ದಾರೆ.

## ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಾಚೀನ ನಾಗರೀಕತೆಯ ಹೆಗ್ಗುರುತಾದ ಸ್ಥಳೀಯ ಸ್ವಯಂಮಾಡಳಿತ ವ್ಯವಸ್ಥೆಗೆ ನಾಡಿನಲ್ಲಿ ಸುಧೀರ್ಘ ಪರಂಪರೆ ಇದೆ. ಜೀವನದ ನಾಗರಿಕ ಆಡಳಿತ, ಶಿಕ್ಷಣ ಮುಂತಾದ ವಿವಿಧ ರಂಗಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಮೂಲಕ ರಾಷ್ಟ್ರೀಯ ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪಟ್ಟಣಗಳ ಕುರಿತಾದ ಮಾಹಿತಿ ಲಭಿಸಿದ್ದು, ಆಗಲೂ ಸಹ ವ್ಯವಸ್ಥಿತವಾದ ಪೌರಾಡಳಿತವಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಕಾಲದಲ್ಲಿ ಆಡಳಿತವು ರಾಜರ ಕೈಯಲ್ಲಿ ಕೇಂದ್ರೀಕೃತವಾಗಿದ್ದರೂ, ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮನ್ನಣೆ ಇತ್ತು. ಹಳ್ಳಿ, ಪಟ್ಟಣ ಹಾಗೂ ನಗರ ಸಮುದಾಯಗಳು ಅವಶ್ಯಕತೆಗನುಗುಣವಾಗಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ನಾಗರಿಕ ಅವಶ್ಯಕತೆಗಳನ್ನು ಒದಗಿಸುವುದರ ಜೊತೆಗೆ ಇವು ತಮ್ಮ ಪ್ರದೇಶಗಳ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದ್ದವು. ಅಂದಿನ ಕಾಲದ ರಾಜರು ಈ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದರಲ್ಲದೆ ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನೂ ಒದಗಿಸಿದ್ದರು. ಇಂದಿನ ಪ್ರಜಾಸತ್ತೆ ಮಾದರಿಯ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಹೆಚ್ಚು ಮಾನ್ಯತೆ ಪಡೆಯುತ್ತಿದೆ. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಆಡಳಿತವು, ತುಮಕೂರು ಜಿಲ್ಲೆಯನ್ನೂ ಒಳಗೊಂಡಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೆನಿಸಿದ ಪಂಚಾಯಿತಿ ಅಥವಾ ಶಾಸನ ಬದ್ಧ ಸ್ವಯಂ ಆಡಳಿತ

ಹೊಂದಿದ್ದ ಪ್ರಾತಿನಿಧಿಕ ಕೂಟಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದದ್ದು ಇತಿಹಾಸದಿಂದ ತಿಳಿದುಬರುತ್ತದೆ. ದೇಶದ ಪ್ರತಿ ಹಳ್ಳಿಯೂ ಸಣ್ಣ ಗಣರಾಜ್ಯದಂತೆ (ರಿಪಬ್ಲಿಕ್) ತನ್ನದೇ ಆದ ಸ್ವಾಯತ್ತತೆ ಪಡೆದಿತ್ತು. ಹಳ್ಳಿಯ ಎಲ್ಲಾ ಮುಖ್ಯಸ್ಥರು ಸಮಾವೇಶಗೊಂಡು ಮುಖ್ಯವಾದ ಸ್ಥಳೀಯ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಅಂತಹ ಸಮಾವೇಶ ಅಥವಾ ಸಭೆಗಳ ಹಕ್ಕು ಮತ್ತು ಬಾಧ್ಯತೆಗಳಿಗೆ ಸರ್ಕಾರದ ರಕ್ಷಣೆ ಇದ್ದಿತು.

ಕರ್ನಾಟಕದ ಶಿಲಾಶಾಸನಗಳು ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ. ಊರು ಮತ್ತು ಪಟ್ಟಣಗಳಲ್ಲಿ ವಿವಿಧ ಜಾತಿ, ಕೂಟ ಹಾಗೂ ಬೀದಿಗಳನ್ನು ಪ್ರತಿನಿಧಿಸುವ ಸಭೆಗಳು ನಡೆಯುತ್ತಿದ್ದವು. ಗ್ರಾಮಸಭೆಯನ್ನು ಕೆಲವೊಮ್ಮೆ ಐವತ್ತೊಕ್ಕಲು, ಮೂವತ್ತೊಕ್ಕಲು ಎಂದು ಸಂಖ್ಯಾವಾಚಕದಿಂದ ಕರೆಯಲಾಗುತ್ತಿದ್ದು, ಸಂಖ್ಯೆಯು ಕುಟುಂಬಗಳ ಸಂಖ್ಯಾ ಸೂಚಕವಾಗಿದ್ದವು. ಶಾಸನಗಳಲ್ಲಿ ಕುಣಿಗಲ್–೩೦೦ ಎಂಬ ನಾಡುಗಳ ಉಲ್ಲೇಖ ದೊರೆಯುತ್ತದೆ. ಗ್ರಾಮಗಳ ಗುಂಪನ್ನು ಕಂಪಣ, ನಾಡು, ವಿಷಯ, ವೇಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೇ ಶತಮಾನದಲ್ಲಿ, ‘ನಾಡು’ ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ನಾಡಿನ ಪ್ರಭುವನ್ನು ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಆಡಳಿತ ವ್ಯವಸ್ಥೆಯು ಅನೇಕ ಹಳ್ಳಿಗಳ ಒಕ್ಕೂಟವಾಗಿದ್ದು, ಅದನ್ನು ನಾಡಸಭೆ ಎಂದು ಕರೆಯಲಾಗುತ್ತಿತ್ತು. ನಾಡಸಭೆಯ ಮುಖ್ಯಸ್ಥ ನಾಡಗೌಡನಾಗಿದ್ದು ಈ ಹುದ್ದೆಯು ಅನುವಂಶಿಕವಾಗಿತ್ತು. ನ್ಯಾಯ ವಿತರಣೆ, ನೀರಾವರಿ ಸೌಲಭ್ಯ ಒದಗಿಸುವುದು ಹಾಗೂ ಸಾಮೂಹಿಕ ಅಭಿವೃದ್ಧಿ–ಕಾರ್ಯ ಕೈಗೊಳ್ಳುವುದು ಈ ಸಭೆಯ ತೀರ್ಮಾನಕ್ಕೆ ಸೇರಿತ್ತು. ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಛತ್ರ, ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳ ನಿರ್ಮಾಣ ಹಾಗೂ ನಿರ್ವಹಣೆ, ಭೂ ರಕ್ಷಣೆ, ಕೆರೆ ಕುಂಟೆಗಳ ನಿರ್ಮಾಣ, ವೀರಗಲ್ಲು ಮಹಾಸತಿ–ಕಲ್ಲುಗಳನ್ನು ನೆಡಿಸುವುದು, ಸಂತ್ರಸ್ತರಿಗೆ ಪರಿಹಾರ ಹಾಗೂ ದೇವಾಲಯಗಳಲ್ಲಿ ನಂದಾದೀಪ ವ್ಯವಸ್ಥೆ ಮುಂತಾದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳು ನಾಡಸಭೆಯ ಜವಾಬ್ದಾರಿಯಾಗಿತ್ತು. ಗ್ರಾಮಮಟ್ಟದಲ್ಲಿ ಗ್ರಾಮಸಭೆಗಳು ರಚನೆಗೊಂಡಿದ್ದು ಅವೂ ಸಹ ನಾಡಸಭೆಯಂತೆ ಮೇಲಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಗ್ರಾಮ ಕೂಟಗಳಿಗೆ ಊರ ಹದಿನೆಂಟು ಜಾತಿ, ಊರ ಸಮಸ್ತರು, ಊರ ಒಕ್ಕಲು, ಎಳಮೆ ಮುಂತಾಗಿ ಸಂಬೋಧಿಸಲಾಗುತ್ತಿತ್ತು. ಅವುಗಳಿಗೆ ಅನುವಂಶಿಕ ಮುಖಂಡರು ಇರುತ್ತಿದ್ದು ಅವು ರಾಜ್ಯದ ಆಡಳಿತ ಹಿಡಿತಕ್ಕೆ ಒಳಪಡದೆ ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಸಭೆಗಳು ಸಾಮಾನ್ಯವಾಗಿ ದೇವಸ್ಥಾನ ಇಲ್ಲವೇ ಮಂಟಪಗಳಲ್ಲಿ ಸೇರುತ್ತಿದ್ದವು. ಪುದವಟ್ಟುಗಳನ್ನು ನಿರ್ಮಿಸುವುದು ಹಾಗೂ ಧರ್ಮದ ರಕ್ಷಣೆ, ಸಭೆಗಳ ಹೊಣೆಯಾಗಿತ್ತು. ಈ ಸಭೆಗಳು ಮುಂದೆ ವಿಜಯನಗರ

ಅರಸರು, ಹೈದರ್–ಟಿಪ್ಪು ಹಾಗೂ ಮೈಸೂರು ಅರಸರ ಆಡಳಿತವಿದ್ದಾಗಲೂ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ವಿಜಯನಗರ ಕಾಲದ ಶಾಸನದಲ್ಲಿ ಹತ್ತು ಬೀದಿಗಳ ವರ್ತಕರು ಮತ್ತಿತರರೊಂದಿಗೆ ಅಲ್ಲಿಯ ಹಂಜಮಾನ(ಮುಸಲ್ಮಾನ)ರೂ ಊರಿನ ಸಭೆಗಳಲ್ಲಿ ಉಪಸ್ಥಿತರಿರುತ್ತಿದ್ದರೆಂದು ಉಲ್ಲೇಖವಿದೆ. ರಾಜಾಡಳಿತವಿದ್ದ ಪ್ರಾಂತಗಳ ಪೈಕಿ ಮೈಸೂರು, ತಿರುವಾಂಕೂರು ಹಾಗೂ ಕೊಚ್ಚಿ ರಾಜ್ಯಗಳಲ್ಲಿ ಮಾತ್ರ ಪುರಸಭಾ ಶಾಸನಗಳನ್ನು ರೂಪಿಸಲಾಗಿ, ಆ ರಾಜ್ಯಗಳಲ್ಲಿ ಪೌರಾಡಳಿತವು ಉಚ್ಛ್ರಾಯ ಸ್ಥಿತಿಯಲ್ಲಿ ಮುಂದುವರಿದದ್ದು ಕಂಡುಬರುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯ ಒಂದೇ ಕಡೆ ವಾಸಿಸುತ್ತಿದ್ದು, ಅಂತಹ ಓಣಿ ಅಥವಾ ಸ್ಥಳವನ್ನು ಅಗ್ರಹಾರಗಳು ಎಂದು ಕರೆಯಲಾಗುತ್ತಿದ್ದು ಅವೂ ಸಹ ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಗಳಾಗಿದ್ದವು. ಇವುಗಳ ಆಡಳಿತವನ್ನು ಬ್ರಾಹ್ಮಣ ಮುಖಂಡರು ನೋಡಿಕೊಳ್ಳುತ್ತಿದ್ದರು. ಊರೊಡೆಯ ಪ್ರಮುಖ ಅಧಿಕಾರಿಯಾಗಿದ್ದನು. ಆರನೇಯ ಶತಮಾನದ ಶಾಸನಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ. ಅಗ್ರಹಾರದ ಕೆಲಸ ಕಾರ್ಯಗಳನ್ನು ಗ್ರಾಮ ಕಾರ್ಯವೆಂದೂ ಅವುಗಳ ನೀತಿ ಸಂಹಿತೆಯನ್ನು 'ಸಮಯ', ''ಮರ್ಯಾದೆ'' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದ್ದು, ಮಹಾ ಜನರಿಗೆ ಸರ್ಕಾರ ಪುರಸ್ಕಾರ ನೀಡುತ್ತಿತ್ತು. ಭಾರತದಲ್ಲಿ ಬ್ರಿಟೀಷ್ ಆಡಳಿತ ಕಾಲದಲ್ಲಿ ಅಂದರೆ ೧೮೬೨ರಷ್ಟು ಹಿಂದೆಯೇ ಮೈಸೂರು ರಾಜ್ಯದ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಪೌರಸಮಿತಿಗಳ ರಚನೆಯಾಗಿತ್ತು. ಮುಂದೆ ೧೮೬೪ರ ಹೊತ್ತಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಗೊಂಡವು. ೧೮೮೨ರಲ್ಲಿ ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಗಳ ಸುಧಾರಣೆ ಬಗೆಗಿನ ಗೊತ್ತುವಳಿ (ರೆಝೂಲ್ಯೂಶನ್) ಹಾಗೂ ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರುಗಳ ಪ್ರಗತಿಪರ ಕಾರ್ಯಕ್ರಮಗಳನ್ನು ಆಧರಿಸಿ ೧೯೦೪ರಲ್ಲಿ ಹೊರಡಿಸಲಾದ 'ದಿ ಮೈಸೂರ್ ರೆಗ್ಯೂಲೇಶನ್ ೨''ನ್ನು ೧೯೦೪ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರೂಪುಗೊಂಡವು. ಚುನಾಯಿತ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದಿರುವಂತಹ ನ್ಯೂನ್ಯತೆಗಳಿಂದಾಗಿ ಸ್ಥಳೀಯ ಮಂಡಳಿಗಳು ನ್ಯಾಯಯುತವಾಗಿ ಪಾತ್ರವಹಿಸುವಲ್ಲಿ ವಿಫಲಗೊಂಡವು. ಸ್ವಾತಂತ್ರ್ಯಾನಂತರ ಈ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ೧೯೫೯ರ ಅಧಿನಿಯಮ ಮತ್ತು ೧೯೮೫ರ ಹೊಸ ಪಂಚಾಯತ್‌ರಾಜ್ ಕಾನೂನುಗಳ ಮೂಲಕ ಸರ್ಕಾರವು ಸ್ವಯಂಮಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವಲ್ಲಿ ಯಶಸ್ವಿಯಾಗಿದೆ.

**ನಾಡು, ನಾಡಸಭೆ**

ಶಾಸನಗಳಲ್ಲಿ 'ನಾಡು' ಮತ್ತು ಮಹಾನಾಡಿನ ಬಗ್ಗೆ ಉಲ್ಲೇಖಗಳಿದ್ದು ಹತ್ತನೇ ಶತಮಾನದ ಮಧ್ಯಭಾಗದಲ್ಲಿ 'ನಾಡು', ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಒಂದು

ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಯಾಗಿ ರೂಪಗೊಂಡ ಬಗ್ಗೆ ಶಾಸನಗಳಿಂದ ತಿಳಿದು ಬರುತ್ತದೆ. ನಾಡು ಹಲವಾರು ಗ್ರಾಮಗಳ ಗುಂಪಾಗಿದ್ದು, ಅದನ್ನು ಕಂಪಣ, ಸ್ಥಾನ, ವೇಂಟೆ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇಂತಹ ನಾಡಿನ ಮುಖ್ಯಾಧಿಕಾರಿ (ಮುಖ್ಯಸ್ಥ)ಯನ್ನು ಗೌಂಡಪ್ರಭು, ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಗೌಡ ಅಥವಾ ನಾಡಗೌಂಡ ಹುದ್ದೆಯು ಅನುವಂಶಿಕವಾಗಿತ್ತು. ಹಳ್ಳಿಗಳ ಒಕ್ಕೂಟದಿಂದಾದ ಈ ಸಭೆಯನ್ನು ನಾಡಸಭೆ ಎಂದು ಕರೆಯುತ್ತಿದ್ದರು. ನಾಡ ಶಾನುಭೋಗರನ್ನು ನಾಡಸಭೆ ಆಯ್ಕೆ ಮಾಡುತ್ತಿತ್ತು. ದೇವಾಲಯಗಳಲ್ಲಿ ನಂದಾದೀಪ, ಅಗ್ಗಿಷ್ಟಿಕೆ ಮುಂತಾದ ಸೇವೆಗಳನ್ನು ನಾಡಸಭೆ ಏರ್ಪಡಿಸುತ್ತಿತ್ತು. ಈ ಸಭೆಗಳನ್ನು ಇಂದಿನ ತಾಲ್ಲೂಕು ಇಲ್ಲವೆ ಮಂಡಲ ಪಂಚಾಯಿತಿಗಳಿಗೆ ಹೋಲಿಸಬಹುದಾಗಿದೆ. ಸಭೆಯು ಹತ್ತು ಹಲವು ವರ್ಗದ ಜನರನ್ನೊಳಗೊಂಡಿದ್ದಿತು. ನಾಡಸಭೆಯ ಪ್ರಮುಖ ಕರ್ತವ್ಯಗಳಲ್ಲಿ ನ್ಯಾಯ ನಿರ್ಣಯ, ದೇಗುಲಗಳ ನಿರ್ಮಾಣ, ನೀರಾವರಿ ಸೌಲಭ್ಯ ಹಾಗೂ ಇನ್ನಿತರ ಸಾಮೂಹಿಕ ಅಭಿವೃದ್ಧಿ ಕಾರ್ಯಗಳು ಸೇರಿರುತ್ತಿದ್ದವು. ಅರವಟ್ಟಿಗೆ ನಡೆಸುವುದು, ವೀರಗಲ್ಲು, ಮಹಾಸತಿಗಲ್ಲು ನೆಡಿಸುವುದು, ಸುಂಕದ ಕಟ್ಟೆಗಳ ನಿರ್ಮಾಣ, ಭೂ ಹಗರಣ ಬಗೆಹರಿಸುವುದು, ಮುಂತಾದ ಇನ್ನಿತರ ಕರ್ತವ್ಯಗಳು ಸಹಾ ನಾಡಸಭೆಯಿಂದ ನಿರ್ವಹಿಸಲ್ಪಡುತ್ತಿದ್ದವು. ನಾಡಸಭೆ ಮತ್ತು ಪಟ್ಟಣಸಭೆ, ನಗರಸಭೆ ಇಲ್ಲವೆ ನಗರ ವ್ಯಾಪಾರಿ ಸಭೆಗಳ ನಡುವೆ ಮಧುರವಾದ ಹೊಂದಾಣಿಕೆ ಇತ್ತು. ಎರಡೂ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇವು ಆಗಾಗ್ಗೆ ಸಭೆ ಸೇರಿ ತಮ್ಮ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳುತ್ತಿದ್ದು, ಆ ಭಾಗದ ಜನರ ಹಿತಾಸಕ್ತಿಗೆ ಅನುಕೂಲವಾಗುವಂತೆ ಆಡಳಿತ ನಿರ್ವಹಿಸುತ್ತಿದ್ದವು.

**ಮಹಾನಾಡು**

ಹಲವಾರು ನಾಡುಗಳು ಹಾಗೂ ನಗರ ಪ್ರದೇಶಗಳನ್ನೊಳಗೊಂಡ ವಿಸ್ತೃತವಾದ ಸ್ವಯಂಮಾಡಳಿತ ಸಂಸ್ಥೆಯನ್ನು 'ಮಹಾನಾಡು' ಎಂದು ಕರೆಯಲಾಗುತ್ತಿತ್ತು. ಅವು ಸುಮಾರು ೧೨ ಹಾಗೂ ೧೩ನೇ ಶತಮಾನದಿಂದ ಕಾರ್ಯರೂಪಕ್ಕೆ ಬಂದಿದ್ದು ತಿಳಿದುಬರುತ್ತದೆ. ಮಹಾನಾಡುಗಳನ್ನು ಈಗಿನ ಜಿಲ್ಲಾ ಪರಿಷತ್ತು ಇಲ್ಲವೆ ಜಿಲ್ಲಾ ಪಂಚಾಯತ್ ಸಭೆಗೆ ಹೋಲಿಸಬಹುದಾಗಿದೆ. ಮಹಾನಾಡನ್ನು ಪದಿನಾಡು (ಹತ್ತು ನಾಡುಗಳ ಒಕ್ಕೂಟ) ಮತ್ತು ಪದಿನಾಲ್ಕುನಾಡು (ಹದಿನಾಲ್ಕು ನಾಡು) ಎಂದು ಸಂಖ್ಯಾಸೂಚಕದಿಂದ ಕರೆಯಲಾಗುತ್ತಿತ್ತು. ಈ ಮಹಾನಾಡುಗಳ ಸಭೆಗಳು ನಾಡಸಭೆಗಳಂತೆ ಆಗಾಗ್ಗೆ ಸೇರದೆ (ಅಪರೂಪವಾಗಿ) ವಿರಳವಾಗಿ ಸೇರುತ್ತಿದ್ದದ್ದು ತಿಳಿದುಬರುತ್ತದೆ. ಈ ಸಭೆಗಳಿಗೆ ಆಡಳಿತ ಹಾಗೂ ಹೊಣೆಗಾರಿಕೆಯ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರ ಪ್ರತಿನಿಧಿಗಳು,

ವೃತ್ತಿಪರ ಸಂಘಟನೆಗಳ ಸದಸ್ಯರು, ರಾಜ ಪ್ರತಿನಿಧಿಗಳು ಹಾಗೂ ಆ ಪ್ರದೇಶದ ಜನಸಾಮಾನ್ಯರಿಂದ ತುಂಬಿರುತ್ತಿತ್ತು. ಮಹಾನಾಡುಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೇಲೆ ತಮ್ಮ ಪ್ರಭಾವ ಬೀರಬಲ್ಲವಾಗಿದ್ದವು. ಇವು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿಯ ನೀರಾವರಿ ಸೌಲಭ್ಯ, ನ್ಯಾಯ ವ್ಯವಸ್ಥೆ, ತೆರಿಗೆ ವಿಧಿಸುವಿಕೆ ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಮಾಧಿಕಾರ ಹಾಗೂ ಸ್ವಾವಲಂಬನೆ ಹೊಂದಿದ್ದು, ಪ್ರಭುತ್ವವೂ ಈ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿತ್ತು.

**ಪೌರಾಡಳಿತ**

ಗಂಗರ ಕಾಲದಲ್ಲಿ ಅವರ ರಾಜಾಡಳಿತಕ್ಕೆ ಒಳಪಟ್ಟ ಪಟ್ಟಣಗಳಲ್ಲಿ ಪೌರಸಭೆಗಳಿದ್ದವೆಂದು ಹಾಗೂ ಪಟ್ಟಣಗಳ ನಿರ್ಮಾಣ, ನಾಗರಿಕ ಸೌಲಭ್ಯ ಧರ್ಮಸತ್ರಗಳ ನಿರ್ವಹಣೆ ಮುಂತಾದ ಪ್ರಮುಖ ಕಾರ್ಯಗಳನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವರ್ತಕರದೇ ಪ್ರಾಧಾನ್ಯತೆ ಇರುತ್ತಿದ್ದು, ಗಾಣಿಗರು, ಕುಂಬಾರರು, ಕಾರ್ಮಿಕರು, ಮೇದರು, ಪಂಚಮರು ಹಾಗೂ ಲೇವಾದೇವಿದಾರರೂ ಇವರೊಂದಿಗೆ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲಾ ೧೮ ಪ್ರಕೃತಿಯ (ಜಾತಿಯ)ವರ ಪ್ರಾತಿನಿಧ್ಯ ಪಟ್ಟಣಸಭೆಗಳಲ್ಲಿ ಇರುತ್ತಿದ್ದ ಬಗ್ಗೆ ಶಾಸನಗಳಲ್ಲಿ ದಾಖಲೆ ದೊರೆಯುತ್ತದೆ. ಪೌರಾಡಳಿತ ಸಭೆಯ ಸಂವಿಧಾನಕ್ಕೆ 'ಆಚಾರ ವ್ಯವಸ್ಥೆ' ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗ ಸಂಸ್ಥೆಗಳ ಬಗ್ಗೆಯು ಶಾಸನಗಳಲ್ಲಿ ಪ್ರಸ್ತಾಪವಿದೆ.

ಮಧ್ಯಕಾಲೀನ ಯುಗದಲ್ಲಿ ಪ್ರಾರಂಭಗೊಂಡ ಪೌರಾಡಳಿತವು ಗ್ರಾಮದ ಆಡಳಿತಕ್ಕಿಂತ ಸ್ವಲ್ಪ ಭಿನ್ನವಾಗಿದ್ದು ವೈವಿಧ್ಯ ಮಯವಾಗಿತ್ತು. ಪೌರಸಭೆಗಳಿಗೆ ಸರ್ಕಾರ (ರಾಜರಿಂದ) ದಿಂದ ನಿಯುಕ್ತನಾದ 'ತಳವಾರ' ನೆಂಬ ಅಧಿಕಾರಿ ಇರುತ್ತಿದ್ದನು. ಪಟ್ಟಣದ ನಾಗರಿಕರ ಆಸ್ತಿಪಾಸ್ತಿ ರಕ್ಷಣೆ ಅವನ ಕೆಲಸವಾಗಿತ್ತು. ಪೌರಸಭೆಗಳಲ್ಲಿ ಪೌರಾಧ್ಯಕ್ಷ, ಸೇನಭೋವ (ಶಾನುಭೋಗ), ಮಣಿಗಾರ, ಮುಮಗಿಗಳಲ್ಲದೆ ವ್ಯಾಪಾರಿ ಸಂಘಗಳ ಪ್ರತಿನಿಧಿಗಳೂ ಇರುತ್ತಿದ್ದರು. ಪೌರಸಭೆಗಳು ಪಟ್ಟಣದಲ್ಲಿಯ ಮನೆಗಳು, ಎಣ್ಣೆಗಾಣ ವಿವಿಧ ಕಸಬುಗಳಲ್ಲಿ ನಿರತರಾದವರ ಮೇಲೆ ಹಾಗೂ ವ್ಯಾಪಾರ ಮಳಿಗೆದಾರರ ಮೇಲೆ ತೆರಿಗೆ ವಿಧಿಸುತ್ತಿದ್ದು, ಬ್ರಾಹ್ಮಣರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ವಾಸದ ಮನೆಗಳು ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಬಿಕ್ಕಟ್ಟು ಅಥವಾ ವ್ಯಾಜ್ಯಗಳನ್ನು ಸಭೆ ಬಗೆಹರಿಸುತ್ತಿತ್ತು.

ಬೆಲೆ ನಿಯಂತ್ರಣ, ತೆರಿಗೆ ನಿರ್ವಹಣೆ, ಬೀದಿ ಹಾಗೂ ಮನೆಗಳ ನೈರ್ಮಲ್ಯ ಕಾಪಾಡುವುದು, ಪಟ್ಟಣಕ್ಕೆ ಬಂದು ಹೋಗುವವರ ಲೆಕ್ಕ ಇಡುವುದು ಹಾಗೂ ರಾಜನಿಗೆ ಮೇಲಿನ ಎಲ್ಲಾ ಜವಾಬ್ದಾರಿಗಳ ನಿರ್ವಹಣೆಯ ವರದಿ ಒಪ್ಪಿಸುವುದು ಪುರಸಭೆಯ

ಕರ್ತವ್ಯಗಳಾಗಿತ್ತು. ಪೌರಸಭೆಗಳು ಹೆಚ್ಚಿನ ಸ್ವಯಮಾಧಿಕಾರ ಹೊಂದಿದ್ದು ರಾಜನು ಈ ಸಭೆಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿದ್ದನು.

**ಆಧುನಿಕ ಕಾಲದ ಸ್ವಯಂಮಾಡಳಿತ ವ್ಯವಸ್ಥೆ**

ಬ್ರಿಟೀಷ್ ಆಡಳಿತ ಕಾಲದಲ್ಲಿ ಪೌರಸಮಿತಿಗಳು ರಚನೆಗೊಂಡವು. ೧೮೬೪ರಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಯಾದ ಬಗ್ಗೆ ದಾಖಲೆಗಳಿವೆ. ೧೯೦೬ರ ಪುರಸಭೆಗಳ ೭ನೇಯ ಅಧಿನಿಯಮದ ಪ್ರಕಾರ ಹಲವು ಪುರಸಭೆಗಳು ರೂಪುಗೊಂಡವು. ಆದರೆ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದ್ದರಿಂದ ಸ್ಥಳೀಯ ಮಂಡಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲಗೊಂಡವು.

ಈ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕಾಗಿ ೧೯೧೪ರಲ್ಲಿ ಮೈಸೂರು ಸರ್ಕಾರವು ಎರಡು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ, ೧. ಎಂ.ಕಾಂತರಾಜ ಅರಸು ಅಧ್ಯಕ್ಷತೆಯ ‘ಸ್ಥಳೀಯ ಸ್ವಯಂಮಾಧಿಕಾರ ಸಮಿತಿ’ಮತ್ತು ೨. ದಿವಾನ್ ಬಹದ್ದೂರ್ ಸಿ.ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯ ಸ್ಥಳೀಯ ಹಣಕಾಸು ಸಮಿತಿ. ಸ್ಥಳೀಯ ಮಂಡಳಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಈ ಸಮಿತಿಗಳು ಪರಿಶೀಲಿಸಬೇಕಾಗಿತ್ತು. ಎಲ್ಲಾ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕೆಂದೂ ಹಾಗೂ ತಾಲ್ಲೂಕು ಮಂಡಳಿಗಳಿಗೆ ಮುಕ್ತ ಅಧಿಕಾರವಿರಬೇಕೆಂದೂ ಆ ಸಮಿತಿಗಳು ಶಿಫಾರಸ್ಸು ಮಾಡಿದ್ದವು. ೧೯೦೬ರ ಪುರಸಭಾ ನಿಯಮಗಳಿಗೆ ತಿದ್ದುಪಡಿ ಮಾಡುವ ನೂತನ ಮಸೂದೆಯನ್ನು ೧೯೧೭ನೇಯ ಜೂನ್ ೨೯ರಂದು ಮಂಡಿಸಲಾಯಿತು. ೧೯೧೮ರ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮ ಪಂಚಾಯಿತಿಗಳ ೬ನೇಯ ಅಧಿನಿಯಮವು, ಎಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಿಸಿದ ಕಾನೂನನ್ನು ಪುನರ್ ರೂಪಿಸಿತಲ್ಲದೆ, ಹೆಚ್ಚು ಅಧಿಕಾರ ಹೊಂದಿದ ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಅವಕಾಶವಿದ್ದಿತು. ಹೀಗೆ ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾದ ಸ್ವಯಂಮಾಡಳಿತ ಸಂಸ್ಥೆಗಳು ಸ್ಥಾಪಿತವಾದವು. ೧೯೧೮ರ ಅಧಿನಿಯಮದ ಪ್ರಕಾರ ತಾಲ್ಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ವಿವಿಧ  ಜನಾಂಗಗಳಿಗೆ ಪ್ರಾತಿನಿತ್ಯ ಒದಗಿಸುವ ನಿಯಮಗಳನ್ನು ರೂಪಿಸಲಾಯಿತು. ದೊಡ್ಡ ಮತ್ತು ಸಣ್ಣ ಪೌರ ಮಂಡಳಿಗಳಿಗೆ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಕೊಡಲಾಯಿತು.  ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳು ನಿರ್ವಹಿಸುತ್ತಿದ್ದ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮಂಡಳಿಗಳೂ ಪದನಿಮಿತ್ತ ಉಪಾಧ್ಯಕ್ಷರನ್ನು ಹೊಂದಿದ್ದವು.

## ಸಾರ್ವತ್ರಿಕ ಆಡಳಿತ

ನಗರ ಮತ್ತು ಪುರಸಭೆಗಳಿಗೆ ಅಧ್ಯಕ್ಷರು ಆಯ್ಕೆಯಾದ್ದರಿಂದ ಜಿಲ್ಲಾಧಿಕಾರಿಗಳು ಅವುಗಳ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟರು. ಕ್ರಮೇಣ ಅಧಿಕಾರವನ್ನು ವಿಕೇಂದ್ರಿಕರಣ ಗೊಳಿಸಬೇಕೆಂಬ ಬ್ರಿಟೀಷರ ಅಖಿಲ ಭಾರತ ಧೋರಣೆಯಂತೆ ಸರ್ಕಾರದ ಹತೋಟಿಯನ್ನು ಇನ್ನಷ್ಟು ಸಡಿಲಗೊಳಿಸಿ, ಮಂಡಳಿಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸಲಾಯಿತಲ್ಲದೆ ಕೆಲವು ಆಯ್ದ ಮಂಡಳಿಗಳಿಗೆ ಪ್ರಾಥಮಿಕ ಶಿಕ್ಷಣ ನಿರ್ವಹಿಸುವ ಅಧಿಕಾರ ವಹಿಸಲಾಯಿತು. ೧೯೨೧ರ ಮೈಸೂರು ಸ್ಥಳೀಯ ಬೋರ್ಡುಗಳು ಮತ್ತು ಗ್ರಾಮ ಪಂಚಾಯಿತಿಗಳ ತಿದ್ದುಪಡಿ ನಿಬಂಧನೆಯ ಪ್ರಕಾರ, ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನ ಕೊಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಗಮನಕೊಟ್ಟು ಅದನ್ನು ಜಿಲ್ಲಾ ಮಂಡಳಿಗಳ ಆಡಳಿತ ವ್ಯಾಪ್ತಿಗೆ ತರಲಾಯಿತು. ಮಂಡಳಿಗೆ ಶಿಕ್ಷಣ ಕರವನ್ನು ವಿಧಿಸಲು ಅಧಿಕಾರವಿತ್ತು.

### ಪಂಚಾಯಿತಿಗಳ ರಚನೆ

ಹಲವು ಗ್ರಾಮಗಳ ಗುಂಪಿಗೆ ಒಂದರಂತೆ ೧೯೧೯ರಲ್ಲಿ ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕ ಸಂಪನ್ಮೂಲಗಳಿದ್ದು ಅವುಗಳ ಆಡಳಿತಕ್ಕೆ ನಾಮಕರಣಗೊಂಡ ಅಧ್ಯಕ್ಷರಿದ್ದರು. ಅವುಗಳ ಪ್ರಗತಿ ಸಮಾಧಾನಕರವಾಗಿದ್ದರೆ ಚುನಾವಣೆಯ ಹಕ್ಕನ್ನು ಕೊಡಲಾಗುತ್ತಿತ್ತು. ಆಯ್ದ ಕೆಲವು ತಾಲ್ಲೂಕು ಪಂಚಾಯತ್‌ಗಳಿಗೆ ನ್ಯಾಯ ಪಂಚಾಯಿತಿ ನಿಯಮ ಹಾಗೂ ಅರಣ್ಯ ಪಂಚಾಯಿತಿ ನಿಯಮಗಳ ಪ್ರಕಾರ ಅಧಿಕಾರ ವಹಿಸಲಾಯಿತಲ್ಲದೆ, ಮುಜರಾಯಿ ಸಂಸ್ಥೆಗಳ ಮೇಲಿನ ಹತೋಟಿ ಮತ್ತು ಗ್ರಾಮಗಳ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಯನ್ನೂ ವರ್ಗಾಯಿಸಲಾಯಿತು. ಪಂಚಾಯಿತಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ಹಾಗೂ ಹತೋಟಿಯ ಅಧಿಕಾರವನ್ನು ಅಮಲ್ದಾರ್ (ತಹಸೀಲ್ದಾರ್) ಅವರಿಗೆ ನೀಡಲಾಯಿತು. ಈ ಕ್ರಮದಿಂದಾಗಿ ಜಿಲ್ಲಾ, ತಾಲ್ಲೂಕು, ಅಂತರ-ತಾಲ್ಲೂಕು ಮತ್ತು ಅಂತರ-ಗ್ರಾಮ ಸೌಲಭ್ಯಗಳ ಮೇಲೆ ಅಂದರೆ ನೈರ್ಮಲ್ಯೀಕರಣ, ಸಂಪರ್ಕವ್ಯವಸ್ಥೆ, ವೈದ್ಯಕೀಯ, ಶಿಕ್ಷಣ ಮುಂತಾದ ಎಲ್ಲಾ ಸೌಲಭ್ಯಗಳನ್ನು ನೀಡಲು ಜಿಲ್ಲಾ ಮಂಡಳಿಗಳಿಗೆ ಸಂಪೂರ್ಣ ಅಧಿಕಾರ ದೊರಕಿದಂತಾಯಿತು. ತಾಲ್ಲೂಕು ಮಂಡಳಿಗಳನ್ನು ರದ್ದುಗೊಳಿಸಿದ್ದರಿಂದ ೧೯೨೭ರ ಫೆಬ್ರವರಿ ಒಂದರಿಂದ ಜಿಲ್ಲಾ ಮಂಡಳಿಗಳನ್ನು ಪುನರ್‌ರಚಿಸಲಾಯಿತು. ೧೯೨೮-೨೯ರಲ್ಲಿ ಪುರಸಭಾ ನಿಯಮವನ್ನು ತಿದ್ದುಪಡಿಗೊಳಿಸಿ, ಮಹಿಳೆಯರು ಪುರಸಭೆಗಳ ಸದಸ್ಯರಾಗುವುದಕ್ಕೆ ಅವಕಾಶ ಕಲ್ಪಿಸಲಾಯಿತು. ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ಹತೋಟಿ ಮತ್ತು ಹಣಕಾಸಿನ ಹೊಣೆಯನ್ನು ಸ್ಥಳೀಯ ಮಂಡಳಿಗಳಿಗೆ ವಹಿಸುವ ಮುಖ್ಯ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣ ಅಧಿನಿಯಮವನ್ನು ೧೯೩೦ರಲ್ಲಿ ಅಂಗೀಕರಿಸಿ, ೧೯೩೧ನೇ ಜುಲೈ ಒಂದರಿಂದ ಜಾರಿಗೊಳಿಸಲಾಯಿತು.

## ಮೈಸೂರು ಪುರಸಭೆಗಳ ಅಧಿನಿಯಮ ೧೯೩೩

೧೯೩೩ರ ಮೈಸೂರು ಪುರಸಭೆಗಳ ಅಧಿನಿಯಮ, ಮೈಸೂರು ಸಣ್ಣ ಪುರಸಭೆಗಳ ಅಧಿನಿಯಮ ಹಾಗೂ ನಗರ ಪುರಸಭೆಗಳ ಅಧಿನಿಯಮ, ಇವು ನಗರ ಪ್ರದೇಶಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯ ಕಾನೂನುಗಳಾಗಿದ್ದವು. ೧೯೩೯ರ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲಾ ಮಂಡಳಿಗೂ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿದ್ದು, ಸರ್ಕಾರಿ ಅಧಿಕಾರಿ ಮತ್ತು ನಾಮಕರಣ ಸದಸ್ಯರ ಸಂಖ್ಯೆ ಕಡಿಮೆಯಾಯಿತು. ಸ್ಥಳೀಯ ಸಂಸ್ಥೆಗಳು, ಅದರಲ್ಲೂ ಗ್ರಾಮೀಣ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸಿ, ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ನೆರವಾಗುವಂತೆ ಮಾಡಲಾಯಿತು. ೧೯೪೭ ರಲ್ಲಿ ಹೊರಡಿಸಲಾದ ಅಧಿಕೃತ ಆಜ್ಞೆಗಳ ಮೂಲಕ ತೀವ್ರ ಪ್ರಚಾರ, ಗ್ರಾಮ ಸುಧಾರಣೆಗೆ ತರಬೇತಿಗೊಂಡ ಗ್ರಾಮೀಣ ಕಾರ್ಯಕರ್ತರನ್ನು ನಿಯೋಜಿಸುವುದು ಮುಂತಾದ ಹಲವಾರು ಹೊಸ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಭಾರತ ಸ್ವಾತಂತ್ರ್ಯ ಗಳಿಸಿದ ಬಳಿಕ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಸ್ವತಂತ್ರ ಹಾಗೂ ಪರಿಣಾಮಕಾರಿಗೊಳಿಸಲಾಯಿತು.

## ಮೈಸೂರು ಪುರಸಭೆಗಳ ಅಧಿನಿಯಮ–೧೯೫೧

ಈ ಕಾಯ್ದೆ ಪ್ರಥಮವಾಗಿ ಸಣ್ಣ ಹಾಗೂ ದೊಡ್ಡ ಪುರಸಭೆಗಳೆಂಬ ತಾರತಮ್ಯವನ್ನು ತೊಡೆದುಹಾಕಿತು. ಈ ಕಾನೂನಿನನ್ವಯ ಎಲ್ಲಾ ಪುರಸಭೆಗಳಲ್ಲಿ ವಯಸ್ಕ ಮತದಾನದ ಮೂಲಕ ಚುನಾಯಿತರಾದ ಸದಸ್ಯರು ತಮ್ಮೊಳಗಿಂದಲೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಪಡೆದುಕೊಂಡರು. ಪುರಸಭೆಗಳಿಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಸಲು ಅವಕಾಶವಿತ್ತು. ಅಧ್ಯಕ್ಷರು ಸಭೆಗಳನ್ನು ಕರೆದು ಕಲಾಪ ನಡೆಸುವ ಅಧಿಕಾರ ಹೊಂದಿದ್ದರು. ಪುರಸಭೆ ಕಾರ್ಯಾಲಯದ ಅಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿಯ ಮೇಲ್ವಿಚಾರಣೆ ಹಾಗೂ ಆಡಳಿತ ಮತ್ತು ಜನಹಿತ ಕಾರ್ಯ ಕೈಗೊಳ್ಳುವ ಜವಾಬ್ದಾರಿಯನ್ನು ಅಧ್ಯಕ್ಷರು ಹೊಂದಿದ್ದರು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಕಾರ್ಯ ನಿರ್ವಹಿಸಬೇಕಾಗಿತ್ತು.

ಆಡಳಿತಾತ್ಮಕ ದೃಷ್ಟಿಯಿಂದ ಪುರಸಭಾ ಚಟುವಟಿಕೆಗಳನ್ನು ಈ ಮುಂದಿನಂತೆ ವಿಂಗಡಿಸಲಾಗಿತ್ತು. ೧. ನೈರ್ಮಲ್ಯ ೨. ಆರೋಗ್ಯ ೩. ರಕ್ಷಣೆ ೪. ಸಾರ್ವಜನಿಕ ಸೌಕರ್ಯ ಹಾಗೂ ೫. ಜನಹಿತ ಕಾರ್ಯಕ್ರಮಗಳು. ಇವುಗಳಲ್ಲದೆ ತಂಗುದಾಣ ಹಾಗೂ ಉದ್ಯಾನಗಳ ನಿರ್ಮಾಣ, ಗ್ರಂಥಾಲಯ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ ಮುಂತಾದ ಸೌಕರ್ಯಗಳನ್ನು ತೆರಿಗೆದಾರರಿಗೆ ಒದಗಿಸುವ ವಿಶೇಷ ಅಧಿಕಾರವನ್ನು ಪುರಸಭೆಗಳು ಪಡೆದುಕೊಂಡವು.

## ವೆಂಕಟಪ್ಪ ಸಮಿತಿ

ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ೧೯೪೯ರಲ್ಲಿ ವಿ.ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ೧೯೫೦ರ ಜೂನ್ ೧೨ ರಂದು ತನ್ನ ವರದಿಯನ್ನು ಸಲ್ಲಿಸಿತು. ಅದರ ಶಿಫಾರಸ್ಸುಗಳನ್ನು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮಗಳಲ್ಲಿ ಅಳವಡಿಸಲಾಯಿತು. ತತ್ಪರಿಣಾಮ ವಾಗಿ ಎರಡು ಹಂತದ ಸ್ಥಳೀಯ ಸ್ವಯಂಮಾಡಳಿತ ವ್ಯವಸ್ಥೆಗಳು ರೂಪುಗೊಂಡವು. ಅವುಗಳಲ್ಲಿನ ಜಿಲ್ಲಾ ಮಂಡಳಿಗಳನ್ನು ಪಂಚಾಯಿತಿಗಳು ಪರೋಕ್ಷವಾಗಿ ಚುನಾಯಿಸಿದ್ದವು. ಆದರೆ ಚುನಾವಣೆಗಳನ್ನು ನಡೆಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೧೯೫೪ರ ಮಾರ್ಚ್ ೧ ರಿಂದ ಜಿಲ್ಲಾ ಮಂಡಳಿಗಳ ಕೆಲಸ ಸ್ಥಗಿತಗೊಂಡಿತು. ೧೯೫೩ರಲ್ಲಿ ಡಿ.ಹೆಚ್. ಚಂದ್ರಶೇಖರಯ್ಯ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಇನ್ನೊಂದು ವಿಚಾರಣಾ-ಸಮಿತಿಯು ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವ ಅಥವಾ ತಾಲ್ಲೂಕು ಮಂಡಳಿಗಳನ್ನು ಪ್ರಾರಂಭಿಸುವ ಅವಶ್ಯಕತೆಗಳ ಬಗ್ಗೆ ಪರಿಶೀಲನೆ ನಡೆಸಿ, ೧೯೫೪ರಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಿತು. ೧. ತಾಲ್ಲೂಕು ಮಂಡಳಿಗಳ ಸದಸ್ಯರುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವುದು. ೨. ತಾಲ್ಲೂಕು ಮಂಡಳಿಗಳನ್ನು ಪುನರಾರಂಭಿಸುವುದು ಹಾಗೂ ೩. ತಾಲ್ಲೂಕು ಮಂಡಳಿಯ ಸದಸ್ಯತ್ವದ ಮೂರನೇ ಒಂದು ಭಾಗವನ್ನು ಗ್ರಾಮಪಂಚಾಯಿತಿ ಮತ್ತು ಪುರಸಭಾ ಮಂಡಳಿಗಳ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗವನ್ನು ತಾಲ್ಲೂಕಿನಲ್ಲಿನ ನೇರ ಚುನಾವಣೆಯ ಮೂಲಕ ಭರ್ತಿ ಮಾಡುವುದು. ಆದರೆ ರಾಜ್ಯ ಪುನರ್ವಿಂಗಡಣೆಯಿಂದಾಗಿ ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಲಿಲ್ಲ. ರಾಜ್ಯ ಪುನರ್ವಿಂಗಡಣೆಯಾದ ಬಳಿಕ ಜಾರಿಗೆ ತರಲಾದ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ (೧೯೫೯)ವು ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಜಾರಿಯಾಯಿತು.

## ೧೯೫೬ರ ನಂತರದ ಬೆಳವಣಿಗೆಗಳು

ರಾಜ್ಯ ಪುನರ್ವಿಂಗಡಣೆಯ ನಂತರ ಸ್ಥಳೀಯ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಏಕರೂಪವಾದ ಮತ್ತು ಹೆಚ್ಚು ವ್ಯಾಪಕವಾದ ಹೊಸ ಕಾನೂನಿನ ಅವಶ್ಯಕತೆ ಇತ್ತು. ಏಕೆಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರ ಸಹಭಾಗಿತ್ವದಿಂದ ಕೈಗೊಳ್ಳಬೇಕಾಗಿತ್ತು. ಹಾಗಾಗಿ ದೇಶದ ಇತರೆಡೆಗಳಂತೆ ಕರ್ನಾಟಕದಲ್ಲೂ ೧೯೫೭ರ ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಅನ್ವಯ

'ಪಂಚಾಯತ್ ರಾಜ್' ಪದ್ಧತಿಯನ್ನು ಜಾರಿಗೊಳಿಸಲಾಯಿತು. ಅದರಂತೆ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯) ಯ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ರೂಪಿಸಲ್ಪಟ್ಟು, ಅದರಂತೆ ಗ್ರಾಮಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ಅಧಿಕೃತ ಜವಾಬ್ದಾರಿ ವರ್ಗಾಯಿಸಲ್ಪಟ್ಟು, ಯೋಜಿತ ಕಾರ್ಯಕ್ರಮ ಹಾಗೂ ರೂಪಿಸಲ್ಪಟ್ಟ ಗುರಿಗಳನ್ನು ಇವು ಈಡೇರಿಸಬೇಕಾಗಿತ್ತು. ಪುನರ್ವಿಂಗಡಣೆಯ ಸಮಯದಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾಯ್ದೆಗಳನ್ನು ರದ್ದುಪಡಿಸಿ ಈ ಹೊಸಕಾಯ್ದೆಯನ್ನು ೧೯೬೦ರ ನವೆಂಬರ್ ಒಂದರಿಂದ ಜಾರಿಗೊಳಿಸಲಾಯಿತು. ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಗ್ರಾಮಸ್ವರಾಜ್ಯದ ಗುರಿಯನ್ನು ಹೊಂದಿದ್ದ ಏಕೀಕೃತ ಕರ್ನಾಟಕದ ಮೊದಲನೆಯ ಶಾಸನ ಇದಾಗಿದ್ದು, ಅನಂತರ ೧೯೫೯ರ ಅಧಿನಿಯಮವನ್ನು; ೧೯೬೧ರಲ್ಲಿ ೨೬ನೇಯ, ೧೯೬೪ರಲ್ಲಿ ೨೨ನೇಯ, ೧೯೬೫ರಲ್ಲಿ ೫ನೇಯ, ೧೯೭೦ರಲ್ಲಿ ೭ನೇಯ ಹಾಗೂ ೧೯೭೪ರಲ್ಲಿ ೨೧ನೇಯ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಯಿತು. ೧೯೮೩ರಲ್ಲಿ ಮತ್ತು ೧೯೯೩ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು.

### ಜಿಲ್ಲಾ ಅಭಿವೃದ್ಧಿ ಸಮಿತಿ

ಜಿಲ್ಲೆಯಲ್ಲಿ ಹಳೆಯ ಜಿಲ್ಲಾ ಮಂಡಳಿಗಳನ್ನು ರದ್ದುಪಡಿಸಿ ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಜಿಲ್ಲೆಗಳಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುವ ಇತರ ಸ್ಥಳೀಯ ಸಂಸ್ಥೆಗಳಾದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು, ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಪಂಚಾಯಿತಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಈ ಸಮಿತಿಯ ಹೊಣೆಯಾಗಿದ್ದಿತು. ಇದಕ್ಕೆ ಜಿಲ್ಲಾಧಿಕಾರಿಯವರು ಪದನಿಮಿತ್ತ ಅಧ್ಯಕ್ಷರಾಗಿದ್ದು ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿದ್ದರು. ಅಲ್ಲದೆ, ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆ ಮತ್ತು ಶಾಸನಸಭಾ ಸದಸ್ಯರು ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯಸಭೆ ಸದಸ್ಯರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ನಾಮಕರಣಗೊಂಡ ಕೆಲವು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರುತ್ತಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ವಾರ್ಷಿಕ ಆಯವ್ಯಯವನ್ನು ಪರಿಶೀಲಿಸಿ ಮಂಜೂರು ಮಾಡುವುದು, ಅವುಗಳ ಕಾರ್ಯವನ್ನು ಪರಾಮರ್ಶೆ ಮಾಡುವುದು ಮತ್ತು ಅವು ಸರಾಗವಾಗಿ ಕೆಲಸ

ಮಾಡುವುದಕ್ಕೆ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಈ ಸಮಿತಿಯು ಮಾಡುತ್ತಿತ್ತು.

### ತಾಲ್ಲೂಕು ಅಭಿವೃದ್ಧಿ ಮಂಡಳಿಗಳು

ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹಿಂದಿನ ಮೈಸೂರು ರಾಜ್ಯದಲ್ಲಿನ ಜಿಲ್ಲಾ ಅಧೀನ ಗ್ರಾಮ ಅಭಿವೃದ್ಧಿ ಪ್ರಾತಿನಿಧಿಕ ಮಂಡಳಿಗಳಾಗಿದ್ದು, ಮೈಸೂರು ಸ್ಥಳೀಯ ಮಂಡಳಿಗಳ ಮಾದರಿಯಲ್ಲೇ ಪ್ರತಿಯೊಂದು ತಾಲ್ಲೂಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಆಗಿನ ಸಹಾಯಕ ಆಯುಕ್ತರು ಅದರ ಮುಖ್ಯಸ್ಥರಾಗಿದ್ದರು. ಈ ಮಂಡಳಿಗಳಲ್ಲಿ ೧೨ ಮಂದಿ ಸದಸ್ಯರಿರುತ್ತಿದ್ದರು. ಅವರಲ್ಲಿ ನಾಲ್ವರು ಪದನಿಮಿತ್ತರಾಗಿದ್ದು, ಇನ್ನು ನಾಲ್ವರು ಚುನಾಯಿತರು ಮತ್ತು ಮೂವರನ್ನು ಸರ್ಕಾರ ನಾಮಕರಣ ಮಾಡುತ್ತಿತ್ತು. ಉಳಿದೊಬ್ಬರು ಪುರಸಭೆಯಿಂದ ಚುನಾಯಿತರಾಗುತ್ತಿದ್ದರು. ಜಿಲ್ಲಾ ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಈ ತಾಲ್ಲೂಕು ಮಂಡಳಿಗಳು ಒಂದು ವರ್ಷದಲ್ಲಿ ಕನಿಷ್ಟ ಆರು ಸಲವಾದರೂ ಸಭೆ ಸೇರಬೇಕಾಗಿದ್ದಿತು. ೧೯೧೮ರ ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯು ಜಾರಿಯಾಗಿ ೧೯೦೨ರ ಕಾಯ್ದೆಯನ್ನು ರದ್ದುಮಾಡಲಾಯಿತು. ಈ ಹೊಸ ಕಾಯ್ದೆಯನ್ವಯ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಪ್ರಮಾಣವನ್ನು ಗಣನೀಯವಾಗಿ ಏರಿಸಲಾಯಿತು. ಇದರಲ್ಲಿ ಪ್ರಮುಖ ಸಮುದಾಯಗಳಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡಲಾಯಿತು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸ್ವತಂತ್ರ ಅಧಿಕಾರಗಳನ್ನು ನೀಡಲಾಯಿತು. ಇಲ್ಲಿಯವರೆಗೆ ಜಿಲ್ಲಾ ಮತ್ತು ತಾಲ್ಲೂಕು ಪ್ರಗತಿ ಸಮಿತಿಗಳು ನಿರ್ವಹಿಸುತ್ತಿದ್ದ ಜಿಲ್ಲೆಗಳಲ್ಲಿನ ಆರ್ಥಿಕ ಅಭಿವೃದ್ಧಿ ಕೆಲಸವನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಮತ್ತು ಪಂಚಾಯಿತಿಗಳ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಸ್ಥಳೀಯ ಮಂಡಳಿಗಳು ಆರ್ಥಿಕ ಅಭಿವೃದ್ಧಿಗೆ ಗಮನ ನೀಡಬೇಕೆಂದೂ ಮತ್ತು ಶಿಕ್ಷಣ ಸುಂಕವನ್ನು ವಿಧಿಸಬೇಕೆಂದೂ ಸೂಚಿಸಲಾಯಿತು.

### ತಾಲ್ಲೂಕು ಮಂಡಳಿಗಳ ಪುನರ್ ರಚನೆ

ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ರಾಜ್ಯ ಪುನರ್ವಿಂಗಡಣೆ ನಂತರ ೧೯೬೦ರಲ್ಲಿ ಅಂದರೆ ಅವು ಆರಂಭಗೊಂಡು ೩೩ ವರ್ಷಗಳ ಬಳಿಕ ಪುನರುಜ್ಜೀವನ ಗೊಳಿಸಲಾಯಿತು. ೧೯೫೯ರ ಕರ್ನಾಟಕ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ, ಗ್ರಾಮಾಂತರ ಸ್ಥಳೀಯ ಸ್ವಯಂ ಸರ್ಕಾರದಲ್ಲಿ ಮೂರು ಹಂತಗಳನ್ನು ಮಾಡಲಾಗಿದ್ದು, ಅದರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯು

ಪ್ರಧಾನ ಪಾತ್ರವನ್ನು ಹೊಂದಿದ್ದಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತಿ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ೧೯ಕ್ಕೆ ನಿಗದಿಪಡಿಸಲಾಗಿದ್ದಿತು. ಆದರೆ ಆ ತಾಲ್ಲೂಕಿನ ಜನಸಂಖ್ಯೆಯು ಒಂದು ಲಕ್ಷ ಅಥವಾ ಅದಕ್ಕೂ ಹೆಚ್ಚಿರಬೇಕಾಗಿದ್ದಿತು. ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ೧೫ ಸದಸ್ಯರಿರುತ್ತಿದ್ದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ಮೂಲ ಕಾಯ್ದೆಯಲ್ಲಿ ನಾಲ್ಕು ವರ್ಷಗಳಿದ್ದ ಈ ಸಂಸ್ಥೆಗಳ ಅವಧಿಯನ್ನು ಐದು ವರ್ಷಗಳಿಗೆ ಏರಿಸಲಾಯಿತು. ತಾಲ್ಲೂಕಿನಿಂದ ಚುನಾಯಿತರಾದ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ಪರಿಣಾಮಕಾರಿ ಸಮನ್ವಯವಿರಬೇಕೆಂದು ಕಾಯ್ದೆಯಲ್ಲಿ ಸೂಚಿಸಲಾಗಿತ್ತು. ರಸ್ತೆಗಳನ್ನು ನಿರ್ಮಿಸುವುದು, ಕುಡಿಯುವ ನೀರಿನ ಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೊಳ್ಳುವುದು, ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದು ಮುಂತಾದವು ಮಂಡಳಿಗಳ ಮುಖ್ಯ ಕಾರ್ಯಗಳಾಗಿದ್ದವು. ಇದರ ಜೊತೆಗೆ ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ, ಈ ಮಂಡಳಿಗಳ ಜವಾಬ್ದಾರಿಯಾಗಿತ್ತು. ಮಂಡಳಿಗಳು ಸಂಬಂಧಪಟ್ಟ ತಾಲ್ಲೂಕುಗಳ ಭೂ–ಕಂದಾಯದ ಶೇ.೫೦ ರಷ್ಟು ಭಾಗ ವಾರ್ಷಿಕ ಅನುದಾನಕ್ಕೆ ಅರ್ಹವಾಗಿದ್ದು, ಇದರ ಜೊತೆಗೆ ಸರ್ಕಾರವು ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇ.೧೦ರಷ್ಟು ಮೊಬಲಗು ದೊರೆಯುತ್ತಿದ್ದಿತು. ಅಲ್ಲದೆ ಮಂಡಳಿಗಳ ಸ್ಥಿರ ಆಸ್ತಿಗಳ ಮೇಲೆ ಸುಂಕವನ್ನು ಮತ್ತು ಮಾರಾಟಕ್ಕೆ ತಂದ ಜಾನುವಾರುಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವಿದ್ದಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚಾಗಿ ಸರ್ಕಾರದ ಅನುದಾನವನ್ನು ಅವಲಂಬಿಸಿದ್ದವು. ಆ ಪ್ರದೇಶದ ಎಲ್ಲಾ ಭೂ ಕಂದಾಯವನ್ನು ಆಯಾ ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ೬೦:೪೦ರ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತಿತ್ತು. ೧೯೮೭ರಿಂದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಬದಲಾಗಿ ತಾಲ್ಲೂಕು ಪಂಚಾಯಿತಿ ಸಮಿತಿಗಳು ಕಾರ್ಯನಿರತವಾಗಿವೆ.

## ಪಟ್ಟಣ ಪಂಚಾಯಿತಿಗಳು

೧೯೬೪ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಕಲಂ ೩ರ ಪ್ರಕಾರ ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಮಧ್ಯವರ್ತಿ ಸ್ವಯಂ

ಆಡಳಿತ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಜನಸಂಖ್ಯೆಯು ೫೦೦೦ಕ್ಕೂ ಹೆಚ್ಚಿದ್ದು ವಾರ್ಷಿಕ ವರಮಾನವು ರೂ. ೧೦,೦೦೦ ಗಳಿಗಿಂತ ಹೆಚ್ಚಿದ್ದರೆ, ಅಂತಹ ಹಳ್ಳಿಯನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಘೋಷಿಸುತ್ತಿತ್ತು. ಪಟ್ಟಣ ಪಂಚಾಯಿತಿಯಲ್ಲಿ ೧೧ ರಿಂದ ೧೯ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೫ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಕಾಯ್ದೆ ಜಾರಿಗೆ ಬಂದ ಮೇಲೆ ಮೊದಲಿನ ಪಟ್ಟಣ ಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳೆಂದು (೧೯೮೭ರಿಂದ) ಪುನರ್ ರಚಿಸಲಾಯಿತು. ಪಟ್ಟಣದ ನೈರ್ಮಲ್ಯವನ್ನು ಪೌರ ಕಾರ್ಮಿಕರು ಮತ್ತು ಇತರೆ ಮೇಲ್ವಿಚಾರಕ ಸಿಬ್ಬಂದಿ ಕಾಪಾಡುತ್ತಿದ್ದರು. ಸಾಮಾನ್ಯವಾಗಿ ಸಂತೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಬಂದು ಹೋಗುವ ಜನರಿಗೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ವಿಶೇಷ ಧನ ಸಹಾಯವನ್ನು ಒದಗಿಸುತ್ತಿತ್ತು.

### ಗ್ರಾಮ ಪಂಚಾಯಿತಿಗಳು

ಆಧುನಿಕ ಗ್ರಾಮ ಪಂಚಾಯಿತಿ ಪದ್ಧತಿಯನ್ನು ಒಂದು ಸ್ಥಳೀಯ ಆಡಳಿತ ಘಟಕವಾಗಿ ಜಾರಿಗೊಳಿಸುವುದಕ್ಕೆ ಮೊದಲು ಹಳ್ಳಿಯ ನೈರ್ಮಲ್ಯವನ್ನು ೧೮೯೮ರ ಗ್ರಾಮ ನೈರ್ಮಲ್ಯ ನಿಬಂಧನೆಯಡಿಯಲ್ಲಿ ಆರೋಗ್ಯ ಇಲಾಖೆಯು ನೋಡಿಕೊಳ್ಳುತ್ತಿತ್ತು. ೧೮೯೧ರಷ್ಟು ಹಿಂದೆಯೇ ಈ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಜಾಡಮಾಲಿಗಳನ್ನು ನೇಮಿಸಿಕೊಂಡಿದ್ದಕ್ಕೆ ದಾಖಲೆಗಳಿವೆ. ನಂತರ ೧೯೧೪ರಲ್ಲಿ ಹಳ್ಳಿಯ ಅಭಿವೃದ್ಧಿ ಯೋಜನೆಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಜಾರಿಗೆ ತಂದರು. ೧೯೧೮ರ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ನಿಬಂಧನೆಗಳನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಗ್ರಾಮಪಂಚಾಯಿತಿಗಳು ಶಾಸನಬದ್ಧವಾಗಿ ಸ್ಥಾಪನೆಗೊಂಡವು.

ಅದೇ ಪ್ರಕಾರ, ೧೯೧೯ರಲ್ಲಿ ಹಳ್ಳಿಗಳ ಒಂದು ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರಚನೆಗೊಂಡಿದ್ದು, ಅದಕ್ಕೆ ಪ್ರತ್ಯೇಕವಾದ ಸಂಪನ್ಮೂಲಗಳನ್ನು ಗುರ್ತಿಸಲಾಗಿದ್ದು, ಅವುಗಳಿಗೆ ನಾಮಕರಣ ಮಾಡಿದ ಅಧ್ಯಕ್ಷರಿದ್ದರು. ನಂತರ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಎಲ್ಲಾ ಹಳ್ಳಿಗಳಿಗೆ ಪಂಚಾಯಿತಿಗಳನ್ನು ಶಾಸನಬದ್ಧ ಆಧಾರದ ಮೇಲೆ ರಚಿಸಬೇಕೆಂದೂ ಪ್ರತಿ ಪಂಚಾಯಿತಿಯಲ್ಲಿ ಐದಕ್ಕೆ ಕಡಿಮೆ ಇಲ್ಲದಂತೆ, ೧೨ಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿದ್ದು ಅವರಲ್ಲಿ ಅರ್ಧದಷ್ಟು ಜನರನ್ನು ಚುನಾಯಿಸಬೇಕೆಂದೂ ಸಲಹೆ ಮಾಡಲಾಯಿತು. ಪಂಚಾಯಿತಿಯ ಅಧ್ಯಕ್ಷರನ್ನು ಪ್ರಾರಂಭದ ಹಂತದಲ್ಲಿ ಸರ್ಕಾರವು ನೇಮಿಸುತ್ತಿತ್ತು. ಪಂಚಾಯಿತಿಗಳಿಗೆ ಕಡ್ಡಾಯ

ಮತ್ತು ಐಚ್ಛಿಕ ಎಂಬ ಎರಡು ವಿಧವಾದ ಕಾರ್ಯಗಳಿದ್ದವು. ಮೊದಲನೆಯದರಲ್ಲಿ ಹಳ್ಳಿಯ ನೈರ್ಮಲ್ಯ ಮತ್ತು ಸಂಪರ್ಕ; ಎರಡನೆಯದರಲ್ಲಿ ನಿವಾಸಿಗಳ ಆರೋಗ್ಯ ಮತ್ತು ಮೂಲಸೌಕರ್ಯಗಳು ಸೇರಿದ್ದವು. ಪಂಚಾಯಿತಿಗಳಿಗೆ ಮನೆ, ಅಂಗಡಿ, ಖಾಲಿ ನಿವೇಶನ ಮತ್ತು ಹಿತ್ತಲುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಅಧಿಕಾರ ನೀಡಲಾಗಿತ್ತು.

ನಂತರ ೧೯೨೬ರ ಮೈಸೂರು ಜಿಲ್ಲಾ ಮಂಡಳಿಗಳ ನಿಬಂಧನೆ ಮೂರರಂತೆ ಪಂಚಾಯಿತಿಗಳನ್ನು ಜಿಲ್ಲಾ ಮಂಡಳಿಗಳ ಆಡಳಿತಾತ್ಮಕ ನಿಯಂತ್ರಣದಿಂದ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣದಡಿಯಲ್ಲಿ ತರಲಾಯಿತು. ಅವುಗಳು ಸಮರ್ಪಕ ಕಾರ್ಯನಿರ್ವಹಣೆಗೆ ಅವುಗಳ ನಿಯಂತ್ರಣ, ತಪಾಸಣೆ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ತಹಸೀಲ್ದಾರರಿಗೆ ನೀಡಲಾಗಿತ್ತು. ೧೯೫೯ರ ವರೆಗೆ ಜಿಲ್ಲೆಗಳಲ್ಲಿನ ಗ್ರಾಮಪಂಚಾಯಿತಿಗಳು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು.

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆಯು ೧೯೮೫ರ ವರೆಗೆ ಜಾರಿಯಲ್ಲಿತ್ತು. ಅದರ ಪ್ರಕಾರ ೧೫೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೧೦,೦೦೦ ಮೀರದಂತಹ ಜನಸಂಖ್ಯೆಯ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರೂಪುಗೊಂಡಿತು. ಪ್ರತಿಯೊಂದು ಪಂಚಾಯಿತಿಯೂ ೧೧ಕ್ಕಿಂತ ಕಡಿಮೆಯಿಲ್ಲದೆ, ೧೯ ಕ್ಕಿಂತ ಹೆಚ್ಚಿಲ್ಲದೆ ಸದಸ್ಯರನ್ನು ಹೊಂದಿತ್ತು.

**ಆರ್ಥಿಕ ಸಂಪನ್ಮೂಲಗಳು**

ಪ್ರತಿ ಗ್ರಾಮ ಪಂಚಾಯಿತಿಗೆ ಆಯಾ ಹಳ್ಳಿಯ ಭೂ–ಕಂದಾಯದ ಶೇ.೩೦ ರಷ್ಟು ಮತ್ತು ಶೇ.೧೦ರಷ್ಟು ವಿಶೇಷ ಉದ್ದೇಶಗಳಿಗಾಗಿ ವಿವೇಚನಾಧೀನ ಅನುದಾನವು ದೊರೆಯುತ್ತಿತ್ತು. ಪಂಚಾಯಿತಿಯು ತನ್ನ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನ, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ ಮತ್ತು ಹಬ್ಬಗಳು, ಮನೋರಂಜನೆ, ವಾಹನ(ಮೋಟಾರು ವಾಹನಗಳ ಹೊರತು) ಇವುಗಳ ಮೇಲೆ ತೆರಿಗೆಯನ್ನೂ, ಬಸ್ ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣ, ಮತ್ತು ಜಲಾಗಾರಗಳ ಮೇಲೆ ಶುಲ್ಕವನ್ನೂ ವಿಧಿಸಬಹುದಾಗಿತ್ತು. ಪಂಚಾಯಿತಿಯ ಹಂತದಲ್ಲಿ ಗ್ರಾಮ ಲೆಕ್ಕಿಗನು ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸುತ್ತಿದ್ದನು. ವಾರ್ಷಿಕ ರೂ. ೧೨,೦೦೦ ಗಳಿಗಿಂತ ಹೆಚ್ಚು ಆದಾಯವಿರುವ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು.

## ಪಂಚಾಯಿತ್ ರಾಜ್ ಕಾನೂನು

ಪಂಚಾಯಿತಿ ರಾಜ್ ವ್ಯವಸ್ಥೆಯ ಪರಿಕಲ್ಪನೆಯ ಮೂಲ ಉದ್ದೇಶವು ಆಡಳಿತದಲ್ಲಿ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಜಾರಿಗೆ ತಂದು ತನ್ಮೂಲಕ ಪ್ರಜೆಗಳಿಗೆ ನೇರವಾಗಿ ಆಡಳಿತದಲ್ಲಿ ಹೆಚ್ಚಿನ ಅಧಿಕಾರ ಪ್ರಾಪ್ತಿ ಮಾಡಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ ಆಗುವಂತೆ ನೋಡಿಕೊಳ್ಳುವುದೇ ಆಗಿದೆ. ಇದಕ್ಕಾಗಿ ಸರ್ಕಾರ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೩ರಲ್ಲಿ ಜಾರಿಗೆ ತಂದಿತು. ಈ ಕಾನೂನಿನಂತೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು, ಆಡಳಿತದ ವಿವಿಧ ಹಂತಗಳಲ್ಲಿ ವಿಕೇಂದ್ರಿಕರಣ ಹಾಗೂ ಸಾರ್ವಜನಿಕರ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಸಹಯೋಗ ನೀಡುವಂತೆ ಮಾಡುವುದೂ ಸರ್ಕಾರದ ಉದ್ದೇಶವಾಗಿತ್ತು. ಈ ಕಾನೂನಿನನ್ವಯ ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಈ ಹೊಸ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯಿತಿ ಜಾರಿಗೆ ಬರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲ್ಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರತ್ಯೇಕ ಹಣಕಾಸಿನ ಅಧಿಕಾರ ಇರಲಿಲ್ಲ. ಅವು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ನಡೆಸಲ್ಪಡುತ್ತಿದ್ದವು. ಈ ಆಡಳಿತ ವ್ಯವಸ್ಥೆಯು ೧೯೯೨ ರವರೆಗೆ ಮುಂದುವರಿಯಿತು.

**೧೯೫೯ರ ಕಾಯ್ದೆ:** ಮೈಸೂರು ರಾಜ್ಯದಲ್ಲಿ ೧೯೫೬ರಲ್ಲಿ ಹೊಸ ಕಾನೂನು ಜಾರಿಗೆ ಬಂದಿತು. ನೂತನ ಶಾಸನ ವೆಂಕಟಪ್ಪ ಮತ್ತು ಚಂದ್ರಶೇಖರಯ್ಯ ಸಮಿತಿ ಹಾಗೂ ರಾಷ್ಟ್ರಮಟ್ಟದಲ್ಲಿನ ಬಲವಂತರಾಯ್ ಮೆಹ್ತ ಸಮಿತಿ ಶಿಫಾರಸ್ಸುಗಳನ್ನೊಳಗೊಂಡಿದ್ದಿತು. ಇವುಗಳಿಂದ ೧೯೫೬ರಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪಿತವಾಗಲು ತನ್ನದೇ ಆದ ಪ್ರಭಾವವನ್ನು ಬೀರಿತು. ೧೯೫೯ರಲ್ಲಿ ಜಾರಿಗೆ ಬಂದ ಶಾಸನವೆಂದರೆ "ಮೈಸೂರು (ಕರ್ನಾಟಕ) ಗ್ರಾಮಪಂಚಾಯಿತಿಗಳು ಮತ್ತು ಜಿಲ್ಲಾಮಂಡಳಿಗಳ ಅಧಿನಿಯಮ ೧೯೫೯. ಇದರ ಮೂಲ ಉದ್ದೇಶ ಪ್ರಜೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಉತ್ತೇಜಿಸುವುದು ಮತ್ತು ಪ್ರಜೆಗಳಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ಅಧಿಕಾರವನ್ನು ವರ್ಗಾಯಿಸುವುದು". ೧೯೫೯ರಲ್ಲಿ ಮೂರು ಹಂತಗಳಿರುವ ಸ್ಥಳೀಯ ಸರ್ಕಾರ ವ್ಯವಸ್ಥೆ ಜಾರಿಗೆ ಬಂದಿತು. ಇವುಗಳು ಗ್ರಾಮಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ

ಸಲಹಾಸಮಿತಿ. ಗ್ರಾಮಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ನೇರ ಚುನಾವಣೆಗಳಿದ್ದವು. ತಾಲ್ಲೂಕು ಮಂಡಳಿಗಳ ಅಧ್ಯಕ್ಷರುಗಳು ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದರು.

ಗ್ರಾಮ ಪಂಚಾಯಿತಿಗೆ ನೇರ ಚುನಾವಣೆ ಇತ್ತು. ಗ್ರಾಮ ಪಂಚಾಯಿತಿಯ ವ್ಯಾಪ್ತಿ ಒಂದು ಕಂದಾಯ ಗ್ರಾಮ ಅಥವಾ ಕೆಲವು ಗ್ರಾಮಗಳು, ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಟ೧೧, ಗರಿಷ್ಠ ೧೯ ಸದಸ್ಯರಿದ್ದರು. ಗ್ರಾಮ ಪಂಚಾಯಿತಿಯ ಬಜೆಟ್‌ಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆಯನ್ನು ಪಡೆಯಬೇಕಿತ್ತು. ಕೆಲವು ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಪಂಚಾಯಿತಿಗೆ ನೀಡಲಾಗಿತ್ತು. ಉದಾಹರಣೆಗೆ ಭೂ-ಕಂದಾಯದಲ್ಲಿನ ಒಂದು ಪಾಲು ಗ್ರಾಮ ಪಂಚಾಯಿತಿಗಳಿಗೆ ಸೇರುತ್ತಿತ್ತು.

ತಾಲ್ಲೂಕು ಅಭಿವೃದ್ಧಿ ಮಂಡಳಿ ನೇರ ಚುನಾಯಿತ ಸ್ವಯಂಮಾಡಳಿತ ಸಂಸ್ಥೆಯಾಗಿತ್ತು. ಈ ಮಂಡಳಿಯಲ್ಲಿ ೧೫ ರಿಂದ ೧೯ ಸದಸ್ಯರಿದ್ದು, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಪದನಿಮಿತ್ತ ಸದಸ್ಯರಾಗಿದ್ದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದರು. ಸರ್ಕಾರ ನೀಡಿದ ಅನುದಾನ, ಭೂ-ಕಂದಾಯದ ಶೇಕಡಾವಾರು ಪಾಲು ಮತ್ತು ನೀರಿನ ದರ ಇವುಗಳು ಆದಾಯದ ಮೂಲಗಳಾಗಿದ್ದವು. ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯಲ್ಲಿ ಚುನಾಯಿತ ಸದಸ್ಯರಿರುತ್ತಿರಲಿಲ್ಲ.

ಜಿಲ್ಲಾ ಸಮಿತಿಯ ಸದಸ್ಯರು ಸೇರಿದಂತೆ ಜಿಲ್ಲಾ ಅಭಿವೃದ್ಧಿ ಮಂಡಳಿಯಲ್ಲಿ ೧) ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳು, ೨) ಜಿಲ್ಲೆಯಿಂದ ಚುನಾಯಿತರಾದ ರಾಜ್ಯ ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಸಂಸತ್ ಸದಸ್ಯರು, ೩) ೧೫ಕ್ಕೆ ಮೀರದಂತೆ ಸರ್ಕಾರದಿಂದ ನೇಮಕಗೊಂಡ ಜಿಲ್ಲಾ ಮಟ್ಟದ ಅಧಿಕಾರಿಗಳು, ೪) ಒಬ್ಬ ಮಹಿಳೆ ಒಬ್ಬ ಪರಿಶಿಷ್ಟ ಜಾತಿಯ ಸದಸ್ಯರು ಪ್ರತಿನಿಧಿಸುವ ಸದಸ್ಯರು ಮತ್ತು ೫) ಜಿಲ್ಲಾಧಿಕಾರಿಗಳು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಂಸ್ಥೆಯು ಸಲಹಾ ಸಂಸ್ಥೆಯಾಗಿದ್ದು, ಬೇರೆ ಯಾವ ಸಿಬ್ಬಂದಿಯನ್ನು ಹೊಂದಿರಲಿಲ್ಲ.

ವಿಭಾಗಾಧಿಕಾರಿಗಳಿಗೆ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ನಿಯಂತ್ರಿಸುವ ಅಧಿಕಾರವಿತ್ತು. ಈ ಸಂಸ್ಥೆಗಳನ್ನು ಅಮಾನತ್ತು ಮಾಡುವ ಹಾಗೂ ವಿಸರ್ಜಿಸುವ ಅಧಿಕಾರವನ್ನು ವಿಭಾಗಾಧಿಕಾರಿಗಳಿಗೆ ನೀಡಲಾಗಿತ್ತು.

**ಕೊಂಡಜ್ಜಿ ಬಸಪ್ಪ ಸಮಿತಿ**: ೧೯೬೨ರಲ್ಲಿ ಕೊಂಡಜ್ಜಿ ಬಸಪ್ಪ ಸಮಿತಿ ರಚಿಸಿ ಅದಕ್ಕೆ "ಪಂಚಾಯತ್ ರಾಜ್ ಸಮಿತಿ" ಎಂದು ಕರೆಯಲಾಯಿತು. ಈ ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಇದರಲ್ಲಿ ಮುಖ್ಯವಾದುವೆಂದರೆ: ೧) ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಗಳ ಬದಲು ಜಿಲ್ಲಾ ಪರಿಷತ್ತುಗಳ ಸ್ಥಾಪನೆ, ೨) ಜಿಲ್ಲಾ ಪರಿಷತ್ತುಗಳಿಗೆ

ನೇರ ಚುನಾವಣೆ, ೩) ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ, ೪) ಸಂಸತ್ ಮತ್ತು ರಾಜ್ಯ ಶಾಸಕಾಂಗ ಸದಸ್ಯರುಗಳಿಗೆ ಮತದಾನದ ಹಕ್ಕಿಲ್ಲದ ಸಹ ಸದಸ್ಯತ್ವ, ೫) ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು, ೬) ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮುಂದುವರಿಯತಕ್ಕದ್ದು, ೭) ಗ್ರಾಮ ಸಭೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು, ೮) ನ್ಯಾಯ ಪಂಚಾಯಿತಿಗಳನ್ನು ಸ್ಥಾಪಿಸುವುದು ಮತ್ತು ೯) ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು.

ಸಮಿತಿಯ ವರದಿಯನ್ನು ಅವಲಂಬಿಸಿ ಮೈಸೂರು ಪಂಚಾಯತ್‌ರಾಜ್ ಕರಡು ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸಲಾಯಿತು. ಕಾರಣಾಂತರದಿಂದ ಮಸೂದೆ ಅಂಗೀಕಾರವಾಗಲಿಲ್ಲ. ಆದರೂ ಈ ಸಮಿತಿಯ ಮೂಲಭೂತ ಶಿಫಾರಸ್ಸುಗಳನ್ನು ಕಾರ್ಯರೂಪಗೊಳಿಸಲಾಯಿತು. ೧೯೭೭ರ ತುರ್ತು ಪರಿಸ್ಥಿತಿಯ ನಂತರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾಪಕ್ಷ ಪಂಚಾಯತ್ ರಾಜ್ ಸಂಸ್ಥೆಗಳ ಸುಧಾರಣೆಗಳ ಬಗ್ಗೆ ಸಲಹೆ ಮಾಡಲು ಶ್ರೀ ಅಶೋಕ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯು ಕ್ರಾಂತಿಕಾರಿ ಶಿಫಾರಸ್ಸುಗಳುಳ್ಳ ವರದಿಯನ್ನು ೧೯೭೮ರಲ್ಲಿ ಸಲ್ಲಿಸಿತು. ವರದಿಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಮಂಡಲ ಪಂಚಾಯಿತಿ ಎಂಬ ಎರಡು ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸೌಲಭ್ಯವಿರಬೇಕೆಂದು ಅಭಿಪ್ರಾಯಪಟ್ಟಿತು. ಕರ್ನಾಟಕದಲ್ಲಿ ಜನತಾ ಪಕ್ಷದ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಿತು. ಅಧಿಕಾರ ವಿಕೇಂದ್ರೀಕರಣಕ್ಕೆ ಅಪಾರ ಆಸ್ಥೆಯನ್ನು ಹೊಂದಿದ್ದ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾವಣೆಗೆ ಮುಂದಾಯಿತು. ಶ್ರೀ ಕೊಂಡಜ್ಜಿ ಬಸಪ್ಪ ಸಮಿತಿ ಶಿಫಾರಸ್ಸು ಆಧರಿಸಿದ ಮಸೂದೆ ಹಾಗೂ ಶ್ರೀ ಅಶೋಕ ಮೆಹತಾ ಸಮಿತಿಯ ವರದಿ ಕರ್ನಾಟಕದಲ್ಲಿ ನೂತನ ಪಂಚಾಯತ್ ರಾಜ್ ವ್ಯವಸ್ಥೆಗೆ ಪ್ರೇರಣೆ ಹಾಗೂ ಸ್ಫೂರ್ತಿ ನೀಡಿತು.

ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ವಿಕೇಂದ್ರೀಕರಣದಲ್ಲಿ ಅಚಲವಾದ ನಂಬಿಕೆ ಇಟ್ಟಿದ್ದರು. ಅವರ ಪರಿಶ್ರಮದ ಫಲವೇ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೯೮೩ರ ಪ್ರಕಾರ ಜಾರಿಗೆ ಬಂದಿತು. ಈ ಶಾಸನಕ್ಕೆ ಜುಲೈ ೧೦, ೧೯೮೫ರಂದು ರಾಷ್ಟ್ರಪತಿಗಳ ಅನುಮೋದನೆ (ಅಂಕಿತ) ದೊರೆಯಿತು. ದಿ: ೧-೪-೧೯೮೭ ರಿಂದ ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯಾರಂಭ ಮಾಡಿದವು. ಈ ಕಾಯ್ದೆಯಡಿಯಲ್ಲಿ ಸ್ಥಾಪಿತವಾದ ಸಂಸ್ಥೆಗಳ ಸ್ವರೂಪವನ್ನು ಈ ಕೆಳಗೆ ಕೊಡಲಾಗಿದೆ.

**೧. ಗ್ರಾಮಸಭೆ**: ಗ್ರಾಮಸಭೆ ಈ ವ್ಯವಸ್ಥೆಯ ಮೂಲ ಹಂತ. ಯಾವುದೇ ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರುತ್ತಾನೆ. ರಾಜ್ಯದಲ್ಲಿದ್ದ ೨೭,೦೨೪ ಗ್ರಾಮಗಳಿಗೆ ಪ್ರತಿ ಗ್ರಾಮಕ್ಕೊಂದು ಗ್ರಾಮಸಭೆಯಿದ್ದು, ಇವು ವರ್ಷದಲ್ಲಿ ಎರಡು ಸಲ ಸಭೆ ಸೇರುತ್ತವೆ. ಗ್ರಾಮಸಭೆ ಅಭಿವೃದ್ಧಿ ಕಾರ್ಯಕ್ರಮ, ಸಮಸ್ಯೆಗಳ ಪರಿಶೀಲನೆ ಮತ್ತು ಚರ್ಚೆ ಮಾಡುವುದು. ಫಲಾನುಭವಿಗಳ ಆಯ್ಕೆ, ಕನಿಷ್ಟ ಅವಶ್ಯಕತೆಗಳೂ ಸೇರಿದಂತೆ ಸ್ಥಳೀಯ ಅಭಿವೃದ್ಧಿಗೆ ಯೋಜನೆ ತಯಾರಿಕೆ ಮುಂತಾದವು ಗ್ರಾಮಸಭೆಯ ಪ್ರಕಾರ್ಯಗಳಾಗಿದ್ದವು.

**೨. ಮಂಡಲ ಪಂಚಾಯಿತಿ**: ೮,೦೦೦ ರಿಂದ ೧೨,೦೦೦ ಜನಸಂಖ್ಯೆಗೆ ಒಂದು ಮಂಡಲ ಪಂಚಾಯಿತಿ ಇರುತ್ತದೆ, ೪೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯ, ಚುನಾಯಿತ ಸದಸ್ಯರಿಂದ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ಹಾಗೂ ಹಿಂದುಳಿದ ವರ್ಗಗಳಿಂದ ಯಾರೂ ಚುನಾಯಿತರಾಗದ ಪಕ್ಷದಲ್ಲಿ ಈ ವರ್ಗಗಳಿಂದ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕಿತ್ತು.

**೩. ತಾಲ್ಲೂಕು ಪಂಚಾಯತ್ ಸಮಿತಿ**: ತಾಲ್ಲೂಕು ಪಂಚಾಯಿತಿ ಸಮಿತಿಗೆ ನೇರವಾದ ಚುನಾಯಿತ ಸದಸ್ಯರಿರುವುದಿಲ್ಲ. ತಾಲೂಕನ್ನು ರಾಜ್ಯ ವಿಧಾನಸಭೆಯಲ್ಲಿ ಪ್ರತಿನಿಧಿಸುವ ಶಾಸಕರು ಇದರ ಅಧ್ಯಕ್ಷರು. ತಾಲ್ಲೂಕಿನ ಎಲ್ಲಾ ಮಂಡಲ ಪಂಚಾಯಿತಿಗಳ ಪ್ರಧಾನರು ಮತ್ತು ಜಿಲ್ಲಾ ಪರಿಷತ್ತಿಗೆ ತಾಲ್ಲೂಕಿನಿಂದ ಚುನಾಯಿತರಾದ ಸದಸ್ಯರುಗಳು ಇದರ ಸದಸ್ಯರಾಗಿರುತ್ತಿದ್ದರು. ಇವರ ಪ್ರಮುಖ ಕರ್ತವ್ಯವೆಂದರೆ– ಮಂಡಲ ಪಂಚಾಯಿತಿಗಳ ಕಾರ್ಯಗಳ ಸಂಯೋಜನೆ ಹಾಗೂ ಮಂಡಲ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವುದು.

**೪. ಜಿಲ್ಲಾ ಪರಿಷತ್ತು**: ೨೮,೦೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯರಿದ್ದು, ಜಿಲ್ಲೆಯಿಂದ ಸಂಸತ್ ಹಾಗೂ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಚುನಾಯಿತರಾದ ಶಾಸಕರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯರು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಧ್ಯಕ್ಷರಿಗೆ ರಾಜ್ಯ ಸರ್ಕಾರದ ರಾಜ್ಯ ಮಂತ್ರಿಗಳ ಸ್ಥಾನ ಹಾಗೂ ಉಪಾಧ್ಯಕ್ಷರಿಗೆ ಉಪಸಚಿವರ ಸ್ಥಾನ ಮಾನ ದೊರಕುತ್ತದೆ.

**೫. ರಾಜ್ಯ ಅಭಿವೃದ್ಧಿ ಪರಿಷತ್ತು**: ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಜ್ಯಮಟ್ಟದ ಸಂಸ್ಥೆಯಾಗಿ ರಾಜ್ಯ ಅಭಿವೃದ್ಧಿ ಪರಿಷತ್ತು ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು, ರಾಜ್ಯಮಂತ್ರಿ ಮಂಡಲದ ಆರು ಜನ ಸಚಿವರು ಇದರ ಸದಸ್ಯರಾಗಿರುತ್ತಾರೆ. ಅಭಿವೃದ್ಧಿ ಆಯುಕ್ತರು ಈ ಪರಿಷತ್ತಿನ ಸದಸ್ಯ– ಕಾರ್ಯದರ್ಶಿಗಳಾಗಿರುತ್ತಾರೆ. ಮೂರು ತಿಂಗಳಿಗೊಮ್ಮೆ

ಸಭೆ ಸೇರಿ ಪಂಚಾಯತ್ ರಾಜ್ ಕಾರ್ಯಕಲಾಪಗಳ ಬಗ್ಗೆ ಪರಿಶೀಲಿಸಿ, ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಇದರ ಪ್ರಮುಖ ಕರ್ತವ್ಯವಾಗಿದೆ.

**೬. ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ**: ಜಿಲ್ಲಾ ಪರಿಷತ್ತಿನಲ್ಲಿ ಶೇಕಡ ೨೫ರಷ್ಟು ಸ್ಥಾನಗಳನ್ನು ಮಹಿಳೆಯರಿಗೂ, ಶೇ. ೧೮ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಶೇ.೩ರಷ್ಟು ಸ್ಥಾನಗಳನ್ನು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿರಿಸಲಾಗಿತ್ತು. ಜನವರಿ ೧೯೮೭ರಲ್ಲಿ ೨,೪೬೯ ಮಂಡಲ ಪಂಚಾಯಿತಿಗಳಿಗೆ ಮತ್ತು ೨೦ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳು ನಡೆದವು. ಜಿಲ್ಲಾ ಪಂಚಾಯಿತಿಗಳು ಬಹುತೇಕ ಆರ್ಥಿಕ ಸಂಪನ್ಮೂಲಗಳನ್ನು ರಾಜ್ಯ ಸರ್ಕಾರದ ಸಂಚಿತ ನಿಧಿಯಿಂದ ಪಡೆಯುತ್ತಿದ್ದವು. ಇದಲ್ಲದೆ ಸರ್ಕಾರ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅನುದಾನ ಮತ್ತು ಸಾಲವನ್ನು ನೀಡುವ ಸೌಲಭ್ಯವಿತ್ತು. ಮಂಡಲ ಪಂಚಾಯಿತಿಗಳಿಗೆ ಕೆಲವು ತೆರಿಗೆ ಮತ್ತು ಶುಲ್ಕಗಳನ್ನು ವಿಧಿಸುವ, ವಸೂಲಿ ಮಾಡುವ ಮತ್ತು ವಿನಿಯೋಗಿಸುವ ಅಧಿಕಾರವಿತ್ತು. ಸಂವಿಧಾನದ ಹನ್ನೊಂದನೆಯ ಅನುಸೂಚಿಯು ತಿಳಿಸುವಂತೆ ಪಂಚಾಯಿತಿಗಳು ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಾರ್ವಜನಿಕ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ, ಸಾರ್ವಜನಿಕ ವಿತರಣೆ, ನೀರಾವರಿ ಮತ್ತು ಅಂತರ್ಜಲ ಸಂಪನ್ಮೂಲಗಳು, ರಸ್ತೆಗಳು, ಕಟ್ಟಡಗಳು, ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳು, ಇತ್ಯಾದಿ. ಗ್ರಾಮೀಣ ಅಭಿವೃದ್ಧಿಗಳಿಗೆ ಸಂಬಂಧಿಸಿದ ಬಹುಮುಖ್ಯವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು.

**ಕರ್ನಾಟಕ ಪಂಚಾಯತ್ ರಾಜ್‌ಕಾಯ್ದೆ (೧೯೯೩)**: ಸ್ಥಳೀಯ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಿ, ಅವುಗಳ ಕಾರ್ಯವಿಧಾನವನ್ನು ಉತ್ತಮಗೊಳಿಸುವ ಉದ್ದೇಶದಿಂದ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ಪಂಚಾಯತ್ ರಾಜ್ ಕಾನೂನನ್ನು ಸರ್ಕಾರ ೧೯೯೩ ಮೇ ೧೦ ರಂದು ಜಾರಿಗೆ ತಂದಿತು. ಇವುಗಳನ್ನು ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ದೇಶದಲ್ಲಿಯೇ ಪ್ರಥಮ ಪಂಚಾಯತ್ ರಾಜ್ ಕಾಯ್ದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿತ್ತು.

## ಗ್ರಾಮ ಪಂಚಾಯಿತಿಯ ರಚನೆ

ಸಾಮಾನ್ಯವಾಗಿ ೫,೦೦೦ ಕ್ಕಿಂತ ಕಡಿಮೆ ಇಲ್ಲದ ಮತ್ತು ೭,೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗುತ್ತದೆ. ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಚಾಮರಾಜನಗರ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಗಣನೆಗೆ ಪರಿಗಣಿಸದೆ, ಅವಶ್ಯಕ ಎಂದು ಕಂಡುಬರುವಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ (ಹತ್ತು ಕಿ.ಮೀ ವ್ಯಾಸದ) ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮಪಂಚಾಯಿತಿ ಎಂದು ನಿರ್ಧರಿಸಬಹುದಾಗಿದೆ. ಪ್ರತಿ ೪೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗುವುದು. ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಸದಸ್ಯರುಗಳ ಮೀಸಲಾತಿ ವಿವರಗಳನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ.

ಮಂಡಲ ಪಂಚಾಯಿತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮ ಪಂಚಾಯಿತಿಗಳನ್ನು ಪುನಃ ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು. ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯಿತಿಗೆ ಪ್ರಾರಂಭದಲ್ಲಿ ರೂ.ಒಂದು ಲಕ್ಷಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು. ಪ್ರಸ್ತುತ ಈ ವಾರ್ಷಿಕ ಅನುದಾನವನ್ನು ಐದು ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

**ಶಾಸನಬದ್ಧ ಅನುದಾನ**: ಸರ್ಕಾರವು ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗುವಂತೆ ಹೆಚ್ಚು ಮುಕ್ತ ಅನುದಾನ ನೀಡಲು ಕ್ರಮಕೈಗೊಂಡಿದೆ. ೧೯೯೩ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿದ್ದ ಶಾಸನಬದ್ಧ ಅನುದಾನ ಕೇವಲ ರೂ. ಒಂದು ಲಕ್ಷ ಮಾತ್ರ ಆಗಿತ್ತು. ಇದನ್ನು ರೂ. ೩.೫ ಲಕ್ಷಗಳಿಗೆ ಹೆಚ್ಚಿಸಲಾಯಿತು. ೨೦೦೩ರಲ್ಲಿ ಕಾನೂನಿಗೆ ತಿದ್ದುಪಡಿ

### ಜಿಲ್ಲೆಯಲ್ಲಿ ೨೦೧೫ ರಲ್ಲಿ ನಡೆದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರ ಮೀಸಲಾತಿ ವಿವರ

| ಕ್ರ. ಸಂ. | ತಾಲ್ಲೂಕಿನ ಹೆಸರು | ಒಟ್ಟು ಗ್ರಾಮ ಪಂಚಾಯಿತಿ ಗಳ ಸಂಖ್ಯೆ | ಒಟ್ಟು ಸ್ಥಾನಗಳ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಗೆ ವರ್ಗವಾರು ಸಂಖ್ಯೆಯ ವಿವರ | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | ಅನುಸೂಚಿತ ಜಾತಿ | | | ಅನುಸೂಚಿತ ಪಂಗಡ | | | ಹಿಂದುಳಿದ ಅ ವರ್ಗ | | | ಹಿಂದುಳಿದ ಬ ವರ್ಗ | | | ಸಾಮಾನ್ಯ | | | ಒಟ್ಟು | | |
| | | | | | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು |
| ೧ | ಮೊಳಕಾಲ್ಮೂರು | ೧೫ | ೩೦೮ | ೩೦೭ | ೨೬ | ೩೪ | ೬೦ | ೬೦ | ೬೯ | ೧೨೯ | ೩ | ೫ | ೮ | ೧ | ೧ | ೨ | ೬೨ | ೪೬ | ೧೦೮ | ೧೫೨ | ೧೫೫ | ೩೦೭ |
| ೨ | ಚಳ್ಳಕೆರೆ | ೪೦ | ೭೫೫ | ೭೫೫ | ೮೨ | ೧೦೨ | ೧೮೪ | ೧೦೦ | ೧೨೩ | ೨೨೩ | ೬ | ೨೦ | ೨೬ | ೫ | ೦ | ೫ | ೧೭೮ | ೧೩೯ | ೩೧೭ | ೩೭೧ | ೩೮೪ | ೭೫೫ |
| ೩ | ಚಿತ್ರದುರ್ಗ | ೩೮ | ೭೨೭ | ೭೨೭ | ೯೦ | ೧೧೦ | ೨೦೦ | ೬೪ | ೮೬ | ೧೫೦ | ೧೧ | ೨೮ | ೩೯ | ೫ | ೧ | ೬ | ೧೮೬ | ೧೪೬ | ೩೩೨ | ೩೫೬ | ೩೭೧ | ೭೨೭ |
| ೪ | ಹಿರಿಯೂರು | ೩೩ | ೫೯೦ | ೫೯೦ | ೬೯ | ೮೯ | ೧೫೮ | ೨೨ | ೪೩ | ೬೫ | ೧೬ | ೩೯ | ೫೫ | ೧೦ | ೧ | ೧೧ | ೧೬೭ | ೧೩೪ | ೩೦೧ | ೨೮೪ | ೩೦೬ | ೫೯೦ |
| **೫** | **ಹೊಸದುರ್ಗ** | **೩೧** | **೪೯೪** | **೪೯೪** | **೪೧** | **೬೪** | **೧೦೫** | **೧೪** | **೩೭** | **೫೧** | **೧೯** | **೪೬** | **೬೫** | **೧೮** | **೧** | **೧೯** | **೧೪೬** | **೧೦೮** | **೨೫೪** | **೨೩೮** | **೨೫೬** | **೪೯೪** |
| ೬ | ಹೊಳಲ್ಕೆರೆ | ೨೯ | ೪೯೩ | ೪೯೨ | ೬೨ | ೭೭ | ೧೩೯ | ೨೧ | ೪೧ | ೬೨ | ೧೩ | ೨೮ | ೪೧ | ೪ | ೩ | ೭ | ೧೩೭ | ೧೦೬ | ೨೪೩ | ೨೩೭ | ೨೫೫ | ೪೯೨ |
| | **ಒಟ್ಟು** | **೧೮೬** | **೩೩೬೭** | **೩೩೬೫** | **೩೭೦** | **೪೭೬** | **೮೪೬** | **೨೮೧** | **೩೯೯** | **೬೮೦** | **೬೮** | **೧೬೬** | **೨೩೪** | **೪೩** | **೭** | **೫೦** | **೮೭೬** | **೬೭೯** | **೧೫೫೫** | **೧೬೩೮** | **೧೭೨೭** | **೩೩೬೫** |

**ಆಧಾರ: ರಾಜ್ಯ ಚುನಾವಣಾ ಆಯೋಗ.**

ತರುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಟ ಶಾಸನಬದ್ಧ ಅನುದಾನವನ್ನು ರೂ. ಐದು ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ನೇರ ಬಿಡುಗಡೆ ಮಾಡುವ ವಿಧಾನವನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನ್ನು ನವೆಂಬರ್ ೨೦೦೩ ರಿಂದ ಜಾರಿಗೆ ತರಲಾಗಿದೆ.

ನೀರು ಪೂರೈಕೆ ಮತ್ತು ಬೀದಿ ದೀಪಗಳಿಗೆ ಬಳಸಿದ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗಳು ಎಸ್ಕಾಂಗಳಿಗೆ ನಿಯಮಿತವಾಗಿ ತುಂಬಲು ವಿವರವಾದ ಕೈಪಿಡಿಯನ್ನು ಸರ್ಕಾರವು ೨೦೦೪ ರಿಂದ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಕೈಗೊಂಡ ಕಾಮಗಾರಿಗಳು, ಬರ ಪರಿಹಾರ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳ್ಳಬೇಕು. ಅವುಗಳ ಗುಣಮಟ್ಟದಲ್ಲಿ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಪ್ರಮಾಣೀಕರಿಸದ ಹೊರತು ಅಂತಹ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡತಕ್ಕದ್ದಲ್ಲ ಎಂಬ ಸೂಚನೆಗಳನ್ನು ಸರ್ಕಾರ ಹೊರಡಿಸಿದೆ. ಗ್ರಾಮಪಂಚಾಯಿತಿ ಸದಸ್ಯರ ತರಬೇತಿಗಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಾಪಿಸಿರುವ ಉಪಗ್ರಹ ಕೇಂದ್ರದ ಮೂಲಕ ಪ್ರಸಾರ ಮಾಡಲು ರಾಜ್ಯಾದ್ಯಂತ ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಒಂದು ಕಡೆ ದೃಶ್ಯ. ಎರಡು ಕಡೆ ವಾಕ್ ಶ್ರವಣ ಮೂಲಕ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಚಲನಚಿತ್ರಗಳು, ಸ್ಥಳೀಯ ಅಂತರ ಸಂವಾದ ಮತ್ತು ಸಮುದಾಯ ಸಂಘಟನೆಯಂತಹ ವಿಷಯಗಳನ್ನು ಅಳವಡಿಸಲಾಗಿದೆ. ಪಂಚಾಯತ್ ರಾಜ್ ಇತಿಹಾಸ ಮತ್ತು ರಚನೆ, ಗ್ರಾಮಸಭೆ, ಗ್ರಾಮಪಂಚಾಯಿತಿ ನಿಯಮಗಳು ಮತ್ತು ಪಂಚಾಯತ್ ಆಯವ್ಯಯ, ಲೆಕ್ಕಪತ್ರ ಮತ್ತು ಜಮಾಬಂದಿ, ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ಶಿಶುಸಂರಕ್ಷಣೆ, ನೀರು ನೈರ್ಮಲ್ಯ ಕುರಿತು ವಲಯವಾರು ವಿಚಾರಗಳು ಮತ್ತು ಸಾಮಾನ್ಯ ಆಸ್ತಿಪಾಸ್ತಿಗಳು, ಒಟ್ಟಾರೆ ಅಭಿವೃದ್ಧಿ ಮತ್ತು ಸ್ಥಳೀಯ ಯೋಜನೆ ರೂಪಿಸುವಿಕೆಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, ಮಾಹಿತಿ ಹಕ್ಕು ಮತ್ತು ಸ್ಥಳೀಯ ಕಂದಾಯ ಸಂಗ್ರಹಣೆ ಸೇರಿದಂತೆ ಸಾಮಾನ್ಯ ವಿಷಯಗಳನ್ನು ಅಳವಡಿಸಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

**ಗ್ರಾಮ ಪಂಚಾಯಿತಿಗಳ ಕಂಪ್ಯೂಟರೀಕರಣ**

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಕಂಪ್ಯೂಟರೀಕರಿಸುವ ಪ್ರಮುಖ ಸಾಹಸ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಜಮೀನುಗಳ ಸರ್ವೇ

ನಂ, ಅವುಗಳ ವಿವರಗಳು, ಸರ್ವಕುಟುಂಬ ಸಮೀಕ್ಷೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ಅಗತ್ಯವಾದ ತಂತ್ರಾಂಶಗಳನ್ನು ಈಗಾಗಲೇ ಅಭಿವೃದ್ಧಿಪಡಿಸಿದೆ. ತಂತ್ರಾಂಶ ಕುರಿತಂತೆ ತರಬೇತಿದಾರರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಲಯಗಳ ಯೋಜನೆ ಜನವಸತಿಗಳ ೨೦ ವಲಯಗಳ ಸುಮಾರು ೩೭೫ ಅಂಶಗಳಲ್ಲಿ ಮಾಹಿತಿಯನ್ನು "ಸಾಮಾನ್ಯ ಮಾಹಿತಿ" ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಅಂತರ್ಜಾಲ ತಾಣ (ವೆಬ್‌ಸೈಟ್)ದಲ್ಲಿ ಅಳವಡಿಸಲಾಗಿದೆ. ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಕಛೇರಿ, ವಿಧಾನಸೌಧ, ಶಾಸಕರ ಭವನ, ಬಹುಮಹಡಿ ಕಟ್ಟಡ, ಎಲ್ಲಾ ಸಚಿವಾಲಯ ಹಾಗೂ ಇಲಾಖಾ ಕಾರ್ಯದರ್ಶಿಗಳ ಕೊಠಡಿಗಳಲ್ಲಿ ಈ ಮಾಹಿತಿಯುಳ್ಳ 'ಕಿಯೋಸ್ಕ್‌ಗಳನ್ನು' ಸಾರ್ವಜನಿಕರ ಮಾಹಿತಿಗಾಗಿ ಇಡಲಾಗಿದೆ. ಈ ಮಾಹಿತಿಯನ್ನು ಪ್ರತಿ ವರ್ಷವೂ ಪರಿಷ್ಕರಿಸುವುದರಿಂದ ತಾಜಾ ಮಾಹಿತಿ ಲಭ್ಯವಾಗಿ ಪಂಚಾಯಿತಿಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

**ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿ ರಚನೆ**: ಗ್ರಾಮ ಪಂಚಾಯಿತಿಯು ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

**೧) ಉತ್ಪಾದನಾ ಸಮಿತಿ**

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ ಇರುತ್ತದೆ.

**೨) ಸಾಮಾಜಿಕ ನ್ಯಾಯ ಸಮಿತಿ**

ಎ) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ.

ಬಿ) ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಶೋಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ.

ಸಿ) ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ ಕಾರ್ಯನಿರ್ವಹಿಸುತ್ತದೆ.

**೩) ಸೌಕರ್ಯಗಳ ಸಮಿತಿ**

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯಗಳ ಸಮಿತಿಯಿದೆ.

ಗ್ರಾಮ ಪಂಚಾಯಿತಿಯ ಆಡಳಿತ ವಿಭಾಗವು ಅನೇಕ ಖಾಸಗಿ ಹಾಗೂ ನೇಮಕ ಸದಸ್ಯರುಗಳನ್ನು ಹೊಂದಿದ್ದು,

೧) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮೂರು ಅಥವಾ ಐದು ಜನ ಸದಸ್ಯರು ಇರುತ್ತಾರೆ. ೨) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಸಭಾಪತಿಯಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾಜಿಕ ನ್ಯಾಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ. ೩) ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು.

ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ, ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು, ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ-ಆಪ್ಟ್ ಮಾಡಿಕೊಳ್ಳತಕ್ಕದ್ದು.

## ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಗಳು

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು. ೨. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ೧೯೯೩ ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಗಳನ್ನು ನಿರ್ವಹಿಸತಕ್ಕದ್ದು. ೩. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಆಫೀಸ್‌ರ್ (Drawing and Disbursing Officer) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು. ೪. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು. ೫. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು. ೬. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ. ೭. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ. ೮. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು. ೯. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ

ಅನುಷ್ಠಾನ, ಮೇಲ್ವಿಚಾರಣೆ, ಎಂ.ಐ.ಎಸ್.ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು. ೧೦. ಪಂಚತಂತ್ರ ತಂತ್ರಾಂಶ, ಇ-ಪಂಚಾಯತ್ ಮತ್ತು ಇ-ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ. ೧೧. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ ೧೨. ೨೦೦೫ ರ ಮಾಹಿತಿ ಹಕ್ಕು ಅಧಿನಿಯಮದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ. ೧೩. ಸಕಾಲ ಸೇವೆಗಳ ನಿರ್ವಹಣೆ ೧೪. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರೆ ಕಾರ್ಯಗಳು.

**ತಾಲ್ಲೂಕು ಪಂಚಾಯಿತಿಯ ರಚನೆ**

ಕರ್ನಾಟಕದಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ಈ ಕೆಳಗಿನ ಸದಸ್ಯರನ್ನು ಹೊಂದಿರುವಂತೆ ರಚಿಸಲಾಗಿದೆ.

೧. ಪ್ರತಿ ೧೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬರಂತೆ ಚುನಾಯಿತ ಸದಸ್ಯರಿರುತ್ತಾರೆ. ೨. ಯಾವ ಲೋಕಸಭಾ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲ್ಲೂಕಿನ ಒಳಗೆ ಇದ್ದ ತಾಲ್ಲೂಕನ್ನು ಪೂರ್ತಿ ಅಥವಾ ಭಾಗಶಃ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ. ೩. ತಾಲ್ಲೂಕಿನಲ್ಲಿ ಮತದಾರರಾಗಿ ನೋಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಸದಸ್ಯರಾಗಿರುತ್ತಾರೆ. ೪. ತಾಲ್ಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಲ್ಲಿ ೫/೧ ಭಾಗದಷ್ಟು ಅಧ್ಯಕ್ಷರು ಚೀಟಿ ಎತ್ತುವ ಮೂಲಕ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಒಂದು ವರ್ಷ ಅವಧಿಗೆ ಆಯ್ಕೆ ಮಾಡುತ್ತಾರೆ. ಅಲ್ಲದೆ ಒಮ್ಮೆ ತಾಲ್ಲೂಕು ಪಂಚಾಯಿತಿಗೆ ಅಧ್ಯಕ್ಷರಾದವರು ಎರಡನೇ ಅವಧಿಗೆ ಅಧ್ಯಕ್ಷರಾಗಲು ಅರ್ಹರಿರುವುದಿಲ್ಲ. ತಾಲ್ಲೂಕಿನಲ್ಲಿ ೨೦೧೬ ರಲ್ಲಿ ನಡೆದ ಚಿತ್ರದುರ್ಗ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಆಯ್ಕೆಯಾದ ಒಟ್ಟು ಸದಸ್ಯರ ಮೀಸಲಾತಿ ವಿವರಗಳನ್ನು ಮುಂದಿನ ಕೋಷ್ಠಕದಲ್ಲಿ ನೀಡಲಾಗಿದೆ.

**ಜಿಲ್ಲೆಯಲ್ಲಿ ೨೦೧೬ರಲ್ಲಿ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ತಾಲ್ಲೂಕು ಪಂಚಾಯ್ತಿ ಸದಸ್ಯರ ವಿವರ**

| ಕ್ರ. ಸಂ. | ತಾಲ್ಲೂಕು ಪಂಚಾಯಿತಿ ಗಳು | ಒಟ್ಟು ಸದಸ್ಯರ ಸಂಖ್ಯೆ | ವರ್ಗವಾರು ಮೀಸಲಿರಿಸಿದ ಸ್ಥಾನಗಳು | | | | |
|---|---|---|---|---|---|---|---|
| | | | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ (ಅ) ವರ್ಗ | ಹಿಂದುಳಿದ (ಬ) ವರ್ಗ | ಸಾಮಾನ್ಯ |
| ೧ | ಚಿತ್ರದುರ್ಗ | ೨೯(೧೫) | ೮(೪) | ೬(೩) | ೦(೦) | ೦(೦) | ೧೫(೮) |
| ೨ | ಚಳ್ಳಕೆರೆ | ೨೯(೧೫) | ೭(೪) | ೯(೫) | ೦(೦) | ೦(೦) | ೧೩(೬) |

| | | | | | | | |
|---|---|---|---|---|---|---|---|
| ೩ | ಮೊಳಕಾಲ್ಮೂರು | ೧೩(೭) | ೩(೨) | ೫(೩) | ೦(೦) | ೦(೦) | ೫(೨) |
| ೪ | ಹಿರಿಯೂರು | ೨೩(೧೨) | ೬(೩) | ೨(೧) | ೨(೨) | ೧(೦) | ೧೨(೬) |
| ೫ | ಹೊಳಲ್ಕೆರೆ | ೨೦(೧೦) | ೬(೩) | ೩(೨) | ೧(೧) | ೦(೦) | ೧೦(೪) |
| **೬** | **ಹೊಸದುರ್ಗ** | **೨೧(೧೧)** | **೫(೩)** | **೨(೧)** | **೨(೨)** | **೧(೦)** | **೧೧(೫)** |

**ಆಧಾರ: ರಾಜ್ಯ ಚುನಾವಣಾ ಆಯೋಗ**

ಅದರಂತೆ ಹೊಸದುರ್ಗ ತಾಲ್ಲೂಕು ಪಂಚಾಯಿತಿಯಲ್ಲಿ ಒಟ್ಟು ೨೧(೧೧) ಸದಸ್ಯರಿದ್ದು ಅವರಲ್ಲಿ ಅನುಸೂಚಿತ ಜಾತಿ ೫(೩), ಅನುಸೂಚಿತ ಪಂಗಡ ೨(೧), ಹಿಂದುಳಿದ ಅ ವರ್ಗ ೨(೨), ಹಿಂದುಳಿದ ಬ ವರ್ಗ ೧(೦) ಹಾಗೂ ಸಾಮಾನ್ಯ ವರ್ಗದಿಂದ ೧೧(೫) ಸದಸ್ಯರ ಮೀಸಲಾತಿಯನ್ನು ನೀಡಲಾಗಿದೆ. ಆವರಣದಲ್ಲಿ ನೀಡಿರುವ ಅಂಕಿಗಳು ಮಹಿಳಾ ಸದಸ್ಯರನ್ನು ಬಿಂಬಿಸುತ್ತದೆ.

## ಜಿಲ್ಲಾ ಪಂಚಾಯಿತಿ ರಚನೆ

ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯಿತಿ ಇದ್ದು, ಪ್ರತಿ ೪೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ೩೦,೦೦೦ ಜನಸಂಖ್ಯೆಗೆ ಒಬ್ಬರಂತೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ೧೮,೦೦೦ ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಹಾಗೂ ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಜಿಲ್ಲೆಯ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಇರುತ್ತಾರೆ. ಹೊಸದುರ್ಗ ತಾಲ್ಲೂಕಿನಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು ಆರು ಮಂದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಗೊಂಡಿರುತ್ತಾರೆ.

## ಜಿಲ್ಲಾ ಯೋಜನಾ ಸಮಿತಿ

ರಾಜ್ಯಾಂಗದ ೭೪ನೇ ತಿದ್ದುಪಡಿಯ ಕಲಂ ೨೪೩ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳು ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಈ ಸಮಿತಿಯು ಸಮಗ್ರೀಕರಿಸಿ ಪಂಚಾಯಿತಿ ಮತ್ತು ಪುರಸಭೆಗಳ ನಡುವೆ ಪ್ರಾದೇಶಿಕ ಯೋಜನೆ ರೂಪಿಸುವುದು, ನೀರು ಹಂಚಿಕೆ ಮತ್ತು

ಇತರೆ ಪ್ರಾಕೃತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನೂ ಸೇರಿ ಸಾಮಾನ್ಯ ಆಸಕ್ತಿಯ ವಿಚಾರಗಳಿಗೆ ಸಂಬಂಧಪಟ್ಟಂತೆ ಇಡಿಯಾಗಿ ಪರಿಗಣಿಸಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ಹಣಕಾಸು ಮತ್ತು ಇತರ ಸಂಪನ್ಮೂಲಗಳ ಲಭ್ಯತೆಯ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಯೋಜನಾ ಸಮಿತಿ ಕಾರ್ಯತಂತ್ರವನ್ನು ರೂಪಿಸುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳು ಮಾರ್ಗದರ್ಶನವನ್ನು ಮಾಡುತ್ತವೆ. ಸ್ಥಳೀಯ ಸಂಸ್ಥೆಗಳು ತಯಾರಿಸುವ ಪಂಚವಾರ್ಷಿಕ ಯೋಜನೆಗಳನ್ನು ಚರ್ಚಿಸಿ, ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾರ್ಯಗಳ ಅನುಷ್ಠಾನದ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ಹಾಗೂ ಇತರೆ ವಿಷಯಗಳಲ್ಲಿ ಸಮನ್ವಯ ಸಾಧಿಸುವ ವಿಶೇಷ ಅಧ್ಯಯನಗಳನ್ನು, ವಿಚಾರ ಸಂಕಿರಣಗಳನ್ನು ಹಾಗೂ ಹೊಸ ಸುಧಾರಣೆಗಳನ್ನು ತರುವ ಪ್ರಕಾರ್ಯಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ವಹಿಸಲಾಗಿದೆ.

ಪಂಚಾಯತ್ ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ರಾಜ್ಯ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ. ಈ ಸಂಸ್ಥೆಗಳಿಗೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" (ಸಿ.ಇ.ಓ) ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಮೂರನೆಯ ಎರಡು (⅔) ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವುದಕ್ಕೆ ಸಹಾಯಕವಾಗುತ್ತದೆ.

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯಿತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಸಭೆಯಲ್ಲಿ ನಿರ್ಣಯಿಸಿದ ಗೊತ್ತುವಳಿಗಳನ್ನು ರದ್ದುಪಡಿಸುವ

ಹಕ್ಕು ಸರ್ಕಾರಕ್ಕೆ ಇದೆ. ಪ್ರತಿ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

**ಪಂಚಾಯಿತಿಗಳಿಗೆ ಬಹುಮಾನ**

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ೧೯೯೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ. ಒಂದು ಲಕ್ಷ, ರೂ. ೫೦ ಸಾವಿರ ಮತ್ತು ರೂ. ೨೫ ಸಾವಿರ), ತಾಲ್ಲೂಕು ಪಂಚಾಯಿತಿಗಳಿಗೂ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ, ಮತ್ತು ರೂ. ೫೦ ಸಾವಿರ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ರೂ. ಐದು ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯಿತಿ ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆ, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲಾ ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

**ಹೊಸದುರ್ಗ ಪುರಸಭೆ**

ಹೊಸದುರ್ಗ ಪಟ್ಟಣವು ದಿ:೨೧.೦೪.೧೯೫೨ ರಲ್ಲಿ ಪುರಸಭೆಯಾಗಿ ಅಸ್ತಿತ್ವಕ್ಕೆ ಬಂದಿತು. ದಿ:೦೧.೦೪.೧೯೮೯ ರಲ್ಲಿ ಮಧ್ಯಂತರ ಮಂಡಲ ಪಂಚಾಯಿತಿ ಎಂದು

ಪರಿವರ್ತಿತವಾಯಿತು. ದಿ: ೧೮.೦೭.೧೯೯೬ ರಲ್ಲಿ ಪಟ್ಟಣ ಪಂಚಾಯಿತಿಯಾಗಿ, ದಿ: ೦೧.೦೧.೨೦೦೭ ರಿಂದ ಪುರಸಭೆಯಾಗಿ ಮುಂದುವರೆದಿದೆ. ಪಟ್ಟಣದ ವಸತಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಖಾಲಿ ನಿವೇಶನಗಳು ಇವುಗಳಿಂದ ಕಂದಾಯವನ್ನು ಸಂಗ್ರಹಿಸುವುದಲ್ಲದೇ, ತರಕಾರಿ ಮಾರುಕಟ್ಟೆ ಬಾಡಿಗೆ, ಮಟನ್ ಸ್ಟಾಲ್ ಹರಾಜು, ವಾರದ ಸಂತೆ, ಪುಟ್‌ಪಾತ್ ಜಾಗ ಹರಾಜು, ನೀರಿನ ತೆರಿಗೆ ಮುಂತಾದವುಗಳು ಆದಾಯದ ಸಂಪನ್ಮೂಲಗಳಾಗಿವೆ. ಪುರಸಭೆಯು ಪಟ್ಟಣಗಳ ರಸ್ತೆಗಳು, ಚರಂಡಿ, ಬೀದಿ ದೀಪ, ನೈರ್ಮಲ್ಯತೆ ಮುಂತಾದ ನಾಗರಿಕ ಸೌಲಭ್ಯಗಳನ್ನು ನಿರ್ವಹಿಸುತ್ತದೆ.

ಹೊಸದುರ್ಗ ಪುರಸಭೆಯು ಸ್ವಚ್ಛ ಸರ್ವೇಕ್ಷಣೆ ೨೦೧೮ ರ ಸಮೀಕ್ಷೆಯಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ (ರಾಜ್ಯದಲ್ಲಿ ೧೩ ನೇ ಸ್ಥಾನ) ಪಡೆದಿದೆ. ಪಟ್ಟಣದ ೬,೫೭೮ ಮನೆಗಳು ಇತ್ಯಾದಿ ಮೂಲಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ವಿಲೇವಾರಿಗೊಳಿಸುತ್ತಿರುವುದಕ್ಕಾಗಿ ಜಿಲ್ಲೆಗೆ ಪ್ರಥಮ ಸ್ಥಾನ ಬಂದಿದೆ.

ಹೊಸದುರ್ಗ ಪುರಸಭೆಗೆ (೨೦೧೭–೧೮ ನೇ ಸಾಲಿನಲ್ಲಿದ್ದಂತೆ) ವೇದಾವತಿ ನದಿ ಬಳಿ ಇರುವ ಕೆಲ್ಲೋಡು ಬ್ಯಾರೇಜ್‌ನಿಂದ, ಕೊಳವೆ ಬಾವಿಗಳಿಂದ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ೯೨ ಕೊಳವೆ ಬಾವಿಗಳು, ೦೨ ಪಂಪಿಂಗ್ ಸ್ಟೇಷನ್ ಹಾಗೂ ೦೯ ನೀರು ಸಂಗ್ರಾಹಕಗಳಿವೆ. ಈ ನೀರು ಸಂಗ್ರಾಹಕಗಳ ಸಂಗ್ರಾಹ ಕ್ಷಮತೆ ೨೨ ಲಕ್ಷ ಲೀಟರ್‌ಗಳಾಗಿವೆ. ೪೫೦ ಸಾರ್ವಜನಿಕ ಕೊಳಾಯಿಗಳು, ೨,೫೭೦ ಗೃಹಬಳಕೆ ಹಾಗೂ ೧೮ ವಾಣಿಜ್ಯ ಸಂಪರ್ಕಗಳಿದ್ದವು. ಪಟ್ಟಣದಲ್ಲಿ ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೬೨ ಎಲ್.ಪಿ.ಸಿ.ಡಿ ಆಗಿದೆ. ಪುರಸಭೆಯಲ್ಲಿ ೧೫ ಖಾಯಂ ಪೌರ ಕಾರ್ಮಿಕರು ಹಾಗೂ ೨೨ ಹೊರಗುತ್ತಿಗೆ ಪೌರ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯಿಂದ ಎರಡನೇ ಹಂತದ ರೊಚ್ಚು ಸಂಸ್ಕರಣಾ ಘಟಕ(ಎಸ್.ಟಿ.ಪಿ)ವನ್ನು ಅಭಿವೃದ್ಧಿಪಡಿಸುವ ಹಂತದಲ್ಲಿದೆ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ೧೫೬೦ ಟ್ಯೂಬ್‌ಲೈಟ್‌ಗಳನ್ನು, ೯೯೬ ಸೋಡಿಯಂ ವೇಪರ್ ದೀಪಗಳನ್ನು, ೫ ಹೈಮಾಸ್ಟ್ ದೀಪಗಳನ್ನು ಹಾಗೂ ೩೫ ಎಲ್.ಇ.ಡಿ. ದೀಪಗಳನ್ನು ಅಳವಡಿಸಲಾಗಿದೆ. ಇದಕ್ಕಾಗಿ ರೂ.೧೭.೧೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹೆಚ್ಚಿನ ವಿವರಗಳಿಗೆ ಮುಂದೆ ನೀಡಿರುವ ಕೋಷ್ಟಕಗಳನ್ನು ನೋಡಿ.

## ೨೦೧೩ ರಲ್ಲಿ ನಡೆದ ಹೊಸದುರ್ಗ ಪುರಸಭಾ ಚುನಾವಣೆಯಲ್ಲಿ ಆಯ್ಕೆಗೊಂಡ ಸದಸ್ಯರುಗಳ ಮೀಸಲಾತಿ ವಿವರ.

| ಸ್ಥಾನಗಳ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ ವರ್ಗ | ೭ | ೪ | ೧೧ |
| ಹಿಂದುಳಿದ ವರ್ಗ 'ಎ' | ೪ | ೨ | ೬ |
| ಹಿಂದುಳಿದ ವರ್ಗ 'ಬ' | ೧ | ೧ | ೨ |
| ಪರಿಶಿಷ್ಟ ಜಾತಿ | ೨ | ೧ | ೩ |
| ಪರಿಶಿಷ್ಟ ಪಂಗಡ | ೦ | ೧ | ೧ |
| ಒಟ್ಟು | ೧೪ | ೦೯ | ೨೩ |

ಆಧಾರ: ಪುರಸಭೆ, ಹೊಸದುರ್ಗ.

## ಹೊಸದುರ್ಗ ಪುರಸಭಾ ವ್ಯಾಪ್ತಿಯಲ್ಲಿ ೨೦೧೦-೧೧ ರಿಂದ ೨೦೧೭-೧೮ ರವರೆಗೆ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ

| ವರ್ಷ | ವೆಚ್ಚ (ರೂ ಲಕ್ಷಗಳಲ್ಲಿ) |
|---|---|
| ೨೦೧೦-೧೧ | ೧೨೬.೫೭ |
| ೨೦೧೧-೧೨ | ೨೫.೦೮ |
| ೨೦೧೨-೧೩ | ೧೨೩.೭೦ |
| ೨೦೧೩-೧೪ | ೯೮.೦೩ |
| ೨೦೧೪-೧೫ | ೯೧.೪೧ |
| ೨೦೧೫-೧೬ | ೭೬.೮೯ |
| ೨೦೧೬-೧೭ | ೧೨೫.೧೧ |
| ೨೦೧೭-೧೮ | ೮೧.೮೦ |

ಆಧಾರ: ಪುರಸಭೆ, ಹೊಸದುರ್ಗ.

## ಹೊಸದುರ್ಗ ಪುರಸಭೆಯ ಆದಾಯ ಮತ್ತು ವೆಚ್ಚಗಳ ವಿವರ

(ರೂ.ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೧೦-೧೧ | ೬೨೯.೯೫ | ೭೫೨.೪೯ |
| ೨೦೧೧-೧೨ | ೭೪೨.೩೬ | ೮೬೨.೬೬ |
| ೨೦೧೨-೧೩ | ೯೫೧.೫೧ | ೭೪೮.೬೮ |
| ೨೦೧೩-೧೪ | ೮೪೫.೩೫ | ೬೩೫.೭೪ |
| ೨೦೧೪-೧೫ | ೯೦೯.೫೦ | ೮೩೯.೭೮ |
| ೨೦೧೫-೧೬ | ೩೬೮.೪೯ | ೨೪೯.೫೦ |
| ೨೦೧೬-೧೭ | ೧೦೬೭.೧೯ | ೧೦೦೨.೮೫ |
| ೨೦೧೭-೧೮ | ೧೩೦೮.೪೧ | ೯೦೦.೦೮ |

**ಹೊಸದುರ್ಗ ಪುರಸಭಾ ವ್ಯಾಪ್ತಿಯಲ್ಲಿ೨೦೧೦-೧೧ ರಿಂದ ೨೦೧೭-೧೮ ರವರೆಗೆ ವಿವಿಧ ಮೂಲ ಸೌಕರ್ಯ ಒದಗಿಸಲು ಮಾಡಿದ ವೆಚ್ಚದ ವಿವರ**

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ | ೨೦೧೬-೧೭ | ೨೦೧೭-೧೮ |
|---|---|---|---|---|---|---|---|---|
| ಜನಾರೋಗ್ಯ ಮತ್ತು ನೈರ್ಮಲ್ಯ | ೧೧.೫೨ | ೧೧.೮೫ | ೩೦.೫೯ | ೪೨.೫೬ | ೫೪.೦೧ | ೪೮.೮೯ | ೪೨.೩೪ | ೯೮.೫೯ |
| ನೀರು ಸರಬರಾಜು | ೧೨೬.೫೭ | ೨೫.೦೮ | ೧೨೩.೭೦ | ೯೮.೦೩ | ೯೧.೪೧ | ೭೬.೮೯ | ೧೨೫.೧೧ | ೮೧.೮೦ |
| ಸಾರ್ವಜನಿಕ ಕಾಮಗಾರಿ | ೨೬೭.೭೨ | ೧೨೬.೨೬ | ೨೬೮.೬೯ | ೧೫೬.೦೯ | ೩೪೨.೩೨ | ೧೫೩.೬೧ | ೩೯೮.೪೫ | ೪೭೬.೮೩ |
| ರಸ್ತೆ ಮತ್ತು ದೀಪ ನಿರ್ವಹಣೆ | ೧೧.೭೩ | ೧೩.೨೭ | ೧೫.೮೯ | ೧೯.೨೭ | ೧೪.೩೪ | ೧೬.೦೩ | ೯.೭೫ | ೧೯.೨೩ |
| ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೭೦.೩೭ | ೨೫.೭೮ | ೧೪.೭೩ | ೧೪.೧೭ | ೫೩.೭೧ | ೧೪.೮೯ | ೫೫.೦೨ | ೧೪೦.೯೮ |
| ಇತರೆ | ೧೨.೯೬ | ೫೨.೫೫ | ೬೬.೨೫ | ೭೪.೩೬ | ೭೮.೫೯ | ೯೧.೫೭ | ೭೨.೦೭ | ೮೯.೯೨ |

ಆಧಾರ: ಪುರಸಭೆ, ಹೊಸದುರ್ಗ.

**ಹೊಸದುರ್ಗ ಪುರಸಭೆಯ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦–೧೧ | | ೨೦೧೧–೧೨ | | ೨೦೧೨–೧೩ | | ೨೦೧೩–೧೪ | | ೨೦೧೪–೧೫ | | ೨೦೧೫–೧೬ | | ೨೦೧೬–೧೭ | | ೨೦೧೭–೧೮ | |
|---|---|---|---|---|---|---|---|---|---|---|---|---|---|---|---|---|
| | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ |
| ತರಬೇತಿ ಕಾರ್ಯಕ್ರಮ | ೨.೮೫ | ೨.೮೫ | ೩.೬೭ | ೩.೬೭ | ೧.೧೦ | ೧.೧೦ | ೪.೨೨ | ೪.೨೨ | ೧.೩೦ | ೧.೩೦ | – | – | ೨.೬೨ | ೨.೬೨ | – | – |
| ಸಾಮಾಜಿಕ ಸೇವೆ | ೧.೫೯ | ೧.೫೯ | ೦.೮೬ | ೦.೮೬ | ೦.೮೮ | ೦.೮೮ | ೧.೫೦ | ೧.೫೦ | – | – | – | – | – | – | – | – |
| ನರಗ ಕೂಲಿ ಉದ್ಯೋಗ | ೨.೫೧ | ೨.೫೧ | ೪.೨೩ | ೪.೨೩ | ೨.೧೧ | ೨.೧೧ | – | – | – | – | – | – | – | – | – | – |
| ನಿರಂತರ ಉಳಿತಾಯ ಗುಂಪು ರಚನೆ | ೦.೯೪ | ೦.೯೪ | ೧.೬೦ | ೧.೬೦ | ೧.೦೦ | ೧.೦೦ | ೦.೯೦ | ೦.೯೦ | – | – | ೧.೫೦ | ೧.೫೦ | ೦.೫೨ | ೦.೫೨ | ೩..೨೪ | – |
| ದ್ವಾಕ್ರಾ | ೨.೪೦ | ೨.೪೦ | ೪.೫೦ | ೪.೫೦ | ೩.೦೦ | ೩.೦೦ | ೫.೫೭ | ೫.೫೭ | – | – | – | – | – | – | – | – |
| ಮೂಲಭೂತ ಸೌಕರ್ಯ | – | – | – | – | – | – | – | – | – | – | – | – | – | – | – | – |
| ಸ್ವಯಂ ಉದ್ಯೋಗ ಯೋಜನೆ | ೧.೯೦ | ೧.೯೦ | ೪.೯೪ | ೪.೯೪ | ೧೦.೩೮ | ೧೦.೩೮ | ೮.೫೪ | ೮.೫೪ | – | – | ೦.೯೩ | ೦.೯೩ | ೦.೪೬ | ೦.೪೬ | ೧.೮೧ | – |
| | | | | | | | | | | | | | | | | |

ಆಧಾರ: ಪುರಸಭೆ, ಹೊಸದುರ್ಗ. ಸೂಚನೆ: ಅ–ಅನುದಾನ, ವೆ–ವೆಚ್ಚ.

## ಅಧ್ಯಾಯ–೯

# ಶಿಕ್ಷಣ ಮತ್ತು ಕ್ರೀಡೆ

**ಆ** ನಾಡೊಳೆಸೆವುದು ನಾನಾ ವಿದ್ವಜ್ಜನ ಸ್ಥಾನಂ ನೀರ್ಗುಂದ ಮೆನಿಪಗ್ರಹಾರ ಮತ್ಯಾನಂದಕಾರಿ ಜಗಕ್ಕೆಲ್ಲಂ' ಎಂದು ಪ್ರಾಚೀನ ಕಾಲದಲ್ಲಿದ್ದ ನೀರಗುಂದ ಅಗ್ರಹಾರವನ್ನು ಕ್ರಿ.ಶ. ೧೧೫೮ರ ಶಿಕಾರಿಪುರ ಶಾಸನದಲ್ಲಿ ಹೊಗಳಲಾಗಿದೆ. ವೇದಾಂತ ಪಾರಂಗತ ಬ್ರಾಹ್ಮಣರು ಅಲ್ಲಿದ್ದ ಬಗ್ಗೆ ಹಾಗೂ ಅವರ ಹೆಸರುಗಳು ಮತ್ತು ಗೋತ್ರಗಳ ಬಗ್ಗೆ ಮಳಲಿ ತಾಮ್ರ ಶಾಸನದಲ್ಲಿ ಹೇಳಲಾಗಿದೆ. ಬೂದಿಹಾಳು ಪಾಳೆಯಗಾರರ ವ್ಯಾಪ್ತಿಯಲ್ಲಿಯೂ ಕೃಷ್ಣರಾಯ ಸಮುದ್ರ ಅಗ್ರಹಾರವಿದ್ದ ಬಗ್ಗೆ ತಾಮ್ರ ಶಾಸನವೊಂದರಲ್ಲಿ ಹೇಳಲಾಗಿದೆ. ಬಾಗೂರು ಸೀಮೆಗೆ ಸೇರಿದ್ದ 'ಗುಂಟನೂರು ಮಾಗಣೆಯ ಅಗ್ರಹಾರ' ಹಾಗೂ ಮತ್ತೋಡು ಪಾಳೆಯಗಾರರ ಕಾಲದಲ್ಲಿದ್ದ 'ಗಂಜೀಗೆರೆ ಅಗ್ರಹಾರ'ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಈ ಅಗ್ರಹಾರಗಳು 'ವಿಶ್ವವಿದ್ಯಾಲಯಗಳಾಗಿ ಆಗಿನ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು (ನಾನಾ ವಿಷಯಗಳಲ್ಲಿ) ಕಲಿಸುತ್ತಿದ್ದವು. 'ಗದ್ಯ' ಮತ್ತು 'ಪದ್ಯ'ದಲ್ಲಿ ನಕ್ಷತ್ರಶಾಸ್ತ್ರ, ಧರ್ಮಶಾಸ್ತ್ರ, ಶಾಸನ, ಗಣಿತಶಾಸ್ತ್ರ ಮುಂತಾದವುಗಳನ್ನು ಬೇರೆ ಬೇರೆ ವಿದ್ವಾಂಸರು ಬೋಧಿಸುತ್ತಿದ್ದರು. ಸಂಸ್ಕೃತ ಮತ್ತು ಕನ್ನಡ ಮಾಧ್ಯಮಗಳಿದ್ದವು. ಕಾಲ ಕ್ರಮೇಣ ಈ ಸೀಮೆಯ ಅನೇಕ ಮಠಗಳಲ್ಲಿ, ದೇವಸ್ಥಾನಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದುದನ್ನು ಕೆಲವು ಲೋಕಾರೂಢಿಯ ಮಾತು ಮತ್ತು ಶಬ್ದಗಳಲ್ಲಿರುವ ಪುರಾವೆಯಿಂದ ತಿಳಿಯಬಹುದು. ಉದಾಹರಣೆಗೆ, ಐವತ್ತು ವರ್ಷಗಳ ಹಿಂದೆ ಜನರು ಶಾಲೆಗಳನ್ನು ಮಠಗಳೆಂದು ಕರೆಯುತ್ತಿದ್ದರು. ಸರ್ಕಾರಿ ಶಾಲೆಗಳಲ್ಲದೆ ಖಾಸಗಿಯಾಗಿ ಕಲಿಸುತ್ತಿದ್ದ ಶಾಲೆಗೆ **'ಕೂಲಿಮಠ'** ಎಂದು ಕರೆಯುತ್ತಿದ್ದರು. ಉದಾಹರಣೆಗೆ ಮಗನನ್ನು ಶಾಲೆಗೆ ಸೇರಿಸಿದರೆ ನಮ್ಮ ಮಗನನ್ನು ಮಠಕ್ಕೆ ಸೇರಿಸಿದ್ದೇವೆ ಎಂದು ಹೇಳುವುದು ಚಾಲ್ತಿಯಲ್ಲಿತ್ತು. ಈಗಲೂ ಅನೇಕ ಮಠಗಳು ಶಿಕ್ಷಣ ಕೇಂದ್ರಗಳನ್ನು ನಡೆಸುತ್ತಿರುವುದನ್ನು ಕಾಣಬಹುದು.

ಹೀಗೆ, ಪ್ರಾಚೀನ ಕಾಲದಿಂದಲೂ ಈ ಸೀಮೆಯಲ್ಲಿ ಶಿಕ್ಷಣಕ್ಕೆ ಪ್ರಾಶಸ್ತ್ಯವಿದ್ದುದನ್ನು ಅರಿಯ ಬಹುದು. ಹಿಂದೆ, ವಿದ್ಯೆ ಕಲಿಸುವ ಗುರುಗಳಿಗೆ ದವಸಧಾನ್ಯಗಳ ರೂಪದಲ್ಲಿ ಕಾಣಿಕೆ (ಶುಲ್ಕ) ಸಲ್ಲಿಸಲಾಗುತ್ತಿದ್ದಿತು. ವರ್ಷಕ್ಕಿಷ್ಟು ದವಸ ಎಂದು ಆಯ (ನಿಗಧಿ) ಕೊಡಲಾಗುತ್ತಿತ್ತು. ಗುರುವಿನ ಪಾದಸೇವಕರಾಗಿ ಶಿಷ್ಯರು (ವಿದ್ಯಾರ್ಥಿಗಳು) ಇರುತ್ತಿದ್ದರು. ಧರ್ಮಛತ್ರಗಳಲ್ಲಿಯೂ, ಊರಿನ ಚಾವಡಿಗಳಲ್ಲಿಯೂ ಪಾಠಶಾಲೆಗಳು ನಡೆಯುತ್ತಿದ್ದವೆನ್ನಲಾಗಿದೆ. ನೀತಿ ಪಾಠಗಳನ್ನು, ಪುಣ್ಯಕಥೆಗಳನ್ನು ರಾಮಾಯಣ, ಮಹಾಭಾರತಗಳನ್ನು, ಶ್ಲೋಕ ಇತ್ಯಾದಿ ಹೆಚ್ಚಾಗಿ ಹೇಳಿಕೊಡಲಾಗುತ್ತಿದ್ದಿತೆಂದು ತಿಳಿದುಬರುತ್ತದೆ. ರಾಜರು ಮತ್ತು ಪಾಳೆಯಗಾರರ ಕಾಲದಲ್ಲಿ ಅಗ್ರಹಾರಗಳಲ್ಲದೆ ಗರಡಿ ಮನೆಗಳು/ದೈಹಿಕ ಶಿಕ್ಷಣ ಇರುತ್ತಿದ್ದವು.

ಆಂಗ್ಲರ ಕಾಲದಲ್ಲಿ ಸಂಸ್ಕೃತ ಕಲಿಕೆಗೆ ಹಿನ್ನಡೆಯಾಯಿತಲ್ಲದೆ, ಕನ್ನಡವೂ ಗೌಣವಾಗ ತೊಡಗಿ ಇಂಗ್ಲಿಷ್ ಶಾಲೆಗಳು ನಾಡಿನೆಲ್ಲೆಡೆ (ಅಲ್ಲಲ್ಲಿ) ತೆರೆಯಲ್ಪಟ್ಟವು. ಕ್ರಿಶ್ಚಿಯನ್ ವಿದ್ಯಾಸಂಸ್ಥೆಗಳು ಬೇರೆ ಬೇರೆ ವಿಷಯಗಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಬೋಧಿಸತೊಡಗಿದವು. ಕ್ರೈಸ್ತರು ಮತ ಪ್ರಚಾರದೊಂದಿಗೆ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಾಗಿ ಸ್ಥಾಪಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಮಠಗಳು ಸಹ ಮಂಕಾದವು. ಶಿಕ್ಷಣವನ್ನು ಇಂಗ್ಲಿಷ್‌ನಲ್ಲಿ ಕಲಿಯುವುದು ಅನಿವಾರ್ಯವೆಂಬ ಪರಿಸ್ಥಿತಿ ಇದ್ದಿತು. ೧೮೫೪ರಲ್ಲಿ ವುಡ್ಸ್‌ನ ವರದಿಯ ನಂತರ ಭಾರತದಲ್ಲಾದ ಹೊಸ ಶಿಕ್ಷಣ ನೀತಿ ರಾಜ್ಯದ ಎಲ್ಲೆಡೆ ತನ್ನ ಪ್ರಭಾವ ಬೀರಿತು. ಮೈಸೂರು ಸಂಸ್ಥಾನದಲ್ಲಿ ೧೮೫೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾರಂಭವಾಯಿತು. ೧೮೭೮ರಲ್ಲಿ ಬೆಂಗಳೂರಿನಲ್ಲಿ ಪಠ್ಯ ಪುಸ್ತಕಗಳ ಮುದ್ರಣಾಲಯ ಪ್ರಾರಂಭವಾಯಿತು. ಶಿಕ್ಷಕರ ತರಬೇತಿಗಾಗಿ, ನಾರ್ಮಲ್ ಶಾಲೆಗಳು ಪ್ರಾರಂಭಗೊಂಡವು. ೧೮೬೪ರಲ್ಲಿ ಒಂಬತ್ತು ರೂಪಾಯಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದ ಸರ್ಕಾರಿ ನೌಕರರು ಮಾತ್ರ ಭಾಷೆ ಓದಲು ಬರೆಯಲು ಬಲ್ಲವರಾಗಿರ ಬೇಕೆಂದು ಕಾನೂನು ಜಾರಿಗೊಳಿಸಿತು. ಬಿ.ಎಲ್. ರೈಸ್‌ರವರು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಪ್ರತಿ ಹೋಬಳಿಗೆ ಒಂದು ಪ್ರಾಥಮಿಕ ಶಾಲೆ ಇರಬೇಕೆಂದು ನಿರ್ಧರಿಸಿ ಶಾಲೆಗಳನ್ನು ಸ್ಥಾಪಿಸಿದರು. ೧೮೭೪ರಲ್ಲಿ ಬಿ.ಎಲ್. ರೈಸ್‌ರವರು ಶಿಕ್ಷಣ ಇಲಾಖೆಯ ಅತ್ಯುನ್ನತ ಹುದ್ದೆಯಾದ ವಿದ್ಯಾಖಾತೆಯ ಕಾರ್ಯದರ್ಶಿಯ ಹುದ್ದೆಗೆ ಬಡ್ತಿ ಪಡೆದು, ಶಾಲೆಗಳ ಸ್ಥಾಪನೆಗೆ ಆದ್ಯ ಗಮನ ಹರಿಸಿ, ಅನೇಕ ಸುಧಾರಣೆಗಳನ್ನು ಮಾಡಿದರು. ೧೮೮೨ರಲ್ಲಿ ಬಿ.ಎಲ್.ರೈಸ್ ಅವರು ಇಡೀ ದೇಶದ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಬ್ರಿಟಿಷ್ ಕೇಂದ್ರ ಸರ್ಕಾರಕ್ಕೆ ಆಯೋಗದ ಕಾರ್ಯದರ್ಶಿಯಾಗಿ ವರದಿಯೊಂದನ್ನು ಸಲ್ಲಿಸಿದರು. ಅವರು ಅತ್ಯುತ್ತಮ ಶಿಕ್ಷಣ ತಜ್ಞರೆಂದು ಪ್ರಸಿದ್ಧಿಗೊಂಡಿದ್ದರು. ಇಪ್ಪತ್ತು ರೂಪಾಯಿ ಮಾಸಿಕ ವೇತನ ಪಡೆಯುವ

ಸರ್ಕಾರಿ ಹುದ್ದೆಗಳಿಗೆ ಇಂಗ್ಲೀಷನ್ನೊಳಗೊಂಡ ಸಾಮಾನ್ಯ ಶಿಕ್ಷಣ ಪರೀಕ್ಷೆ ಕಡ್ಡಾಯವಾದುದರಿಂದ ಇಂಗ್ಲೀಷ್ ಶಿಕ್ಷಣದ ಮಹತ್ವ ಅಧಿಕವಾಯಿತು. ಇದು ಗ್ರಾಮೀಣ ಪ್ರದೇಶದಲ್ಲಿ ಪರಿಣಾಮ ಮೂಡಿಸಲಿಲ್ಲ.

**ಸಾಕ್ಷರತೆ**: ಬಾಲ್ಯವಿವಾಹ, ಸತೀಪದ್ಧತಿ, ಗುಲಾಮಗಿರಿ ಮುಂತಾದ ಪದ್ಧತಿಗಳಿಂದಾಗಿ ಶಿಕ್ಷಣಕ್ಕೆ ಜನರು ಹೆಚ್ಚು ಗಮನ ಹರಿಸುತ್ತಿರಲಿಲ್ಲ. ಇದರೊಂದಿಗೆ ಭೀಕರ ಬರಗಾಲವೂ ಆಗಾಗ್ಗೆ ತಲೆದೋರುತ್ತಿದ್ದುದರಿಂದ, ದುಡಿಮೆಗಾಗಿ ಮಲೆನಾಡು ಪ್ರದೇಶಗಳಿಗೆ ಗುಳೇ ಹೋಗುತ್ತಿದ್ದುದರಿಂದ, ಶಿಕ್ಷಣಕ್ಕೆ ಗಮನ ನೀಡಲು ಸಾಧ್ಯವಾಗುತ್ತಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಬಹಳ ಜನರು ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ವಿವಿಧ ರೀತಿಯ ಆಂದೋಲನಗಳಲ್ಲಿ ಹೋರಾಡುವತ್ತ ಆದ್ಯ ಗಮನ ನೀಡಿ ತಮ್ಮ ಮಕ್ಕಳನ್ನು (ಇಂಗ್ಲೀಷ್) ಶಾಲೆಗಳಿಗೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ಸಾಕ್ಷರತಾ ಪ್ರಮಾಣ ತುಂಬ ಕಡಿಮೆ ಇದ್ದಿರಬೇಕು. ಹೊಸದುರ್ಗದ ಮಾಧ್ಯಮಿಕ ಶಾಲೆ, ಬಾಗೂರಿನ ಮಾಧ್ಯಮಿಕ ಶಾಲೆ ಹಾಗೂ ಮತ್ತೋಡು ಪ್ರಾಥಮಿಕ ಶಾಲೆ ಇವು ತಾಲ್ಲೂಕಿನ ಅತ್ಯಂತ ಹಳೆಯ ಶಾಲೆಗಳಾಗಿವೆ.

ತಾಲ್ಲೂಕಿನ ಕಳೆದ ದಶಕಗಳ ಸಾಕ್ಷರತಾ ಪ್ರಮಾಣ ಈ ರೀತಿ ಇದೆ. ೧೯೯೧ರ ಜನಗಣತಿಯ ಮೇರೆಗೆ ತಾಲ್ಲೂಕಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೫೨.೨೦ (ಪುರುಷರು ೬೪.೭೨ ಮತ್ತು ಮಹಿಳೆಯರು ೩೯.೩೭) ಇದ್ದಿತು. ೨೦೦೧ರಲ್ಲಿ ಸಾಕ್ಷರತೆ ಶೇ. ೬೫.೦ (ಪುರುಷರು ೭೫.೧ ಮತ್ತು ಮಹಿಳೆಯರು ೫೪.೭) ಇದ್ದಿತು ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಸಾಕ್ಷರತಾ ಪ್ರಮಾಣವು ಶೇಕಡಾ ೬೩.೨೦ (ಪುರುಷರು ೭೩.೯೦ ಮತ್ತು ಮಹಿಳೆಯರು ೫೨.೨೦) ಹಾಗೂ ಪಟ್ಟಣ ಪ್ರದೇಶದಲ್ಲಿನ ಸಾಕ್ಷರತಾ ಪ್ರಮಾಣವು ಶೇಕಡಾ ೮೧.೨೦ (ಪುರುಷರು ೮೫.೫೦ ಮತ್ತು ಮಹಿಳೆಯರು ೭೬.೭೦) ಇದ್ದಿತು. ೨೦೧೧ರಲ್ಲಿ ಸಾಕ್ಷರತೆ ಶೇ.೭೩.೭೮ (ಪುರುಷರು ೮೧.೨೮ ಮತ್ತು ಮಹಿಳೆಯರು ೬೬.೧೧) ಇದ್ದಿತು ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಸಾಕ್ಷರತಾ ಪ್ರಮಾಣವು ಶೇ.೭೧.೮೧ (ಪುರುಷರು ೭೯.೮೬ ಮತ್ತು ಮಹಿಳೆಯರು ೬೩.೫೮) ಹಾಗೂ ಪಟ್ಟಣ ಪ್ರದೇಶದಲ್ಲಿನ ಸಾಕ್ಷರತಾ ಪ್ರಮಾಣವು ಶೇ.೮೮.೧೪ (ಪುರುಷರು ೯೧.೪೭ ಮತ್ತು ಮಹಿಳೆಯರು ೮೪.೦೫) ರಷ್ಟಿದ್ದಿತು.

**ಉನ್ನತ ಸಾಧನೆ**: ಹೊಸದುರ್ಗ ತಾಲ್ಲೂಕಿನಲ್ಲಿ ಅನೇಕರು ಐ.ಎ.ಎಸ್, ಐ.ಪಿ.ಎಸ್ ಶ್ರೇಣಿಯಲ್ಲಿ ಆಯ್ಕೆಗೊಂಡು ಸೇವೆಯಲ್ಲಿರುತ್ತಾರೆ. ಕೆ.ಎ.ಎಸ್ ಶ್ರೇಣಿಯಿಂದ ಅಧಿಕಾರಿಗಳಾಗಿ ಅನೇಕರು ಸೇವೆ ಸಲ್ಲಿಸಿದ್ದಾರೆ. ಒಬ್ಬರು ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

## ಪ್ರಾಥಮಿಕ ಶಿಕ್ಷಣ

೧೯೭೯-೮೦ ರಲ್ಲಿ ತಾಲ್ಲೂಕಿನಲ್ಲಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೫೭ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೬೪, ಜೂನಿಯರ್ ಕಾಲೇಜ್ ಸಂಖ್ಯೆ ಒಂದು ಹಾಗೂ ಪ್ರೌಢಶಾಲೆ ಸಂಖ್ಯೆ ೧೫ ಇದ್ದವು. ಅಲ್ಲದೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿದ್ದ ಮಕ್ಕಳ ಸಂಖ್ಯೆ ೧೧,೬೫೬, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿದ್ದ ಮಕ್ಕಳ ಸಂಖ್ಯೆ ೧೮,೯೮೬ ಇದ್ದು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಉಪಾಧ್ಯಾಯರುಗಳ ಸಂಖ್ಯೆ ೨೬೨ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರುಗಳ ಸಂಖ್ಯೆ ೨೬೨ ಇದ್ದಿತು. ೧೯೯೭ರಲ್ಲಿ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ೨೯೧ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೩೮,೩೮೧, ಪ್ರೌಢಶಾಲೆಗಳ ಸಂಖ್ಯೆ ೫೨ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೮,೫೧೭ ಇರುತ್ತದೆ. ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ೧೨ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೧,೯೩೨ ಅಲ್ಲದೆ ಕಾಲೇಜುಗಳ ಸಂಖ್ಯೆ ೪ ಇದ್ದು, ವಿದ್ಯಾರ್ಥಿಗಳ ಸಂಖ್ಯೆ ೯೧೪ ಇದೆ. ಪಾಲಿಟೆಕ್ನಿಕ್ ಕಾಲೇಜ್ ೧ ಇದ್ದು ವಿದ್ಯಾರ್ಥಿಗಳು ೬೫ ಜನ ಇದ್ದರು. ೧೯೯೯ರಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೩೦೮ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೩೬,೪೫೭, ಪ್ರೌಢಶಾಲೆಗಳ ಸಂಖ್ಯೆ ೧೯ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೧೦,೩೫೩, ಪದವಿ ಪೂರ್ವ ಕಾಲೇಜುಗಳು ೧೯ ಇದ್ದು, ವಿದ್ಯಾರ್ಥಿಗಳು ೩,೨೩೦, ಕಾಲೇಜು ಒಂದು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೬೫೨, ಅಲ್ಲದೆ ಪಾಲಿಟೆಕ್ನಿಕ್ ಒಂದು ಇರುತ್ತದೆ. ೨೦೧೦-೧೧ನೇ ವರ್ಷದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು ಒಟ್ಟು ೧೭೪ ಇದ್ದು, ವಿದ್ಯಾರ್ಥಿಗಳ ದಾಖಲಾತಿ ಒಟ್ಟು ಸಂಖ್ಯೆ ೧೯,೨೧೨ ಹಾಗೂ ಹಾಜರಾತಿ ಒಟ್ಟು ಸಂ. ೧೮,೬೩೧ ಇರುತ್ತದೆ.

ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೬೪ ಇದ್ದು, ವಿದ್ಯಾರ್ಥಿಗಳ ದಾಖಲಾತಿ ಒಟ್ಟು ಸಂಖ್ಯೆ ೮,೦೫೬ ಹಾಗೂ ಹಾಜರಾತಿ ಸಂಖ್ಯೆ ೭,೪೭೧ ಇರುತ್ತದೆ. ಪ್ರೌಢಶಾಲೆಗಳ ಸಂಖ್ಯೆ ೬೯ ಇದ್ದು, ವಿದ್ಯಾರ್ಥಿಗಳ ಒಟ್ಟು ದಾಖಲಾತಿ ೯,೫೫೮ ಹಾಗೂ ಹಾಜರಾತಿ ಒಟ್ಟು ೯,೯೭೭ ಇರುತ್ತದೆ. ಇದೇ ವರ್ಷದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ (ಪುರುಷರು ೭೬೫ ಹಾಗೂ ಮಹಿಳೆ ೫೦೩) ಒಟ್ಟು ೧,೨೬೮ ಇರುತ್ತದೆ. ೬ ರಿಂದ ೧೪ನೇ ವಯಸ್ಸಿನ ಮಕ್ಕಳ ಸಂಖ್ಯೆ (ಪುರುಷರು ೧೪,೭೦೬ ಮತ್ತು ಮಹಿಳೆಯರು ೧೪,೨೬೨) ಒಟ್ಟು ೨೮,೯೬೮, ಶಾಲೆಯಿಂದ ಹೊರಗುಳಿದ ೬ ರಿಂದ ೧೪ನೇ ವಯಸ್ಸಿನ ಮಕ್ಕಳ ಸಂಖ್ಯೆ (ಪುರುಷರು ೧೦ ಮತ್ತು ಮಹಿಳೆಯರು ೧೫) ಒಟ್ಟು ೨೫. ಕಾಲೇಜುಗಳ ಒಟ್ಟು ಸಂಖ್ಯೆ ೨೧ ಇದ್ದು (೨೦೦೯-೧೦ನೇ ವರ್ಷ) ಉಪನ್ಯಾಸಕರ ಸಂಖ್ಯೆ ಪುರುಷ ೧೧೮ ಮತ್ತು ಮಹಿಳೆ ೧೨) ಒಟ್ಟು ೧೩೦ ಆಗಿದೆ.

ಸರ್ಕಾರಿ ಪದವಿ ಕಾಲೇಜು ೧೯೮೨ ರಲ್ಲಿ ಆರಂಭವಾಗಿದ್ದು, ಕಲಾ, ವಾಣಿಜ್ಯ, ವಿಜ್ಞಾನ ವಿಷಯಗಳನ್ನು ಜೋಡಿಸುವ ವ್ಯವಸ್ಥೆ ಇದ್ದು, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ

(ಪುರುಷರು ೯೩೩ ಮತ್ತು ಮಹಿಳೆಯರು ೪೧೧) ಒಟ್ಟು ೧,೩೪೪ ಇರುತ್ತದೆ. ಖಾಸಗಿ ಪದವಿ ಕಾಲೇಜು ೧ ಇರುತ್ತದೆ ಸರ್ಕಾರಿ ಪಾಲಿಟೆಕ್ನಿಕ್ ೧ ಇದ್ದು ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಪುರುಷರು ೯೩೩ ಮತ್ತು ಮಹಿಳೆಯರು ೪೧೧) ೧೩೪೪ ಇರುತ್ತದೆ. ಖಾಸಗಿ ಪದವಿ ಕಾಲೇಜು ೧ ಇರುತ್ತದೆ. ಸರ್ಕಾರಿ ಪಾಲಿಟೆಕ್ನಿಕ್ ಒಂದು ಇದ್ದು, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಪುರುಷರು ೧೪೮ ಮತ್ತು ಮಹಿಳೆಯರು ೮೬) ಒಟ್ಟು ೨೩೪ ಇರುತ್ತದೆ. ೨೦೧೨-೧೩ರಲ್ಲಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ೩೦೦ ಇದ್ದು, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೧೯,೦೭೫ ಇರುತ್ತದೆ ಹಾಗೂ ಶಿಕ್ಷಕರ ಒಟ್ಟು ಸಂಖ್ಯೆ ೧,೧೩೬ ಇರುತ್ತದೆ. ಖಾಸಗಿ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ೩೨ ಇದ್ದು, ಅವುಗಳಲ್ಲಿ ಮಕ್ಕಳ ಸಂಖ್ಯೆ ೪,೭೩೩ ಇರುತ್ತದೆ. ಸರ್ಕಾರಿ ಪ್ರೌಢಶಾಲೆಗಳು ಒಟ್ಟು ೧೨ ಇದ್ದು, ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೨,೬೦೩ ಇರುತ್ತದೆ. ಖಾಸಗಿ (ಅನುದಾನಿತ) ಪ್ರೌಢಶಾಲೆಗಳ ಒಟ್ಟು ೪೩ ಇದ್ದು, ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೧,೨೪೪ ಇರುತ್ತದೆ. ಖಾಸಗಿ ಅನುದಾನರಹಿತ ಪ್ರೌಢಶಾಲೆಗಳು ಒಟ್ಟು ೧೪ ಇದ್ದು, ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು ೧,೧೫೬ ಆಗಿರುತ್ತದೆ.

ಅಲ್ಲದೆ, ೨೦೧೨-೧೩ರಲ್ಲಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಾಥಮಿಕ ಶಾಲೆಗಳು ಒಟ್ಟು ೨ ಇದ್ದು, ಅವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ೨೬೨ ಆಗಿದೆ. ಮೊರಾರ್ಜಿ ವಸತಿ ಶಾಲೆಯು ತಾಲ್ಲೂಕಿನಲ್ಲಿ ೦೧ ಇದ್ದು, ಅದರಲ್ಲಿನ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೨೪೬ ಆಗಿರುತ್ತದೆ. ಅಲ್ಲದೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಸಂಖ್ಯೆ ಒಂದು ಇದ್ದು, ವಿದ್ಯಾರ್ಥಿಗಳ ಸಂಖ್ಯೆ ೧೪೨ ಆಗಿರುತ್ತದೆ. ತಾಲ್ಲೂಕಿನಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ೬, ಖಾಸಗಿ ಪದವಿ ಪೂರ್ವ ಕಾಲೇಜಿನ ಸಂಖ್ಯೆ ೦೧ ಇದ್ದು, ಪದವಿ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ೨,೫೧೧ ಆಗಿದೆ. ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ೦೧ ಇರುತ್ತದೆ. (ಹೊಸದುರ್ಗದಲ್ಲಿ). ಅಲ್ಲದೆ ಸರ್ಕಾರಿ ಡಿ.ಇಡಿ ಕಾಲೇಜುಗಳು ಒಟ್ಟು ೦೨ (ಹೊಸದುರ್ಗದಲ್ಲಿ) ಇವೆ. ಖಾಸಗಿ ಡಿ.ಇಡಿ ಕಾಲೇಜುಗಳು ತಾಲ್ಲೂಕಿನಲ್ಲಿ ಒಟ್ಟು ೦೩ (ಬೆಲಗೂರು, ಮಧುರೆ ಮತ್ತು ಸಾಣೆಹಳ್ಳಿ) ಹಾಗೂ ನರ್ಸಿಂಗ್ (ಖಾಸಗಿ) ಕಾಲೇಜ್ ಒಟ್ಟು ೦೧ (ಹೊಸದುರ್ಗದಲ್ಲಿ) ಹಾಗೂ ಖಾಸಗಿ ಬಿ.ಇಡಿ ಕಾಲೇಜುಗಳು ಒಟ್ಟು ೦೨ (ಹೊಸದುರ್ಗ) ಇವೆ.

೨೦೧೫-೧೬ನೇ ವರ್ಷದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು ಒಟ್ಟು ೧೭೮ ಇದ್ದು, ವಿದ್ಯಾರ್ಥಿಗಳು ದಾಖಲಾದ ಒಟ್ಟು ಸಂಖ್ಯೆ ೧೭,೮೭೪, ಹಿರಿಯ ಪ್ರಾಥಮಿಕ ಶಾಲೆಗಳು ಒಟ್ಟು ೧೬೫ ಇದ್ದು, ವಿದ್ಯಾರ್ಥಿಗಳ ದಾಖಲಾತಿ ಒಟ್ಟು ಸಂಖ್ಯೆ ೯,೮೨೯, ಪ್ರೌಢಶಾಲೆಗಳು ಒಟ್ಟು ೬೭ ಇದ್ದು ವಿದ್ಯಾರ್ಥಿಗಳ ದಾಖಲಾತಿ ಒಟ್ಟು ೬೩೯೭ ಇರುತ್ತದೆ. ಪ್ರಾಥಮಿಕ ಶಾಲೆಯ ಶಿಕ್ಷಕರ ಸಂಖ್ಯೆ ಒಟ್ಟು ೧,೨೮೭ (ಪುರುಷರು ೭೦೮, ಮಹಿಳೆಯರು ೫೭೯) ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಒಟ್ಟು ೫೦೮ (ಪುರುಷರು ೪೩೯, ಮಹಿಳೆಯರು

೬೯) ಇದೆ. ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ೫೦೮ ಹಾಗೂ ವಿದ್ಯಾರ್ಥಿ ಶಿಕ್ಷಕರ ಅನುಪಾತ ೨೨ ಇದ್ದು ಒಟ್ಟು ದಾಖಲಾತಿ ೬೩೯೭ ಇದೆ. ತಾಲ್ಲೂಕಿನಲ್ಲಿ ೬ ರಿಂದ ೧೪ ವಯಸ್ಸಿನ ಮಕ್ಕಳ ಸಂಖ್ಯೆ ಒಟ್ಟು ೩೫ (ಹುಡುಗರು ೧೮, ಹುಡುಗಿಯರು ೧೭) ಇದ್ದು ಶಾಲೆಯಿಂದ ಹೊರಗುಳಿದ ೭ ರಿಂದ ೧೪ ವಯಸ್ಸಿನ ಮಕ್ಕಳ ಸಂಖ್ಯೆ ಒಟ್ಟು ೧೯ (ಹುಡುಗರು ೧೨, ಹುಡುಗಿಯರು ೭) ಇವೆ. ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳು ಒಟ್ಟು ೨೯೮ ಇದ್ದು, ಮೂಲಭೂತ ಸೌಕರ್ಯಗಳಾದ, ಹುಡುಗರ ಶೌಚಾಲಯ ೨೯೮, ಆಟದ ಮೈದಾನ ೨೧೨, ರ್‍ಯಾಪ್ ೨೯೮, ಆವರಣ ಗೋಡೆ ೨೩೬, ಕುಡಿಯುವ ನೀರು ೨೯೮, ಗ್ರಂಥಾಲಯ ವ್ಯವಸ್ಥೆ ೨೯೮ ಹಾಗೂ ಗಣಕಯಂತ್ರದ ಅನುಕೂಲತೆ ೧೯ ಇರುತ್ತದೆ. ಅಲ್ಲದೆ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳ ಸಂಖ್ಯೆ ೧೨ ಇದ್ದು, ಮೂಲಭೂತ ಸೌಕರ್ಯಗಳಾದ, ಹುಡುಗರ ಶೌಚಾಲಯ ೧೨, ಹುಡುಗಿಯರ ಶೌಚಾಲಯ ೧೨, ವಿದ್ಯುಚ್ಛಕ್ತಿ ಅನುಕೂಲತೆ ೧೨, ಆಟದ ಮೈದಾನ ೯, ರ್‍ಯಾಪ್ ೧೨, ಆವರಣದ ಗೋಡೆ ೧೦, ಕುಡಿಯುವ ನೀರು ೧೨, ಗ್ರಂಥಾಲಯ ವ್ಯವಸ್ಥೆ ೧೨ ಹಾಗೂ ಗಣಕಯಂತ್ರದ ಅನುಕೂಲತೆ ೧೦ ಇರುತ್ತದೆ.

೨೦೧೫-೧೬ರ ಸಾಲಿನಲ್ಲಿ ತಾಲ್ಲೂಕಿನಲ್ಲಿ ಒಟ್ಟು ಪದವಿ ಪೂರ್ವ ಕಾಲೇಜುಗಳು ೨೪ ಇದ್ದು, ೧೨೬ ಪುರುಷ ಉಪನ್ಯಾಸಕರು, ೧೯ ಮಹಿಳಾ ಉಪನ್ಯಾಸಕರು ಇರುತ್ತಾರೆ. ಪದವಿ ಪೂರ್ವ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಸರ್ಕಾರಿ ಕಾಲೇಜುಗಳಲ್ಲಿ ಒಟ್ಟು ೧೭೮೮ (ಪುರುಷರು ೭೯೦, ಮಹಿಳೆಯರು ೯೯೮) ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪುರುಷರು ೮೮೫, ಮಹಿಳೆಯರು ೯೭೩ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ ಪುರುಷರು ೧೬೭, ಮಹಿಳೆಯರು ೧೪೩, ಒಟ್ಟು ಪುರುಷರು ೧೮೪೨, ಮಹಿಳೆಯರು ೨೧೧೪ ಇರುತ್ತಾರೆ. ತಾಲ್ಲೂಕಿನಲ್ಲಿ ಸಾಮಾನ್ಯ ಪದವಿ ಕಾಲೇಜುಗಳ ಸಂಖ್ಯೆ ಒಟ್ಟು ಒಂದು ಇದ್ದು, ಮೊದಲ ವರ್ಷದಿಂದ ಅಂತಿಮ ವರ್ಷದವರಿಗೂ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು ೧೯೬೬ (ಹುಡುಗರು ೧೦೭೬, ಹುಡುಗಿಯರು ೮೯೦) ಇರುತ್ತಾರೆ ಹಾಗೂ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಪಾಲಿಟೆಕ್ನಿಕ್ ಇದ್ದು ಮೊದಲ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು ೨೩೧ (ಹುಡುಗರು ೧೭೬, ಹುಡುಗಿಯರು ೫೫) ಇರುತ್ತಾರೆ. ತಾಲ್ಲೂಕಿನಲ್ಲಿ ಎಂಜಿನಿಯರಿಂಗ್ ಕಾಲೇಜು ಅಥವಾ ಮೆಡಿಕಲ್ ಕಾಲೇಜು ಇರುವುದಿಲ್ಲ. ಇಡೀ ತಾಲ್ಲೂಕಿನ ಸಾಮಾನ್ಯ ಪದವಿ ಕಾಲೇಜು ಒಂದೇ ಇದ್ದು, ಹೆಚ್ಚಿನ ತರಗತಿ ಕೊಠಡಿಗಳು ಹಾಗೂ ಹೆಚ್ಚಿನ ಉಪನ್ಯಾಸಕರುಗಳ ಅಗತ್ಯವಿದೆ. ಅನಿವಾಳದ ಸರ್ಕಾರಿ ಜೂನಿಯರ್ ಕಾಲೇಜಿಗೆ ಹೆಚ್ಚುವರಿ ಎರಡು ಕೊಠಡಿಗಳನ್ನು ಮತ್ತು ದೊಡ್ಡತೇಕಲವಟ್ಟಿ ಜೂನಿಯರ್ ಕಾಲೇಜಿಗೆ ಹೆಚ್ಚುವರಿ ಎರಡು ಕೊಠಡಿಗಳನ್ನು ಒಟ್ಟು ರೂ. ೩೦.೬೦ ಲಕ್ಷ ವೆಚ್ಚದಿಂದ ನಿರ್ಮಿಸಲಾಗಿದೆ.

ಶಿಕ್ಷಣ ಮತ್ತು ಕ್ರೀಡೆ

**ಹೊಸದುರ್ಗ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜಯಡಿ ಅಂಗನವಾಡಿ ಕೇಂದ್ರ, ಅಂಗನವಾಡಿ ಶಿಕ್ಷಕಿಯರ, ಅಂಗನವಾಡಿ ಕಟ್ಟಡಗಳು ಹಾಗೂ ಸ್ತ್ರೀಶಕ್ತಿ ಸಂಘಗಳ ಮಾಹಿತಿ ವಿವರ.**

| ಕ್ರ.ಸಂ. | ವಿವರ | ಸಂಖ್ಯೆ |
|---|---|---|
| | **ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ** | ೩೫೭ |
| ೧ | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ | ೩೫೪ |
| | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಸಹಾಯಕಿಯರ/ಶಿಕ್ಷಕಿಯರ ಸಂಖ್ಯೆ | ೩೧೧ |
| **ಅಂಗನವಾಡಿ ಕೇಂದ್ರಗಳು ನಡೆಯುತ್ತಿರುವ ಸ್ಥಳಗಳ ವಿವರ** | | |
| ೨ | ಸ್ವಂತ ಅಂಗನವಾಡಿ ಕಟ್ಟಡಗಳ ಸಂಖ್ಯೆ | ೨೭೫ |
| | ಶಾಲಾ ಕಟ್ಟಡ | ೧೭ |
| | ಇತರೆ | ೬೫ |
| | **ಒಟ್ಟು** | ೩೫೭ |
| ೩ | ಸ್ತ್ರೀ ಶಕ್ತಿ ಸಂಘಗಳ ವಿವರ | ೧,೦೪೨ |

**ಶಿಕ್ಷಣ**

| **ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ** | |
|---|---|
| **೧) ಕಿರಿಯ ಪ್ರಾಥಮಿಕ ಶಾಖೆಗಳು** | |
| ಅ) ಶಾಲೆಗಳ ಸಂಖ್ಯೆ | ೧೭೮ |
| ಎ) ಒಟ್ಟು ದಾಖಲಾತಿ | |
| ಬಿ) ಹುಡುಗರು | ೯,೧೪೪ |
| ಸಿ) ಹುಡುಗಿಯರು | ೮,೭೩೦ |
| ಡಿ) ಒಟ್ಟು | ೧೭,೮೭೪ |
| **೨) ಹಿರಿಯ ಪ್ರಾಥಮಿಕ ಶಾಲೆಗಳು** | |
| ಅ) ಶಾಲೆಗಳ ಸಂಖ್ಯೆ | ೧೬೫ |
| ಎ) ಒಟ್ಟು ದಾಖಲಾತಿ | |
| ಬಿ) ಹುಡುಗರು | ೪,೯೯೨ |

| | |
|---|---|
| ಸಿ) ಹುಡುಗಿಯರು | ೪,೮೩೭ |
| ಡಿ) ಒಟ್ಟು | ೯,೮೨೯ |
| **೩) ಪ್ರೌಢ ಶಾಲೆಗಳು** | |
| ಅ) ಶಾಲೆಗಳ ಸಂಖ್ಯೆ | ೬೭ |
| ಎ) ಒಟ್ಟು ದಾಖಲಾತಿ | |
| ಬಿ) ಹುಡುಗರು | ೩,೨೩೮ |
| ಸಿ) ಹುಡುಗಿಯರು | ೩,೧೫೯ |
| ಡಿ) ಒಟ್ಟು | ೬,೩೯೭ |
| **೪) ಪ್ರಾಥಮಿಕ ಶಾಲೆ ಶಿಕ್ಷಕರ ಸಂಖ್ಯೆ** | |
| ಎ) ಪುರುಷರು | ೭೦೮ |
| ಬಿ) ಮಹಿಳೆಯರು | ೫೭೯ |
| ಸಿ) ಒಟ್ಟು | ೧,೨೮೭ |
| **೫) ವಿದ್ಯಾರ್ಥಿ ಶಿಕ್ಷಕರ ಅನುಪಾತ** | ೨೨ |
| **೬) ಒಟ್ಟು ದಾಖಲಾತಿ (ಸಂಖ್ಯೆಗಳಲ್ಲಿ)** | **೨೭,೭೦೩** |
| **೭) ಪ್ರೌಢಶಾಲೆ ಶಿಕ್ಷಕರ ಸಂಖ್ಯೆ** | |
| ಅ) ಪುರುಷರು | ೪೩೯ |
| ಬ) ಮಹಿಳೆಯರು | ೬೯ |
| ಸಿ) ಒಟ್ಟು | ೫೦೮ |
| **೮)ವಿದ್ಯಾರ್ಥಿ ಶಿಕ್ಷಕರ ಅನುಪಾತ** | **೧೩** |
| | |
| **ಪದವಿ ಪೂರ್ವ ಕಾಲೇಜುಗಳು** | |
| ೧) ಕಾಲೇಜುಗಳ ಸಂಖ್ಯೆ | ೨೪ |
| ೨) ಉಪನ್ಯಾಸಕರ ಸಂಖ್ಯೆ | |
| ಎ) ಪುರುಷರು | ೧೨೬ |
| ಬಿ) ಮಹಿಳೆಯರು | ೧೯ |
| ೩) ಪದವಿ ಪೂರ್ವ (ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ (೧ನೇ ಮತ್ತು ೨ನೇ ವರ್ಷ) | |
| ಎ) ಸರ್ಕಾರಿ | |

| | |
|---|---|
| ಅ) ಹುಡುಗರು | ೭೯೦ |
| ಆ) ಹುಡುಗಿಯರು | ೯೯೮ |
| ಬಿ) ಖಾಸಗಿ–(ಅನುದಾನಿತ) | |
| ಅ) ಹುಡುಗರು | ೮೮೫ |
| ಆ) ಹುಡುಗಿಯರು | ೯೭೩ |
| ಸಿ) ಖಾಸಗಿ–(ಅನುದಾನರಹಿತ) | |
| ಅ) ಹುಡುಗರು | ೧೬೭ |
| ಆ) ಹುಡುಗಿಯರು | ೧೪೩ |
| ೪) ಒಟ್ಟು | |
| ೫) ಸಾಮಾನ್ಯ ಪದವಿ ಕಾಲೇಜುಗಳು –ಸರ್ಕಾರಿ ಕಾಲೇಜುಗಳ ಸಂಖ್ಯೆ | ೧ |
| ಮೊದಲ ವರ್ಷದಿಂದ ಅಂತಿಮ ವರ್ಷದವರೆಗೆ | |
| ಅ) ಹುಡುಗರು | ೧,೦೭೬ |
| ಆ) ಹುಡುಗಿಯರು | ೮೯೦ |
| ಇ) ಒಟ್ಟು | ೧,೯೬೬ |
| ೬) ಸಾಮಾನ್ಯ ಪದವಿ ಕಾಲೇಜುಗಳು–ಖಾಸಗಿ | – |
| ಅ) ಕಾಲೇಜುಗಳ ಸಂಖ್ಯೆ | – |
| ಆ) ಮೊದಲ ವರ್ಷದಿಂದ ಅಂತಿಮ ವರ್ಷದ ವರೆಗೆ (ಅನುದಾನಿತ+ಅನುದಾನರಹಿತ) | – |
| ಎ) ಹುಡುಗರು | – |
| ಬಿ) ಹುಡುಗಿಯರು | – |
| ಸಿ) ಒಟ್ಟು | – |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೫–೧೬**

## ಸಾರ್ವಜನಿಕ ಶಿಕ್ಷಣ ಇಲಾಖೆಯ ಯೋಜನೆಗಳು

ಎಲ್ಲಾ ಮಕ್ಕಳಿಗೂ ಗುಣಾತ್ಮಕವಾದ ಶಿಕ್ಷಣ ದೊರಕಿಸಿಕೊಡುವ ಉದ್ದೇಶದಿಂದ ಸರ್ಕಾರವು ವಿದ್ಯಾರ್ಥಿ ಸಮುದಾಯಕ್ಕೆ ಪ್ರೋತ್ಸಾಹದಾಯಕವಾದ ಹತ್ತು ಹಲವು ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಅನುಷ್ಠಾನಕ್ಕೆ ತಂದಿರುತ್ತದೆ. (೧) ೧ ರಿಂದ ೧೦ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳ ವಿತರಣೆ, (೨)

ಮೇಲ್ಕಂಡ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ೨ ಜೊತೆ ಸಮವಸ್ತ್ರ ವಿತರಣೆ, (೩) ಕಂಪ್ಯೂಟರ್ ಶಿಕ್ಷಣ, (೪) ಮಧ್ಯಾಹ್ನದ ಬಿಸಿಯೂಟ ಯೋಜನೆ, (೫) ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ, (೬) ಪೌಷ್ಠಿಕಾಂಶ ಮಾತ್ರೆಗಳ ವಿತರಣೆ, (೭) ವಿವಿಧ ರೀತಿಯ ವಿದ್ಯಾರ್ಥಿ ವೇತನಗಳು, (೮) ಗರಿಷ್ಠ ಅಂಕಗಳಿಸಿದ (ಆಯ್ದ) ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, (೯) ಬಾಲವಿಜ್ಞಾನ ಪುರಸ್ಕಾರ, (೧೦) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ, (೧೧) ಪ್ರತಿಭಾ ಕಾರಂಜಿ ಸ್ಪರ್ಧೆಗಳು, (೧೨) ಕ್ರೀಡಾ ಕೂಟಗಳು, (೧೩) ಮೆಟ್ರಿಕ್ ಮೇಳ, (೧೪) ವಿಜ್ಞಾನ ವಸ್ತುಪ್ರದರ್ಶನ, (೧೫) ಕರ್ನಾಟಕ ದರ್ಶನ ಚಿಣ್ಣರ ಜಿಲ್ಲಾದರ್ಶನ ಪ್ರವಾಸ, (೧೬) ಸಮುದಾಯದತ್ತ ಶಾಲೆ, (೧೭)ದತ್ತು ಯೋಜನೆ, (೧೮) ಶಾಲೆಗಾಗಿ ನಾವು–ನೀವು ಕಾರ್ಯಕ್ರಮಗಳನ್ನು ನಡೆಸಲಾಗುವುದು ಹಾಗೂ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹೊಸದುರ್ಗ ಮಾರುಗೊಂಡನದಿಬ್ಬ, ಅನಿವಾಳ ಮುಂತಾದ ಒಟ್ಟು ೧೯ ಶಾಲೆಗಳಿಗೆ ೨೦೧೧–೧೨ರಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. (ಪಂಚ ಸೌಲಭ್ಯ ಯೋಜನೆ) ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ವಿದ್ಯಾ ವಿಕಾಸ ಯೋಜನೆಯಡಿ ಒಟ್ಟು ೪೨,೨೯೦ ಸಮವಸ್ತ್ರಗಳನ್ನು ವಿತರಿಸಲಾಗಿದೆ. ೫ ಗ್ರಾಮಗಳ ಶಾಲೆಗಳಲ್ಲಿ ಹೆಚ್ಚುವರಿ (ಒಂದೊಂದು) ಕೊಠಡಿಗಳನ್ನು ನಿರ್ಮಿಸಲಾಗಿದೆ. ೪,೭೨೬ ಮಕ್ಕಳಿಗೆ ಒಟ್ಟು ೨೨,೨೧೧ ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ. ೨೦೧೨–೧೩ರ ಒಟ್ಟು ವಿದ್ಯಾರ್ಥಿ ದಾಖಲಾತಿ ೧೦,೩೧೬ ಹಾಗೂ ಹಾಜರಾತಿ ಒಟ್ಟು ೧೦,೨೮೩ (ಹೆಣ್ಣು ಮಕ್ಕಳ ಹಾಜರಾತಿ ೫೦೩೨) ಇಷ್ಟೇ ಅಲ್ಲದೆ ೨೦೧೨–೧೩ರಲ್ಲಿ ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದ ಪಠ್ಯ ಪುಸ್ತಕಗಳ ಒಟ್ಟು ಸಂಖ್ಯೆ ೩೦,೮೦೭ ಹಾಗೂ ೨,೫೫೪ ಉಚಿತ ಬೈಸಿಕಲ್‌ಗಳು ವಿದ್ಯಾರ್ಥಿಗಳಿಗೆ ವಿತರಿಸಲು ಸರಬರಾಜಾಗಿರುತ್ತವೆ. (ವಿತರಣೆ ೭೫೪). (ಕ್ಷೇತ್ರ ಶಿಕ್ಷಣಾಧಿಕಾರಿಗಳವರ ತ:ಖ್ತೆ ಆಧಾರಿತ).

ಇತ್ತೀಚೆಗೆ ಸರ್ಕಾರವು 'ಮಕ್ಕಳ ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ'ಯನ್ನು ಜಾರಿಗೆ ತಂದಿರುತ್ತದೆ. ಶಾಲೆಗಳ ಭೌತಿಕ ಗುಣಮಟ್ಟ ಹಾಗೂ ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಉತ್ತಮ ಪಡಿಸಲು ಸರ್ವಶಿಕ್ಷಣ ಅಭಿಯಾನ ೧ ರಿಂದ ೮ನೇ ತರಗತಿಯವರೆಗೆ ಹಾಗೂ 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಎಸ್.ಡಿ.ಎಂ.ಗೆ ನೇರವಾಗಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಮಾಡಿಸಲಾಗುತ್ತಿದೆ. (೧) ಶಾಲಾ ಕಟ್ಟಡ ನಿರ್ಮಾಣ, (೨) ಶಾಲಾ ಕಟ್ಟಡ ದುರಸ್ಥಿ, (೩) ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, (೪) ಶಾಲೆಯ ರಕ್ಷಣಾ ಭಿತ್ತಿ, (೫) ಪೀಠೋಪಕರಣಗಳು, (೬) ಪಾಠೋಪಕರಣಗಳು, (೭) ವಿದ್ಯುಚ್ಛಕ್ತಿ ವ್ಯವಸ್ಥೆ, (೮) ಗ್ರಂಥಾಲಯ ಮುಂತಾದವುಗಳ ಜೊತೆಗೆ ಶಾಲಾ ಶಿಕ್ಷಕರಿಗೆ ಅನುಭವಿ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ರೀತಿಯ ತರಬೇತಿಗಳನ್ನು ಆಗಾಗ್ಗೆ ನೀಡಲಾಗುತ್ತದೆ. ಹೊಸದುರ್ಗ ತಾಲ್ಲೂಕಿನ ಶಾಲೆಗಳ ಮೇಲ್ವಿಚಾರಣೆಗಾಗಿ ಇರುವ

ಆಡಳಿತ ಸಿಬ್ಬಂದಿ ಈ ರೀತಿ ಇರುತ್ತದೆ. (೧) ಕ್ಷೇತ್ರ ಶಿಕ್ಷಣಾಧಿಕಾರಿ, (೨) ಕಛೇರಿ ಸಿಬ್ಬಂದಿ, (೩) ಶಿಕ್ಷಣ ಸಂಯೋಜಕರು (೬ ಜನರು) ಇವರನ್ನೊಳಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿ ಅಲ್ಲದೆ, ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಬಿ.ಆರ್.ಸಿ ೦೧, ಬಿ.ಆರ್.ಪಿ.೪, ಸಿ.ಆರ್.ಪಿ.ಗಳು (ಕ್ಲಸ್ಟರ್ಸ್ ರಿಸೋರ್ಸ್ ಪರ್ಸನ್) ೨೫ ಜನರು ಹಾಗೂ ಡಿ.ಇ.ಆರ್.ಬಿ.ಟಿ.(ಅಂಗವಿಕಲ ಮಕ್ಕಳಿಗೆ ತರಬೇತುದಾರರು, ೩ ಜನ ಇರುವರು.) ಅಂಗವಿಕಲ ಮಕ್ಕಳಿಗೆ ವಿಶೇಷ ಗಮನ ಹರಿಸಲಾಗುತ್ತಿದ್ದು, ಈ ಮಕ್ಕಳನ್ನು ಗುರುತಿಸಿ ಅವರಿಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತಿದೆ. ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ವಿಶೇಷ ತರಬೇತುದಾರ ಸಂಪನ್ಮೂಲ ವ್ಯಕ್ತಿಗಳಿಂದ ಶಿಕ್ಷಣ, ಸಲಹೆ, ಸಹಕಾರ ನೀಡಲಾಗುತ್ತದೆ.

**ವಿವಿಧ ಇಲಾಖೆಗಳಿಂದ ಯೋಜನೆಗಳು**: ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ, ಹೊಸದುರ್ಗ ಇವರಿಂದ ವಿವಿಧ ಯೋಜನೆಗಳನ್ನು ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಶಿಕ್ಷಣಕ್ಕೆ ಪೂರಕವಾಗುವ ಅನೇಕ ಯೋಜನೆಗಳು ಜಾರಿಯಲ್ಲಿರುತ್ತವೆ.

**(೧) ಮಹಿಳಾ ಕಲ್ಯಾಣ ಕೇಂದ್ರಗಳು**: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ೩ ರಿಂದ ೫ ವರ್ಷ ವಯಸ್ಸಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಪೂರ್ವಶಿಕ್ಷಣ, ವೈಯಕ್ತಿಕ ಶುಚಿತ್ವ, ಅಪೌಷ್ಠಿಕತೆಯ ನಿವಾರಣೆ, ಅಕ್ಷರಾಭ್ಯಾಸ ಮತ್ತು ಶಾಲೆಗೆ ಹೋಗುವ ಪ್ರವೃತ್ತಿಯನ್ನು ಬೆಳೆಸಲು ಕೇಂದ್ರಗಳನ್ನು ತೆರೆಯಲಾಗಿದೆ. ಮಕ್ಕಳ ಆಯ್ಕೆಯನ್ನು ಕೇಂದ್ರದ ಸಂಚಾಲಕಿ ಪ್ರತಿ ಮನೆಗಳಲ್ಲಿರುವ ಮಕ್ಕಳ ಗಣತಿಯನ್ನು ಮಾಡಿ, ಪೋಷಕರಿಂದ ಅರ್ಜಿ ಪಡೆದು ನೋಂದಾಯಿಸಿಕೊಳ್ಳುವರು. ಕೇಂದ್ರದಲ್ಲಿರುವ ೫ ವರ್ಷಗಳ ಮೇಲ್ಪಟ್ಟ ಮಕ್ಕಳನ್ನು ಹತ್ತಿರದ ಪ್ರೈಮರಿ ಶಾಲೆಗೆ ಕಡ್ಡಾಯವಾಗಿ ಪ್ರವೇಶ ದಕ್ಕಿಸಿ ಕೊಡುವುದು ಇವರ ಕರ್ತವ್ಯವಾಗಿರುತ್ತದೆ. ಮಕ್ಕಳಿಗೆ ಮಧ್ಯಾಹ್ನ ಪೌಷ್ಠಿಕ ಆಹಾರ ಮತ್ತು ಆಟವಾಡಲು ಕ್ರೀಡಾ ಸಾಮಗ್ರಿಗಳ ಸೌಲಭ್ಯ ಮಾಡಲಾಗಿರುತ್ತದೆ. ಈ ಕೇಂದ್ರಗಳ ಉಸ್ತುವಾರಿಗೆ ಪ್ರತಿ ಕೇಂದ್ರದಲ್ಲಿ ಒಬ್ಬರು ಮಹಿಳಾ ಸಂಚಾಲಕಿ ಮತ್ತು ಒಬ್ಬರು ನಿರ್ವಾಹಕಿಯನ್ನು ನೇಮಕಗೊಳಿಸಲಾಗಿದೆ. ಮಕ್ಕಳಿಗೆ ಮಧ್ಯಾಹ್ನದ ಊಟ, ವರ್ಷಕ್ಕೆ ಎರಡು ಜೊತೆ ಸಮವಸ್ತ್ರ, ಸೋಪು, ಎಣ್ಣೆ ಇತ್ಯಾದಿ ಒದಗಿಸಲಾಗಿರುತ್ತದೆ.

**(೨) ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳು**: ಮೆಟ್ರಿಕ್‌ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ ನೇಯ ತರಗತಿವರೆಗಿನ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು. ಶೇ. ೭೫ ರಷ್ಟು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಮತ್ತು ೨೫ರಷ್ಟು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿ ಮೂಲಕ ದಾಖಲು ಮಾಡಿಕೊಳ್ಳಲಾಗುವುದು. ಉಚಿತ ಊಟ, ವಸತಿ, ವರ್ಷಕ್ಕೆ ಎರಡು ಜೊತೆ ಸಮವಸ್ತ್ರ, ಲೇಖನ ಸಾಮಗ್ರಿ, ಸಾದಿಲ್ವಾರು ಹಾಗೂ

ನಿಯಮಿತ ಶಿಕ್ಷಣ ಮಟ್ಟ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬಾಲಕ ಬಾಲಕಿಯರಿಗೆ ಪ್ರತ್ಯೇಕ ನಿಲಯಗಳ ವ್ಯವಸ್ಥೆ ಇರುತ್ತದೆ. ತಾಲ್ಲೂಕಿನಲ್ಲಿ ಬಾಲಕರ ೦೧ ಹಾಗೂ ಬಾಲಕಿಯರ ೦೨ ವಿದ್ಯಾರ್ಥಿನಿಲಯಗಳಿವೆ.

**(೩) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು**: ಈ ವಿದ್ಯಾರ್ಥಿನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೇಜು ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಿ ದಾಖಲು ಮಾಡಿಕೊಳ್ಳಲಾಗುತ್ತದೆ. ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಇರುವ (ಪಾಲಕರ ವಾರ್ಷಿಕ ಕಂದಾಯ ರೂ. ೧,೦೦,೦೦೦ಕ್ಕಿಂತ ಕಡಿಮೆ ಇರುವ) ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು, ವಿದ್ಯಾರ್ಥಿ ವೇತನ ಹಾಗೂ ಇ.ಬಿ.ಎಲ್. ವೆಚ್ಚದಿಂದ ಭರಿಸಲಾಗುವುದು. ಹೊಸದುರ್ಗ ತಾಲ್ಲೂಕಿನಲ್ಲಿ ೨೦೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವಿದೆ. ಸಾಳೇಹಳ್ಳಿ ಮಠದಲ್ಲಿ ಖಾಸಗಿ ವಿದ್ಯಾರ್ಥಿನಿಲಯವಿದೆ. ಹೊಸದುರ್ಗದ ಒಪ್ಪೊತ್ತಿನ ಸ್ವಾಮಿ ಮಠದಲ್ಲಿ ಜಯದೇವ ಹಾಸ್ಟೆಲ್ ಇದೆ. ಇದೇ ರೀತಿ ಭೋವಿ ಹಾಸ್ಟೆಲ್, ದೇವಾಂಗ ಹಾಸ್ಟೆಲ್, ಉಪವೀರ ವಿದ್ಯಾರ್ಥಿನಿಲಯ, ಕುರುಬರ ಹಾಸ್ಟೆಲ್, ಆದಿಜಾಂಬವ ಹಾಸ್ಟೆಲ್, ಸಮುದಾಯಗಳ ವಿದ್ಯಾರ್ಥಿನಿಲಯಗಳು ತಾಲ್ಲೂಕಿನಲ್ಲಿದೆ.

**(೪) ವಿದ್ಯಾರ್ಥಿ ವೇತನಗಳು**: ೧ ರಿಂದ ೫ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ, ಶಾಲೆಗೆ ಗೈರು ಹಾಜರಾಗದೆ, ತರಗತಿಗಳಿಗೆ ಹಾಜರಾಗಿ ಪಾಠ-ಪ್ರವಚನವನ್ನು ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಲು ವಿದ್ಯಾರ್ಥಿಗಳಿಗೆ ರೂ. ೭೫ ರಂತೆ ವಾರ್ಷಿಕ ಶಿಷ್ಯವೇತನ ನೀಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ನಡುವೆಯೇ ವಿದ್ಯಾಭ್ಯಾಸವನ್ನು ನಿಲ್ಲಿಸದಂತೆ, ಪೋಷಕರು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಲು ಇಲಾಖೆಯಿಂದ ೬, ೭ನೇ ತರಗತಿ ವಿದ್ಯಾರ್ಥಿಗಳಿಗೆ ರೂ. ೭೫ ಮತ್ತು ೮, ೯ ಹಾಗೂ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ರೂ.೧೦೦/- ವಿದ್ಯಾರ್ಥಿ ವೇತನವನ್ನು (ಶಾಲೆಗಳಿಂದ ಅರ್ಜಿಗಳನ್ನು ಪರಿಶೀಲಿಸಿ) ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಮಂಜೂರು ಮಾಡುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ, ಪದವಿ, ಬಿ.ಇಡಿ., ಡಿ.ಇಡಿ., ನರ್ಸಿಂಗ್, ಐ.ಟಿ.ಪಿ-೧ ಜೆ.ಬಿ.ಸಿ. ಮುಂತಾದ ಕೋರ್ಸ್‌ಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಆಯಾ ತರಗತಿಗನುಗುಣವಾಗಿ ವಿದ್ಯಾರ್ಥಿವೇತನ ನೀಡಲಾಗುವುದು. ದೈನಂದಿನ ವಿದ್ಯಾರ್ಥಿ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರತ್ಯೇಕ ದರದಲ್ಲಿ ವಿದ್ಯಾರ್ಥಿವೇತನ ನೀಡಲಾಗುವುದು.

ಮೆಟ್ರಿಕ್ ಪೂರ್ವ ೫ ರಿಂದ ೧೦ನೇ ತರಗತಿಯ ಪ.ಜಾತಿ ಮತ್ತು ಪ.ಪಂಗಡ ವಿದ್ಯಾರ್ಥಿಗಳು ಶೇಕಡಾ ೬೦ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ ರೂ.೧೦೦/-

ಪ್ರತಿಭಾ ವಿದ್ಯಾರ್ಥಿ ವೇತನ ನೀಡಲಾಗುವುದು. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ರೂ. ೫೦೦/–ನಗದು ಬಹುಮಾನ ನೀಡಲಾಗುವುದು. ಪ.ಜಾತಿ/ಪ.ಪಂಗಡದ ಕಾಲೇಜು ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದಲ್ಲಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ತಲಾ ರೂ. ೧,೧೫೦/– ಹಾಗೂ ವೈದ್ಯಕೀಯ ತಾಂತ್ರಿಕ ವಿದ್ಯಾರ್ಥಿಗಳಿಗೆ ತಲಾ ರೂ. ೫೦೦/– ಪುರಸ್ಕಾರ ಧನ ನೀಡಲಾಗುತ್ತದೆ.

**ಅಧ್ಯಯನ ಪ್ರವಾಸ**: ಮೆಟ್ರಿಕ್ ನಂತರದ ಕೋರ್ಸ್‌ಗಳನ್ನು ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಕೋರ್ಸ್‌ನಲ್ಲಿ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಯ ಪ್ರಾಂಶುಪಾಲರಿಂದ ಪ್ರವಾಸ ಕಡ್ಡಾಯದ ಬಗ್ಗೆ ದೃಢೀಕರಣ ಪತ್ರ ಪಡೆದು ಅರ್ಹ ವಿದ್ಯಾರ್ಥಿಗಳಿಗೆ ತಲಾ ರೂ.೧೦೦/– ಮೀರದಂತೆ ನಿಯಮಾನುಸಾರ ಮಂಜೂರು ಮಾಡಲಾಗುತ್ತದೆ.

**ವಿದ್ಯಾರ್ಥಿನಿಯರಿಗೆ ವಿಶೇಷ ಪ್ರೋತ್ಸಾಹಧನ**: ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ ಪ.ಪಂಗಡದ ೮, ೯ ಹಾಗೂ ೧೦ನೇ ತರಗತಿಗಳ ಬಾಲಕಿಯರಿಗೆ ವರ್ಷಕ್ಕೆ ರೂ. ೫೦೦/– ರಂತೆ ವಿಶೇಷ ಪ್ರೋತ್ಸಾಹ ಧನವನ್ನು ರಾಜ್ಯ ವಲಯದಡಿ ನೀಡಲಾಗುತ್ತದೆ. ೬ ಮತ್ತು ೭ನೇ ತರಗತಿಯ ಪ.ಜಾತಿ/ಪ.ಪಂಗಡದ ಹೆಣ್ಣುಮಕ್ಕಳಿಗೆ ಅವರ ಬಟ್ಟೆ ಬರೆ ಇತರ ಖರ್ಚುಗಳಿಗೆ ಸಹಾಯವಾಗುವಂತೆ ವರ್ಷಕ್ಕೆ ರೂ. ೨೫೦/–ರಂತೆ ವಿಶೇಷ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ.

**ತರಬೇತಿ ಮತ್ತು ಧನಸಹಾಯ**: ಪ.ಜಾತಿ/ಪ.ಪಂಗಡದ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಲು ಕಾನೂನು ಆಡಳಿತ ೪ ವರ್ಷಗಳ ಕಾಲ ತರಬೇತಿ ನೀಡುವುದು. ತರಬೇತಿ ಅವಧಿಯಲ್ಲಿ ಪ್ರತಿ ಮಾಹೆ ರೂ.೧,೦೦೦/–ದಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ವಕೀಲರ ಸಂಘದಲ್ಲಿ ನೊಂದಾಯಿಸಿಕೊಳ್ಳಲು ಮತ್ತು ಕಾನೂನು ಗ್ರಂಥಗಳನ್ನು ಕೊಳ್ಳಲು ರೂ. ೫,೦೦೦/– ಸಹಾಯಧನ ನೀಡಲಾಗುತ್ತದೆ.

೨೦೧೧–೧೨ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವಾಗಿ ಒಟ್ಟು ರೂ. ೧೫,೪೪,೦೦೦/– ಅನುದಾನವನ್ನು ವಿನಿಯೋಗಿಸಲಾಗಿದೆ ಹಾಗೂ ಯೋಜನೆಯಡಿಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವಾಗಿ ಒಟ್ಟು ರೂ. ೧೨,೦೦,೦೦೦/– ಅನುದಾನ ವಿನಿಯೋಗಗೊಂಡಿರುತ್ತದೆ. ತಾಲ್ಲೂಕು ಪಂಚಾಯತ್ ಯೋಜನೆಯಡಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರೂ.೨,೫೦,೦೦೦/– ಹಾಗೂ ವಿದ್ಯಾರ್ಥಿನಿಲಯ (ಮೆಟ್ರಿಕ್‌ಪೂರ್ವ) ಗಳಿಗೆ ಹೆಚ್ಚುವರಿ ಭೋಜನ ಮತ್ತು ವಸತಿ ವೆಚ್ಚ ರೂ.೩,೫೦,೦೦೦/–

ಅನುದಾನ ವಿನಿಯೋಗಿಸಲ್ಪಟ್ಟಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಮೆಟ್ರಿಕ್ ನಂತರದವರಿಗೆ ತಾಲ್ಲೂಕು ಪಂಚಾಯತ್ ಯೋಜನೇತರದಡಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವಾಗಿ ರೂ.೧,೦೦,೦೦೦/- ಅನುದಾನ ವಿನಿಯೋಗಗೊಂಡಿದೆ. ಜಿಲ್ಲಾ ಪಂಚಾಯಿತಿ ಕಾರ್ಯಕ್ರಮ ಅನುದಾನ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ ನಿರ್ವಹಣೆಗಾಗಿ ರೂ. ೨ ಲಕ್ಷ ಮೊತ್ತ ವಿನಿಯೋಗಿಸಲ್ಪಟ್ಟಿದೆ. ಕಾಲೇಜ್ ವಿದ್ಯಾರ್ಥಿಗಳಿಗೆ (ಪ.ಜಾತಿ) ಪುರಸ್ಕಾರ ಸಹಾಯ ಇತ್ಯಾದಿ ರೂ. ೨,೫೦,೦೦೦/-, ಪ.ಜಾತಿ ವಿದ್ಯಾರ್ಥಿವೇತನ ರೂ. ೨೧.೭೩,೦೦೦, ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯ ವೆಚ್ಚ ರೂ. ೧,೫೩,೦೦೦, ಅನುದಾನ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮ ಯೋಜನೇತರ ಅನುದಾನದಿಂದ ಪ.ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂ. ೨,೨೦,೦೦೦ ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ರೂ.೩೪,೦೫,೦೦೦/- (ವೇತನ ಸೇರಿ) ವಿನಿಯೋಗಿಸಲ್ಪಟ್ಟಿರುತ್ತದೆ.

**ವಿದ್ಯಾರ್ಥಿ ನಿಲಯಗಳು**: ತಾಲ್ಲೂಕಿನಲ್ಲಿ ೨೦೧೫-೧೬ರಲ್ಲಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು ಒಂದು ಇದ್ದು, ೧೧೦ ವಿದ್ಯಾರ್ಥಿಗಳಿದ್ದಾರೆ ಹಾಗೂ ೨ ಬಾಲಕಿಯರ ವಿದ್ಯಾರ್ಥಿ ನಿಲಯಗಳಿದ್ದು, ೧೫೮ ವಿದ್ಯಾರ್ಥಿಗಳಿದ್ದಾರೆ. ಅಲ್ಲದೆ, ಅನುದಾನಿತ ಬಾಲಕರ ವಿದ್ಯಾರ್ಥಿ ನಿಲಯವು ಸಹ ೨ ಇದ್ದು, ೯೦ ವಿದ್ಯಾರ್ಥಿಗಳಿದ್ದಾರೆ. ತಾಲ್ಲೂಕಿನಲ್ಲಿ ೨೦೧೫-೧೬ರಲ್ಲಿನ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ४ ಇದ್ದು ಇದರಲ್ಲಿ ४೫೦ ವಿದ್ಯಾರ್ಥಿಗಳಿರುತ್ತಾರೆ. (೨ ಬಾಲಕರ ವಿದ್ಯಾರ್ಥಿಗಳ ಸಂಖ್ಯೆ ೨४೦, ೨ ಬಾಲಕಿಯರ ವಿದ್ಯಾರ್ಥಿಗಳ ಸಂಖ್ಯೆ ೨೧೦) ವಸತಿ ಶಾಲೆಗಳು (೧) ಸರ್ಕಾರಿ ಪರಿಶಿಷ್ಟ ವರ್ಗಗಳ ಆಶ್ರಮ ಶಾಲೆ, ನಾಗ್ತಿಹಳ್ಳಿ (೧೦೦ ವಿದ್ಯಾರ್ಥಿನಿಯರು), (೨) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಹೊಸದುರ್ಗ (೧४೦ ವಿದ್ಯಾರ್ಥಿನಿಯರು) ಇಷ್ಟೇ ಅಲ್ಲದೆ (೩) ಮೊರಾರ್ಜಿ ವಸತಿ ಶಾಲೆ, ವಿದ್ಯಾರ್ಥಿ ನಿಲಯ (೧೨೫ ವಿದ್ಯಾರ್ಥಿಗಳು) ಮತ್ತು ಮೊರಾರ್ಜಿ ಶಾಲಾ ವಿದ್ಯಾರ್ಥಿನಿ ನಿಲಯ (೧೨೫ ವಿದ್ಯಾರ್ಥಿನಿಯರು) ನಾಗೇನಹಳ್ಳಿ ಮತ್ತು ಹೊನ್ನೆಕೆರೆ ಗ್ರಾಮಗಳ ಮಧ್ಯದಲ್ಲಿದೆ (ಹಿಂದುಳಿದ ವರ್ಗಗಳ ಇಲಾಖೆ ಉಸ್ತುವಾರಿ)

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**: ಈ ಕಛೇರಿಯು ಹೊಸದುರ್ಗದಲ್ಲಿ ೧೯४೩ ರಿಂದ ಪ್ರಾರಂಭಗೊಂಡಿರುತ್ತದೆ (ಸಮಗ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ) ಈ ಕಛೇರಿಯ ಉಸ್ತುವಾರಿಯಲ್ಲಿ ಒಟ್ಟು ೩೫೭ ಅಂಗನವಾಡಿಗಳು ತಾಲ್ಲೂಕಿನಲ್ಲಿ ನಡೆಯುತ್ತಿದೆ. ೬ ತಿಂಗಳಿಂದ ೩ ವರ್ಷದವರೆಗಿನ ಮಕ್ಕಳಿಗೆ ಪೌಷ್ಠಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಚಿಕಿತ್ಸಾ ವ್ಯವಸ್ಥೆ ಹಾಗೂ ೨ ವರ್ಷದಿಂದ ೬ ವರ್ಷದ ಮಕ್ಕಳಿಗೆ ಪೌಷ್ಠಿಕ ಆಹಾರದೊಂದಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲಾಗುತ್ತದೆ. ಬಾಲ ಸಂಜೀವಿನಿ ಯೋಜನೆಯಡಿಯಲ್ಲಿ ರೋಗಪೀಡಿತ

ಮಕ್ಕಳಿಗೆ ರೂ. ೩೫,೦೦೦ ದಿಂದ ೫೦,೦೦೦ವರೆಗೆ ಚಿಕಿತ್ಸೆ ಕೊಡಿಸುವ ಸೌಲಭ್ಯವಿದೆ. ಪ್ರೌಢ ಶಾಲಾ ಮಕ್ಕಳಿಗೆ ಬಾಲ್ಯವಿವಾಹ ವಿರೋಧದ ಬಗ್ಗೆ ಜಾಗೃತಿ ತರಬೇತಿ ಕಾರ್ಯಕ್ರಮಗಳು ಹಾಗೂ ಎಸ್.ಎಸ್.ಎಲ್.ಸಿ. ಪೂರ್ವ ತರಬೇತಿ ಕಾರ್ಯಕ್ರಮ ಹಾಗೂ ಮಕ್ಕಳಿಗೆ ಶೌರ್ಯ ಸಾಹಸ, ಕಲೆ, ಸಾಹಿತ್ಯ ಸ್ಪರ್ಧೆಗಳನ್ನು ನಡೆಸಿ ಕಲಾಶ್ರೀ ಪ್ರಶಸ್ತಿ ನೀಡಲಾಗುತ್ತದೆ.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಹಾಸ್ಟೆಲ್‌ಗಳು ಹಾಗೂ ವಿದ್ಯಾರ್ಥಿ ವೇತನ** : ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿವಿಧ ಸ್ಥಳಗಳಲ್ಲಿ ಹಾಸ್ಟೆಲ್‌ಗಳನ್ನು ನಡೆಸಲಾಗುತ್ತಿದ್ದು ಅವುಗಳ ವಿವರ ಈ ರೀತಿ ಇದೆ.

ಹಿಂದುಳಿದ ವರ್ಗದವರ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ೪ ಇದ್ದು, ಇದರಲ್ಲಿ ೨೦೦ ವಿದ್ಯಾರ್ಥಿಗಳಿರುತ್ತಾರೆ. ಹಾಗೆಯೇ ಬಾಲಕಿಯರ ವಿದ್ಯಾರ್ಥಿ ನಿಲಯ ೨ ಇದ್ದು, ಇದರಲ್ಲಿ ೧೦೦ ವಿದ್ಯಾರ್ಥಿನಿಯರುಗಳಿರುತ್ತಾರೆ. ಅಲ್ಲದೆ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ೪ ಇದ್ದು, ಇದರಲ್ಲಿ ೪೦೦ ವಿದ್ಯಾರ್ಥಿಗಳಿರುತ್ತಾರೆ. ಹಾಗೆಯೇ ಬಾಲಕಿಯರ ವಿದ್ಯಾರ್ಥಿನಿಲಯ ೨ ಇದ್ದು, ೨೦೦ ವಿದ್ಯಾರ್ಥಿನಿಯರುಗಳಿರುತ್ತಾರೆ. ಅನುದಾನಿತ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಒಂದು ಇದ್ದು, ಇದರಲ್ಲಿ ೬೨ ವಿದ್ಯಾರ್ಥಿಗಳಿರುತ್ತಾರೆ. ಅಲ್ಪಸಂಖ್ಯಾತರ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಒಂದು ಇದ್ದು, ಇದರಲ್ಲಿ ೫೦ ವಿದ್ಯಾರ್ಥಿನಿಯರುಗಳಿರುತ್ತಾರೆ. ಪರಿಶಿಷ್ಟ ವರ್ಗ ಆಶ್ರಯ ವಸತಿ ಶಾಲೆಗಳು ಒಂದು ಇದ್ದು, ೧೨೫ ವಿದ್ಯಾರ್ಥಿಗಳಿರುತ್ತಾರೆ ಹಾಗೂ ಹಿಂದುಳಿದ ವರ್ಗದವರ ಆಶ್ರಯ ವಸತಿ ಶಾಲೆಗಳು ಒಂದು ಇದ್ದು, ೧೦೦ ವಿದ್ಯಾರ್ಥಿಗಳಿರುತ್ತಾರೆ.

**ವಿದ್ಯಾರ್ಥಿ ವೇತನಗಳು**: ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ (ಬಾಲಕ/ ಬಾಲಕಿಯರಿಗೆ) ವಾರ್ಷಿಕ ರೂ.೨೫೦/– ವಾರ್ಷಿಕ ರೂ.೫೦೦/– ಬಾಲಕಿಯರಿಗೆ ವಾರ್ಷಿಕ ರೂ.೬೦೦/– ಕೊಡಲಾಗುವುದು. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಬಾಲಕ/ಬಾಲಕಿಯರಿಗೆ) ವಾರ್ಷಿಕ ರೂ.೩೦೦/– ಕೊಡಲಾಗುವುದು. ಹಾಸ್ಟೆಲ್ ಸೌಲಭ್ಯ ಸಿಗದಿರುವ ವಿದ್ಯಾರ್ಥಿಗಳಿಗೆ ಸಿಗುವ ಸೌಲಭ್ಯಗಳು : ಮೆಟ್ರಿಕ್‌ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ, ವಸತಿ ವೆಚ್ಚ ಮಾಹೆಯಾನ ರೂ.೨೦೦/– (೧೦ ತಿಂಗಳಿಗೆ) ಕೊಡಲಾಗುವುದು. ಕೇಂದ್ರ ಪುರಸ್ಕೃತ ವಿದ್ಯಾರ್ಥಿವೇತನ : ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ವಾರ್ಷಿಕ ರೂ ೫೦೦/– ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ (ಪದವಿ ಪೂರ್ವ) ಮಾಹೆಯಾನ ರೂ.೩೦೦/– ಮತ್ತು ಪದವಿ ನಂತರದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೪೦೦/– ಕೊಡಲಾಗುತ್ತದೆ. ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ

: ಮೆಟ್ರಿಕ್ ಹೆಣ್ಣು ಮಕ್ಕಳಿಗೆ ಮಾಹೆಯಾನ ರೂ.೧೫೦/- ಕೊಡಲಾಗುತ್ತದೆ. ೮, ೯, ೧೦ನೇ ತರಗತಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೧೫೦/-, ವಿದ್ಯಾರ್ಥಿನಿಯರಿಗೆ ರೂ.೨೦೦/- ಕೊಡಲಾಗುವುದು. ಮೆಟ್ರಿಕ್ ನಂತರ ಈ ಜನಾಂಗದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೩೦೦/- ವಿದ್ಯಾರ್ಥಿವೇತನ ನೀಡಲಾಗುತ್ತದೆ.

**ಮುಕ್ತ ನಿಧಿ ಯೋಜನೆ**: ೨೦೧೧-೨೦೧೨ನೇ ಸಾಲಿನಲ್ಲಿ ಮುಕ್ತ ನಿಧಿ ಯೋಜನೆಯಡಿ ಶೇ.೨೨.೩೫ರ ಕಾರ್ಯಕ್ರಮಗಳಿಗೆ ಪುರಸಭೆ (ಹೊಸದುರ್ಗ)ಯು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ೧೩ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸಾಧನ-ಸಲಕರಣೆಗಳನ್ನು ನಿಯಮಾನುಸಾರ ಖರೀದಿಸಿ (ರೂ. ೪೦,೦೦೦/- ದರದಂತೆ) ವಿತರಿಸಿದೆ. (ಕಂಪ್ಯೂಟರ್ ಸೈನ್ಸ್ ಡಿಪ್ಲೊಮಾ ಮಾಡಿದ ವಿದ್ಯಾರ್ಥಿಗಳಿಗೆ). ಇದೇ ರೀತಿ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ (ವಿದ್ಯಾರ್ಥಿನಿಲಯರಿಗೆ) ಕಂಪ್ಯೂಟರ್ ಹಾಗೂ ಸಲಕರಣೆ ಒದಗಿಸುತ್ತದೆ. ಪ.ಜಾತಿ/ಪ.ಪಂಗಡ ವಿದ್ಯಾರ್ಥಿನಿಲಯಗಳಿಗೆ (ಒಟ್ಟು ೮) ಸೋಲಾರ್ ವಾಟರ್ ಹೀಟರ್ ಒದಗಿಸಿದೆ. ಹೊಸದುರ್ಗದ ಭೋವಿ ಜನಾಂಗದ ಹಾಸ್ಟೆಲ್ ರಕ್ಷಣಾ ಭಿತ್ತಿ ನಿರ್ಮಾಣ ಮಾಡಿಸಿರುತ್ತದೆ. ದ್ವಿತೀಯ ಪಿ.ಯು.ಸಿ ಪಾಸಾದ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ (೪೦ ಜನರಿಗೆ) ೩ ತಿಂಗಳ ಕಂಪ್ಯೂಟರ್ ತರಬೇತಿ ನೀಡಿರುತ್ತದೆ. ಅಲ್ಲದೆ, ಡಿಪ್ಲೋಮಾ ಇನ್ ಕಂಪ್ಯೂಟರ್ ಸೈನ್ಸ್ ತರಬೇತಿ ಪಡೆದ ಬಡ ಕುಟುಂಬಗಳ ೮ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಮತ್ತು ಸಲಕರಣೆಗಳ ವಿತರಣೆ, ದ್ವಿತೀಯ ಪಿ.ಯು.ಸಿ. ಪಾಸಾದ ಇತರ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ರೂ. ೩,೦೦೦/- ದಂತೆ ೩೫ ಫಲಾನುಭವಿಗಳಿಗೆ ತರಬೇತಿ ವೆಚ್ಚ ಭರಿಸಿರುತ್ತದೆ. ಮೇಲ್ಕಂಡ ಎಲ್ಲಾ ವೆಚ್ಚಗಳ ಒಟ್ಟು ಮೊತ್ತ ರೂ.೧೯,೬೭,೦೦೦/- ವಿನಿಯೋಗವಾಗಿರುತ್ತದೆ.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ತಾಲ್ಲೂಕಿನ ಏಕೈಕ ಪ್ರಥಮ ದರ್ಜೆ ಕಾಲೇಜು ಇದಾಗಿದ್ದು, ೧೯೮೨ರಲ್ಲಿ ಈ ಕಾಲೇಜು ಹೊಸದುರ್ಗ ಪಟ್ಟಣದಲ್ಲಿ ಪ್ರಾರಂಭಗೊಂಡಿರುತ್ತದೆ. ಕಳೆದ ಹತ್ತೊಂಬತ್ತು ವರ್ಷಗಳಿಂದ ಸ್ವಂತ ಕಟ್ಟಡ (ಸ್ಟೇಡಿಯಂ ಹತ್ತಿರ) ದಲ್ಲಿರುವ ಈ ಕಾಲೇಜಿನಲ್ಲಿ ಕಲೆ, ವಾಣಿಜ್ಯ, ವಿಜ್ಞಾನ, ಮತ್ತು ನಿರ್ವಹಣಾ ಶಾಸ್ತ್ರ ಈ ವಿಭಾಗಗಳಲ್ಲಿ ಪದವಿ ಶಿಕ್ಷಣ ನೀಡಲಾಗುತ್ತಿದೆ. ೨೦೧೧-೧೨ನೇ ಸಾಲಿನಲ್ಲಿ ಪ್ರಸ್ತುತ ಕಾಲೇಜಿನಲ್ಲಿ ಒಟ್ಟು ೨,೫೧೧ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಪ್ರಿನ್ಸಿಪಾಲರು ಒಬ್ಬರು, ಖಾಯಂ ಅಧ್ಯಾಪಕರು ೨೯, ಆಡಳಿತ ಸಿಬ್ಬಂದಿ ೧೧ ಮತ್ತು ಅತಿಥಿ ಉಪನ್ಯಾಸಕರು ೭೮ ಇದ್ದಾರೆ. ಇದೇ ಕಟ್ಟಡದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಕೇಂದ್ರ ಇದ್ದು, ಇದರಲ್ಲಿ ಎಂ.ಎ. (ಇತಿಹಾಸ), ಎಂ.ಎ.(ಕನ್ನಡ) ಮತ್ತು ಎಂ.ಕಾಂ. ಪದವಿಗಳಿಗೆ ತರಗತಿಗಳು ನಡೆಯುತ್ತವೆ. ವಿದ್ಯಾರ್ಥಿ ಸಾಂಸ್ಕೃತಿಕ ಚಟುವಟಿಕೆಗಳು ಜರುಗುವವು. ದಾವಣಗೆರೆ

ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟಿರುವ ಈ ಕಾಲೇಜಿನ ಆಶ್ರಯದಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಅನೇಕ ಸ್ಪರ್ಧೆಗಳು ಏರ್ಪಡುತ್ತವೆ. ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚು ಬಹುಮಾನಗಳನ್ನು ಪಡೆದಿರುತ್ತಾರೆ.

**ಕ್ರೀಡೆ**

ಕ್ರಿ.ಶ.೮ನೇ ಶತಮಾನದಲ್ಲಿ ನೀರ್ಗುಂದ ನಾಡಿನ ದೊರೆ ವಿಕ್ರಮರಾಯನ ಮಗಳು ರತ್ನವತಿ ಎಂಬ ರಾಜಕುಮಾರಿಯನ್ನು ವಿವಾಹವಾಗಲು, ರತ್ನಪುರಿದೇಶ (ಈಗಿನ ಲಕ್ಕಿಹಳ್ಳಿ/ಲಕ್ಕವ್ವನಹಳ್ಳಿ)ದ ರಾಜಕುಮಾರನು, ನೀರ್ಗುಂದ ಹೊರ ತೋಟವೊಂದರಲ್ಲಿದ್ದು, ಜನರಿಗೆ ತೊಂದರೆ ನೀಡುತ್ತಿದ್ದ ಸಿಂಹವನ್ನು ಕೊಲ್ಲುವ ಸ್ಪರ್ಧೆ (ಸವಾಲು) ಸ್ವೀಕರಿಸಿ ಯಶಸ್ವಿಯಾದ ಬಗ್ಗೆ ಈ ತಾಲ್ಲೂಕಿನಲ್ಲಿ ದಂತಕಥೆಯೊಂದು ಪ್ರಚಲಿತದಲ್ಲಿದ್ದು, ಈ ಕಥೆಯನ್ನಾಧರಿಸಿ ನಾಟಕವನ್ನು ಹಿಂದಿನ ಕಾಲದಲ್ಲಿ ಆಡುತ್ತಿದ್ದರು. ಸಿಂಹವನ್ನು ಬೇಟೆಯಾಡುವುದು ರಾಜಕುಮಾರ ಚಿತ್ರಶೇಖರನಿಗೆ ಒಂದು ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕಿಂತ ಭಿನ್ನವಾಗಿಯೇನು ಇಲ್ಲ. ಈ ಸ್ಪರ್ಧೆಯಲ್ಲಿ ಗೆದ್ದು ಅವನು ರಾಜಕುಮಾರಿಯನ್ನು ಬಹುಮಾನವಾಗಿ ಪಡೆದನು. ಕ್ರಿ.ಶ. ೧೫ನೇ ಶತಮಾನದಲ್ಲಿ ಬೂದಿಹಾಳನ್ನು ಆಳುತ್ತಿದ್ದ ಗೊಲ್ಲಸಿರುಮನಾಯಕನು, ತನ್ನ ರಾಜ್ಯದ ಗೋವುಗಳಿಗೆ (ದಶರಥ ರಾಮೇಶ್ವರ ಅರಣ್ಯದಲ್ಲಿ) ತೊಂದರೆ ಕೊಡುತ್ತಿದ್ದ ವನ್ಯ ಮೃಗಗಳನ್ನು ಬೇಟೆಯಾಡಲು ಅರಣ್ಯಕ್ಕೆ ಹೋಗುತ್ತಿದ್ದ ಬಗ್ಗೆ ಸಾಂಗತ್ಯ ಕೃತಿಗಳಲ್ಲಿ ವರ್ಣಿಸಲಾಗಿದೆ. ರಾಜನಾದ ಇವನಿಗೆ ಬೇಟೆಯಾಡುವುದು ಕ್ರೀಡೆಯಾಗಿದ್ದು ಅದರಿಂದ ಅವನಿಗೆ ಸಂತೋಷವಾಗುತ್ತಿದ್ದರಿಂದ ಸಾಹಸಿ ಸೈನಿಕರನ್ನಷ್ಟೇ ಬೇಟೆಗೆ ಕಳುಹಿಸದೆ, ತಾನೇ ಸ್ವತಃ ಬೇಟೆಯಾಡುತ್ತಿದ್ದನು. ಕ್ರಿ.ಶ ೧೭-೧೮ನೇ ಶತಮಾನದಲ್ಲಿ ಮತ್ತೋಡು ಪಾಳೆಯಪಟ್ಟನ್ನು ಆಳಿದ ಪಾಳೆಯಗಾರರು ಸಹ ಗಂಜಿಗೆರೆ ಅರಣ್ಯಕ್ಕೆ ಬೇಟೆಯಾಡಲು ಹೋಗುತ್ತಿದ್ದರೆಂದು ಆಧಾರಗಳಿಂದ ತಿಳಿಯುವುದು. ಕ್ರಿ.ಶ.೧೫ನೇ ಶತಮಾನದಲ್ಲಿ ಬೂದಿಹಾಳು ಪಾಳೆಯಪಟ್ಟಿನ ಸಂಸ್ಥಾಪಕನಾದ ಕಾಚನಾಯಕನು ಮೊದಲು ವಿಜಯನಗರದ ಪ್ರೌಢರಾಯನಲ್ಲಿ ಅರಮನೆಯ ದ್ವಾರಪಾಲಕನಾಗಿದ್ದ ಸಂದರ್ಭದಲ್ಲಿ, ತನ್ನನ್ನು ಕೆಣಕಿದ ಸೇನಾಪತಿ ಗುಂಡನೊಂದಿಗೆ 'ನಿನ್ನ ಹಲ್ಲು ಉದುರಿಸುವೆ' ಎಂದು ಶಪಥ ಮಾಡಿ ಅವನೊಂದಿಗೆ ನೆಲದಲ್ಲಿ ತೋಡಿದ ಹಗೇವಿನಲ್ಲಿ ಮಲ್ಲಯುದ್ಧ ಮಾಡಿ ಗುಂಡನ ಹಲ್ಲುಗಳನ್ನು ಉದುರಿಸಿ ಗೆದ್ದು, ಪ್ರೌಢರಾಯನಿಂದ ಸೂಜಿಕಲ್ಲು ದುರ್ಗವನ್ನು ಬಹುಮಾನವಾಗಿ ಪಡೆದ ಬಗ್ಗೆ ಸಾಂಗತ್ಯದಲ್ಲಿ ಕಥೆ ಇದೆ. ಅಲ್ಲದೆ, ಸಿರುಮನ ಸೇನಾಪಡೆಯಲ್ಲಿ ಕಟ್ಟುಮಸ್ತಾದ ಜಟ್ಟಿಗಳು, ವೀರರು ಇದ್ದ ಬಗ್ಗೆ ಅವರ ಹೆಸರುಗಳನ್ನು ಹೇಳಲಾಗಿದೆ. ಮತ್ತಿವಾಡ ಗಿರಿಯಪ್ಪ, ಹೆಗ್ಗೆರೆ ಮಲ್ಲಣ್ಣ, ಗಾಣದ ತಿಪ್ಪಗ, ಚಿಂದಿ ಪುಟ್ಟಣ್ಣ, ನೀರಗುಂದ ಗಿರಿಯಣ್ಣ, ಜಾಡರ ಚಿಕ್ಕ, ಅಕ್ಕಸಾಲೆ ಗಿರಿಯ, ಸಮಗಾರಮಲ್ಲ, ಮಾದಿಗ ಜಂಪ, ಬೆಲಗೂರು ಭೈರ, ಭಂಟ ಗುಜ್ಜಲೋಬ, ಹಡಪದ

ಹಲಗ, ಹೆಗ್ಗೆರೆ ನಾಗಪ್ಪ, ಉಪ್ಪಕಲಿಕರ ಹೊನ್ನಕಳಸ, ಹೆಗ್ಗೆರೆ ತಳವಾರ, ತಳವಾರ ತಿಪ್ಪುಗ, ಮತ್ತೋಡು ಗಿಡ್ಡಗಿರಿಯ, ಮಾದಿಗ ಸಿಂಗ, ಮಳಲಿ ಕೆಂಪನಾಯಕ, ಹಡಪದ ಸೋಮ, ನಾವಿಂದರ ದೇವುಗ, ಬೇಗಾರ ಮಲ್ಲ, ಭೋಗಾರ ಮಲ್ಲಣ್ಣ, ಭಂಡಾರಿ ಬಸವಣ್ಣ, ಮುಂತಾದ ವೀರರು ಇದ್ದು, ಯುದ್ಧವಿಲ್ಲದ ಸಮಯದಲ್ಲಿ ಇವರು ಮೈ ಹುರಿಗೊಳಿಸಿಕೊಳ್ಳುವ ಅನೇಕ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಮನರಂಜನೆಗಾಗಿ ಕೆಲವು ಕ್ರೀಡೆಗಳನ್ನು ಆಡುತ್ತಿದ್ದರು. ವೇದಾವತಿ ನದಿಯಲ್ಲಿ ಈಜಾಡುವುದು, ಕುದುರೆ ಸವಾರಿ, ಆನೆ ಸವಾರಿ, ಕತ್ತಿವರಸೆ, ಮಲ್ಲಯುದ್ಧ ಇತ್ಯಾದಿ.

ಕ್ರಿ.ಶ.೧೬೦೯ ರಲ್ಲಿ ಮತ್ತೋಡು ಪಾಳೆಯಪಟ್ಟಿನ ಸಂಸ್ಥಾಪಕನಾದ ಶೂರ ಗಿರಿಯಪ್ಪ ನಾಯಕನು, ಬೂದಿಹಾಳು ಪಾಳೆಯಪಟ್ಟಿನಲ್ಲಿ ಪೆನುಗೊಂಡೆಯವರು ಹಿಡಿಯಲು ಅಸಾಧ್ಯವಾಗಿದ್ದ ಮದ್ದಾನೆಯೊಂದನ್ನು ಪರಾಕ್ರಮದಿಂದ ಬಂಧಿಸಿ, ೯,೦೦೦ ಪಗೋಡಗಳಷ್ಟು ಆದಾಯವುಳ್ಳ ಲಕ್ಕವ್ವನಹಳ್ಳಿ ಪಾಳೆಯಪಟ್ಟನ್ನು ಬಹುಮಾನವಾಗಿ ಪಡೆದ ಬಗ್ಗೆ ಆಧಾರಗಳಿವೆ. ಹೀಗೆ, ಹಿಂದಿನ ಕಾಲದಲ್ಲಿ ಪರಾಕ್ರಮವನ್ನು ಮೆರೆಯಬಲ್ಲ ಶೂರರಿಗೆ ಅನೇಕ ಸ್ಪರ್ಧೆಗಳು ಸವಾಲಿನಂತೆ ಎದುರಾಗುತ್ತಿದ್ದವು.

ಹಿಂದೆ, ಜನಸಾಮಾನ್ಯರಲ್ಲಿ ರೂಢಿಯಲ್ಲಿದ್ದ ಕ್ರೀಡೆಗಳೆಂದರೆ, ಪಗಡೆ, ಚೌಕಾಬಾರ, ಈಜು, ಚಣಪಿ, ಗೋಲಿ, ಗಜ್ಜುಗ, ಬುಗುರಿ, ಚಿನ್ನಿ ದಾಂಡು, ಚೆಂಡಾಟ, ಕುಂಟೆ ಬಿಲ್ಲೆ, ಕಣ್ಣಾಮುಚ್ಚೆ, ಜೂಟ್ ಮುಟ್ಟಾಟ, ಬಚ್ಚಿಟ್ಟುಕೊಂಡವರನ್ನು ಹುಡುಕುವ ಆಟ, ಗೊಂಬೆ ಆಟ, ಅಡುಗೆ ಆಟ, ದೇವರ ಆಟ, ಬಿಲ್ಲೆ ತೂರುವುದು (ರಾಜ–ರಾಣಿ), ಕೋಲಾಟ, ಕೀಲು ಕುದುರೆ, ಕುಸ್ತಿ, ಬಿಲ್ಲು ಬಾಣದಾಟ, ಟಗರು ನೆಗೆಸುವಾಟ, ಕುರಿಕಾಳಗ, ಎತ್ತಿನ ಕಾಳಗ, ಓಕುಳಿ ಆಟ, ಜೂಜಾಟ, ಕೋಳಿ ಅಂಕ, ಹೋರಿ ಬೆದರಿಸುವ ಆಟ, ವೀರಗಾಸೆ, ಕವಣೆಕಲ್ಲು, ದೊಂಬರಾಟ, ರಾಜಾ ಮಂತ್ರಿ ಆಟ, ಕರಡಿ ಕುಣಿತ, ಹಾವಾಡಿಸುವುದು, ಡೊಳ್ಳುಕುಣಿತ, ಸೋಮನ ಕುಣಿತ, ಪಂಜಿನಕವಾಯಿತು, ನೀರಿಗೆ ಧುಮುಕುವಾಟ, ಮಣೇವು ಆಟ, ವಗ್ಗಯ್ಯಗಳ ಕುಣಿತ, ಮರಗಾಲು ಕುಣಿತ, ಮೋಡಿ ಆಟ, ಕಣ್ಣುಕಟ್ಟು ಆಟ, ಮರಕೋತಿ ಆಟ, ಸೆಣೆಸಾಟ, ಆನೆ–ಹರಳು ಆಟ, ಮಲ್ಲಕಂಭ, ಜಲಕ್ರೀಡೆ, ಮಡಕೆ ಒಡೆಯುವಾಟ, ತೆಪ್ಪದಾಟ, ಗರಡಿ ಕಸರತ್ತು, ಎತ್ತಿನ ಗಾಡಿ ಓಡಿಸುವುದು, ಮರಹತ್ತುವ ಆಟ, ಸಿಡಿ ಆಡುವುದು, ಭಾರ ಎತ್ತುವ ಆಟ, ಹಗ್ಗ ಜಗ್ಗಾಟ, ಗಾಳಿಪಟ ಸ್ಪರ್ಧೆ ಮುಂತಾದ ನೂರಾರು ಕ್ರೀಡೆಗಳನ್ನು ಹೆಸರಿಸಬಹುದು. ಹಿಂದಿನ ಕಾಲದಲ್ಲಿ ಹೆಗ್ಗೆರೆ ಕೋಣಗಳು ತುಂಬ ಬಲಿಷ್ಠವಾಗಿದ್ದವೆಂದು ಪ್ರತೀತಿ ಇದೆ. ಈ ಕೋಣಗಳ ಕೊಂಬುಗಳಿಗೆ (ರಾತ್ರಿವೇಳೆ) ಉರಿಯುವ ದೊಂದಿಗಳನ್ನು ಕಟ್ಟಿ ಓಡಿಸುವ ಕ್ರೀಡೆ ರೂಢಿಯಲ್ಲಿತ್ತೆನ್ನಲಾಗಿದೆ. ಶತ್ರುಸೇನೆಯನ್ನು ಹೆದರಿಸಲೂ ಹೀಗೆ ಮಾಡುತ್ತಿದ್ದರು. ಕ್ರಿ.ಶ.೧೬೭೬ ರಲ್ಲಿ ಈಗಿನ ಹೊಸದುರ್ಗದ ಬೆಟ್ಟದ ಮೇಲೆ ಚಿತ್ರದುರ್ಗದ ಪಾಳೆಯಗಾರ ಚಿಕ್ಕಣ್ಣ ನಾಯಕನು ಕೋಟೆಯನ್ನು ನಿರ್ಮಿಸಿದನಲ್ಲದೆ, ಭೈರವನ ದೇವಸ್ಥಾನವನ್ನು ಮತ್ತು ಅರಮನೆ, ಚಾವಡಿ, ಸೈನಿಕರ ವಸತಿಗಳನ್ನು ಕಟ್ಟಿಸಿದ್ದನು. ಸೈನಿಕರು ಸಾಮು

ಮಾಡಿ ಮೈಕಟ್ಟನ್ನು ಹುರಿಗೊಳಿಸಿಕೊಳ್ಳಲು ಭೈರವನ ದೇವಸ್ಥಾನದ ಹಿಂಬದಿಯಲ್ಲಿ ಗರಡಿ ಮನೆಯನ್ನು ಕಟ್ಟಿಸಿದ್ದು, ದೇವಸ್ಥಾನ ಗರಡಿ ಮನೆ ಮುಂತಾದ ಸ್ಮಾರಕಗಳನ್ನು ಬೆಟ್ಟದ ಮೇಲೆ ಇಂದಿಗೂ ಕಾಣಬಹುದಾಗಿದೆ. ಈ ಗರಡಿಯ ಮನೆಯಲ್ಲಿ ಸೈನಿಕರು ಅಂಗ ಸಾಧನೆ, ಕುಸ್ತಿ ಮುಂತಾದ ಒಳಾಂಗಣ ಕ್ರೀಡೆಗಳನ್ನು ಆಡುತ್ತಿದ್ದರೆನ್ನಲಾಗಿದೆ. ಇತ್ತೀಚಿನ ಶತಮಾನದವರೆಗೂ ಆಂಜನೇಯ ದೇವಸ್ಥಾನಗಳು, ಅಂಗ ಸಾಧನೆಗೆ ಆಶ್ರಯ ತಾಣಗಳಾಗಿದ್ದವು. ಹಳ್ಳಿಗಳಲ್ಲಿ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಇರುತ್ತಿದ್ದಿತು. ಆದರೆ, ಬ್ರಿಟಿಷರ ಕಾಲದಲ್ಲಿ ರಾಜಕೀಯಕ್ಕೆ ಹೆಚ್ಚು ಸೆಣಸಾಟಗಳಿದ್ದುದರಿಂದಾಗಿ ಕ್ರೀಡಾಮಟ್ಟ ಕುಸಿದು ಕಳಾಹೀನವಾಯಿತು. ಅಂಗ ಸಾಧನೆ, ಕುಸ್ತಿ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಲಿಲ್ಲ. ಹಿಂದೆ, ಹೊಸದುರ್ಗದ ಗಣಪತಿ ಉತ್ಸವದ ಸಂದರ್ಭದಲ್ಲಿ ಕುಸ್ತಿಪಂದ್ಯಾಟಗಳು ನಡೆಯುತ್ತಿದ್ದು, ನೋಡಲು ಜನ ಮುಗಿಬೀಳುತ್ತಿದ್ದರು. ಹೊಸದುರ್ಗ ಮಾರುತಿ ವ್ಯಾಯಾಮ ಶಾಲೆ ಹೆಸರಾಗಿದ್ದಿತು. ತದನಂತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಲಿಬಾಲ್ ಆಟವು ಬಹಳ ಜನಪ್ರಿಯವಾಯಿತು. ಬೇರೆ ಬೇರೆ ಹಳ್ಳಿಗಳ ವಾಲಿಬಾಲ್ ಪಟುಗಳು ಪಂದ್ಯಾಟಗಳನ್ನು ಆಡುತ್ತಿದ್ದರು. ಪಟ್ಟಣದಲ್ಲಿಯೂ ವಾಲಿಬಾಲ್ ಹಾಗೂ ಕಬಡ್ಡಿ ಪಂದ್ಯಾಟಗಳು ಬಹಳ ಜನಪ್ರಿಯವಾಗಿದ್ದವು. ದಶಕಗಳ ಹಿಂದೆ ತಾಲ್ಲೂಕಿನ ಬಲ್ಲಾಳ ಸಮುದ್ರ ಗ್ರಾಮದಲ್ಲಿ ಹೆಚ್ಚು ಪಂದ್ಯಗಳು ನಡೆಯುತ್ತಿದ್ದವು. ನಂತರದ ಸ್ಥಾನ ಮಲ್ಲಪ್ಪನಹಳ್ಳಿ, ಶ್ರೀ ರಾಂಪುರ, ಮತ್ತೋಡು ಮತ್ತು ದೊಡ್ಡಘಟ್ಟ ಗ್ರಾಮಗಳವು. ಆರ್.ಶಾಂತಮೂರ್ತಿ, ವಜ್ರಪ್ಪ, ಡಾವೂದ್ ಷರೀಫ್ ಹೆಸರಾಂತ ಕಬಡ್ಡಿ ಆಟಗಾರರೆನಿಸಿದ್ದರು ಹಾಗೂ ಬಿ.ಶಂಕರ್‌ಗುಜ್ಜರ್ ಕನ್ನಡದಲ್ಲಿ ವೀಕ್ಷಕ ವಿವರಣೆಗೆ, ಪರಮೇಶ್ವರಪ್ಪ ಕುಸ್ತಿಪಟುವಾಗಿ ಹೆಸರಾಗಿದ್ದರು.

೧೯೭೧ರಲ್ಲಿ ಪ್ರಾರಂಭಗೊಂಡ ಯುವಜನಸೇವಾ ಇಲಾಖೆಯು ತಾಲ್ಲೂಕಿನಲ್ಲಿ ಅನೇಕ ಕ್ರೀಡಾ ಚಟುವಟಿಕೆಗಳನ್ನು ನಡೆಸತೊಡಗಿತು. ಶಾಲಾ ಕಾಲೇಜುಗಳಲ್ಲಿಯೂ ಕ್ರೀಡಾ ಸ್ಪರ್ಧೆಗಳು ನಡೆಯುತ್ತಿದ್ದುದರಿಂದ ಯುವಕರಲ್ಲಿ ಕ್ರೀಡೆಗಳ ಬಗ್ಗೆ ಉತ್ಸಾಹ, ಶ್ರದ್ಧೆ ಮೂಡಲು ಕಾರಣವಾಯಿತು. ೧೯೭೦-೮೦ರಲ್ಲಿ ಹೊಸದುರ್ಗ ಪಟ್ಟಣದಲ್ಲಿ ಸ್ಪೋರ್ಟ್ಸ್ ಅಸೋಸಿಯೇಷನ್ ಉತ್ತಮ ಮಟ್ಟದ ಅನೇಕ ಕ್ರೀಡೆಗಳನ್ನು ನಡೆಸಿ ಜೇಸೀಸ್ (ಜೂನಿಯರ್ಸ್) ಸಂಘವೂ ಅನೇಕ ಕ್ರೀಡಾ ಚಟುವಟಿಕೆ ನಡೆಸಿ ಕ್ರೀಡಾ ಕೂಟಗಳನ್ನು ಏರ್ಪಡಿಸುತ್ತಿದ್ದಿತು. ಪಟ್ಟಣದ ಅಶೋಕ ವಾಚನಾಲಯವು ೧೯೨೩ರಲ್ಲಿ ಪ್ರಾರಂಭಗೊಂಡಿದ್ದು, ಅನೇಕ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಿದೆ.

## ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ

ಇಲಾಖೆಯು ೧೯೬೧ರಲ್ಲಿ ಪ್ರಾರಂಭಗೊಂಡಿರುತ್ತದೆ. ಹೊಸದುರ್ಗದಲ್ಲಿ ಇಲಾಖೆಯ ಕಛೇರಿಯು ತಾಲ್ಲೂಕು ಕ್ರೀಡಾಂಗಣದಲ್ಲಿದೆ. ತಾಲ್ಲೂಕಿನ ಒಟ್ಟು ೧೯೫ ಯುವಕ

ಸಂಘಗಳು ಮತ್ತು ೧೫ ಯುವತಿ ಸಂಘಗಳು ಪ್ರಸ್ತುತ ಕ್ರೀಡಾ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿದ್ದು, ಇಲಾಖೆಯು ನಡೆಸುವ ಯುವಜನಮೇಳ ಹಾಗೂ ಯುವಜನೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅರ್ಹತೆ ಪಡೆದಿರುತ್ತವೆ.

ಪ್ರತಿವರ್ಷ ತಾಲ್ಲೂಕಿನಲ್ಲಿ ಇಲಾಖಾವತಿಯಿಂದ ಪೈಕಾ ಕ್ರೀಡಾಕೂಟ, ದಸರಾ ಕ್ರೀಡಾಕೂಟ, ಯುವಜನಮೇಳ ಮತ್ತು ಯುವಸಂಪರ್ಕ ಸಭೆ ನಡೆಯುತ್ತವೆ. ಮಾಜಿ ಕ್ರೀಡಾ ಸಚಿವರು ಮತ್ತು ತಾಲ್ಲೂಕಿನ ಶಾಸಕರಾಗಿದ್ದ ಗೂಳೀಹಟ್ಟಿ ಡಿ. ಶೇಖರ್‌ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕಿನಲ್ಲಿ ನಡೆದ ಪ್ರಮುಖ ಕಾರ್ಯಕ್ರಮಗಳು ಮತ್ತು ಕ್ರೀಡಾಕೂಟಗಳು ಈ ರೀತಿಯಾಗಿವೆ ೧) ೨೦೦೯ರಲ್ಲಿ ಹೊಸದುರ್ಗ ಪಟ್ಟಣದಲ್ಲಿ 'ರಾಷ್ಟ್ರಮಟ್ಟದ ಜ್ಯೂಡೋ ಸ್ಪರ್ಧೆಗಳು' ಜರುಗಿರುತ್ತವೆ. ೨) ೨೦೧೧ರಲ್ಲಿ 'ರಾಜ್ಯಮಟ್ಟದ ಯುವಜನಮೇಳ ಮತ್ತು ಯುವಸಂಪರ್ಕ ಸಮಾವೇಶ'ವು ಹೊಸದುರ್ಗ ಪಟ್ಟಣದಲ್ಲಿ ಜರುಗಿತು. ೩) ಜಿಲ್ಲಾಮಟ್ಟದ ಯುವಜನಮೇಳವು ಶ್ರೀರಾಂಪುರದಲ್ಲಿ ಮತ್ತು ೪) ಬೆಂಗಳೂರು ವಿಭಾಗ ಮಟ್ಟದ ಯುವಜನಮೇಳವು ಹೊಸದುರ್ಗದಲ್ಲಿ ಜರುಗಿದವು.

**ರಾಜ್ಯ/ಕೇಂದ್ರ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳು**

ತಾಲ್ಲೂಕಿನಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಡಿಯಲ್ಲಿ ಅನೇಕ ಕಾಮಗಾರಿಗಳು ಪ್ರಗತಿಯಲ್ಲಿವೆ. ಮಂಜೂರಾಗಿರುವ ಅನುದಾನವನ್ನು ಇಲ್ಲಿ ನಮೂದಿಸಲಾಗಿದೆ. ೧) ಒಳಾಂಗಣ ಈಜುಕೊಳ-ಹೊಸದುರ್ಗ ಕ್ರೀಡಾಂಗಣದಲ್ಲಿ (ರೂ. ೩೭.೫೦ ಲಕ್ಷ), ೨) ಒಳಾಂಗಣ ಕ್ರೀಡಾಂಗಣ, ಹೊಸದುರ್ಗ (ರೂ. ೮೨ರಿಂದ ೯೫ ಲಕ್ಷ), ೩) ಯುವಭವನ, ಹಾಲು ರಾಮೇಶ್ವರ ಕ್ಷೇತ್ರದಲ್ಲಿ, (ರೂ.೧೧೨.೦೦ ಲಕ್ಷ), ೪) ಪೆವಿಲಿಯನ್ ಮತ್ತು ಮಳಿಗೆ, ಹೊಸದುರ್ಗ (ರೂ.೨.೦೦ ಕೋಟಿ), ೫) ಸಿಂಥೆಟಿಕ್ ಟ್ರ್ಯಾಕ್ ಹೊಸದುರ್ಗ (ರೂ. ೨.೦೦ಕೋಟಿ), ೬) ಸ್ಟೇಡಿಯಂಗೆ ರಕ್ಷಣಾಭಿತ್ತಿ, ಹೊಸದುರ್ಗ (ರೂ.೨೦.೦೦ಲಕ್ಷ) ಹಾಗೂ ೭) ಗರಡಿ ಮನೆ, ಹೊಸದುರ್ಗ (ರೂ. ೧೦.೦೦ಲಕ್ಷ). ಇಲ್ಲಿನ 'ಸಿಂಥೆಟಿಕ್ ಟ್ರ್ಯಾಕ್, ತಾಲ್ಲೂಕು ಕೇಂದ್ರದಲ್ಲಾಗಿರುವ ದೇಶದ ಪ್ರಥಮ ಸಿಂಥೆಟಿಕ್ ಟ್ರ್ಯಾಕ್ ಆಗಿದೆ.

ಯುವಕ/ಯುವತಿ ಸಂಘಗಳು ಹಾಗೂ ಶಾಲಾ-ಕಾಲೇಜುಗಳಿಗೆ ವರ್ಗ-೧ ರಡಿಯಲ್ಲಿ ವಸೂಲಾಗುವ ಶೇ. ೨ರಷ್ಟು ಅನುದಾನದಲ್ಲಿ ವಾರ್ಷಿಕ ೧೦:೧೦ ರ ಪ್ರಮಾಣದಲ್ಲಿ ಕ್ರೀಡಾ ಸಲಕರಣೆಗಳು ಹಾಗೂ ಸಾಂಸ್ಕೃತಿಕ ಉಪಕರಣಗಳನ್ನು ನೀಡಲಾಗುವುದು. ಇಲಾಖೆ ವತಿಯಿಂದ, ಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿಪಟು (ಮಾಜಿಜಟ್ಟಿ)ಗಳಿಗೆ ಸಹಾಯಧನ ನೀಡಲಾಗುವುದು.

## ಅಧ್ಯಾಯ-೧೦

# ಸಾಹಿತ್ಯ ಮತ್ತು ಸಂಸ್ಕೃತಿ

### ಪ್ರಾಚೀನ ಸಾಹಿತ್ಯ

ಹೊಸದುರ್ಗ ತಾಲ್ಲೂಕಿನಲ್ಲಿ ದೊರಕುವ ಅತ್ಯಂತ ಪ್ರಾಚೀನವಾದ ಸಾಹಿತ್ಯವೆಂದರೆ, ಶಾಸನ ಸಾಹಿತ್ಯ. ಇಲ್ಲಿನ ಅನೇಕ ಶಾಸನಗಳಲ್ಲಿ ಶಾಸನವನ್ನು ರಚಿಸಿದವರ ಹೆಸರಿದೆ. ಕೆಲವು ಶಾಸನಗಳು ಗದ್ಯದಲ್ಲಿಯೂ, ಕೆಲವು ಪದ್ಯ ರೂಪದಲ್ಲೂ ಇವೆ. ಈ ಶಾಸನಗಳಲ್ಲಿ ಕೆಲವು ಶಿಲಾಶಾಸನಗಳೂ ಮತ್ತೆ ಕೆಲವು ತಾಮ್ರಶಾಸನಗಳೂ ಆಗಿದ್ದು, ಕೆಲವು ಕನ್ನಡದಲ್ಲಿಯೂ ಮತ್ತೆ ಕೆಲವು ಹಳೆಗನ್ನಡ/ನಡುಗನ್ನಡ– ಸಂಸ್ಕೃತದಲ್ಲೂ ಇವೆ. ತಾಲ್ಲೂಕಿನ ಕೆಲವು ಶಾಸನಗಳಲ್ಲಿ ಕಂಡು ಬಂದಿರುವ ಶಾಸನ ಕವಿಗಳ ಹೆಸರುಗಳೆಂದರೆ, ಸೇನಬೋವನ ಮಗ ಮಾದಂಣ (ಕ್ರಿ.ಶ.೧೧೦೧ರ ಹೆಗ್ಗೆರೆ ಶಾಸನ) ದೇವಭದ್ರಮುನಿ (ಕ್ರಿ.ಶ. ೧೧೩೧ರ ಹೆಗ್ಗೆರೆ ಶಾಸನ), ಗೋವಿಂದಜೀಯ (ಕ್ರಿ.ಶ.೧೧೮೧ರ ಕೈನಡುಶಾಸನ), ಬಂಮೋಜನ ಮಗ ಸೂರಿಯಾಚಾರಿ (ಕ್ರಿ.ಶ.೧೧೯೦ರ ಬೂದಿಹಾಳು ಶಾಸನ), ಮಲ್ಲಣನ ಮಗ ವೀರಣಾಚಾರ್ಯ (ಕ್ರಿ.ಶ.೧೫ನೇ ಶತಮಾನದ ಬೂದಿಹಾಳು, ಮಳಲಿ ಮತ್ತು ಮತ್ತೋಡಿನ ತಾಮ್ರಶಾಸನಗಳು), ತಿಕ್ಕರಸರ ಪುತ್ರ ರುದ್ರದೇವ (ನಂದನ ಸಂವತ್ಸರದ ನೇರ್ಲಕೆರೆ ಶಾಸನ), ಮತ್ತು ವಿದ್ಯಾನಗರಿಯ ನಾಗಣಾಚಾರಿ (ಕ್ರಿ.ಶ.೧೫೨೦ರ ಬಾಗೂರು ಶಾಸನ), ಮಲ್ಲಣನ ಮಗ ವೀರಣಾಚಾರ್ಯ ಬರೆದಿರುವ ಮೂರು ತಾಮ್ರ ಶಾಸನಗಳು ತಲಾ ೧೭೩, ೧೭೩ ಮತ್ತು ೧೧೯ ಸಾಲುಗಳನ್ನುಳ್ಳ ದೊಡ್ಡ ಶಾಸನಗಳಾಗಿದ್ದು, ಈ ಕೆಳಕಂಡ ಸಾಲುಗಳು ಪದ್ಯ ಲಕ್ಷಣದಿಂದ ಕೂಡಿವೆ.

'**ವೇದಾವತಿ** ನದೀತೀರೇ ವಿರೂಪಾಕ್ಷಸ್ಯ ಸಂನಿಧೌ' (ಮತ್ತೋಡು ತಾಮ್ರಶಾಸನ), ಕೇದಗ್ಗೆರೇ ಗ್ರಾಮಂ ಸರ್ವಸಸ್ಯಸಮನ್ವಿತಂ, (ಮಳಲಿ ತಾಮ್ರಶಾಸನ), ಹೆಗ್ಗೆರೆ ಶಾಸನ ಬರೆದಿರುವ ದೇವಭದ್ರ ಮುನಿಯು, ಶಾಸನವು ಶಾರ್ದೂಲ ವಿಕ್ರೀಡಿತ ಕಾವ್ಯ ಲಕ್ಷಣದಲ್ಲಿರುವುದಾಗಿ ಹೇಳಿಕೊಂಡಿದ್ದಾನಲ್ಲದೇ, 'ಉಚಿತಪದಾಳಂಕಾರಂ ಪ್ರಚುರಸಂನೆಗಳನಿತ್ತು ಜಿನಶಾಸನಂ.....' ಎಂದು ಹೇಳಿಕೊಂಡಿದ್ದಾನೆ.

ಕ್ರಿ.ಶ.೧೧೭೪ರ ಚಿಕ್ಕಯಗಟಿ ಶಾಸನದಲ್ಲಿ ಶಾಸನಕವಿಯು..... 'ಭಾಸ್ಕರನು ದಯಾದ್ರಿಯಿದುದಿಪಂತೆವೊಲೀವಿಭು ನಲ್ಲಸೆಟ್ಟಿಗಂ...... ಪುಟ್ಟಿದನಂ ವರಗುಣಿ ಬಯಿಚನೆಂದಡವನಂ ಸಲೆ ಬಣ್ಣಿಪರಾರ್ ಧರಿತ್ರಿಯೊಳ್' ಎಂದು ವರ್ಣಿಸಿದ್ದಾನೆ. ತಂಡಗ ಶಾಸನದಲ್ಲಿ, ಸಾಮಂತ ಗೋವಿದೇವನನ್ನು 'ಪದ್ಮಾವತೀದೇವಿ ಲಬ್ಧವರಪ್ರಸಾದ' ಎಂದು ಹೊಗಳಿದ್ದಾನೆ. ಪ್ರಾಚೀನ ಕಾಲದ ನೀರ್ಗುಂದ ನಾಡಿನ ಅಗ್ರಹಾರವನ್ನು ಕ್ರಿ.ಶ. ೧೧೫೮ರ ಶಿಕಾರಿಪುರ ಶಾಸನದಲ್ಲಿ ಹೀಗೆ ಕಾವ್ಯಮಯವಾಗಿ ಹೊಗಳಲಾಗಿದೆ–

**'ಆ ನಾಡೊಳೆಸೆವುದು ನಾನಾ ವಿದ್ವಜ್ಜನ**
**ಸ್ಥಾನಂ ನಿರ್ಗುಂದಮೆನಿಪಗ್ರಹಾರವ**
**ತ್ಯಾನಂದಕಾರಿ ಜಗಕ್ಕೆಲ್ಲಂ॥'**

ಇದನ್ನು ತ್ರಿಪದಿ ಛಂದಸ್ಸಿನಲ್ಲಿರುವ ಪದ್ಯವೆನ್ನಲಾಗಿದೆ (ಎಪಿಗ್ರಾಫಿಯಾ ಕರ್ನಾಟಿಕ, ೪, ಶಿಕಾರಿಪುರ ೧೮೫, ಕ್ರಿ.ಶ. ೧೧೫೮, ರೈಸ್ ಆವೃತ್ತಿ)

ನಂತರದ ಸ್ಥಾನದಲ್ಲಿ, ತಾಲ್ಲೂಕಿನ ಜಾನಪದ ಸಾಹಿತ್ಯವನ್ನು ಪರಿಗಣಿಸಬಹುದು. ಪ್ರಾಚೀನ ಕಾಲದಿಂದ ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವ ಜಾನಪದ ತ್ರಿಪದಿಗಳು, ಹಾಡುಗಳು, ಕಥೆಗಳು, ನಾಣ್ಣುಡಿಗಳು, ಒಗಟುಗಳು, ಸೋಬಾನೆ ಪದಗಳು, ದೇವರುಗಳನ್ನು ಕುರಿತ 'ಪದ'ಗಳು, ಸುಗ್ಗಿಹಾಡು, ಕಪಿಲೆಹಾಡು, ಮುಂತಾದ ಪದ್ಯ ಗದ್ಯ (ಜಾನಪದ) ಸಂಪತ್ತು ಇಂದಿಗೂ ಅನೇಕ ಗ್ರಾಮಗಳ ಮನೆ–ಮನಗಳಲ್ಲಿ ಜೀವಂತವಾಗಿರುವುದನ್ನು ಕಾಣಬಹುದು.

'ಹೊಸದುರ್ಗದ ಒಡಲಾಗೆ'– ಬಾಗೂರು ಆರ್. ನಾಗರಾಜಪ್ಪ(ಸಂಪಾದಕತ್ವ), ೨೦೦೫, ನೇಕಾರ ಪ್ರಕಾಶನ, ಸೊರಬ.

**ಕೆರಳಮ್ಮ ಬರುವಾಗ/ದಾರಿಬೋರಿಟ್ಟಾವೆ.**
**ಗೋರಿ ಕಲ್ಲೊಡೆದು ಮಳುಲೆದ್ದು॥ ದೇಪುರಕೆ।**
**ಹೊರಟಳು ಬಾಳೆ ಸುಳಿಯಂಗೆ"**

ಹೀಗೆ ಸುಂದರ ತ್ರಿಪದಿಗಳಲ್ಲಿ ಹಳ್ಳಿಯ ಗರತಿಯು ಗ್ರಾಮದೇವತೆ ಕೆರಳಮ್ಮನನ್ನು ಕುರಿತು ಬಣ್ಣಿಸುತ್ತಾಳೆ.

'ಹೊಸದುರ್ಗ ಸೀಮೆ ಜಾನಪದ'–ಬಾಗೂರು ಆರ್.ನಾಗರಾಜಪ್ಪ(೨೦೦೪), ಸಿ.ವಿ.ಜಿ.ಪ್ರಕಾಶನ, ಬೆಂಗಳೂರು.

**'ಕಾರೆಹಳ್ಳಿ-ಮತ್ತೋಡು । ಮೇಲಾದ ಪಟ್ಟಣ ।**
**ಚಿನ್ನದುಂಗುರದ ದೊರೆಗಳು ॥ ಅವ್ರ ಸೀಮ್ಯಾಗೆ ।**
**ದಶರಥರಾಮಯ್ನ ಹೊಳಿಯಾಗೆ ॥ ಮಲಿಯಮ್ಮ ।**
**ಬಿಚ್ಚ್ಯಾಳೆ ಅಲ್ಲಿ ಬಿಗಿಮುಡಿಯ ॥'**

ಹೀಗೆ ನಾಲ್ಕು ಸಾಲಿನ ಪದ್ಯಗಳಲ್ಲಿಯೂ ಹಳ್ಳಿಗರು ಅರಳಿ ಹಳ್ಳಿಯ ಗ್ರಾಮ ದೇವತೆಯಾದ ಮಲಿಯಮ್ಮ ದೇವಿಯನ್ನು ವರ್ಣಿಸಿದ್ದಾರೆ. ಈ ತೆರನಾದ ತ್ರಿಪದಿ ಮುಂತಾದ ಸಾಹಿತ್ಯ ಈ ಸೀಮೆಯಲ್ಲಡಗಿದೆ.

ತಾಲೂಕಿನಾದ್ಯಂತ ದೊರೆತಿರುವ ಅನೇಕ ಓಲೆಗರಿಕಟ್ಟು ಹಾಗೂ ಹಸ್ತಪ್ರತಿಗಳು ಶತಮಾನಗಳ ಹಿಂದಿನವಾಗಿದ್ದು, ಅವುಗಳಲ್ಲಿ 'ವೋರುಗಲ್ಲಮ್ಮನ ಕಥೆ', 'ಪರಶುರಾಮ ಕಾರ್ತಿಕರ ಕಾಳಗ', 'ಚಂದ್ರಹಾಸನ ಕಥೆ', 'ಚೋರಕಥೆ' ಮುಂತಾದ ನೂರಾರು ಕಥೆಗಳು ಇವೆ. ಕ್ರಿ.ಶ.೮ನೇ ಶತಮಾನದಲ್ಲಿ ನೀರ್ಗುಂದ ನಾಡನ್ನು ಆಳಿದ ವಿಕ್ರಮರಾಯನ ಮಗಳು ರತ್ನವತಿ (ರಾಜಕುಮಾರಿ)ಯನ್ನು ವಿವಾಹವಾಗಲು ಆಸೆಪಟ್ಟ ರತ್ನಾಪುರಿದೇಶ(ಈಗಿನ ಲಕ್ಕವ್ವನಹಳ್ಳಿ)ದ ರಾಜಕುಮಾರ ಚಿತ್ರಶೇಖರನು ಮಾರುವೇಷದಲ್ಲಿ ನೀರ್ಗುಂದದ ದುಷ್ಟಸಿಂಹವೊಂದನ್ನು ಸಾಹಸದಿಂದ ಕೊಂದು ರಾಜನನ್ನು ಮೆಚ್ಚಿಸಿ, ಸೌಂದರ್ಯವತಿಯಾದ ರಾಜಕುಮಾರಿ ರತ್ನವತಿಯನ್ನು ಲಗ್ನವಾಗುವ ಕಥೆಯನ್ನು ಒಳಗೊಂಡಿದೆ. ಕಳೆದ ಶತಮಾನದಲ್ಲಿ ಈ ಕಥೆಯನ್ನು ಆಧರಿಸಿದ್ದ ನಾಟಕವನ್ನು ಈ ಪ್ರದೇಶದಲ್ಲಿ ಆಡುತ್ತಿದ್ದು, ಹೆಚ್ಚು ಪ್ರಸಿದ್ಧಿ ಪಡೆದಿದ್ದಿತು. ಕೆಲವು ದಶಕಗಳ ಹಿಂದೆ ಗೊಂದಲಿಗ ಕಲಾವಿದರು ಈ ಕಥೆಯನ್ನು ಪದ್ಯ-ಗದ್ಯ ಮುಖೇನ ಚೌಡಿಕೆ ವಾದ್ಯದೊಂದಿಗೆ ಸಾದರಪಡಿಸುತ್ತಿದ್ದರು.

ತಾಲ್ಲೂಕಿನ ಬೂದಿಹಾಳು (ಇಂದಿನ ಶ್ರೀರಾಂಪುರ) ಪಾಳೆಯಪಟ್ಟು ಕ್ರಿ.ಶ.೧೫ನೇ ಶತಮಾನದಲ್ಲಿ ಗೊಲ್ಲ ಸಿರುಮನಾಯಕನಿಂದ ಆಳಲ್ಪಟ್ಟಿತು. ಈ ಪಾಳೆಯಗಾರನನ್ನು ಕುರಿತು ಕ್ರಿ.ಶ.೧೭ನೇ ಶತಮಾನದಲ್ಲಿ ಒಟ್ಟು ಮೂರು ಕಾವ್ಯ (ಸಾಂಗತ್ಯ) ಕೃತಿಗಳು ಬೇರೆ ಬೇರೆ ಕವಿಗಳಿಂದ ರಚನೆಗೊಂಡಿವೆ. ಕರ್ನಾಟಕದಲ್ಲಿ ಒಬ್ಬ ಪಾಳೆಯಗಾರನನ್ನು ಕುರಿತು ಮೂರು ಸಾಂಗತ್ಯ ಕೃತಿಗಳು ಬಂದಿರುವುದು, ಮೊದಲಿಗೆ ಕುಮಾರ ರಾಮನನ್ನು ಕುರಿತ ಕೃತಿಗಳು, ಅವುಗಳನ್ನು ಬಿಟ್ಟರೆ, ಬೂದಿಹಾಳು ಸಿರುಮನಾಯಕನನ್ನು ಕುರಿತ ಕೃತಿಗಳೇ ಅಪರೂಪದ ದಾಖಲೆಯಾಗಿದೆ. ಸಿರುಮನ ಕಾವ್ಯ ಸಮೂಹದ ವಿವರ ಹೀಗಿದೆ-

೧) 'ಸಿರುಮಣನಾಯಕನ ಸಾಂಗತ್ಯ' ಇದರ ಕರ್ತೃ-ಸಿದ್ಧಕವಿ

೨) 'ಸಿರುಮನ ಚರಿತೆ' ಇದರ ಕರ್ತೃ-ಕೆಂಚಸೆಟ್ಟಿಯ ಸುತರಾಮ

೩) 'ಗೊಲ್ಲಸಿರುಮನ ಚರಿತೆ' ಇದನ್ನು ಬರೆದ ಕವಿ-ಮಲ್ಲಕವಿ.

ಈ ಮೂರು ಸಾಂಗತ್ಯ ಕೃತಿಗಳನ್ನು ಸಂಶೋಧಕರಾದ ಡಾ॥ ಎಂ.ಎಂ. ಕಲ್ಬುರ್ಗಿ ಅವರು ಸಂಪಾದಿಸಿದ್ದಾರೆ. ಮೊದಲನೆ ಕೃತಿಯ ತಾಳೆಗರಿಯ ಪ್ರತಿಯು

ಮದ್ರಾಸ್ ಓರಿಯಂಟಲ್ ಮಾನ್ಯುಸ್ಕ್ರಿಪ್ಟ್ ಲೈಬ್ರರಿಯಲ್ಲಿದೆ ಹಾಗೂ ೧೯೩೬ರಲ್ಲಿ ಸಿದ್ಧಪಡಿಸಿದ ಇದರ ನಕಲು ಕಾಗದ ಪ್ರತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಎರಡನೆಯ ಕೃತಿಯ ಕಾಗದ ಪ್ರತಿಯ ಸಹಾಯದಿಂದ ೧೯೫೧ರಲ್ಲಿ ಇದರ ಗದ್ಯಾನುವಾದವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಕಟಿಸಿದ್ದಾರೆ. ಮೂರನೆಯ ಕೃತಿಯ ಒಂದು ತಾಳೆಯ ಪ್ರತಿ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿದೆ, ಇದರ ಮತ್ತೊಂದು ತಾಳೆ ಪ್ರತಿ ಎಸ್. ಶಿವಣ್ಣ ಅವರ ವಶದಲ್ಲಿದ್ದಿತು. ವಿಜಯನಗರದ ನರಸಿಂಹನ ಸೇನೆ ಬಂದು ಮುತ್ತಿದಾಗ ಸಿರುಮ ಮತ್ತು ಅವನ ಶೂರ ಪುತ್ರನಾದ ಕುಮಾರ ಮಲ್ಲ ತಮ್ಮ ಸೇನೆಯ ಬಲದಿಂದ ಅನೇಕ ತಿಂಗಳ ಕಾಲ ಮಾಡುವ ಯುದ್ಧ ಮತ್ತಿತರ ವರ್ಣನೆಗಳು ಈ ಕೃತಿಗಳಲ್ಲಿ ಸವಿವರವಾಗಿ ಬಣ್ಣಿಸಲಾಗಿದೆ. ಸಿದ್ಧಕವಿಯು ತನ್ನ ಕೃತಿಯಲ್ಲಿ ಸಿರುಮನ ತಂದೆಯಾದ ಕಾಚನಾಯಕನು ವಿಜಯನಗರದ ವಿರೂಪಾಕ್ಷನ ಮಗ ಪ್ರೌಢರಾಯನ ಅರಮನೆಯ ದ್ವಾರಪಾಲಕನಾಗಿದ್ದು, ಕಾರಣಾಂತರದಿಂದ ಅಲ್ಲಿನ ಸೇನಾಪತಿ ಗುಂಡನೊಂದಿಗೆ ಪರಾಕ್ರಮದಿಂದ ಸೆಣಸಾಡುವ ಪ್ರಸಂಗ ಬಂದು, ಆ ಮಲ್ಲಯುದ್ಧ(ನೆಲದ ಹಗೇವಿನಲ್ಲಿ) ದಲ್ಲಿ ಕಾಚನಾಯಕನು ಗೆದ್ದು ಸೂಜಿಕಲ್ಲು ದುರ್ಗವನ್ನು ರಾಜನಿಂದ ಬಹುಮಾನವಾಗಿ ಪಡೆದನೆಂದೂ, ಅವನ ಮಗ ಸಿರುಮನು ಬೂದಿಹಾಳು ಸ್ಥಳದಲ್ಲಿ ಕೋಟೆ ನಿರ್ಮಿಸಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನೆಂದೂ ವಿಶೇಷವಾದ ಕಥೆಯನ್ನು ಪೀಠಿಕೆಯೋಪಾದಿಯಲ್ಲಿ ನಿರೂಪಿಸಿರುವ ಕಾವ್ಯ ಚಮತ್ಕಾರ ಸೊಗಸಾಗಿದೆ. ಒಟ್ಟಾರೆ, ಮೂರು ಕೃತಿಗಳು ಸಿರುಮನ ಸಮರೇತಿಹಾಸವನ್ನು ರೋಮಾಂಚನಕಾರಿಯಾಗಿ ಬಣ್ಣಿಸುತ್ತವೆ. ಬೂದಿಹಾಳು ಕೋಟೆಗೆ ಮುತ್ತಿಗೆ ಹಾಕುವ ಮುನ್ನ ವಿಜಯನಗರದ ಸಾಳ್ವ ನರಸಿಂಹನು ಸಿರುಮನ ಆಪ್ತನಾದ ಬಾಗೂರು ಕೋಟೆಯ ಗೋವಿಂದನನ್ನು ಸದೆ ಬಡಿಯುವ ಉದ್ದೇಶದಿಂದ ಬಾಗೂರನ್ನು ಮುತ್ತುವುದು, ಗೋವಿಂದನ ರಕ್ಷಣೆಗಾಗಿ ಸಿರುಮನ ಮಗ ಕಾಚನಾಯಕ ಬಾಗೂರು ಕೋಟೆಯನ್ನು ತಲುಪುವುದು, ಸಾಳುವ ನರಸಿಂಗ (ನರಸಿಂಹ)ನು ಕಾಚನನ್ನು ತನಗೊಪ್ಪಿಸಿದರೆ ಮುತ್ತಿಗೆಯನ್ನು ಹಿಂತೆಗೆಸುವುದಾಗಿ ಗೋವಿಂದನಿಗೆ ಕರಾರು ಹಾಕುವುದು. ಹೀಗೆ ಅನೇಕ ಯುದ್ಧತಂತ್ರಗಳನ್ನು ಕವಿ ಬಹು ಅರ್ಥವತ್ತಾಗಿ ಚಿತ್ರಿಸಿದ್ದಾನೆ. ಪ್ರಾದೇಶಿಕ ಊರುಗಳ ಹೆಸರುಗಳು, ಸಿರುಮನಲ್ಲಿದ್ದ ವೀರರ ಹೆಸರುಗಳು, ಬೂದಿಹಾಳಿನ ದೇವಾಲಯಗಳ ಹೆಸರುಗಳನ್ನು ಕವಿ ಸಂದರ್ಭಾನುಸಾರ ವಿವರಿಸಿದ್ದಾನೆ. ಬಾಗೂರಿನ ಶ್ರೀಮಂತಿಕೆ, ಬೂದಿಹಾಳು ಕೋಟೆಯ ವೈಭವಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ನಿಜಕ್ಕೂ ಸಿರುಮನ ಸಾಂಗತ್ಯಗಳು ಚಾರಿತ್ರಿಕ ಕಾವ್ಯಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಕೃತಿಗಳಿಗೆ ವಿಶೇಷವಾದ ಸ್ಥಾನವಿದೆ. ನಾಡಿನ ಸಾಹಿತ್ಯಕ್ಕೆ ಹೊಸದುರ್ಗ ತಾಲ್ಲೂಕಿನ ಅಪರೂಪದ ಕೊಡುಗೆ ಈ ಕೃತಿಗಳು. ಕ್ರಿ.ಶ.೧೭ನೇ ಶತಮಾನದವರೆನ್ನಲಾದ ಕೃತಿಕಾರರಾದ ಸಿದ್ಧಕವಿ, ಮಲ್ಲಕವಿ, ಮತ್ತು ಕೆಂಚಸೆಟ್ಟಿಯ

ಸುತ ರಾಮ ಇವರುಗಳು ಈ ಪ್ರದೇಶದ ಕೀರ್ತಿ ಶಿಖರರಾಗಿದ್ದು ಶಾಸನ ಕವಿಗಳ ತರುವಾಯ ಈ ಕವಿಗಳಿಗೆ ಮಹತ್ತರ ಸ್ಥಾನವಿದೆ. ಇತ್ತೀಚೆಗೆ ಈ ಮೂರು ಸಾಂಗತ್ಯ ಕೃತಿಗಳನ್ನು ಒಂದೇ ಸಂಪುಟದಲ್ಲಿ ಡಾ॥ ಎಂ.ಎಂ.ಕಲ್ಬುರ್ಗಿಯವರು ಹೊರತಂದಿದ್ದಾರೆ. ಈ ಹಿಂದೆ ಬಿಡಿ ಬಿಡಿಯಾಗಿ ಈ ಸಾಂಗತ್ಯಗಳನ್ನು ಅನುಕ್ರಮವಾಗಿ ೧೯೮೩, ೧೯೯೧ ಹಾಗೂ ೧೯೯೪ರಲ್ಲಿ ಅವರು ಸಂಪಾದಿಸಿ ಹೊರತಂದಿದ್ದರು. ಇದಕ್ಕೂ ಮುನ್ನ ಕೆಂಚ ಸೆಟ್ಟಿಯ ಸುತ ರಾಮಕವಿಯ ಸಿರುಮನ ಚರಿತೆಯನ್ನು ಆಧರಿಸಿ ಗದ್ಯರೂಪದಲ್ಲಿ ಬರೆದು ೧೯೫೧ರಲ್ಲಿ ಪ್ರಕಟಿಸಿರುವ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವ ಪೀಠಿಕೆ ಅತ್ಯಂತ ಉಪಯುಕ್ತ ವಾದುದಾಗಿದ್ದು, ತೆಲುಗಿನ ಕವಿಗಳಾದ ನಂದಿಮಲ್ಲಯ್ಯ–ಘಂಟಾಸಿಂಗಯ್ಯರು ಬರೆದಿರುವ 'ವರಾಹಪುರಾಣ'ದಲ್ಲಿ ಬೆಲಗೂರುಕೋಟೆ ಮತ್ತು ಬೂದಿಹಾಳು ಕೋಟೆಗಳನ್ನು ಸಾಳುವ ನರಸಿಂಗನ ಸೇನಾಪತಿ ಗೆದ್ದ ಬಗ್ಗೆ ವರ್ಣಿಸಿರುವುದನ್ನು ಉಲ್ಲೇಖಿಸಿರುತ್ತಾರೆ. ಅಲ್ಲದೆ ವಿಜಯನಗರದವರು ಬೂದಿಹಾಳು ಸಿರುಮನೊಂದಿಗೆ ನಡೆಸಿದ ಯುದ್ಧವು ಕ್ರಿ.ಶ. ೧೪೨೯ ಕ್ಕಿಂತ ಮೊದಲು ನಡೆದಿರುವುದಾಗಿ ನಿರ್ಣಯಿಸಿದ್ದಾರೆ. ('ಸಿರುಮನೃಪಾಲ' ಹುಲ್ಲೂರು ಶ್ರೀನಿವಾಸ ಜೋಯಿಸ್ ೧೯೫೧).

ಪೂರ್ವೋಕ್ತ 'ವೋರುಗಮಲ್ಲಮ್ಮನ ಕಥನ' ಮತ್ತು 'ಪರಶುರಾಮ ಕಾರ್ತಿಕರ ಕಾಳಗ'(ಓಲೆಗರಿ) ಬರೆದವರು ಹರುಷ ಜೋಗಿ ಎಂಬ ಹೆಸರು ತಾಳೆಗರಿಯಲ್ಲಿದ್ದು, ಕ್ರಿ.ಶ.೧೮೧೪ರಲ್ಲಿ ಬರೆದಿರಬಹುದಾಗಿದ್ದು, ೧೮೨೧ರಲ್ಲಿ ಪ್ರತಿ ಮಾಡಿರುವಂತಿದೆ. "ಶ್ರೀ ರೇವಣಸಿದ್ದೇಶ್ವರನ ಪಾದವೆ ಗತಿ" ಮೊದಲಾದ ಸ್ಥಳೀಯ ದೇವರ ಸ್ತುತಿ ವಾಕ್ಯಗಳು ಇದರಲ್ಲಿವೆ. 'ಓರುಗಲ್ಲಮ್ಮನ ಕಥನ'ದ ಕಡೆಯ ಭಾಗದಲ್ಲಿ ಮದಕರಿ ನಾಯಕನ ಹೆಸರು ಉಲ್ಲೇಖಗೊಂಡಿರುವುದು ಗಮನಾರ್ಹವಾದ ಸಂಗತಿಯಾಗಿದೆ.

**'ನರುಗಾನ ಹಳ್ಳಿಯ ಮೆದಕೇರಿಯ ತಮ್ಮಂದಿರಿತ್ತಾ**
**ರು ಹರುಷಾದಿ ತಾಳ ಚೌಡಿಕೆಯಾ (೯೧ನೇಯ ಪದ್ಯ)**

ಓರುಗಲ್ಲಮ್ಮ ದೇವತೆಗೆ ಚಿತ್ರದುರ್ಗದ ಮದಕರಿನಾಯಕ ಮತ್ತು ಅವನ ತಮ್ಮಂದಿರು ತಾಳ ಮತ್ತು ಚೌಡಿಕೆಗಳನ್ನು ಕಾಣಿಕೆಯಾಗಿ ಅರ್ಪಿಸಿದರೆಂದು ಇದರಿಂದ ತಿಳಿಯುವುದು. (ದಾವಣಗೆರೆ ಬಳಿಯ ನರುಗನಹಳ್ಳಿ ಗ್ರಾಮದ ಉಲ್ಲೇಖವಿದೆ). ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಗೆ ಇದೊಂದು ಪೂರಕ ಅಂಶವಾಗಿದೆ. ಮೇಲ್ಕಂಡ ಎರಡೂ ಕಥೆಗಳು ಪದ್ಯ ರೂಪದಲ್ಲಿದೆ. ('ಹೊಸದುರ್ಗ ಸೀಮೆ ಜಾನಪದ' – ಬಾಗೂರು ನಾಗರಾಜಪ್ಪ).

'ಚೋರಕಥೆ'ಯು ಈ ಪ್ರದೇಶದ ನೀರಗುಂದದ ರಾಜಕುಮಾರಿಯನ್ನು 'ರತ್ನಪುರ' ದೇಶದ (ಲಕ್ಕಿಹಳ್ಳಿ) ರಾಜಕುಮಾರ ಚಿತ್ರಶೇಖರನು ಮೋಹಿಸಿ ಮಾರುವೇಷದಲ್ಲಿ ಬಂದು, 'ನೀರಗುಂದದಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದ

ಸಿಂಹವನ್ನು ಕೊಂದು ಪರಾಕ್ರಮ ಮೆರೆದವರಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವುದಾಗಿ' ಡಂಗೂರ ಸಾರಿಸಿದ ರಾಜನ ಸವಾಲನ್ನು ಸ್ವೀಕರಿಸಿ, ಸಿಂಹವನ್ನು ಕೊಂದು ರಾಜಕುಮಾರಿಯನ್ನು ಲಗ್ನವಾಗುವ ಕಥೆಯನ್ನು ಒಳಗೊಂಡಿದ್ದು ಇದನ್ನು ಬರೆದ ಕವಿಯ ಹೆಸರು ಕೃತಿಯ ಪ್ರತಿಯಲ್ಲಿ ಗೋಚರಿಸುವುದಿಲ್ಲ. ಸ್ತುತಿ ಪದ್ಯಗಳಲ್ಲಿ ಆದ್ಯ ವಚನಕಾರ ದೇವರ ದಾಸಿಮಯ್ಯನವರನ್ನು ಸ್ಮರಿಸಿರುವುದರಿಂದ ಈ ಕೃತಿಯು ಕ್ರಿ.ಶ.೧೧ನೆಯ ಶತಮಾನದ ನಂತರ ರಚಿತವಾಗಿರುವುದು ಖಚಿತವಾಗುತ್ತದೆ. ಕ್ರಿ.ಶ.೮ನೇ ಶತಮಾನದ ನೀರ್ಗುಂದ ದೇಶದ ವಿಕ್ರಮರಾಯನ ಮಗಳು (ರಾಜಕುಮಾರಿ) ರತ್ನವತಿಯ ಕಥೆ ಇದಾಗಿದ್ದು, ಅವಳನ್ನು ಲಗ್ನವಾಗಲು ರತ್ನಪುರಿ ದೇಶದ ಚಿತ್ರಶೇಖರನು ಮಾರುವೇಷದಲ್ಲಿ ಬಂದುದರಿಂದಾಗಿ, ಈ ಕಥೆಗೆ ಕವಿಯು 'ಚೋರಕಥೆ' ಎಂದು ಕರೆದಿರಬಹುದು. ಮೇಲ್ಕಂಡ 'ಓರುಗಲ್ಲಮ್ಮನ ಕಥನ' ತಾಳೆಗರಿ ಕಟ್ಟು ಮತ್ತು ಪ್ರಸ್ತುತ 'ಚೋರಕಥೆ'ಯ ಹಸ್ತಪ್ರತಿ (ಕಾಗದದ ಪ್ರತಿ) ಬೇರೆ–ಬೇರೆ ವರ್ಷಗಳಲ್ಲಿ ದೊರೆತಿರುತ್ತವೆ. 'ಶಿವಲೀಲಾಮೃತ' ಎಂಬ ಕಾಗದದ ಪ್ರತಿ ಸಹ ದೊರೆತಿದೆ. ಇನ್ನೂ ಅನೇಕ ಗ್ರಾಮಗಳಲ್ಲಿ ಈ ರೀತಿಯ ಓಲೆಗರಿಕಟ್ಟುಗಳು–ಕಾಗದದ ಹಸ್ತಪ್ರತಿಗಳು ಲಭ್ಯವಿದೆ. ಕ್ರಿ.ಶ.೧೩೦೦ರಲ್ಲಿದ್ದ ಚನ್ನಬಸವ ಕವಿ 'ರೇಣುಕಾರ್ಯ ಚರಿತೆ' ಬರೆದಿದ್ದು, ಇವನು ದೇವಪುರದವನೆನ್ನಲಾಗಿದೆ.

## ಆಧುನಿಕ ಸಾಹಿತ್ಯ

ಕಳೆದ ತಲೆಮಾರಿನಲ್ಲಿ ಮಳಲಿ ಶ್ಯಾಮಕವಿ (ಯಕ್ಷಗಾನ ಕಥಾ ರಚನೆಕಾರ) ಹಾಗೂ ಹೊಸದುರ್ಗದ ಸುಂದರಮ್ಮ (ದೇವರುಗಳ ಬಗ್ಗೆ ಭಕ್ತಿಗೀತೆ ರಚನೆಗಾರ್ತಿ) ಇದ್ದರೆನ್ನಲಾಗಿದೆ. ಆಧುನಿಕ ಸಾಹಿತ್ಯ ರಚನೆಕಾರರಲ್ಲಿ ಅನೇಕ ಬರಹಗಾರರು ತಾಲ್ಲೂಕಿನವರಾಗಿದ್ದು, ಆ ಬಗೆಗೆ ಪರಿಚಯವನ್ನು ಮುಂದೆ ನೀಡಲಾಗಿದೆ.

## ಡಾ॥ ಜಿ.ಎಸ್.ಶಿವರುದ್ರಪ್ಪ

ಕನ್ನಡದ ರಾಷ್ಟ್ರಕವಿಗಳಲ್ಲೊಬ್ಬರಾದ ಡಾ॥ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಬಾಲ್ಯ ಜೀವನವನ್ನು ಕಳೆದುದು ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದಲ್ಲಿ. ಶಿವರುದ್ರಪ್ಪನವರು ಪ್ರಾಥಮಿಕ ಶಾಲೆ ಓದುತ್ತಿದ್ದಾಗ, ಶಾಲಾ ಶಿಕ್ಷಕರಾಗಿದ್ದ ಇವರ ತಂದೆಗೆ ಬೇರೆಡೆಯಿಂದ ಬೆಲಗೂರು ಗ್ರಾಮಕ್ಕೆ ವರ್ಗಾವಣೆಯಾಯಿತು. ಈ ಪ್ರಸಂಗವನ್ನು ಡಾ॥ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ– 'ಬೆಲಗೂರಿಗೆ ವರ್ಗವಾದ ತಂದೆಯವರ ಜೊತೆ ನನ್ನ ಶಿಕ್ಷಣ ಬೆಲಗೂರಿನ ಪ್ರಾಥಮಿಕ ಶಾಲೆಗೆ ಸ್ಥಳಾಂತರಗೊಂಡಿತು. ಹೊಸದುರ್ಗದ ತೆಂಗಿನ ಮರಗಳ ಸೀಮೆಯ

ಈ ಪರಿಸರದ ಚೆಲುವೇ ಬೇರೆ. ಎಲ್ಲಿ ನೋಡಿದರೂ ಗರಿಬಿಚ್ಚಿಕೊಂಡು ಈಗಲೋ ಆಗಲೋ ಹಾರಿಹೋಗಲೆಂದು ನಿಂತ ಒಂಟಿಕಾಲಿನ ಅಸಂಖ್ಯ ಪಕ್ಷಿಗಳಂತೆ ಹಬ್ಬಿಕೊಂಡ ತೆಂಗಿನಮರಗಳು, ಎಲ್ಲಾ ಮರಗಳಿಗಿಂತ ಭಿನ್ನವಾದದ್ದು. ಇವುಗಳ ಅಸ್ತಿತ್ವ ಎಲ್ಲಾ ಮರಗಳೂ ಒಳಗಾಗುವ ಋತುಗಳ ಪರಿವರ್ತನೆಯಿಂದ ಇವಕ್ಕೆ ವಿನಾಯಿತಿ. ಚಳಿಗಾಲದಲ್ಲಿ ಎಲೆ ಕಳಚಿ ವಸಂತದಲ್ಲಿ ಚಿಗುರಬೇಕೆಂಬ ಹಂಗಿಗೆ ಹೊರಗಾದ ನಿಲುವು ಇವುಗಳದ್ದು, ಈ ಊರಲ್ಲಿ ನಾವಿದ್ದ ಬಾಡಿಗೆಯ ಮನೆಯ ಅಕ್ಕಪಕ್ಕದಲ್ಲಿ ಕುಂಬಾರರ ಹಾಗೂ ನೇಕಾರರ ಕೇರಿಗಳು. ಈ ಎರಡೂ ಕೇರಿ ಅವರ ಆಕರ್ಷಕ ಕೇಂದ್ರಗಳು. ದೇವಾಂಗದವರ ಕೇರಿಯಲ್ಲಿ ಹಾಸಿಕೊಂಡ ಮಗ್ಗದ ಒಳಗೆ ಲಾಳಿಯಾಡಿದಂತೆ, ರೂಪುಗೊಳ್ಳುತ್ತಿದ್ದ ಬಣ್ಣದ ಬಟ್ಟೆ ಒಂದು ಪವಾಡದಂತೆ ತೋರುತ್ತಿತ್ತು. ನೇಕಾರ ಮಗ್ಗದ ನೂಲುಗಳ ಹಾಸು, ಲಾಳಿಯಾಡಿದಂತೆ ಬಟ್ಟೆಯಾಗಿ ಪರಿವರ್ತಿತವಾಗುವ ಈ ಕ್ರಿಯೆಗಳು ಕವಿತೆ ಹುಟ್ಟುವುದು ಹೇಗೆ ಎಂಬ ರಹಸ್ಯವನ್ನು ನನಗೆ ತೋರಿಸಿಕೊಟ್ಟಿವೆ. (ಕುಂಬಾರನ ತಿಗರಿಯಾಡಿದಂತೆ ಹಸಿಮಣ್ಣು ಮಡಕೆಯಾಗುವುದನ್ನು ಸಹ ವಿವರಿಸಿದ್ದಾರೆ). ('ತುಷಾರ' ಮಾಸಪತ್ರಿಕೆ, ಜನವರಿ ೧೯೯೧) ಡಾ॥ ಶಿವರುದ್ರಪ್ಪನವರ ಈ ಬರಹದಲ್ಲಿ ಹೊಸದುರ್ಗ ಸೀಮೆಯ ತೆಂಗಿನ ತೋಟಗಳ ಸೊಬಗನ್ನು ಚಿತ್ರಿಸಿರುವುದನ್ನು ಕಾಣಬಹುದು. ಶಿವರುದ್ರಪ್ಪನವರ ಕವನ ಸಂಕಲನಗಳು, ಕಾವ್ಯ ವಿಮರ್ಶೆ ಮುಂತಾದ ಕೃತಿಗಳು ಕನ್ನಡ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಗಳಾಗಿವೆ.

**ಟಿ.ಕೆ.ರಾಮರಾವ್**

ಕೆಲವು ದಶಕಗಳ ಹಿಂದೆ ಕನ್ನಡದ ಅತ್ಯಂತ ಜನಪ್ರಿಯ ಪತ್ತೇದಾರಿ ಕಾದಂಬರಿಗಳನ್ನು, ನಾಡಿನ ಪತ್ರಿಕೆಗಳಲ್ಲಿ ಧಾರಾವಾಹಿಗಳನ್ನು ಬರೆದು ಪ್ರಸಿದ್ಧರಾಗಿದ್ದ ಟಿ.ಕೆ.ರಾಮರಾವ್ ಅವರು ಮೂಲತಃ ಹೊಸದುರ್ಗದವರು. ಇವರ ಅನೇಕ ಪತ್ತೇದಾರಿ ಕಾದಂಬರಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಸಂಚಲನ ಮೂಡಿಸಿದ ಕೃತಿಗಳಾಗಿವೆ. ಏಕಕಾಲದಲ್ಲಿ ಇವರು ಮೂರು-ನಾಲ್ಕು ದೈನಿಕಗಳಲ್ಲಿ ಪತ್ತೇದಾರಿ ಧಾರಾವಾಹಿಗಳನ್ನು ಬರೆಯುತ್ತಿದ್ದ ಸವ್ಯಸಾಚಿ ಎನ್ನಿಸಿದ್ದರು. ಕಥಾ ನಿರೂಪಣೆಯಲ್ಲಿ ಅವರು ಬಳಸುತ್ತಿದ್ದ ಭಾಷೆ ಕನ್ನಡದಲ್ಲಿ ಹೊಸ ರೀತಿಯ ತಂತ್ರಗಾರಿಕೆಯದಾಗಿದ್ದಿತು.

**ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ**

ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿ ಗ್ರಾಮದ 'ತರಳಬಾಳು ಬೃಹನ್ಮಠ'ದ ಶಾಖಾಮಠದ ಪೀಠಾಧ್ಯಕ್ಷರಾಗಿ (ದಿನಾಂಕ: ೨೫-೧೨-೧೯೭೭ರಂದು) ರುವ ಸ್ವಾಮೀಜಿಯವರು ದಿನಾಂಕ: ೪-೯-೧೯೫೧ರಲ್ಲಿ ಬ್ಯಾಡಗಿ ತಾಲ್ಲೂಕಿನ ಅಣಬೂರು ಗ್ರಾಮದ ನಾಗಯ್ಯ ಮತ್ತು ಶಿವಮ್ಮ ದಂಪತಿಗಳ ಪುತ್ರನಾಗಿ ಜನಿಸಿದರು. ಇವರ

ಹುಟ್ಟು ಹೆಸರು ಕರಿಬಸವಯ್ಯ ನಾಗಯ್ಯ ಪಂಡಿತಾರಾಧ್ಯಮಠ. ಶಾಲೆಗಳಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅತ್ಯಂತ ಚುರುಕುತನದ ಪ್ರತಿಭಾಶಾಲಿ, ಪ್ರೌಢಶಾಲೆಯ ನಂತರ ಆರ್ಥಿಕ ತೊಂದರೆ ಎದುರಾದುದರಿಂದ ನೆರವಿನ ನಿರೀಕ್ಷೆಯಿಂದ ಸಿರಿಗೆರೆಗೆ (ನೌಕರಿಗಾಗಿ) ಬಂದವರಿಗೆ ತರಳಬಾಳು ಬೃಹನ್ಮಠದ ಹಿರಿಯ ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳಿಂದ ಸದರಿ ಕೆ.ಎನ್.ಪಂಡಿತಾರಾಧ್ಯರಿಗೆ ವಿದ್ಯಾಭ್ಯಾಸಕ್ಕೆ ಮಠದ ಆಶ್ರಯ ದೊರೆಯಿತು. ಅಲ್ಲಿನ ಎಂ.ಬಿ.ಆರ್ ಕಾಲೇಜಿನಲ್ಲಿ ಬಿ.ಎ. ತತ್ವಶಾಸ್ತ್ರದಲ್ಲಿ ಪ್ರಥಮ ರ್‍ಯಾಂಕ್-ಬಂಗಾರದ ಪದಕ ಲಭಿಸಿತು. ನಂತರ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಎಂ.ಎ ಪದವಿಯನ್ನು ಪಡೆದರು.

ಸ್ವಾಮೀಜಿಗಳು ಕುಗ್ರಾಮವಾಗಿದ್ದ ಸಾಣೇಹಳ್ಳಿಯನ್ನು ಸಾಂಸ್ಕೃತಿಕ ಗ್ರಾಮವನ್ನಾಗಿಸುವ ಪವಾಡ ಮಾಡಿದ್ದಾರೆ. ತಮ್ಮೊಳಗಿದ್ದ ಕಲೆ-ಸಾಹಿತ್ಯಗಳ ಅಭಿರುಚಿಯ ಅಭಿವ್ಯಕ್ತಿಗೆ ತೊಡಗಿ ಯಶಸ್ಸನ್ನು ಕಾಣುತ್ತಿದ್ದಾರೆ. 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಕವಿವಾಣಿಯಂತೆ, ನಾಟಕ ರಂಗದೆಡೆಗೆ ಇವರ ಮನಸ್ಸು ತುಡಿಯಿತು. ೧೯೮೭ರಲ್ಲಿ 'ಶ್ರೀ ಶಿವಕುಮಾರ ಹವ್ಯಾಸಿ ಕಲಾಸಂಘ'ವನ್ನು ಸ್ಥಾಪಿಸಿದರು. ೧೯೯೭ರಲ್ಲಿ 'ಶಿವಸಂಚಾರ' ರೆಪರ್ಟರಿಯನ್ನು ಪ್ರಾರಂಭಿಸಿದರು. ೨೦೦೫ರಲ್ಲಿ ದೇಶಕ್ಕೆ ಮಾದರಿ ಎನ್ನಿಸುವ (ಗ್ರೀಕ್ ಮಾದರಿಯ) 'ಬಯಲು ರಂಗಮಂದಿರ'ವನ್ನು ರೂ.೩೦ಲಕ್ಷಕ್ಕೂ ಅಧಿಕ ವೆಚ್ಚದಲ್ಲಿ ನಿರ್ಮಿಸಿದರು. ಇದರೊಂದಿಗೆ ಸಾಹಿತ್ಯ ಕೃಷಿಯನ್ನು ಸಹ ನಡೆಸುತ್ತ ಬಂದಿದ್ದಾರೆ. ವೈಚಾರಿಕ ಲೇಖನಗಳನ್ನು ಪುಸ್ತಕಗಳ ರೂಪದಲ್ಲಿ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಅಂಕಣಕಾರರಾಗಿ ಬರೆದರು.

ಅಲ್ಲದೆ 'ಜೀವನ ದರ್ಶನ', 'ಕೈದೀವಿಗೆ', 'ಬದುಕು', 'ಹುಟ್ಟುಸಾವುಗಳ ಮಧ್ಯೆ', 'ಜೀವದ ಉಳಿವಿಗೆ ಅಳಿಲುಸೇವೆ', 'ಆದರ್ಶವಾಸ್ತವ', 'ಮರುಭೂಮಿ', 'ಸಮರಸ', 'ಸಮಾಧಿಯ ಮೇಲೆ', 'ಹುತ್ತ ಮತ್ತು ಹಾವು', 'ಕಾಯಕ', 'ದಾಸೋಹ', 'ಪ್ರಸ್ತುತ' ಮುಂತಾದ ೨೫ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಸ್ವಾಮೀಜಿಯವರ ರಂಗಭೂಮಿ ಸಾಧನೆಯನ್ನು ಗುರುತಿಸಿ ಸರ್ಕಾರವು ಇವರಿಗೆ ' ನಾಟಕ ಅಕಾಡೆಮಿ ಫೆಲೋಷಿಪ್' (೧೯೯೮) ನೀಡಿದೆ. ೨೦೦೪ರಲ್ಲಿ ಹೊಸದುರ್ಗದಲ್ಲಿ ಜರುಗಿದ ೯ನೇ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಸ್ವಾಮೀಜಿಯವರು, ಅದೇ ವರ್ಷ ರಾಜ್ಯ ಸರ್ಕಾರದಿಂದ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ'ಗೆ ಪಾತ್ರರಾದರು. ೨೦೦೬ರಲ್ಲಿ 'ಶಂಕರಗೌಡ ಪ್ರಶಸ್ತಿ', ೨೦೧೦ರಲ್ಲಿ 'ದುರ್ಗಶ್ರೀ ಪ್ರಶಸ್ತಿ', ೨೦೧೨ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಹಾಗೂ ೨೦೦೨ರಲ್ಲಿ 'ಅಳ್ವಾಸ್ ನುಡಿಸಿರಿ ಪ್ರಶಸ್ತಿ' ಮುಂತಾದ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಮೌಢ್ಯಾಚರಣೆಗಳನ್ನು ಬಿಡುವಂತೆ ಶ್ರೀಗಳು ತಮ್ಮ ಉಪನ್ಯಾಸಗಳಲ್ಲಿ ಕರೆ ನೀಡಿದ್ದಾರೆ.

**ಲಿಂಗೈಕ್ಯ ಶ್ರೀ ಲೇಪಾಕ್ಷಿ ಮಹಾಸ್ವಾಮಿಗಳು**

ಬ್ರಹ್ಮವಿದ್ಯಾ ನಗರದ ಭಗೀರಥ ಪೀಠ ಬೃಹನ್ಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಲೇಪಾಕ್ಷಿ ಮಹಾಸ್ವಾಮಿಗಳು, ಸಾಹಿತ್ಯಾಕಾಂಕ್ಷಿಗಳಾಗಿದ್ದು, ಅನೇಕ ಗ್ರಾಮ ಸಾಹಿತ್ಯ ಗೋಷ್ಠಿಗಳನ್ನು ನಡೆಸಿದ್ದರು. ಇವರು ಸ್ವತಃ ರಚಿಸಿದ್ದ 'ಶ್ರೀ ಉಪ್ಪಾರ ಚರಿತಾಮೃತ' ಗ್ರಂಥವು ಇತ್ತೀಚೆಗೆ ಪ್ರಕಟವಾಗಿದೆ.

**ಪ್ರೊ॥ ಹೆಚ್.ಶ್ರೀಶೈಲ ಆರಾಧ್ಯ**

ತಾಲ್ಲೂಕಿನ ಸೋಮೇನಹಳ್ಳಿ ಗ್ರಾಮದ ಜೆ.ಹಾಲಾರಾಧ್ಯ ಮತ್ತು ಮರುಳಮ್ಮ ದಂಪತಿಗಳ ಪುತ್ರನಾಗಿ ೧೯೪೬ರಲ್ಲಿ ಜನಿಸಿದ ಹೆಚ್. ಶ್ರೀಶೈಲಾರಾಧ್ಯರು ಕನ್ನಡ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಚಿತ್ರದುರ್ಗ ಬೆಟ್ಟಸಾಲಿನ ಪ್ರಾಗೈತಿಹಾಸಿಕ ಗುಹಾಚಿತ್ರಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ. 'ಸಂಶೋಧನೆಯ ಹಾದಿಯಲ್ಲಿ' ಎಂಬ ಗ್ರಂಥವನ್ನು (೧೯೮೩) ಮತ್ತು 'ಸೀಮೇಗಿಲ್ಲದೋರಸೂರಿನ ಕೆಳಗೆ' ಎಂಬ ಹಾಸ್ಯ ಪ್ರಬಂಧಗಳ ಸಂಕಲನ (೧೯೮೩)ವನ್ನು, 'ಚಿತ್ರದುರ್ಗ' ಎಂಬ ಮಕ್ಕಳ ಕಿರುಪುಸ್ತಕ (೧೯೯೫)ವನ್ನು ಬರೆದು ಪ್ರಕಟಿಸಿದ್ದಾರಲ್ಲದೆ, ತ.ರಾ.ಸು.ರವರ ಸಂಸ್ಮರಣ ಗ್ರಂಥ 'ಗಿರಿಮಲ್ಲಿಗೆ'ಯನ್ನು (೧೯೮೬) ಸಂಪಾದಿಸಿದ್ದಾರೆ. ಅನೇಕ ಲೇಖನಗಳನ್ನು ಪತ್ರಿಕೆಗಳಿಗೆ, ಸ್ಮರಣಸಂಚಿಕೆ–ಸಂಪುಟಗಳಿಗಾಗಿ ಬರೆದಿದ್ದಾರೆ. ಉತ್ತಮ ವಾಗ್ಮಿಗಳಾಗಿ ಹೆಸರು ಪಡೆದಿರುವ ಇವರು, ೧೯೯೬ರಲ್ಲಿ ಮತ್ತೋಡು ಗ್ರಾಮದಲ್ಲಿ ಜರುಗಿದ ಹೊಸದುರ್ಗ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಚಿತ್ರದುರ್ಗದಲ್ಲಿ ನೆಲೆಸಿರುವ ಶ್ರೀಶೈಲ ಆರಾಧ್ಯರು ಚಿತ್ರದುರ್ಗ ಜಿಲ್ಲೆಯ ಈ ತಲೆಮಾರಿನ ಹಿರಿಯ ಸಂಶೋಧಕರೆಂಬ ಜನಾದರಣೆಗೆ ಪಾತ್ರರಾಗಿದ್ದಾರೆ. ಅನೇಕ ವಿಚಾರ ಗೋಷ್ಠಿಗಳಲ್ಲಿ ಇವರು ಪ್ರಬಂಧಗಳನ್ನು ಮಂಡಿಸಿದ್ದಾರೆ.

**ಬಾಗೂರು ಆರ್. ನಾಗರಾಜಪ್ಪ**

ಸ್ವಾತಂತ್ರ್ಯ ಹೋರಾಟಗಾರರಾದ ಬಾಗೂರಿನ ಡಿ.ರಾಮಯ್ಯ ಮತ್ತು ಅತ್ತಿಮಗೆ ಗಂಗಮ್ಮ ದಂಪತಿಗಳ ಪುತ್ರನಾಗಿ ದಿನಾಂಕ ೧೭ ಫೆಬ್ರವರಿ ೧೯೫೪ರಲ್ಲಿ ಜನಿಸಿದ ಬಾಗೂರು ಆರ್. ನಾಗರಾಜಪ್ಪನವರು ವಿದ್ಯಾರ್ಥಿ ದಿಸೆಯಿಂದಲೇ ಸಾಹಿತ್ಯಾಸಕ್ತಿ ಹೊಂದಿದವರು. ಪಿ.ಯು.ಸಿ. ವಿದ್ಯಾರ್ಥಿಯಾಗಿದ್ದಾಗ ಇವರ ಮೊದಲ ಲೇಖನ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ (೧೯೭೧) ಪ್ರಕಟವಾಗಿದೆ. ಮಲ್ಲಾಡಿ ಹಳ್ಳಿಯ ಪ್ರೌಢಶಾಲೆಯಲ್ಲಿ ಶಾಲಾ ವಾರ್ಷಿಕ ಸಂಚಿಕೆಯಲ್ಲಿ ಕವನ–ಕಿರುಹಾಸ್ಯ ನಾಟಕ ಪ್ರಕಟವಾಗಿದೆ. ಅಲ್ಲಿ ಶಿಕ್ಷಕರಾಗಿದ್ದ ಎಚ್.ಎಸ್.ವೆಂಕಟೇಶಮೂರ್ತಿ, ಎನ್.ಎಸ್.

ಚಿದಂಬರರಾವ್‌ರವರ ಪ್ರಭಾವದಿಂದ ಲೇಖಕರಾದವರು. ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ. 'ಉತ್ತಾರೇಮಳೆ' ಕವನಸಂಕಲನ (೧೯೭೭), 'ಹೊಸದುರ್ಗದ ಸುತ್ತ', ಲೇಖನಗಳು (ಐತಿಹಾಸಿಕ) (೧೯೮೪), 'ನೆಲೆ' ಕಥಾಸಂಕಲನ (೨೦೦೪), 'ಹೊಸದುರ್ಗಸೀಮೆ ಜಾನಪದ' (ಕ್ಷೇತ್ರಾಧ್ಯಯನ ಲೇಖನಗಳು) ೨೦೦೪, 'ಹೊಸದುರ್ಗದ ಒಡಲಾಗೆ' (ಜಾನಪದ ತ್ರಿಪದಿಗಳ ಸಂಗ್ರಹ) ೨೦೦೫, 'ಹೊಸದುರ್ಗ ತಾಲ್ಲೂಕು ದರ್ಶನ'– ಕೈಪಿಡಿ (೧೯೮೬), 'ಹೆಗ್ಗೆರೆ ಬಸದಿ (೨೦೦೨), 'ಮೇರುನಟಿ ಶ್ರೀಮತಿ ಉಮಾಶ್ರೀ' (ಕೈಪಿಡಿ) ೨೦೧೦, 'ಚಿಂತನ ಲೋಕದ ಒಂಟಿಸಲಗ: 'ನಾಡೋಜ' ಕೆ.ಜಿ.ಎನ್–(ಕೈಪಿಡಿ)–೨೦೧೨. 'ಸೋಮವಾರ ಪೇಟೆ ತಾಲ್ಲೂಕು ದರ್ಶನ' (ಕೈಪಿಡಿ)– ೧೯೮೭, 'ದೇವಾಂಗ ಪರಂಪರೆ(೨೦೧೪) ಮುಂತಾದ ಇವರ ಕೃತಿಗಳು ಪ್ರಕಟವಾಗಿದ್ದು, 'ಹೊಸದುರ್ಗಸೀಮೆ ಜಾನಪದ' ಕೃತಿಗೆ ವರ್ಷದ ಉತ್ತಮ ಜಾನಪದ ಕೃತಿ ಪ್ರಶಸ್ತಿಯು ಚೆನ್ನೈ ಕನ್ನಡ ಬಳಗದಿಂದ (೨೦೦೫–೦೬) ಹಾಗೂ 'ದೇವರ ದಾಸಿಮಯ್ಯ' ಕೃತಿಗೆ ಬೆಳಗಾವಿಯ ಕಳಸದ ಸಾಹಿತ್ಯ ಪ್ರತಿಷ್ಠಾನದಿಂದ 'ಸಾಹಿತ್ಯಶ್ರೀ' ಪ್ರಶಸ್ತಿ (೨೦೦೫) ಲಭಿಸಿರುತ್ತದೆ. ೨೦೧೩ರಲ್ಲಿ ಬೂದಾಳು ಶ್ರೀರಾಂಪುರದಲ್ಲಿ ಜರುಗಿದ ಹೊಸದುರ್ಗ ತಾಲ್ಲೂಕು ೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಗೌರವಕ್ಕೆ ಪಾತ್ರರಾಗಿದ್ದಾರೆ. 'ಹೊಸದುರ್ಗ ತಾಲ್ಲೂಕು ಗ್ಯಾಸೆಟಿಯರ್' ಮತ್ತು 'ಭಾಗ್ಯಪುರಿ ಸಣ್ಣಕ್ಕಿ ಬಾಗೂರು' ಇವರ ಇತ್ತೀಚಿನ ಕೃತಿಗಳು.

**ನಟರಾಜ್ ಎಸ್.ಬೂದಾಳು**

ಹೊಸದುರ್ಗ ತಾಲ್ಲೂಕು ಬೂದಾಳು (ಶ್ರೀರಾಂಪುರ) ಗ್ರಾಮದಲ್ಲಿ ೧೯೫೯ರಲ್ಲಿ ಜನಿಸಿದ ಇವರು ತಮ್ಮ ವಿದ್ಯಾಭ್ಯಾಸದ ತರುವಾಯ ನಾಲ್ಕು ವರ್ಷಗಳ ಕಾಲ ಬೇಸಾಯದಲ್ಲಿ ನಿರತರಾಗಿದ್ದರು. ನಂತರ ಅಂಚೆ ಇಲಾಖೆಯಲ್ಲಿ ಹನ್ನೆರಡು ವರ್ಷ ಸೇವೆ ಸಲ್ಲಿಸಿ, ತದನಂತರ ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಪ್ರಾರಂಭಿಸಿ, ಪ್ರಸ್ತುತ ಗುಬ್ಬಿ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಬುದ್ಧ–ಅಲ್ಲಮ–ನಾಗಾರ್ಜುನ ಮುಂತಾದವರ ಬಗ್ಗೆ ಪ್ರಭುತ್ವದಿಂದ ಮಾತನಾಡುವರು. 'ಕನ್ನಡ ಸಾಹಿತ್ಯ ಲೋಕದ ಈಗಿನ ಮೌನ ಒಂದು ಗರ್ಭವನ್ನು ಧರಿಸಿರುವಂತಹ ಸ್ತಬ್ಧತೆ. ಕನ್ನಡಕ್ಕೆ ಖಂಡಿತವಾಗಿಯೂ ಅಳಿವು ಇಲ್ಲ' ಎಂಬ ನಿಲುವು ಬೂದಾಳರದು. ಇವರ ಕೃತಿಗಳು– 'ಕಪ್ಪು ಹುಡುಗನ ಬೆಳಗು' ಮತ್ತು 'ಸೂಜಿಗಲ್ಲು ಹುಡುಗಿ' (ಕವನ ಸಂಕಲನಗಳು), 'ನಾಗಾರ್ಜುನನ ಮೂಲ ಮಧ್ಯಮ ಕಾರಿಕಾ', 'ನಾಗಾರ್ಜುನನ ಕೃತಿಗಳು ಮತ್ತು ತಾತ್ವಿಕತೆ' 'ಅಲ್ಲಮಪ್ರಭು ಮತ್ತು ನಾಗಾರ್ಜುನ–ಒಂದು ತೌಲನಿಕ ಅಧ್ಯಯನ' (ವೈಚಾರಿಕ ಲೇಖನಗಳ ಸಂಕಲನಗಳು), 'ಕನ್ನಡ ಕಾವ್ಯಮೀಮಾಂಸೆ' (ವಿಮರ್ಶೆ), ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ತತ್ವಪದಕಾರರು' ಹಾಗೂ

'ದಲಿತ ಕಾವ್ಯ ಹಣತೆ' (ಜಿ.ಎಸ್.ಎಸ್ ಅಭಿನಂದನಾ ಗ್ರಂಥ) ಸಂಪಾದನಾ ಕೃತಿಗಳು. ಬೂದಾಳರ ಪ್ರತಿಭೆಗೆ ಸಂದಿರುವ ಪ್ರಶಸ್ತಿಗಳು–'ಪು.ತಿ.ನ ಕಾವ್ಯ ಪ್ರಶಸ್ತಿ' (೨೦೦೦), 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' (೨೦೦೨), 'ವೀಚಿ ಸಾಹಿತ್ಯ ಪ್ರಶಸ್ತಿ' (೨೦೦೮), ಕಾವ್ಯಾನಂದ ಪ್ರಶಸ್ತಿ' (೨೦೦೯), 'ವರ್ಧಮಾನ ಪ್ರಶಸ್ತಿ (೨೦೧೧) ಇತ್ಯಾದಿ.

**ಟಿ.ಎಸ್.ರಾಜೇಂದ್ರ ಪ್ರಸಾದ್**

ತಾಲ್ಲೂಕಿನ ಮಧುರೆ ಗ್ರಾಮದ ಟಿ.ಎಸ್.ಶಿವಮೂರ್ತಯ್ಯ ಹಾಗೂ ಸಿದ್ದಮ್ಮ ದಂಪತಿಗಳ ಮಗನಾಗಿ ೧೯೬೨ರಲ್ಲಿ ಜನಿಸಿದ ಟಿ.ಎಸ್.ರಾಜೇಂದ್ರ ಪ್ರಸಾದ್ ಅವರು ತಮ್ಮ ಬಿಡುವಿನ ವೇಳೆಯಲ್ಲಿ ಕಾವ್ಯ ಕೃಷಿ ನಡೆಸುತ್ತಿದ್ದಾರೆ. ಇವರ ಇದು ವರೆಗಿನ ಕೃತಿಗಳು 'ನಾನೇಕೆ ಮಾತನಾಡುವುದಿಲ್ಲ' (೧೯೮೭), 'ನೆತ್ತರ ಕಥೆಗಳಿಗೆ ಜೀವ' (೧೯೯೨), 'ನೂರು ಹನಿ ನೂರು ದನಿ', (೧೯೯೫), 'ಪ್ರೀತಿಸುತ್ತಾ ಹೋದಂತೆಲ್ಲಾ' (೨೦೦೪), 'ಅವಳ  ಸಾವಿರದ ಚಿತ್ರ', 'ಜೀವ ಕಾಡಿದ ಕಾಲ' ಹಾಗೂ 'ಬಾನ ಹಕ್ಕಿ ಸಾಲು' (ಎಲ್ಲವೂ ಕವನ/ಹನಿಗವನ ಸಂಕಲನಗಳು). ಅಲ್ಲದೆ, 'ಕಣ್ಣ ಒಳಗಿನ ಕನ್ನಡಿ' (ಕಥಾಸಂಕಲನ) ಮತ್ತು 'ದೇವಾಂಗಿ' (ನಾಟಕ) ಪ್ರಕಟವಾಗಿವೆ. 'ತುಂತುರು' ಮತ್ತು 'ಸೀಮೆ ದಾಟಿದ ನೀರು' ಸಂಪಾದಿತ ಕೃತಿಗಳು. ೨೦೦೪ರಲ್ಲಿ ಇವರಿಗೆ 'ಪ್ರೀತಿಸುತ್ತ ಹೋದಂತೆಲ್ಲಾ' ಕೃತಿಗಾಗಿ 'ಹರಿಹರಶ್ರೀ ಪ್ರಶಸ್ತಿ' ಬಂದಿರುತ್ತದೆ. ಸಂಕ್ರಮಣ ಕಾವ್ಯ ಸ್ಪರ್ಧೆ ಹಾಗೂ ಕಾವ್ಯಾನಂದ ಕಾವ್ಯ ಸ್ಪರ್ಧೆಯಲ್ಲಿ ಇವರ ಕವನಗಳಿಗೆ ಬಹುಮಾನಗಳು ಬಂದಿವೆ. ನಾಡಿನ ಪ್ರಮುಖ ನಿಯತಕಾಲಿಕಗಳಲ್ಲಿ ಇವರ ಕವನಗಳು ಪ್ರಕಟಗೊಂಡಿವೆ.

**ಬಾಗೂರು ಮಾರ್ಕಂಡೇಯ**

ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ಜನಿಸಿದ ಬಾಗೂರು ಮಾರ್ಕಾಂಡೇಯ ಅವರು ವೃತ್ತಿಯಲ್ಲಿ ಶಿಕ್ಷಕರು, ಪ್ರವೃತ್ತಿಯಲ್ಲಿ ಚಿತ್ರಕಲಾವಿದ ಮತ್ತು ಲೇಖಕ. ಬೆಂಗಳೂರಿನಲ್ಲಿ ಪ್ರಾಥಮಿಕ ಶಾಲಾ ಪಠ್ಯಪುಸ್ತಕ ಮುದ್ರಣ ವಿಭಾಗದಲ್ಲಿ ಚಿತ್ರಕಲಾವಿದರಾಗಿ ನಿಯುಕ್ತರಾಗಿದ್ದಾರೆ. ಇವರು ಮಕ್ಕಳ ಪದ್ಯಗಳು ಮತ್ತಿತರ ಸಾಹಿತ್ಯ ಕೃತಿಗಳನ್ನು ಹೊರತಂದಿದ್ದಾರೆ. 'ಚಿತ್ರಗಳು ಮಾತನಾಡುತ್ತಿವೆ', 'ತಾರೆಗಳ ಬಳಗ', 'ಲಾಲಿ ಹಾಡುಗಳು', 'ಹಸ್ಸಿ ಕ್ಯಾನ್ವಾಸ್', ಚಿತ್ತಾರದ ಅಡ್ಡಿಕೆ', 'ಕಾರೇಮುಳ್ಳು', 'ಒಲವಿನ ದೊಡ್ಡಹೊಲ', 'ಒಲವ ಮುಂಗಾರಿನ ಹನಿ', 'ಪುಟ್ಟಪುಟಾಣಿ ಸ್ವರ್ಣ', 'ನಂದನ ನನ್ನ ಶಾಲೆ' ಕೃತಿಗಳನ್ನು ಬರೆದಿರುವರು. ಚುಕ್ಕಿ ಚಿತ್ರಗಳನ್ನು ರಚಿಸುವುದರಲ್ಲಿ ಸಾಧನೆ ಮಾಡಿದ್ದಾರೆ.

ಜಾನಪದ ಲೇಖನಗಳಿಗೆ ಹೆಸರಾದ ಬಳ್ಳೇಕೆರೆ ಹನುಮಂತಪ್ಪ 'ಅರ್ಥ' ಕಾದಂಬರಿ, 'ನಿರೀಕ್ಷೆಯ ಕೋಣೆ' ಹಾಗೂ 'ಪರ್ವತಗಳು' ಕೃತಿಗಳನ್ನು ಬರೆದಿರುವ ಎನ್. ಹೆಚ್.ನಾಗರಾಜ್, ಹಾಸ್ಯ ಲೇಖಕರಾದ ಬಾಗೂರು ಚಂದ್ರು (ಬಿ.ಎಸ್.ಚಂದ್ರಶೇಖರ್), ನೀರ್ಗುಂದ ಕೇಶವಮೂರ್ತಿರಾವ್ ಇವರು ಬೇರೆ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ.

ಇಷ್ಟೇ ಲೇಖಕರಲ್ಲದೆ, ತಾಲ್ಲೂಕಿನ ಡಾ.ಕೆ.ರಾಮೇಶ್ವರಪ್ಪನವರು 'ನಮ್ಮಿಬ್ಬರ ನಡುವೆ', 'ತೊರೆ ಸಾಲಿನ ಹಾಡು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಡಾ||ಜಿ. ರಮೇಶ್, ಐ.ಪಿ.ಎಸ್ ಅವರು 'ನಿಜಲಿಂಗಪ್ಪನವರ ಸ್ವಾತಂತ್ರ್ಯ ಚಳುವಳಿ ಮತ್ತು ರಾಜಕೀಯ ಸಾಧನೆಗಳು–ಒಂದು ಅಧ್ಯಯನ' ಮಹಾ ಪ್ರಬಂಧವನ್ನು, ಬೆನಕನಹಳ್ಳಿ ಕೃಷ್ಣಮೂರ್ತಿ ಅವರು 'ಬನದ ಹೂವಿನ ಪರಿಮಳ', ಉಪನ್ಯಾಸಕರಾಗಿರುವ ನಿಸಾರ್ ಅಹ್ಮದ್ ಅವರು 'ಎ.ಕೆ.೪೭', ಎಂ.ಆರ್.ನಳಿನಿ ಅವರು 'ಸಂಪಿಗೆಮರ', ವೈ.ಬಿ.ಎಚ್.ಶಿವಯೋಗಿ ಅವರು 'ಮೂಡಲ್ ಕುಣಿಗಲ್ ಕೆರೆ' ಮತ್ತು 'ಚಿಣ್ಣರ ಲೋಕ', ಶಿಕ್ಷಕಿ ಹರಿಯಬ್ಬೆ ಕೆಂಚಮ್ಮನವರು 'ಕೆಂಡ ತುಂಬಿದ ಮಡಿಲು', ವೈ.ಬಿ.ಎಚ್.ಜಯದೇವ 'ಬಯಲಿನೊಳಗೆ', ಮಧುರೆ ಚಂದ್ರಶೇಖರಚಾರ್ 'ಚೈತನ್ಯ ಚೈತ್ರ', 'ಹೊನ್ನಕುಡಿಕೆ', ಮತ್ತೋಡು ಜಿ.ನಾಗರಾಜ್–'ಮತ್ತೋಡು ದರ್ಶನ' ಮತ್ತು 'ಉತ್ತಾರೇ ಬಯಲಾಗೆ' (ಸಂಪಾದಿತ), ಹೆಗ್ಗೆರೆ ರಾಮಲಿಂಗಪ್ಪನವರು 'ಭಾರತದ ಇತಿಹಾಸ' (ಅನುವಾದ), ಬುರುಡೇಕಟ್ಟೆ ಗುಂಡಾಭಕ್ತರ ತಿಪ್ಪೇರುದ್ರಪ್ಪ 'ಯಾತಕ್ಕೆ ಮಳೆ ಹೋದವೋ' (ಸಂಪಾದಿತ) ಹೊರತಂದಿದ್ದಾರೆ. ಡಾ||ಉದಯಕುಮಾರ್, ಎಂ.ಜಿ.ವೆಂಕಟೇಶ್, ಗೋ.ತಿಪ್ಪೇಶ್, ಮೆಂಗಸಂದ್ರ ಧನಂಜಯ–('ಮಿಂಚುಹುಳ'), ಪಿ.ಎಲ್.ಲೋಕೇಶ್ವರ, ಬಿ.ಮೈಲಾರಪ್ಪ(ಕಾಶೀ ಭಾಗೀರಥಿ ದೇವಿ), ಬೆಲಗೂರು ಶ್ರೀಕಾಂತ, ಮಲ್ಲಿಕಾರ್ಜುನ ಆರಾಧ್ಯ, ರೇಣುಕಾರಾಧ್ಯ, ನಿರಂಜನ ದೇವರಮನೆ, ಬುರುಡೇಕಟ್ಟೆ ಮಂಜಪ್ಪ, ನಾ.ಕಾಳೇಶ್ವರರಾವ್, ಹೊನ್ನೇನಹಳ್ಳಿ ಮಂಜುನಾಥ್, ಪ್ರೊ ಎಂ.ಓ.ತಿಪ್ಪಯ್ಯ, ಶೇಷಗಿರಿ, ಹ.ರ.ಶ್ರೀರಂಗ, ಮಂಜುನಾಥ್ ಮಾಗೊದಿ, ಪ್ರಶಾಂತ್ ಎನ್ ಬಾಗೂರು, ನಾಗ್ತಿಹಳ್ಳಿ ಮಂಜುನಾಥ್ ಮುಂತಾದವರು ಲೇಖನ ಕವನಗಳನ್ನು ಬರೆದಿರುವರು. ಸಮಾಜ ಸೇವಾ ಕ್ಷೇತ್ರದಲ್ಲಿ ದಿವಂಗತ ರ್. ನಾಗರಾಜಗುಪ್ತರವರು ರೈತ ಸಂಘಟನೆಯ ಶ್ರೀ ಬೀದಾನಂದಪ್ಪರವರು ಪ್ರಮುಖರು.

## ತಾಲ್ಲೂಕಿನಲ್ಲಿ ವಿವಿಧ ಕನ್ನಡ ಸಾಹಿತ್ಯ ಸಮ್ಮೇಳನಗಳು

ಹೊಸದುರ್ಗ ತಾಲ್ಲೂಕಿನಲ್ಲಿ ಗ್ರಾಮಾಂತರ ಕನ್ನಡ ಸಾಹಿತ್ಯ ಸಮ್ಮೇಳನ, ಹೋಬಳಿ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ, ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದಿರುವುದು ತುಂಬಾ ವೈಶಿಷ್ಟ್ಯಪೂರ್ಣ ದಾಖಲೆ ಅನ್ನಿಸಿದೆ.

## ಸಾಹಿತ್ಯ ಮತ್ತು ಸಂಸ್ಕೃತಿ

೧) ಗ್ರಾಮಾಂತರ ಕನ್ನಡ ಸಾಹಿತ್ಯ ಸಮ್ಮೇಳನವು ೧೯೯೪ರಲ್ಲಿ ಬಾಗೂರು ಗ್ರಾಮದಲ್ಲಿ ೨) ಹೋಬಳಿಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವು ೨೦೦೪ರಲ್ಲಿ ಗುಡ್ಡದನೇರಲಕೆರೆ (ಮತ್ತೋಡು ಹೋಬಳಿ) ಗ್ರಾಮದಲ್ಲಿ, ೩) ಪ್ರಥಮ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವು ೧೯೯೩ರಲ್ಲಿ ಮತ್ತೋಡಿನಲ್ಲಿ, ೪) ನಾಲ್ಕನೇ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ (೧೯೯೪)ವು ಸಾಣೇಹಳ್ಳಿ ಗ್ರಾಮದಲ್ಲಿ, ೫) ಎಂಟನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು (೧೯೯೯) ಹೊಸದುರ್ಗ ಪಟ್ಟಣದಲ್ಲಿ ಹಾಗೂ ೬) ಒಂಬತ್ತನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು (೨೦೦೪) ಪುನಃ ಹೊಸದುರ್ಗ ಪಟ್ಟಣದಲ್ಲಿ ಜರುಗಿದ್ದು, ಅನೇಕ ಗೋಷ್ಠಿಗಳು ಸಾಹಿತ್ಯಾಸಕ್ತ ಜನಸಮುದಾಯವನ್ನು ಆಕರ್ಷಿಸುವಲ್ಲಿ ಸಫಲವಾದವು. ಪುಸ್ತಕ ಪ್ರದರ್ಶನ, ಕಲಾಪ್ರದರ್ಶನ ಮುಂತಾದುವು ಜನಪ್ರಿಯವೆನ್ನಿಸಿದವು. ಈ ಕಾರ್ಯಕ್ರಮಗಳೇ ಅಲ್ಲದೇ ಮತ್ತೋಡು ಗ್ರಾಮದಲ್ಲಿ ಕನ್ನಡ ಸಂಘದ ಬೆಳ್ಳಿಹಬ್ಬ (೨೦೦೯)ವು ಅರ್ಥಪೂರ್ಣವಾಗಿ ಆಚರಿಸಲ್ಪಟ್ಟು ಜನಮನ್ನಣೆಗೆ ಪಾತ್ರವಾಯಿತು. ತಾಲ್ಲೂಕಿನಲ್ಲಿ ಹಿಂದಿನ ಕಾಲದಿಂದಲೂ ಗಣಪತಿ ಕಾರ್ಯಕ್ರಮ, ಕನ್ನಡ ರಾಜ್ಯೋತ್ಸವ, ಶಿಕ್ಷಕರ ದಿನಾಚರಣೆ ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದು, ಹಿರಿಯ ಹೆಸರಾಂತ ಜಾನಪದ ಗಾಯಕ ಪಿ.ಕಾಳಿಂಗರಾವ್, ಹಿರಿಯ ಸಾಹಿತಿ ಡಾ॥ಕೆ.ಶಿವರಾಮ ಕಾರಂತ್, ಪ್ರೊ ಗೋಪಾಲ ಕೃಷ್ಣ ಅಡಿಗ, ಡಾ॥ ಹಾ.ಮಾ.ನಾಯಕ, ಡಾ॥ ಸಿದ್ದಯ್ಯ ಪುರಾಣಿಕ ಮುಂತಾದ ದಿಗ್ಗಜರುಗಳು ಮತ್ತೋಡು ಮತ್ತು ಹೊಸದುರ್ಗಕ್ಕೆ ಬಂದು ಹೋಗಿರುವ ನೆನಪು ಜನರಲ್ಲಿದೆ. ೧೯೯೮ರಲ್ಲಿ ಹೊಸದುರ್ಗದಲ್ಲಿ ಜರುಗಿದ 'ತರಳಬಾಳುಹುಣ್ಣಿಮೆ'ಯೂ ನೆನಪಾಗಿ ಉಳಿದಿದೆ. ವಿವಿಧ ಸಂದರ್ಭಗಳಲ್ಲಿ ಹೊರಬಂದಿರುವ ತಾಲ್ಲೂಕಿನ 'ವೇದಾವತಿ' (೧೯೮೦), 'ಹೊಸ ಚಿಗುರು (೧೯೭೪–೭೫), 'ಮನ್ವಂತರ' (೨೦೦೯), 'ಕಲ್ಪಸಿರಿ' (೧೯೯೪), 'ಕಲ್ಪಾದ್ರಿ (೧೯೯೯), 'ಬಯಲು' (೨೦೦೪), 'ಧರ್ಮ ಗಂಗೋತ್ರಿ' (೨೦೦೧), 'ಕರ್ಮಯೋಗಿ (೨೦೦೫), 'ಸಿರುಮ' (೨೦೦೦), 'ತರಳಬಾಳು ಹುಣ್ಣಿಮೆ' (೧೯೯೮), 'ಜೀವಜಲ' (೨೦೦೬) ಮುಂತಾದ ಸ್ಮರಣಸಂಚಿಕೆ / ಅಭಿನಂದನಾ ಗ್ರಂಥಗಳು ತಾಲ್ಲೂಕಿನ ವಿವಿಧ ವಿಷಯಗಳನ್ನು ಅನಾವರಣಗೊಳಿಸಿದ್ದು ಅತ್ಯುಪಯುಕ್ತ ಆಕರಮೂಲಗಳಾಗಿವೆ. ಹಿಂದೆ ಹೊಸದುರ್ಗದಲ್ಲಿ 'ಸರಸ್ವತಿ ಸಭಾ' ಮತ್ತು 'ಕನ್ನಡ ಯುವಜನ ಪರಿಷತ್ತು' ಸಾಂಸ್ಕೃತಿಕ ಸಂಸ್ಥೆಗಳು, ಮತ್ತೋಡಿನ ಕನ್ನಡ ಸಂಘ ಮುಂತಾದುವು ಅನೇಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿವೆ. ಕನ್ನಡ ಕಾರ್ಯಕ್ರಮಗಳಿಗಾಗಿ ಶ್ರಮಿಸಿದವರಲ್ಲಿ ಆರ್.ಎ.ನಾಗರಾಜಗುಪ್ತ, ನಾ.ಕಾಳೇಶ್ವರರಾವ್, ಬಿ.ಮಾಲತೇಶಮೂರ್ತಿ, ಬಿ.ವಿ.ಲವಕುಮಾರ್, ಪಿ.ವೆಂಕಟೇಶ್, ವಿಜಯಕುಮಾರ್ ನಾಯಕ, ಕೆ.ವಿ.ದೇವೇಂದ್ರಾಚಾರ್, ದಿ॥ ಶ್ರೀಧರಾಚಾರ್, ದಿ॥ ವಜ್ರನಾಭಿ, ಪ್ರಕಾಶ್‌ಮೂರ್ತಿ.ಎಂ.ಪಿ., ಜಯಸಿಂಹ, ಅಂಜನ್‌ಕುಮಾರ್, ಓಂಕಾರಮೂರ್ತಿ, ಹೊ.ಬ.ಚಿದಾನಂದಪ್ಪ, ಕೈನಡು ಚಂದ್ರಪ್ಪ, ಹೆಗ್ಗೆರೆ ರಂಗಪ್ಪ,

ಬಾಗೂರಿನ ಪುರಂದರಪ್ಪ ಮೇಷ್ಟ್ರು ಮೊದಲಾದವರು ಪ್ರಮುಖರು. ಹೈಕೋರ್ಟ್‌ನ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳಾದ ಎಚ್.ಬಿಲ್ಲಪ್ಪನವರು ಕಲೆ–ಸಾಹಿತ್ಯದಲ್ಲಿ ಅಪಾರ ಆಸಕ್ತಿಯುಳ್ಳವರಾಗಿದ್ದಾರೆ.

## ಜಾನಪದ ಕಲೆ ಮತ್ತು ಸಾಹಿತ್ಯ

ಹೊಸದುರ್ಗ ಸೀಮೆಯಲ್ಲಿ ಜಾನಪದ ಕಲೆಗಳು ಮತ್ತು ಜಾನಪದ ಸಾಹಿತ್ಯ ಮಡುಗಟ್ಟಿದೆ. ಹಿಂದಿನ ಕಾಲದಿಂದ ಜನರಲ್ಲಿ ಬಾಯಿಂದ ಬಾಯಿಗೆ ಹರಿದುಬಂದಿದೆ. ಜಾನಪದ ಸಾಹಿತ್ಯ, ತ್ರಿಪದಿಗಳು, ಬೀಸುವ ಪದ, ಕುಟ್ಟುವ ಪದ, ತೊಟ್ಟಿಲು ಪದ, ಜೋಗುಳ ಪದ, ಸಸಿ ಹಾಕುವ ಪದ, ಕಪಿಲೆ ಪದ, ದೇವರ ಪದ, ಸೋಬಾನೆ ಪದ, ಸತ್ತಾಗ ಹೇಳೊ ಪದ, ಸುಗ್ಗಿ ಪದ, ಆಸಾದಿ ಪದ, ಒಗಟು–ಗಾದೆ, ಬೆಳ್ದಿಂಗಳಪ್ಪನ ಪದ, ಹಚ್ಚೆ ಹುಯ್ಯುವ ಪದ, ಗೊಲ್ಲರ ಪದಗಳು, ಒಕ್ಕಲುತನದ ಪದ, ವೀರಗಾಸೆ, ಎಳವರ ಪದ, ಜೋಗೇರ ಪದ, ಜರಿಯುವ ಪದ, ಬುಡಬುಡಿಕೆ ಪದ, ಸುಡುಗಾಡು ಸಿದ್ದರ ಪದ, ದೊಂಬಿದಾಸರ ಪದ, ನಾಟಕದ ಪದ, ಭಜನೆ ಪದ, ಕೋಲುಪದ, ಕೀರ್ತನೆ, ತತ್ವಪದ, ಲಾವಣಿ, ಬೈಯ್ಯುವ ಪದಗಳು, ಉಪಕಥೆಗಳು, ದೊಡ್ಡಕಥೆ ಮುಂತಾದ ಜನಪದ ಸಾಹಿತ್ಯ ಇಲ್ಲುಂಟು. ಜನಪದ ಕಲೆಗಳಾದ ಸೋಮನ ಕುಣಿತ, ಡೊಳ್ಳು ಕುಣಿತ, ವಾಲಗ, ಉರುಮೆವಾದನ, ಕರಡೆವಾದ್ಯ, ಹೂವಿನ ಪಲ್ಲಕ್ಕಿ, ಅಲಂಕಾರ, ದೇವರ ವಸ್ತ್ರವಿನ್ಯಾಸ, ಬುಡಬುಡಿಕೆ, ಕೋಲೆ ಬಸವ, ಹಚ್ಚೆ ಹಾಕುವುದು, ಕೌದಿ ಹೊಲಿಗೆ, ಮೈಜೂಲು ಹೊಲಿಗೆ, ಕಂಬಳಿ ನೇಯ್ಗೆ, ಹಾವಾಡಿಸುವುದು, ಕರಡಿ ಆಡಿಸುವುದು, ದೊಂಬರಾಟ, ಟಗರು ನೆಗೆಸುವುದು, ಹರಿಕಥೆ, ಮಂಗನ ಆಡಿಸುವುದು, ತತ್ವಪದ ಹಾಡುವುದು, ಕಹಳೆ ಊದುವುದು, ಜೋಕುಮಾರ, ವಗ್ಗಯ್ಯನ ಕುಣಿತ, ಗೋಲಿ, ಗಜ್ಜುಗ, ಗಾಳಿಪಟ ಆಡಿಸುವುದು, ಕೋಲಾಟ, ಶಿಲಾ ಕೆತ್ತನೆ, ಮರ ಕೆತ್ತನೆ, ಬೇಟೆ, ಈಜು, ಹಸೆ ಬರೆಯೋದು, ತೇರು ಕಟ್ಟುವುದು, ತೆಪ್ಪ ಕಟ್ಟುವುದು, ಮೋಡಿ, ಮಂತ್ರ, ಗಿಳಿಶಾಸ್ತ್ರ, ಮೈದುಂಬುವುದು, ಕೀಲುಕುದುರೆ ಕುಣಿತ, ನಂದಿಧ್ವಜ ಕುಣಿತ, ರಣಬೋಜು ನುಡಿಸುವುದು, ಬೆಳ್ದಿಂಗಪ್ಪನ ಪೂಜೆ, ಅಲಂಕಾರ ಮುಂತಾದುವು ಇವೆ. ಜಾನಪದ ಆಚರಣೆಗಳಾದ ಸರಪಳಿ ಸೇವೆ, ನಗಾರಿ ಸೇವೆ, ವೀರಗಾರರ ಸೇವೆ, ದೀವಟಿಗೆ ಸೇವೆ, ಕೆಂಡ ತುಳಿಯುವ ಸೇವೆ, ಅಂತ್ರ ಹಾಕುವುದು, ಬಾಗೂರುತಾಳಿ, (ದೇವರನ್ನು) ಅಪ್ಪಣೆ ಕೇಳುವುದು, ಚೆರಗ ಚೆಲ್ಲುವುದು, ಆರತಿಬಾನ, ಓಕುಳಿ, ಕಾರಣಿಕ, ಪಂಚಾಂಗ (ಶಾಸ್ತ್ರ) ಹೇಳೋದು, ಮಡಿಲಕ್ಕಿ ಹಾಕುವುದು, ಅಕ್ಷತೆ ಹಾಕುವುದು, 'ಅಮ್ಮ'ನನ್ನು ಕಳಿಸುವುದು, ಕೈಯ್ಯೂರಿಸುವುದು, ರಂಚು ಹಾಕುವುದು, ಉತ್ಸವ, ಮುಳ್ಳಿನ ಸೇವೆ, ತೇರು, ಜಾತ್ರೆ, ತೆಪ್ಪ, ಸಿಡಿ, 'ಸೆಳೆ' ಹೋಗುವುದು, ಕಹಳೆ ಊದುವುದು, ಶಸ್ತ್ರ ಪವಾಡ, 'ದೋಣಿಸೇವೆ', ಕಾಯಿಕೋಲು ಪೂಜೆ, ಕಲ್ಲುಬಣಕ್ಕೆ ಹೋಗುವುದು,

ತೋಟದೂಟ, ಎಡೆ ಹಾಕುವುದು, ನಾಗರು ಮಾಡುವುದು, 'ಕುರುಹು' ಕೇಳುವುದು, ಊರುಬಾಗಿಲಪೂಜೆ, ಪಾಯದಪೂಜೆ, ಹೆಬ್ಬಾಗಿಲುಪೂಜೆ, ಕಾರೆಹರಿಯೋದು, ಮಳೆರಾಯನ ಪೂಜೆ (ಜೋಕುಮಾರ), ಬಾಗಿನ ಕೊಡುವುದು, ಬಳೆ ತೊಡಿಸುವ ಶಾಸ್ತ್ರ, ಮರಿಸೇವೆ, ಬಿಲ್ಲುಗೂಡು, ಬಸವನ ಬಿಡುವುದು, ಒಂದ್ಹೊತ್ತಿನವರ ಸೇವೆ, ಮುತ್ತೈದೆಯರಿಗೆ ನೀಡಿಸುವುದು, ಸೀಮಂತ, ಮಗು ನಾಮಕರಣ, ಪಾನಕದ ಬಂಡಿ, ಬೇವಿನಸೀರೆ, ಕಾರ್ತಿಕ ಪೂಜೆ, ದೇವರು ಕರೆಯೋದು, ಅಮಾವಾಸ್ಯೆ(ಅಮಾಸೆ) ದೇವರು, ಹೊಳೆ ಪೂಜೆ, ತೋಟ ಸೂರ್ಬಿದಾಡು, ಹೊರಬೀಡು, (ನಿದೆ ಮೀಯೋದು) ಪುಣ್ಯ ತೀರ್ಥಸ್ನಾನ, ಕದಲೆ ಕಟ್ಟುವುದು, ಎಲೆಪೂಜೆ, ಪರೇವು ಸೇವೆ, ಮುಡಿ ತೆಗೆಸೋದು ಮುಂತಾದವು ಇಂದಿಗೂ ದಟ್ಟವಾಗಿವೆ. ಜಾನಪದ ವಾದ್ಯಗಳಾದ ಕರಡೆ, ಉರುಮೆ, ಡೊಳ್ಳು, ವಾಲಗ, ಸೆಡ್ಡೆ, ತಮಟೆ, ಹಲಗೆ, ಕಹಳೆ, ಶಂಖು, ಜಾಗಟೆ, ದಮ್ಮಡಿ, ತಾಳ, ಚಿಟಿಕೆ, ಜಾಲರೆ, ಗೆಜ್ಜೆ, ಗಂಟೆ, ಗಜ್ಜರಿ (ಖಂಜರಿ), ತಬಲ, ಗುಮ್ಮಿವಾದ್ಯ, ಪಿಳ್ಳಂಗೋವಿ, ಕೊಳಲು, ಏಕದಾರಿ, ಘಟಂ, ತಂಬೂರಿ, ಚೌಡಿಕೆ ಮುಂತಾದ ನೂರಾರು ರೀತಿಯ ವಾದ್ಯ ಪರಿಕರಗಳು ಇಲ್ಲಿವೆ.

೧೯೬೦–೬೫ರ ಅವಧಿಯಲ್ಲಿ ಕಂಗುವಳ್ಳ ಗ್ರಾಮದಲ್ಲಿ ಜವಳಿ ಬಸಣ್ಣ ಎಂಬುವವರು ತನ್ನ ಗ್ರಾಮಾಫೋನ್‌ನಲ್ಲಿ ಕಾಳಿಂಗರಾಯರ 'ಬಾರಯ್ಯ ಬೆಳದಿಂಗಳೆ..........' ಮುಂತಾದ ಹಾಡುಗಳನ್ನು ಹಾಕುತ್ತಿದ್ದು ಈ ಹಾಡುಗಳನ್ನು ಕೇಳಿ ಆನಂದಿಸಲು ಸುತ್ತಲ ಹಳ್ಳಿಗಳ ಜನ ಮುಗಿ ಬೀಳುತ್ತಿದ್ದರು. ರೇಡಿಯೋದಲ್ಲಿ ಜನಪದ ಗೀತೆಗಳು ಬರುತ್ತಿದ್ದವು. ತಾಲ್ಲೂಕಿನ ನೂರಾರು ಹಳ್ಳಿಗಳಲ್ಲಿ ಜಾನಪದ ಕಲಾವಿದರು ಜನಪದ ಕಲೆಗಳನ್ನು, ಸಾಹಿತ್ಯವನ್ನು ಜೀವಂತ ಇರಿಸಿದ್ದಾರೆ. ಸ್ಥಳೀಯ ದೇವರುಗಳ ಕುರಿತಾದ ಸಾವಿರಾರು ತ್ರಿಪದಿಗಳು ಗ್ರಾಮೀಣ ವೃದ್ಧರಲ್ಲಿ ಕಂಠಸ್ಥವಾಗಿವೆ.

ಅರಳಿಹಳ್ಳಿ, ಕಂಗುವಳ್ಳಿ, ಪೀಲಾಪುರ, ಮಳಲಿ, ಮಾರುಗೊಂಡನದಿಬ್ಬ, ಬೇವಿನಹಳ್ಳಿ, ಮೆಟ್ಟಿನ ಹೊಳೆ, ಮತ್ತೋಡು, ಹೊನ್ನೆಕೆರೆ, ಗೊಲ್ಲರಹಟ್ಟಿಗಳು, ಅರೆಹಳ್ಳಿ, ಸೂಜಿಕಲ್ಲು, ಅಜ್ಜಿಕಂಸಾಗರ, ಕಾರೇಹಳ್ಳಿ, ಸೂಜಿಕಲ್ಲು, ಶ್ರೀರಾಂಪುರ, ಕರಲಮಾವಿನಹಳ್ಳಿ, ಕೊರಟಿಕೆರೆ, ನೀರಗುಂದ, ಮಾಡದಕೆರೆ ಮುಂತಾದ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಜನಪದ ಹಾಡುಗಾರರು, ಕಥೆಗಾರರು, ಒಗಟು ಹೇಳುವವರು, ಜನಪದ ಆಚರಣೆಗಳನ್ನು ತಮ್ಮ ನಿತ್ಯದ ಉಸಿರಾಗಿಸಿಕೊಂಡಿರುವ ಸಹಸ್ರಾರು ಹಳ್ಳಿಗರು ಇದ್ದಾರೆ. ಕಂಚೀದೇವರ ಜಾತ್ರೆಯಲ್ಲಿ ಕೆಲವು ವಿಚಿತ್ರ ಆಚರಣೆಗಳನ್ನು ಕಾಣಬಹುದು. (ಪಾಷಾಣದೆಡೆ ಸೇವೆ, ಹರಕೆ ಹಣವನ್ನು ದೇವರ ಮೇಲೆ ತೂರುವುದು, ಸೊರಗು ಅಂಬಲಿಸೇವೆ ಇತ್ಯಾದಿ). ಮತ್ತೋಡು ಸೋಮನ ಕುಣಿತ, ಕಂಚೀದೇವರ ಕುಣಿತ, ದೇವಪುರ ಹಾಗೂ ಬನಸೀಹಳ್ಳಿಗಳ ಸೋಮನ ಕುಣಿತ, ಚಿಕ್ಕತೇಕಲವಟ್ಟಿಯ ಆಸಾದಿ ಚಂದ್ರಪ್ಪನ ಹಾಡುಗಾರಿಕೆ, ವಿವಿಧ ಗ್ರಾಮಗಳ ವೀರಗಾಸೆ ಹೆಸರುವಾಸಿ. ಮಾರಬಗಟ್ಟದ ಎಂ.ವಿ.ರಂಗಾಚಾರ್ (ಕೀರ್ತನೆ), ಹಾಲೇಶ್ (ತಬಲ), ಕಾಳಾಚಾರ್,

ಗೊರವಿನಕಲ್ಲು (ಹಾರ್ಮೋನಿಯಂ), ಎಂ.ನಾರಾಯಣಪ್ಪ (ಕ್ಲಾರಿಯೋನೆಟ್), ಮೆ.ನಾ.ಬೊಮ್ಮಲಿಂಗಪ್ಪ (ಪ್ರವಚನ), ಕೆ.ಎಂ.ರಾಜಪ್ಪ, ಕಂಗುವಳ್ಳಿ (ಹರಿಕಥೆ), ಬಿ.ಎನ್. ಮಹೇಶ್ವರರಾವ್ (ಜನಪದ ವಸ್ತ್ರವಿನ್ಯಾಸ), ಕಂಠೇಶ್, ಪೀಲಾಪುರ, ಪಿ.ವೆಂಕಟೇಶ್ ಹೊಸದುರ್ಗ, ರಂಗಪ್ಪ ಹೆಗ್ಗೆರೆ, ಜಯಸಿಂಹ ಶ್ರೀರಾಂಪುರ, ಸಿ.ರಂಗನಾಥ ಕಂಗುವಳ್ಳಿ (ಹಾಡುಗಾರಿಕೆ), ಎಂ.ಜಿ.ಆಂಜನೇಯ, ಎಂ.ಎಸ್.ರಮೇಶ್, ಮತ್ತೋಡು, ಸಿ.ವೀರಣ್ಣ ಹೊಸದುರ್ಗ (ಚಿತ್ರಕಲೆ) ಮುಂತಾದವರು ಪ್ರಸಿದ್ಧಿ ಪಡೆದಿದ್ದಾರೆ. ಮೈಸೂರು ಮಹಾರಾಜರ ಕಾಲದಲ್ಲಿ ಮತ್ತೋಡಿನ ಎಂ.ಎಸ್.ತಿಮ್ಮಪ್ಪನವರು ಗಮಕ ಕಲೆಗಾಗಿ ಮಹಾರಾಜರಿಂದ ಪುರಸ್ಕಾರ ಪಡೆದಿದ್ದರು. ಇತ್ತೀಚೆಗೆ ಮಲ್ಲಪ್ಪನ ಹಳ್ಳಿಯ ಯುವತಿ ಮಂಡಳಿಯು ಕೋಲಾಟದಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಪಡೆದಿದೆ.

ಗಾಯನಕ್ಕೆ ಮತ್ತು ಜಾನಪದ ನೃತ್ಯಕ್ಕೆ ಹೆಸರಾಗಿರುವ ಗೊಲ್ಲರಹಟ್ಟಿಯ ಡಾ॥ಕೆ. ರಾಮೇಶ್ವರಪ್ಪ , ಕೆ.ಎ.ಎಸ್ ಅಧಿಕಾರಿ ಅವರು ದೇಶ–ವಿದೇಶಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ತಾಲ್ಲೂಕಿನಲ್ಲಿ ಸಾವಿರಾರು ಗ್ರಾಮದೇವರುಗಳಿದ್ದು, ಇಲ್ಲೆಲ್ಲ ನಡೆಯುವ ಅಸಂಖ್ಯಾತ ಜಾತ್ರೆಗಳು ಅಧ್ಯಯನಕ್ಕೆ ಅರ್ಹವಾಗಿವೆ. 'ಜನಪದ ಕಲಾಮೇಳ'ಗಳು ತಾಲ್ಲೂಕಿನಲ್ಲಿ ನಡೆದಿವೆ. ಹಳ್ಳಿಗಳಲ್ಲಿ ಇಂದಿಗೂ ನಡೆಯುವ ವಾರದ ಭಜನೆ, 'ಶನಿಕಥೆ' ಪಾರಾಯಣ ಮುಂತಾದ ಸಂಪ್ರದಾಯಗಳು ಗಮನಾರ್ಹ. ವೀರಗಾಸೆಗೆ ಶೆಟ್ಟಿಹಳ್ಳಿ ಸಾಣೇಹಳ್ಳಿ, ಕುಂದೂರು, ಗೊಲ್ಲರಹಟ್ಟಿ, ಅರಳಿಹಳ್ಳಿ, ನಾಯಿಗೆರೆ ತಂಡಗಳು, ಡೊಳ್ಳು ಕುಣಿತಕ್ಕೆ ನಾಗೇನಹಳ್ಳಿ, ಅರಳೀಹಳ್ಳಿ, ಶ್ರೀರಾಂಪುರ, ಲಕ್ಕೀಹಳ್ಳಿ, ಮಾರುಗೊಂಡನ ದಿಬ್ಬ, ಕಾರೇಹಳ್ಳಿ ತಂಡಗಳು, ನಾಟಕ ಸೀನರಿಗೆ ಕಾರೇಹಳ್ಳಿ, ದೊಡ್ಡತೇಕಲವಟ್ಟಿ, ಕರಡೇಮೇಳಕ್ಕೆ ಸೊಪ್ಪಿನಗುಡ್ಲು, ಕೊಂಡಾಪುರ, ಗರಗ ತಂಡಗಳು, ಕೋಲಾಟಕ್ಕೆ ಹೊನ್ನೇಕೆರೆ ಗೊಲ್ಲರಹಟ್ಟಿ, ಕೋಡಿಹಳ್ಳಿ, ಹಳೇಕುಂದೂರು, ಅರೆಹಳ್ಳಿ, ಅಜ್ಜಿಕಂಸಾಗರ, ಭಜನೆಗೆ ಹೊನ್ನೇಕೆರೆ ಗೊಲ್ಲರಹಟ್ಟಿ, ಸೊಪ್ಪಿನಗುಡ್ಲು, ಗರಗ, ಅರೆಹಳ್ಳಿ, ಅಜ್ಜಿಕಂಸಾಗರ ತಂಡಗಳು ಪ್ರಖ್ಯಾತವಾಗಿವೆ. ಕೀಲುಕುದುರೆ ನೃತ್ಯಕ್ಕೆ ಕಂಗುವಳ್ಳಿ ಕಲಾವಿದರು ಹೆಸರಾಗಿದ್ದಾರೆ. ಬ್ರಹ್ಮವಿದ್ಯಾನಗರದ ಯುಗ ಧರ್ಮ ರಾಮಣ್ಣ ಲಾವಣಿ ಆಶುಪದ ಹಾಡುವಿಕೆಗೆ ಪ್ರಸಿದ್ಧಿ. ಕಂಚೀಪುರದ ಡಿ.ಪರಶುರಾಮಪ್ಪನವರು ಕಂಚೀದೇವರನ್ನು ಹೊತ್ತು ಕುಣಿಯುವುದರಲ್ಲಿ ಹೆಸರಾಂತ ಸಾಂಪ್ರದಾಯಿಕ ಕಲಾವಿದರಾಗಿದ್ದಾರೆ.

ಅರಳಿಹಳ್ಳಿ ಐಗಣ್ಣ, ಅದೇ ಗ್ರಾಮದ ನವಣೇಕೆರೆ ಚೌಡಪ್ಪ, ತಾರೀಕೆರೆ ನೀಲಜ್ಜ ಮುಂತಾದವರು ತತ್ವಪದ ಹಾಡುಗಾರಿಕೆಯಲ್ಲಿ ಹೆಸರಾದವರು. ಹೊನ್ನೇಕೆರೆ ಗೊಲ್ಲರಹಟ್ಟಿಯ ತೋಳಣ್ಣ ಏರುದನಿಯಲ್ಲಿ ಉಪಕಥೆಗಳನ್ನು ಹೇಳುವುದರಲ್ಲಿ ಹೆಸರಾಗಿದ್ದರು. ಹೊನ್ನೇಕೆರೆ ಗೊಲ್ಲರಹಟ್ಟಿಯ ತಂಡದವರು ಕೋಲಾಟದಲ್ಲಿ, ಭಜನೆಯಲ್ಲಿ ರಾಜ್ಯಮಟ್ಟದ ಯುವಜನ ಮೇಳಗಳಲ್ಲಿ ಬಹುಮಾನ ಪಡೆದಿದ್ದಾರೆ.

## ನಾಟಕ ಸಂಸ್ಥೆಗಳು

ಕಳೆದ ಶತಮಾನದಲ್ಲಿ ನೀರಗುಂದ ರಾಜಕುಮಾರಿಯ ಕಥೆಯನ್ನಾಧರಿಸಿದ 'ಚೋರಕಥೆ' ನಾಟಕವನ್ನು ತಾಲೂಕಿನಾದ್ಯಂತ ಆಡುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ಗೊಂದಲಿಗರು ಸಹ ಈ ಕಥೆಯನ್ನು ರಾತ್ರಿಯಿಡಿ ಹಾಡು ಮತ್ತು ಕುಣಿತ-ವ್ಯಾಖ್ಯಾನದ ಮೂಲಕ ನಿರೂಪಣೆಯನ್ನು (ತಮ್ಮದೇ ಆಗಿರುವ ಶೈಲಿಯಲ್ಲಿ) ಮಾಡಿ ಜನರನ್ನು ರಂಜಿಸುತ್ತಿದ್ದರು. ಕೆಲವು ದಶಕಗಳ ಹಿಂದೆ ಇದ್ದ ಗೊರವಿನಕಲ್ಲು ಆಳ್ವಕರಿಯಣ್ಣ ಮುಂತಾದವರು ಚೌಡಿಕೆ ನುಡಿಸಿಕೊಂಡು ಈ ಕಥೆಯನ್ನು ಹಾಡಿ-ಹೇಳುತ್ತಿದ್ದರು. ೫೦-೬೦ ವರ್ಷಗಳ ಹಿಂದೆ ತಾಲ್ಲೂಕಿನ ಬಹಳಷ್ಟು ಹಳ್ಳಿಗಳಲ್ಲಿ ನಾಟಕ ಮೇಷ್ಟ್ರನ್ನು ನೇಮಿಸಿಕೊಂಡು, 'ಶ್ರೀಕೃಷ್ಣ ಪಾರಿಜಾತ', 'ಶ್ರೀಕೃಷ್ಣಗಾರುಡಿ', 'ದೇವಿಮಹಾತ್ಮೆ', 'ಕುರುಕ್ಷೇತ್ರ', 'ವೀರ ಅಭಿಮನ್ಯು', 'ಇಂದ್ರಕೀಲ ಪಾಂಡು ವಿಜಯ', 'ರಾಮಾಂಜನೇಯ ಯುದ್ಧ', 'ಲವ-ಕುಶ' ಮುಂತಾದ ಪೌರಾಣಿಕ ನಾಟಕಗಳನ್ನು ಕಲಿತು ಆಡುತ್ತಿದ್ದರು. ಆ ಕಾಲದಲ್ಲಿ ತಾಲ್ಲೂಕಿನ 'ತೇಕಲವಟ್ಟಿ ಸೀನ್ಸು' (ಶ್ರೀ ಕಲ್ಲೇಶ್ವರ ಡ್ರಾಮಾ ಸೀನರಿ) ಬಹಳ ಹೆಸರುವಾಸಿಯಾಗಿದ್ದು, ಈಗಲೂ ದಿ॥ ಕಲ್ಲೇಗೌಡರ ಮಕ್ಕಳು ಆ ಪರಿಕರಗಳನ್ನು ನಿರ್ವಹಿಸುತ್ತಿದ್ದಾರೆ. ೨೫ ವರ್ಷಗಳ ಹಿಂದೆ ಸಾಮಾಜಿಕ ನಾಟಕಗಳನ್ನು ಪಟ್ಟಣ ಮತ್ತು ಹಳ್ಳಿಗಳಲ್ಲಿ ಅಭಿನಯಿಸುತ್ತಿದ್ದರು. ಜಾತ್ರೆಗಳಲ್ಲಿ ನಾಟಕವೇ ಮುಖ್ಯ ಆಕರ್ಷಣೆಯಾಗಿ ಪ್ರಚಾರ ಪಡೆಯುತ್ತಿತ್ತು. ಬೇರೆಡೆಯಿಂದ ರಂಗನಟಿಯರನ್ನು ಕರೆಸುವ 'ಗೀಳು' ಶುರುವಾಯಿತು. 'ಅಣ್ಣ-ತಂಗಿ', 'ವಿಷಜ್ವಾಲೆ' ಮುಂತಾದ ನಾಟಕಗಳು ಇಲ್ಲಿ ಅಭಿನಯಿಸಲ್ಪಡುತ್ತಿದ್ದವು. ಹೊಸದುರ್ಗದ 'ಕನ್ನಡ ಯುವಜನ ಪರಿಷತ್ತು' ಕಲಾವಿದರು ಅನೇಕ ನಾಟಕಗಳನ್ನು ಪ್ರದರ್ಶಿಸಿದರು ಹಾಗೂ ಬೇರೆಡೆ ನಾಟಕ ಸ್ಪರ್ಧೆಯಲ್ಲಿ ಬಹುಮಾನಿತರಾದರು. ಏಕಪಾತ್ರಾಭಿನಯ ಪಟುಗಳೂ ಹೆಸರಾಗಿದ್ದರು. ಅರಳಿಹಳ್ಳಿ, ಹೊನ್ನೇನಹಳ್ಳಿ, ಬಾಗೂರು, ಮಾರುಗೊಂಡನದಿಬ್ಬ, ಮತ್ತೋಡು, ಶ್ರೀರಾಂಪುರ, ದೊಡ್ಡತೇಕಲವಟ್ಟಿ, ಬೆಲಗೂರು, ಕಂಗುವಳ್ಳಿ ಮುಂತಾದ ನೂರಾರು ಹಳ್ಳಿಗಳಲ್ಲಿ ನಾಟಕಗಳನ್ನು ಕಲಿತು ಆಡುತ್ತಿದ್ದರು. 'ಗೊಂಬೆನಾಟಕ' ಕಲಾವಿದರು ಬೇರೆಡೆಯಿಂದ ಬಂದು ಪ್ರತಿಮನೆಗಳಿಂದ ಹಣ-ದವಸ ಸಂಗ್ರಹಿಸಿ ರಾತ್ರಿಗೆ 'ಗೊಂಬೆಮೇಳ' ಪ್ರದರ್ಶಿಸುತ್ತಿದ್ದುದುಂಟು. ತೊಗಲುಗೊಂಬೆಯಾಟದವರೂ ಬರುತ್ತಿದ್ದರು. ಚೌಡಿಕೆ ಮೇಳದವರು, ದೊಂಬಿದಾಸರು ತಮ್ಮ ಕಥಾನಿರೂಪಣಾ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಸಿನಿಮಾ ಮತ್ತು ದೂರದರ್ಶನ ವೀಡಿಯೋ ಮಾಧ್ಯಮಗಳು ಬಂದ ತರುವಾಯ ನಾಟಕ ಕಲೆ ನಶಿಸಿ ಹೋದಂತಿದೆ. ಒಂದು ಕಾಲದಲ್ಲಿ ಹೊಸದುರ್ಗ ಪಟ್ಟಣಕ್ಕೆ ನಾಡಿನ ಕೆಲವು ಹೆಸರಾಂತ ನಾಟಕ ಕಂಪನಿಗಳು ಬಂದು ತಿಂಗಳುಗಟ್ಟಲೆ ಕ್ಯಾಂಪ್ ಮಾಡಿ ನಾಟಕಗಳನ್ನು (ಟಿಕೇಟ್ ಪದ್ಧತಿ) ಪ್ರದರ್ಶಿಸುತ್ತಿದ್ದರು. ಹಳ್ಳಿಗಳಿಂದ ನೂರಾರು ಎತ್ತಿನ ಬಂಡಿಗಳಲ್ಲಿ ಜನಸಾಗರವೇ (ಈ ನಾಟಕಗಳನ್ನು ನೋಡಲು) ಬರುತ್ತಿತ್ತು. ನಾಗರತ್ನಮ್ಮನ ಕಂಪನಿ, ಗುಬ್ಬಿ ಕಂಪನಿ,

ಹುಚ್ಚೇಶ್ವರ ನಾಟಕ ಕಂಪನಿ, ಚಿಂದೋಡಿ ಲೀಲಾ ನಾಟಕ ಕಂಪನಿ ಮುಂತಾದವು ಇಲ್ಲಿಗೆ ಬಂದಿದ್ದ ಮುಖ್ಯ ನಾಟಕ ಕಂಪನಿಗಳು. ನಟರಾದ ಉದಯಕುಮಾರ್, ಮುಸರಿ ಕೃಷ್ಣಮೂರ್ತಿ, ರಾಜೇಶ್, ಚಂದ್ರಕಲಾ, ಸುಂದರ ಕೃಷ್ಣ ಅರಸ್ ಮುಂತಾದವರು ಆಹ್ವಾನಿತ ನಟರಾಗಿ ಅವುಗಳಲ್ಲಿ ಅಭಿನಯಿಸಿದ್ದರು. ಆ ಕಾಲದಲ್ಲಿ 'ಲವ-ಕುಶ', 'ಭಕ್ತ ಪ್ರಹ್ಲಾದ' ಮುಂತಾದ ನಾಟಕಗಳನ್ನು ಜನ ಮುಗಿಬಿದ್ದು ನೋಡುತ್ತಿದ್ದರು. ಬೇಸಿಗೆ ಕಾಲದಲ್ಲಿ ನಾಟಕಗಳ ಸುಗ್ಗಿಯೇ ಆಗುತ್ತಿತ್ತು. ತಾಲ್ಲೂಕಿನ ಕಲಾವಿದರಲ್ಲಿ ಎಂ.ಶಿವಕುಮಾರ್, ಡಿ.ಕೆ.ಗಂಗಾಧರ್, ವಜ್ರನಾಭಿ, ಪ್ರಶಾಂತ್.ಎನ್. ಬಾಗೂರು ಮುಂತಾದವರು ಹೆಸರಾಗಿದ್ದಾರೆ. ಗೌರಮ್ಮ ನಾರಾಯಣಪ್ಪ ರಂಗ ಗೀತೆಗಳಿಗೆ ಹೆಸರಾಗಿದ್ದಾರೆ.

**ಸಾಣೇಹಳ್ಳಿ ಶಿವಕುಮಾರ ಕಲಾಸಂಘ**

ಹೊಸದುರ್ಗದಿಂದ ೧೪ ಕಿ.ಮೀ. ದೂರದಲ್ಲಿರುವ ಸಾಣೇಹಳ್ಳಿ ಗ್ರಾಮ ಇಂದು ರಂಗ ಚಟುವಟಿಕೆಗಳ ಬೀಡಾಗಿದ್ದು, ನಾಡಿನಾದ್ಯಂತ ಪ್ರಖ್ಯಾತವಾಗಿದೆ. ಇಲ್ಲಿ 'ತರಳಬಾಳು ಬೃಹನ್ಮಠ' ದಶಾಖಾಮಠವಿದ್ದು ೧೯೭೭ರಲ್ಲಿ ಇದರ ೧೦ನೇ ಪಟ್ಟಾಧ್ಯಕ್ಷರಾದ ಡಾ॥ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಲಿಂಗೈಕ್ಯ ಶಿವಕುಮಾರ ಸ್ವಾಮೀಜಿಯವರ ರಂಗಪ್ರೇರಣೆಯ ಸ್ಮರಣಾರ್ಥವಾಗಿ ೧೯೮೭ರಲ್ಲಿ 'ಶಿವಕುಮಾರ ಹವ್ಯಾಸಿ ಕಲಾಸಂಘ'ವನ್ನು ಸ್ಥಾಪಿಸಿದರು. ಅಲ್ಲದೆ 'ಶಿವಸಂಚಾರ' ಹೆಸರಿನ ರೆಪರ್ಟರಿ (ರಂಗ ತಿರುಗಾಟ ತಂಡ)ಯನ್ನು ೧೯೯೭ರಲ್ಲಿ ಹುಟ್ಟುಹಾಕಿದರು. ರಂಗ ನಿರ್ದೇಶಕರಾದ ಸಿ.ಜಿ.ಕೆ.ಯವರು ತಂಡಕ್ಕೆ ಈ ಹೆಸರಿಟ್ಟವರು. ಸಿ.ಜಿ.ಕೆ. ಯವರಲ್ಲದೆ, ಅಶೋಕ ಬಾದರದಿನ್ನಿ, ಸಿ.ಬಸವಲಿಂಗಯ್ಯ, ಎಸ್.ಶ್ಯಾಮಮೂರ್ತಿ, ಧ್ರುವರಾಜ್, ವಿಶ್ವೇಶ್ವರಿ, ವೈ.ಡಿ.ಬಾದಾಮಿ-ಮಂಜುಳಾ ಬಾದಾಮಿ ಮುಂತಾದ ಹೆಸರಾಂತ ರಂಗ ನಿರ್ದೇಶಕರುಗಳು ಇಲ್ಲಿನ ಶಿಬಿರಾರ್ಥಿಗಳಿಗೆ ನಾಟಕಗಳನ್ನು ಕಲಿಸಿಕೊಟ್ಟು ನಿರ್ದೇಶನ ಮಾಡಿದ್ದಾರೆ. ಕರ್ನಾಟಕದಲ್ಲಿ ನೀನಾಸಂ ತಿರುಗಾಟ ತಂಡವನ್ನು ಬಿಟ್ಟರೆ, ಅತ್ಯಂತ ಜನಪ್ರಿಯತೆ-ಯಶಸ್ಸು ಪಡೆದಿರುವ ರಂಗ ತಂಡವೇ- 'ಶಿವಸಂಚಾರ'. ನಾಡಿನಾದ್ಯಂತ ಸಂಚರಿಸಿ ಆಯ್ದ ನಾಟಕಗಳ ಸಾವಿರಾರು ಪ್ರದರ್ಶನಗಳನ್ನು ನೀಡಿರುವ ಈ ತಂಡ ಲಕ್ಷಾಂತರ ಪ್ರೇಕ್ಷಕರಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಪ್ರತಿವರ್ಷ ಆಗಸ್ಟ್ ಮಾಹೆಯಿಂದ ಅಕ್ಟೋಬರ್‌ವರೆಗೆ ನಾಟಕಗಳ ತಾಲೀಮು ನಡೆಸಿಕೊಂಡು ಸಿದ್ಧವಾಗುವ 'ಶಿವಸಂಚಾರ'ತಂಡ, ನವೆಂಬರ್‌ನಿಂದ ಏಪ್ರಿಲ್ ಮಾಹೆಯವರೆಗೆ ರಾಜ್ಯದ ವಿವಿಧೆಡೆಗಳಲ್ಲಿ ತನ್ನ ನಾಟಕಗಳ ಪ್ರದರ್ಶನದ ರಸದೌತಣವನ್ನು ಉಣಬಡಿಸುತ್ತದೆ. ವರ್ಷದ ಸಂಚಾರವನ್ನು ಆರಂಭಿಸುವ ಮುನ್ನಾವಾರದಲ್ಲಿ ತನ್ನ ತಾಯ್ನೆಲವಾದ ಸಾಣೇಹಳ್ಳಿಯಲ್ಲಿ 'ನಾಟಕೋತ್ಸವ' ಹೆಸರಿನ

ರಂಗ ಸಪ್ತಾಹದಲ್ಲಿ ಪ್ರತಿರಾತ್ರಿ ಒಂದೊಂದು ನಾಟಕ ಪ್ರದರ್ಶನದ ರಂಗ ನೈವೇದ್ಯ ಅರ್ಪಣೆ. ವಿಚಾರಗೋಷ್ಠಿ, ಪ್ರಶಸ್ತಿ ವಿತರಣೆ, ಇನ್ನಿತರ ಕಾರ್ಯಕ್ರಮಗಳ ಭರಾಟೆಗೆ ವಿವಿಧ ಗಣ್ಯರ ಪಾಲ್ಗೊಳ್ಳುವಿಕೆ, ವಿವಿಧ ತಾಲ್ಲೂಕುಗಳಿಂದ, ಜಿಲ್ಲೆಗಳಿಂದ ಕಲಾಸಕ್ತರ ಪ್ರವಾಹವೇ ಹರಿದು ಬರುತ್ತದೆ.

೨೦೦೪–೦೫ರಲ್ಲಿ ಮಠದ ಆವರಣದ ತೆಂಗಿನ ತೋಟದ ನಿಸರ್ಗ ಸೌಂದರ್ಯದ ನಡುವೆ ವಿಶಾಲ ಪ್ರದೇಶದಲ್ಲಿ ಮೂವತ್ತು ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ, ದೇಶದಲ್ಲೇ ಅಪರೂಪವಾದ ಈ ಗ್ರಾಮೀಣ 'ಬಯಲು ರಂಗಮಂದಿರ' ಗ್ರೀಕ್ ಮಾದರಿಯದೆನ್ನಲಾಗಿದ್ದು, ಇಲ್ಲಿನ ನಾಟಕಗಳ ಪ್ರದರ್ಶನಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿದೆ. ದೇಸೀ ಜಂಬಿಟ್ಟಿಗೆ, ಗ್ರಾನೈಟ್ ಶಿಲೆಯ ಪೀಠಗಳ ಸಹಿತ ಕಾಮನಬಿಲ್ಲಿನಂತೆ ವೃತ್ತಾಕಾರವಾಗಿರುವ ಕಲಾತ್ಮಕ ಬಯಲು ರಂಗಮಂದಿರವಿದಾಗಿದ್ದು, ಜನರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಒಮ್ಮೆಗೆ ಐದಾರು ಸಾವಿರ ಜನ ಪ್ರೇಕ್ಷಕರು ಕುಳಿತು ಇಲ್ಲಿ ನಾಟಕಗಳನ್ನು ವೀಕ್ಷಿಸಬಹುದಾಗಿದೆ. ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಜಾನಪದ, ಆಧ್ಯಾತ್ಮಿಕ ಕಥೆಯನ್ನುಳ್ಳ ಅನೇಕ ನಾಟಕಗಳು ಇಲ್ಲಿನ ತಂಡಗಳಿಂದ ಅಭಿನಯಿಸಲ್ಪಟ್ಟಿವೆ. ಮಾತ್ರವಲ್ಲದೆ ಬೇರೆಡೆಯಿಂದ (ಬೇರೆ ರಾಜ್ಯ, ಬೇರೆ ದೇಶಗಳ) ತಂಡಗಳೂ ಇಲ್ಲಿಗೆ ಆಗಮಿಸಿ ತಮ್ಮ ನಾಟಕಗಳನ್ನು ಪ್ರದರ್ಶಿಸಿವೆ. ಬಿಹಾರಿ, ಹಿಂದಿ, ನೇಪಾಳಿ, ಮಲೆಯಾಳಿ, ಬಾಂಗ್ಲಾ ಮುಂತಾದ ವಿವಿಧ ದೇಶಭಾಷೆಗಳ ನಾಟಕಗಳಿಲ್ಲಿ ಅಭಿನಯಿಸಲ್ಪಟ್ಟವು. ನೇಪಾಳದ 'ಅಗ್ನಿಕಥಾಕೋ', ಉತ್ತರಾಂಚಲದ 'ಕೋರ್ಟ್‌ಮಾರ್ಷಲ್', ಕನ್ನಡದ 'ತ್ಯಾಗಿ', 'ಸಾಕ್ಷಿಕಲ್ಲು', 'ಯಾರೂ ಇಲ್ಲೋ ಯಪ್ಪಾ ನಮಗೆ ಸಾಕ್ಷಿ', 'ಕಿಂದರ ಜೋಗಿ', 'ಬಾವಿ ಕಳೆದಿದೆ', 'ಕಲ್ಯಾಣ ಜ್ಯೋತಿ', 'ಚೋರ ಚರಣದಾಸ', 'ಕದಡಿದ ನೀರು', 'ಸಂಗ್ಯಾಬಾಳ್ಯಾ', 'ನಾಗ–ಮಂಡಲ', 'ತಿರುಕನ ಕನಸು', 'ಸಂಗೊಳ್ಳಿರಾಯಣ್ಣ', 'ಮಕ್ಕಳದ್ವೀಪ', 'ಮಾಯಾಕನ್ನಡಿ', 'ಶಿವಯೋಗಿ ಸಿದ್ಧರಾಮ', 'ಕಂಬಳಿನಾಗಿದೇವ', 'ಧರ್ಮಪುರಿಯ ಶ್ವೇತವೃತ್ತ', 'ಬೆಪ್ಪುತಕ್ಕಡಿ ಬೋಳೆಶಂಕರ', 'ಅಂಧೇರಿ ನಗರಿ ಚೌಪಟ್‌ರಾಜ', 'ನಾಯಿಮರಿ', 'ಸಾಹುಕಾರ', 'ಶರೀಫ್', 'ಹುಲಿಯನೆರಳು', 'ಪುಷ್ಪರಾಶಿ', 'ಅಪ್ಪ', 'ಉರಿಲಿಂಗಪೆದ್ದಿ', 'ಶೋಕಚಕ್ರ', 'ಮಹಾಬೆಳಗು', 'ಸೂರ್ಯಶಿಕಾರಿ', 'ಮುಕ್ತಧಾರೆ', 'ಮಾದಾರ ಚೆನ್ನಯ್ಯ', 'ನಿಜಗುಣಶಿವಯೋಗಿ', 'ಗಾಂಧಿ–ಅಂಬೇಡ್ಕರ್', 'ಅಲ್ಲಮ', 'ಮಹಾಮಾಯಿ', 'ನಮ್ಮೊಲ್ಲರ ಬುದ್ಧ', 'ಕುಲಂ', 'ಸಂಕ್ರಾಂತಿ', 'ಅಂತೆಂಬರ ಗಂಡ' ಮುಂತಾದ ನಾಟಕಗಳು ಇಲ್ಲಿನ ಕಲಾವಿದರಿಂದ ಅಭಿನಯಿಸಲ್ಪಟ್ಟಿವೆ. ನೀನಾಸಂ ಕಲಾವಿದರೂ ಇಲ್ಲಿ ಬಂದು ನಾಟಕಗಳನ್ನು ಆಡಿದ್ದಾರೆ.

'ಶಿವಕುಮಾರ ಹವ್ಯಾಸಿ ಕಲಾಸಂಘ'ವು ತನ್ನ ೨೫ನೇ ವರ್ಷದ 'ಬೆಳ್ಳಿಹಬ್ಬ'ವನ್ನು ೨೦೧೨ರಲ್ಲಿ ಅರ್ಥಪೂರ್ಣವಾಗಿ ಆಚರಿಸಿಕೊಂಡಿತು. ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಪ್ರಸ್ತುತ ರಂಗಾಸಕ್ತಿಗಾಗಿ ೧೯೮೮ರಲ್ಲಿ ನಾಟಕ

ಅಕಾಡೆಮಿಯು ಫೆಲೋಷಿಪ್‌ನ್ನು, ಕರ್ನಾಟಕ ಸರ್ಕಾರವು ೨೦೦೮ರಲ್ಲಿ 'ಕನ್ನಡ ರಾಜ್ಯೋತ್ಸವ ಪುರಸ್ಕಾರ'ವನ್ನು, ೨೦೧೨ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಸತ್ಕರಿಸಿವೆ. ಇಲ್ಲಿನ ನಟ ಎಸ್.ಕೆ.ಪರಮೇಶ್ವರಯ್ಯ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ, ನಿರ್ದೇಶಕಿ ಮಂಜುಳಾ ಬಾದಾಮಿ ಅವರಿಗೆ ಕೇಂದ್ರ ಸರ್ಕಾರದ ಸಾಂಸ್ಕೃತಿಕ ಪರಿಷತ್ತಿನ ಶಿಷ್ಯವೇತನ (ಮಕ್ಕಳ ರಂಗ ತರಬೇತಿಗಾಗಿ) ದೊರೆತಿವೆ. ಪರಮೇಶ್ವರಯ್ಯ ಹಾಗೂ ಎನ್.ಎಸ್.ರವಿಕುಮಾರ್ ಇವರು ಅಮೆರಿಕಾದ 'ಅಕ್ಕ'ದಲ್ಲಿನ ನಾಟಕದಲ್ಲಿ ಅಭಿನಯಿಸಿದ್ದಾರೆ. ಸಿ.ಜಿ.ಕೆ., ಅಶೋಕ ಬಾದರದಿನ್ನಿ, ಜಂತಿಕೊಳಲು ಸಿದ್ಧರಾಮಪ್ಪ ಮುಂತಾದವರಿಗೆ ಶ್ರೀಮಠದಿಂದ 'ಶಿವಕುಮಾರ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಸಾಣೇಹಳ್ಳಿಯಲ್ಲಿ ಜರುಗುವ ರಾಷ್ಟ್ರೀಯ, ಅಂತರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ನಾಟಕೋತ್ಸವ ಸಂದರ್ಭದಲ್ಲಿ ನಾಡಿನ ಹೆಸರಾಂತ ರಂಗ ದಿಗ್ಗಜ ಪಿ.ಬಿ.ಧುತ್ತರಗಿ, ಹಿರಿಯ ಗಾಯಕ ಪಿ.ಬಿ.ಶ್ರೀನಿವಾಸ್, ಶ್ರೇಷ್ಠನಟಿ ಉಮಾಶ್ರೀ ಮುಂತಾದ ಅನೇಕ ಗಣ್ಯರನ್ನು ಆಹ್ವಾನಿಸಿ ಗೌರವಿಸಲಾಗಿದೆ. ಕುಗ್ರಾಮವಾಗಿದ್ದ ಸಾಣೇಹಳ್ಳಿಯನ್ನು ಭಾರತದ ಭೂಪಟದ ಮೇಲೆ ಸಾಂಸ್ಕೃತಿಕ ಗ್ರಾಮವನ್ನಾಗಿ ಪರಿವರ್ತಿಸಿರುವ ಪ್ರಸ್ತುತ ಗುರುಪೀಠವು 'ರಂಗಮಠ' ವೆಂದು ಖ್ಯಾತಿ ಪಡೆದಿದೆ.

## ಪತ್ರಿಕೆಗಳು

ತಾಲ್ಲೂಕಿನ 'ಹೊಸದುರ್ಗ ಟೈಮ್ಸ್' (ಮಲ್ಲಪ್ಪನಹಳ್ಳಿ), 'ನೀಲಮಣಿ' (ನವಾಬ್‌ಜಾನ್), 'ವಿಜಯಟೈಮ್ಸ್' (ಅಂಜನಪ್ಪ), 'ಹೊಸದುರ್ಗ ಬಿಂಬ' (ಬಿ.ಮಾಲತೇಶ ಮೂರ್ತಿ ಸಂಸ್ಥಾಪಕ ಸಂಪಾದಕರು) ಹಾಗೂ ಈಗಿನ ಸಂಪಾದಕರು ಹೊ.ಸ್ವಾ.ಸಂಜೀವಮೂರ್ತಿ, 'ಗೊರವಿನಕಲ್ಲು' (ಹೊ.ಮ.ರಾಜಣ್ಣ), 'ವಜ್ರಶಕ್ತಿ' (ಹೊನ್ನೇನಹಳ್ಳಿ ಮಂಜುನಾಥ್), 'ಸುಹಾನ ಜೀವನ' (ಇಸ್ಮಾಯಿಲ್), 'ಎಚ್ಚರಿಕೆ' (ಪ್ರಕಾಶಮೂರ್ತಿ), 'ರಾಮ್ ಕಿವಾಯ್ಸ್' (ರಾಮಕೃಷ್ಣ ಮಾಚೇನಹಳ್ಳಿ), 'ಉಪವೀರವಾಣಿ' (ಬ್ರಹ್ಮವಿದ್ಯಾನಗರ), 'ಚೈತನ್ಯ' (ರಾಜಕುಮಾರ್), 'ಪಾರ್ಥ' (ರಂಗಪ್ಪ), ಶೃಂಗಾರವಾಣಿ (ಬ.ಮೈಲಾರಪ್ಪ) ಮುಂತಾದ ಅನೇಕ ಪತ್ರಿಕೆಗಳು ಹೆಸರಾಗಿವೆ. 'ಹೊಸದುರ್ಗ ಬಿಂಬ' ತಾಲ್ಲೂಕಿನ ಮೊದಲ ಪತ್ರಿಕೆಯಾಗಿದೆ.

## ಸಿನಿಮಾರಂಗ

ಸಿನಿಮಾರಂಗವು ಎಲ್ಲರನ್ನೂ ಕೈಬೀಸಿ ಕರೆಯುತ್ತದೆ. ತಾಲ್ಲೂಕಿನ ಮೂರು ಜನರು ಕನ್ನಡ ಸಿನಿಮಾ ರಂಗದಲ್ಲಿ ನಿರ್ದೇಶಕರಾಗಿ ಹೆಸರು ಪಡೆದಿದ್ದಾರೆ.

**ಬೂದಾಳ್ ಕೃಷ್ಣಮೂರ್ತಿ**

ಬೂದಾಳ್ ಕೃಷ್ಣಮೂರ್ತಿ ಅವರು 'ಸೀತಾಂಜನೇಯ' ಮತ್ತು 'ಒಲವಿನ ಕಾಣಿಕೆ' ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ತಾಲ್ಲೂಕಿನ ಬೂದಿಹಾಳು ಶ್ರೀರಾಂಪುರ ಗ್ರಾಮದಲ್ಲಿ ಜನಿಸಿರುವ ಇವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದು, ಅನೇಕ ಚಲನಚಿತ್ರಗಳಲ್ಲಿ ಪೋಷಕ ಪಾತ್ರಗಳಲ್ಲಿ ನಟಿಸಿದ್ದಾರಲ್ಲದೇ ಕೆಲವು ಧಾರಾವಾಹಿಗಳಲ್ಲಿಯೂ ಅಂತಹದೇ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಹಾಸ್ಯ ಪಾತ್ರಗಳಲ್ಲಿಯೂ ಕಾಣಿಸಿಕೊಳ್ಳುವುದುಂಟು. (ಇವರ ನಿರ್ದೇಶನದ 'ಎರಡು ದಂಡೆಯ ಮೇಲೆ' ಚಿತ್ರವು ತೆರೆ ಕಂಡಿರುವುದಿಲ್ಲ).

**ಬಿ.ವಿಜಯ ಗುಜ್ಜರ್**

ಹೊಸದುರ್ಗದ ಬಾಬುರಾವ್‌ಗುಜ್ಜರ್ ಮತ್ತು ಶಕುಂತಲಾಬಾಯಿ ದಂಪತಿಗಳ ಪುತ್ರನಾಗಿ ೧೯೫೦ರಲ್ಲಿ ಜನಿಸಿದ ವಿಜಯ್‌ಗುಜ್ಜರ್ ಅವರು, ೧೯೭೭-೭೮ರಲ್ಲಿ ಸಿನಿಮಾ ಜಗತ್ತಿಗೆ ಪ್ರವೇಶ ಮಾಡಿದರು. ಮೊದಲು ಹಿರಿಯ ನಿರ್ದೇಶಕರುಗಳಾದ ಕೆ.ಬಾಲಚಂದರ್, ಕೆ.ಎಸ್.ಆರ್.ದಾಸ್, ರಾಜೇಂದ್ರಸಿಂಗ್ ಬಾಬು ಮುಂತಾದ ದಿಗ್ಗಜರಲ್ಲಿ ಸಹಾಯಕ ನಿರ್ದೇಶಕರಾಗಿ (ಕೆಲವು ಚಿತ್ರಗಳಿಗೆ) ಕೆಲಸ ಮಾಡಿದ ವಿಜಯ್‌ಗುಜ್ಜರ್ ಅವರು, 'ಕುರಿದೊಡ್ಡಿ ಕುರುಕ್ಷೇತ್ರ' (೧೯೮೨), 'ಜಗ್ಗು' (೧೯೮೩), 'ಧರ್ಮ' (೧೯೮೩), 'ಮರ್ಜಾಲ' (೧೯೮೭) ಮತ್ತು 'ಪತಿ-ಪತ್ನಿ-ಅವಳು' (೨೦೦೨) ಸಿನಿಮಾಗಳನ್ನು ಸ್ವತಂತ್ರವಾಗಿ ನಿರ್ದೇಶನ ಮಾಡಿದರಲ್ಲದೆ ದೂರದರ್ಶನ ವಾಹಿನಿಗಾಗಿ 'ಮಾರೀಕಣಿವೆ ರಹಸ್ಯ', 'ಎಚ್ಚರವಿರಬೇಕು', 'ದಿಢೀರ್‌ದುಡ್ಡು', 'ಕಿವಿಮಾತು' ಮುಂತಾದ ಧಾರಾವಾಹಿಗಳನ್ನು ನಿರ್ದೇಶಿಸಿದರು. ಡಾ॥ರಾಜ್ ಅವರು ಇವರ 'ಧರ್ಮ' ಚಿತ್ರಕ್ಕಾಗಿ 'ಲೋಕಪಾವನೆ ಗಂಗೆ' ಎಂಬ ಗೀತೆಯನ್ನು ಹಾಡಿರುವುದು ವಿಶೇಷ. 'ಕುರಿದೊಡ್ಡಿ ಕುರುಕ್ಷೇತ್ರ' ಚಿತ್ರಸಂಭಾಷಣೆಗಾಗಿ ರಾಜ್ಯ ಪ್ರಶಸ್ತಿ ಹಂಚಿಕೊಂಡಿತು. 'ಮಾರೀಕಣಿವೆ ರಹಸ್ಯ' ಧಾರಾವಾಹಿಗಾಗಿ ಬಾಂಬೆ ಟಿ.ವಿ.ಸಂಸ್ಥೆಯು 'ರಾಫಾ ಟೆಲಿವಿಷನ್ ಅವಾರ್ಡ್' (೨೦೦೦) ನೀಡಿರುತ್ತದೆ. 'ಪತಿ ಪತ್ನಿ ಅವಳು' ಚಿತ್ರವು ಮೊದಲಿಗೆ ವಿದೇಶದಲ್ಲಿ ಬಿಡುಗಡೆಗೊಂಡ ಮೊದಲ ಕನ್ನಡ ಚಿತ್ರ ಎಂಬ ದಾಖಲೆ ನಿರ್ಮಿಸಿದೆ.

ತಮಿಳು, ತೆಲುಗು, ಮರಾಠಿ, ಹಿಂದಿ ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕರಾಗಿ ಅನುಭವ ಹೊಂದಿರುವ ವಿಜಯ ಗುಜ್ಜರ್ ಅವರು 'ಮೈಟಿ ಹಿಮಾಲಯನ್ ಮ್ಯಾನ್' ಎಂಬ ವಾರ್ನರ್ ಬ್ರದರ್ಸ್ ಬ್ಯಾನರ್‌ನ ಇಂಗ್ಲಿಷ್ ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರಲ್ಲದೇ, ಚಿತ್ರದಲ್ಲಿ ಪತ್ರಿಕಾ ವರದಿಗಾರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಅಶುತೋಷ್ ಘೋಷ್ ಅವರೊಂದಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಸೂಪರ್ ಸ್ಟಾರ್ ರಜನಿಕಾಂತ್

ನಟಿಸಿರುವ 'ಸಹೋದರರ ಸವಾಲು' ಚಿತ್ರಕ್ಕಾಗಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಮರಾಠಿಯ 'ಅಮೃತ್‌ಮಂಥನ್' ಧಾರಾವಾಹಿಯನ್ನು ನಿರ್ದೇಶಿಸಿದ್ದಾರೆ. ಈಗ ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

**ಎಂ.ಆರ್.ಬಾಬು**

ಇವರ ನಿಜನಾಮಧೇಯ ಮಹಮ್ಮದ್ ಗೌಸ್. ಜನ್ಮಸ್ಥಳ ಶ್ರೀರಾಂಪುರ (ಬೂದಿಹಾಳ್). 'ಹತ್ಯಾಕಾಂಡ', 'ಹಲೊಯಮ' ಮತ್ತು 'ಇಂದಿನ ಭಾರತ' ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ.

**ಪ್ರಶಾಂತ್ ಎನ್. ಬಾಗೂರ್**

ಬಿ.ಇ.ಪದವೀಧರ ಯುವಕ ಪ್ರಶಾಂತ್ ಎನ್.ಬಾಗೂರ್ ಇವರು, ಇದೀಗ ಕನ್ನಡ ಚಲನಚಿತ್ರ ಸಹಾಯಕ ನಿರ್ದೇಶಕರಾಗಿ, ಸಂಭಾಷಣೆಕಾರರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಹಲವಾರು ನಾಟಕಗಳಲ್ಲಿ ಅಭಿನಯಿಸಿರುವ ಅನುಭವವೂ ಇವರಿಗಿದ್ದು ಸ್ವತಂತ್ರ ನಿರ್ದೇಶಕನಾಗುವ ಗುರಿ ಹೊಂದಿದ್ದಾರೆ. ಚಲನಚಿತ್ರ ಹಂಚಿಕೆದಾರನಾಗಿಯೂ ಕೆಲಸ ಮಾಡಿದ್ದಾರೆ.

ಅಧ್ಯಾಯ-೧೧

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಧ**ನ್ವಂತರಿಯು ಚಿಕಿತ್ಸೆ ನೀಡುತ್ತಿದ್ದ ಪುರಾಣ ಕಾಲದ ದೇವತೆ ಎನ್ನಲಾಗಿದೆ. ಪ್ರಾಚೀನ ಕಾಲದಲ್ಲಿ ಅಶ್ವಿನಿ ದೇವತೆಗಳು, ಅನೇಕ ಋಷಿಗಳು ಈ ಶಾಸ್ತ್ರವನ್ನು ಬಲ್ಲವರಾಗಿದ್ದರೆಂಬ ಪ್ರತೀತಿ ಇದೆ. ಕೆಲವು ಪ್ರಾಣಿ-ಪಕ್ಷಿಗಳು ತಮಗೆ ಅಜೀರ್ಣ-ಅನಾರೋಗ್ಯವಾದಾಗ ಸ್ವಯಂ ಗಿಡಮೂಲಿಕೆಯನ್ನು ತಿನ್ನುವ ಅರಿವನ್ನು ಹೊಂದಿವೆಯೆಂದು ಹೇಳಲಾಗುತ್ತದೆ. 'ಪಾಶ್ಚಾತ್ಯ ವೈದ್ಯಕೀಯ ಪಿತಾಮಹನಾದ ಹಿಪ್ಪೆಕ್ರೆಟಿಸ್ (ಕ್ರಿ.ಪೂ.೩೦೦) ತನ್ನ ವೈದ್ಯ ಗ್ರಂಥಗಳಲ್ಲಿ ಹಿಂದೂ ಮೆಡಿಸಿನ್ ಹೆಸರಿನಿಂದ ಭಾರತೀಯ ಔಷಧ, ಲಕ್ಷಣ, ಉಪಯೋಗವನ್ನು ಹೆಸರಿಸಿದ್ದಾನೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾ ನಂತರದಲ್ಲಿ ಜನಸಾಮಾನ್ಯರ ಆರೋಗ್ಯದ ಬಗ್ಗೆ ಸರ್ಕಾರ ನಿಗಾವಹಿಸಿರುವುದನ್ನು ದಾಖಲೆಗಳಿಂದ ಮನಗಾಣಬಹುದು.

### ಜನರಲ್ ಆಸ್ಪತ್ರೆ-ಸಮುದಾಯ ಆರೋಗ್ಯ ಕೇಂದ್ರ

ಹೊಸದುರ್ಗ ತಾಲ್ಲೂಕು 'ನಂಜುಂಡಪ್ಪನವರ ವರದಿ'ಯ ಮೇರೆಗೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿದ್ದು, ಇಲ್ಲಿನ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ಈ ರೀತಿಯಾಗಿವೆ. ಹೊಸದುರ್ಗ ಪಟ್ಟಣದಲ್ಲಿ ಒಂದು ಸರ್ಕಾರಿ ಜನರಲ್ ಆಸ್ಪತ್ರೆ ಇದೆ ಹಾಗೂ ತಾಲ್ಲೂಕಿನ ಕಿಟ್ಟದಾಳ್-ಕಂಚೀಪುರ, ಬೆಲಗೂರು ಮತ್ತು ಶ್ರೀರಾಂಪುರದಲ್ಲಿ ತಲಾ ಒಂದು ಸಮುದಾಯ ಆರೋಗ್ಯ ಕೇಂದ್ರಗಳಿವೆ (ಒಟ್ಟು ೩).

### ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಬಾಗೂರು-ಬಲ್ಲಾಳ ಸಮುದ್ರ, ದೇವಿಗೆರೆ, ಗುಡ್ಡದನೇರಲಕೆರೆ, ಜಾನಕಲ್ಲು, ಮಾಡದಕೆರೆ, ಮತ್ತೋಡು, ಮಲ್ಲಪ್ಪನಹಳ್ಳಿ, ಸಾಣೇಹಳ್ಳಿ ಹೀಗೆ ಒಟ್ಟು ೮ ಪ್ರಾಥಮಿಕ

ಆರೋಗ್ಯ ಕೇಂದ್ರಗಳಿವೆ ಹಾಗೂ ಒಟ್ಟು ೫೨ ಉಪಕೇಂದ್ರಗಳಿವೆ ಹಾಗೂ ೬೩ ಅಲೋಪತಿ ಆಸ್ಪತ್ರೆಗಳಿವೆ.

**ಹಾಸಿಗೆ–ವಾಹನ–ವಸತಿ**

ಹೊಸದುರ್ಗದಲ್ಲಿನ ಜನರಲ್ ಆಸ್ಪತ್ರೆಯಲ್ಲಿ ೧೦೦ ಹಾಸಿಗೆಗಳ ಸೌಲಭ್ಯವಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ೬ ಹಾಸಿಗೆಗಳ ಅನುಕೂಲವಿದೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ೩೦ ಹಾಸಿಗೆಗಳ ಸೌಕರ್ಯವಿದೆ. ಈ ಎಲ್ಲಾ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಿಗೆ ಸರ್ಕಾರದಿಂದ ಔಷಧಗಳ ಸರಬರಾಜು ಆಗುತ್ತದೆ. ರೋಗಿಗಳನ್ನು ಸಕಾಲದಲ್ಲಿ ಚಿಕಿತ್ಸೆಗೆ ಕರೆತರಲು ಹೊಸದುರ್ಗ ಸಮುದಾಯ ಆರೋಗ್ಯ ಕೇಂದ್ರದಲ್ಲಿ ೨ ಆಂಬ್ಯುಲೆನ್ಸ್‌ಗಳು ಹಾಗೂ ಒಂದು '೧೦೮' ವಾಹನ ಸೌಲಭ್ಯವಿದೆ. ಇದೇ ರೀತಿ ಶ್ರೀರಾಂಪುರದಲ್ಲಿ ೧, ಬೆಲಗೂರಿನಲ್ಲಿ ೧ ಹಾಗೂ ಕಿಟ್ಟದಾಳು–ಕಂಚೀಪುರದಲ್ಲಿ ೧ ವಾಹನ, ಹೀಗೆ ತಾಲ್ಲೂಕಿನಲ್ಲಿ ಒಟ್ಟು ೫ ತುರ್ತುವಾಹನ (ಆ್ಯಂಬ್ಯುಲೆನ್ಸ್)ಗಳ ಸೌಕರ್ಯವಿದೆ. ಅಲ್ಲದೆ ಹೊಸದುರ್ಗ ಪಟ್ಟಣದಲ್ಲಿ ವೈದ್ಯರ ವಸತಿ, ಸ್ಟ್ಯಾಫ್‌ನರ್ಸ್ ವಸತಿ, ಗ್ರೂಪ್–ಡಿ ನೌಕರರ ವಸತಿಗಳಿವೆ. ಬೆಲಗೂರು ಮತ್ತು ಮಾಡದಕೆರೆಯಲ್ಲಿ ಸಹ ಈ ರೀತಿ ವೈದ್ಯವಸತಿ ಸೌಕರ್ಯವಿದೆ. ಹೊಸದುರ್ಗ, ಬೆಲಗೂರು, ಕಂಚೀಪುರ ಇಲ್ಲಿ 'ಎಕ್ಸ್ ರೇ' ಯಂತ್ರೋಪಕರಣಗಳಿವೆ.

೨೦೧೨–೧೩ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ ಒಟ್ಟು ಹೊಸರೋಗಿಗಳು ೧೩,೪೧೭ ಹಾಗೂ ಹಳೇ ರೋಗಿಗಳು ೪,೫೫೯ ಇದ್ದು, ಒಬ್ಬರು (ಪುರುಷರು) ಮರಣಿಸಿದ್ದಾರೆ. ಹೊಸದುರ್ಗ ಜನರಲ್ ಆಸ್ಪತ್ರೆಯಲ್ಲಿ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಸಣ್ಣ ಸರ್ಜರಿಗಳ ಸೌಲಭ್ಯವಿದ್ದು, ಲ್ಯಾಬ್ ಇದೆ. ಹಾವು–ಕಡಿತಕ್ಕೆ ಚುಚ್ಚುಮದ್ದು ದಾಸ್ತಾನು ಇರುತ್ತದೆ. ಸೊಳ್ಳೆ ನಿರ್ಮೂಲನೆಗೆ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ರಕ್ತ ಪರೀಕ್ಷಿಸಿ ಚಿಕಿತ್ಸೆ ನೀಡುವರು. ಡೆಂಗ್ಯು ಬಗ್ಗೆ ಮುನ್ನೆಚ್ಚರಿಕೆ (ಲಾರ್ವಾ ಬಗ್ಗೆ) ನೀಡಲಾಗುವುದು. ಧೂಮಲೀಕರಣ (ಫಾಗಿಂಗ್) ಮಾಡಲಾಗುವುದು. ಇದು ವಿಶೇಷ ಕ್ರಮವಾಗಿರುತ್ತದೆ. ತಾಲ್ಲೂಕಿನ ಎಲ್ಲಾ ಉಪಕೇಂದ್ರಗಳಲ್ಲಿ ಆರೋಗ್ಯ ಕೇಂದ್ರಕ್ಕೆ ಕಟ್ಟಡಗಳಿವೆ.

**೨೪ ತಾಸು ಸೇವೆ**: ಹೊಸದುರ್ಗ, ಕಂಚೀಪುರ, ಬೆಲಗೂರು, ಶ್ರೀರಾಂಪುರ ಮುಂತಾದೆಡೆ 'ಹೆರಿಗೆ' ವಿಭಾಗದ ಸೌಕರ್ಯವಿದೆ. ಮತ್ತೋಡು, ಜಾನಕಲ್ಲು, ಮಾಡದಕೆರೆ, ಮಲ್ಲಪ್ಪನಹಳ್ಳಿ ಇಲ್ಲಿ ಹೆರಿಗೆಗೆ ಸಂಬಂಧಿಸಿದಂತೆ ದಿನದ ೨೪ ತಾಸುಗಳ ಕಾಲವೂ ಸೇವಾ ಸೌಲಭ್ಯವಿದೆ. ಎಲ್ಲಾ ಕಡೆಗಳಲ್ಲಿ 'ಮಡಿಲು ಕಿಟ್', 'ಜನನಿ ಸುರಕ್ಷಾ ಯೋಜನೆ' ಪ್ರಸೂತಿ, 'ತಾಯಿಭಾಗ್ಯ' ಹಾಗೂ ಗ್ರಾಮಾಂತರ ಮಹಿಳೆಗೆ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಆದಲ್ಲಿ ನಿಗದಿತ ವೆಚ್ಚ ನೀಡಲಾಗುವ ಸೌಲಭ್ಯಗಳಿವೆ.

## ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಸ್ನೇಹ ಕ್ಲಿನಿಕ್**: ಪ್ರತಿ ಗುರುವಾರ ೧೦-೧೯ ವಯೋಮಾನದ ಮಕ್ಕಳಿಗೆ ಖಿನ್ನತೆ ಹೋಗಲಾಡಿಸಲು ಜನಸೇಂದ್ರೀಯ ತೊಂದರೆಗಳ ಬಗೆಗೆ ಹಾಗೂ ಗುಪ್ತರೋಗಗಳ ಬಗ್ಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶಿಕ್ಷಣ-ತಿಳುವಳಿಕೆ ನೀಡಲಾಗುವುದು.

**ಖಾಸಗಿ**: ತಾಲ್ಲೂಕಿನಲ್ಲಿ ಖಾಸಗಿ ನರ್ಸಿಂಗ್ ಹೋಂ ಆಸ್ಪತ್ರೆಗಳು ೨, ಚಿಕಿತ್ಸಾಲಯಗಳು ೨೫ ಇವೆ ಹಾಗೂ ಅವುಗಳಲ್ಲಿ ಒಟ್ಟು ೮೫ ಹಾಸಿಗೆಗಳ ಸೌಲಭ್ಯವಿದೆ. ಔಷಧಿ ಅಂಗಡಿಗಳು ಒಟ್ಟು ೫೦ ಇವೆ. ಖಾಸಗಿ ವೈದ್ಯರುಗಳಿದ್ದು, ಇವರುಗಳಲ್ಲಿ ಹಿರಿಯರಾದ ಡಾ॥ ಹನುಮಂತಪ್ಪ, ಡಾ॥ ಮಲ್ಲೇಶಪ್ಪ ಮೊದಲಾದವರು ಪ್ರಮುಖರಾಗಿರುತ್ತಾರೆ.

### ಲಸಿಕೆ

ತಾಲ್ಲೂಕಿನಲ್ಲಿ ೨೦೧೬ರಲ್ಲಿ ಒಟ್ಟು ೩೮೮೮ ಮಂದಿಗೆ ಡಿ.ಪಿ.ಟಿ.ಯನ್ನು ೫೦೧೯ ಪೋಲಿಯೋ ಲಸಿಕೆ, ೫,೧೭೧ ಬಿ.ಸಿ.ಜಿ.ಲಸಿಕೆ, ೪೭೦೬ ಟಿ.ಟಿ.ಲಸಿಕೆ ಹಾಗೂ ಒಟ್ಟು ೫೩೭೪ ದಡಾರ ಲಸಿಕೆ, ೪,೩೨೭ ಹೆಪಟೈಟಿಸ್ 'ಬಿ' ಲಸಿಕೆಗಳನ್ನು ಹಾಕಲಾಗಿದೆ. ಕುಟುಂಬ ಯೋಜನೆ ವಿಧಾನಗಳಲ್ಲಿ ಒಟ್ಟು ೧೬೮೭ ಐ.ಯು.ಡಿ. ಬಳಕೆ, ೮೯೩ ಸಿ.ಸಿ.ಬಳಕೆ, ಒ.ಪಿ-೫೯೨ ಜನರು ಬಳಸಿರುತ್ತಾರೆ. ತಾಲ್ಲೂಕಿನ ಒಟ್ಟು ೫೧ ಏಡ್ಸ್ ರೋಗಿಗಳಲ್ಲಿ ಗಂಡಸರು-೩೦ ಮತ್ತು ಹೆಂಗಸರು-೨೧, ಟಿಎಸ್/ಟಿಜಿ ೧ ಇದ್ದಾರೆ.

ತಾಲ್ಲೂಕಿನಲ್ಲಿ ಒಟ್ಟು ಮೂರು '೧೦೮' ವಾಹನಗಳ ಪ್ರಯೋಜನ ಪಡೆದವರ ಸಂಖ್ಯೆ-೧೦೩೯ ಹಾಗೂ ಐದು ಸಂಖ್ಯೆ ಆಸ್ಪತ್ರೆಗಳು ವಾರದ ೭ ದಿನಗಳಲ್ಲಿ ದಿನದ ೨೪ ತಾಸುಗಳ ಕಾಲವು ತೆರೆದಿದ್ದು, ಇವುಗಳಲ್ಲಾದ ಹೆರಿಗೆಗಳ ಸಂಖ್ಯೆ-೪೩೧ ಆಗಿದೆ. ಜನನಿ ಸುರಕ್ಷಾ ಯೋಜನೆ ಪಡೆದ ಫಲಾನುಭವಿಗಳ ಸಂಖ್ಯೆ-೧೮೮೯ ಆಗಿದೆ. ೨೦೧೧ರಲ್ಲಿ ತಾಲ್ಲೂಕಿನ ಜನನ ಪ್ರಮಾಣ ಶೇ.೧೭ರಷ್ಟು ಹಾಗೂ ಮರಣ ಪ್ರಮಾಣವು ಶೇ.೭ರಷ್ಟು (ಶಿಶುಮರಣ ಪ್ರಮಾಣ ಶೇ.೨೪) ಇದೆ.

**ಸಿಬ್ಬಂದಿ**: ಬೆಲಗೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಟ್ಟು ೩೪ ಸಿಬ್ಬಂದಿಯೂ, ಕಿಟ್ಟದಾಳ್-ಕಂಚೀಪುರ ಸ.ಆ.ಕೇಂ.ದಲ್ಲಿ ೩೨ ಹಾಗೂ ಶ್ರೀರಾಂಪುರ ಸ.ಆ.ಕೇಂ.ದಲ್ಲಿ ೨೯ ಸಿಬ್ಬಂದಿ ಇದ್ದಾರೆ. ಉಪಕೇಂದ್ರಗಳಾದ ಬಾಗೂರಿನಲ್ಲಿ ೧೬, ಬಲ್ಲಾಳಸಮುದ್ರ ೨೦, ದೇವಿಗೆರೆ ೧೨, ಗುಡ್ಡದ ನೇರಲಕೆರೆ ೧೩, ಜಾನಕಲ್ಲು ೧೩, ಮಾಡದಕೆರೆ ೧೫, ಮತ್ತೋಡು ೧೦, ಮಲ್ಲಪ್ಪನಹಳ್ಳಿ ೦೯ ಹಾಗೂ ಸಾಣೇಹಳ್ಳಿಯಲ್ಲಿ ೧೪ ಸಿಬ್ಬಂದಿ ಇದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕೆಮ್ಮು, ನೆಗಡಿ, ಜ್ವರದಂತಹ, ಸಣ್ಣ-ಪುಟ್ಟ ಅನಾರೋಗ್ಯಕ್ಕೆ ಮನೆ ಔಷಧಿ (ನಾಟೀ ಔಷಧಿ)ಗಳನ್ನು ಉಪಯೋಗಿಸಿ ಗುಣಪಡಿಸಿಕೊಂಡಿರುವ

ಉದಾಹರಣೆಗಳುಂಟು. ನಾಟಿ ವೈದ್ಯರು ಗ್ರಾಮಾಂತರ ಪ್ರದೇಶದಲ್ಲಿ ಕಂಡು ಬರುತ್ತಾರೆ. ೨೫ ವರ್ಷಗಳ ಹಿಂದೆ ಹಳ್ಳಿಗರು ಖಾಯಿಲೆ-ಕಸಾಲೆಗಳಿಗೆ ಊರ ದೇವರನ್ನು 'ಅಪ್ಪಣೆ' ಕೇಳುವಷ್ಟು ಮೌಢ್ಯತೆಯಲ್ಲಿ ಮುಳುಗಿದ್ದರು. ಹಳ್ಳದ ಪೂಜೆ, ಶಾಂತಿ-ನಿವಾಳ ಮಾಡಿಸುವುದು, ತೊಳೆಸುವುದು, ಮಂತ್ರಿಸುವುದು ಮುಂತಾದ ನೆಪಗಳಿಂದ ಶೋಷಣೆಗೆ ಒಳಪಡುತ್ತಿದ್ದರು. ದಶಕಗಳಿಂದೀಚೆಗೆ ಮೌಢ್ಯತೆ ಕಡಿಮೆಯಾಗಿದೆ. ಶಿಕ್ಷಣಮಟ್ಟ ಹಾಗೂ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾದಂತೆ ಜನರಲ್ಲಿ ಆರೋಗ್ಯ ಮತ್ತು ಚಿಕಿತ್ಸೆಗಳ ಬಗ್ಗೆ ಅರಿವು ಮೂಡಿದೆ. ಅಲ್ಲದೆ ಸರ್ಕಾರವು ಬಡವರ ಆರೋಗ್ಯ ಹಾಗೂ ಚಿಕಿತ್ಸೆಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿರುವುದರಿಂದ ದೀನ-ದಲಿತರ ಪಾಲಿಗೆ ಬಹಳಷ್ಟು ಸಹಾಯಕವಾಗಿದೆ.

### ಪ್ಲೇಗು

ಈ ಮಾರಣಾಂತಿಕ ರೋಗವು ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಕಾಣಿಸಿದ್ದಿತು. ಕೆಲವರು ಇದನ್ನು 'ಇನ್‌ಫ್ಲುಯೆಂಜಾ' ಎನ್ನುತ್ತಿದ್ದರು. ಊರಲ್ಲಿ ಇಲಿಗಳು ಸತ್ತರೆ ಈ ರೋಗ ಇಡೀ ಹಳ್ಳಿಗೆ ಹಾಗೂ ಅಕ್ಕಪಕ್ಕದ ಹಳ್ಳಿಗಳಿಗೂ ಹರಡುತ್ತಿತ್ತು. ಕೇರಿ-ಕೇರಿಯಲ್ಲಿ ಹೆಣಗಳ ರಾಶಿ ಬೀಳುತ್ತಿತ್ತು. ಹೆಣಗಳನ್ನು ಹೊತ್ತು ಸಾಗಿಸಲು ಜನರು ಸಾಲದಾಗುತ್ತಿದ್ದರು. ಎಲ್ಲಾ ಮನೆಗಳ ಬಾಗಿಲು ಮುಚ್ಚಿರುತ್ತಿದ್ದರು. ಬಾಗಿಲು ತೆಗೆದು ಹೊರಗೆ ಇಣುಕಿದರೆ ಆಚೀಚೆ ಮನೆಗಳವರು ಹೆಣಗಳನ್ನು ಸಾಗಿಸಲು ಕರೆಯುತ್ತಿದ್ದರು. ಮೂಢನಂಬಿಕೆಯಿಂದಾಗಿ ಮನೆ ಹೊರಗಿನ ಗೋಡೆ ಅಥವಾ ಬಾಗಿಲ ಮೇಲೆ 'ನಾಳೆ ಬಾ' ಎಂದು ದಪ್ಪಕ್ಷರಗಳಲ್ಲಿ ಬರೆಸುತ್ತಿದ್ದರು. ಹಳ್ಳಿಯನ್ನು ಬಿಟ್ಟು ಹೊರಬೀಡು ಬಿಡುತ್ತಿದ್ದರು. ರೋಗಭೀತಿ ಅಷ್ಟೊಂದು ಭೀಕರವಾಗಿದ್ದಿತು. ಕ್ರಮೇಣ ಔಷಧೋಪಚಾರಗಳು ದೊರೆತಂತೆ ಬರುಬರುತ್ತಾ ಘಟಕಗಳಲ್ಲಿ ಆರೋಗ್ಯ ಕಾರ್ಯಕರ್ತರ ಭೇಟಿ-ಚಿಕಿತ್ಸಾ ಶಿಬಿರಗಳು ನಡೆದು ಪ್ಲೇಗನ್ನು ಹತ್ತಿಕ್ಕಲಾಗಿದೆ. ೧೯೫೭ರಿಂದೀಚೆಗೆ ಚುಚ್ಚುಮದ್ದು, ಔಷಧ ವಿತರಣೆ ಮುಂತಾದ ಕ್ರಮಗಳಿಂದಾಗಿ ಪ್ಲೇಗ್‌ಮುಕ್ತ ವಾತಾವರಣ ಸ್ಥಿರವಾಯಿತು.

### ಮಲೇರಿಯಾ

ಅನಾಫಿಲಿಸ್ ಸೊಳ್ಳೆಗಳಿಂದ ಹರಡುವ ಈ ರೋಗವು ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿತ್ತು. ೧೯೫೦ರಿಂದೀಚೆಗೆ ಆರೋಗ್ಯ ಇಲಾಖೆಯು ಅನೇಕ ಮುಂಜಾಗ್ರತೆ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಂಡುದರಿಂದಾಗಿ ಮಲೇರಿಯಾ ನಿಯಂತ್ರಣ ಬಹುಮಟ್ಟಿಗೆ ಸಾಧ್ಯವಾಯಿತು. ಹಳ್ಳಿಗಳಲ್ಲಿ ಮತ್ತು ಪಟ್ಟಣದಲ್ಲಿ ಚರಂಡಿ ಹಾಗೂ ಮನೆಗಳಿಗೆ ನಿಯತಕಾಲಿಕವಾಗಿ ಡಿ.ಡಿ.ಟಿ. ಸಿಂಪಡಿಸುವ ಕಾರ್ಯವು ಎಡಬಿಡದೆ ನಡೆದುದರಿಂದ, ಜನರಿಗೆ ಮಾತ್ರೆ, ಚುಚ್ಚುಮದ್ದು ನೀಡುವ

ಆಂದೋಲನವನ್ನು ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದರಿಂದ ಮಲೇರಿಯಾ ಮಾರಿ ಬಹುಮಟ್ಟಿಗೆ ನಿಯಂತ್ರಣದಲ್ಲಿದೆ. ತಾಲ್ಲೂಕಿನಲ್ಲಿ ಜನವರಿ ೨೦೧೨ರಿಂದ ಅಕ್ಟೋಬರ್ ೨೦೧೨ರ ಅವಧಿಯಲ್ಲಿ ಒಟ್ಟು ೧೮ ಮಂದಿ ಮಲೇರಿಯಾ ರೋಗಿಗಳು ಕಂಡುಬಂದಿದ್ದು ಚಿಕಿತ್ಸೆ ನೀಡಲಾಗಿರುತ್ತದೆ. ೨೦೧೦-೧೨ರಲ್ಲಿ ೩,೭೪೮ ರಕ್ತಲೇಪನ (ಮಲೇರಿಯಾ) ಹಳೆಯ ಪ್ರಕರಣಗಳು ಹಾಗೂ ೧೪,೪೯೯ ಹೊಸ ಪ್ರಕರಣಗಳನ್ನು ಸಂಗ್ರಹಿಸಿ, ಪರೀಕ್ಷಿಸಲಾಗಿದ್ದು ಅವುಗಳಲ್ಲಿ ಒಟ್ಟು ೬,೨೬೪ ವಿವಿಧ ಮಾದರಿಗಳಾಗಿ ಗುರುತಿಸಲಾಗಿದೆ (ಪ್ಯಾಸೀವ್-೨,೨೧೧), ಆ್ಯಕ್ಟೀವ್-೨,೫೯೫, ಮಾಸ್-೧೩೦, ಆರ್.ಎಫ್.ಎಸ್.೯, ಆಶಾ-೧,೩೧೧ ಇತ್ಯಾದಿ). ಅಲ್ಲದೇ ಬಾವಿ ನೀರು, ನಲ್ಲಿ ನೀರು, ಬೋರ್‌ವೆಲ್ ನೀರು, ಟ್ಯಾಂಕ್ ನೀರು ಮುಂತಾದ ನೀರಿನ ಮಾದರಿಗಳನ್ನು ಸಹ ಸಂಗ್ರಹಿಸಿ ಪರೀಕ್ಷಿಸಲಾಗುತ್ತದೆ

**ಕಾಲರಾ**

ಶತಮಾನಗಳಷ್ಟು ಹಿಂದೆ ಭೀಕರವಾಗಿ ಹರಡಿದ್ದ ಕಾಲರಾ ಜಾಡ್ಯವು, ಮಾರಣಾಂತಿಕವಾಗಿದ್ದಿತು. ಶುಚಿತ್ವದ ಕೊರತೆಯಿಂದಾಗಿ ಹರಡಿದ್ದ ಈ ರೋಗವನ್ನು ಸಮರೋಪಾದಿಯ ಮುಂಜಾಗ್ರತಾ ಕ್ರಮಗಳಿಂದಾಗಿ ಆರೋಗ್ಯ ಇಲಾಖೆಯು ತೊಡೆದು ಹಾಕಿತು. ಹೋಟೆಲುಗಳಲ್ಲಿ ಕುಡಿಯಲು ತಣ್ಣೀರಿನ ಬದಲು ಬಿಸಿನೀರು ಕೊಡುವ ಕ್ರಮ, ಬೀದಿಗಳಲ್ಲಿ ಹಣ್ಣಿನ ಹೋಳು ಹಾಗೂ ಆಹಾರ ಪದಾರ್ಥಗಳನ್ನು ಮಾರದಂತೆ ಕ್ರಮ, ರೋಗಾಣುಗಳು ಹರಡದಂತೆ ಇನ್ನಿತರ ಕ್ರಮ (ಜನರಿಗೆ ಚುಚ್ಚುಮದ್ದು, ಜಾತ್ರೆ-ಸಂತೆಗಳು ನಡೆಯದಂತೆ ಆದೇಶ ಹೊರಡಿಸುವುದು ಇತ್ಯಾದಿ). ತಾಲ್ಲೂಕಿನಲ್ಲಿ ಈಗ ಕಾಲರಾ ರೋಗಿಗಳು ಕಂಡುಬಂದಿರುವುದಿಲ್ಲ ಎಂದು ಸಮೀಕ್ಷೆಯಿಂದ ಖಚಿತಪಟ್ಟಿದೆ.

**ಟೈಫಾಯಿಡ್**

ತಾಲ್ಲೂಕಿನಲ್ಲಿ ಸಾಕಷ್ಟು ನಿಯಂತ್ರಣದಲ್ಲಿರುವ ಈ ರೋಗವು, ೨೦೧೨ರ ಜನವರಿಯಿಂದ ಅಕ್ಟೋಬರ್‌ವರೆಗೆ ಒಟ್ಟು ೨೪೮ ರೋಗಿಗಳು ಪತ್ತೆಯಾಗಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

**ಕರುಳುಬೇನೆ**

ಕಲುಷಿತ ನೀರಿನಿಂದ ಹಾಗೂ ಇನ್ನಿತರ ಕಾರಣಗಳಿಂದ ಹರಡುವ ಈ ಬೇನೆಯು ತಾಲ್ಲೂಕಿನಲ್ಲಿ ೨೦೧೨ ಜನವರಿಯಿಂದ ೨೦೧೨ರ ಅಕ್ಟೋಬರ್ ವರೆಗಿನ

ಅವಧಿಯಲ್ಲಿ ಒಟ್ಟು ೧,೪೦೭ ಪ್ರಕರಣಗಳು ಕಂಡುಬಂದಿದ್ದು, ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಲಾಗಿರುತ್ತದೆ. ಈ ರೋಗ ಬಾರದಂತೆ ಮುಂಜಾಗ್ರತಾ ಕ್ರಮಗಳನ್ನು ಆರೋಗ್ಯ ಇಲಾಖೆಯು ಕೈಗೊಂಡಿರುತ್ತದೆ.

**ಕ್ಷಯ**

ಈ ರೋಗವು ತಾಲ್ಲೂಕಿನಲ್ಲಿ ಕಾಣಿಸಿಕೊಳ್ಳುತ್ತಿರುವ ಮುಖ್ಯ ಪಿಡುಗು ಆಗಿದೆ. ಬಿ.ಸಿ.ಜಿ.ಚುಚ್ಚುಮದ್ದನ್ನು ಗ್ರಾಮೀಣ ಜನರಿಗೆ ಪಟ್ಟಣಿಗರಿಗೆ ನೀಡುವ ಕ್ರಮ ಜಾರಿಯಲ್ಲಿರುತ್ತದೆ. ೨೦೧೨ರಲ್ಲಿ (ಜನವರಿ–ಅಕ್ಟೋಬರ್) ಒಟ್ಟು ೨೦೧ ರೋಗಿಗಳಿಗೆ ಚಿಕಿತ್ಸೆ ದೊರೆತಿದೆ.

ತಾಲ್ಲೂಕಿನಲ್ಲಿ ಗಳಗಂಡ ರೋಗ, ಸಿತಾಳೆ ಸಿಡುಬು, ಮಧುಮೇಹ ಮತ್ತಿತರ ರೋಗಗಳೂ ಕಂಡುಬಂದಿದ್ದು, ಚಿಕಿತ್ಸೆ ನೀಡಲಾಗಿದೆ.

**ಕುಷ್ಠರೋಗ**

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕುಷ್ಠರೋಗಿಗಳ ಸಮೀಕ್ಷೆ ಗುರುತಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ೨೦೧೨ರ ಜನವರಿಯಿಂದ ಅಕ್ಟೋಬರ್‌ವರೆಗೆ ತಾಲ್ಲೂಕಿನಲ್ಲಿ ಒಟ್ಟು ೩ ಮಂದಿ ಕುಷ್ಠರೋಗಿಗಳನ್ನು ಪತ್ತೆ ಹಚ್ಚಲಾಗಿದ್ದು, ಸೂಕ್ತ ಚಿಕಿತ್ಸೆ ನೀಡಲಾಗಿರುತ್ತದೆ.

**ಡೆಂಗ್ಯು**

ಭಯಾನಕ ರೋಗವಾಗಿ ಇತ್ತೀಚಿನ ದಶಕಗಳಲ್ಲಿ ಕಾಣಿಸಿಕೊಂಡಿರುವ ಈ ರೋಗವು ಈಡೀಸ್ ಈಜಿಪ್ಟೆ ಎಂಬ ಜಾತಿಯ ಸೊಳ್ಳೆಗಳಿಂದ ಮನುಷ್ಯರಿಗೆ ಹರಡುತ್ತದೆ. ವಿಪರೀತ ಜ್ವರ, ತಲೆನೋವು, ಕೀಲು ಮಾಂಸ ಖಂಡಗಳಲ್ಲಿ ವಿಪರೀತ ನೋವು ಹಾಗೂ ರಕ್ತಸ್ರಾವ ಇವು ಈ ರೋಗದ ಲಕ್ಷಣಗಳಾಗಿದ್ದು, ಕೆಲವೊಮ್ಮೆ ಈ ರೋಗವು ತೀವ್ರವಾಗಿ ಪ್ರಾಣಾಂತಿಕವಾಗಿ ಪರಿಣಮಿಸುವುದುಂಟು. ತಾಲ್ಲೂಕಿನಲ್ಲಿ ೨೦೧೨ರ ಜನವರಿ–ಅಕ್ಟೋಬರ್ ಅವಧಿಯಲ್ಲಿ ಒಟ್ಟು ೬ ಜನ ಡೆಂಗೀ ರೋಗಿಗಳು ಕಂಡುಬಂದಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ನೀಡಲಾಗಿದೆ.

**ಹೆಚ್.ಐ.ವಿ./ಏಡ್ಸ್**

ಏಡ್ಸ್ ಎಂಬ ಈ ಭಯಾನಕ ಅಂಟು ಜಾಡ್ಯವು (ವೈರಾಣು ಸೋಂಕು), ರೋಗಿಯಲ್ಲಿ ರೋಗ ನಿರೋಧಕ ಶಕ್ತಿ ಕುಂದುವಂತೆ ಮಾಡಿ ಪ್ರಾಣಾಂತಿಕವಾಗಿ

ಸಂಭವಿಸುವ ಸಾಧ್ಯತೆಗಳುಂಟು. ಏಡ್ಸ್ ರೋಗಿಗಳೊಂದಿಗೆ ಲೈಂಗಿಕ ಸಂಪರ್ಕ ಹಾಗೂ ರಕ್ತದಾನ ಇತ್ಯಾದಿ ಸಂದರ್ಭಗಳಲ್ಲಿ ಈ ಭೀಕರ ರೋಗ ಕ್ಷಿಪ್ರಗತಿಯಲ್ಲಿ ಹರಡುವುದು. ಈ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವ ಕಾರ್ಯಕ್ರಮ ಆರೋಗ್ಯ ಇಲಾಖೆಯಿಂದಾಗುತ್ತಿದೆ. ತಾಲ್ಲೂಕಿನಲ್ಲಿ ೨೦೧೫-೧೬ನೇ ಸಾಲಿಗೆ ಒಟ್ಟು ೨೯೫ ರೋಗಿಗಳು ಪತ್ತೆಯಾಗಿದ್ದು, ಅದರಲ್ಲಿ ೨೧೩ ಪುರುಷರು, ೮೨ ಮಹಿಳೆಯರು, ಹಾಗೂ ಗುಣಮುಖರಾದ ರೋಗಿಗಳ ಸಂಖ್ಯೆ ಒಟ್ಟು ೧೧೯, ಅದರಲ್ಲಿ ೯೨ ಪುರುಷರು, ೨೭ ಮಹಿಳೆಯರು, ೭೮ ಖಾಯಿಲೆಯಿಂದ ಮರಣ ಹೊಂದಿದ ಸಂಖ್ಯೆ ೯ ಅವರಲ್ಲಿ ಪುರುಷರು-೮, ಮಹಿಳೆಯರು-೧ ಇರುತ್ತದೆ. ೧೬೨ ಹೆಚ್.ಐ.ವಿ/ಏಡ್ಸ್ ರೋಗಿಗಳು ಹಾಗೂ ಸಾಮಾನ್ಯ ರೋಗಿ ೧ ಪತ್ತೆಯಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ.

### ಚಿಕೂನ್ ಗುನ್ಯಾ

ಡೆಂಘೀ ಜ್ವರವನ್ನು ಹರಡುವ ಸೊಳ್ಳೆಗಳಿಂದಲೇ ಈ ರೋಗವೂ ಹರಡುವುದು. ಹಗಲಿನಲ್ಲಿ ಸೊಳ್ಳೆಗಳು ಕಚ್ಚುವುದರಿಂದ ಈ ಖಾಯಿಲೆ ಬರುವುದು. ಮೈಮೇಲೆ ಗಂದೆ ಏಳುವುದು, ಕೀಲುನೋವು, ತಲೆನೋವು, ಜ್ವರ, ನಿಶ್ಯಕ್ತಿ, ಹಸಿವಾಗದಿರುವಿಕೆ ಈ ರೋಗದ ಲಕ್ಷಣಗಳು. ಸೊಳ್ಳೆಗಳು ವೃದ್ಧಿಯಾಗದಂತೆ (ಯಾವ ಜಾಗದಲ್ಲೂ ಸೊಳ್ಳೆಗಳು ಮೊಟ್ಟೆ ಇಡಲು ಸಹಾಯಕವಾಗುವ ನೀರು ನಿಲ್ಲದಂತೆ) ಮುಂಜಾಗ್ರತಾ ಕ್ರಮಗಳನ್ನು ಜನರು ಮಾಡಬೇಕಾಗಿರುತ್ತದೆ. ಸ್ವಚ್ಛ ಪರಿಸರ ಇರುವಂತೆ ಎಚ್ಚರವಹಿಸಬೇಕು. ಆರೋಗ್ಯ ಇಲಾಖೆ ಈ ಬಗ್ಗೆ ಪ್ರಚಾರ ಕಾರ್ಯ ನಡೆಸಿದೆ.

### ನಾಯಿ ಕಡಿತ-ಹಾವು ಕಡಿತ

ತಾಲ್ಲೂಕಿನಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ೨೦೧೨ರಲ್ಲಿ (ಜನವರಿ-ಅಕ್ಟೋಬರ್ ಅವಧಿಗೆ) ಒಟ್ಟು ೧,೦೪೭ ಜನರು ನಾಯಿ ಕಡಿತಕ್ಕೆ ತುತ್ತಾಗಿದ್ದಾರೆ ಹಾಗೂ ಇದೇ ಅವಧಿಯಲ್ಲಿ ಒಟ್ಟು ೪೭ ಮಂದಿ ಹಾವು ಕಡಿತಕ್ಕೊಳಗಾಗಿದ್ದಾರೆ. ಇವರೆಲ್ಲರಿಗೆ ಸೂಕ್ತ ಚಿಕಿತ್ಸೆಗಳನ್ನು ನೀಡಲಾಗಿರುತ್ತದೆ.

ತಾಲ್ಲೂಕಿನಲ್ಲಿ ೨೦೧೨ ಜನವರಿಯಿಂದ ಏಪ್ರಿಲ್ (೨೦೧೨)ವರೆಗೆ ಒಟ್ಟು ಹಳೆಯ ರೋಗಿಗಳ ಸಂಖ್ಯೆ:೫,೦೫೨, ಹೊಸ ರೋಗಿಗಳ ಸಂಖ್ಯೆ:೧೬,೨೪೩ ಹಾಗೂ ಒಳರೋಗಿಗಳ ಸಂಖ್ಯೆ ೯೧೧ ಇದ್ದು, ಇವರಲ್ಲಿ ಚಿಕಿತ್ಸೆಗಳು ಫಲಕಾರಿಯಾಗದೇ ಮರಣ ಹೊಂದಿದವರ ಸಂಖ್ಯೆ ೧೧ ಆಗಿರುತ್ತದೆ. ಆಶಾ ಕಾರ್ಯಕರ್ತರು: ೧,೦೦೦ ಜನಸಂಖ್ಯೆಗೆ ಒಬ್ಬರು ಆಶಾ ಕಾರ್ಯಕರ್ತರನ್ನು ನೇಮಿಸಲಾಗಿದೆ.

ಚಿತ್ರದುರ್ಗ ಜಿಲ್ಲಾ ಅಂಕಿಅಂಶಗಳ ನೋಟ ೨೦೧೫-೧೬ ರಂತೆ ಹೊಸದುರ್ಗ ತಾಲ್ಲೂಕಿನಲ್ಲಿ ೦೧ ತಾಲ್ಲೂಕು ಕೇಂದ್ರದ ಆಸ್ಪತ್ರೆ ಹೊಂದಿದ್ದು, ಇದರಲ್ಲಿ ೧೦೦ ಹಾಸಿಗೆಗಳನ್ನು ಒಳಗೊಂಡಿದೆ. ಅಲ್ಲದೆ ೩ ಇತರೆ ಆಸ್ಪತ್ರೆಗಳು ಇದರಲ್ಲಿ ೬೦ ಹಾಸಿಗೆಗಳ ಸಾಮರ್ಥ್ಯವಿದೆ. ಈ ತಾಲ್ಲೂಕಿನಲ್ಲಿ ೧೩ ಸರ್ಕಾರಿ ಆಸ್ಪತ್ರೆಗಳಿದ್ದು, ೧೭ ವೈದ್ಯರನ್ನು ಹೊಂದಿದ್ದು, ೨೪೪ ಹಾಸಿಗೆಗಳನ್ನು ಸಹ ಹೊಂದಿರುತ್ತದೆ. ಅಲ್ಲದೆ ೬೨ ಔಷಧಿ ಅಂಗಡಿಗಳನ್ನು ಹೊಂದಿರುತ್ತದೆ. ೧೩ ಅಲೋಪತಿ ಆಸ್ಪತ್ರೆಗಳು ಮತ್ತು ಇದರಲ್ಲಿ ೨೪೪ ಹಾಸಿಗೆಗಳು, ೯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೫೪ ಹಾಸಿಗೆಗಳನ್ನು ಸಹ ಹೊಂದಿದ್ದು, ೩ ಸಮುದಾಯ ಆರೋಗ್ಯ ಕೇಂದ್ರ ಹಾಗೂ ೬೦ ಹಾಸಿಗೆಗಳನ್ನು ಸಹ ಹೊಂದಿರುತ್ತದೆ.

ಹೊಸದುರ್ಗ ತಾಲ್ಲೂಕಿನಲ್ಲಿ ೨೦೧೫-೧೬ನೇ ಸಾಲಿನಲ್ಲಿ ೫೦೧೯ ಪೋಲಿಯೋ, ೫೧೭೧ ಬಿ.ಸಿ.ಜಿ., ೫೩೭೪ ದಡಾರ, ೪೭೦೬ ಟಿ.ಟಿ. ಲಸಿಕೆಗಳನ್ನು ಸಹ ಹಾಕಿಸಲಾಗಿರುತ್ತದೆ. ಕುಟುಂಬ ಯೋಜನೆಯ ಸಲುವಾಗಿ ೨ ವ್ಯಾಸೆಕ್ಟಮಿ ಪ್ರಕರಣ ಹಾಗೂ ೧೫೦೧ ಟ್ಯೂಬೆಕ್ಟಮಿ ಪ್ರಕರಣಗಳು ದಾಖಲಾಗಿದ್ದು, ೧೬೮೭ I.U.D. users, ೮೯೩ c.c. user, ೫೯೨ O.P.user ಈ ರೀತಿ ಕುಟುಂಬ ಯೋಜನೆ ವಿಧಾನಗಳನ್ನು ಬಳಸಿಕೊಂಡಿರುತ್ತಾರೆ ಈ ತಾಲ್ಲೂಕಿನಲ್ಲಿ ಏಡ್ಸ್‌ರೋಗ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ೩೦ ಜನ ಗಂಡಸರು, ೨೧ ಜನ ಹೆಂಗಸರು, ಟಿಎಸ್/ಟಿಜಿ ೧ ಒಟ್ಟು ೫೨ ಜನರನ್ನು ಏಡ್ಸ್ ರೋಗಿಗಳೆಂದು ಗುರುತಿಸಲಾಗಿದೆ. ೧೩ ಜನ ಗಂಡಸರು, ೦೯ ಜನ ಹೆಂಗಸರು ಒಟ್ಟು ೨೨ ಜನ ಮರಣ ಹೊಂದಿರುತ್ತಾರೆಂದು ಗುರುತಿಸಲಾಗಿದೆ.

ಕುಷ್ಟರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೦೨ ಗಂಡಸರು, ೦೧ ಹೆಂಗಸು ಒಟ್ಟು ೦೩ ಜನರನ್ನು ಕುಷ್ಟ ರೋಗಿಗಳೆಂದು ಗುರುತಿಸಿದ್ದು, ೧೩ ಜನ ಗಂಡಸರು, ೦೬ ಜನ ಹೆಂಗಸರು ಒಟ್ಟು ೧೯ ಜನರನ್ನು ಗುಣವಾದ ರೋಗಿಗಳೆಂದು ಗುರುತಿಸಲಾಗಿದೆ. ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೨೧೩ ಜನ ಗಂಡಸರು, ೮೨ ಜನ ಹೆಂಗಸರು ಒಟ್ಟು ೨೯೫ ಜನರನ್ನು ಗುರುತಿಸಲಾಗಿದೆ. ಇವರಲ್ಲಿ ೬೨ ಜನ ಗಂಡಸರು, ೨೭ ಜನ ಹೆಂಗಸರು ಒಟ್ಟು ೧೧೯ ಜನ ಈ ರೋಗದಿಂದ ಗುಣಮುಖ ಹೊಂದಿರುತ್ತಾರೆ ಮತ್ತು ೮ ಮಂದಿ ಪುರುಷರು ಮತ್ತು ಒಬ್ಬ ಮಹಿಳೆ ಮರಣ ಹೊಂದಿರುತ್ತಾರೆಂದು ತಿಳಿದು ಬಂದಿರುತ್ತದೆ. ಈ ತಾಲ್ಲೂಕಿನಲ್ಲಿ ೧೦೮ ಅಂಬ್ಯುಲೆನ್ಸ್‌ಗಳ ಸಂಖ್ಯೆ ೩ ಹೊಂದಿದ್ದು, ಇದರ ಪ್ರಯೋಜನಗಳನ್ನು ೧೦೩೯ ರೋಗಿಗಳು ಪಡೆದಿದ್ದಾರೆ. ಪ್ರತಿದಿನ (೨೪/೭) ಕಾರ್ಯ ನಿರ್ವಹಿಸುವ ಆಸ್ಪತ್ರೆಗಳ ಸಂಖ್ಯೆ ೫ ಇದ್ದು, ಇಲ್ಲಾದ ಹೆರಿಗೆಗಳ ಸಂಖ್ಯೆ ೪೩೧. ಈ ತಾಲ್ಲೂಕಿನಲ್ಲಿ ಜನನಿ ಸುರಕ್ಷಾ ಯೋಜನೆ ಪಡೆದ ಫಲಾನುಭವಿಗಳ ಸಂಖ್ಯೆ ೧೮೮೯ ಹಾಗೂ ಮಡಿಲು ಕಿಟ್ ಪಡೆದ ಫಲಾನುಭವಿಗಳ ಸಂಖ್ಯೆ ೭೬೪ ಆಗಿದೆ.

ಅಧ್ಯಾಯ–೧೨

# ಪ್ರೇಕ್ಷಣೀಯ ಸ್ಥಳಗಳು

**ಹೊ**ಸದುರ್ಗ ತಾಲ್ಲೂಕು ವೇದಾವತಿ ನದಿಯ ಆಡುಂಬೊಲವಾಗಿದ್ದು, ಇಲ್ಲಿ ಅನೇಕ ಪ್ರಾಚೀನ–ಪೌರಾಣಿಕ ಸ್ಥಳಗಳು ಮತ್ತು ಐತಿಹಾಸಿಕ ಸ್ಥಳಗಳಲ್ಲದೆ, ಇನ್ನಿತರ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಕ್ರಿ.ಪೂ.ಕಾಲದ ತಾಣಗಳೂ ಇಲ್ಲುಂಟು. ತಾಲ್ಲೂಕಿನಲ್ಲಿ ಶತಮಾನಗಳಾಚೆಯಿಂದಲೂ ಅನೇಕ ರಾಜ ಮಹಾರಾಜರುಗಳು, ಸಾಮಂತರು, ಪಾಳೆಯಗಾರರು ಆಳ್ವಿಕೆ ನಡೆಸಿದ ನಾಡುಗಳು, ಕೋಟೆಗಳು–ಪಾಳೆಯಪಟ್ಟುಗಳು ಮೆರೆದ ಪ್ರದೇಶವಿದು. ಅನೇಕ ಪುಣ್ಯಕ್ಷೇತ್ರಗಳಿಗೂ ಈ ತಾಲ್ಲೂಕು ಪ್ರಸಿದ್ಧವಾಗಿವೆ. ಬಾಗೂರು–ಮತ್ತೋಡು–ಶ್ರೀರಾಂಪುರ ಮತ್ತು ನೀರಗುಂದಗಳಲ್ಲಿಯೆ ಒಂದು ಕಾಲದಲ್ಲಿ ತಲಾ ಒಂದು ನೂರಾ ಒಂದು ದೇವಸ್ಥಾನಗಳಿದ್ದವೆನ್ನಲಾಗಿದೆ. ಬಾಗೂರಿನಲ್ಲಿ ಈಗಲೂ ನೂರು ದೇವರುಗಳಿವೆ! (‘ಭಾಗ್ಯಪುರಿ ಸಣ್ಣಕ್ಕಿ ಬಾಗೂರು’– ಬಾಗೂರು ಆರ್.ನಾಗರಾಜಪ್ಪ, ತವನಿಧಿ ಪ್ರಕಾಶನ, ಹೊಸದುರ್ಗ(ಮುದ್ರಣದಲ್ಲಿ). ಜಿಲ್ಲೆಯಲ್ಲೆ ಖ್ಯಾತಿವೆತ್ತ ‘ವಾಣಿವಿಲಾಸ ಸಾಗರ’ವು ಹೊಸದುರ್ಗ ನೆಲದ ಕೊಡುಗೆಯಾಗಿದೆ. ಹೊಯ್ಸಳರ ಕಾಲದ ಶಿಲ್ಪಕಲಾಕೃತಿಗಳು ತಾಲ್ಲೂಕಿನ ಅನೇಕ ಸ್ಥಳಗಳಲ್ಲಿವೆ. ವಿಜಯನಗರದ ಕಾಲದ ಶಿಲ್ಪಕಲಾ ವೈಭವವೂ ಇಲ್ಲುಂಟು. ಅನೇಕ ಕೋಟೆ–ಕೊತ್ತಲ–ಬತೇರಿಗಳು, ಶಾಸನಗಳು, ಮಾಸ್ತಿಕಲ್ಲು–ವೀರಗಲ್ಲುಗಳು ಮುಂತಾದ ಐತಿಹಾಸಿಕ ಸ್ಮಾರಕಗಳು ಬಹಳಷ್ಟಿವೆ. ಹೆಬ್ಬಳ್ಳಿ ಗ್ರಾಮವೊಂದರಲ್ಲೇ ದೊಡ್ಡ ಪ್ರಮಾಣದ ಎಂಟು ವೀರಗಲ್ಲುಗಳಿವೆ. ಅಂತೆಯೇ ದುಗ್ಗಾವರ, ಹೆಗ್ಗೆರೆ, ಜಾನಕಲ್ಲು–ಹೊಸದುರ್ಗ ಈ ಸ್ಥಳಗಳಲ್ಲಿ ಜೈನ ಬಸದಿಗಳಿವೆ. ಮಸೀದಿ–ಚರ್ಚ್‌ಗಳು ಹೊಸದುರ್ಗ ಮತ್ತಿತರೆಡೆ ಇವೆ. ಗುಡ್ಡ–ಬೆಟ್ಟಗಳು, ಹಳ್ಳ–ಕೊಳ್ಳಗಳೂ ಇವೆ. ದೊಡ್ಡ ವಜ್ಜುರ, ಸಣ್ಣ ವಜ್ಜುರ, ಗಿಳಿ ವಜ್ಜುರ, ಬೆನಕನ ವಜ್ಜುರ, ಕಣಿವೆ ವಜ್ಜುರ, ಸಿದ್ದಪ್ಪನ ವಜ್ಜುರ, ಕಣಿವೆ

ರಂಗನಾಥ ವಜ್ಜುರ, ಕಡವಗೆರೆ ವಜ್ಜುರ ಮುಂತಾದ ವಜ್ಜುರಗಳ ಸರಣಿಯೇ ಇರುವ ಭೂ ವೈಜ್ಞಾನಿಕ ವಿಸ್ಮಯ ಈ ತಾಲ್ಲೂಕು. ಭೀಕರ ಬರಗಾಲವಿದ್ದಾಗಲೂ ಈ ಕೆಲವು 'ವಜ್ಜುರ' ಗಳಲ್ಲಿ ಜಲದ ಒರತೆ ಕಡಿಮೆಯಾಗದಿರುವುದು ನಿಜಕ್ಕೂ ಅಚ್ಚರಿಯನ್ನುಂಟು ಮಾಡುವುದು. ಹಾಲುರಾಮೇಶ್ವರ ವಜ್ಜುರವಂತೂ ನಾಡಿನಲ್ಲಿ ಮನೆಮಾತಾಗಿದೆ. ಬಾಗೂರಿನ ಕೇಶವ ದೇವರ ಗುಡಿಯಲ್ಲಿರುವ ಹಾಗೂ ಗವಿರಂಗನಾಥನ ಕ್ಷೇತ್ರದಲ್ಲಿರುವ ಕಂಚಿನ ಗರುಡ ವಿಗ್ರಹಗಳು ಅತ್ಯಪೂರ್ವ ಲೋಹ ಕಲಾಕೃತಿಗಳಾಗಿವೆ. ಹೊಸದುರ್ಗ ದುರ್ಗಾಂಬಿಕೆ ಗುಡಿಯ ಕಾಷ್ಠದ ಕೋಣನ ವಿಗ್ರಹ, ಶ್ರೀರಾಂಪುರದಲ್ಲಿರುವ ಐತಿಹಾಸಿಕ ಕುಮಾರಮಲ್ಲನ ಮರದ ರುಂಡ ವಿಗ್ರಹ, ಬಾಗೂರಿನ ಪಂಚಲೋಹದ ಕೋದಂಡರಾಮ ವಿಗ್ರಹ ಅಪೂರ್ವವಾದವುಗಳು. ಮುಜರಾಯಿ ಇಲಾಖೆಗೆ ಸೇರಿದ 'ಎ' ವರ್ಗ ಒಂದು ಹಾಗೂ 'ಸಿ' ವರ್ಗದ ಎಪ್ಪತ್ತು ದೇವಾಲಯಗಳಲ್ಲಿ ಆಂಜನೇಯ ದೇವರುಗಳೇ ಒಟ್ಟು ಮೂವತ್ತು ಸಂಖ್ಯೆಯಲ್ಲಿರುವುದು ವಿಶೇಷ. ತಾಲ್ಲೂಕಿನ ಕೆಲವು ಮುಖ್ಯ ಪ್ರೇಕ್ಷಣೀಯ ಸ್ಥಳಗಳನ್ನು ಇಲ್ಲಿ 'ಅ' ಕಾರಾದಿಯಾಗಿ ಪರಿಚಯಿಸಲಾಗಿದ್ದು, ಸ್ಥಳ ಶೀರ್ಷಿಕೆಯೊಂದಿಗಿರುವ ಕಂಸದಲ್ಲಿ ಆಯಾ ಸ್ಥಳದ ೨೦೧೧ ರ ಜನಗಣತಿಯನ್ವಯ ಜನಸಂಖ್ಯೆಯನ್ನು ನಮೂದಿಸಲಾಗಿದೆ.

**ಅರಳೀಹಳ್ಳಿ:** (೧,೨೫೮) ಇದು ಹೊಸದುರ್ಗ ಪಟ್ಟಣದಿಂದ (ಅಜ್ಜಂಪುರ ರಸ್ತೆಯಲ್ಲಿ) ಆರು ಕಿ.ಮೀ. ದೂರದಲ್ಲಿರುವ ಗ್ರಾಮ. ಇಲ್ಲಿರುವ ಮಲಿಯಮ್ಮದೇವಿ ಗ್ರಾಮ ದೇವತೆಯು ಪ್ರಾಚೀನ ಕಾಲದಲ್ಲಿ ಮಲೆನಾಡಿನಿಂದ ಬಿದಿರು ತುಂಬಿದ್ದ ಎತ್ತಿನಗಾಡಿಯಲ್ಲಿ ಬಂದು ಇಲ್ಲಿದ್ದ ಅರಳೀತೋಪಿನಲ್ಲಿ ಇಳಿದು ಹುತ್ತದ ಕ್ಷಾವೆಯಲ್ಲಿ ನೆಲೆಸಿದಳೆಂದೂ, ಹುತ್ತದ ಬಳಿ ಸೊಂಪಾಗಿ ಬೆಳೆದಿದ್ದ ತಂಕಟೆ ಗಿಡವನ್ನು ಸೌದೆಗೆಂದು ಕಡಿಯಲು ಹರಿಜನನೊಬ್ಬನು ಕೊಡಲಿ ಬೀಸಿದ್ದರಿಂದ ಈ ಚೌಡಿಯ ತಲೆಗೆ ಏಟು ಬಿದ್ದು ತಲೆಯು ಎರಡು ಹೋಳಾಗಿ ಎರಡು ರುಂಡಗಳಾಗಿ ಮಾರ್ಪಟ್ಟವೆಂದೂ, ಆ ವ್ಯಕ್ತಿಯು ರಕ್ತಕಾರಿ (ದೂರದಲ್ಲಿ) ಸತ್ತುಬಿದ್ದನೆಂದೂ, ಜನರು ಆ 'ಚೌಡಿ' ದೇವತೆಗೆ ಗುಡಿಕಟ್ಟಿದುದಲ್ಲದೆ ಅರಳೀತೋಪಿನಲ್ಲಿ ಮನೆಗಳನ್ನು ಕಟ್ಟಿಕೊಂಡು ನೆಲೆಸಿದ್ದು, 'ಅರಳೀಹಳ್ಳಿ' ಎಂದು ಹಳ್ಳಿಗೆ ಹೆಸರು ಬಂದಿತೆಂದು ದಂತಕಥೆಯೊಂದು ಪ್ರಚಲಿತದಲ್ಲಿದೆ. ಮಲೆನಾಡಿನಿಂದ ಬಂದ ದೇವಿಯನ್ನು 'ಮಲೆಯಮ್ಮ>ಮಲಿಯಮ್ಮ' ಎಂದು ಕರೆಯತೊಡಗಿದರು.

ಶತಮಾನಗಳ ಹಿಂದಿನ ಈ ದೇವತೆಗೆ ಒಂದು ಕಾಲದಲ್ಲಿ ತೊಂಬತ್ತೊಂಭತ್ತು ಗ್ರಾಮಗಳ ಜನರು ಒಕ್ಕಲಾಗಿದ್ದರೆಂದು ದಾಖಲೆಗಳಿವೆ. ಅಲ್ಲದೆ, ಹಿಂದಿನ ಕಾಲದಲ್ಲಿ ರಥೋತ್ಸವ ಮತ್ತು ಸಿಡಿ ಉತ್ಸವಗಳಾಗುತ್ತಿದ್ದವೆಂದು ಜಾನಪದ ತ್ರಿಪದಿಗಳಲ್ಲಿ ವರ್ಣನೆ ಇದ್ದು, 'ಸಿಡಿ' ಬಂಡಿಯ ಗಾಲಿಗಳು ಮತ್ತು 'ಸಿಡಿಮರ'ದ ತೊಲೆಯನ್ನು ಇಂದಿಗೂ ಗುಡಿಯಲ್ಲಿ ಆವರಣದಲ್ಲಿ ಕಾಣಬಹುದಾಗಿದೆ. ದೇವಿಗೆ ಎರಡು ರುಂಡಗಳಿರುವುದರಿಂದ ಬರುವ ಭಕ್ತರು ಎರಡು ತೆಂಗಿನಕಾಯಿ ಹೊಡೆಯಿಸಿ ಪೂಜೆ ಸಲ್ಲಿಸುವ ಸಂಪ್ರದಾಯವಿದೆ. ಅನೇಕ ವರ್ಷಗಳಿಗೊಮ್ಮೆ ಮಲಿಯಮ್ಮ ದೇವಿಯ

ಜಾತ್ರೆ ಭಾರೀ ಪ್ರಮಾಣದಲ್ಲಿ ನಡೆಯುತ್ತದೆ. ಅಂದಾಜು ಇಪ್ಪತ್ತೈದು ಸಾವಿರ ಜನರು ಜಾತ್ರೆಗೆ ಸೇರುವರು. ಅನೇಕ ಜಿಲ್ಲೆಗಳಲ್ಲಿ ಒಕ್ಕಲಿದ್ದಾರೆ. ದೇವಿಯ ಉತ್ಸವ ಮೂರ್ತಿ ಇದ್ದು, ದೊಡ್ಡ ಪಾಲಿಕೆಯಲ್ಲಿ ಹೊರಡಿಸುತ್ತಾರೆ. ಗುಡಿಗೆ ಸೂಜಿಕಲ್ಲು ಗ್ರಾಮದವರು ಕಟ್ಟಿಸಿರುವ ದೊಡ್ಡ ಪೌಳಿ ಇದೆ.

**ಕಂಗುವಳ್ಳಿ(೨೦೦೬)**: ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ ದೂರದಲ್ಲಿರುವ ಕಂಗುವಳ್ಳಿ, ಒಂದು ಐತಿಹಾಸಿಕ ಗ್ರಾಮ. ಮಾಸ್ತಿಕಲ್ಲು, ವೀರಗಲ್ಲು, ಶಿಲಾ ಶಾಸನ ಹಾಗೂ ದೇವಸ್ಥಾನಗಳಿವೆ. ವೇದಾವತಿ ನದಿಯ ದಡದಲ್ಲಿ ಈ ಗ್ರಾಮವಿದೆ(ದಕ್ಷಿಣಕ್ಕೆ). ಹತ್ತಿರದಲ್ಲಿ ನದಿಗೆ ಚೆಕ್‌ಡ್ಯಾಂ ನಿರ್ಮಾಣಗೊಂಡಿದ್ದು, ರೈತರಿಗೆ ಅನುಕೂಲವಾಗಿದೆ. ನಂದನ ಸಂವತ್ಸರದಲ್ಲಿ ಇಲ್ಲಿನ ರಾಮೇಲಿಂಗ ದೇವರಿದೆ. ಹೊಲ-ಗದ್ದೆಗಳನ್ನು ಅಯ್ಯಪ್ಪರಸನು ದತ್ತಿ ನೀಡಿದ ಬಗ್ಗೆ ಶಾಸನವಿದೆ. ಈ ಗ್ರಾಮದಲ್ಲಿ ಪ್ರತಿ ವರ್ಷ ಜನವರಿಯಲ್ಲಿ ಶ್ರೀ ಮಹೇಶ್ವರಸ್ವಾಮಿ ದೇವರ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ರಾಮಲಿಂಗೇಶ್ವರ, ಮಹೇಶ್ವರ, ವೆಂಕಟೇಶ್ವರ, ಕರಿಯಮ್ಮ, ಮಾತೆಂಗಮ್ಮ, ಆಂಜನೇಯ, ಮೈಗಳಮ್ಮ, ಮಾಸ್ತಮ್ಮ ದೇವರ ಗುಡಿಗಳಿವೆ. ಪ್ರಾಚೀನ ಸ್ಥಳವಾದ ಮಳಲಿ ಗ್ರಾಮಕ್ಕೆ ಸಮೀಪದಲ್ಲಿ ಈ ಸ್ಥಳವಿದೆ. ಇಲ್ಲಿನ ಶಾಸನ ಈಚೆಗೆ ಕಾಣೆಯಾಗಿದೆ.

**ಕಂಚೀಪುರ(೩,೩೦೫)**: ಹೊಸದುರ್ಗದಿಂದ ೨೫ ಕಿ.ಮೀ. ದೂರದಲ್ಲಿದೆ (ಗುಡ್ಡದ ನೇರಲಕೆರೆ ಹತ್ತಿರ) ಇದೊಂದು ಐತಿಹಾಸಿಕ ಸ್ಥಳ. ಅಲ್ಲದೆ ಇಲ್ಲಿನ ಗ್ರಾಮದೇವರಾದ ಕಂಚೀವರದರಾಜ ಸ್ವಾಮಿಯು ಕರ್ನಾಟಕದಲ್ಲಿ ಮೊಟ್ಟಮೊದಲು 'ಅಂಬಿನೋತ್ಸವ' ಆಚರಿಸುವ ದೇವರಾಗಿದೆ. ಮಹಾಲಯ ಅಮಾವಾಸ್ಯೆಗಿಂತ ಮೊದಲು ಉತ್ತರೆಮಳೆ ಹುಟ್ಟಿದ ಮೊದಲನೆ ಸೋಮವಾರದಂದು ಕಂಚೀದೇವರ 'ಉತ್ತರೆ ಮಳೆ ಅಂಬು' ಜರುಗುವುದು. ಈ ದೇವರಿಗೆ ಅನೇಕ ಸ್ಥಳಗಳಲ್ಲಿ 'ಅಂಬಿನೋತ್ಸವ' ನಡೆಯುತ್ತದೆ. ಕಂಚೀದೇವರಿಗೆ ಹರಕೆ ಮಾಡಿಕೊಂಡಿದ್ದ ಭಕ್ತರು ಹರಕೆಯ ಹಣವನ್ನು ಚಿಲ್ಲರೆ ರೂಪದಲ್ಲಿ ಭಕ್ತಿಯಿಂದ ದೇವರ (ಉತ್ಸವದ) ಮೇಲೆ ಎರಚುವುದು ಕರ್ನಾಟಕದಲ್ಲೇ ಅಪರೂಪದ ಸಂಪ್ರದಾಯವಾಗಿದೆ. ಈ ದೇವರ ರಥೋತ್ಸವ ಸಂದರ್ಭದಲ್ಲಿ ದೇವರಿಗೆ 'ಪಾಷಾಣದ ಎಡೆ' ಸೇವೆ, 'ಸೊರಗಂಬಲಿ ಸೇವೆ' ಅಂಬಿನ ಸಂದರ್ಭದಲ್ಲಿ 'ಬುತ್ತಿಬಾನದ ಎಡೆ'ಯನ್ನು ಉತ್ತರೇ ಬೆಟ್ಟಕ್ಕೆ ಭಕ್ತಿಯಿಂದ ಹೊತ್ತೊಯ್ಯುವುದು, ಕಂಚೀದೇವರ ಕುಣಿತ ಇವೆಲ್ಲ ವಿಶೇಷವಾದ ಆಚರಣೆಗಳಾಗಿವೆ. ಅಲ್ಲದೇ ದಶರಥರಾಮೇಶ್ವರ ಕ್ಷೇತ್ರದಲ್ಲಿ ಉತ್ತರೇ ಮಳೆಯಲ್ಲಿ ಮೊದಲು 'ಬಿಳಿನಾಮ' ಧರಿಸುವ ಕಂಚೀದೇವರು, ದಶರಥರಾಮೇಶ್ವರ ದೇವರಿಗೆ 'ಮುಳ್ಳಾವುಗೆ' ಸೇವೆ ಸಲ್ಲಿಸುತ್ತದೆ. ಕಂಚೀಪುರದಲ್ಲಿ ಅನೇಕ ವೀರಗಲ್ಲುಗಳು, ಶಾಸನಗಳು ಇವೆ. ಕಂಚೀದೇವರ ಗುಡಿ ಮುಂದೆ, ಅಲ್ಲಣನಾಥ ದೇವರಗುಡಿ ಮುಂದೆ ಹಾಗೂ ಕಂಚೀ ಬೆಟ್ಟದಲ್ಲಿರುವ ಮೂಲ ದೇವಸ್ಥಾನದ ಮುಂದೆ ಇತಿಹಾಸ ಕಾಲದ ನಾಡ ಕಬ್ಬಿಣದ (ಶಾಸನವಿರುವ) ಗರುಡಗಂಭಗಳಿವೆ. ಬೆಟ್ಟದ ಮೇಲೆ ದೊಡ್ಡ ವೀರಗಲ್ಲು ಇದೆ. ಕಂಚೀಪುರದಲ್ಲಿ ಜರುಗುವ ಕಂಚೀದೇವರ

ಅಂಬು ಹಾಗೂ ರಥೋತ್ಸವ ಸಂದರ್ಭಗಳಲ್ಲಿ ಅಂದಾಜು ಹತ್ತು ಸಾವಿರ ಜನರು ಸೇರುತ್ತಾರಲ್ಲದೆ ಭಕ್ತರು ಲಕ್ಷಾಂತರ ರೂಪಾಯಿ ಚಿಲ್ಲರೆ (ಕಾಣಿಕೆ) ಯನ್ನು ದೇವರ ಮೇಲಕ್ಕೆ ಎರಚುತ್ತಾರೆ. ಕಂಚೀಪುರಕ್ಕೆ ಹಿಂದೆ 'ಅರುಳಿ ಹಾಳು' ಎಂಬ ಹೆಸರಿದ್ದು ಅರಣ್ಯದಿಂದ ಗ್ರಾಮ ಸ್ಥಳಾಂತರಗೊಂಡಿದೆ. ಬಸ್ಸುಗಳ ಸಂಚಾರ ವ್ಯವಸ್ಥೆ ಇದೆ. ಚೈತ್ರ ಬಹುಳದಲ್ಲಿ ರಥೋತ್ಸವ ಆಗುತ್ತದೆ.

**ಕೆಲ್ಲೋಡು (೧೭೦೭)**

ಹೊಸದುರ್ಗದಿಂದ (ಬೆಂಗಳೂರು ಮಾರ್ಗ) ಕೇವಲ ೬ ಕಿ.ಮೀ. ಸನಿಹದಲ್ಲಿರುವ ಈ ಸ್ಥಳವು ವೇದಾವತಿ ನದಿಯ ಎಡದಂಡೆಯಲ್ಲಿದೆ. ಇದು ಐತಿಹಾಸಿಕ ಗ್ರಾಮ. ಇಲ್ಲಿನ ಆಂಜನೇಯ ದೇವರ ಬಗ್ಗೆ ಶಾಸನವಿದೆ (ಗ್ರಾಮ ದತ್ತಿ ಬಗ್ಗೆ). ಮೈಸೂರಿನ ಅರಸ ಕೃಷ್ಣರಾಜ ಒಡೆಯರ್ ಅವರು ಇಲ್ಲಿಗೆ ದಿನಾಂಕ: ೨೪-೦೨-೧೯೪೦ ರಂದು ಇಲ್ಲಿನ ಸೇತುವೆಯ ಪ್ರಾರಂಭೋತ್ಸವಕ್ಕೆ ಆಗಮಿಸಿದ್ದರು. ಸ್ವಾತಂತ್ರ್ಯಾನಂತರ ಮೈಸೂರು ರಾಜ್ಯಪಾಲರಾಗಿದ್ದ ಜಯಚಾಮರಾಜ ಒಡೆಯರ್ ಅವರು ಇಲ್ಲಿಗೆ ದಿನಾಂಕ: ೨೪ ಫೆಬ್ರವರಿ ೧೯೫೫ರಂದು ಕುಡಿಯುವ ನೀರು ಸರಬರಾಜು ಕೇಂದ್ರ (ಮೀನಾಕ್ಷಿದೇವಿ ವಾಟರ್ ವರ್ಕ್ಸ್) ದ ಪ್ರಾರಂಭೋತ್ಸವಕ್ಕೆ ಆಗಮಿಸಿದ್ದರು. ವೇದಾವತಿ ನದಿಗೆ ಈಗ ಅಡ್ಡಲಾಗಿ 'ಬ್ಯಾರೀಜ್'ಅನ್ನು ನಿರ್ಮಿಸಲಾಗಿದೆ. ನದಿಯ ಬಲದಂಡೆಯ ಕಡೆಗೆ ಇಪ್ಪತ್ತಾರು ಎಕರೆ ಪ್ರದೇಶದಲ್ಲಿನ 'ಕನಕನಗರ'ದಲ್ಲಿ ಭಾರತದಲ್ಲಿಯೇ ಪ್ರಥಮವೆನ್ನಲಾಗಿರುವ ಮೂವತ್ನಾಲ್ಕು ಅಡಿ ಎತ್ತರದ ಬೃಹತ್ ಗಾತ್ರದ ಕನಕದಾಸರ (ಏಕಶಿಲಾ) ವಿಗ್ರಹ ಪ್ರತಿಷ್ಠಾಪನೆಗೊಳ್ಳುತ್ತಿದೆ. ಅನೇಕ ದೇವಾಲಯಗಳ ಸಮುಚ್ಚಯ ಹಾಗೂ ಕನಕಗುರುಪೀಠದ ಶಾಖಾಮಠ ಮುಂತಾದ ಕಟ್ಟಡಗಳು ಆಗುತ್ತಿವೆ.

**ಗವಿರಂಗನಾಥಸ್ವಾಮಿ ಕ್ಷೇತ್ರ (೩೦೩)**

ಹೊಸದುರ್ಗದಿಂದ (ಬೆಂಗಳೂರು ಮಾರ್ಗ) ೨೪ ಕಿ.ಮಿ. ದೂರದಲ್ಲಿರುವ ಈ ಕ್ಷೇತ್ರವು ಕರ್ನಾಟಕದ ಏಕೈಕ ಕೂರ್ಮಾವತಾರ ಕ್ಷೇತ್ರವಾಗಿದೆ. ಬೆಟ್ಟದ ಮೇಲೆ ಜೀರ್ಣೋದ್ಧಾರಗೊಂಡಿರುವ ಪುರಾಣಕಾಲದ ಪುಣ್ಯಕ್ಷೇತ್ರವಿದಾಗಿದ್ದು, ವಾರ್ಷಿಕ ರೂ.೧೦ ಲಕ್ಷಕ್ಕೂ ಹೆಚ್ಚು ಆದಾಯ ಬರುತ್ತಿರುವ, ಮುಜರಾಯಿ ಇಲಾಖೆಯ 'ಎ' ವರ್ಗದ ದೇವಾಲಯವೆಂಬ ಹೆಗ್ಗಳಿಕೆ ಇದಕ್ಕೆ ಇದೆ. ಗವಿರಂಗನಾಥಸ್ವಾಮಿಗೆ ಸಲ್ಲುವ ಸೇವೆಗಳು-ಉತ್ಸವಗಳು ಯಾವಾಗಲೂ ಇರುತ್ತವಾದ್ದರಿಂದ ಜನರು 'ನಿತ್ಯೋತ್ಸವದ ಗವಿರಂಗ', 'ಅನ್ನದಾನಿ ಗವಿರಂಗ' ಎಂದು ಭಕ್ತಿಯಿಂದ ಹೊಗಳುತ್ತಾರೆ. ರಾಜ್ಯಾದ್ಯಂತವೂ ಈ ದೇವರಿಗೆ ಭಕ್ತರಿದ್ದು ಆಗಾಗ್ಗೆ ಬಂದು ಸೇವೆ ಸಲ್ಲಿಸುತ್ತಾರೆ. ಈ ದೇವರ ಉತ್ಸವ ಮೂರ್ತಿಯು ಹತ್ತಿರದ ಗವಿರಂಗಾಪುರ ಗ್ರಾಮದಲ್ಲಿರುತ್ತದೆ. ಪೂಜೆ-

ಉತ್ಸವಗಳಿಗೆ ನಿತ್ಯ ಕರೆತರುತ್ತಾರೆ. ಬೆಟ್ಟದ ತಪ್ಪಲಿನಿಂದ ನೋಡಲು ಈ ದೇಗುಲ ಸಮುಚ್ಚಯವು ಭವ್ಯವಾಗಿ ಕಾಣಿಸುವುದು. ರಾಜ-ಮಹಾರಾಜರು/ ಪಾಳೆಯಗಾರರು ಈ ದೇವರಿಗೆ ಕಂಚಿನ ಗರುಡ ಮುಂತಾದ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಗರುಡಗಂಭ ನೆಡಿಸಿದ್ದಾರೆ. ಉಯ್ಯಾಲೆ ಕಂಬ ಹಾಕಿಸಿದ್ದಾರೆ. ಬೆಟ್ಟಕ್ಕೆ ಬರುವ ಭಕ್ತರು ಹತ್ತುವುದಕ್ಕಾಗಿ ಮೆಟ್ಟಿಲುಗಳನ್ನು ಮಾಡಿಸಿದ್ದಾರೆ. ಬೆಂಗಳೂರಿನಿಂದ ಬರುವ ಭಕ್ತರಿಗೆ ಕ್ಷೇತ್ರಕ್ಕೆ ನೇರ ಬಸ್ಸುಗಳ ಸೌಕರ್ಯವಿದೆ. ಅಲ್ಲದೆ ಶ್ರೀ ಕ್ಷೇತ್ರದಲ್ಲಿ ನೂರಾರು ಛತ್ರಗಳು ಭಕ್ತರ ವಸತಿ ಸೌಕರ್ಯಕ್ಕಾಗಿ ಇವೆ. ಬೆಟ್ಟದ ಕೆಳಗೆ ತೋಪಿನಲ್ಲಿ ಐತಿಹಾಸಿಕ ಪುಷ್ಕರಣಿಯು ಕಲಾತ್ಮಕ ಮಂಟಪದ ಬಳಿ ಇದೆ. ಬೆಟ್ಟದ ಕೆಳ ಭಾಗದಲ್ಲಿರುವ ಅನಂತಶಯನ ಪದ್ಮನಾಭ ವಿಗ್ರಹವು ಅತ್ಯಾಕರ್ಷಕವಾಗಿದೆ. ಬೆಟ್ಟದ ಮೇಲೆ ಗವಿರಂಗನಾಥಸ್ವಾಮಿಯ ಮೂಲದೇವರ ಗುಹಾದೇವಾಲಯವಿದೆ.

ಅಲ್ಲದೆ ಪರಿವಾರ ದೇವತೆಗಳಾದ ಕೆಂಚರಾಯನ ಗುಡಿ, ಕಾಡರಾಯನ ಗುಡಿ, ಕೆಂಚಲಕ್ಕಮ್ಮನ(ಲಕ್ಷ್ಮಿ)ಗುಡಿ ಮುಂತಾದ ಅನೇಕ ಗುಡಿಗಳಿವೆ. ಈ ದೇವಾಲಯ ಸಮುಚ್ಚಯವು ವಿಜಯನಗರದವರ ಕಾಲದ ರಚನೆಗಳಾಗಿರುವ ಸಾಧ್ಯತೆ ಇದೆ. ಕ್ರಿ.ಶ.೧೫ನೆಯ ಶತಮಾನದಲ್ಲಿ ಬೂದಿಹಾಳನ್ನು ಆಳಿದ ಸಿರುಮನೃಪಾಲನು ಈ ಕ್ಷೇತ್ರದಲ್ಲಿ ದೇಗುಲಗಳನ್ನು ನಿರ್ಮಿಸಿದ್ದಿರಬೇಕು. ಬೂದಿಹಾಳು (ಶ್ರೀರಾಂಪುರ) ಗ್ರಾಮದಲ್ಲಿ ಆಗಿನ ಕಾಲದ ಲಕ್ಷ್ಮೀಕಾಂತ ದೇಗುಲದ ಕಲಾತ್ಮಕ ಮಂಟಪವಿದೆ. ದಕ್ಷಿಣ ಭಾರತದಲ್ಲಿ 'ಕೂರ್ಮಾವತಾರ'ದ ಈ ಕ್ಷೇತ್ರವನ್ನು ಬಿಟ್ಟರೆ, ತಮಿಳುನಾಡಿನ ತಿರುಕಚ್ಚೂರು (ಚಂಗಲ್‌ಪೇಟೆ ಜಿಲ್ಲೆ) ಮತ್ತು ಆಂಧ್ರ ಪ್ರದೇಶದ ಗಾಂಜಾಂ ಜಿಲ್ಲೆಯಲ್ಲೂ ಇವೆ. ಗವಿರಂಗನಾಥಸ್ವಾಮಿಯ ರಥೋತ್ಸವ-ಜಾತ್ರೆಯು ಮೂರು, ಐದು ಅಥವಾ ಒಂಬತ್ತು ವರ್ಷಗಳಿಗೊಮ್ಮೆ ಚೈತ್ರಶುದ್ಧ ದಶಮಿಯ ನಂತರ ಜರುಗುತ್ತದೆ. ವಿಜಯದಶಮಿ, ವೈಕುಂಠ ಏಕಾದಶಿ ಹಾಗೂ ಪ್ರತಿ ಶನಿವಾರ ವಿಶೇಷ ಪೂಜೆಗೆ ಭಾರೀ ಸಂಖ್ಯೆಯಲ್ಲಿ ಭಕ್ತರು ಕಿಕ್ಕಿರಿದು ಸೇರುತ್ತಾರೆ. ರಥೋತ್ಸವಕ್ಕೆ ಅಂದಾಜು ೨೫ ಸಾವಿರ ಜನ ಸೇರುತ್ತಾರೆ. ಚಿತ್ರದುರ್ಗ ಜಿಲ್ಲೆಯ ಮಹಾನ್ ಕ್ಷೇತ್ರವಿದಾಗಿದ್ದು, ದಕ್ಷಿಣ ಕರ್ನಾಟಕದ ಪ್ರಸಿದ್ಧ ಪುಣ್ಯಧಾಮವೆನ್ನಿಸಿದೆ.

**ಚಿಕ್ಕಯಗಟಿ (೮೦೫)**

ಹೊಸದುರ್ಗದಿಂದ (ಹೊಸದುರ್ಗ ರೈಲ್ವೆನಿಲ್ದಾಣ ಮಾರ್ಗ) ೧೪ ಕಿ.ಮೀ. ದೂರದಲ್ಲಿರುವ ಈ ಐತಿಹಾಸಿಕ ಗ್ರಾಮದಲ್ಲಿ ಹೊಯ್ಸಳರ ಕಾಲದ ಆಕರ್ಷಕ ವಾಸ್ತುಶೈಲಿಯ ಈಶ್ವರ ದೇವಸ್ಥಾನವಿದ್ದು ನೋಡಲು ಸುಂದರವಾಗಿದೆ. ಐದಡಿ ಎತ್ತರದ ಶಿಲಾ ಶಾಸನ (ಕ್ರಿ.ಶ.೧೧೯೪) ವಿದ್ದು, ಇದರಲ್ಲಿ ೭೧ ಸಾಲುಗಳ ಸುಂದರ ಲಿಪಿಯುಳ್ಳ ಬರಹವಿದೆ. ದೇಮೇಶ್ವರ ದೇವರಿಗೆ ಹೊಲ-ಗದ್ದೆ ಮತ್ತು ಸಂತೆ

ಸುಂಕಗಳನ್ನು ದತ್ತಿಬಿಟ್ಟಿರುವ ಬಗ್ಗೆ ಶಾಸನದಲ್ಲಿ ಹೇಳಲಾಗಿದೆಯಲ್ಲದೆ, ಈ ಗ್ರಾಮ (ಸ್ಥಳ)ವನ್ನು 'ಯಕ್ಕಟ್ಟಿ' ಎಂದೂ, ರೈತರನ್ನು 'ಧವಸಿಗರು' ಎಂದೂ ಹೇಳಲಾಗಿದೆ. ಇಲ್ಲಿನ ದೇಗುಲದ ವಾಸ್ತುಶಿಲ್ಪ ಅತ್ಯಾಕರ್ಷಕವಾಗಿದೆ. ಇತಿಹಾಸ ಕಾಲದಲ್ಲಿ ಇಲ್ಲಿ ಶ್ರೀಮಂತ ವರ್ತಕರ ಸಂಘವಿದ್ದು, 'ಅಯ್ಯಾವೊಳೆ ಐನೂರ್ವರ್' ಎಂಬ ಬಿರುದು ಪಡೆದು ಪ್ರಖ್ಯಾತವಾಗಿದ್ದಿತು.

**ಜಾನಕಲ್ಲು (೪,೭೯೧)**

ಹೊಸದುರ್ಗದಿಂದ (ತಾಳ್ಯ ಮಾರ್ಗದಲ್ಲಿ) ೧೫ ಕಿ.ಮೀ. ದೂರದಲ್ಲಿದೆ. ಈ ತಾಣವು ಕರ್ನಾಟಕದ ಅತ್ಯಂತ ಪ್ರಾಚೀನ ತಾಣಗಳಲ್ಲೊಂದು. ಆದಿ ಹಳೇಶಿಲಾಯುಗಕ್ಕೆ ಸಂಬಂಧಿಸಿರುವ 'ಮಾನವನ ನೆಲೆ' ಇದಾಗಿದೆ. (ಅಂದರೆ ೭ ಲಕ್ಷ ವರ್ಷಗಳಿಂದ ೧,೨೫ ಲಕ್ಷ ವರ್ಷಗಳಷ್ಟು ಪ್ರಾಚೀನ ನೆಲೆ). ಐತಿಹಾಸಿಕ ಗ್ರಾಮವೂ ಹೌದು. ಕ್ರಿ.ಶ.೧೩೦೩ರ ಕಾಲದ ವೀರಗಲ್ಲುಗಳಿವೆ. ಪ್ರಾಚೀನ ಕಾಲದಲ್ಲಿ ಜೈನರು ಮಾತ್ರ ವಾಸವಿದ್ದ ಸಾವಿರ ಮನೆಗಳ ಪಟ್ಟಣವಿದಾಗಿದ್ದು, 'ಜೈನಕಲ್ಲು' ಎಂಬ ಹೆಸರು ಇದ್ದಿತೆಂದು ಹೇಳುವರು. ಇಲ್ಲಿನ ನೇಮಿನಾಥ ತೀರ್ಥಂಕರ ಮತ್ತು ಪದ್ಮಾವತಿ ದೇವಿಯ ಬಸದಿಯು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದ್ದೆನ್ನಲಾಗಿದ್ದು, ತದನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ಇಲ್ಲಿನ ಗುಡ್ಡದ 'ದೇವರಮರಡಿ' ಪ್ರದೇಶದ ಬಂಡೆಗಳ ಮೇಲೆ ಜೈನಯತಿಗಳ ಕೊರೆದ ಚಿತ್ರಗಳೂ, ನಿಷಧಿ ಶಾಸನಗಳೂ ಇದೆ. ಈ ನಿಷಧಿ ಶಾಸನಗಳನ್ನು ಶಾಸನ ತಜ್ಞ ಡಾ॥ ಬಿ.ರಾಜಶೇಖರಪ್ಪ ನವರು ಓದಿರುತ್ತಾರೆ. ಇಲ್ಲಿನ ಗುಡ್ಡದ ಮೇಲೆ ಪಾಳೆಯಗಾರರ ಕಾಲದ ಕೋಟೆಯ ಅವಶೇಷವಿದೆ. ಗುಡ್ಡದ ಕೆಳಗಡೆಯೂ ಕೋಟೆಯ ಭಾಗವಿದೆ. ಚಿತ್ರದುರ್ಗ ಪಾಳೆಯಗಾರರಲ್ಲಿ ಕಡೆಯ ಅರಸನಾದ ವೀರಮದಕರಿ ನಾಯಕ (ಕ್ರಿ.ಶ.೧೮ನೇ ಶತಮಾನ)ನ ಜನ್ಮಸ್ಥಳವಾದ ಜಾನಕಲ್ಲು ಗ್ರಾಮವು ಹಾಲುರಾಮೇಶ್ವರ ಕ್ಷೇತ್ರದಿಂದ ೭ ಕಿ.ಮೀ.ನಷ್ಟು ಹತ್ತಿರದಲ್ಲಿದೆ. ಇಲ್ಲಿನ ಶಂಕರೇಶ್ವರ ದೇವಾಲಯದಲ್ಲಿನ ಸ್ತಂಭಗಳು ಹೊಯ್ಸಳರ ಕಾಲದ ಶಿಲ್ಪಕಲಾಕೃತಿಗಳಾಗಿವೆ. ದೇವಾಲಯವು ಜೀರ್ಣೋದ್ಧಾರಗೊಂಡಿದೆ. ಪಾಳೆಯಗಾರರ ಕಾಲದ ವೆಂಕಟೇಶ್ವರ ಗುಡಿಯಲ್ಲಿ ಅನೇಕ ಶಿಲಾ ವಿಗ್ರಹಗಳಿವೆ. ವೀರಭದ್ರ ಮತ್ತು ಆಂಜನೇಯ ಗುಡಿಗಳೂ ಇಲ್ಲಿವೆ.

**ದಶರಥ ರಾಮೇಶ್ವರ**

ಹೊಸದುರ್ಗದಿಂದ (ಕಂಚೀಪುರ ಮಾರ್ಗದಲ್ಲಿ) ೨೭ ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರವು ರಾಮಾಯಣ ಕಾಲಕ್ಕೆ ಸಂಬಂಧಪಟ್ಟ ದಕ್ಷಿಣ ಭಾರತದ ಕೆಲವೇ ತಾಣಗಳಲ್ಲಿ ಒಂದಾಗಿದೆ. ಪ್ರಾಚೀನ ಕಾಲದಲ್ಲಿ ಗೊಂಡಾರಣ್ಯದೊಳಗಿನ ಜಲಪಾತದಿಂದುಂಟಾದ

ಹೊಳೆಯನ್ನು ಹೊಂದಿದ ನಿಗೂಢ ಸ್ಥಳವಿದಾಗಿದ್ದು, ಶ್ರವಣಕುಮಾರನು ತನ್ನ ವೃದ್ಧ–ಅಂಧ ತಂದೆ–ತಾಯಿಯರನ್ನು ಅಡ್ಡೆಯಲ್ಲಿ ಹೊತ್ತು ತೀರ್ಥಯಾತ್ರೆ ಹೋಗುವ ಮಾರ್ಗ ಮಧ್ಯದಲ್ಲಿ, ತಂದೆ–ತಾಯಿಗೆ ನೀರಡಿಕೆಯಾಗಿರುವುದನ್ನರಿತು ಕಾಡಿನಲ್ಲಿ ಹರಿಯುತ್ತಿದ್ದ ಈ ಹೊಳೆ ನೀರಿನ ಹತ್ತಿರ ಅಡ್ಡೆಯನ್ನಿಳಿಸಿ, ಸಂಜೆಗತ್ತಲಂತಿದ್ದ ಹೊತ್ತಿನ ಆ ಪರಿಸರದಲ್ಲಿ ಹೊಳೆಯ ದಡದಲ್ಲಿ ತಾನು ನೀರು ಕುಡಿದು, ತಂದೆ–ತಾಯಿಗಾಗಿ ಮಣ್ಣಿನ ಹೂಜಿಯಲ್ಲಿ ನೀರು ತುಂಬ ತೊಡಗಿದನೆಂದೂ, ಅದೇ ವೇಳೆಗೆ ಕಾಡು ಪ್ರಾಣಿಗಳ ಬೇಟೆಗೆ ಬಂದಿದ್ದ ದಶರಥನು, ಹೂಜಿಗೆ ನೀರು ತುಂಬುವ ಆ ಸದ್ದನ್ನಾಲಿಸಿ, ಕಾಡು ಪ್ರಾಣಿಗಳರಬಹುದೆಂದು ಊಹಿಸಿ ಶಬ್ದವೇಧಿ ವಿದ್ಯೆಯಿಂದ ಬಾಣ ಬಿಟ್ಟನೆಂದೂ, ಬಾಣ ತಗುಲಿ ಶ್ರವಣನು ಚೀರಿ ಸತ್ತು ಬಿದ್ದುದರಿಂದ, ಶ್ರವಣನ ಮಾತಾಪಿತೃಗಳು ದುಃಖಿತರಾಗಿ ದಶರಥನನ್ನು ಶಪಿಸಿ ಪ್ರಾಣಬಿಟ್ಟರೆಂದೂ ದಂತಕಥೆ ಇದೆ. ದಶರಥರಾಮೇಶ್ವರ ಕ್ಷೇತ್ರದಲ್ಲಿ ಶ್ರವಣಕುಮಾರನ ಸಮಾಧಿ ಇದೆ. ದಶರಥನ ಪ್ರಾಚೀನ ವಿಗ್ರಹ(ಉಬ್ಬುಕೆತ್ತನೆ), ದಶರಥ ಮತ್ತು ರಾಮರು ಪೂಜಿಸಿದ ಈಶ್ವರ ಲಿಂಗ ಹಾಗೂ ವೀರಭದ್ರದೇವರ ಶಿಲಾವಿಗ್ರಹಗಳಿವೆ. ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ನಡೆಯುವ ರಥೋತ್ಸವಕ್ಕೆ ರಾಜ್ಯದ ನಾನಾ ಸ್ಥಳಗಳಿಂದ ಸಾವಿರಾರು ಭಕ್ತರು ಬರುತ್ತಾರೆ. ಈಗಲೂ ಇಲ್ಲಿ ಅರಣ್ಯದ ಸೊಬಗು ಉಳಿದಿರುವುದನ್ನು ಕಾಣಬಹುದು. ಈ ಪುಣ್ಯಕ್ಷೇತ್ರಕ್ಕೆ ಬೇರೆ–ಬೇರೆ ಜಿಲ್ಲೆಗಳಿಂದ ಗ್ರಾಮದೇವರುಗಳನ್ನು (ಉತ್ಸವ ಮೂರ್ತಿಗಳನ್ನು) ಪುಣ್ಯಸ್ನಾನಕ್ಕಾಗಿ ಶ್ರದ್ಧಾ ಭಕ್ತಿಗಳಿಂದ ಕರೆ ತರುತ್ತಾರೆ ಹಾಗೂ ಇಲ್ಲಿಂದ ಪುಣ್ಯಜಲವನ್ನು ಯಳನಾಡು ಸಿದ್ಧರಾಮೇಶ್ವರ ಮುಂತಾದ ದೇವಸ್ಥಾನಗಳಿಗೆ 'ಮಡಿ'ಯಿಂದ (ಶಾಸ್ತ್ರೋಕ್ತವಾಗಿ) ಕೊಂಡೊಯ್ಯುವರು. ದಶರಥರಾಮೇಶ್ವರ ದೇವರ ಉತ್ಸವಮೂರ್ತಿಯು ಹತ್ತಿರದ ಗುಡ್ಡದನೇರಲಕೆರೆಯ ದೇವಸ್ಥಾನದಲ್ಲಿದ್ದು, ಜಾತ್ರೋತ್ಸವ ಕಾಲದಲ್ಲಿ ಕ್ಷೇತ್ರಕ್ಕೆ ಕರೆತರುತ್ತಾರೆ. ದಶರಥ ರಾಮೇಶ್ವರ ಕ್ಷೇತ್ರವನ್ನು 'ದೊಡ್ಡವಜ್ಜುರ' ಎಂದೂ, ಹಾಲುರಾಮೇಶ್ವರ ಕ್ಷೇತ್ರವನ್ನು 'ಚಿಕ್ಕ ವಜ್ಜುರ' ಎಂದೂ ಜನರು ಕರೆಯುತ್ತಾರೆ. (ವಜ್ಜುರ–ನೀರು ಬಸರುವ ತಾಣ. ಜಾನಪದ ತ್ರಿಪದಿಗಳಲ್ಲಿ ದಶರಥರಾಮೇಶ್ವರ ಕ್ಷೇತ್ರವನ್ನು 'ದಶರಥರಾಮಯ್ಯನ ಹೊಳೆ' ಎಂದಿದ್ದಾರೆ. ಕ್ರಿ.ಶ.೧೭ನೇ ಶತಮಾನದ ಸಿರುಮನ ಸಾಂಗತ್ಯ ಕೃತಿಗಳಲ್ಲಿ ದಶರಥರಾಮೇಶ್ವರ ಕ್ಷೇತ್ರದ ಗುಡಿಯ ಕಳಶ–ಗೋಪುರಗಳು ಅರಣ್ಯ ಮಧ್ಯದಲ್ಲಿ ಹೊಳೆಯುತ್ತಿದ್ದವೆಂಬ ವರ್ಣನೆ ಇದೆ. ಇಲ್ಲಿಗೆ ಬರುವ ಭಕ್ತರು ಹೋಳಿಗೆ–ತುಪ್ಪ ಎಡೆಯನ್ನು ತಯಾರಿಸಿ, ಮೊದಲು ಕ್ಷೇತ್ರದ ವಾನರಗಳಿಗೆ 'ಎಡೆ' ತಿನ್ನಲು ಇಡುತ್ತಾರೆ. ನಂತರ ದೇವರಿಗೆ 'ಎಡೆ' ನೀಡುತ್ತಾರೆ. ಪುರಾತನ ಕಾಲದ ಶಿಲಾಚಕ್ರಗಳ ರಥ ಇದುವರೆಗೆ ಇದ್ದಿತು. ಇತ್ತೀಚೆಗೆ ಹೊಸ ರಥವನ್ನು ಭಕ್ತರು ಮಾಡಿಸಿದ್ದಾರೆ. ಉತ್ತರ ಭಾರತದಿಂದಲೂ ಈ ಕ್ಷೇತ್ರ ವೀಕ್ಷಿಸಲು ತಂಡವೊಂದು ಕೆಲವು ವರ್ಷಗಳ ಹಿಂದೆ (ಅಧ್ಯಯನಾರ್ಥವಾಗಿ) ಬಂದಿದ್ದಿತು. ಪ್ರತಿ ಸೋಮವಾರ ಇಲ್ಲಿ ವಿಶೇಷ ಪೂಜೆ ಇದ್ದು, ಶ್ರಾವಣಮಾಸದಲ್ಲಿ

ಭಕ್ತರು ಯಥೇಚ್ಛವಾಗಿ ಆಗಮಿಸುವರು. ರಥೋತ್ಸವಕ್ಕೆ ೧೦ ಸಾವಿರಕ್ಕೂ ಹೆಚ್ಚು ಜನರು ಇಲ್ಲಿ ಸೇರುತ್ತಾರೆ. ದಶರಥರಾಮೇಶ್ವರ ದೇವರ ಜಾತ್ರೆಯಲ್ಲಿ ಕಂಚೀದೇವರ ಕುಣಿತ ನೋಡುವಂತಿರುತ್ತದೆ. ಇಲ್ಲಿ 'ಮೇಲುಗಂಗೆ' ಎಂಬ ಎತ್ತರದ ಸ್ಥಳದಿಂದ ಗಂಗೆಯು ಕೆಳಭಾಗಕ್ಕೆ (ಪಾತಾಳ ಗಂಗೆ) ಹರಿಯುತ್ತದೆ. ಮಳೆಗಾಲದಲ್ಲಿ ಮೇಲು ಭಾಗದಲ್ಲಿ ನೀರನ್ನು ಹಿಡಿದಿಟ್ಟು (ಸಂಗ್ರಹಿಸಿ) ಮಳೆಗಾಲದ ನಂತರ ಬಿಡುವ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಮಾಡಿದಲ್ಲಿ, 'ಜಲಪಾತ'ವನ್ನು ಸೃಷ್ಟಿಸಿ ಅದನ್ನು ಯಾತ್ರಿಕರು ವೀಕ್ಷಿಸುವಂತೆ ಅವಕಾಶ ಕಲ್ಪಿಸಬಹುದಾಗಿದೆ.

## ನಿರುವುಗಲ್ಲು ಕ್ಷೇತ್ರ

ಹೊಸದುರ್ಗದಿಂದ ೧೬ ಕಿ.ಮೀ ದೂರದಲ್ಲಿದೆ. ಮತ್ತೋಡು ಹೋಬಳಿ ಕಾರೇಹಳ್ಳಿಯ ಸಮೀಪವಿರುವ ಈ ಕ್ಷೇತ್ರವು 'ಶ್ರೀ ಹರಿಹರೇಶ್ವರನ ಕ್ಷೇತ್ರ'ವೆಂದು ಪ್ರಸಿದ್ಧಿ ಪಡೆದಿದೆ. ವೇದಾವತಿ ನದಿಯ ದಡದಲ್ಲಿ ಶ್ರೀ ಹರಿಹರೇಶ್ವರ ದೇವಾಲಯವಿದ್ದುದ್ದು, ಇದೀಗ ಜೀರ್ಣೋದ್ಧಾರಗೊಂಡಿರುತ್ತದೆ.

ಕ್ರಿ.ಶ. ೧೪ ನೇ ಶತಮಾನದಷ್ಟು ಪ್ರಾಚೀನವಾಗಿರುವ ಈ ತಾಣದಲ್ಲಿ ಸುಮಾರು ೧೮–೨೦ ಅಡಿಗಳಷ್ಟು ಎತ್ತರದ ನಿಲುವುಗಲ್ಲುಗಳಿರುವುದರಿಂದ ಈ ಸ್ಥಳಕ್ಕೆ 'ನಿರುವುಗಲ್ಲು' ಎಂಬ ಹೆಸರು ಬಂದಿದೆ. ಮಹಾಸತಿ ಕಲ್ಲು, ವೀರಗಲ್ಲು, ಗಣೇಶ, ವೀರಭದ್ರ, ಭೈರವ, ಆಂಜನೇಯ, ಈಶ್ವರಲಿಂಗ, ನಂದಿ, ಕಲ್ಲುಮಂಟಪ, ತೇರು ಬಲಿಪೀಠ, ದೀಪಸ್ತಂಭ ಮುಂತಾದವು ಇದ್ದು, ಹಿಂದಿನ ಕಾಲದಲ್ಲಿ ಇದು ಕಾಳಾಮುಖ ಪರಂಪರೆಯ ಕೇಂದ್ರವಾಗಿದ್ದಿರಬಹುದೆನ್ನಲಾಗಿದೆ. ಈಗ ಇದು ಬೇಚರಾಕ್ ಗ್ರಾಮವಾಗಿದೆ. ಕ್ರಿ.ಶ. ೧೭೨೯ ರ ಮತ್ತೋಡು ತಾಮ್ರಶಾಸನದಲ್ಲಿ ಸಹ ಈ ಕ್ಷೇತ್ರದ ಹರಿಹರೇಶ್ವರ ದೇವರ ಪೂಜಾ ಪಟ್ಟಾಧಿಕಾರವನ್ನು ನಿರ್ದಿಷ್ಟ ಜನಾಂಗದವರಿಗೆ ಪಾಳೆಯಗಾರರು ವಹಿಸಿಕೊಟ್ಟಿರುವ ಬಗ್ಗೆ ದಾಖಲಿಸಲಾಗಿರುತ್ತದೆ. (ನೋಡಿ: 'ಹೊಸದುರ್ಗದ ಸುತ್ತ'–– ಬಾಗೂರು ಆರ್. ನಾಗರಾಜಪ್ಪ). ಇಲ್ಲಿನ ಒಂದು ವೀರಗಲ್ಲು ಶಾಸನ ಕ್ರಿ.ಶ. ೧೩೭೯ ರ ಅವಧಿಯಾಗಿದ್ದು, ಇನ್ನೆರಡು ವೀರಗಲ್ಲುಗಳು 'ಊರಳಿವು ವೀರಗಲ್ಲು', ಹಾಗೂ 'ತುರುಗೋಳ್ ವೀರಗಲ್ಲು' ಆಗಿವೆ.

ಹರಿಹರೇಶ್ವರ ದೇವರ ಉತ್ಸವ ಮೂರ್ತಿಯು ಸಮೀಪದ ಹಾಗಲಕೆರೆ ದೇವಸ್ಥಾನದಲ್ಲಿದ್ದು, ಈ ದೇವರಿಗೆ ಅನೇಕ ಊರುಗಳಲ್ಲಿ ಒಕ್ಕಲಿದ್ದಾರೆ. ೫,೯ ಅಥವಾ ೧೨ ವರ್ಷಗಳಿಗೊಮ್ಮೆ ಕ್ಷೇತ್ರದಲ್ಲಿ ಹರಿಹರೇಶ್ವರ ದೇವರ ರಥೋತ್ಸವ ಜಾತ್ರೆ (೨ ದಿನ) ಜರುಗುವುದು. ಜಾತ್ರೆಗೆ ಮೂರು ಸಾವಿರ ಜನರು ಸೇರುವ ಅಂದಾಜಿದೆ. ಈ ದೇವರನ್ನು ಇಲ್ಲಿನ ಜನರು 'ಹೊಳೆ ಲಿಂಗಪ್ಪ' ಎಂದು ಕರೆಯುವರು.

ಕ್ಷೇತ್ರದಲ್ಲಿರುವ ಮರಾಲೆ ಮರಕ್ಕೆ ಒರಗಿಸಿ ನಿಲ್ಲಿಸಲ್ಪಟ್ಟಿರುವ ಒಂದು ನಿಲುವುಗಲ್ಲು ಒಟ್ಟು ಐದು ಹಂತದ ಚಿತ್ರ ಕೆತ್ತನೆಗಳನ್ನು ಹೊಂದಿದ್ದು, ಅತ್ಯಂತ ಕಲಾತ್ಮಕವಾಗಿದೆ.

(ಅಂದಾಜು ೧೮ ಅಡಿ ಎತ್ತರವಿದೆ). ಮತ್ತೊಂದು ಅಷ್ಟೇ ಎತ್ತರದ ನಿಲುವುಗಲ್ಲು ಯಾವುದೇ ಕೆತ್ತನೆ ಹೊಂದಿಲ್ಲ. ಕ್ಷೇತ್ರ ಕಾರ್ಯದೊಂದಿಗೆ ಹೆಚ್ಚಿನ ಸಂಶೋಧನೆಗೆ ಈ ತಾಣ ಅರ್ಹವಾಗಿದೆ. ಇಲ್ಲಿನ ಮಹಾಸತಿ ಸ್ಮಾರಕವನ್ನು 'ಹುಳಿಯಾರು ಕೆಂಚಮ್ಮ' ಎಂದು ಕರೆಯುತ್ತಾರಲ್ಲದೆ, ಅನೇಕ ಊರುಗಳಲ್ಲಿ ಇದಕ್ಕೆ ಒಕ್ಕಲುಗಳಿದ್ದಾರೆ. ಮಾಸ್ತಿ ಗುಡಿಯಲ್ಲಿರುವ ವೀರಗಲ್ಲು ಕಲಾತ್ಮಕ ಉಬ್ಬುಕೆತ್ತನೆ ಚಿತ್ರವಾಗಿದೆ. ನದಿಯ ದಡದಲ್ಲಿರುವ ವೀರಗಲ್ಲುಗಳು ಸಹ ಸುಂದರ ಕೆತ್ತನೆಯ ಕಲಾಕೃತಿಗಳಾಗಿವೆ.

ನಿರುವುಗಲ್ಲು ವೇದಾವತಿ ನದಿ ತೀರದ ರಮ್ಯ ತಾಣವಾಗಿದ್ದು, ಪ್ರೇಕ್ಷಣೀಯ ಸ್ಥಳವೆನ್ನಿಸಿದೆ.

**ದೇವಪುರ (೩,೬೨೫)**

ಹೊಸದುರ್ಗದಿಂದ (ಜಾನಕಲ್ಲು ಮಾರ್ಗದಲ್ಲಿ) ೬ ಕಿ.ಮೀ. ದೂರದಲ್ಲಿರುವ ಪ್ರಸ್ತುತ ಐತಿಹಾಸಿಕ ಗ್ರಾಮದಲ್ಲಿ ಕಲಾತ್ಮಕ ಶಿಲಾವಿಗ್ರಹಗಳಿರುವ ಅನೇಕ ಗುಡಿಗಳಿವೆ. ಗ್ರಾಮದೇವತೆ ಕೆರಳಮ್ಮ ದೇವಿಯು ತಾಲ್ಲೂಕಿನಲ್ಲಿ ಮೊದಲು ಶೂನ್ಯ ಮಾಸದಲ್ಲಿ ರಥೋತ್ಸವ ಮಾಡಿಸಿಕೊಳ್ಳುವ ಪ್ರಭಾವಿ ದೇವತೆಯಾಗಿದ್ದಾಳೆ. ಸಮೀಪದ ಹೊನ್ನೇನಹಳ್ಳಿಯಲ್ಲಿ ಈ ದೇವತೆಗೆ ಸಲ್ಲುವ 'ಆರತಿ ಬಾನೋತ್ಸವ'ವು ತುಂಬಾ ವಿಶಿಷ್ಟವಾದ ಆಚರಣೆಯಾಗಿದೆ (ಜಾತ್ರೆ). ಹಾಲುರಾಮೇಶ್ವರ ದೇವರ ಉತ್ಸವ ಮೂರ್ತಿಯು ದೇವಪುರ ಗ್ರಾಮದ ಗುಡಿಯಲ್ಲಿದೆ. ಲಕ್ಷ್ಮೀಕಾಂತ ದೇಗುಲವಿದೆ. ಇಲ್ಲಿನ ಕೋಟೆ-ಕೊತ್ತಲ-ಬತೇರಿಗಳೆಲ್ಲ ನಾಮಾವಶೇಷವಾಗಿವೆ. ಕೆರಳಮ್ಮ ದೇವರ ಸೋಮನ ಕುಣಿತ ನೋಡುವಂತಿರುತ್ತದೆ. ಕೆರಳಮ್ಮ ದೇವಿಯ ರಥೋತ್ಸವವು ಜನವರಿ ತಿಂಗಳಲ್ಲಿ ಜರುಗುವುದುಂಟು. ಇದಕ್ಕೂ ಮೊದಲು ದೇವಿಯು ನೆರೆಹೊರೆಯ ನಾಗತೀಹಳ್ಳಿ, ಮಸಣೀಹಳ್ಳಿ, ಕೋಡಿಹಳ್ಳಿ, ದೇವರಹಟ್ಟಿ, ಮೂಡ್ಲಾಭೋವಿಹಟ್ಟಿ, ಯಲ್ಲಾಭೋವಿಹಟ್ಟಿ, ಬೋಚೇನಹಳ್ಳಿ, ಬೆನಕನಹಳ್ಳಿ ಮತ್ತು ನರಸೀಪುರ ಗ್ರಾಮಗಳಿಗೆ 'ಸೆಳೆ' ಹೋಗುವುದೊಂದು ಸ್ವಾರಸ್ಯಕರ ಸಂಪ್ರದಾಯವಾಗಿದೆ. ಜಾತ್ರೆಯು ಒಂದು ತಿಂಗಳ ಕಾಲ ಜರುಗುವುದು. ಇಲ್ಲಿ ಒಂದು ಕಾಲದಲ್ಲಿ ಒಂದು ನೂರು ಗುಡಿಗಳಿದ್ದು, ಅದೇ ಕಾರಣಕ್ಕೆ 'ದೇವರುಗಳಪುರ' ಎಂದು ಹೆಸರು ಪಡೆಯಿತೆನ್ನಲಾಗಿದೆ.

**ನೀರಗುಂದ (ನೀರ್ಗುಂದ) (೧,೮೯೪)**

ಹೊಸದುರ್ಗದಿಂದ (ಅಜ್ಜಂಪುರ ರಸ್ತೆಯಲ್ಲಿ) ೧೧ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ವೈಭವೋಪೇತ ನಗರವಾಗಿ ಮೆರೆದ ಸ್ಥಳ. ಕನ್ನಡ ನಾಡಿನ ಅತ್ಯಂತ ಪ್ರಾಚೀನ ನಗರಗಳಲ್ಲಿ ನೀರಗುಂದವೂ ಒಂದಾಗಿದ್ದಿತು. ಕ್ರಿ.ಪೂ.೧೬೦ರಲ್ಲಿ ಉತ್ತರ ದೇಶದ (ಭಾರತದ) ದೊರೆಯಾಗಿದ್ದ ರಾಜಾ ಪರಮೇಶ್ವರನ ಮಗ ನೀಲಶೇಖರ ಮಹಾರಾಜನು

ಈ ವೈಭವಯುತ ನಗರವನ್ನು ನಿರ್ಮಿಸಿ, ವೀರಶೇಖರನಿಂದ ಪಡೆದು '**ನೀಲಾವತಿ ಪಟ್ಟಣ**' ಎಂದು ಹೆಸರಿಟ್ಟು ಸ್ವತಂತ್ರವಾಗಿ ರಾಜ್ಯ ಸ್ಥಾಪಿಸಿ ಆಳಿದನು. ಒಂದೂವರೆ ಸಾವಿರ ವರ್ಷಗಳ ಹಿಂದೆ, ಗಂಗರ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದ ನೀರ್ಗುಂದದ ನಗರ ಜೈನರ ರಾಜಧಾನಿಯಾಗಿದ್ದಿತು (ಕ್ರಿ.ಶ.೫ನೇ ಶತಮಾನ). ಕ್ರಿ.ಶ.೮ನೇ ಶತಮಾನದಲ್ಲಿ ನೀರ್ಗುಂದ ಮಹಾರಾಜ ದಿಂಡಿಕ ಮತ್ತು ಅವನ ಮಗ ಪರಮಗುಳನು ಅನುಕ್ರಮವಾಗಿ 'ದುಂಡು' ಎಂಬ ಬಿರುದನ್ನು ಹಾಗೂ 'ಶ್ರೀಪೃಥ್ವಿ ನೀರ್ಗುಂದ ರಾಜಾ' ಎಂಬ ಬಿರುದನ್ನು ಪಡೆದಿದ್ದರು. 'ನೀರ್ಗುಂದ ನಾಡು' ಒಟ್ಟು ೩೦೦ ಹಳ್ಳಿಗಳನ್ನು ಒಳಗೊಂಡಿದ್ದಿತು. 'ಉದ್ಭವ ಸೋಮನಾಥಪುರ', 'ನೀರ್ಗುಂದ ನಾಡು', 'ನೀಲಾವತಿ ಪಟ್ಟಣ' ಮುಂತಾದ ಹೆಸರುಗಳು ಬೇರೆ ಬೇರೆ ಅವಧಿಗಳಲ್ಲಿ ಈ ನಗರಕ್ಕಿದ್ದವು. 'ತೆಂಕಣ ಅಯ್ಯಾವೊಳೆ' ಎಂದೂ ಪ್ರಖ್ಯಾತವಾಗಿದ್ದಿತು. ನಖರ ಮುಮ್ಮರಿ ದಂಡಗಳೆಂಬ ವಾಣಿಜ್ಯ ವರ್ತಕರ ಸಂಘಗಳು ಇದ್ದು, ಇವುಗಳಿಗೆ ನಲ್ಲೆಸೆಟ್ಟಿಯ ನೇತೃತ್ವವಿದ್ದಿತು.

ಹೊಯ್ಸಳರ ಕಾಲದ ಸಿದ್ಧನಾಥ ದೇವಾಲಯ, ಚನ್ನಕೇಶವ ದೇವಾಲಯ ಹಾಗೂ ಗಣೇಶನ ದೇವಾಲಯಗಳು ಇದ್ದು, ಅವುಗಳಲ್ಲಿನ ಶಿಲಾವಿಗ್ರಹಗಳು ಶಿಲ್ಪ ಕಲಾ ಚಾತುರ್ಯದಿಂದ ಕೂಡಿವೆ. ಮುಖ್ಯ ರಸ್ತೆಯಿಂದ ಈ ಹಳ್ಳಿಯು ೨ ಕಿ.ಮೀ. ದೂರದಲ್ಲಿದೆ. ಪಕ್ಕದಲ್ಲಿ ಸಾಣೇಹಳ್ಳಿ ಇದೆ. ಇದೀಗ ನೀರಗುಂದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವು ಸರ್ಕಾರದಿಂದ ನಡೆದಿದೆ. ಶಿಲಾಶಾಸನ ಮುಂತಾದ ಸ್ಮಾರಕಗಳಿವೆ. ಇಲ್ಲಿನ ಕಲಾತ್ಮಕ ದೊಡ್ಡ ಗಣೇಶನ ಶಿಲಾವಿಗ್ರಹವು ೧೯೨೩ ರಲ್ಲಿ ಹೊಸದುರ್ಗಕ್ಕೆ ಸ್ಥಳಾಂತರಗೊಂಡಿದೆ. 'ಆ ನಾಡೊಳೆಸೆವುದು ನಾನಾ ವಿದ್ವಜ್ಜನ ಸ್ಥಾನಂ ನೀರ್ಗುಂದಮೆನಿಪಗ್ರಹಾರವತ್ಯಾನಂದಕಾರಿ ಜಗಕ್ಕೆಲ್ಲಂ' ಎಂದು ಶಿಕಾರಿಪುರ ಶಾಸನ (ಕ್ರಿ.ಶ.೧೧೫೮) ದಲ್ಲಿ ಇಲ್ಲಿನ ಮಹಾ ಅಗ್ರಹಾರವನ್ನು ಪ್ರಶಂಸಿಸಲಾಗಿದೆ. ತರೀಕೆರೆ, ಅಜ್ಜಂಪುರ ಹಾಗೂ ಹೊಸದುರ್ಗಗಳಿಂದ ನೀರಗುಂದ ಗೇಟಿನವರೆಗೆ ಬಸ್‌ಗಳ ಓಡಾಟವಿರುತ್ತದೆ. ಇಲ್ಲಿ ಯಳಗಂಧೇಶ್ವರಿ, ಕಾಲಭೈರವ, ಬಂದಮ್ಮ, ಕಲ್ಲೇಶ್ವರ, ಮಲ್ಲೇಶ್ವರ ಮತ್ತಿತರ ದೇವಸ್ಥಾನಗಳಿವೆ. ಏಪ್ರಿಲ್ ನಲ್ಲಿ ಯಳಗಂಧೇಶ್ವರಿ ದೇವಿಯ ಜಾತ್ರೋತ್ಸವ ಜರುಗುತ್ತದೆ.

**ಬನಸೀಹಳ್ಳಿ (೧,೨೨೦)**

ಹೊಸದುರ್ಗದಿಂದ ಜಾನಕಲ್ಲಿಗೆ ಹೋಗುವ ಮಾರ್ಗದಲ್ಲಿ ೧೨ ಕಿ.ಮೀ ದೂರದಲ್ಲಿದ್ದು, ಕಂಠಾಪುರದಿಂದ ಒಳರಸ್ತೆಯಲ್ಲಿ ೨ ಕಿ.ಮಿ. ಸಾಗಿದರೆ ಬನಸಿಹಳ್ಳಿಯನ್ನು ತಲುಪಬಹುದು. ಇಲ್ಲಿ ಏಕನಾಥೇಶ್ವರಿ ದೇವಸ್ಥಾನವಿದೆ. ಇದನ್ನು ಪಾರ್ವತಿದೇವಿ ಎನ್ನುವರು. ಇಲ್ಲಿನ ವಿಶೇಷವೆಂದರೆ ಆನೆಯೊಂದಿಗೆ ಹೋರಾಡುತ್ತಿರುವ ವೀರನೊಬ್ಬನ ಬೃಹತ್ತಾದ 'ವೀರಗಲ್ಲು' ಇದ್ದು ಇದಕ್ಕೆ ಗುಡಿಕಟ್ಟಿ ಆರಾಧಿಸುತ್ತಿರುವುದು!

ಬೂದಿಹಾಳು ಶ್ರೀರಾಂಪುರದಲ್ಲಿ ಕುಮಾರಮಲ್ಲನ ವೀರಗಲ್ಲಿಗೆ ಗುಡಿಕಟ್ಟಿರುವುದನ್ನು ಹೊರತುಪಡಿಸಿದರೆ, ಬನಸೀಹಳ್ಳಿಯ ಈ ಗುಡಿ ಬಹುಮುಖ್ಯವಾದ ಸಂಗತಿಯಾಗಿದೆ. ಈ ವೀರಗಲ್ಲಿನಲ್ಲಿರುವ ವೀರನನ್ನು ಹಳ್ಳಿಗರು 'ಆನೆ ತಿಮ್ಮಪ್ಪ' ಎಂದು ಹೇಳುತ್ತಾರೆ. ಏಕನಾಥೇಶ್ವರಿಯ ರಥೋತ್ಸವ-ಸಿಡಿ-ಜಾತ್ರೆ ಪ್ರತಿವರ್ಷ ಮಾಘ ಬಹುಳದಲ್ಲಿ ನಡೆಯುತ್ತದೆ (ಹತ್ತೊಂಬತ್ತು ದಿನಗಳ ಜಾತ್ರೆ). ಇಲ್ಲಿನ ಸೋಮನ ಕುಣಿತ ಅತ್ಯಂತ ಮನಮೋಹಕವಾಗಿರುತ್ತದೆ. ಮಹಾಸತಿಕಲ್ಲು, ಪುಷ್ಕರಣಿ ಊರುಮುಂದೆ ಇವೆ.

**ಬಾಗೂರು (೨,೮೨೯)**

ಹೊಸದುರ್ಗದಿಂದ (ಹೊಸದುರ್ಗ ರೈಲ್ವೆ ನಿಲ್ದಾಣ ಮಾರ್ಗ) ೯ ಕಿ.ಮೀ. ದೂರದಲ್ಲಿರುವ ಈ ಸ್ಥಳ ಐತಿಹಾಸಿಕವಾದುದು. ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಶಾಸನಗಳನ್ನು ಹಾಗೂ ದೇವಸ್ಥಾನಗಳನ್ನು ಹೊಂದಿರುವ ಗ್ರಾಮ. ಇತಿಹಾಸ ಕಾಲದಲ್ಲಿ 'ಭಾಗ್ಯಪುರಿ' ಮತ್ತು ಚಂದ್ರಪುರಿ' ಎಂಬ ಜೋಡಿನಗರಗಳಾಗಿ ವೈಭವೋಪೇತವಾಗಿ ಮೆರೆದ ಈ ಸ್ಥಳದಲ್ಲಿ ಕೋಟೆ-ಕೊತ್ತಲದ ಅವಶೇಷಗಳು, ಮಹಾಸತಿ ಕಲ್ಲುಗಳು, ಇತಿಹಾಸ ಕಾಲದ ಸಮಾಧಿಗಳು ಇವೆಯಲ್ಲದೆ ಪ್ರಾಚೀನ ಕಾಲದ ಚನ್ನಕೇಶವ ದೇವಾಲಯ ಸಂಕೀರ್ಣ ವಿಶಾಲ ಹಾಗೂ ಆಕರ್ಷಕವಾಗಿದ್ದು, ದೇವಾಲಯದಲ್ಲಿ ಅನೇಕ ಶಾಸನಗಳನ್ನು ಮತ್ತು ಪಾಳೆಯಗಾರರ ಉಬ್ಬು ಕೆತ್ತನೆಯ ಚಿತ್ರಗಳನ್ನು ಕಾಣಬಹುದಾಗಿದೆ. ಚನ್ನಕೇಶವನ ಶಿಲಾವಿಗ್ರಹ ಅತ್ಯಾಕರ್ಷಕವಾಗಿದೆ. ಕೇಶವನ ಗರ್ಭಗುಡಿಯೆದುರಿಗಿನ ಗರುಡನ ಶಿಲಾವಿಗ್ರಹ ಅಪೂರ್ವವಾಗಿದೆ ಹಾಗೂ ಪಾಳೆಯಗಾರರು ಅರ್ಪಿಸಿರುವ ಚಿನ್ನದ ಲೇಪನದ ಕಂಚಿನ ಗರುಡ ಮನುಷ್ಯ ಗಾತ್ರದಲ್ಲಿದ್ದು, ಅತ್ಯಾಕರ್ಷಕ ಲೋಹ ಕಲಾಕೃತಿಯೆನ್ನಿಸಿದೆ. ರಥೋತ್ಸವ ಕಾಲದಲ್ಲಿ ನಡೆಯುವ ಗರುಡೋತ್ಸವ ಅಪರೂಪದ ಆಚರಣೆಯಾಗಿದೆ. ದೇವಾಲಯದ ಎದುರುಗಿನ ಗರುಡಗಂಬವನ್ನು ಕ್ರಿ.ಶ.೧೬ನೇ ಶತಮಾನದಲ್ಲಿ ಅಯ್ಯಪ್ಪರಸನ ಅಧಿಕಾರಿ ವಿಶ್ವನಾಥಯ್ಯನು ಹಾಕಿಸಿದ್ದು, ಐವತ್ತು ಅಡಿಗಳಷ್ಟು ಎತ್ತರದ ಏಕಶಿಲಾಸ್ತಂಭ ಇದಾಗಿದೆ. ಕೇಶವ ದೇವರ ರಥೋತ್ಸವ ಪ್ರತಿವರ್ಷ ಪುಬ್ಬಾ ನಕ್ಷತ್ರದಂದು ಜರುಗುವುದು.

ಎಂಬತ್ತು ಹಳ್ಳಿಗಳ ದೇವರೆಂದು ಹೆಸರಾಗಿದ್ದ ಚನ್ನಕೇಶವ ದೇವರಿಗೆ ಅನೇಕ ಗ್ರಾಮಗಳನ್ನು ದತ್ತಿ ನೀಡಲಾಗಿದ್ದ ಬಗ್ಗೆ ಶಾಸನವಿದೆ. ತೇರಿನ ಕಳಶದಲ್ಲಿ, ದೇವಾಲಯದಲ್ಲಿರುವ ಹರಿವಾಣಗಳಲ್ಲಿ ಶಾಸನಗಳಿವೆ. (ದಳವಾಯಿ)ಮುದ್ದಣ್ಣನ ಮಗ ದಳವಾಯಿ ರಂಗಪ್ಪ (ಹರಿವಾಣ ಶಾಸನ) ಜಲಪನಾಯಕರ ಮದುವಳಿ ಲಿಂಗಣ್ಣ (ತೇರಿನ ಕಳಶ ಶಾಸನ), ಗಾರೆ ಅರೆಯುವ ಕಲ್ಲಿನ ಗಾಲಿಯ ಮೇಲೆ 'ಕೊಂಡರಾಜನ ಸೇವೆ' ಎಂದಿದೆ. ಕೊಂಡರಾಜನ ಉಬ್ಬುಕೆತ್ತನೆ ಚಿತ್ರ ಗರುಡನ ಗುಡಿ ಮುಂದಿನ ಕಂಭದಲ್ಲಿದೆ. ಗ್ರಾಮದಲ್ಲಿ ಬನಶಂಕರಿ, ರೇವಣಪ್ಪ, ಬೀರದೇವರು, ಮೈಲಾರ,

ಪಾಂಡುರಂಗ, ಕಾಳಮ್ಮ, ಗಂಗಮಾಳಮ್ಮ, ಆಂಜನೇಯ ಮುಂತಾದ ಐವತ್ತು ದೇವಸ್ಥಾನಗಳಿವೆ. ಮಹಾಸತಿಗೆ ಗುಡಿ ಕಟ್ಟಿರುವ (ಅಲ್ಲೂರಮ್ಮದೇವಿ) ಅಪರೂಪದ ಪುರಾವೆ ಇಲ್ಲಿದೆ. ಅವಧೂತ ಪರಪ್ಪಸ್ವಾಮಿ ಮಠವಿದೆ. ಚರಂತಿ ಮಠ ಮುಂತಾದ ಹಿಂದಿನ ಕಾಲದ ಮಠಗಳ ಅವಶೇಷಗಳಿವೆ. ಊರ ಮಂದಿ ಕಟ್ಟೆಯ ಮೇಲಿರುವ ಬಯಲು ಬಸವಣ್ಣ (ನಂದಿ)ನ ದೊಡ್ಡ ವಿಗ್ರಹ ಕಲಾತ್ಮಕವಾಗಿದೆ. ಬೂದಾಳು ಸಿರುಮನನಾಯಕನ ಸಾಂಗತ್ಯ ಕೃತಿಗಳಲ್ಲಿ ಬಾಗೂರು ರಾಜ್ಯದ ಸಂಪತ್ತನ್ನು ವರ್ಣಿಸಲಾಗಿದೆ. ವಾಸ್ತುಶೈಲಿಯ ದೃಷ್ಟಿಯಿಂದ ಚನ್ನಕೇಶವ ದೇವಾಲಯ ಸಮುಚ್ಚಯ ಅತ್ಯಂತ ಮಹತ್ವದ್ದಾಗಿದೆ. ಗ್ರಾಮದ ಪೂರ್ವ- ಪಶ್ಚಿಮದಲ್ಲಿ ಪಾಳೇಗಾರರು ಕಟ್ಟಿದ ಎರಡು ಕೆರೆಗಳಿವೆ. ಮಹಾಸತಿ ಸಂಪ್ರದಾಯಕ್ಕೆ ಸಾಕ್ಷಿಯಾಗಿ ಇಲ್ಲಿ ಅನೇಕ ಮಹಾಸತಿ ಗುತ್ತಿಗಳು ಕಂಡುಬರುತ್ತವೆ.

ಕ್ರಿ.ಶ.೧೫ನೇ ಶತಮಾನದಲ್ಲಿ ಇಲ್ಲಿ ಗೋವಿಂದನೆಂಬ ರಾಜನು ಆಳಿದನೆನ್ನಲಾಗಿದೆ. ಕ್ರಿ.ಶ.೧೬ನೇ ಶತಮಾನದಲ್ಲಿ ಎರಕೃಷ್ಣಪ್ಪ ನಾಯಕ ನಂತರ ಸಂತೆಬೆನ್ನೂರು ಹನುಮಪ್ಪನಾಯಕ ಮತ್ತಿತರರು ಆಳಿದ ಬಗ್ಗೆ ದಾಖಲೆಗಳಿವೆ. ಜಾನಪದದಲ್ಲಿ ಈ ಗ್ರಾಮ 'ಸಣ್ಣಕ್ಕಿ ಬಾಗೂರು' ಎಂದು ಪ್ರಸಿದ್ಧವಾಗಿದೆ. ಹಿಂದೆ ಇಲ್ಲಿ ಸಣ್ಣಕ್ಕಿಯನ್ನು ಬೆಳೆಯಲಾಗುತ್ತಿದ್ದಿತು. ಬಾಲಗ್ರಹ ಪೀಡಿತ ಮಕ್ಕಳಿಗೆ ಕಟ್ಟುತ್ತಿದ್ದ 'ಬಾಗೂರು ತಾಳಿ' ಸಹ ಹಿಂದೆ ಜನಪ್ರಿಯವಾಗಿತ್ತು. ಒಂದು ಕಾಲದಲ್ಲಿ ಬಾಗೂರಿನ ಬಡಗಿಗಳು ಪ್ರಖ್ಯಾತವಾಗಿದ್ದರು. ಬಾಗೂರು ಸಂತೆ, ಬಾಗೂರು ಬಳೆ ಬಹಳ ಹೆಸರುವಾಸಿಯಾಗಿದ್ದವು. ಕ್ರಿ.ಶ.೧೪ನೆಯ ಶತಮಾನದಲ್ಲಿ ಬಾಗೂರು ಕಟ್ಟೆಯ ನಾಯಕ, ಬಾಗೂರು ನಾಯಕ, ಬಾಗೂರು ಓಬಯ್ಯ, ಬಾಗೂರು ತಿಪ್ಪರಾಯಪಾಲ ಎಂಬ ವೀರರು ಹುಳಿಯಾರು ಮಾರಗೌಡರಸನ ಪರವಾಗಿ ಕುಮಾರರಾಮನ ವಿರುದ್ಧ ಹೋರಾಡಿದ್ದ ಖ್ಯಾತಿ ಇದೆ. ಕ್ರಿ.ಶ.೧೫ನೇ ಶತಮಾನದಲ್ಲಿ ಬಾಗೂರು ರಾಜ್ಯ(ವಳಿತ)ದ ಸಾಮಂತರು/ ಪ್ರಧಾನಿ/ ಅಧಿಕಾರಿಗಳಾಗಿದ್ದ ಬಾಗೂರಿನ ಮಲ್ಲರಸ, ಬಾಗೂರು ವಾಮರಸ, ಬಾಗೂರು ಅಯ್ಯಪ್ಪರಸ, ಬಾಗೂರು ಮಾರಸಯ್ಯ ಇವರು ಪ್ರಖ್ಯಾತರಾಗಿದ್ದ ಬಗ್ಗೆ ಶಾಸನಗಳಿವೆ. ಬಾಗೂರು, ನೀರಗುಂದ-ಸಾಣೇಹಳ್ಳಿ-ಹಳೇ ಕುಂದೂರು-ಆನಿವಾಳ-ನಾಗೇನಹಳ್ಳಿ-ಹೊನ್ನೇಕೆರೆ ಗ್ರಾಮಗಳ ಸಮೀಪ ಇದೆ.

**ಬ್ರಹ್ಮವಿದ್ಯಾನಗರ**

ಹೊಸದುರ್ಗದಿಂದ (ಹೊಳಲ್ಕೆರೆ ಮಾರ್ಗದಲ್ಲಿ ಮಧುರೆಯಿಂದ ಒಳದಾರಿ) ೯ ಕಿ.ಮೀ. ದೂರದಲ್ಲಿರುವ ಬ್ರಹ್ಮವಿದ್ಯಾನಗರದಲ್ಲಿ ರಾಜ್ಯದ ಉಪ್ಪಾರ ಜನಾಂಗದ ಭಗೀರಥ ಪೀಠದ ಮೂಲ ಬೃಹನ್ಮಠವಿದೆ. ಪ್ರಾಚೀನ ಕಾಲದ ಈ ಮಠವು ಚಿತ್ರದುರ್ಗದ ಕರಲಹಟ್ಟಿಯಿಂದ ಇಲ್ಲಿಗೆ ೧೯೩೨ರಲ್ಲಿ ಸ್ಥಳಾಂತರಗೊಂಡಿದೆ. ಇಲ್ಲಿನ

೫೦೦ ಎಕರೆ ಭೂಮಿಯಲ್ಲಿ ನೂರಾರು ಕುಟುಂಬಗಳ ರೈತರು 'ಕೂಡೊಕ್ಕಲು ಬೇಸಾಯ ಪದ್ಧತಿ'ಯನ್ವಯ ವ್ಯವಸಾಯ-ತೋಟಗಾರಿಕೆ ಮಾಡಿಕೊಂಡು ನೆಲೆಸಿದ್ದಾರೆ. ರಾಜ್ಯದೆಲ್ಲೆಡೆಯಿಂದ ಇಲ್ಲಿನ ಬೃಹನ್ಮಠಕ್ಕೆ ಜನರು ಭೇಟಿ ನೀಡುತ್ತಾರೆ. ಭಗೀರಥ ಜಾನಪದ ಸಾಂಸ್ಕೃತಿಕ ಕೇಂದ್ರವೊಂದು ಇಲ್ಲಿ ಪ್ರಾರಂಭಗೊಂಡಿದೆ. ಭುವನೇಶ್ವರಿ ವಿಗ್ರಹ, ಪ್ರಸಿದ್ಧರ ಸಿಮೆಂಟ್ ಕಲಾಕೃತಿಗಳು ನಿರ್ಮಾಣವಾಗಿದ್ದು, ಇದೊಂದು ಪ್ರೇಕ್ಷಣೀಯ ತಾಣವಾಗಿ ರೂಪುಗೊಳ್ಳುತ್ತಿದೆ. ಅನೇಕ ದೇಗುಲಗಳು ಆಗುತ್ತಿವೆ. ಶ್ರೀ ಪುರುಷೋತ್ತಮಾ ನಂದಪುರಿ ಸ್ವಾಮಿಗಳು ಈಗ ಈ ಬೃಹನ್ಮಠದ ಪೀಠಾಧ್ಯಕ್ಷರಾಗಿದ್ದಾರೆ. (ಹೆಚ್ಚಿನ ವಿವರಗಳನ್ನು ಅಧ್ಯಾಯ-೨ ರಲ್ಲಿ ನೀಡಲಾಗಿದೆ).

**'ಬೂದಿಹಾಳು' ಶ್ರೀರಾಂಪುರ (೪,೪೭೩)**

ಹೊಸದುರ್ಗದಿಂದ (ಬೆಂಗಳೂರು ಮಾರ್ಗದಲ್ಲಿ) ೨೨ ಕಿ.ಮೀ. ದೂರದಲ್ಲಿರುವ ಶ್ರೀರಾಂಪುರ ಗ್ರಾಮವು ಹೋಬಳಿ ಕೇಂದ್ರವಾಗಿದ್ದು, ಹಿಂದಿನ ಕಾಲದಲ್ಲಿ ಬೂದಿಹಾಳು, ಬೇದಂಡಕೋಟೆ, ಬೂದಿಹಾಳುಕೋಟೆ, ವಿಭೂತಿಪುರ, ಭಸ್ಮಪುರ, ಗಿರಜಾನಗರ ಮುಂತಾದ ಹೆಸರುಗಳಿಂದ ಪ್ರಸಿದ್ಧಿಯಾಗಿದ್ದು, ವಿವಿಧ ಅರಸರಿಂದ ಆಳಲ್ಪಟ್ಟಿದೆ. ಕ್ರಿ.ಶ.೧೫ನೇ ಶತಮಾನದಲ್ಲಿ ಇಲ್ಲಿ ಬಲವಾದ ಕೋಟೆಯನ್ನು ನಿರ್ಮಿಸಿ ಆಳಿದ ಗೊಲ್ಲ ದೊರೆ ಸಿರುಮನಾಯಕನು, ವಿಜಯನಗರದ ಸಾಳುವ ನರಸಿಂಹನನ್ನು ಯುದ್ಧಕ್ಕೆ ಆಹ್ವಾನಿಸಿ, ವರ್ಷಾನುಗಟ್ಟಲೆ ನಡೆಸಿದ ಶೌರ್ಯ-ಪರಾಕ್ರಮಗಳ ಘನಘೋರ ಯುದ್ಧ ಕುರಿತು ಕ್ರಿ.ಶ.೧೭ನೇ ಶತಮಾನದ ಮೂರು ಸಾಂಗತ್ಯ ಕೃತಿಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ವರ್ಣಿಸಲಾಗಿದೆ.

ಸಿರುಮನ ಮಹಾಶೂರ ಪುತ್ರ ಕುಮಾರಮಲ್ಲನ ಬಗೆಗೆ ಸಾಕಷ್ಟು ವರ್ಣಿಸಲಾಗಿದೆ. ಆಗಿನ ಕಾಲದ ಕೋಟೆ-ಕೊತ್ತಲಗಳು, ಬತೇರಿ-ಪುಷ್ಕರಣಿ, ವೀರಗಲ್ಲು, ಕುಮಾರಮಲ್ಲನ ಮರದ (ಕಟ್ಟಿಗೆಯ) ರುಂಡ ಆಕೃತಿ, ಕುಮಾರಮಲ್ಲನ ಸಮಾಧಿಯ ಮೇಲೆ ವೀರಗಲ್ಲನ್ನು ನಿಲ್ಲಿಸಿ ಕಟ್ಟಲಾಗಿರುವ ಗುಡಿ ಇಂದಿಗೂ ಇವೆ. ಪ್ರತಿ ವರ್ಷ ವಿಜಯದಶಮಿಯಂದು, ಮರದ ರುಂಡವನ್ನು ಬೆಳ್ಳಿಮುಖವಾಡ ಇತ್ಯಾದಿಗಳಿಂದ ಶೃಂಗರಿಸಿ, ಪಾಲಕೆಯಲ್ಲಿ ಮರದ ಕುದುರೆ ಮೇಲೆ ಕೂರಿಸಿ ಊರಿನ ಇತರ ದೇವರುಗಳೊಂದಿಗೆ ಕುಮಾರಮಲ್ಲದೇವರ ಪಾಲಕೆಯನ್ನು ಹೊತ್ತು ವಾದ್ಯಗಳೊಂದಿಗೆ ಅಂಬಿನ ಬಯಲಿಗೆ ಸಾಗುತ್ತಾರೆ. ಅಲ್ಲಿ ಎಂಟುದೇವರುಗಳ ಕೂಡು ಭೇಟಿಯ ನಂತರ ಅಂಬಿನೋತ್ಸವವಾಗುತ್ತದೆ.

ಹೀಗೆ ವೀರನೊಬ್ಬನನ್ನು ಆರಾಧಿಸುವ ಪರಿ (Hero Worship) ಅನನ್ಯವಾದುದು. ಅಂಬಿನ ನಂತರ ಕೇರಿಗಳಲ್ಲಿ ಕುಮಾರಮಲ್ಲದೇವರ ಮೆರವಣಿಗೆ ಸರಳವಾಗಿ ಸಾಗುತ್ತದೆ. ಶ್ರೀರಾಂಪುರದಲ್ಲಿ ಬನಶಂಕರಿ, ಆಂಜನೇಯ, ಕೊಳಲಗೋಪಾಲ, ವೀರಭದ್ರ,

ಕಾಳಮ್ಮ ಮುಂತಾದ ಗುಡಿಗಳಿವೆ. ಅವಧೂತ ಪರಪ್ಪಸ್ವಾಮಿಗಳ ಮೂಲಗದ್ದುಗೆಯ ಮಠ ಅಭಿವೃದ್ಧಿಗೊಂಡಿದ್ದು ಶಿವರಾತ್ರಿ ಸಂದರ್ಭದಲ್ಲಿ ರಥೋತ್ಸವ ಜಾತ್ರೆ ಜರುಗುತ್ತದೆ. ರೇವಣಸಿದ್ದಪ್ಪನ ಮಠ, ಕೊಲ್ಲಾಪುರದಮ್ಮ, ಬೀರದೇವರು ಗುಡಿಗಳಿವೆ. ಗ್ರಾಮದಲ್ಲಿ ಸುಸಜ್ಜಿತ ಕಟ್ಟಡವನ್ನು ಹೊಂದಿರುವ ಖಾಸಗಿ ಗ್ರಂಥಾಲಯವು (ಸರ್ಕಾರದ ನೆರವಿನೊಂದಿಗೆ) ಕಾರ್ಯನಿರ್ವಹಿಸುತ್ತಿದೆ. ಶ್ರೀರಾಂಪುರಕ್ಕೆ ಗವಿರಂಗನಾಥಸ್ವಾಮಿ ಕ್ಷೇತ್ರ, ಹೆಗ್ಗೆರೆ ಹಾಗೂ ಮೈಲಾರಪುರ ಕ್ಷೇತ್ರಗಳು ಹತ್ತಿರದಲ್ಲಿವೆ. ಬೆಂಗಳೂರು ಮುಂತಾದೆಡೆಗಳಿಂದ ಶ್ರೀರಾಂಪುರಕ್ಕೆ ಬಸ್ ಸಂಚಾರ ಹೇರಳವಾಗಿದೆ. ವಿಜಯನಗರ ಶೈಲಿಯ ಶಾಸನೋಕ್ತ ಲಕ್ಷ್ಮೀಕಾಂತ ಮಂಟಪವು ಕಲಾತ್ಮಕವಾಗಿದೆ. ಅನೇಕ ಶಾಸನಗಳು, ವೀರಗಲ್ಲುಗಳು ಇತ್ಯಾದಿ ಐತಿಹಾಸಿಕ ಅವಶೇಷಗಳು ಇವೆ. ಈ ಗ್ರಾಮದಲ್ಲಿ, ಸಾಂಗತ್ಯದಲ್ಲಿ ಹೊಗಳಲ್ಪಟ್ಟಿರುವ ಏಕನಾಥೇಶ್ವರಿ ದೇವಾಲಯ ಈಗ ಇರುವುದಿಲ್ಲ. ಹಿಂದಿನ ಕಾಲದಲ್ಲಿ ಈ ನಗರದಲ್ಲಿ ೧೦೧ ದೇವಸ್ಥಾನಗಳಿದ್ದವೆನ್ನಲಾಗಿದೆ. ಕುಮಾರ ಮಲ್ಲನಗುಡಿ ಅತ್ಯಂತ ಶಿಥಿಲವಾಗಿದ್ದು, ಇದನ್ನು ಜೀರ್ಣೋದ್ಧಾರ ಗೊಳಿಸುವ ಕಾರ್ಯ ಅತಿ ಜರೂರಾಗಿ ಆಗಬೇಕಾಗಿದೆ.

**ಬೆಲಗೂರು (೫,೮೦೮)**

ಹೊಸದುರ್ಗದಿಂದ (ಪಂಚನಹಳ್ಳಿ ಮಾರ್ಗದಲ್ಲಿ)೧೫ ಕಿ.ಮೀ. ದೂರದಲ್ಲಿರುವ ಈ ಗ್ರಾಮ ಐತಿಹಾಸಿಕವಾದುದು. ಇಲ್ಲಿರುವ ಪ್ರಸನ್ನರಾಮೇಶ್ವರ ದೇವಾಲಯವು ಚೋಳರ ಕಾಲದ್ದೆನ್ನಲಾಗಿದ್ದು, ಭೂಮಿಯಲ್ಲಿ ಹೊರಭಾಗವು ಅರ್ಧದಷ್ಟು ಹೂತುಹೋಗಿದೆ. ಆದಾಗ್ಯೂ ಕಲಾತ್ಮಕವಾಗಿ ಸುಸ್ಥಿತಿಯಲ್ಲಿದ್ದು ಆಕರ್ಷಿಸುತ್ತದೆ.

ಕ್ರಿ.ಶ.೧೫ನೇ ಶತಮಾನದಲ್ಲಿ ಬೆಲಗೂರುಕೋಟೆ ಬಲವಾದುದಾಗಿದ್ದು ಇಲ್ಲಿ ಭೈರವನಾಯಕನು ಆಳುತ್ತಿದ್ದನೆಂದು ಬೂದಿಹಾಳು ಸಿರುಮನ ಸಾಂಗತ್ಯಗಳಲ್ಲಿ ವಿವರಿಸಲಾಗಿದೆ. ಭೈರವನು ಸಿರುಮನ ಮಗನಿಗೆ ಹೆಣ್ಣುಕೊಟ್ಟ 'ಬೀಗ'ನಾಗಿದ್ದನಾದರೂ ವಿಜಯನಗರದವರ ಕಡೆ ಸೇರಿ ಸಿರುಮನ ವಿರುದ್ಧ ಪಿತೂರಿ ಮಾಡಿದ್ದನೆನ್ನಲಾಗಿದೆ.

ಈ ಗ್ರಾಮದಲ್ಲೀಗ 'ವೀರಪ್ರತಾಪಾಂಜನೇಯ' ದೇವರು ಭಕ್ತರನ್ನು ಹೆಚ್ಚು ಆಕರ್ಷಿಸುತ್ತಿದೆ. ಪ್ರತಿ ಅಮಾವಾಸ್ಯೆಯಂದು ಇಲ್ಲಿ ನಡೆಯುವ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಜಿಲ್ಲೆಯಲ್ಲಿಯೇ ಪ್ರಸಿದ್ಧವಾದುದು. ಶ್ರೀಬಿಂದುಮಾಧವ ಶರ್ಮ ಅವರು ಇಲ್ಲಿ ಮಾರುತಿಯ ಉಪಾಸಕರಾಗಿರುವರು. ಇಲ್ಲಿ ರಾಜ್ಯದಲ್ಲೇ ತೆಂಗಿನ ನಾರಿನ ಕೈಗಾರಿಕೆಗಳೂ ಇಲ್ಲಿವೆ. ರಾಷ್ಟ್ರಕವಿ ಡಾ॥ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಬಾಲ್ಯ ಜೀವನವನ್ನು ಇಲ್ಲಿನ ಕುಂಬಾರ ಹಾಗೂ ದೇವಾಂಗರ ಕೇರಿಯಲ್ಲಿ ಕಳೆದಿರುವುದಾಗಿ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಬೆಲಗೂರು ಕೋಟೆ ಎಂದು ಇತಿಹಾಸ ಪುಟಗಳಲ್ಲಿ ಹೇಳಲಾಗಿದೆ.

**ಮತ್ತೋಡು (೪,೧೫೮)**

ಹೊಸದುರ್ಗದಿಂದ (ಕಂಚೀಪುರ ಮಾರ್ಗ) ೧೮ ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ಗ್ರಾಮವಾದ ಇಲ್ಲಿ ಹಿಂದಿನ ಕಾಲದಲ್ಲಿ ೧೦೧ ದೇವಸ್ಥಾನಗಳಿದ್ದವೆನ್ನಲಾಗಿದೆ. ಕ್ರಿ.ಶ.೧೬೦೪ ರಿಂದ ೧೭೭೯ರವರೆಗೆ (ಒಟ್ಟು ೧೭೫ ವರ್ಷಗಳ ಕಾಲ) ಮತ್ತೋಡು ಪಾಳೆಯಗಾರರು ಇಲ್ಲಿ ಸಮರ್ಥರಾಗಿ ಆಳ್ವಿಕೆ ನಡೆಸಿದರು. ಅನೇಕ ಶಿಲಾಶಾಸನ, ತಾಮ್ರಶಾಸನ, ಕೋಟೆ–ಕೊತ್ತಲಗಳ ಅವಶೇಷ ಹಾಗೂ ಭಾಗೀಮರದಮ್ಮ, ಬನಶಂಕರಿ, ಬೇವಿನಹಳ್ಳಿ ಕರಿಯಮ್ಮ, ಸಿದ್ಧರಾಮೇಶ್ವರ, ಆಂಜನೇಯ, ಭೂತರಾಯ, ಗಣೇಶ, ಬಾಣದ ರಂಗನಾಥಸ್ವಾಮಿ, ಲಕ್ಷ್ಮೀನಾರಾಯಣ, ಮುಂತಾದ ದೇವಾಲಯಗಳು ಇಲ್ಲಿವೆ. ವಿಶೇಷವೆಂದರೆ ಇಲ್ಲಿ ಕೋಟೆಯ ಎರಡು 'ಹೆಬ್ಬಾಗಿಲು'ಗಳ ಅವಶೇಷಗಳು ಇವೆ.

ಪಾಳೆಯಗಾರರ ಕಾಲದಲ್ಲಿ ಇಲ್ಲಿ ಗಾಜಿನ ಬಣ್ಣ–ಬಣ್ಣದ ಬಳೆಗಳನ್ನು ತಯಾರಿಸಲಾಗುತ್ತಿದ್ದು, ಬಳೆಯ ಬಟ್ಟಿಯೋಲೆಗಳ ಅವಶೇಷಗಳೂ ಈಗ ಕಾಣಸಿಗುತ್ತವೆ. ಈ ಗ್ರಾಮದ ಭಾಗೀಮರದಮ್ಮ (ಕಾಶೀ ಭಾಗೀರಥಿ ದೇವಿ) ಜಾತ್ರೆ ಬಹಳ ಹೆಸರುವಾಸಿಯಾಗಿದ್ದು, ಈ ದೇವತೆಯ ಧೂತ(ಚೋಮ)ನಾದ ಬೆಳ್ಳಿಕಣ್ಣಪ್ಪನ ಕುಣಿತ ನಯನ ಮನೋಹರವಾಗಿರುತ್ತದೆ. ಸಮೀಪದ ಗಂಜಿಗೆರೆಯು ಪಾಳೆಯಗಾರರ ಕಾಲದ 'ಅಗ್ರಹಾರ' (ಶಿಕ್ಷಣ ಕೇಂದ್ರ) ವಾಗಿದ್ದಿತು. ಮತ್ತೋಡು ಆಂಗ್ಲರ ಕಾಲದಲ್ಲಿ ತಾಲ್ಲೂಕು ಕೇಂದ್ರವಾಗಿದ್ದಿತು.

ಶತಮಾನದ ಹಿಂದೆ ಇಲ್ಲಿನ ಕೆರೆಯೊಳಗಿನ ಬಾವಿಯ ನೀರು 'ಶ್ರೇಷ್ಠಜಲ'ವಾಗಿದ್ದಿತೆಂದು ಜನರು ಹೇಳುವರು. ಇಲ್ಲಿಗೆ ಸಮೀಪದಲ್ಲಿ ಸಿಮೆಂಟ್ ಕಾರ್ಖಾನೆಯಿದೆ. ಹಿಂದೆ ಮತ್ತೋಡಿನಲ್ಲಿ ಮುರುಘಾ ಸಂಪ್ರದಾಯದ ಶಾಖಾಮಠವಿದ್ದು, ಅರೆಹಳ್ಳಿಯನ್ನು ಮಠಕ್ಕೆ ದತ್ತಿ ನೀಡಲಾಗಿದ್ದಿತು. ಪಾಳೆಯಗಾರರ ಕಾಲದ ಪರ್ವತ ಮಲ್ಲಿಕಾರ್ಜುನಸ್ವಾಮಿ ಮಠವಿದೆ. ಮತ್ತೋಡು ಪಾಳೆಯಗಾರರು ವೀರಶೈವರಾಗಿ ಮತಾಂತರ ಹೊಂದಿದ್ದರು.

ಈಗಲೂ ಪಾಳೆಯಗಾರರ ವಂಶಸ್ಥರಿದ್ದು, ವೀರಶೈವರಾಗಿಯೇ ಇದ್ದಾರೆ. (ಎಚ್. ಎನ್.ಪಾಳೇಗಾರರು ಮೈಸೂರು ಮಹಾರಾಜರ ಆಪ್ತಕಾರ್ಯದರ್ಶಿಯಾಗಿ ನಂತರ ಚಿತ್ರದುರ್ಗದ ಕಲೆಕ್ಟರರೂ ಆಗಿದ್ದರು). ಮತ್ತೋಡಿನ ಅರಮನೆಗಳು ಈಗ ಉಳಿದಿಲ್ಲ. ಆದರೆ, 'ಸುಬೇದಾರನ ಮನೆ' ಇಂದಿಗೂ ಇದೆ.

ಇಲ್ಲಿನ ಪ್ರಾಥಮಿಕ ಪಾಠಶಾಲೆ ಶತಮಾನವನ್ನು ದಾಟಿದೆ ಹಾಗೂ ಕನ್ನಡ ಸಂಘವು ೨೫ ವರ್ಷಗಳನ್ನು ಪೂರೈಸಿ ಬೆಳ್ಳಿಹಬ್ಬ ಆಚರಿಸಿದೆ. ವಿಜಯನಗರ ಶೈಲಿಯ ಬಾಣದ ರಂಗನಾಥ ದೇವಾಲಯದ ಮುಂಭಾಗದಲ್ಲಿ ಕಲಾತ್ಮಕ ಕೆತ್ತನೆ ಗಮನಾರ್ಹವಾದುದು.

## ಮೈಲಾರಪುರ ಕ್ಷೇತ್ರ

ಹೊಸದುರ್ಗದಿಂದ (ಶ್ರೀರಾಂಪುರ–ಬೆಲಗೂರು ಮಾರ್ಗದಲ್ಲಿ) ೨೪ ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರ, ಉತ್ತರದ ಪುಣೆ ಬಳಿಯ ಜೇಜೂರಿನಿಂದ ದಕ್ಷಿಣದ ಮೈಲಾರಪಾಳ್ಯ ಬೆಳ್ಳೂರಿನವರೆಗೆ ಇರುವ ಮೈಲಾರನ ಆರಾಧನೆಯ ಕೇಂದ್ರಗಳಲ್ಲಿ ಒಂದು. ಮೈಲಾರಪುರದ ಬೆಟ್ಟದಲ್ಲಿರುವ ಮೈಲಾರ ದೇವರ ಹಾಗೂ ಪರಿವಾರ ದೇವರುಗಳ ದೇವಾಲಯಗಳು ಮತ್ತು ಬೆಟ್ಟದ ಕೆಳಗಿರುವ ಕ್ಷೇತ್ರದ ಮಹಾದ್ವಾರ ವಿಜಯನಗರ ಶೈಲಿಯಲ್ಲಿದ್ದು, ನೋಡಲು ಆಕರ್ಷಕವಾಗಿವೆ. ಕ್ರಿ.ಶ.೧೫ನೇ ಶತಮಾನದಲ್ಲಿ ಬೂದಾಳು ಸಿರುಮನಾಯಕನು ಈ ಕ್ಷೇತ್ರದ ದೇವಾಲಯಗಳನ್ನು ಕಟ್ಟಿಸಿದ್ದನೆನ್ನಲಾಗಿದೆ. ಕ್ಷೇತ್ರದಲ್ಲಿ ಶ್ರೀ ಮೈಲಾರಲಿಂಗೇಶ್ವರ ಹಾಗೂ ಗಂಗಮಾಳಮ್ಮ ದೇವರುಗಳಲ್ಲದೆ, ನೀಲಕಂಠೇಶ್ವರ ದೇವಾಲಯ, 'ಶ್ರೀ ಚೌಡಮ್ಮ' ಎಂಬ ದೊಡ್ಡ ಬಿಲ್ಲುದೇವರು ಹಾಗೂ 'ಶ್ರೀ ಸಿದ್ಧಪ್ಪ' ಎಂಬ ಬಾಣ ದೇವರು, ದೊಡ್ಡಯ್ಯ, ಚಿಕ್ಕಯ್ಯ, ಕಲ್ಯಾಣ ಮಂಟಪ, ಉಯ್ಯಾಲೆ ಕಂಬಗಳು, ದೀಪಾಲೆ ಕಂಬ, ಯಾಗಶಾಲೆ, ೨ನೇ ದ್ವಾರ, ೩ನೆ ದ್ವಾರ, ಜುಂಜಪ್ಪ, ಅಮ್ಮನಪಾದ, ಹೆಗ್ಗಪ್ಪ ಮತ್ತು ಗಂಗಮಾಳಮ್ಮ ಗುಹಾಂತರ ದೇಗುಲ, ಬೆಟ್ಟದ ಕೆಳಗೆ ಶಸ್ತ್ರಪವಾಡ ಮಂಟಪ, ವಿಶ್ರಾಂತಿ ಮಂಟಪ, ಓಕುಳಿ ಮಂಟಪ, ಮಜ್ಜನ ಮಂಟಪ, ಕರುಗಲ್ಲು ಮುಂತಾದುವು ಇವೆ. ತೇರಿನ ಬೀದಿ ಜಾತ್ರಾ ಬಯಲು ಇದೆ.

ವಿಜಯದಶಮಿಯ ಮರುದಿನ ಇಲ್ಲಿ ನಡೆಯುವ ಅಂಬಿನೋತ್ಸವ ಮತ್ತು ಸರಪಳಿ ಪವಾಡ, ಬಗನೀಗೂಟ ಪವಾಡ, ಕಾರಣಿಕ ಜಾತ್ರೆಯನ್ನು ನೋಡಲು ಅಂದಾಜು ೧೦ ಸಾವಿರಕ್ಕೂ ಹೆಚ್ಚು ಜನರು ಸೇರುತ್ತಾರೆ. ಇಲ್ಲಿ ೨–೩ ವರ್ಷಗಳಿಗೊಮ್ಮೆ ಮೈಲಾರದೇವರ ರಥೋತ್ಸವ – ಜಾತ್ರೆ ಸಹ ನಡೆಯುತ್ತದೆ. ಇಲ್ಲಿನ ದೊಡ್ಡ ಬಿಲ್ಲಿನ ಮುಂದಿನ ಅರ್ಧಭಾಗವನ್ನು 'ಚೌಡಮ್ಮ' ಎಂದೂ, ಹಿಂಭಾಗದ ಅರ್ಧಬಿಲ್ಲನ್ನು 'ನೀಲಣ್ಣದೇವರು' ಎಂದೂ ಹೇಳುವರಲ್ಲದೆ ಚೌಡಮ್ಮಗೆ ಮಾಂಸಾಹಾರದ ನೈವೇದ್ಯವನ್ನು ಮತ್ತು ನೀಲಣ್ಣಗೆ ಸಸ್ಯಾಹಾರದ ಎಡೆಯನ್ನು ಇಡುವರು (ನೈವೇದ್ಯ ಇಡುವಾಗ ಮಧ್ಯಕ್ಕೆ ಅಡ್ಡಪರದೆ ಹಿಡಿಯುತ್ತಾರೆ.) ಮೈಲಾರ ಕ್ಷೇತ್ರದ ಮುಖ್ಯ ಹೆಬ್ಬಾಗಿಲು, ಹತ್ತಿರದ ಸೂಜಿಕಲ್ಲು ಗ್ರಾಮದಲ್ಲಿದೆ. ಈ ಕ್ಷೇತ್ರಕ್ಕೆ ಹೊಸದುರ್ಗ ಮುಂತಾದೆಡೆಗಳಿಂದ ಬಸ್ ಸಂಚಾರ ವ್ಯವಸ್ಥೆ ಇದೆ.

## ಲಕ್ಕೀಹಳ್ಳಿ (೨,೩೭೨)

ಹೊಸದುರ್ಗದಿಂದ (ಮಾರೀಕಣಿವೆ ಮಾರ್ಗ) ೨೧ ಕಿ.ಮೀ. ದೂರದಲ್ಲಿರುವ ಇದು ಬಹಳ ಪ್ರಾಚೀನ ಗ್ರಾಮ (ನಗರ). ಕ್ರಿ.ಶ.೮ನೇ ಶತಮಾನದಲ್ಲಿ ಇದು 'ರತ್ನಪುರಿ' ಎಂದು ಹೆಸರು ಪಡೆದಿದ್ದು, ರತ್ನಪುರಿ ದೇಶವನ್ನು ಸೋಮಶೇಖರ ಮತ್ತು ಚಿತ್ರಶೇಖರ ಎಂಬ

ರಾಜಕುಮಾರರು ಆಳುತ್ತಿದ್ದರೆಂದೂ, ಚಿತ್ರಶೇಖರನು ನೀರಗುಂದ (ನೀಲಾವತಿ ಪಟ್ಟಣ) ನಾಡಿನ ರಾಜಕುಮಾರಿಯನ್ನು, ಶೌರ್ಯ ಪಂದ್ಯದಲ್ಲಿ (ಅಲ್ಲಿನ ಸಿಂಹವನ್ನು ಕೊಂದು) ಜಯಶಾಲಿಯಾಗಿ ವಿವಾಹವಾದನೆಂದು ದಾಖಲೆಗಳಿವೆ. ಈ ಕಥೆಯಾಧಾರಿತ 'ಚೋರಕಥೆ' ಎಂಬ ನಾಟಕವೂ ಈ ಪ್ರದೇಶದಲ್ಲಿ ಹಿಂದೆ ಜನಪ್ರಿಯವಾಗಿದ್ದಿತು. ಕ್ರಿ.ಶ. ೧೬೦೦ರಲ್ಲಿ ಈ ಸ್ಥಳವು 'ಲಕ್ಕವ್ವನಹಳ್ಳಿ ಕೋಟೆ' ಎಂದು ಪ್ರಸಿದ್ಧಿಯಾಗಿದ್ದು, ಇದರ ವಾರ್ಷಿಕ ಕಂದಾಯವು ೬,೦೦೦ ಪಗೋಡಗಳಾಗಿತ್ತೆಂದು ದಾಖಲೆಗಳು ತಿಳಿಸುತ್ತವೆ. ಬೂದಿಹಾಳು ಪಾಳೇಪಟ್ಟಿನಲ್ಲಿ ಪೆನುಗೊಂಡೆಯವರು ಹಿಡಿಯಲು ಅಸಾಧ್ಯವಾಗಿದ್ದ ಮದ್ದಾನೆಯನ್ನು ಅಲ್ಲಿದ್ದ ಮತ್ತೋಡು ಗಿರಿಯಪ್ಪ ಎಂಬ ಪರಾಕ್ರಮಿ ಪಳಗಿಸಿ ಬಂಧಿಸಿದ್ದರಿಂದ, ಲಕ್ಕವ್ವನಹಳ್ಳಿ ಕೋಟೆಯನ್ನು ಗಿರಿಯಪ್ಪನಿಗೆ ಬಳುವಳಿಯಾಗಿ ನೀಡಲಾಯಿತು. ಗಿರಿಯಪ್ಪನಾಯಕನು ತನ್ನ ರಾಜಧಾನಿಯನ್ನು ಲಕ್ಕವ್ವನಹಳ್ಳಿಯಿಂದ ಮತ್ತೋಡಿಗೆ ಸ್ಥಳಾಂತರ ಮಾಡಿದನು ಎಂದು ಆಧಾರಗಳಿಂದ ತಿಳಿಯುವುದು. ಲಕ್ಕವ್ವನಹಳ್ಳಿಯಲ್ಲಿ ವೀರಗಲ್ಲುಗಳು, ಶಾಸನಗಳು, ಬತೇರಿ, ಮಹಾದ್ವಾರ, ಕೋಟೆಯ ಅವಶೇಷ ವಿವಿಧ ದೇವಸ್ಥಾನಗಳು ಮುಂತಾದವು ಇವೆ.

**ಶಬರಿವನ (ರಾಮದೇವರ ತೋಪು)**

ದೊಡ್ಡಘಟ್ಟದ ಬಳಿ ಇರುವ ಶಬರಿವನವು ರಾಮಾಯಣ ಕಾಲಕ್ಕೆ ಸಂಬಂಧಪಟ್ಟ ತಾಣವೆಂದು, ರಾಮನ ಭಕ್ತೆಯಾದ ಶಬರಿ ರಾಮನಿಗಾಗಿ ಕಾದು, ರಾಮನ ದರ್ಶನವನ್ನಿಲ್ಲಿ ಪಡೆದಳೆಂಬ ಪ್ರತೀತಿ ಇದೆ. 'ರಾಮದೇವರ ತೋಪು' ಎಂಬ ಹೆಸರಿನ ಹಿನ್ನೆಲೆಯೂ ರಾಮಾಯಣ ಕಾಲದ ಸಂಬಂಧವನ್ನು ಹೊಂದಿದೆಯೆಂದು ಹೇಳಲಾಗುತ್ತದೆ. ಈ ತಾಣದ ನಿಸರ್ಗ ಚೆಲುವು ಆಹ್ಲಾದಕರವಾಗಿದೆ. ಪ್ರತಿ ಶನಿವಾರ (ಶಬರಿವನದಲ್ಲಿ) ಜನರು ವಿಶೇಷ ಪೂಜೆಗೆ ಬರುವ ವಾಡಿಕೆ ಇದೆ. ಅಮಾವಾಸ್ಯೆ-ಹುಣ್ಣಿಮೆ ದಿನಗಳಲ್ಲಿ ಜನಸಂಚಾರ ಇರುವುದಿಲ್ಲ. ಗೂಳೀಹಟ್ಟಿಯವರೆಗೆ ಬಸ್ ಸಂಚಾರವಿರುವುದು.

**ಶ್ರೀರಾಂಪುರ ನೇರ್ಲಕೆರೆ (ಎಸ್. ನೇರಲಕೆರೆ)(೧,೨೭೧)**

ಹೊಸದುರ್ಗದಿಂದ (ಶ್ರೀರಾಂಪುರ ಮಾರ್ಗ) ೧೨ ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ವಿಜಯನಗರ ಕಾಲದ 'ಕಟ್ಟೆ ರಂಗನಾಥಸ್ವಾಮಿ' ದೇವಾಲಯವಿದ್ದು, ಮುಖ್ಯದ್ವಾರದ ಗೋಪುರವು ಅತ್ಯಾಕರ್ಷಕವಾಗಿದೆ. ದೇವಾಲಯದ ಉಯ್ಯಾಲೆ ಸ್ತಂಭ ಗಮನ ಸೆಳೆಯುತ್ತದೆ. ಇಲ್ಲಿ ಶಿಲಾಶಾಸನ ಇತ್ಯಾದಿ ಸ್ಮಾರಕಗಳಿವೆ. ಇಲ್ಲಿಗೆ ಬಸ್ ವ್ಯವಸ್ಥೆ ಚೆನ್ನಾಗಿದೆ.

**ಸಾಣೇಹಳ್ಳಿ (೧,೮೮೯)**

ಹೊಸದುರ್ಗದಿಂದ (ಅಜ್ಜಂಪುರ ಮಾರ್ಗ) ೧೪ ಕಿ.ಮೀ.ದೂರದಲ್ಲಿದೆ. ಹೊಯ್ಸಳರ ಕಾಲದಲ್ಲಿ ಸೈನಿಕರ ಕತ್ತಿ-ಗುರಾಣಿ-ಭರ್ಜಿ ಮೊದಲಾದ ಸಾವಿರಾರು ಆಯುಧಗಳನ್ನು ಸಾಣೆ ಹಿಡಿಯುತ್ತಿದ್ದುದರಿಂದಾಗಿ ಈ ಸ್ಥಳಕ್ಕೆ 'ಸಾಣೇಹಳ್ಳಿ' ಎಂದು ಹೆಸರು ರೂಢಿಯಲ್ಲಿ ಬಂದಿರಬಹುದು. ಪಕ್ಕದಲ್ಲಿನ ನೀರಗುಂದವು ರಾಜಧಾನಿಯಾಗಿ ಮೆರೆದ ಪ್ರಾಚೀನ ಸ್ಥಳ. ಬಾಗೂರು ಸಹ ಸಂಸ್ಥಾನವಾಗಿದ್ದ ತಾಣ. ಪಕ್ಕದ ಪಾಳೇದಹಳ್ಳಿ ಸೈನಿಕರ ಬಿಡಾರದ (ಪಾಳೇ) ಗ್ರಾಮ. ಈಗ ಸಾಣೇಹಳ್ಳಿಯಲ್ಲಿ ತರಳಬಾಳು, 'ಬೃಹನ್ಮಠ'ದ ಶಾಖಾಮಠವಿದ್ದು, ಮಠದ ಪೀಠಾಧ್ಯಕ್ಷರಾದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಸ್ಥಾಪಿಸಿರುವ 'ಶಿವಕುಮಾರ ಕಲಾಸಂಘ'ದ ಹಾಗೂ ಸಂಚಾರಿ ರಂಗತಂಡ 'ಶಿವಸಂಚಾರ'ದ ನಾಟಕಗಳ ಪ್ರಯೋಗಕ್ಕಾಗಿ ನಿರ್ಮಿಸಲ್ಪಟ್ಟಿರುವ ಗ್ರೀಕ್ ಮಾದರಿಯ ವಿಶಾಲವಾದ ಬಯಲು ರಂಗಮಂದಿರವಿದ್ದು, ರಾಜ್ಯದಲ್ಲಿಯೇ ವಿಶಿಷ್ಟವಾದುದೆನ್ನಿಸಿದೆ.

ಇಲ್ಲಿ ಪ್ರತಿವರ್ಷ ನವೆಂಬರ್‌ನಲ್ಲಿ ರಾಷ್ಟ್ರೀಯ ನಾಟಕೋತ್ಸವ ಅಥವಾ ರಾಜ್ಯ ಮಟ್ಟದ ನಾಟಕೋತ್ಸವ ವಾರಕಾಲ ನಡೆಯುತ್ತದೆ. ರಾಜ್ಯದ ಅನೇಕ ಗಣ್ಯರು ಇಲ್ಲಿನ ಸಮಾರಂಭಗಳಲ್ಲಿ ಭಾಗವಹಿಸಿರುವರು. ಇಲ್ಲಿ ಶಾಲೆ-ಕಾಲೇಜು, ವಸತಿನಿಲಯ, ಶ್ರೀಮಠ ಮುಂತಾದ ಕಟ್ಟಡ ಸಮುಚ್ಛಯವಿದೆ. ಒಳಾಂಗಣ ರಂಗಮಂದಿರ ಇತ್ತೀಚೆಗೆ ಆಗಿದೆ. ಇಲ್ಲಿನ ಉದ್ಯಾನವು ವಿವಿಧ ಕಲಾಕೃತಿಗಳಿಂದಾಗಿ ಅತ್ಯಾಕರ್ಷಕವಾಗಿದ್ದು, ಎಲ್ಲರ ಗಮನ ಸೆಳೆಯುತ್ತದೆ. ಬಸ್ ಮತ್ತು ಆಟೋಗಳ ಸಂಚಾರ ವ್ಯವಸ್ಥೆ ಇಲ್ಲಿಗಿದೆ. ಸಾಣೇಹಳ್ಳಿ, ಈಗ ಸಾಂಸ್ಕೃತಿಕ ಗ್ರಾಮವಾಗಿದೆ.

**ಸೂಜಿಕಲ್ಲು (೭೬೧)**

ಶ್ರೀರಾಂಪುರ ಮತ್ತು ಬೆಲಗೂರು ಗ್ರಾಮಗಳ ಮಧ್ಯದಲ್ಲಿದೆ. ಹೊಸದುರ್ಗದಿಂದ ೨೩ ಕಿ.ಮೀ.ದೂರವಿದೆ. ಇದು ಐತಿಹಾಸಿಕ ಗ್ರಾಮ. ಕ್ರಿ.ಶ. ೧೫ನೆಯ ಶತಮಾನದಲ್ಲಿ ಬೂದಿಹಾಳು ಸಂಸ್ಥಾನವನ್ನು ಆಳಿದ ಸಿರುಮನಾಯಕನ ತಂದೆಯಾದ ಕಾಚನಾಯಕನು (ಪಾಳೆಯಗಾರನಾಗುವುದಕ್ಕಿಂತ ಮೊದಲು) ಪೆನುಗೊಂಡೆಯ ಪ್ರೌಢರಾಯನ ಅರಮನೆಯ ಕಾವಲುಗಾರನಾಗಿದ್ದು, ಪಂದ್ಯವೊಂದನ್ನು ಗೆದ್ದುದರಿಂದ ಸೂಜಿಕಲ್ಲು ದುರ್ಗವನ್ನು ಬಳುವಳಿಯಾಗಿ ಪಡೆದು, ಸೂಜಿಕಲ್ಲುದುರ್ಗದ ಪಾಳೆಯಗಾರನಾದನು. ಮುಂದೆ, ಸಿರುಮನಾಯಕನು ಬೂದಿಹಾಳಿನಲ್ಲಿ ಕೋಟೆ ನಿರ್ಮಿಸಿಕೊಂಡು ಸ್ಥಳಾಂತರಗೊಂಡನು.

ಈ ಗ್ರಾಮದಲ್ಲಿ ಬೂದಾಳು ಸಿರುಮನ ಆರಾಧ್ಯದೇವರಾದ ಸೋಮೇಶ್ವರ ದೇವಾಲಯವಿದೆ. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯದಲ್ಲಿ ಸೋಮ

ಲಿಂಗೇಶ್ವರ ಹಾಗೂ ಕುದುರೆಯ ಮೇಲೆ ಕುಳಿತಿರುವ ಮೈಲಾರಲಿಂಗ ಮತ್ತು ಗಂಗಮಾಳಮ್ಮ ದೇವರಿದೆ. ಊರಿನ ಮುಂಭಾಗದಲ್ಲಿ ಸೂಜಿಕಲ್ಲು ಕೆಂಚಮ್ಮ ದೇವರ ಗುಡಿ ಇದ್ದು, ಮೂವತ್ಮೂರು ಹಳ್ಳಿಗಳ ದೇವತೆಯಾದ ಈ ದೇವಿಯ ಜಾತ್ರೆ ಫೆಬ್ರವರಿಯಲ್ಲಿ ಜರುಗುತ್ತದೆ. ಈ ಗ್ರಾಮ ಪುರಾಣ ಕಾಲದಲ್ಲಿ ನಂದಿನಿ ನಿಂತ ಸ್ಥಳವಾಗಿತ್ತೆಂಬ ಪ್ರತೀತಿ ಇದೆ. ಸೂಜಿಕಲ್ಲು ಗ್ರಾಮದಲ್ಲಿ, ಅರಳಿಹಳ್ಳಿ ಮಲಿಯಮ್ಮ ದೇವಿಯ ಒಕ್ಕಲು (ಭಕ್ತರು) ಬಹುಸಂಖ್ಯೆಯಲ್ಲಿದ್ದಾರೆ.

**ಸೋಮಸಂದ್ರ (೫೪೯)**

ಹೊಸದುರ್ಗದಿಂದ (ಬೆಂಗಳೂರು ಮಾರ್ಗ) ೧೫ ಕಿ.ಮೀ. ದೂರದಲ್ಲಿರುವ ಸೋಮಸಂದ್ರ, ಐತಿಹಾಸಿಕ ಗ್ರಾಮ ಹಾಗೂ ಧಾರ್ಮಿಕ ಕ್ಷೇತ್ರವಾಗಿದೆ. ಇಲ್ಲಿ ಶಾಸನ, ವೀರಗಲ್ಲು ಮುಂತಾದ ಅನೇಕ ಅವಶೇಷಗಳಿವೆ. ಅತಿ ಪ್ರಾಚೀನ ಕಾಲದ ಶಿವಲಿಂಗವೊಂದು ಈ ಗ್ರಾಮದಲ್ಲಿದೆ. ಇಲ್ಲಿನ ಆಂಜನೇಯ ದೇವರು ಬಹಳ ಪ್ರಖ್ಯಾತವಾಗಿದ್ದು, ರಾಜ್ಯದಾದ್ಯಂತ ಭಕ್ತರನ್ನು ಆಕರ್ಷಿಸಿದೆ. ಈ ದೇವಸ್ಥಾನದಲ್ಲಿ ೩೩ ಅಡಿ ಉದ್ದದ ಕಬ್ಬಿಣದ ಬಿಲ್ಲು ಮತ್ತು ೮ ಅಡಿಗೂ ಹೆಚ್ಚು ಉದ್ದದ ಮರದ ಬಾಣ ಇವೆ. ಗ್ರಾಮದಲ್ಲಿ ಇಂದ್ರಾಣಿ ಅಮ್ಮ, ಭೂತರಾಯ ಮುಂತಾದ ಅನೇಕ ದೇವಸ್ಥಾನಗಳಿವೆ. ಸೋಮಸಂದ್ರವು ಪ್ರಾಚೀನ ಸ್ಥಳವೆನ್ನಲಾಗಿದೆ. ಡಿಸೆಂಬರ್ ತಿಂಗಳಲ್ಲಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಅದ್ದೂರಿಯಾಗಿ ಜರುಗುವುದು. ಈ ಸಂದರ್ಭದಲ್ಲಿ ವಿವಿಧ ಜಾನಪದ ಕಲೆಗಳ ಪ್ರದರ್ಶನ ಇರುತ್ತದೆ.

**ಸಿದ್ದಪ್ಪನ ಬೆಟ್ಟ**

ಹೊಸದುರ್ಗದಿಂದ ಮಧುರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಬಲಕ್ಕೆ ಬೆಟ್ಟದ ಬುಡಕ್ಕೆ ಸಾಗಿದರೆ ಅಲ್ಲಿನ ಗುಹಾಂತರ ದೇಗುಲವೇ ಬೆಟ್ಟದ ಸಿದ್ದಪ್ಪನ (ಸಿದ್ಧೇಶ್ವರ ದೇವರ)ದೇಗುಲ. ಹೊಯ್ಸಳರ ಕಾಲದ ಅಮೋಘ ಶಿಲ್ಪಕಲಾಕೃತಿಗಳಾದ ಬೃಹತ್ ಈಶ್ವರಲಿಂಗ, ಬೃಹತ್ ನಂದಿ ಹಾಗೂ ಆಳೆತ್ತರದ ಭೈರವನ ವಿಗ್ರಹಗಳು ಇಲ್ಲಿವೆ. ಈ ತಾಣವು ಪ್ರಾಚೀನ ನೀರಗುಂದ ನಾಡಿನ ಎಲ್ಲೆಕಟ್ಟಿನ ಸ್ಥಳವಾಗಿದ್ದಿರಬಹುದು. ಶ್ರಾವಣ ಮಾಸದಲ್ಲಿ ಇಲ್ಲಿಗೆ ಹತ್ತಿರದ ಹಳ್ಳಿಗರು ಬಂದು ಪೂಜೆ ಸಲ್ಲಿಸಿ ಅನ್ನಸಂತರ್ಪಣೆ ನಡೆಸುತ್ತಾರೆ. ಇದೊಂದು ನಿಸರ್ಗ ರಮಣೀಯತೆಯ ಪ್ರೇಕ್ಷಣೀಯ ಸ್ಥಳವಾಗಿದೆ.

**ಹಾರನ ಕಣಿವೆ**

ಹೊಸದುರ್ಗದಿಂದ (ಹಿರಿಯೂರು ಮಾರ್ಗದಲ್ಲಿ) ೨೮ ಕಿ.ಮೀ.ದೂರದಲ್ಲಿರುವ ವಾಣಿವಿಲಾಸ ಸಾಗರ ಹಿನ್ನೀರಿನ ಈ ರಮ್ಯತಾಣದಲ್ಲಿ ಕಾಡುಗೊಲ್ಲರ ಆರಾಧ್ಯ

ದೈವವಾದ ರಂಗನಾಥಸ್ವಾಮಿ ದೇವಸ್ಥಾನವಿದೆ. ಎಲ್ಲಾ ಜಾತಿಯ ಜನರು ಈ ದೇವರ ಜಾತ್ರೆಗೆ ಬರುತ್ತಾರೆ. ವಿಜಯ ದಶಮಿಯಲ್ಲಿ ಇಲ್ಲಿ ಭಾರೀ ಅಂಬಿನ ಜಾತ್ರೆ ನಡೆಯುತ್ತದೆ. ಹತ್ತಿರದ ಅಂಚಿಬಾರೆ ಹಟ್ಟಿಯಲ್ಲಿ ಹಾರನ ಕಣಿವೆ ರಂಗನಾಥದೇವರ ಉತ್ಸವ ಮೂರ್ತಿ ಇದೆ. ಕಣಿವೆಯಲ್ಲಿರುವ ಗುಡಿಯಲ್ಲಿನ ಶಿಲಾವಿಗ್ರಹ ಅತ್ಯಂತ ಮನೋಹರವಾಗಿದೆ. ಜಾತ್ರಾ ಸಂದರ್ಭದಲ್ಲಿ ಇಲ್ಲಿಗೆ ಹೊಸದುರ್ಗ ಮತ್ತು ಹಿರಿಯೂರು ಪಟ್ಟಣಗಳಿಂದ ವಿಶೇಷ ಬಸ್ ಸಂಚಾರ ವ್ಯವಸ್ಥೆ ಇರುತ್ತದೆ. ಆನರು 'ಹಾರನಕಣಿವೆ ಜಾತ್ರೆ' ಎಂದು ಈ ಜಾತ್ರೆಯನ್ನು ಪ್ರಸಿದ್ಧಿ ಪಡಿಸಿದ್ದಾರೆ.

## ಹಾಲುರಾಮೇಶ್ವರ

ಹೊಸದುರ್ಗದಿಂದ (ಜಾನಕಲ್ಲು ಮಾರ್ಗದಲ್ಲಿ) ೯ ಕಿ.ಮೀ.ದೂರದಲ್ಲಿರುವ ಈ ಕ್ಷೇತ್ರ ಹಿಂದಿನ ಕಾಲದಿಂದಲೂ ಪ್ರಸಿದ್ಧಿಯಾಗಿದೆ. ಇಲ್ಲಿನ ಗಂಗಾಕೊಳದಲ್ಲಿ, ಬೇಡುವ ಭಕ್ತರಿಗೆ ಶುಭಾಶುಭ 'ಫಲ'ಗಳು ಬರುವುದೇ ಇಲ್ಲಿನ ವಿಸ್ಮಯದ ಸಂಗತಿ. ಪುರಾಣಕಾಲಕ್ಕೆ ಸಂಬಂಧಿಸಿದ ತೀರ್ಥಕ್ಷೇತ್ರವಿದಾಗಿದ್ದು, ಇಲ್ಲಿನ ತೀರ್ಥದಲ್ಲಿ ಮಿಂದು ಗಂಗೆ ಮತ್ತು ರಾಮೇಶ್ವರ ಲಿಂಗಕ್ಕೆ ಪೂಜೆ ಸಲ್ಲಿಸಿದರೆ ಕಾಶಿಯಲ್ಲಿ ಲಭಿಸುವ ಪುಣ್ಯ ಲಭಿಸುವುದೆಂಬ ನಂಬಿಕೆ ಜನರಲ್ಲಿದೆ.

ಪ್ರಾಚೀನ ಕಾಲದಲ್ಲಿ ಇಲ್ಲಿನ ಪ್ರದೇಶವು ದಟ್ಟ ಕಾನನದಿಂದ ಕೂಡಿದ್ದಿತು. ಹತ್ತಿರದ ಶಬರಿ ಕ್ಷೇತ್ರದತ್ತ ಪತ್ನಿಯೊಂದಿಗೆ ಯಾತ್ರೆ ಹೊರಟ ಋಷಿಗಳೊಬ್ಬರು (ವೇದಾವತಿ ನದಿ ತೀರದಲ್ಲಿ) ಬೆಳಗಿನ ಧ್ಯಾನಕ್ಕೆ ಕುಳಿತಿರುವಾಗ ನದಿಯಲ್ಲಿ ಮೀಯಲು ಹೋದ ಋಷಿಪತ್ನಿಗೆ ಗಂಗೆಯು ಪ್ರತ್ಯಕ್ಷಳಾಗಿ ತನಗೆ ಬಾಗಿನ ನೀಡಬೇಕೆಂದು ಸೂಚಿಸಿದಾಗ, ಋಷಿಪತ್ನಿಯು ತನ್ನ ಕೈಗಳಲ್ಲಿದ್ದ ಚಿನ್ನದ ಕಡಗಗಳನ್ನು ಗಂಗಾದೇವಿಗೆ ನೀಡಿ ಆಶೀರ್ವಾದ ಪಡೆದಳು.

ಶಬರಿ ಕ್ಷೇತ್ರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಪತ್ನಿಯ ಕೈಗಳಲ್ಲಿ ಕಡಗಗಳಿಲ್ಲದುದನ್ನು ಗಮನಿಸಿದ ಋಷಿಯು ಆ ಬಗ್ಗೆ ವಿಚಾರಿಸಿದಾಗ, ನಿರುತ್ತರಳಾಗಿ ದಟ್ಟ ಕಾನನದೊಳಗೆ ನಡೆದ ಋಷಿ ಪತ್ನಿಯು ಪತಿಗೆ ಉತ್ತರ ಹೇಳಲಾಗದೆ ದುಃಖಿತಳಾಗಿ ಅಲ್ಲಿದ್ದ ಹುತ್ತದ ಕ್ವಾವೆಗೆ ತನ್ನ ಕೈಗಳನ್ನು ತೂರಿಸಿ ಮೂರ್ಛೆ ಹೋದಳು. ಅವಳಿಗೆ ಎಚ್ಚರವಾದಾಗ ಹುತ್ತದ ಕ್ವಾವೆಯಿಂದ ಹಾಲಿನಂಥಹ ತೀರ್ಥವು ಉಕ್ಕುತ್ತಿರುವುದು ಕಾಣಿಸಿತು.

ಅಲ್ಲದೆ ಆಕೆಯ ಕೈಗಳಿಗೆ ಚಿನ್ನದ ಕಡಗಗಳು ಬಂದಿದ್ದವು. ಆಗ ಗಂಗಾದೇವಿಯು ಪ್ರತ್ಯಕ್ಷಳಾಗಿ 'ನಾನು ಇಲ್ಲಿ ಸದಾ ಉಕ್ಕಿ ಹರಿದು ಜನರ ಕಷ್ಟಗಳನ್ನು ಪರಿಹರಿಸುತ್ತೇನೆ' ಎಂದು ಹೇಳಿ ಮಾಯವಾದಳು. ತಮ್ಮ ತಪಶ್ಯಕ್ತಿಯಿಂದ ಇದನ್ನೆಲ್ಲ ಗ್ರಹಿಸಿ ತಿಳಿದ ಋಷಿಗಳು ಗಂಗೆ ಉಕ್ಕುವ ಜಾಗದ ಸಮೀಪದಲ್ಲಿ 'ರಾಮಲಿಂಗ'ವನ್ನು ಪ್ರತಿಷ್ಠಾಪಿಸಿ ಪುಟ್ಟ

ಪುಟ್ಟ ಪುಷ್ಕರಣಿಗಳನ್ನು ನಿರ್ಮಿಸಿ ಗಂಗಾ-ಯಮುನೆ-ಕಪಿಲೆ-ಸರಸ್ವತಿ ತೀರ್ಥವನ್ನು ಆವಾಹನೆ ಮಾಡಿದರು. 'ಹಾಲುರಾಮೇಶ್ವರ'ಎಂದು ಕ್ಷೇತ್ರಕ್ಕೆ ಹೆಸರಿಟ್ಟ ಋಷಿಗಳು ರಾಮೇಶ್ವರ ಮತ್ತು ಗಂಗೆಗೆ ಪೂಜೆ ಸಲ್ಲಿಸಿ ತಮ್ಮ ಯಾತ್ರೆ ಮುಂದುವರೆಸಿದರು. ಅಂದಿನಿಂದ ಇಂದಿನವರೆಗೂ ಈ ಪುಣ್ಯತೀರ್ಥದಲ್ಲಿ (ಗಂಗಾಕೊಳದಲ್ಲಿ) ನಿಧಾನವಾಗಿ ಉಕ್ಕುವ ನೀರ ಒರತೆಯಲ್ಲಿ ಭಕ್ತರು ಅಪ್ಪಣೆ ಕೇಳದ ಸಮಯದಲ್ಲಿ ಯಾವುದಾದರೂ ಫಲ (ಪದಾರ್ಥ) ಕೊಳದಾಳದಿಂದ ಮೇಲಕ್ಕೆ ತೇಲಿಬರುತ್ತದೆ. ವೀಳ್ಯದೆಲೆ, ಅಡಿಕೆ, ಚಿಗಣಿಮಿದಿಕೆ, ಅಕ್ಕಿತಂಬಿಟ್ಟು, ಹೂ, ಅರಿಶಿಣದೆಳೆ, ಕೈಬಳೆ, ತಾಳಿ, ಪುಟ್ಟ ಬೆಳ್ಳಿ (ಅಥವಾ ಬಂಗಾರದ) ತೊಟ್ಟಿಲು, ತೆಂಗಿನಕಾಯಿ ಚೂರು ಅಥವಾ ಹೋಳು, ತೆಂಗಿನಕಾಯಿ, ಪುಟ್ಟ ಶಿವಲಿಂಗ, ಮೊಸರನ್ನ, ಉತ್ತುತ್ತೆ ಇನ್ನೂ ಮುಂತಾದ ಪದಾರ್ಥಗಳಲ್ಲಿ ಯಾವುದಾದರೂ ಒಂದು ಪದಾರ್ಥ ತೇಲಿಬರುತ್ತದೆ. ಹೆಚ್ಚಾಗಿ ನವದಂಪತಿಗಳು ಈ ಕ್ಷೇತ್ರಕ್ಕೆ ಬಂದು ಪುಣ್ಯತೀರ್ಥವನ್ನು ಬಿಂದಿಗೆಯಲ್ಲಿ ಹಾಕಿಸಿಕೊಂಡು ಮಿಂದು, ಗಂಗೆಗೆ ಪೂಜೆ ಸಲ್ಲಿಸುತ್ತಾರೆ. ಕೆಲವೊಮ್ಮೆ ಅಶುಭ ಫಲಗಳಾದ ಇದ್ದಿಲು, ತೆಂಗಿನಕಾಯಿ ಚಿಪ್ಪು, ಹುಲ್ಲುಗರಿಕೆ ಮುಂತಾದುವೂ ಬರುವುದುಂಟು.

ಹಿಂದೆ ಮೈಸೂರು ಮಹಾರಾಜರು ಮುಂತಾದ ಗಣ್ಯರನೇಕರು ಈ ಕ್ಷೇತ್ರಕ್ಕೆ ಬಂದು ಪೂಜೆ ಸಲ್ಲಿಸಿದ್ದಾರೆ. ಸರಳ ವಿವಾಹ ಕಾರ್ಯಗಳೂ ಇಲ್ಲಿ ನಡೆಯುತ್ತವೆ. ಮುಜರಾಯಿ ಇಲಾಖೆಯ 'ಬಿ' ವರ್ಗದ ದೇವಾಲಯ ಕ್ಷೇತ್ರವಿದಾಗಿದ್ದು ವರ್ಷಕ್ಕೆ ರೂ.೧ ಲಕ್ಷಕ್ಕೂ ಹೆಚ್ಚು ಆದಾಯ ಸರ್ಕಾರಕ್ಕೆ ಬರುತ್ತಿದೆ. ಪ್ರತಿ ಸೋಮವಾರ ಇಲ್ಲಿ ವಿಶೇಷ ಪೂಜೆ ಇದ್ದು, ಅಂದು ಜನದಟ್ಟಣೆ ಅಧಿಕವಾಗಿರುತ್ತದೆ.

ಕ್ಷೇತ್ರದಲ್ಲಿ ದೇವಾಲಯ ಸಂಕೀರ್ಣದ ಜೀರ್ಣೋದ್ಧಾರ ಕಾರ್ಯ ಇದೀಗ ನಡೆದಿದೆ. 'ಯುವಭವನ' ನಿರ್ಮಾಣವಾಗಿದೆ. ಇಲ್ಲಿನ ಪಂಚಲಿಂಗಗಳು, ನಂದಿ, ನಾಗ ವಿಗ್ರಹಗಳು, ವಿಘ್ನೇಶ್ವರ, ಆಂಜನೇಯ, ಲಕ್ಷ್ಮಿ (ಮರದ್ದು) ಇವೆ. ಪ್ರಾಚೀನ ಕಾಲದ ಶಿವಲಿಂಗ (ರಾಮೇಶ್ವರ), ಶ್ರೀರಾಮ-ಸೀತೆ-ಲಕ್ಷ್ಮಣಾಂಜನೇಯ, ಲಕ್ಷ್ಮೀನಾರಾಯಣ, ಕಣ್ಣಪ್ಪ ಮೊದಲಾದ ವಿಗ್ರಹಗಳಿವೆ. ಅನೇಕ ವೀರಗಲ್ಲುಗಳೂ ಇವೆ. ಪಾಳೆಯಗಾರರೂ ಇಲ್ಲಿ ತಮ್ಮ ಸೇವೆ ಸಲ್ಲಿಸಿದ್ದಾರೆ.

ಇಲ್ಲಿಗೆ ಹೊಸದುರ್ಗದಿಂದ ಬಸ್ ಹಾಗೂ ಆಟೋಗಳು ಸಾಕಷ್ಟು ಓಡಾಡುತ್ತವೆ. ಚಿತ್ರದುರ್ಗದಿಂದ ಬರುವವರು ಶಿವಗಂಗ-ತಾಳ್ಯ-ಜಾನಕಲ್ಲು ಮಾರ್ಗವಾಗಿ ಬರಬೇಕು (ಬಸ್ಸುಗಳ ಸೌಕರ್ಯವಿದೆ). ಹಾಲುರಾಮೇಶ್ವರ ದೇವರ ಉತ್ಸವ ಮೂರ್ತಿಯು ಸಮೀಪದ ದೇವಪುರ ಗ್ರಾಮದಲ್ಲಿದೆ. ಹಾಲುರಾಮೇಶ್ವರ ಕ್ಷೇತ್ರದ ಬಳಿ ಇರುವ ಗುಡ್ಡದ ಎತ್ತರ ಸಮುದ್ರ ಮಟ್ಟದಿಂದ ೧,೧೮೧ ಮೀ. ಇದ್ದು ಇಡೀ ಜಿಲ್ಲೆಯಲ್ಲಿ ಇದು ಅತ್ಯಂತ ಎತ್ತರದ ಗುಡ್ಡವೆನ್ನಿಸಿದೆ. ಇಲ್ಲಿನ ನಿಸರ್ಗ ಸೌಂದರ್ಯ ಸೊಗಸಾಗಿದೆ. ರಾಜ್ಯದ ಇತರೆ ಜಿಲ್ಲೆಗಳಿಂದಲೂ ಈ ಕ್ಷೇತ್ರಕ್ಕೆ ಪ್ರವಾಸಿಗರು ಬರುತ್ತಾರೆ.

**ಹೆಗ್ಗೆರೆ (೧,೬೪೨)**

ಹೊಸದುರ್ಗದಿಂದ (ಬೆಂಗಳೂರು ಮಾರ್ಗ) ೨೬ ಕಿ.ಮೀ.ದೂರದಲ್ಲಿರುವ ಈ ಐತಿಹಾಸಿಕ ಗ್ರಾಮದಲ್ಲಿ ಹೊಯ್ಸಳರ ಕಾಲದ ಅಮೋಘ ಶಿಲ್ಪಕಲಾ ವೈಭವವನ್ನು ಸೂರೆಗೊಳ್ಳುವ ಶಿವಾಲಯಗಳು ಮತ್ತು ಜಿನಾಲಯ ಇದ್ದು ತಾಲ್ಲೂಕಿನ ಮುಖ್ಯ ಪ್ರೇಕ್ಷಣೀಯ ಸ್ಥಳಗಳಲ್ಲೊಂದೆನ್ನಿಸಿದೆ. ಶಿಲಾಶಾಸನಗಳು, ವೀರಗಲ್ಲು, ರಾಜಸಮಾಧಿಯ ವೀರಗಲ್ಲು ಮುಂತಾದ ಐತಿಹಾಸಿಕ ಅವಶೇಷಗಳಿವೆ. ಕ್ರಿ.ಶ. ೧೨ನೇ ಶತಮಾನದ ಇಲ್ಲಿನ ಬಸದಿಯನ್ನು ಗೋವಿದೇವನು ತನ್ನ ಮಡದಿ ಮಹಾದೇವಿಯ ಪುಣ್ಯಾರ್ಥವಾಗಿ ಕಟ್ಟಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ. ಸುಕನಾಸಿ ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿರುವ ಕರ್ನಾಟಕದ ಏಕೈಕ ಬಸದಿ ಇದೆನ್ನಲಾಗಿದೆ. ಅಲ್ಲದೆ, ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಬಸದಿಯಲ್ಲಿ ಕಲಾತ್ಮಕ ಕೆತ್ತನೆಯ ಐದು ನೂರಕ್ಕೂ ಹೆಚ್ಚು ಸಂಖ್ಯೆಯ ಕಮಲ ಪುಷ್ಪಗಳನ್ನು ಕಾಣಬಹುದಾಗಿದೆ. 'ಚನ್ನಪಾರ್ಶ್ವದೇವರ ಬಸದಿ' ಎಂದು ಕರೆಯಲಾಗಿರುವ ಈ ಬಸದಿಯು ಕಲಾತ್ಮಕ ಸ್ತಂಭಗಳನ್ನು ಒಳಗೊಂಡಿದೆ. ನಡುವಂಕಣದ ನಾಲ್ಕು ಸ್ತಂಭಗಳ ರಚನೆಯಲ್ಲಿ ಸ್ತಂಭಪೀಠ, ಚೌಕಾಕಾರದ ಪಿಂಡಿ, ದಂಡ, ದಂಡಾಗ್ರ, ಘಟ, ಮಂಡಿ, ಫಲಕ, ಗ್ರೀವ, ಬೋದಿಗೆ ಮತ್ತು ಶಿರ ಅತ್ಯಾಕರ್ಷಕವಾಗಿವೆ. ಭುವನೇಶ್ವರದಲ್ಲಿಯೂ ಕಲಾತ್ಮಕ ಕಮಲಗಳ ಕೆತ್ತನೆ ಇದೆ. ತಳವಿನ್ಯಾಸದ ಶಿಲಾಪಟ್ಟಿಕೆಗಳು ಹಾಗೂ ಭಿತ್ತಿಯ ಆಳೆತ್ತರದ ಕಲಾತ್ಮಕ ಕೆತ್ತನೆಯ ಶಿಲಾಪಟ್ಟಿಕೆಗಳು, ಮುಖ್ಯದ್ವಾರದ ಸೋಪಾನಗಳು ಬಸದಿಯ ಜೀವಂತ ಶಿಲ್ಪಕಲೆಗೆ ಸಾಕ್ಷಿಯಾಗಿವೆ. ಬಸದಿಗೆ ಶಿಖರ ಮತ್ತು ಮಾನಸ್ತಂಭ ಇರುವುದಿಲ್ಲ. ಬಸದಿಯ ಮುಂದೆ ಒಟ್ಟು ೧೩೩ ಸಾಲುಗಳ ಲಿಪಿಯುಳ್ಳ ದೊಡ್ಡ ಶಿಲಾಶಾಸನವಿದೆ. ನಿಷಧಿ ಕಲ್ಲುಗಳು ಸಹ (ಶಾಸನ) ಇವೆ. (ಹೆಚ್ಚು ವಿವರಗಳಿಗೆ, 'ಹೆಗ್ಗೆರೆ ಬಸದಿ'– ಬಾಗೂರು ಆರ್. ನಾಗರಾಜಪ್ಪ ಇವರ ಕೈಪಿಡಿಯನ್ನು ಗಮನಿಸಿರಿ).

ಗ್ರಾಮದ ಹೊರ ವಲಯದಲ್ಲಿಯ ಶಿವಾಲಯಗಳೂ ಅತ್ಯದ್ಭುತ ಶಿಲ್ಪಕಲಾಕೃತಿಗಳಾಗಿವೆ. ಬಸದಿಯ ಒಳ ತೊಲೆಗಲ್ಲಿನ ಮೇಲೆ ಶಾಸನವಿರುವಂತೆಯೇ ಶಿವಾಲಯದೊಳಗೆ ತೊಲೆಗಲ್ಲಿನ ಮೇಲೆ ಶಾಸನವಿದೆ. ದ್ವಾರದ ಶಿಲಾ ಜಾಲಂಧ್ರ, ಬೃಹತ್ ಗಾತ್ರದ ನಂದಿ, ಶಿವಲಿಂಗ, ಸ್ತಂಭಗಳಿದ್ದು ಹೊಯ್ಸಳ ಶಿಲ್ಪಕಲೆಯನ್ನು ಸಾಬೀತುಪಡಿಸಿವೆ. ಗ್ರಾಮದ ಹೊರಗೆ ಮತ್ತೊಂದೆಡೆ ಇರುವ ಸಾಧಾರಣ ಹಾಳುಗುಡಿಯಲ್ಲಿ ಅತ್ಯದ್ಭುತ ಶಿಲಾ ಕೆತ್ತನೆಯ ಭೈರವನ ವಿಗ್ರಹವಿದ್ದು, ಗ್ರಾಮದ ಮಧ್ಯಭಾಗದಲ್ಲಿ ಹಿಂದಿನ ಕಾಲದ ಹೆಬ್ಬಾಗಿಲಿದೆ. ಆಕರ್ಷಕವಾದ ವೀರಭದ್ರದೇವರ ಶಿಲಾಮೂರ್ತಿ ಇದೆ. ಗ್ರಾಮದೇವತೆ ಕೆಂಪರಾಜೇಶ್ವರಿ ದೇವಿಯ ಜಾತ್ರೆ–ತೇರು–ಸಿಡಿ ಆಗುತ್ತವೆ. ಗ್ರಾಮಕ್ಕೆ ಮೂರು ಕೆರೆಗಳಿರುವುದು ವಿಶೇಷವಾಗಿದೆ. ಕ್ರಿ.ಶ.೧೫ನೆಯ ಶತಮಾನದಲ್ಲಿ ಬೂದಾಳು ಸೀಮೆಯನ್ನಾಳಿದ ಸಿರುಮನಾಯಕನ ತಮ್ಮನಾದ ಮಲ್ಲನಾಯಕನು ಹೆಗ್ಗೆರೆವಳಿತವನ್ನು ನೋಡಿಕೊಳ್ಳುತ್ತಿದ್ದನೆಂದು ದಾಖಲೆಗಳಿಂದ

ತಿಳಿಯುವುದು. ಇಲ್ಲಿನ ರಾಜನ ಕಲ್ಗೋರಿಯಲ್ಲಿ ರಾಜನ ವೀರಗಲ್ಲು ಹಾಗೂ ಮತ್ತೊಂದು ಕಲ್ಗೋರಿಯಲ್ಲಿ ವೀರನ ಉಬ್ಬು ಕೆತ್ತನೆ ಶಿಲ್ಪ ಅತ್ಯಾಕರ್ಷಕವಾಗಿವೆ. ಇಲ್ಲಿನ ಶಿವಾಲಯದ ಈಶ್ವರ ಲಿಂಗವನ್ನು ಜ್ಯೋತಿರ್ಲಿಂಗವೆನ್ನುವರು. ಹೆಗ್ಗೆರೆ, ಜೈನರ ಯಾತ್ರಾಸ್ಥಳವಾಗಿ ಗುರುತಿಸಲ್ಪಟ್ಟಿದೆ.

**ಹೆಬ್ಬಳ್ಳಿ (೧,೨೨೭)**

ಹೊಸದುರ್ಗದಿಂದ (ಚಿತ್ರದುರ್ಗ ಮಾರ್ಗ) ೬ ಕಿ.ಮೀ. ದೂರದಲ್ಲಿರುವ ಹೆಬ್ಬಳ್ಳಿ ಗ್ರಾಮ ಐತಿಹಾಸಿಕವಾದುದು. ಚೋಳರು ಹಾಗೂ ಗಂಗರ ಕಾಲದಲ್ಲಿ ರುದ್ರಭೂಮಿ ಯಾಗಿತ್ತೆನ್ನಲಾಗಿದ್ದು, ಆಗಿನ ಕಾಲದ ಆಳೆತ್ತರದ ಒಟ್ಟು ಎಂಟು ವೀರಗಲ್ಲುಗಳನ್ನು ಇಂದಿಗೂ ಇಲ್ಲಿ ಕಾಣಬಹುದಾಗಿದೆ. ಕ್ರಿ.ಶ. ೯ನೇ ಶತಮಾನದ ವೀರಗಲ್ಲುಗಳು ಇವಾಗಿವೆ. ಬಹುಮಟ್ಟಿಗೆ ಆ ಕಾಲದಲ್ಲಿ ಈ ಪ್ರದೇಶವು ಯುದ್ಧಭೂಮಿಯಾಗಿದ್ದು ತುರುಗಳ ರಕ್ಷಣೆಗಾಗಿ ಹಾಗೂ ಶತ್ರುಗಳ ತುರುಗಳನ್ನು ಹಿಡಿಯುವಲ್ಲಿ ಪರಾಕ್ರಮದಿಂದ ಹೋರಾಡಿ ರಾಜನಿಷ್ಠೆಯನ್ನು ಮೆರೆದ ವೀರರು ವೀರಸ್ವರ್ಗವನ್ನು ಸೇರಿದ ಕುರುಹಾಗಿ ಈ ವೀರಗಲ್ಲುಗಳನ್ನು ನೆಡಲಾಗಿದೆ(ತುರುಗೋಳ್ ವೀರಗಲ್ಲುಗಳು). ಗಂಗವಾಡಿ ೯೬,೦೦೦ ಪ್ರಾಂತ್ಯವನ್ನಾಳಿದ ಮಾರಸಿಂಗ ಪೆರ್ಮಾಡಿಯ ಹೆಸರು, ಚೋಳರ ಪಿಳ್ದುವೆಯ್ಯ, ನನ್ನಿಯಗೌಡ, ಸಿನ್ದರಮಾದಯ್ಯ ಮುಂತಾದವರ ಹೆಸರುಗಳು ಇಲ್ಲಿನ ಬೇರೆ-ಬೇರೆ ವೀರಗಲ್ಲುಗಳಲ್ಲಿ ಕಂಡುಬರುತ್ತವೆ. ಮಹಾಸತಿಗುಡಿ ಹಾಳಾಗಿದೆ. ವೀರಭದ್ರ, ಆಂಜನೇಯ ದೇವಸ್ಥಾನಗಳಿವೆ.

**ಹೊಸದುರ್ಗ (೨೨,೪೮೮)**

ಚಿತ್ರದುರ್ಗದಿಂದ ೬೦ ಕಿ.ಮೀ. ಹಾಗೂ ಹೊಸದುರ್ಗ ರೈಲ್ವೆನಿಲ್ದಾಣದಿಂದ ೧೭.೬ಕಿ.ಮೀ. ಹಾಗೂ ಬೆಂಗಳೂರಿನಿಂದ ೨೦೧ ಕಿ.ಮೀ. ದೂರದಲ್ಲಿರುವ ಹೊಸದುರ್ಗ ಪಟ್ಟಣವು ಚಿತ್ರದುರ್ಗದ ಪಾಳೆಯಗಾರನಾದ ಚಿಕ್ಕಣ್ಣನಾಯಕನಿಂದ ಕ್ರಿ.ಶ. ೧೭೦೮ರಲ್ಲಿ ಇಲ್ಲಿನ ಬೆಟ್ಟದ ತಪ್ಪಲಿನಲ್ಲಿ ಕಟ್ಟಲ್ಪಟ್ಟಿತು. ಬೆಟ್ಟದ ಮೇಲೆ ಕೋಟೆಯು ಅದೇ ಪಾಳೆಯಗಾರನಿಂದ ಕ್ರಿ.ಶ. ೧೬೭೫ರಲ್ಲಿಯೇ (೩೩ ವರ್ಷಗಳ ಮೊದಲು) ನಿರ್ಮಾಣಗೊಂಡಿದ್ದಿತು. ಚಿತ್ರದುರ್ಗದ ಈ ಪಾಳೆಯಗಾರನು ಹೊಸದಾಗಿ ನಿರ್ಮಾಣಗೊಂಡ ಈ ಪಟ್ಟಣಕ್ಕೆ (ಕೋಟೆಗೂ ಅನ್ವಯಿಸುವಂತೆ) 'ಹೊಸದುರ್ಗ'ಎಂದು ಹೆಸರಿಟ್ಟನು. ಆಂಗ್ಲರ ಕಾಲದಲ್ಲಿ ಹೊಸದುರ್ಗವು ಹೊಳಲ್ಕೆರೆಗೆ ಸೇರಿದ ಉಪ ತಾಲೂಕಾಗಿದ್ದಿತು. ಒಡೆಯರ ಕಾಲದಿಂದ ತಾಲ್ಲೂಕು ಕೇಂದ್ರವಾಗಿದೆ. ಪಟ್ಟಣದಲ್ಲಿ ವಾಣಿಜ್ಯ- ವ್ಯಾಪಾರಗಳು ಬಹಳ ಬಿರುಸಾಗಿ ನಡೆಯುವುವು. ನೂರಾರು ಬಸ್ಸುಗಳ ಸಂಚಾರ (ರಾಜ್ಯದ ವಿವಿಧೆಡೆಗಳಿಂದ) ವ್ಯವಸ್ಥೆ ಇದೆ. ಸುಸಜ್ಜಿತ ಸರ್ಕಾರಿ ಹಾಗೂ

ಖಾಸಗಿ ಬಸ್ ನಿಲ್ದಾಣಗಳಿದ್ದು, ಪ್ರಯಾಣಿಕರಿಗೆ ಅನುಕೂಲಕರವಾಗಿದೆ. ಪಟ್ಟಣದಲ್ಲಿ ರಸ್ತೆ ಅಗಲೀಕರಣದ ಇನ್ನಷ್ಟು ಅಗತ್ಯವಿದೆ. ಅನೇಕ ಅಂಗಡಿಗಳು, ಹೋಟೆಲುಗಳು, ಕಛೇರಿಗಳು, ಬ್ಯಾಂಕ್‌ಗಳು, ಸಾಮಿಲ್‌ಗಳು, ಕೈಗಾರಿಕಾ ಘಟಕಗಳು, ದೇವಸ್ಥಾನಗಳು, ಬಸದಿ, ಮಸೀದಿ, ಚರ್ಚ್‌ಗಳು, ವರ್ಕ್‌ಷಾಪ್‌ಗಳು, ಶಾಲಾ–ಕಾಲೇಜುಗಳು, ಎ.ಪಿ.ಎಂ.ಸಿ., ನ್ಯಾಯಾಲಯ, ಗುರುಪೀಠಗಳು, ಗ್ರಂಥಾಲಯ, ಪೋಲೀಸ್ ಠಾಣೆ, ಅಗ್ನಿಶಾಮಕ ಠಾಣೆ, ಜನರಲ್ ಆಸ್ಪತ್ರೆ, ಚಿತ್ರಮಂದಿರ, ಸರ್ಕಾರಿ ಬಸ್ ಡಿಪೋ(ಘಟಕ) ಮುಂತಾದುವು ಇದ್ದು, ನಿತ್ಯವೂ ಸಾವಿರಾರು ಜನರು ಇಲ್ಲಿಗೆ ಬಂದು ವ್ಯಾಪಾರ–ವಹಿವಾಟು ನಡೆಸುವರು. ಇಲ್ಲಿನ ದಿನನಿತ್ಯದ ತರಕಾರಿ ಮಾರುಕಟ್ಟೆ ಬಹು ಹೆಸರುವಾಸಿಯಾಗಿದೆ. ಹೊಯ್ಸಳರ ಕಾಲದ ಕಲಾತ್ಮಕವಾದ ಬಹುದೊಡ್ಡ ಗಣಪತಿ ವಿಗ್ರಹ ವಿಶೇಷ ಮಂಟಪದಲ್ಲಿದೆ. ಈ ವಿಗ್ರಹವನ್ನು ೧೯೨೩ರಲ್ಲಿ ನೀರಗುಂದದಿಂದ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಪಟ್ಟಣದಲ್ಲಿ ದುರ್ಗಾಂಬಿಕೆ, ಬನಶಂಕರಿ, ವೀರಭದ್ರ, ಈಶ್ವರ, ಕನ್ನಿಕಾಪರಮೇಶ್ವರಿ, ಶ್ರೀ ರಾಮದೇವರು, ಆಂಜನೇಯ, ಅಯ್ಯಪ್ಪಸ್ವಾಮಿ, ಶನಿದೇವರು, ಸಾಯಿಬಾಬಾ, ಅಂತರಘಟ್ಟಮ್ಮ, ಕರುಮಾರಿಯಮ್ಮ, ಮುಂತಾದ ದೇವಾಲಯಗಳಿವೆ. ಇಲ್ಲಿನ 'ಭೈರವಕೊಂಬಿ' ಬೆಟ್ಟದ ಮೇಲೆ ಪಾಳೆಯಗಾರರ ಕಾಲದ ಭೈರವ ದೇವಸ್ಥಾನ, ಗರಡಿಮನೆ (ಮದ್ದಿನ ಮನೆ) ಹಾಗೂ ಅರಮನೆ ಅವಶೇಷಗಳು, ಸೈನಿಕರ ವಸತಿಯ ಪಳೆಯುಳಿಕೆಗಳು, ಬತೇರಿಗಳು/ಪಣತ ಮುಂತಾದವು ಕಾಣಸಿಗುತ್ತವೆ. ಅದೇ ಬೆಟ್ಟದ ಮತ್ತೊಂದು ಭಾಗವಾದ ಹನುಮನ ಕೊಂಬೆಯಲ್ಲಿ ನೀರಿನದೊಣೆ, ಆಂಜನೇಯನ ಉಬ್ಬು ಕೆತ್ತನೆ ಶಿಲ್ಪ ಮುಂತಾದುವು ಇವೆ. ಸರ್ಪದ ಶಿಲ್ಪವೊಂದು ಆಕರ್ಷಕವಾಗಿದೆ.

ಪಟ್ಟಣದ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಇದ್ದು, ಈಜುಕೊಳ, ಒಳಾಂಗಣ ಕ್ರೀಡಾಂಗಣ ಮುಂತಾದುವು ಗಮನ ಸೆಳೆಯುತ್ತವೆ. ಪಟ್ಟಣವು ತೀವ್ರಗತಿಯಲ್ಲಿ ಬೆಳೆಯುತ್ತಿದ್ದು, ವ್ಯಾಪಾರ–ವಹಿವಾಟು ದಿನದಿನಕ್ಕೆ ಚುರುಕಾಗುತ್ತಿವೆ. ವಸತಿಗಳೂ ಹೆಚ್ಚುತ್ತಿವೆ. ಪಾಳೆಯಗಾರರ ಕಾಲದಲ್ಲಿ, ಚಿಕ್ಕಣ್ಣನಾಯಕನ ತರುವಾಯ ದೊಡ್ಡ ಮದಕರಿನಾಯಕನು ಕ್ರಿ.ಶ. ೧೭೨೧ರಲ್ಲಿ ಆಳಿದನು. ನಂತರ ದಂಡಿನ ಜಂಪಣ್ಣನಾಯಕ ಆಳಿದ ಬಗ್ಗೆ ಪುರಾವೆಗಳಿವೆ. ವೀರಭದ್ರ ದೇವಸ್ಥಾನದ ಬಳಿ ಶಾಸನವೊಂದಿದೆ. ಆಂಗ್ಲರ ಕಾಲದಲ್ಲಿ ಈ ಪಟ್ಟಣದ ಕಬ್ಬಿಣದ ಕೆಲಸಗಾರರು ಹೆಸರುವಾಸಿಯಾಗಿದ್ದರು. ಹೊಸದುರ್ಗದ ಪಶ್ಚಿಮಕ್ಕೂ ಮತ್ತೊಂದು ಗುಡ್ಡವಿದ್ದು, ಈ ದೊಡ್ಡ ಗುಡ್ಡದಲ್ಲಿ ಆದಿ ಹಳೇ ಶಿಲಾಯುಗದ ಶಿಲಾ ಕೈಕೊಡಲಿಯನ್ನು ಬಾಗೂರು ಆರ್. ನಾಗರಾಜಪ್ಪರವರು ಪತ್ತೆ ಹಚ್ಚಿದ್ದಾರೆ. ಪಟ್ಟಣವು ದಕ್ಷಿಣೋತ್ತರವಾಗಿ (ಉದ್ದಕ್ಕೆ) ಬೆಳೆಯುತ್ತಿದೆ. ಬಿದಿರು ಮತ್ತಿತರ ಗುಡಿ ಕೈಗಾರಿಕೆಗಳಿಗೆ ಹೊಸದುರ್ಗ ಬಹುವರ್ಷಗಳಿಂದಲೂ ಖ್ಯಾತಿ ಪಡೆದಿದೆ. ಗ್ರಾಮದೇವತೆ ದುರ್ಗಾಂಬಿಕೆದೇವಿಯ ರಥೋತ್ಸವ ಮತ್ತು ಸಿಡಿಯುತ್ಸವ ಚೈತ್ರಮಾಸದ ಬಹುಳದಲ್ಲಿ ಶಾಸ್ತ್ರೋಕ್ತವಾಗಿ ಜರುಗುವುದು. ದುರ್ಗಾಂಬಿಕೆಯ

ಗುಡಿಯಲ್ಲಿರುವ ಕೋಣದ ಕಾಷ್ಠಶಿಲ್ಪ ಅತ್ಯಂತ ಕಲಾತ್ಮಕವಾಗಿದೆ. ಲೋಹದ ಅಶ್ವ ಕಲಾಕೃತಿಯೂ ಗಮನಾರ್ಹ. ಪಟ್ಟಣದಲ್ಲಿ ೧೯೯೮ರಲ್ಲಿ 'ಮಿನಿ ವಿಧಾನಸೌಧ' ನಿರ್ಮಾಣಗೊಂಡಿದೆ. ಸಿಡಿ ಬಯಲಿನಲ್ಲಿ ನಿತ್ಯ ಬೆಳಗ್ಗೆ ತರಕಾರಿ ಮಾರುಕಟ್ಟೆ(ದೇವರ ದಾಸಿಮಯ್ಯ ಮಾರುಕಟ್ಟೆ) ನಡೆಯುತ್ತಿದ್ದು, ರೈತರೇ ನೇರವಾಗಿ ಇಲ್ಲಿ ತರಕಾರಿ, ಹಣ್ಣು, ಹೂವು ಮಾರುತ್ತಿದ್ದು, ಜನಪ್ರಿಯವಾಗಿದೆ.

## ಹೊಸದುರ್ಗ ತಾಲ್ಲೂಕಿನ ಕಂದಾಯಗ್ರಾಮ, ಉಪಗ್ರಾಮ ಹಾಗೂ ಪಟ್ಟಣಗಳು

೨೦೧೧ರ ಜನಗಣತಿ ವರದಿ ಹಾಗೂ ತಾಲ್ಲೂಕು ಕಛೇರಿಯಿಂದ ಪಡೆದ ಮಾಹಿತಿಯನ್ನು ಆಧರಿಸಿ, ಹೊಸದುರ್ಗ ತಾಲ್ಲೂಕಿನ ಗ್ರಾಮಗಳ ಪಟ್ಟಿಯನ್ನು ಇಲ್ಲಿ ಅಕಾರಾದಿಯಾಗಿ ನೀಡಲಾಗಿದೆ. ತಾಲ್ಲೂಕಿನಲ್ಲಿ ನಾಲ್ಕು ಹೋಬಳಿಗಳು (ಕಸಬಾ ಹೋಬಳಿ, ಮಾಡದಕೆರೆ ಹೋಬಳಿ, ಮತ್ತೋಡು ಹೋಬಳಿ ಮತ್ತು ಶ್ರೀರಾಂಪುರ ಹೋಬಳಿ), ೨೨೫ ಕಂದಾಯ ಗ್ರಾಮಗಳು, ೩೦ ನಿರ್ವಸತಿ ಗ್ರಾಮಗಳು ಹಾಗೂ ೧೮೮ ಉಪಗ್ರಾಮಗಳು ಇವೆ. ೩೩ ಗ್ರಾಮ ಪಂಚಾಯಿತಿಗಳು ಹಾಗೂ ೧ ಪುರಸಭೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕಿನ ಗ್ರಾಮ ನಾಮಗಳನ್ನು ಪ್ರಧಾನವಾಗಿ ಪುರುಷವಾಚಿ/ ಸ್ತ್ರೀವಾಚಿ ಸ್ಥಳನಾಮಗಳು, ಜಾತಿವಾಚಿ/ಪ್ರಮಾಣ /ಪ್ರಾಣಿವಾಚಿಗಳೆಂದು ವಿಂಗಡಿಸ ಬಹುದಾಗಿದೆ. ಕೆರೆ-ಕಟ್ಟೆ-ನಗರ ಪ್ರತ್ಯಯವುಳ್ಳ ಗ್ರಾಮನಾಮಗಳೂ ಇದ್ದು, ಭಾಷಾಶಾಸ್ತ್ರದ ದೃಷ್ಟಿಯಿಂದ ಅಧ್ಯಯನ ಯೋಗ್ಯ ಅಂಶವಾಗಿದೆ.

ತಾಲ್ಲೂಕಿನ ಕಂದಾಯ ಗ್ರಾಮಗಳ ಸಂಖ್ಯೆ ೧೯೯೧ರ ಜನಗಣತಿ ಸಂದರ್ಭದಲ್ಲಿ ೨೨೪ ಇದ್ದು, ಸರ್ಕಾರದ ನೋಟಿಫಿಕೇಷನ್ ಸಂ: ಆರ್.ಡಿ.೧೦ ಎಲ್.ಕ್ಯು.೯೨, ದಿನಾಂಕ: ೨೪-೦೯-೧೯೯೨ರ ಮೇರೆಗೆ, ಜಾನಕಲ್ಲು ಗ್ರಾಮದ ಸರಹದ್ದಿನಲ್ಲಿ ಒಂದು ಹೊಸ ಗ್ರಾಮದ ಸಂವಿಧಾನಾತ್ಮಕ ಪರಿಷ್ಕರಣೆಯಾಗಿ ಪರಿಗಣಿತಗೊಂಡಿರುವುದರಿಂದಾಗಿ, ೨೦೦೧ರ ಜನಗಣತಿ ವೇಳೆಗೆ ತಾಲ್ಲೂಕಿನ ಒಟ್ಟು ಕಂದಾಯ ಗ್ರಾಮಗಳ ಸಂಖ್ಯೆ ೨೨೫ ಆಗಿರುತ್ತದೆ ಹಾಗೂ ಹೊಸದುರ್ಗ ಪಟ್ಟಣದ ಪೌರ ದರ್ಜೆಯು ಸರ್ಕಾರದ ನೋಟಿಫಿಕೇಷನ್ ನಂ: ಎಚ್‌ಯುಡಿ ೬೪೧ ಎಂಎಲ್‌ಆರ್ ೯೫(೩) ದಿನಾಂಕ: ೯-೧-೧೯೯೬ರ ಮೇರೆಗೆ ಮಂಡಲ ಪಂಚಾಯ್ತಿಯಿಂದ ಪಟ್ಟಣ ಪಂಚಾಯಿತಿ ಎಂದು ಮೇಲ್ದರ್ಜೆ ಪಡೆದಿದ್ದಿತು. ತದನಂತರದಲ್ಲಿ ದಿನಾಂಕ: ೧-೧-೨೦೦೭ರಿಂದ ಪುರಸಭೆಯಾಗಿ ಮೇಲ್ದರ್ಜೆ ಪಡೆದಿರುತ್ತದೆ.

## ಅನುಬಂಧ

## ಹೊಸದುರ್ಗ ತಾಲೂಕಿನ ೨೦೧೫–೧೬ ರ ಅಂಕಿ–ಅಂಶಗಳು

| ಕ್ರ. ಸಂ. | ವಿವರ | ಘಟಕ | ಹೊಸದುರ್ಗ ತಾಲೂಕು | ಚಿತ್ರದುರ್ಗ ಜಿಲ್ಲೆ |
|---|---|---|---|---|
| ೧ | ತಾಲೂಕು | ಸಂಖ್ಯೆ | ೧ | ೬ |
| ೨ | ಹೋಬಳಿಗಳು | ಸಂಖ್ಯೆ | ೪ | ೨೨ |
| ೩ | ಗ್ರಾಮ ಪಂಚಾಯತಿಗಳು | ಸಂಖ್ಯೆ | ೩೩ | ೧೯೦ |
| ೪ | **೨೦೧೧ ರ ಜನಗಣತಿ ಪ್ರಕಾರ ಗ್ರಾಮಗಳು** | | | |
| | ಜನವಸತಿ ಗ್ರಾಮಗಳು | ಸಂಖ್ಯೆ | ೧೯೮ | ೯೪೮ |
| | ಜನವಸತಿ ಇಲ್ಲದ | ಸಂಖ್ಯೆ | ೨೭ | ೧೧೨ |
| | ಪುರಸಭೆಗಳು / ನಗರ ಪಾಲಿಕೆಗಳು | ಸಂಖ್ಯೆ | ೧ | ೭ |
| ೫ | **ವಿದ್ಯುಚ್ಛಕ್ತಿ ಒದಗಿಸಿದ** | | | |
| | ಉಪಗ್ರಾಮಗಳು | ಸಂಖ್ಯೆ | ೭೭ | ೫೬೬ |
| | ಐ.ಪಿ.ಸೆಟ್ಟುಗಳು | ಸಂಖ್ಯೆ | ೧೫೬೮೩ | ೧೦೬೯೧೮ |
| ೬ | **ವಿದ್ಯುತ್ ಬಳಕೆದಾರರು (ಸಂಖ್ಯೆಯಲ್ಲಿ)** | | | |
| | ಗೃಹ ಬಳಕೆ | ಸಂಖ್ಯೆ | ೬೨೨೨೦ | ೩೮೭೧೪೪ |
| | ಕೈಗಾರಿಕಾ ಬಳಕೆ | ಸಂಖ್ಯೆ | ೧೨೮೩ | ೮೮೪೮ |
| | ವಾಣಿಜ್ಯ ಬಳಕೆ | ಸಂಖ್ಯೆ | ೪೨೯೦ | ೩೨೬೧೯ |
| | ನೀರಾವರಿ(ಐ.ಪಿ.ಸೆಟ್) | ಸಂಖ್ಯೆ | ೧೫೬೮೩ | ೧೦೬೯೧೮ |
| | ಇತರೆ | ಸಂಖ್ಯೆ | ೧೮೮೪೩ | ೧೨೭೦೯೮ |
| ೭ | **ವಿದ್ಯುಚ್ಛಕ್ತಿ ಬಳಕೆ** | | | |
| | ಗೃಹ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೧೫.೨೧ | ೧೩೪.೧೭ |
| | ಕೈಗಾರಿಕಾ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೪.೭೮ | ೬೨.೨೮ |
| | ವಾಣಿಜ್ಯ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೩.೫೮ | ೪೦.೪೩ |
| | ನೀರಾವರಿ(ಐ.ಪಿ.ಸೆಟ್) | ದಶಲಕ್ಷ ಯೂನಿಟ್‌ಗಳಲ್ಲಿ | ೮೨.೪೯ | ೭೪೨.೩೯ |

## ಅನುಬಂಧ

| | | | | |
|---|---|---|---|---|
| | ಇತರೆ | ದಶಲಕ್ಷ ಯೂನಿಟ್‌ಗಳಲ್ಲಿ | ೩.೦೭ | ೩೬.೩೯ |
| | ದಾರಿ ದೀಪ | ದಶಲಕ್ಷ ಯೂನಿಟ್‌ಗಳಲ್ಲಿ | ೨.೩೧ | ೧೭.೦೧ |
| | ಒಟ್ಟು | ಲಕ್ಷ ರೂ. ಗಳಲ್ಲಿ | ೧೧೧.೭೪ | ೧೦೩೨.೯೬ |
| | ವಿದ್ಯುಚ್ಛಕ್ತಿ ಬಳಕೆಯಿಂದ ಆದಾಯ | ಲಕ್ಷ ರೂ. ಗಳಲ್ಲಿ | ೩೯೯೦.೮೧ | ೩೯೪೨೧.೪೬ |
| ೮ | **ನ್ಯಾಯಬೆಲೆ ಅಂಗಡಿಗಳು ೩೧-೦೩-೨೦೧೬** | | | |
| | ನ್ಯಾಯಬೆಲೆ ಅಂಗಡಿಗಳು | ಸಂಖ್ಯೆ | ೯೭ | ೫೮೩ |
| | ಎಎವೈ(ಬಿಪಿಎಲ್) | ಸಂಖ್ಯೆ | ೨೯೧೨ | ೨೮೪೯೦ |
| | ಅಕ್ಷಯ ಸಿಲಿಂಡರ್ ಸಹಿತ(ಬಿಪಿಎಲ್) | ಸಂಖ್ಯೆ | ೯೫೨೩ | ೫೫೫೦೩ |
| | ಅಕ್ಷಯ ಸಿಲಿಂಡರ್ ರಹಿತ(ಬಿಪಿಎಲ್) | ಸಂಖ್ಯೆ | ೪೩೨೩೩ | ೨೮೧೭೦೭ |
| | ಅಕ್ಷಯ ಸಿಲಿಂಡರ್ ಸಹಿತ(ಎಪಿಎಲ್) | ಸಂಖ್ಯೆ | ೨೦೪ | ೮೦೧ |
| | ಅಕ್ಷಯ ಸಿಲಿಂಡರ್ ರಹಿತ(ಎಪಿಎಲ್) | ಸಂಖ್ಯೆ | ೩೩೪೮ | ೨೭೯೭೧ |
| | ಭಾವಚಿತ್ರವಿರುವ ಪಡಿತರ ಚೀಟಿದಾರರು | ಸಂಖ್ಯೆ | ೫೯೨೨೦ | ೩೯೪೪೭೨ |
| | ಒಟ್ಟು ಪಡಿತರ ಚೀಟಿದಾರರು | ಸಂಖ್ಯೆ | ೫೯೨೨೦ | ೩೯೪೪೭೨ |
| ೯ | **ಚಿತ್ರಮಂದಿರಗಳು** | | | |
| | ಶಾಶ್ವತ | ಸಂಖ್ಯೆ | ೧ | ೧೭ |
| | ತಾತ್ಕಾಲಿಕ | ಸಂಖ್ಯೆ | ೦ | ೩ |
| ೧೦ | ಪೋಲೀಸ್ ಠಾಣೆಗಳು | ಸಂಖ್ಯೆ | ೨ | ೨೩ |
| ೧೧ | ಕಾರಾಗೃಹಗಳು | ಸಂಖ್ಯೆ | ೦ | ೧ |
| ೧೨ | **ಖೈದಿಗಳು** | | | |
| | ಗಂಡಸರು | ಸಂಖ್ಯೆ | ೦ | ೧೦೨ |
| | ಹೆಂಗಸರು | ಸಂಖ್ಯೆ | ೦ | ೧೨ |
| | ಅಗ್ನಿಶಾಮಕ ಕೇಂದ್ರಗಳು | ಸಂಖ್ಯೆ | ೧ | ೬ |
| | ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಜಲವಾಹನಗಳು | ಸಂಖ್ಯೆ | ೨ | ೧೬ |

| | | | | |
|---|---|---|---|---|
| | ತುರ್ತು ಅಗ್ನಿಶಾಮಕ ಕರೆಗಳು | ಸಂಖ್ಯೆ | ೯೫ | ೬೯೧ |
| | ಸಂರಕ್ಷಿಸಲಾದ ಆಸ್ತಿಯ ಮೌಲ್ಯ | ಕೋಟಿ ರೂ. ಗಳಲ್ಲಿ | ೭೨,೦೪,೦೦೦ | ೧೦,೪೯,೧೨,೫೭೭ |
| ೧೩ | **ವಿಸ್ತೀರ್ಣ ಮತ್ತು ಜನಸಂಖ್ಯೆ (೨೦೧೧ ರ ಜನಗಣತಿಯಂತೆ)** | | | |
| | ಭೌಗೋಳಿಕ ವಿಸ್ತೀರ್ಣ | ಚ.ಕಿ.ಮೀ.ಗಳಲ್ಲಿ | ೧೪೩೮ | ೮೪೩೬ |
| ೧೪ | **ಜನಸಂಖ್ಯೆ(೨೦೧೧ ರ ಜನಗಣತಿ)** | | | |
| | ಗಂಡಸರು | ಸಂಖ್ಯೆ | ೧೧೯೧೪೮ | ೮೪೦೮೪೩ |
| | ಹೆಂಗಸರು | ಸಂಖ್ಯೆ | ೧೧೫೯೬೮ | ೮೧೮೬೧೩ |
| | ಗ್ರಾಮೀಣ | ಸಂಖ್ಯೆ | ೨೦೬೭೪೬ | ೧೩೨೯೯೨೩ |
| | ನಗರ | ಸಂಖ್ಯೆ | ೨೮೩೭೦ | ೩೨೯೫೩೩ |
| | ಲಿಂಗಾನುಪಾತ | ಸಂಖ್ಯೆ | ೯೭೩ | ೯೭೪ |
| ೧೫ | **ಪರಿಶಿಷ್ಟ ಜಾತಿ (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | | | |
| | ಗಂಡು | ಸಂಖ್ಯೆ | ೨೨೩೦೦ | ೧೬೯೧೬೦ |
| | ಹೆಣ್ಣು | ಸಂಖ್ಯೆ | ೨೨೦೪೫ | ೧೬೪೪೧೧ |
| | ಒಟ್ಟು | ಸಂಖ್ಯೆ | ೪೪೩೪೫ | ೩೩೩೫೭೧ |
| | ಪಟ್ಟಣ | | | |
| | ಗಂಡು | ಸಂಖ್ಯೆ | ೨೦೫೪ | ೨೭೬೫೯ |
| | ಹೆಣ್ಣು | ಸಂಖ್ಯೆ | ೧೮೭೩ | ೨೭೮೮೭ |
| | ಒಟ್ಟು | ಸಂಖ್ಯೆ | ೩೯೨೭ | ೫೫೫೪೬ |
| ೧೬ | **ಪರಿಶಿಷ್ಟ ಪಂಗಡ (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | | | |
| | ಗಂಡು | ಸಂಖ್ಯೆ | ೮೭೯೮ | ೧೩೫೨೦೯ |
| | ಹೆಣ್ಣು | ಸಂಖ್ಯೆ | ೮೮೮೬ | ೧೩೧೩೧೭ |
| | ಒಟ್ಟು | ಸಂಖ್ಯೆ | ೧೭೬೮೪ | ೨೬೬೫೨೬ |
| | ಪಟ್ಟಣ | | | |
| | ಗಂಡು | ಸಂಖ್ಯೆ | ೬೩೩ | ೧೭೭೩೦ |
| | ಹೆಣ್ಣು | ಸಂಖ್ಯೆ | ೬೩೭ | ೧೮೨೯೮ |

## ಅನುಬಂಧ

| | | | | |
|---|---|---|---|---|
| | ಒಟ್ಟು | ಸಂಖ್ಯೆ | ೧೨೭೦ | ೩೬೦೨೮ |
| ೧೭ | **ಅಕ್ಷರಸ್ಥರು (೨೦೧೧ ರ ಜನಗಣತಿಯಂತೆ)** | | | |
| | **ಗ್ರಾಮೀಣ** | | | |
| | ಗಂಡು | ಸಂಖ್ಯೆ | ೭೪೨೮೩ | ೪೭೭೪೨೮೫ |
| | ಹೆಣ್ಣು | ಸಂಖ್ಯೆ | ೫೭೮೭೮ | ೩೬೦೧೩೪ |
| | ಒಟ್ಟು | ಸಂಖ್ಯೆ | ೧೩೨೧೬೧ | ೮೩೪೪೧೯ |
| | ಪಟ್ಟಣ | | | |
| | ಗಂಡು | ಸಂಖ್ಯೆ | ೧೧೮೫೦ | ೧೩೨೯೦೩ |
| | ಹೆಣ್ಣು | ಸಂಖ್ಯೆ | ೧೦೪೮೨ | ೧೨೦೦೭೦ |
| | ಒಟ್ಟು | ಸಂಖ್ಯೆ | ೨೨೩೩೨ | ೨೫೨೯೭೩ |
| | ಗಂಡು | ಸಂಖ್ಯೆ | ೮೬೧೩೩ | ೬೦೭೧೮೮ |
| | ಹೆಣ್ಣು | ಸಂಖ್ಯೆ | ೬೮೩೬೦ | ೪೮೦೨೦೪ |
| | ಒಟ್ಟು | ಸಂಖ್ಯೆ | ೧೫೪೪೯೩ | ೧೦೮೭೩೯೨ |
| ೧೮ | **ಒಟ್ಟು ಜನಸಂಖ್ಯೆಯಲ್ಲಿ ೦–೬ ವರ್ಷದೊಳಗಿನ ಮಕ್ಕಳು (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | ಸಂಖ್ಯೆ | ೨೨೬೯೭ | ೧೪೯೨೯೪ |
| | ಪಟ್ಟಣ | ಸಂಖ್ಯೆ | ೩೦೩೨ | ೩೪೯೮೬ |
| | ಒಟ್ಟು | ಸಂಖ್ಯೆ | ೨೫೭೨೯ | ೧೮೪೨೮೦ |
| ೧೯ | **ಕೆಲಸಗಾರರ ವರ್ಗೀಕರಣ (೨೦೧೧ ರ ಜನಗಣತಿಯಂತೆ)** | | | |
| | ಒಟ್ಟು ಕೆಲಸಗಾರರು | ಸಂಖ್ಯೆ | ೧೨೬೫೨೭ | ೮೫೬೫೮೭ |
| | ಮುಖ್ಯ ಕೆಲಸಗಾರರು | ಸಂಖ್ಯೆ | ೧೦೦೨೧೮ | ೬೬೭೪೭೯ |
| | ವ್ಯವಸಾಯಗಾರರು | ಸಂಖ್ಯೆ | ೫೧೬೪೭ | ೨೫೭೦೭೬ |
| | ಕೃಷಿ ಕಾರ್ಮಿಕರು | ಸಂಖ್ಯೆ | ೨೦೫೮೧ | ೧೯೨೬೯ |
| | ಗೃಹ ಕೈಗಾರಿಕೆಗಳು | ಸಂಖ್ಯೆ | ೯೮೭ | ೧೬೭೧೮ |
| | ಇತರೆ ಕೆಲಸಗಾರರು | ಸಂಖ್ಯೆ | ೨೭೦೦೩ | ೨೦೦೧೯೬ |
| | ಸೀಮಾಂತ ಕೆಲಸಗಾರರು | ಸಂಖ್ಯೆ | ೨೬೩೦೯ | ೧೮೯೧೦೮ |
| | ವ್ಯವಸಾಯಗಾರರು | ಸಂಖ್ಯೆ | ೫೭೨೧ | ೨೯೧೬೯ |
| | ಕೃಷಿ ಕಾರ್ಮಿಕರು | ಸಂಖ್ಯೆ | ೧೧೫೬೯ | ೧೦೧೫೬೮ |

| | | | | |
|---|---|---|---|---|
| | ಗೃಹ ಕೈಗಾರಿಕೆಗಳು | ಸಂಖ್ಯೆ | ೧೦೬೭ | ೯೫೧೭ |
| | ಇತರೆ ಕೆಲಸಗಾರರು | ಸಂಖ್ಯೆ | ೭೯೫೨ | ೪೮೮೫೪ |
| | ಕೆಲಸಗಾರರಲ್ಲದವರು | ಸಂಖ್ಯೆ | ೧೦೮೫೮೯ | ೮೦೨೮೬೯ |
| ೨೦ | **ಸಾಕ್ಷರತಾ ಪ್ರಮಾಣ (೨೦೧೧ ರ ಜನಗಣತಿಯಂತೆ)** | | | |
| | **ಗ್ರಾಮೀಣ ಪ್ರದೇಶ** | | | |
| | ಗಂಡು | ಶೇಕಡಾ | ೭೯.೮೬ | ೭೯.೧೯ |
| | ಹೆಣ್ಣು | ಶೇಕಡಾ | ೬೩.೫೮ | ೬೧.೯೧ |
| | ಒಟ್ಟು | ಶೇಕಡಾ | ೭೧.೮೧ | ೭೦.೬೮ |
| | ಪಟ್ಟಣ ಪ್ರದೇಶ | | | |
| | ಗಂಡು | ಶೇಕಡಾ | ೯೧.೪೭ | ೯೦.೨೨ |
| | ಹೆಣ್ಣು | ಶೇಕಡಾ | ೮೪.೬೫ | ೮೧.೫೫ |
| | ಒಟ್ಟು | ಶೇಕಡಾ | ೮೮.೧೪ | ೮೫.೮೯ |
| | ತಾಲ್ಲೂಕಿನ ಒಟ್ಟು | | | |
| | ಗಂಡು | ಶೇಕಡಾ | ೮೧.೨೮ | ೮೧.೩೭ |
| | ಹೆಣ್ಣು | ಶೇಕಡಾ | ೬೭.೧೧ | ೬೫.೮೮ |
| | ಒಟ್ಟು | ಶೇಕಡಾ | ೭೩.೭೮ | ೭೩.೭೧ |
| ೨೧ | **ಮಳೆ** | | | |
| | **ಮಳೆಮಾಪನ ಕೇಂದ್ರಗಳು ೨೦೧೧ ರಲ್ಲಿದ್ದಂತೆ** | | | |
| | ಕಾರ್ಯನಿರ್ವಹಿಸುತ್ತಿರುವ | ಸಂಖ್ಯೆ | ೫ | ೩೪ |
| | ಸ್ಥಗಿತಗೊಂಡ | ಸಂಖ್ಯೆ | ೦ | ೩ |
| | ವಾರ್ಷಿಕ ವಾಡಿಕೆ ಮಳೆ (೧೯೪೧–೧೯೬೦) | | | |
| | ಮಳೆ ದಿನಗಳು | ಸಂಖ್ಯೆ | ೩೨ | ೪೦ |
| | ವಾಡಿಕೆ ಮಳೆ | ಮಿ.ಮೀ.ಗಳಲ್ಲಿ | ೬೨೬ | ೫೮೨ |
| ೨೨ | ಭೂಮಿಯ ಬಳಕೆ | | | |
| | ಭೌಗೋಳಿಕ ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೧೨೫೭೪ | ೭೭೦೭೦೨ |
| | ಅರಣ್ಯ ಪ್ರದೇಶ | ಹೆಕ್ಟೇರುಗಳಲ್ಲಿ | ೧೯೦೭೪ | ೭೩೭೧೯ |
| ೨೩ | **ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ** | | | |

# ಅನುಬಂಧ

| | | | | |
|---|---|---|---|---|
| | ವ್ಯವಸಾಯೇತರ | ಹೆಕ್ಟೇರುಗಳಲ್ಲಿ | ೧೧೪೦೦ | ೫೫೪೫೦ |
| | ಬಂಜರು | ಹೆಕ್ಟೇರುಗಳಲ್ಲಿ | ೨೫೮೪ | ೨೫೪೦೩ |
| | ಒಟ್ಟು | ಹೆಕ್ಟೇರುಗಳಲ್ಲಿ | ೧೩೯೮೪ | ೮೦೮೫೩ |
| ೨೪ | **ಸಾಗುವಳಿ ಮಾಡದಿರುವ ಇತರ ಭೂಮಿ** | | | |
| | ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ | ಹೆಕ್ಟೇರುಗಳಲ್ಲಿ | ೧೦೩೭ | ೨೧೬೧೨ |
| | ಖಾಯಂ ಗೋಮಾಳ | ಹೆಕ್ಟೇರುಗಳಲ್ಲಿ | ೩೩೯೨ | ೮೮೭೪೦ |
| | ವೃಕ್ಷ ಮತ್ತು ತೋಪುಗಳು | ಹೆಕ್ಟೇರುಗಳಲ್ಲಿ | ೧೪೭೯ | ೧೧೩೧೭ |
| | ಒಟ್ಟು | ಹೆಕ್ಟೇರುಗಳಲ್ಲಿ | ೫೯೦೮ | ೧೨೧೬೬೯ |
| ೨೫ | ಬೀಳು ಭೂಮಿ | | | |
| | ಚಾಲ್ತಿ | ಹೆಕ್ಟೇರುಗಳಲ್ಲಿ | ೪೩೫೮ | ೮೭೩೫೦ |
| | ಇತರೆ | ಹೆಕ್ಟೇರುಗಳಲ್ಲಿ | ೪೫೫೦ | ೨೨೩೩೫ |
| | ಒಟ್ಟು | ಹೆಕ್ಟೇರುಗಳಲ್ಲಿ | ೮೯೦೮ | ೧೦೯೬೮೫ |
| ೨೬ | ಬಿತ್ತನೆಯಾಗಿರುವ ಪ್ರದೇಶ | | | |
| | ನಿವ್ವಳ | ಹೆಕ್ಟೇರುಗಳಲ್ಲಿ | ೬೪೭೦೦ | ೩೮೪೭೭೬ |
| | ಒಂದಕ್ಕಿಂತ ಹೆಚ್ಚು ಬಾರಿ | ಹೆಕ್ಟೇರುಗಳಲ್ಲಿ | ೧೨೩೭೧ | ೮೧೧೩೪ |
| | ಒಟ್ಟು | ಹೆಕ್ಟೇರುಗಳಲ್ಲಿ | ೭೯೯೭೧ | ೪೬೫೯೧೦ |
| ೨೭ | **ಭೂಹಿಡುವಳಿಗಳು ಮತ್ತು ವಿಸ್ತೀರ್ಣ (ಕೃಷಿ ಗಣತಿ ೨೦೧೦-೧೧ ರಂತೆ)** | | | |
| | **ಅತಿ ಸಣ್ಣ(೦-೧ ಹೆ)** | | | |
| | ಸಂಖ್ಯೆ | ಸಂಖ್ಯೆ | ೧೭೧೦೧ | ೧೦೯೧೭೭ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೯೨೩೪.೦೧ | ೫೯೧೩೮.೩೭ |
| | ಸಣ್ಣ(೧-೨ ಹೆ) | | | |
| | ಸಂಖ್ಯೆ | ಸಂಖ್ಯೆ | ೧೫೯೮೦ | ೯೦೩೭೦ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೨೨೮೪೦.೬೧ | ೧೨೭೫೮೬.೯೨ |
| | ಅರೆ ಮಧ್ಯಮ(೨-೪ ಹೆ) | | | |
| | ಸಂಖ್ಯೆ | ಸಂಖ್ಯೆ | ೧೧೬೩೮ | ೬೦೦೬೩ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೩೧೩೦೫.೩೧ | ೧೫೮೭೭೬.೫೮ |
| | ಮಧ್ಯಮ(೪-೧೦ ಹೆ) | | | |

| | | | | |
|---|---|---|---|---|
| | ಸಂಖ್ಯೆ | ಸಂಖ್ಯೆ | ೬೨೧೯ | ೨೬೭೯೫ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ૩೬೧૩೭.೨೯ | ೧೫೨೮૩૩.೮೫ |
| | ದೊಡ್ಡ(೧೦ ಹೆ.ಗಿಂತ ಹೆಚ್ಚು) | | | |
| | ಸಂಖ್ಯೆ | ಸಂಖ್ಯೆ | ೧೧೨೯ | ೪೧೭೨ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೬೪೮೪.೫೪ | ೬೨೪೪೧.૩ |
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೫೨೦೬೭ | ೨೯೦೫೭೭ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೧೬೦೦೧.೮ | ೫೬೦೭೭೭.೦೨ |
| ೨೮ | **ಏಕದಳ ಧಾನ್ಯಗಳು (ವಿಸ್ತೀರ್ಣ)** | | | |
| | ಬತ್ತ | ಹೆಕ್ಟೇರುಗಳಲ್ಲಿ | ೧೧ | ೧೨೯೭ |
| | ರಾಗಿ | ಹೆಕ್ಟೇರುಗಳಲ್ಲಿ | ೨೫೬૩೦ | ೪೪೦೮೨ |
| | ಜೋಳ | ಹೆಕ್ಟೇರುಗಳಲ್ಲಿ | ೨೪૩ | ೧೨೬೬೭ |
| | ಮುಸುಕಿನ ಜೋಳ | ಹೆಕ್ಟೇರುಗಳಲ್ಲಿ | ೬೨೧೬ | ೯೨೧೯૩ |
| | ಸಜ್ಜೆ | ಹೆಕ್ಟೇರುಗಳಲ್ಲಿ | ೨೫ | ೧೭೯೮ |
| | ಗೋಧಿ | ಹೆಕ್ಟೇರುಗಳಲ್ಲಿ | ೦ | ૩೭೨ |
| | ಇತರೆ ತೃಣ ಧಾನ್ಯಗಳು | ಹೆಕ್ಟೇರುಗಳಲ್ಲಿ | ೫೪೨૩ | ೬೪೪೯ |
| | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು | ಹೆಕ್ಟೇರುಗಳಲ್ಲಿ | ૩೭೬೦೦ | ೧೫೮೯೧೦ |
| ೨೯ | **ದ್ವಿದಳ ಧಾನ್ಯಗಳು (ವಿಸ್ತೀರ್ಣ)** | | | |
| | ಕಡಲೆ | ಹೆಕ್ಟೇರುಗಳಲ್ಲಿ | ೧೪೮೨ | ೬೯೮೫೭ |
| | ತೊಗರಿ | ಹೆಕ್ಟೇರುಗಳಲ್ಲಿ | ೪೪૩ | ೯೫೮೭ |
| | ಹುರುಳಿ | ಹೆಕ್ಟೇರುಗಳಲ್ಲಿ | ೧೭೯೯ | ೪೬೮೭ |
| | ಉದ್ದು | ಹೆಕ್ಟೇರುಗಳಲ್ಲಿ | ೦ | ೦ |
| | ಹೆಸರು | ಹೆಕ್ಟೇರುಗಳಲ್ಲಿ | ೪೦೪೧ | ೫೪೧೦ |
| | ಅವರೆ | ಹೆಕ್ಟೇರುಗಳಲ್ಲಿ | ૩೮೧ | ೧೮೯೫ |
| | ಅಲಸಂದಿ | ಹೆಕ್ಟೇರುಗಳಲ್ಲಿ | ೯೯ | ೧೪೮೨ |
| | ಒಟ್ಟು ದ್ವಿದಳ ಧಾನ್ಯಗಳು | ಹೆಕ್ಟೇರುಗಳಲ್ಲಿ | ೮೨೪೫ | ೬೨೧೬૩ |
| | ಒಟ್ಟು ಆಹಾರ ಧಾನ್ಯಗಳು | ಹೆಕ್ಟೇರುಗಳಲ್ಲಿ | ೪೫೮೪೫ | ೨೨೧೦೭૩ |

# ಅನುಬಂಧ

| | | | | |
|---|---|---|---|---|
| ೩೦ | **ರಾಸಾಯನಿಕ ಗೊಬ್ಬರಗಳ ವಿತರಣೆ** | | | |
| | ಸಾರಜನಕ(ಓ) | ಟನ್ನುಗಳಲ್ಲಿ | ೩೫೨೦ | ೨೪೫೧೮ |
| | ರಂಜಕ(ಕ) | ಟನ್ನುಗಳಲ್ಲಿ | ೨೧೨೨ | ೧೫೨೭೭ |
| | ಪೊಟ್ಯಾಷ್(ಏ) | ಟನ್ನುಗಳಲ್ಲಿ | ೧೩೪೦ | ೫೨೫೫ |
| | ಒಟ್ಟು | ಟನ್ನುಗಳಲ್ಲಿ | ೬೯೮೨ | ೪೫೦೪೦ |
| ೩೧ | **ರೇಷ್ಮೆ** | | | |
| | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೪೩.೫ | ೧೫೨೮.೬ |
| | ರೇಷ್ಮೆಗೂಡು ಉತ್ಪಾದನೆ | ಟನ್ನುಗಳಲ್ಲಿ | ೨೩.೨೪೬ | ೮೦೪.೩೯ |
| | ರೇಷ್ಮೆ ಉತ್ಪಾದಿಸಿದ ರೇಷ್ಮೆಯ ಮೌಲ್ಯ | ಲಕ್ಷ ರೂ.ಗಳಲ್ಲಿ | ೭೦.೪೨ | ೨೪೪೦.೧೨ |
| ೩೨ | **ಪಶುಪಾಲನೆ (ಜಾನುವಾರು ಗಣತಿ ೨೦೧೨ ರಂತೆ)** | | | |
| ೩೩ | **ದನಕರುಗಳು** | | | |
| | ಸ್ಥಳೀಯ | ಸಂಖ್ಯೆ | ೫೪೬೪೬ | ೨೪೧೯೫ |
| | ವಿದೇಶಿ ತಳಿ | ಸಂಖ್ಯೆ | ೦ | ೦ |
| | ಮಿಶ್ರ ತಳಿ | ಸಂಖ್ಯೆ | ೪೮೦೩ | ೩೪೭೯೪ |
| | ಒಟ್ಟು | ಸಂಖ್ಯೆ | ೫೯೪೪೯ | ೨೭೫೮೮೯ |
| | ಎಮ್ಮೆಗಳು | ಸಂಖ್ಯೆ | ೩೧೮೬೪ | ೧೫೨೮೫೨ |
| ೩೪ | **ಕುರಿಗಳು** | | | |
| | ಸ್ಥಳೀಯ | ಸಂಖ್ಯೆ | ೧೩೫೮೬೩ | ೯೩೯೫೯೧ |
| | ವಿದೇಶಿ ತಳಿ | ಸಂಖ್ಯೆ | ೦ | ೦ |
| | ಮಿಶ್ರ ತಳಿ | ಸಂಖ್ಯೆ | ೦ | ೪೪೭ |
| | ಒಟ್ಟು | ಸಂಖ್ಯೆ | ೧೩೫೮೬೩ | ೯೪೦೦೪೩ |
| | ಮೇಕೆಗಳು | ಸಂಖ್ಯೆ | ೩೧೮೬೨ | ೨೩೧೨೭೯ |
| ೩೫ | **ಹಂದಿಗಳು** | | | |
| | ಸ್ಥಳೀಯ | ಸಂಖ್ಯೆ | ೫೩೩ | ೩೦೦೯ |
| | ವಿದೇಶಿ ತಳಿ | ಸಂಖ್ಯೆ | ೦ | ೦ |
| | ಮಿಶ್ರ ತಳಿ | ಸಂಖ್ಯೆ | ೧ | ೧೫೧ |
| | ಒಟ್ಟು | ಸಂಖ್ಯೆ | ೫೩೪ | ೩೧೬೦ |

| | | | | |
|---|---|---|---|---|
| | ಮೊಲಗಳು | ಸಂಖ್ಯೆ | ೧೨೪೭ | ೧೪೯೧ |
| | ನಾಯಿಗಳು | ಸಂಖ್ಯೆ | ೪೮೩೩ | ೩೭೨೫೬ |
| | ಇತರೆ | ಸಂಖ್ಯೆ | ೮೯೯ | ೫೧೩೧ |
| | ಒಟ್ಟು ಜಾನುವಾರು | ಸಂಖ್ಯೆ | ೨೬೬೫೫೧ | ೧೬೪೭೦೯೬ |
| | ಕೋಳಿಗಳು | ಸಂಖ್ಯೆ | ೩೭೫೫೮೨ | ೨೪೧೧೭೮೦ |
| ೩೬ | **ಮೀನುಗಾರಿಕೆ** | | | |
| | ಹಿಡಿದ ಮೀನುಗಳು | ಮೆ.ಟನ್ನು | ೨೫೦ | ೪೪೮೮ |
| ೩೭ | **ಪಶುವೈದ್ಯ ಶಾಲೆಗಳು** | | | |
| | ಆಸ್ಪತ್ರೆಗಳು | ಸಂಖ್ಯೆ | ೪ | ೧೯ |
| | ಚಿಕಿತ್ಸಾಲಯಗಳು | ಸಂಖ್ಯೆ | ೭ | ೫೫ |
| | ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | ಸಂಖ್ಯೆ | ೨೦ | ೭೫ |
| | ಸಂಚಾರಿ ಚಿಕಿತ್ಸಾಲಯಗಳು | ಸಂಖ್ಯೆ | ೧ | ೬ |
| | ಕೃತಕ ಗರ್ಭಧಾರಣ ಕೇಂದ್ರಗಳು | ಸಂಖ್ಯೆ | ೪ | ೧೦ |
| | ಇತರೆ | ಸಂಖ್ಯೆ | ೫ | ೭ |
| | ಒಟ್ಟು | ಸಂಖ್ಯೆ | ೪೩ | ೧೭೨ |
| ೩೮ | **ಕೈಗಾರಿಕೆಗಳು** | | | |
| | ಬಟ್ಟೆ ಕಾರ್ಖಾನೆಗಳು | ಸಂಖ್ಯೆ | ೦ | ೧ |
| | ಬಟ್ಟೆ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೦ | ೧೩ |
| | ರಾಸಾಯನಿಕ ಕಾರ್ಖಾನೆಗಳು | ಸಂಖ್ಯೆ | ೦ | ೦ |
| | ರಾಸಾಯನಿಕ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೦ | ೦ |
| | ಇಂಜಿನಿಯರಿಂಗ್ ಕಾರ್ಖಾನೆಗಳು | ಸಂಖ್ಯೆ | ೦ | ೧೦೮ |
| | ಇಂಜಿನಿಯರಿಂಗ್ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೦ | ೭೪೮೧ |
| | ಇತರೆ ಕಾರ್ಖಾನೆಗಳು | ಸಂಖ್ಯೆ | ೮ | ೧೮೦ |
| | ಇತರೆ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೭೧೦ | ೭೪೮೧ |

## ಅನುಬಂಧ

| | | | | |
|---|---|---|---|---|
| ೩೯ | **ಸಣ್ಣ ಪ್ರಮಾಣದ ಕೈಗಾರಿಕೆಗಳು** | | | |
| | ಆಟೋಮೊಬೈಲ್ | | | |
| | ಸಂಖ್ಯೆ | ಸಂಖ್ಯೆ | ೨ | ೨೧ |
| | ಕೆಲಸಗಾರರು | ಸಂಖ್ಯೆ | ೧೫ | ೧೪೩ |
| | ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ | | | |
| | ಸಂಖ್ಯೆ | ಸಂಖ್ಯೆ | ೩ | ೨೫ |
| | ಕೆಲಸಗಾರರು | ಸಂಖ್ಯೆ | ೧೫ | ೧೭೫ |
| | ಕೆಮಿಕಲ್ಸ್ | | | |
| | ಸಂಖ್ಯೆ | ಸಂಖ್ಯೆ | ೧ | ೧೭ |
| | ಕೆಲಸಗಾರರು | ಸಂಖ್ಯೆ | ೫ | ೧೧೧ |
| | ಆಹಾರ ಮತ್ತು ಮಾದಕ ವಸ್ತುಗಳು | | | |
| | ಸಂಖ್ಯೆ | ಸಂಖ್ಯೆ | ೮ | ೫೦ |
| | ಕೆಲಸಗಾರರು | ಸಂಖ್ಯೆ | ೫೦ | ೩೫೬ |
| | ಚರ್ಮ | | | |
| | ಸಂಖ್ಯೆ | ಸಂಖ್ಯೆ | ೪ | ೩೫ |
| | ಕೆಲಸಗಾರರು | ಸಂಖ್ಯೆ | ೨೦ | ೨೧೧ |
| | ಕಾಗದ ಮತ್ತು ಮುದ್ರಣ | | | |
| | ಸಂಖ್ಯೆ | ಸಂಖ್ಯೆ | ೨ | ೧೦ |
| | ಕೆಲಸಗಾರರು | ಸಂಖ್ಯೆ | ೧೪ | ೬೬ |
| | ರಬ್ಬರ್ ಮತ್ತು ಪ್ಲಾಸ್ಟಿಕ್ | | | |
| | ಸಂಖ್ಯೆ | ಸಂಖ್ಯೆ | ೫ | ೧೭ |
| | ಕೆಲಸಗಾರರು | ಸಂಖ್ಯೆ | ೨೫ | ೧೦೮ |
| | ಟೆಕ್ಸ್‌ಟೈಲ್ಸ್ | | | |
| | ಸಂಖ್ಯೆ | ಸಂಖ್ಯೆ | ೨೦ | ೧೦೭ |
| | ಕೆಲಸಗಾರರು | ಸಂಖ್ಯೆ | ೧೧೬ | ೬೩೩ |
| | ಮರ | | | |
| | ಸಂಖ್ಯೆ | ಸಂಖ್ಯೆ | ೧೫ | ೮೧ |

| | | | | |
|---|---|---|---|---|
| | ಕೆಲಸಗಾರರು | ಸಂಖ್ಯೆ | ೯೦ | ೫೪೧ |
| | ಇತರೆ | | | |
| | ಸಂಖ್ಯೆ | ಸಂಖ್ಯೆ | ೭ | ೧೯ |
| | ಕೆಲಸಗಾರರು | ಸಂಖ್ಯೆ | ೧೦ | ೯೩ |
| ೪೦ | **ಪತ್ತಿನ ಸಹಕಾರ ಸಂಘಗಳು** | | | |
| | ವ್ಯವಸಾಯ | | | |
| | ಸಂಖ್ಯೆ | ಸಂಖ್ಯೆ | ೭೫ | ೧೫೨ |
| | ಸದಸ್ಯರು | ಸಂಖ್ಯೆ | ೪೬೫೦೦ | ೭೯೭೦೦೦ |
| | ವ್ಯವಸಾಯೇತರ | | | |
| | ಸಂಖ್ಯೆ | ಸಂಖ್ಯೆ | ೧೨ | ೨೧ |
| | ಸದಸ್ಯರು | ಸಂಖ್ಯೆ | ೧೦೮೫೦ | ೪೩೬೨೫ |
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೪೭ | ೭೭೮ |
| | ಸದಸ್ಯರು | ಸಂಖ್ಯೆ | ೫೨೩೫೦ | ೩೩೫೬೨೫ |
| ೪೧ | **ಪತ್ತೇತರ ಸಹಕಾರ ಸಂಘಗಳು** | | | |
| | ಮಾರುಕಟ್ಟೆ | | | |
| | ಸಂಖ್ಯೆ | ಸಂಖ್ಯೆ | ೧ | ೬ |
| | ಸದಸ್ಯರು | ಸಂಖ್ಯೆ | ೧೦೬೯ | ೨೪೯೩ |
| | ಗೃಹ ನಿರ್ಮಾಣ | | | |
| | ಸಂಖ್ಯೆ | ಸಂಖ್ಯೆ | ೩ | ೧೯ |
| | ಸದಸ್ಯರು | ಸಂಖ್ಯೆ | ೧೪೪ | ೧೦೨೮೯ |
| | ಹಾಲು ಉತ್ಪಾದನೆ | | | |
| | ಸಂಖ್ಯೆ | ಸಂಖ್ಯೆ | ೬೫ | ೩೩೦ |
| | ಸದಸ್ಯರು | ಸಂಖ್ಯೆ | ೮೩೬೨ | ೪೦೧೭೦ |
| | ಇತರೆ | | | |
| | ಸಂಖ್ಯೆ | ಸಂಖ್ಯೆ | ೪೮ | ೩೪೨ |
| | ಸದಸ್ಯರು | ಸಂಖ್ಯೆ | ೭೭೦೫೫ | ೧೬೩೯೩೪ |

## ಅನುಬಂಧ

| | | | | |
|---|---|---|---|---|
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೧೧೭ | ೭೦೨ |
| | ಸದಸ್ಯರು | ಸಂಖ್ಯೆ | ೩೧೬೩೫ | ೨೨೨೩೩೬ |
| ೪೨ | **ರಸ್ತೆ ಉದ್ದಳತೆ** | | | |
| | ರಾಷ್ಟ್ರೀಯ ಹೆದ್ದಾರಿ | ಕಿ.ಮೀ.ಗಳಲ್ಲಿ | ೬೩ | ೨೮೬.೭ |
| | ರಾಜ್ಯ ಹೆದ್ದಾರಿ | ಕಿ.ಮೀ.ಗಳಲ್ಲಿ | ೧೧೦.೫೬ | ೪೩೯.೬೬ |
| | ಮುಖ್ಯ ಜಿಲ್ಲಾ ರಸ್ತೆಗಳು | ಕಿ.ಮೀ.ಗಳಲ್ಲಿ | ೨೧೩.೩೬ | ೨೦೯೫.೯೨ |
| | ಪಂಚಾಯತ್ ರಸ್ತೆಗಳು | ಕಿ.ಮೀ.ಗಳಲ್ಲಿ | ೯೧೫.೯೩ | ೬೬೭೩.೯೪ |
| | ಭಾರಿ ಸೇತುವೆಗಳು | ಸಂಖ್ಯೆ | ೦ | ೧೬ |
| | ಅಂಚೆ ಕಛೇರಿಗಳು | ಸಂಖ್ಯೆ | ೫೬ | ೩೧೭ |
| | ದೂರವಾಣಿ ವಿನಿಮಯ ಕೇಂದ್ರಗಳು | ಸಂಖ್ಯೆ | ೧೪ | ೮೦ |
| | ದೂರವಾಣಿಗಳು | ಸಂಖ್ಯೆ | ೯೭೭ | ೧೧೦೯೭ |
| | ಅಂತರ್ ಜಾಲ ಸಂಪರ್ಕ | ಸಂಖ್ಯೆ | ೩೨೪ | ೧೧೫೧ |
| ೪೩ | **ಶಿಕ್ಷಣ** | | | |
| | ಕಿರಿಯ ಪ್ರಾಥಮಿಕ ಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೧೭೮ | ೯೦೫ |
| | ಹುಡುಗರು | ಸಂಖ್ಯೆ | ೯೧೪೪ | ೬೭೫೭೪ |
| | ಹುಡುಗಿಯರು | ಸಂಖ್ಯೆ | ೮೭೩೦ | ೬೩೮೯೮ |
| | ಹಿರಿಯ ಪ್ರಾಥಮಿಕ ಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೧೬೫ | ೧೦೮೮ |
| | ಹುಡುಗರು | ಸಂಖ್ಯೆ | ೪೯೯೨ | ೩೮೯೪೪ |
| | ಹುಡುಗಿಯರು | ಸಂಖ್ಯೆ | ೪೮೮೩೭ | ೩೬೮೧೮ |
| | ಪ್ರೌಢಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೬೭ | ೪೨೯ |
| | ಹುಡುಗರು | ಸಂಖ್ಯೆ | ೩೨೩೮ | ೨೫೩೫೬ |
| | ಹುಡುಗಿಯರು | ಸಂಖ್ಯೆ | ೩೧೫೯ | ೨೩೬೧೩ |
| | ಪದವಿ ಪೂರ್ವ ಕಾಲೇಜುಗಳು | | | |

| | | | | |
|---|---|---|---|---|
| | ಕಾಲೇಜುಗಳು | ಸಂಖ್ಯೆ | ೨೪ | ೧೩೪ |
| | ಹುಡುಗರು | ಸಂಖ್ಯೆ | ೧೮೪೨ | ೧೨೯೮ |
| | ಹುಡುಗಿಯರು | ಸಂಖ್ಯೆ | ೨೧೧೪ | ೧೪೭೧೫ |
| | ಪದವಿ ಕಾಲೇಜುಗಳು | | | |
| | ಕಾಲೇಜುಗಳು | ಸಂಖ್ಯೆ | ೧ | ೧೪ |
| | ಹುಡುಗರು | ಸಂಖ್ಯೆ | ೧೦೭೬ | ೬೨೦೪ |
| | ಹುಡುಗಿಯರು | ಸಂಖ್ಯೆ | ೮೯೦ | ೫೯೩೧ |
| ೪೪ | **ಮೆಡಿಕಲ್ ಕಾಲೇಜುಗಳು–ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ** | | | |
| | ಕಾಲೇಜುಗಳು | ಸಂಖ್ಯೆ | ೦ | ೦ |
| | ಹುಡುಗರು | ಸಂಖ್ಯೆ | ೦ | ೦ |
| | ಹುಡುಗಿಯರು | ಸಂಖ್ಯೆ | ೦ | ೦ |
| | ಪಾಲಿಟೆಕ್ನಿಕ್ | | | |
| | ಕಾಲೇಜುಗಳು | ಸಂಖ್ಯೆ | ೧ | ೩ |
| | ಹುಡುಗರು | ಸಂಖ್ಯೆ | ೧೭೬ | ೪೬೭ |
| | ಹುಡುಗಿಯರು | ಸಂಖ್ಯೆ | ೫೫ | ೧೯೦ |
| | ಇಂಜಿನಿಯರಿಂಗ್ | | | |
| | ಕಾಲೇಜುಗಳು | ಸಂಖ್ಯೆ | ೦ | ೦ |
| | ಹುಡುಗರು | ಸಂಖ್ಯೆ | ೦ | ೦ |
| | ಹುಡುಗಿಯರು | ಸಂಖ್ಯೆ | ೦ | ೦ |
| | ದಂತವೈದ್ಯ ಕಾಲೇಜುಗಳು | | | |
| | ಕಾಲೇಜುಗಳು | ಸಂಖ್ಯೆ | ೦ | ೧ |
| | ಹುಡುಗರು | ಸಂಖ್ಯೆ | ೦ | ೬೦ |
| | ಹುಡುಗಿಯರು | ಸಂಖ್ಯೆ | ೦ | ೧೮೯ |
| ೪೫ | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ** | | | |
| | **ಅಲೋಪತಿ ಕೇಂದ್ರದ ಆಸ್ಪತ್ರೆಗಳು** | | | |
| | ಸಂಖ್ಯೆ | ಸಂಖ್ಯೆ | ೧೩ | ೯೮ |
| | ಹಾಸಿಗೆಗಳು | ಸಂಖ್ಯೆ | ೨೪೪ | ೧೭೫೪ |

## ಅನುಬಂಧ

| | | | | |
|---|---|---|---|---|
| | ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು | | | |
| | ಸಂಖ್ಯೆ | ಸಂಖ್ಯೆ | ೦ | ೫ |
| | ಹಾಸಿಗೆಗಳು | ಸಂಖ್ಯೆ | ೦ | ೪೨ |
| | ಖಾಸಗಿ ಆಸ್ಪತ್ರೆಗಳು(ನರ್ಸಿಂಗ್ ಹೋಂಗಳು ಸೇರಿ) | | | |
| | ಸಂಖ್ಯೆ | ಸಂಖ್ಯೆ | ೩ | ೩೬ |
| | ಪ್ರಾಥಮಿಕ ಆರೋಗ್ಯ ಕೇಂದ್ರಗಳು | | | |
| | ಸಂಖ್ಯೆ | ಸಂಖ್ಯೆ | ೬ | ೮೧ |
| | ಹಾಸಿಗೆಗಳು | ಸಂಖ್ಯೆ | ೫೪ | ೪೭೪ |
| | ಸಮುದಾಯ ಆರೋಗ್ಯ ಕೇಂದ್ರಗಳು | | | |
| | ಸಂಖ್ಯೆ | ಸಂಖ್ಯೆ | ೩ | ೧೧ |
| | ಹಾಸಿಗೆಗಳು | ಸಂಖ್ಯೆ | ೯೦ | ೩೩೦ |
| | ಸಂತಾನಹರಣ ಶಸ್ತ್ರಚಿಕಿತ್ಸೆ | | | |
| | ವ್ಯಾಸೆಕ್ಟಮಿ | ಸಂಖ್ಯೆ | ೨ | ೮೮ |
| | ಟ್ಯುಬೆಕ್ಟಮಿ | ಸಂಖ್ಯೆ | ೧೫೦೧ | ೧೧೮೮೪ |
| | ಔಷಧಿ ಅಂಗಡಿಗಳು | ಸಂಖ್ಯೆ | ೬೨ | ೪೭೪ |
| | ರಕ್ತನಿಧಿಗಳು | ಸಂಖ್ಯೆ | ೦ | ೩ |
| | ಲಸಿಕೆ | | | |
| | ಡಿಪಿಟಿ | ಸಂಖ್ಯೆ | ೩೪೮೮ | ೩೦೦೫೭ |
| | ಪೋಲಿಯೋ | ಸಂಖ್ಯೆ | ೫೦೧೯ | ೩೮೮೫೨ |
| | ಬಿಸಿಜಿ | ಸಂಖ್ಯೆ | ೫೧೭೧ | ೪೮೨೬೪ |
| | ದಡಾರ | ಸಂಖ್ಯೆ | ೫೩೭೪ | ೩೯೩೫೫ |
| | ಟಿ.ಟಿ | ಸಂಖ್ಯೆ | ೪೭೦೬ | ೩೯೨೧೯ |
| | ಹೆಪಟೈಟಿಸ್ ‘ಬಿ’ | ಸಂಖ್ಯೆ | ೪೩೨೭ | ೩೧೩೧೮ |
| ೪೬ | **ಸ್ತ್ರೀಶಕ್ತಿ ಸಂಘಗಳ ವಿವರಗಳು** | | | |
| | ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು | ಸಂಖ್ಯೆ | ೧೦೪೨ | ೫೦೬೨ |
| | ಪರಿಶಿಷ್ಟ ಜಾತಿ ಮಹಿಳೆಯರು | ಸಂಖ್ಯೆ | ೨೪೫೮ | ೧೨೪೭೦ |
| | ಪರಿಶಿಷ್ಟ ಪಂಗಡದ ಮಹಿಳೆಯರು | ಸಂಖ್ಯೆ | ೧೩೮೬ | ೧೦೩೮೭ |

| | | | | |
|---|---|---|---|---|
| | ಇತರೆ ಮಹಿಳೆಯರು | ಸಂಖ್ಯೆ | ೯೩೫೩ | ೩೪೭೪೫ |
| | ಒಟ್ಟು ಮಹಿಳಾ ಸದಸ್ಯರು | ಸಂಖ್ಯೆ | ೧೩೧೯೭ | ೫೭೫೦೨ |
| ೪೭ | **ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್‌ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೩ | ೫೨ |
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೨೭೮ | ೩೮೯೧ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೪ | ೩೨ |
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೪೫೦ | ೪೪೧೯ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೨ | ೧೪ |
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೯೦ | ೮೪೯ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೫ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೭೦೦ |
| ೪೮ | **ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೭ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೫೨೫ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೪ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೪೧೩ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |

# ಅನುಬಂಧ

| | | | | |
|---|---|---|---|---|
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೧೩ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೭೯೨ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೦ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೦ |
| ೪೯ | **ಹಿಂದುಳಿದ ವರ್ಗದವರ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೬ | ೫೧ |
| | ವಿದ್ಯಾರ್ಥಿಗಳು | ಸಂಖ್ಯೆ | ३೦೦ | ೨೫೫೦ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೬ | ೪೩ |
| | ವಿದ್ಯಾರ್ಥಿಗಳು | ಸಂಖ್ಯೆ | ೬೦೦ | ೪೩೬೫ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೬ |
| | ವಿದ್ಯಾರ್ಥಿಗಳು | ಸಂಖ್ಯೆ | ೧ | ३೧೦ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ३ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೧೭೫ |
| ೫೦ | **ಜನನ ಮತ್ತು ಮರಣ ನೋಂದಣಿ** | | | |
| | **ನೋಂದಣಿಯಾದ ಘಟನೆಗಳು(ವರ್ಷ ೨೦೧३)** | | | |
| | ನೋಂದಣಿ ಘಟಕಗಳು | ಸಂಖ್ಯೆ | ೨३೯ | ೧೧೬೬ |
| | ಜನನ | | | |
| | ಗಂಡು | ಸಂಖ್ಯೆ | ೮೬೯ | ೧३೧೦३ |
| | ಹೆಣ್ಣು | ಸಂಖ್ಯೆ | ೮೨೮ | ೧೧೮೯೯ |
| | ಒಟ್ಟು | ಸಂಖ್ಯೆ | ೧೬೯೭ | ೨೫೦೦೨ |

| | | | | |
|---|---|---|---|---|
| | ಮರಣ | | | |
| | ಗಂಡು | ಸಂಖ್ಯೆ | ೮೬೩ | ೬೧೩೯ |
| | ಹೆಣ್ಣು | ಸಂಖ್ಯೆ | ೫೭೮ | ೪೦೪೫ |
| | ಒಟ್ಟು | ಸಂಖ್ಯೆ | ೧೪೪೧ | ೧೦೧೮೪ |
| | ವಿಳಂಬ ನೋಂದಣಿಯಾದ ಘಟನೆಗಳು(ವರ್ಷ ೨೦೧೪-೧೫) | | | |
| | ಜನನ | | | |
| | ಗಂಡು | ಸಂಖ್ಯೆ | ೭೯ | ೯೦೨ |
| | ಹೆಣ್ಣು | ಸಂಖ್ಯೆ | ೩೫ | ೫೬೮ |
| | ಒಟ್ಟು | ಸಂಖ್ಯೆ | ೧೧೪ | ೧೪೭೦ |
| | ಮರಣ | | | |
| | ಗಂಡು | ಸಂಖ್ಯೆ | ೧೧೧ | ೫೯೫ |
| | ಹೆಣ್ಣು | ಸಂಖ್ಯೆ | ೫೩ | ೩೬೯ |
| | ಒಟ್ಟು | ಸಂಖ್ಯೆ | ೧೬೪ | ೯೬೪ |

# 2011 ರ ಜನಗಣತಿಯಂತೆ ಹೊಸದುರ್ಗ ತಾಲೂಕಿನ ಗ್ರಾಮಗಳ ಪಟ್ಟಿ

| Sl.No. | English | Kannada |
|---|---|---|
| 1 | Adavi Sangenahalli | ಅಡವಿ ಸಂಗೇನಹಳ್ಳಿ |
| 2 | Adrikatte | ಆದ್ರಿಕಟ್ಟೆ |
| 3 | Agasarahalli | ಅಗಸರಹಳ್ಳಿ |
| 4 | Agrahara | ಅಗ್ರಹಾರ |
| 5 | Ajjikamasagara | ಅಜ್ಜಿಕಂಸಾಗರ |
| 6 | Aladahalli | ಆಲದಹಳ್ಳಿ |
| 7 | Alagatta | ಆಲಗಟ್ಟ |
| 8 | Anivala | ಆನಿವಾಳ |
| 9 | Aralahalli | ಅರಲಹಳ್ಳಿ |
| 10 | Aralihalli | ಅರಳೀಹಳ್ಳಿ |
| 11 | Arehalli | ಅರೇಹಳ್ಳಿ |
| 12 | Arenahalli | ಆರೇನಹಳ್ಳಿ |
| 13 | Athimage | ಅತ್ತಿಮಗೆ |
| 14 | Attigatta | ಅತ್ತಿಗಟ್ಟೆ |
| 15 | Bachavara | ಬಾಚವಾರ |
| 16 | Bagasettihalli | ಭಾಗಶೆಟ್ಟಿಹಳ್ಳಿ |
| 17 | Bagur | ಬಾಗೂರು |
| 18 | Balenahalli | ಬಾಲೇನಹಳ್ಳಿ |
| 19 | Ballalasamudra | ಬಲ್ಲಾಳಸಮುದ್ರ |
| 20 | Ballalasmudra Kaval | ಬಲ್ಲಾಳಸಮುದ್ರ ಕಾವಲ್ (ಬಿ.ಎಸ್.ಕಾವಲ್) |
| 21 | Ballalasamudrakere Kaval | ಬಳ್ಳಾಲಸಮುದ್ರಕೆರೆ ಕಾವಲ್ (ಬಿ.ಎಸ್.ಕಾವಲ್) |
| 22 | Ballekre | ಬಳ್ಳೇಕೆರೆ |
| 23 | Banapura | ಬಾನಾಪುರ |
| 24 | Banasihalli | ಬನಸೀಹಳ್ಳಿ |

| | | |
|---|---|---|
| 25 | Bandihalli | ಬಂಡೀಹಳ್ಳಿ |
| 26 | Beesanahalli | ಬೀಸನಹಳ್ಳಿ |
| 27 | Belagur | ಬೆಲಗೂರು |
| 28 | Benakanahalli | ಬೆನಕನಹಳ್ಳಿ |
| 29 | Bevinahalli | ಬೇವಿನಹಳ್ಳಿ |
| 30 | Bokikere | ಬೋಕಿಕೆರೆ |
| 31 | Bommenahalli | ಬೊಮ್ಮೇನಹಳ್ಳಿ |
| 32 | Bommenahalli | ಬೊಮ್ಮನಹಳ್ಳಿ |
| 33 | Bukkasagara | ಬುಕ್ಕಸಾಗರ |
| 34 | Burudekatte | ಬುರಡೇಕಟ್ಟೆ |
| 35 | Bydarahalli | ಬ್ಯಾಡರಹಳ್ಳಿ |
| 36 | Bylahalli | ಬೈಲಹಳ್ಳಿ |
| 37 | Byrapura | ಭೈರಾಪುರ |
| 38 | Channapura | ಚನ್ನಾಪುರ |
| 39 | Channasamudra | ಚನ್ನಸಮುದ್ರ |
| 40 | Chikkabyladakere | ಚಿಕ್ಕಬ್ಯಾಲದಕೆರೆ |
| 41 | Chikkahullenahalli | ಚಿಕ್ಕಹುಲ್ಲೇಹಳ್ಳಿ |
| 42 | Chikkakarpuradakatte | ಚಿಕ್ಕಕರ್ಪೂರದ ಕಟ್ಟೆ |
| 43 | Chikkamanahalli | ಚಿಕ್ಕಮ್ಮನಹಳ್ಳಿ |
| 44 | Chikkatekalavati kaval | ಚಿಕ್ಕತೇಕಲವಟ್ಟಿಕಾವಲ್ |
| 45 | Chikkathekalavatti | ಚಿಕ್ಕತೇಕಲವಟ್ಟಿ |
| 46 | Chikkayagati | ಚಿಕ್ಕಯಗಟಿ |
| 47 | Chinnapura | ಚಿನ್ನಾಪುರ |
| 48 | Dalavaihalli | ದಳವಾಯಿಹಳ್ಳಿ |
| 49 | Dasarahalli | ದಾಸರಹಳ್ಳಿ |
| 50 | Devapura | ದೇವಪುರ |
| 51 | Devapura Colony | ದೇವಪುರ ಕಾಲೋನಿ |
| 52 | Devigere | ದೇವಿಗೆರೆ |
| 53 | Doddabyladakere | ದೊಡ್ಡಬ್ಯಾಲದಕೆರೆ |
| 54 | Doddagatta | ದೊಡ್ಡಗಟ್ಟ |
| 55 | Doddakarpuradakatte | ದೊಡ್ಡಕರ್ಪೂರದ ಕಟ್ಟೆ |

| | | |
|---|---|---|
| 56 | Doddakittadahalli | ದೊಡ್ಡಕಿಟ್ಟದಹಳ್ಳಿ |
| 57 | Doddathekalavatti | ದೊಡ್ಡತೇಕಲವಟ್ಟಿ |
| 58 | Duggavara | ದುಗ್ಗಾವರ |
| 59 | Galabenahalli | ಗಲಭೇನಹಳ್ಳಿ |
| 60 | Ganjigere | ಗಂಜಿಗೆರೆ |
| 61 | Garaga | ಗರಗ |
| 62 | Gavirangapura | ಗವಿರಂಗಾಪುರ |
| 63 | Giriyapura | ಗಿರಿಯಪುರ |
| 64 | Gollarahalli | ಗೊಲ್ಲರಹಳ್ಳಿ |
| 65 | Gollarahalli | ಗೊಲ್ಲರಹಳ್ಳಿ |
| 66 | Goolihalli | ಗೂಳಿಹಳ್ಳಿ |
| 67 | Goolihatti | ಗೂಳಿಹಟ್ಟಿ |
| 68 | Goravigondanahalli | ಗೋರವಿಗೊಂಡನಹಳ್ಳಿ |
| 69 | Goravinakal | ಗೊರುವಿನಕಲ್ಲು |
| 70 | Grantapura | ಗ್ರಾಂಟಾಪುರ |
| 71 | Guddadaneralakere | ಗುಡ್ಡದನೇರಲಕೆರೆ |
| 72 | Guthikatte | ಗುತ್ತಿಕಟ್ಟೆ |
| 73 | Hagalakere | ಹಾಗಲಕೆರೆ |
| 74 | Handanakere | ಹಂದನಕೆರೆ |
| 75 | Hanumanahalli | ಹನುಮನಹಳ್ಳಿ |
| 76 | Haragondanahalli | ಹಾರೋಗೊಂಡನಹಳ್ಳಿ |
| 77 | Hariyanahalli | ಹರಿಯನಹಳ್ಳಿ |
| 78 | Hebballi | ಹೆಬ್ಬಳ್ಳಿ |
| 79 | Heggere | ಹೆಗ್ಗೆರೆ |
| 80 | Herur | ಹೇರೂರು |
| 81 | Honnekre | ಹೊನ್ನೇಕೆರೆ |
| 82 | Honnenahalli | ಹೊನ್ನೇನಹಳ್ಳಿ |
| 83 | Hosahalli | ಹೊಸಹಳ್ಳಿ |
| 84 | Hosural | ಹೊಸುರಾಳು |
| 85 | Hottugondanahalli | ಹೊತ್ತರಗೊಂಡನಹಳ್ಳಿ |
| 86 | Hullukatti | ಹುಲ್ಲುಕಟ್ಟೆ |

| | | |
|---|---|---|
| 87 | Hunavinadu | ಹುಣವಿನಡು |
| 88 | Hurulihalli | ಹುರುಳಿಹಳ್ಳಿ |
| 89 | Ittigehalli | ಇಟ್ಟಿಗೆಹಳ್ಳಿ |
| 90 | Iyalapura | ಐಲಾಪುರ |
| 91 | Iyyanahalli | ಐಯ್ಯನಹಳ್ಳಿ |
| 92 | Jammapura | ಜಮ್ಮಾಪುರ |
| 93 | Jammapura | ಜಮ್ಮಾಪುರ |
| 94 | Janakal | ಜಾನಕಲ್ಲು |
| 95 | Janthikolalu | ಜಂತಿಕೊಳಲು |
| 96 | Jayasuvarnapura | ಜಯಸುವರ್ಣಪುರ |
| 97 | Jogammanahalli | ಜೋಗಮ್ಮನಹಳ್ಳಿ |
| 98 | Jogihalli | ಜೋಗಿಹಳ್ಳಿ |
| 99 | Kabbala | ಕಬ್ಬಳ |
| 100 | Kabbala | ಕಬ್ಬಳ |
| 101 | Kabbinakere | ಕಬ್ಬಿನಕೆರೆ |
| 102 | Kachapura | ಕಾಚಾಪುರ |
| 103 | Kadadanakere | ಕಡದನಕೆರೆ |
| 104 | Kadavagere | ಕಡವಗೆರೆ |
| 105 | Kadivanakatte | ಕಡಿವಾಣಕಟ್ಟೆ |
| 106 | Kadlekamasagara | ಕಡ್ಲೆಕಂಸಾಗರ |
| 107 | Kaggalakatte | ಕಗ್ಗಲ ಕಟ್ಟೆ |
| 108 | Kainadu | ಕೈನಡು |
| 109 | Kainadu Amanikere | ಕೈನಡುಅಮಾನಿಕೆರೆ |
| 110 | Kainaduhora Kaval | ಕೈನಡುಹೊರ ಕಾವಲ್ |
| 111 | Kainaduval Kaval | ಕೈನಡುಹೊಳಕಾವಲ್ |
| 112 | Kalkere | ಕಲ್ಕೆರೆ |
| 113 | Kallahalli | ಕಲ್ಲಹಳ್ಳಿ |
| 114 | Kallihosahalli | ಕಳ್ಳಿಹೊಸಹಳ್ಳಿ |
| 115 | Kanchipura | ಕಂಚೀಪುರ |
| 116 | Kangavalli | ಕಂಗುವಳ್ಳಿ |
| 117 | Kanivesangenahalli | ಕಣಿವೆಸಂಗೇನಹಳ್ಳಿ |

| | | |
|---|---|---|
| 118 | Kannagondi | ಕನ್ನಾಗೋಂದಿ |
| 119 | Kanubenahalli | ಕಾನುಬೇನಹಳ್ಳಿ |
| 120 | Kappagere | ಕಪ್ಪಗೆರೆ |
| 121 | Kappanaikanahalli | ಕಪ್ಪನಾಯ್ಕನಹಳ್ಳಿ |
| 122 | Karadikatte | ಕರಡೀಕಟ್ಟೆ |
| 123 | Karalamavinahalli | ಕರ್ಲಮಾವಿನಹಳ್ಳಿ |
| 124 | Karehalli | ಕಾರೇಹಳ್ಳಿ |
| 125 | Kasappanahalli | ಕಸಪ್ಪನಹಳ್ಳಿ |
| 126 | Kellodu | ಕೆಲ್ಲೋಡು |
| 127 | Kenchihalli | ಕೆಂಚಿಹಳ್ಳಿ |
| 128 | Kenkere | ಕೆಂಕೆರೆ |
| 129 | Kerehosahalli | ಕೆರೆಹೊಸಹಳ್ಳಿ |
| 130 | Kittadal | ಕಿಟ್ಟದಾಳ್ |
| 131 | Kodihalli | ಕೋಡಿಹಳ್ಳಿ |
| 132 | Kodihalli | ಕೋಡಿಹಳ್ಳಿ |
| 133 | Kodihalli | ಕೋಡಿಹಳ್ಳಿ |
| 134 | Kondajji | ಕೊಂಡಜ್ಜಿ |
| 135 | Kondapura | ಕೊಂಡಾಪುರ |
| 136 | Koratikere | ಕೊರಟಿಕೆರೆ |
| 137 | Krishnapura | ಕೃಷ್ಣಾಪುರ |
| 138 | Krishnapura | ಕೃಷ್ಣಾಪುರ |
| 139 | Kudurekanive Forest | ಕುದುರೆಕಣಿವೆ ಫಾರೆಸ್ಟ್ (ಕೆ. ಕೆ.ಫಾರೆಸ್ಟ್) |
| 140 | Kumaranakanive | ಕುಮಾರನಕಣಿವೆ |
| 141 | Kumbaragatte | ಕುಂಬಾರಗಟ್ಟೆ |
| 142 | Kundur | ಕುಂದೂರು |
| 143 | Kurubarahalli | ಕುರುಬರಹಳ್ಳಿ |
| 144 | Kurubarahalli | ಕುರುಬರಹಳ್ಳಿ |
| 145 | Kyadigere | ಕ್ಯಾದಿಗೆರೆ |
| 146 | Kyadigere Kaval | ಕ್ಯಾದಿಗೆರೆ ಕಾವಲ್ |
| 147 | Lakkenahalli | ಲಕ್ಕೇನಹಳ್ಳಿ |

| | | |
|---|---|---|
| 148 | Lakkihalli | ಲಕ್ಕಿಹಳ್ಳಿ |
| 149 | Laxmidevarahalli | ಲಕ್ಷ್ಮೀದೇವರಹಳ್ಳಿ |
| 150 | Lingadhahalli | ಲಿಂಗದಹಳ್ಳಿ |
| 151 | Machenahalli | ಮಾಚೇನಹಳ್ಳಿ |
| 152 | Madadakere | ಮಾಡದಕೆರೆ |
| 153 | Madhure | ಮಧುರೆ |
| 154 | Malali | ಮಳಲಿ |
| 155 | Malappanahalli | ಮಾಳಪ್ಪನಹಳ್ಳಿ |
| 156 | Mallappanahalli | ಮಲ್ಲಪ್ಪನಹಳ್ಳಿ |
| 157 | Mallapura | ಎಂ.ಮಲ್ಲಾಪುರ |
| 158 | Mallapura | ಡಿ.ಮಲ್ಲಾಪುರ |
| 159 | Mallenahalli (Jodi) | ಮಲ್ಲೇನಹಳ್ಳಿ |
| 160 | Mallihalli | ಮಲ್ಲಿಹಳ್ಳಿ |
| 161 | Mantenahalli (Jodi) | ಮಂಟೇನಹಳ್ಳಿ |
| 162 | Marabagatta | ಮಾರಬಗಟ್ಟ |
| 163 | Masanihalli | ಮಸಣಿಹಳ್ಳಿ |
| 164 | Mathodu | ಮತ್ತೋಡು |
| 165 | Mathur | ಮತ್ತೂರು |
| 166 | Mavinakatte | ಮಾವಿನಕಟ್ಟೆ |
| 167 | Menasinadu | ಮೆಣಸಿನಡು |
| 168 | Mengasandra | ಮಂಗಸಂದ್ರ |
| 169 | Mettinahole | ಮೆಟ್ಟಿನಹೊಳೆ |
| 170 | Mugilodu | ಮುಗಿಲೋಡು |
| 171 | Muttagundi | ಮುತ್ತಗೊಂಡಿ |
| 172 | Myalarapura | ಮೈಲಾರಪುರ |
| 173 | Naganaikanakatte | ನಾಗನಾಯ್ಕನಕಟ್ಟೆ |
| 174 | Nagaragere | ನಗರಗೆರೆ |
| 175 | Nagarakatte | ನಾಗರಕಟ್ಟೆ |
| 176 | Nagathihalli | ನಾಗತಿಹಳ್ಳಿ |
| 177 | Nagenahalli | ನಾಗೇನಹಳ್ಳಿ |
| 178 | Naigere | ನಾಯಿಗೆರೆ |

| | | |
|---|---|---|
| 179 | Nakikere | ನಾಕಿಕೆರೆ |
| 180 | Narasipura | ನರಸೀಪುರ |
| 181 | Neeragunda | ನೀರಗುಂದ |
| 182 | Neeragunda Kaval | ನೀರಗುಂದಕಾವಲ್ |
| 183 | Neralakere | ಎಸ್.ನೇರ್ಲಕೆರೆ |
| 184 | Niruvagal | ನಿರವಗಲ್ಲು |
| 185 | Palyadahalli | ಪಾಳೇದಹಳ್ಳಿ |
| 186 | Peelapura | ಪೀಲಾಪುರ |
| 187 | Ramajjanahalli | ರಾಮಜ್ಜನಹಳ್ಳಿ |
| 188 | Rangapura | ರಂಗಾಪುರ |
| 189 | Rangavvanahalli | ರಂಗವ್ವನಹಳ್ಳಿ |
| 190 | Rangenahalli | ರಂಗೇನಹಳ್ಳಿ |
| 191 | Sadarahalli | ಸಾದರಹಳ್ಳಿ |
| 192 | Sanihalli | ಸಾಣೇಹಳ್ಳಿ |
| 193 | Sannakittadahalli | ಸಣ್ಣಕಿಟ್ಟದಹಳ್ಳಿ |
| 194 | Seeranakatte | ಶೀರ್ನಕಟ್ಟೆ |
| 195 | Settyhalli | ಶೆಟ್ಟಿಹಳ್ಳಿ |
| 196 | Sevanagara | ಸೇವನಗಾರ |
| 197 | Shivanekatte | ಶಿವನೇಕಟ್ಟೆ |
| 198 | Siddagondanahalli | ಸಿದ್ಧಗೊಂಡನಹಳ್ಳಿ |
| 199 | Singenahalli | ಶಿಂಗೇನಹಳ್ಳಿ |
| 200 | Sirigepura | ಶಿರಗಿಪುರ |
| 201 | Sirigondanahalli | ಸಿರಿಗೊಂಡನಹಳ್ಳಿ |
| 202 | Sodaranal | ಸೋಡ್ರನಾಳ್ |
| 203 | Somasandra | ಸೋಮಸಂದ್ರ |
| 204 | Somenahalli | ಸೋಮೇನಹಳ್ಳಿ |
| 205 | Sriramapura | ಶ್ರೀರಾಂಪುರ |
| 206 | Srirangapura | ಶ್ರೀರಂಗಾಪುರ |
| 207 | Srirangapura (Jodi) | ಜೋಡಿ ಶ್ರೀರಂಗಾಪುರ |
| 208 | Sujikal | ಸೂಜಿಕಲ್ |
| 209 | Sujikal Amanikere | ಸೂಜಿಕಲ್ ಅಮಾನಿಕೆರೆ |

| | | |
|---|---|---|
| 210 | Tandaga | ತಂಡಗ |
| 211 | Tarikere (Jodi) | ತಾರೀಕೆರೆ |
| 212 | Thanigekal | ತಣಿಗೆಕಲ್ಲು |
| 213 | Thimmalapura | ತಿಮ್ಲಾಪುರ |
| 214 | Thippajjanahalli | ತಿಪ್ಪಜ್ಜನಹಳ್ಳಿ |
| 215 | Thippenahalli | ತಿಪ್ಪೇನಹಳ್ಳಿ |
| 216 | Thonechenahalli | ತೋಣಚೇನಹಳ್ಳಿ |
| 217 | Thumbinakere | ತುಂಬಿನಕೆರೆ |
| 218 | Tumbinakere | ತುಂಬಿನಕೆರೆ |
| 219 | Ulavinagondi | ಉಳುವಿನಗೊಂದಿ |
| 220 | Veerapura | ವೀರಾಪುರ |
| 221 | Veerapura Kaval | ವೀರಾಪುರ ಕಾವಲ್ |
| 222 | Veeravvanagathihalli | ವೀರವ್ವನಾಗ್ತಿಹಳ್ಳಿ |
| 223 | Vengalapura | ವೆಂಗಳಾಪುರ |
| 224 | Yadagatta | ಯಾದಗಟ್ಟ |
| 225 | Yaraduguddasandi Kaval | ಎರಡುಗುಡ್ಡದಸಂದಿಕಾವಲ್ |

## ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ
## ಆಯ್ದ ಆಕರ ಗ್ರಂಥಗಳು


### ಕನ್ನಡ ಗ್ರಂಥಗಳು

**ಕನ್ನಡ ವಿಶ್ವಕೋಶ ಸಂಪುಟಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ (೧ ರಿಂದ ೧೪ ಸಂಪುಟಗಳು) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಪ್ರೊ. ಎಚ್.ಎಂ. ಶಂಕರನಾರಾಯಣ, **ಹರಿ ಹರೇಶ್ವರ ದೇವಾಲಯ**.
ಸುಮತೀಂದ್ರ ನಾಡಿಗ್, ದಾವಣಗೆರೆ ಜಿಲ್ಲೆ **ಇತಿಹಾಸದ ಕೆಲವು ಹೆಜ್ಜೆಗಳು**–ಸಂತೆಬೆನ್ನೂರು.

**'ಇತಿಹಾಸ ಕಥನ',** ಡಾ ॥ ಬಿ. ರಾಜಶೇಖರಪ್ಪ, ಚಿತ್ರದುರ್ಗ.
**'ಕುಮ್ಮಟ ಕೇಸರಿ',** ಜಿ. ವರದರಾಜರಾವ್, ಮೈಸೂರು (೧೯೬೩).
ನಾಯಕ ಹಾ.ಮ (ಸಂ) **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ** ಮೈಸೂರು ವಿಶ್ವವಿದ್ಯಾಲಯ ಮೈಸೂರು (೧೯೭೩)
**'ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು',** ಸಂ: ಪ್ರೊ ॥ ಲಕ್ಷ್ಮಣ್ ತೆಲಗಾವಿ ಮತ್ತು ಡಾ ॥ ಎಂ.ವಿ. ಶ್ರೀನಿವಾಸ (೧೯೭೬), (೧೯೯೫).
ಕಾಮತ್ ಸೂರ್ಯನಾಥ್ ಯು, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**. ಸಂಪುಟ ೧ ರಿಂದ ೩ ಮೈಸೂರು ೧೯೭೭, ೧೯೮೦.
**'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ಸಂಚಿಕೆಗಳು',** ಡಾ ॥ ಲೇ.ನಂ. ಶಂಕರನಾರಾಯಣ, ಮೈಸೂರು ವಿಶ್ವವಿದ್ಯಾನಿಲಯ (೧೯೮೨).
**'ನಿರುಮಣ ನಾಯಕನ ಸಾಂಗತ್ಯ',** ಸಂ: ಡಾ॥ ಎಂ. ಎಂ. ಕಲಬುರ್ಗಿ, (೧೯೮೩).
**'ಸಂಶೋಧನೆಯ ಹಾದಿಯಲ್ಲಿ',** ಪ್ರೊ ॥ ಎಚ್.ಶ್ರೀ ಶೈಲ ಆರಾಧ್ಯ, ಚಿತ್ರದುರ್ಗ, (೧೯೮೩).
**'ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್'** (ಭಾಗ ೨), ಮುಖ್ಯ ಸಂಪಾದಕರು ಗ್ಯಾಸೆಟಿಯರ್ ಇಲಾಖೆ (೧೯೮೩).
**'ಹೊಸದುರ್ಗದ ಸುತ್ತ', ೧೯೮೪,** ನಾಗರಾಜ ಹೊಸದುರ್ಗ.
ಕಾಮತ್ ಸೂರ್ಯನಾಥ ಯು, **ಕರ್ನಾಟಕ ರಾಜ್ಯ ಗ್ಯಾಸೆಟಿಯರ ಸಂಪುಟ ೧,೨,೩** ಕರ್ನಾಟಕ ಗ್ಯಾಸೆಟಿಯರ ಇಲಾಖೆ ಬೆಂಗಳೂರು, ೧೯೮೪
**'ಹೊಸದುರ್ಗ ತಾಲ್ಲೂಕು ದರ್ಶನ' (೧೯೮೬)** ಬಾಗೂರು ನಾಗರಾಜಪ್ಪ, ಹೊಸದುರ್ಗ.
**'ನಿರುಮಣ ಚರಿತೆ',** ಸಂ. ಡಾ॥ಎಂ.ಎಂ. ಕಲಬುರ್ಗಿ, (೧೯೯೧)
**'ಗೊಲ್ಲ ನಿರುಮಣ ಚರಿತೆ',** ಸಂ ಡಾ ॥ ಎಂ. ಎಂ. ಕಲಬುರ್ಗಿ, (೧೯೯೪)
**'ಹೊಸತು ಹೊಸತು',** ಡಾ॥ಎಂ. ಚಿದಾನಂದಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೧೯೯೮).
**'ಸ್ಥಳನಾಮಗಳು'**. ಸಂ : ಡಾ॥ಕೆ.ವಿ. ನಾರಾಯಣ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, (೧೯೯೯).
**'ದುರುಗ ಜಾನಪದ'** (೧೯೯೯), 'ಗೊಲ್ಲ ಕಡಗ' (೧೯೯೯), ಡಾ ॥ ಮೀರಾಸಾಬಿಹಳ್ಳಿ ಶಿವಣ್ಣ.
**'ಚಿನ್ಮೂಲಾದ್ರಿ ಚೇತನ',** ಸಂ: ಎಚ್. ನೀಲಪ್ಪ, (೨೦೦೦).
**'ಬಯಕಾರ ರಾಮಪ್ಪ',** ಡಾ ॥ ಎಸ್.ಎನ್. ಶಿವರುದ್ರಪ್ಪಸ್ವಾಮಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ (೨೦೦೦).

**'ಮನದಾಳದ ಕನಸುಗಳು'**. (ಸಂ) ಡಾ ॥ ಕಾಳೇಗೌಡ ನಾಗವಾರ, ಡಾ ॥ ಮೀರಾಸಾಬಿಹಳ್ಳಿ ಶಿವಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ (೨೦೦೧).

ಸಿದ್ದಲಿಂಗಯ್ಯ ಜೆ.ಎಸ್. ಮತ್ತು ಕೃಷ್ಣಯ್ಯ ಎಂ.ಎಚ್. (ಸಂ) **ಸಾಲುದೀಪಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೧.

**'ಹೆಗ್ಗೆರೆ ಬಸದಿ'** (೨೦೦೨) ಬಾಗೂರು ನಾಗರಾಜಪ್ಪ, ಹೊಸದುರ್ಗ.

**'ದೇವಾಂಗ ಸಂಸ್ಕೃತಿ',** ನಾಡೋಜ ಪ್ರೊ ॥ ಕೆ.ಜಿ. ನಾಗರಾಜಪ್ಪ ಬೆಂಗಳೂರು (೨೦೦೩)

**'ಹೊಸದುರ್ಗದ ಒಡಲಾಗೆ',** (೨೦೦೮), ಬಾಗೂರು ನಾಗರಾಜಪ್ಪ ಹೊಸದುರ್ಗ.

**'ಕುರುಬ ದರ್ಪಣ',** ಚಂದ್ರಕಾಂತ್ ಬಜ್ಜರಗಿ, ವಿಜಾಪುರ (೨೦೦೮).

**'ಮತ್ತೋಡು ಪಾಳೇಗಾರರ ವಂಶಜರ ಒಂದು ಪತ್ರ'** ಲೇಖನ: ಪ್ರೊ ॥ ಲಕ್ಷ್ಮಣ್ ತೆಲಗಾವಿ (೨೦೦೪).

**'ಹೊಸದುರ್ಗ ಸೀಮೆ ಜಾನಪದ'** (೨೦೦೮), ನಾಗರಾಜ ಹೊಸದುರ್ಗ ಹಾಗೂ ಬಾಗೂರು ನಾಗರಾಜಪ್ಪ ಹೊಸದುರ್ಗ.

**'ಮೌರ್ಯ ಮತ್ತು ಶಾತವಾಹನ-ಯುಗ',** ಪ್ರೊ ॥ ಲಕ್ಷ್ಮಣ್ ತೆಲಗಾವಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ (೨೦೦೪).

**'ಮಾಹಿತಿ ಹಕ್ಕು ಅಧಿನಿಯಮ ೨೦೦೫ ರಡಿ ಸಾರ್ವಜನಿಕರಿಗೆ ಮಾಹಿತಿ ೨೦೦೯-೧೦'**
ಸಂ : ಕೆ. ಅಮರನಾರಾಯಣ, ಜಿಲ್ಲಾಧಿಕಾರಿಗಳು, ದಾವಣಗೆರೆ (೨೦೧೦).

**'ಚಿತ್ರದುರ್ಗ ನಾಯಕ ಅರಸರು ;** ರಾಜಕೀಯ ಚಿತ್ರ, ಪ್ರೊ ॥ ಲಕ್ಷ್ಮಣ್ ತೆಲಗಾವಿ, (೨೦೦೯)

ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಿಗಳ ನೋಟ ೨೦೧೦-೧೧ ಮತ್ತು ೨೦೧೪-೧೨ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಕಛೇರಿ, ಚಿತ್ರದುರ್ಗ.

ಬಾಗೂರು ಆರ್. ನಾಗರಾಜಪ್ಪ ಅವರ **'ಬದುಕು-ಬರಹ-ಒಂದು ಅಧ್ಯಯನ'** ಮೋಹನ್‌ಗಾಂಧಿ. ಯು.ಬಿ. ಮಧುರೈ ಯೂನಿವರ್ಸಿಟಿ ಮಧುರೈ (೨೦೧೩).

**'ಮ್ಯಾಸಮಂಡಲ',** ಡಾ ॥ ಮೀರಾಸಾವಿಹಳ್ಳಿ ಶಿವಣ್ಣ. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು (೨೦೦೩).

**ಆಂಗ್ಲ ಗ್ರಂಥಗಳು**

**Krishna Rao. P.** History of Mysore from the origin of the house of Mysore Princes upto the death of Tippoo Sultan 1868.

**Buchanan Francis,** A Journey From madras through the countries of Mysore, Canara and Malabar, vol. 1&2, Madras 1870.

**Rice B.L.,** Mysore Gazetteer, Vol. 1 & 2, Westminster, 1897.

**Hayavadana Rao. C. (Ed),** Mysore Gazetteer vol. 1 to 5 1927-30.

**Shama Rao M.,** Modern Mysore Vol. 1 Bangalore, 1936.

**Diwakar R.R. (Ed),** Karnataka Through the Ages, Bangalore, 1968.

**ವಿವಿಧ ದಿನಪತ್ರಿಕೆಗಳು, ನಿಯತ ಕಾಲಿಕೆಗಳು ಹಾಗೂ ವಿವಿಧ ಇಲಾಖೆಗಳ ವರದಿಗಳು**

ಜನಗಣತಿ ವರದಿ (೧೯೦೧ ರಿಂದ ೨೦೧೧ ರ ವರೆಗೆ)

ಜಾನುವಾರು ಗಣತಿಯ ವರದಿಗಳು.

ಕೃಷಿ ಗಣತಿ ವರದಿಗಳು.

ಜಿಲ್ಲಾ ಪಂಚಾಯತ್ ಆಡಳಿತ ವರದಿ (೨೦೧೧-೧೨) ಚಿತ್ರದುರ್ಗ.

ಜಿಲ್ಲಾ ಅಂಕಿ - ಅಂಶಗಳ ನೋಟಗಳು ೨೦೦೫-೦೬ ರಿಂದ ೨೦೧೫-೧೬ ರ ವರೆಗೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಚಿತ್ರದುರ್ಗ.

ಜಿಲ್ಲಾ ತಾಲ್ಲೂಕು ಮಟ್ಟದ ಕಛೇರಿಗಳಿಂದ ಪಡೆದ ಟಿಪ್ಪಣಿಗಳು.

## ಸಾಮಾನ್ಯ ವಿವರಗಳು : GENERAL INFORMATION

### ತಾಲ್ಲೂಕುಗಳು ಜನವಸತಿ ಇರುವ ಜನವಸತಿ ಇಲ್ಲದಿರುವ ಮತ್ತು ಒಟ್ಟು ಗ್ರಾಮಗಳು

| ಕ್ರ. ಸಂ. | ತಾಲ್ಲೂಕುಗಳು Taluks | ನಾಡ ಕಛೇರಿಗಳು Nada Offices | ಗ್ರಾಮ ಲೆಕ್ಕಿಗರ ವೃತ್ತಗಳು VA Circles | ಹೋಬಳಿಗಳು Hoblies | ಗ್ರಾಮ ಪಂಚಾಯಿತಿಗಳು Grama Panchayaths | ತಾಲ್ಲೂಕುಗಳ ಸಂಖ್ಯೆ | ನಗರ/ಪಟ್ಟಣ ಪ್ರದೇಶಗಳು 2001ರ ಜನಗಣತಿ Cities/ Towns/ Urban Agglomerations | "ಗ್ರಾಮಗಳು (2011ರ ಜನಗಣತಿ) Villages " "ಜನವಸತಿ ಇರುವ Inhabited" | ಜನವಸತಿ ಇಲ್ಲದ Un inhabited | ಒಟ್ಟು ಗ್ರಾಮಗಳು TOTAL Villages |
|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** |
| 1 | ಚಳ್ಳಕೆರೆ Challakere | 4 | 66 | 4 | 40 | 1 | 1 | 182 | 13 | 195 |
| 2 | ಚಿತ್ರದುರ್ಗ Chitrdurga | 4 | 64 | 4 | 38 | 1 | 1 | 173 | 22 | 195 |
| 3 | ಹಿರಿಯೂರು Hiriyuru | 4 | 58 | 4 | 33 | 1 | 1 | 151 | 07 | 158 |
| 4 | ಹೊಳಲ್ಕೆರೆ Holalkere | 4 | 52 | 4 | 29 | 1 | 1 | 164 | 38 | 202 |
| 5 | ಹೊಸದುರ್ಗ Hosadurga | 4 | 44 | 4 | 33 | 1 | 1 | 201 | 24 | 225 |
| 6 | ಮೊಳಕಾಲ್ಮೂರು Molakalmuru | 2 | 28 | 2 | 16 | 1 | 1 | 78 | 11 | 89 |
| | **ಜಿಲ್ಲಾ ಮೊತ್ತ Dist. Total** | **22** | **312** | **22** | **189** | **6** | **6** | **949** | **115** | **1064** |

ಮಾಹಿತಿ ಮೂಲ : ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಚಿತ್ರದುರ್ಗ

## ಶೇಕಡವಾರು ಮತ್ತು ಜಿಲ್ಲಾವಾರು ಜನಸಂಖ್ಯೆ
## Population and percentage share to total Population : 2011

| ಕ್ರ. ಸಂ. | ತಾಲ್ಲೂಕುಗಳು Taluks | ಭೌಗೋಳಿಕ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) Geograpical Area (hectors) | ಜನಸಂಖ್ಯೆ /Population | | | ಒಟ್ಟು ಜನಸಂಖ್ಯೆಗೆ % ವಾರು ಪ್ರಾಮಾಣ % Share to total Population | ಜನಸಂಖ್ಯೆ /Population 2011 | | |
|---|---|---|---|---|---|---|---|---|---|
| | | | "ಒಟ್ಟು Total" | "ಗಂಡಸರು Male " | "ಹೆಂಗಸರು Female" | | ಒಟ್ಟು Total | ಗ್ರಾಮೀಣ (Rural) | ನಗರ (urban) |
| **1** | **2** | **58** | **59** | **60** | **61** | **62** | **63** | **64** | **65** |
| 1 | ಚಳ್ಳಕೆರೆ Challakere | 2074 | 365784 | 185931 | 179853 | 22.04 | 365784 | 310590 | 55194 |
| 2 | ಚಿತ್ರದುರ್ಗ Chitrdurga | 1383 | 423879 | 214563 | 209316 | 25.54 | 423879 | 272142 | 151737 |
| 3 | ಹಿರಿಯೂರು Hiriyuru | 1703 | 286133 | 144160 | 141973 | 17.24 | 286133 | 229717 | 56416 |
| 4 | ಹೊಳಲ್ಕೆರೆ Holalkere | 1099 | 207260 | 104992 | 102268 | 12.49 | 207260 | 185241 | 22019 |
| 5 | ಹೊಸದುರ್ಗ Hosadurga | 1438 | 235116 | 119148 | 115968 | 14.17 | 235116 | 206746 | 28370 |
| 6 | ಮೊಳಕಾಲ್ಮೂರು Molakalmuru | 739 | 141284 | 72049 | 69235 | 8.51 | 141284 | 125487 | 15797 |
| | **ಜಿಲ್ಲಾ ಮೊತ್ತ Dist. Total** | **8436** | **1659456** | **840843** | **818613** | **100.00** | **1659456** | **1329923** | **329533** |

ಮಾಹಿತಿಮೂಲ:–2011 ರ ಜನಗಣತಿ ಪ್ರಕಾರ

| ಕ್ರ. ಸಂ. | ತಾಲ್ಲೂಕುಗಳು Taluks | ಮಳೆ (ಮಿ.ಮಿ.) / Rainfall (in mms) | | | | | | | | | | | | |
|---|---|---|---|---|---|---|---|---|---|---|---|---|---|---|
| | | 2005 ದಿಂದ 2017ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮಿ.) Actual Annual Rainfall from 2005 to 2017 (mms) | | | | | | | | | | | | |
| | | **2005** | **2006** | **2007** | **2008** | **2009** | **2010** | **2011** | **2012** | **2013** | **2014** | **2015** | **2016** | **2017** |
| **1** | **2** | **147** | **148** | **149** | **150** | **151** | **152** | **153** | **154** | **155** | **156** | **157** | **158** | **159** |
| 1 | ಚಳ್ಳಕೆರೆ Challakere | 700 | 327.0 | 564 | 663 | 705 | 735 | 268 | 532 | 439 | 565 | 538 | 275 | 504.0 |
| 2 | ಚಿತ್ರದುರ್ಗ Chitrdurga | 865 | 495.0 | 757 | 691 | 834 | 915 | 328 | 668 | 705 | 990 | 638 | 325 | 916.8 |
| 3 | ಹಿರಿಯೂರು Hiriyuru | 367 | 421.7 | 779 | 642 | 715 | 795 | 308 | 455 | 627 | 642 | 719 | 199 | 651.0 |
| 4 | ಹೊಳಲ್ಕೆರೆ Holalkere | 916 | 941.0 | 729 | 647 | 930 | 1110 | 540 | 598 | 715 | 662 | 864 | 426 | 521.0 |
| 5 | ಹೊಸದುರ್ಗ Hosadurga | 737 | 652.0 | 638 | 634 | 864 | 951 | 423 | 365 | 382 | 635 | 690 | 342 | 590.6 |
| 6 | ಮೊಳಕಾಲ್ಮೂರು Molakalmuru | 679 | 309.0 | 704 | 551 | 817 | 807 | 295 | 492 | 221 | 704 | 449 | 221 | 429.2 |
| | **ಜಿಲ್ಲಾ ಮೊತ್ತ Dist. Total** | **711** | **524.3** | **695** | **638** | **811** | **886** | **360** | **518** | **515** | **700** | **650** | **298** | **602.1** |

ಮಾಹಿತಿಮೂಲ : ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಚಿತ್ರದುರ್ಗ

## ಸಾರಿಗೆ ಮತ್ತು ಸಂಪರ್ಕಗಳು / TRANSPORT AND COMMUNICATION

| ಕ್ರ. ಸಂ. | ತಾಲ್ಲೂಕುಗಳು Taluks | ಮೋಟಾರು ವಾಹನಗಳು / Motor vehicles | | | | | | | |
|---|---|---|---|---|---|---|---|---|---|
| | | ನಾಲ್ಕು ಚಕ್ರಗಳ ವಾಹನಗಳು ( Four Wheeler Vehicles) | | | | | ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು Vehicles carrying construction materials | ಇತರೆ Others | ಒಟ್ಟು Total |
| | | ಕಾರುಗಳು Cars | ಜೀಪುಗಳು Jeeps | ಓಮ್ನಿ ಬಸ್ಸು Omini Bus | ಟ್ರಾಕ್ಟರ್‌ಗಳು Tractors | ಟ್ರೈಲರ್‌ಗಳು Trailers | | | |
| **1** | **2** | **529** | **530** | **531** | **532** | **533** | **534** | **535** | **536** |
| 1 | ಚಳ್ಳಕೆರೆ Challakere | 1815 | 75 | 36 | 3671 | 2927 | 11 | 1 | 8536 |
| 2 | ಚಿತ್ರದುರ್ಗ Chitrdurga | 10067 | 230 | 80 | 6146 | 4369 | 14 | 2 | 20908 |
| 3 | ಹಿರಿಯೂರು Hiriyuru | 1245 | 59 | 24 | 2134 | 1746 | 12 | 1 | 5221 |
| 4 | ಹೊಳಲ್ಕೆರೆ Holalkere | 915 | 68 | 27 | 2043 | 1618 | 3 | 2 | 4676 |
| 5 | ಹೊಸದುರ್ಗ Hosadurga | 952 | 55 | 34 | 1442 | 1141 | 7 | 1 | 3632 |
| 6 | ಮೊಳಕಾಲ್ಮೂರು Molakalmuru | 937 | 50 | 27 | 939 | 871 | 2 | 2 | 2828 |
| | **ಜಿಲ್ಲಾ ಮೊತ್ತ Dist. Total** | **15931** | **537** | **228** | **16375** | **12672** | **49** | **9** | **45801** |

ಮಾಹಿತಿ ಮೂಲ:–ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ

## ಜನಸಂಖ್ಯೆಯ ಅಂದಾಜು Projected Population * (Numbers)

| ಕ್ರ. ಸಂ. | ತಾಲ್ಲೂಕುಗಳು Taluks | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 |
|---|---|---|---|---|---|---|---|---|---|---|---|---|
| **1** | **2** | **131** | **132** | **133** | **134** | **135** | **136** | **137** | **138** | **139** | **140** | **141** |
| 1 | ಚಳ್ಳಕೆರೆ Challakere | 366267 | 369412 | 372594 | 375806 | 379054 | 382336 | 385654 | 389008 | 392397 | 395823 | 399286 |
| 2 | ಚಿತ್ರದುರ್ಗ Chitrdurga | 424381 | 429018 | 433718 | 438483 | 443314 | 448212 | 453178 | 458215 | 463321 | 468497 | 473749 |
| 3 | ಹಿರಿಯೂರು Hiriyuru | 286494 | 289106 | 291748 | 294421 | 297124 | 299859 | 302624 | 305425 | 308254 | 311118 | 314017 |
| 4 | ಹೊಳಲ್ಕೆರೆ Holalkere | 207377 | 209050 | 210737 | 212443 | 214164 | 215902 | 217659 | 219429 | 221219 | 223027 | 224851 |
| 5 | ಹೊಸದುರ್ಗ Hosadurga | 235285 | 237225 | 239182 | 241162 | 243158 | 245178 | 247216 | 249275 | 251354 | 253456 | 255578 |
| 6 | ಮೊಳಕಾಲ್ಮೂರು Molakalmuru | 140574 | 141718 | 142874 | 144041 | 145219 | 146410 | 147611 | 148824 | 150050 | 151288 | 152538 |
|  | **ಜಿಲ್ಲಾ ಮೊತ್ತ Dist. Total** | **1660378** | **1675529** | **1690853** | **1706356** | **1722033** | **1737897** | **1753942** | **1770176** | **1786595** | **1803209** | **1820019** |

ಮಾಹಿತಿಮೂಲ : 2011ರ ಜನಗಣತಿ ಇಲಾಖೆ

# Indicators Regarding Agriculture and Allied 2016-17/ 2016–17ರ ವ್ಯವಸಾಯ ಮತ್ತು ಪೂರಕ ಸೂಚ್ಯಾಕಗಳು

| ಕ್ರ ಸಂ. | ತಾಲ್ಲೂಕುಗಳು Taluks | Area under commercial crops ಒಟ್ಟು ವಾಣಿಜ್ಯ ಬೆಳೆಗಳ ಕ್ಷೇತ್ರ | Total cropped area ಒಟ್ಟು ಎಲ್ಲಾ ಬೆಳೆಗಳ ಕ್ಷೇತ್ರ | % of Area under commercial crops to total cropped ಎಲ್ಲಾ ಬೆಳೆಗಳ ಕ್ಷೇತ್ರಕ್ಕೆ ಪ್ರತಿಶತ ವಾಣಿಜ್ಯ ಬೆಳೆಗಳು | Net Area irrigated ನಿವ್ವಳ ನೀರಾವರಿಯಾದ ಕ್ಷೇತ್ರ | Net area sown ನಿವ್ವಳ ಬಿತ್ತನೆಯಾದ ಕ್ಷೇತ್ರ | % of Net Area irrigated to net area sown ನಿವ್ವಳ ಬಿತ್ತನೆಯಾದ ಕ್ಷೇತ್ರಕ್ಕೆ ಪ್ರತಿಶತ ನಿವ್ವಳ ನೀರಾವರಿಯಾದ ಕ್ಷೇತ್ರ | NPK consumption in Kgs. ರಸಗೊಬ್ಬರಗಳ ಉಪಯೋಗ (ಕೆ.ಜಿ.ಗಳಲ್ಲಿ) | Total cropped area ಒಟ್ಟು ಎಲ್ಲಾ ಬೆಳೆಗಳ ಕ್ಷೇತ್ರ |
|---|---|---|---|---|---|---|---|---|---|
| **1** | **2** | **12** | **13** | **14** | **15** | **16** | **17** | **18** | **19** |
| | | | | A4 | | | A5 | | |
| 1 | ಚಳ್ಳಕೆರೆ Challakere | 473 | 115123 | 0.41 | 22,460 | 99868 | 22.49 | 3847 | 115123 |
| 2 | ಚಿತ್ರದುರ್ಗ Chitrdurga | 2399 | 89667 | 2.68 | 16,884 | 67139 | 25.15 | 11754 | 89667 |
| 3 | ಹಿರಿಯೂರು Hiriyuru | 3423 | 75545 | 4.53 | 28,736 | 65365 | 43.96 | 3546 | 75545 |
| 4 | ಹೊಳಲ್ಕೆರೆ Holalkere | 284 | 78826 | 0.36 | 14,200 | 68475 | 20.74 | 5080 | 78826 |
| 5 | ಹೊಸದುರ್ಗ Hosadurga | 671 | 73017 | 0.92 | 11,654 | 62869 | 18.54 | 3165 | 73017 |
| 6 | ಮೊಳಕಾಲ್ಮೂರು Molakalmuru | 3,094 | 34736 | 8.91 | 6,900 | 29712 | 23.22 | 2754 | 34736 |
| | **ಜಿಲ್ಲಾ ಮೊತ್ತ Dist. Total** | **10344** | **466914** | **2.22** | **100834** | **393428** | **25.63** | **30146** | **466914** |

## Indicators Regarding Agriculture and Allied 2016-17/ 2016–17ರ ವ್ಯವಸಾಯ ಮತ್ತು ಪೂರಕ ಸೂಚ್ಯಾಕಗಳು

| ಕ್ರ ಸಂ. | ತಾಲ್ಲೂಕುಗಳು Taluks | Fertilizer (NPK) consumption in Kilogram per Heceare ಪ್ರತಿ ಹೆಕ್ಟೇರಿಗೆ ರಸಗೊಬ್ಬರಗಳ ಉಪಯೋಗ (ಕೆ.ಜಿ. ಗಳಲ್ಲಿ) | Number of Tractors (as per RTO) ಟ್ರ್ಯಾಕ್ಟರ್‌ಗಳ ಸಂಖ್ಯೆ | Total cropped area ಒಟ್ಟು ಎಲ್ಲಾ ಬೆಳೆಗಳ ಕ್ಷೇತ್ರ | Number of Tractors per 000 hectares 1000 ಹೆಕ್ಟೇರಿಗೆ ಟ್ರ್ಯಾಕ್ಟರ್‌ಗಳ ಸಂಖ್ಯೆ | No.of Livestock units ಒಟ್ಟು ಜಾನುವಾರುಗಳ ಸಂಖ್ಯೆ | Rural population ಗ್ರಾಮೀಣ ಜನಸಂಖ್ಯೆ | Livestock units per lakh Rural population ಗ್ರಾಮೀಣ ಜನಸಂಖ್ಯೆಗೆ ಒಟ್ಟು ಜಾನುವಾರುಗಳ ಸಂಖ್ಯೆ | Bank credit to (Agriculture+Allied to agriculture) Rs.in Crore ವ್ಯವಸಾಯಕ್ಕಾಗಿ ಬ್ಯಾಂಕ್ ಸಾಲ | Total population ಒಟ್ಟು ಜನಸಂಖ್ಯೆ | Per capita Bank credit to Agriculture in Rupees (000) ವ್ಯವಸಾಯಕ್ಕಾಗಿ ತಲಾ ಬ್ಯಾಂಕ್ ಸಾಲ |
|---|---|---|---|---|---|---|---|---|---|---|---|
| **1** | **2** | **20** | **21** | **22** | **23** | **24** | **25** | **26** | **27** | **28** | **29** |
| | | A6 | | | A7 | | | A8 | | | A9 |
| 1 | ಚಳ್ಳಕೆರೆ Challakere | 33.42 | 3671 | 115123 | 32 | 438457 | 310590 | 141169 | 4515.83 | 365784 | 1234.56 |
| 2 | ಚಿತ್ರದುರ್ಗ Chitrdurga | 131.09 | 6146 | 89667 | 69 | 186696 | 272142 | 68602 | 3191.07 | 423879 | 752.83 |
| 3 | ಹಿರಿಯೂರು Hiriyuru | 46.94 | 2134 | 75545 | 28 | 409297 | 229717 | 178174 | 3065.94 | 286133 | 1071.51 |
| 4 | ಹೊಳಲ್ಕೆರೆ Holalkere | 64.45 | 2043 | 78826 | 26 | 156479 | 185241 | 84473 | 4612.20 | 207260 | 2225.32 |
| 5 | ಹೊಸದುರ್ಗ Hosadurga | 43.35 | 1442 | 73017 | 20 | 265494 | 206746 | 128416 | 3344.00 | 235116 | 1422.28 |
| 6 | ಮೊಳಕಾಲ್ಮೂರು Molakalmuru | 79.28 | 939 | 34736 | 27 | 186105 | 125487 | 148306 | 1622.99 | 141284 | 1148.74 |
| | **ಜಿಲ್ಲಾ ಮೊತ್ತ Dist. Total** | **64.56** | **16375** | **466914** | **35** | **1642528** | **1329923** | **123505** | **20352.03** | **1659456** | **1226.43** |

## Indicators Regarding Agriculture and Allied 2016-17/ 2016–17ರ ವ್ಯವಸಾಯ ಮತ್ತು ಪೂರಕ ಸೂಚ್ಯಾಕಗಳು

| ಕ್ರ ಸಂ. | ತಾಲ್ಲೂಕುಗಳು Taluks | No. of Industrial Units ಉದ್ದಿಮೆಗಳ ಸಂಖ್ಯೆ | Total Population ಒಟ್ಟು ಜನಸಂಖ್ಯೆ | No. of Industrial units per lakh population ಒಂದು ಲಕ್ಷ ಜನಸಂಖ್ಯೆಗೆ ಉದ್ದಿಮೆಗಳ ಸಂಖ್ಯೆ | No. of Industrial Workers ಉದ್ದಿಮೆಗಳ ಕೆಲಸಗಾರರ ಸಂಖ್ಯೆ | % of Industrial workers to Total Main Workers ಒಟ್ಟು ಮುಖ್ಯ ಕೆಲಸಗಾರರಿಗೆ ಪ್ರತಿಶತ ಉದ್ದಿಮೆಗಳ ಕೆಲಸಗಾರರು | Total main Workers ಒಟ್ಟು ಮುಖ್ಯ ಕೆಲಸಗಾರರು | Bank Advances (loans) ಬ್ಯಾಂಕ್ ಸಾಲ (ಲಕ್ಷಗಳಲ್ಲಿ) | Total Population ಒಟ್ಟು ಜನಸಂಖ್ಯೆ | Bank advances (loans) per Lakh Population ಒಂದು ಲಕ್ಷ ಜನಸಂಖ್ಯೆಗೆ ಬ್ಯಾಂಕ್ ಸಾಲ (ಲಕ್ಷಗಳಲ್ಲಿ) |
|---|---|---|---|---|---|---|---|---|---|---|
| **1** | **2** | **30** | **31** | **32** | **33** | **34** | **35** | **36** | **37** | **38** |
| | | | | I1 | | | I2 | | | |
| 1 | ಚಳ್ಳಕೆರೆ Challakere | 2512 | 365784 | 686.7 | 22313 | 148549 | 15.02 | 967 | 365784 | 264.36 |
| 2 | ಚಿತ್ರದುರ್ಗ Chitrdurga | 3336 | 423879 | 787.0 | 26368 | 163919 | 16.09 | 1493 | 423879 | 352.22 |
| 3 | ಹಿರಿಯೂರು Hiriyuru | 1992 | 286133 | 696.2 | 8791 | 113380 | 7.75 | 723 | 286133 | 252.68 |
| 4 | ಹೊಳಲ್ಕೆರೆ Holalkere | 1204 | 207260 | 580.9 | 4951 | 80339 | 6.16 | 527 | 207260 | 254.27 |
| 5 | ಹೊಸದುರ್ಗ Hosadurga | 1430 | 235116 | 608.2 | 6644 | 100218 | 6.63 | 625 | 235116 | 265.83 |
| 6 | ಮೊಳಕಾಲ್ಮೂರು Molakalmuru | 1079 | 141284 | 763.7 | 5114 | 61074 | 8.37 | 265 | 141284 | 187.57 |
| | **ಜಿಲ್ಲಾ ಮೊತ್ತ Dist. Total** | **11553** | **1659456** | **43.86** | **74181** | **667479** | **11.11** | **4600** | **1659456** | **277.20** |

## Indicators Regarding, Trade and finance 2016-17/ 2016–17ರ ಉದ್ದಿಮೆ, ವ್ಯಾಪಾರ ಹಾಗೂ ಹಣಕಾಸು ಸೂಚ್ಯಕಗಳು

| ಕ್ರ ಸಂ. | ತಾಲ್ಲೂಕುಗಳು Taluks | Tota No.of Bank branches ಬ್ಯಾಂಕ್ ಶಾಖೆಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Bank branches per lakh population ಒಂದು ಲಕ್ಷ ಜನಸಂಖ್ಯೆಗೆ ಬ್ಯಾಂಕ್ ಶಾಖೆಗಳ ಸಂಖ್ಯೆ | Total No.of Enterprises ಹೋಟೆಲ್ & ಸಾರಿಗೆಗಳಲ್ಲಿ ತೊಡಗಿದ ಉದ್ದಿಮೆಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Enterprises engaged in trade, hotels and transport per lakh population ಒಂದು ಲಕ್ಷ ಜನಸಂಖ್ಯೆಗೆ ವ್ಯಾಪಾರ ಹೋಟೆಲ್ & ಸಾರಿಗೆಗಳಲ್ಲಿ ತೊಡಗಿದ ಉದ್ದಿಮೆಗಳ ಸಂಖ್ಯೆ |
|---|---|---|---|---|---|---|---|
| **1** | **2** | **39** | **40** | **41** | **42** | **43** | **44** |
| | | | | I4 | | | I5 |
| 1 | ಚಳ್ಳಕೆರೆ Challakere | 40 | 365784 | 11 | 11862 | 365784 | 3242 |
| 2 | ಚಿತ್ರದುರ್ಗ Chitrdurga | 65 | 423879 | 15 | 16180 | 423879 | 3817 |
| 3 | ಹಿರಿಯೂರು Hiriyuru | 34 | 286133 | 12 | 9839 | 286133 | 3438 |
| 4 | ಹೊಳಲ್ಕೆರೆ Holalkere | 26 | 207260 | 13 | 7179 | 207260 | 3463 |
| 5 | ಹೊಸದುರ್ಗ Hosadurga | 28 | 235116 | 12 | 9718 | 235116 | 4133 |
| 6 | ಮೊಳಕಾಲ್ಮೂರು Molakalmuru | 13 | 141284 | 9 | 6290 | 141284 | 4452 |
| | **ಜಿಲ್ಲಾ ಮೊತ್ತ Dist. Total** | **206** | **1659456** | **12** | **61068** | **1659456** | **3680** |

## Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ ಸಂ. | ತಾಲ್ಲೂಕುಗಳು Taluks | No.of post offices ಅಂಚೆ ಕಛೇರಿಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Post Offices per lakh population ಒಂದು ಲಕ್ಷ ಜನಸಂಖ್ಯೆಗೆ ಅಂಚೆ ಕಛೇರಿಗಳ ಸಂಖ್ಯೆ | No.of Telephones ದೂರವಾಣಿಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Telephones per lakh population ಒಂದು ಲಕ್ಷ ಜನಸಂಖ್ಯೆಗೆ ದೂರವಾಣಿಗಳ ಸಂಖ್ಯೆ | Total Road length (Kms) ಒಟ್ಟು ರಸ್ತೆಗಳ ಉದ್ದ (ಕಿ.ಮೀ.ಗಳಲ್ಲಿ) | Total Geographical Area in Sq.kms. ಚ.ಕಿ.ಮೀ.ಗಳಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ | Road length (in Kms) per 100 Sq. Kms area ಒಂದು ನೂರು ಚ.ಕಿ.ಮೀ.ಗೆ ರಸ್ತೆಗಳ ಉದ್ದ (ಕಿ.ಮೀ.ಗಳಲ್ಲಿ) |
|---|---|---|---|---|---|---|---|---|---|---|
| **1** | **2** | **45** | **46** | **47** | **48** | **49** | **50** | **51** | **52** | **53** |
| | | | | E1 | | | E2 | | | E3 |
| 1 | ಚಳ್ಳಕೆರೆ Challakere | 60 | 365784 | 16 | 2589 | 365784 | 708 | 2611.25 | 1688.6 | 154.64 |
| 2 | ಚಿತ್ರದುರ್ಗ Chitrdurga | 64 | 423879 | 15 | 6876 | 423879 | 1622 | 1673.28 | 948 | 176.51 |
| 3 | ಹಿರಿಯೂರು Hiriyuru | 61 | 286133 | 21 | 1759 | 286133 | 615 | 2112.14 | 974 | 216.85 |
| 4 | ಹೊಳಲ್ಕೆರೆ Holalkere | 49 | 207260 | 24 | 1023 | 207260 | 494 | 1181.67 | 904.2 | 130.69 |
| 5 | ಹೊಸದುರ್ಗ Hosadurga | 56 | 235116 | 24 | 1356 | 235116 | 577 | 1246.05 | 1618.9 | 76.97 |
| 6 | ಮೊಳಕಾಲ್ಮೂರು Molakalmuru | 27 | 141284 | 19 | 706 | 141284 | 500 | 743.45 | 1152.4 | 64.51 |
| | **ಜಿಲ್ಲಾ ಮೊತ್ತ Dist. Total** | **317** | **1659456** | **19** | **14309** | **1659456** | **862** | **9567.84** | **7286.1** | **131.32** |

## Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ. ಸಂ. | ತಾಲ್ಲೂಕುಗಳು Taluks | No.of habitations access to all weather roads ಎಲ್ಲಾ ಋತು ರಸ್ತೆಗಳಿಗೆ ಹ್ಯಾಬಿಟೇಷನ್‌ಗಳ ಸಂಖ್ಯೆ | Total No.of Habitations ಒಟ್ಟು ಹ್ಯಾಬಿಟೇಷನ್‌ಗಳ ಸಂಖ್ಯೆ | % of Habitations having access to all weather roads ಪ್ರತಿಶತ ಎಲ್ಲಾ ಋತು ರಸ್ತೆಗಳಿಗೆ ಹ್ಯಾಬಿಟೇಷನ್‌ಗಳ ಸಂಖ್ಯೆ | Total Length of Railway line (kms) ಒಟ್ಟು ರೇಲ್ವೆ ಲೈನ್‌ಗಳ ಉದ್ದ | Total Geographical Area in Sq.kms. ಚ.ಕಿ.ಮೀ.ಗಳಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ | Length of Railway line(in Kms) Per 1000 Sq. Kms area ಒಂದು ಸಾವಿರ ಚ.ಕಿ.ಮೀ.ಗೆ ರೇಲ್ವೆ ಲೈನ್‌ಗಳ ಉದ್ದ | No.of Motor Vehicles ಮೋಟಾರು ವಾಹನಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Motor Vehicles per lakh population ಒಂದು ಲಕ್ಷ ಜನಸಂಖ್ಯೆಗೆ ಮೋಟಾರು ವಾಹನಗಳ ಸಂಖ್ಯೆ |
|---|---|---|---|---|---|---|---|---|---|---|
| **1** | **2** | **54** | **55** | **56** | **57** | **58** | **59** | **60** | **61** | **62** |
| | | | | E4 | | | E5 | | | E6 |
| 1 | ಚಳ್ಳಕೆರೆ Challakere | 160 | 308 | 52 | 38 | 2064 | 18.41 | 50900 | 365784 | 13915 |
| 2 | ಚಿತ್ರದುರ್ಗ Chitrdurga | 165 | 271 | 61 | 35 | 1376 | - | 83884 | 423879 | 19790 |
| 3 | ಹಿರಿಯೂರು Hiriyuru | 188 | 348 | 54 | 0 | 1701 | 0.00 | 37459 | 286133 | 13091 |
| 4 | ಹೊಳಲ್ಕೆರೆ Holalkere | 184 | 222 | 83 | 50 | 1095 | 45.67 | 26486 | 207260 | 12779 |
| 5 | ಹೊಸದುರ್ಗ Hosadurga | 178 | 349 | 51 | 20 | 1416 | 14.12 | 23658 | 235116 | 10062 |
| 6 | ಮೊಳಕಾಲ್ಮೂರು Molakalmuru | 135 | 148 | 91 | 28 | 736 | 38.02 | 17787 | 141284 | 12590 |
| | **ಜಿಲ್ಲಾ ಮೊತ್ತ Dist. Total** | **1010** | **1646** | **61** | **171** | **8389** | **20.38** | **240174** | **1659456** | **14473** |

# Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ ಸಂ. | ತಾಲ್ಲೂಕುಗಳು Taluks | No.of Co-operative credit societies ಸಹಕಾರಿ ಸಂಘಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Co-operative credit societies per lakh population ಒಂದು ಲಕ್ಷ ಜನಸಂಖ್ಯೆಗೆ ಸಹಕಾರಿ ಸಂಘಗಳ ಸಂಖ್ಯೆ | No. of villages electrified +No.of hamlets electrified ವಿದ್ಯುದ್ದೀಕರಣಗೆ ಕೂಡ ಹ್ಯಾಮಲೆಟ್‌ಗಳನ್ನು ಗ್ರಾಮಗಳನ್ನು ಕೂಡಿದ ಗ್ರಾಮಗಳ ಸಂಖ್ಯೆ | Total No.of villages + Total No.of hamlets ಹ್ಯಾಮಲೆಟ್‌ಗಳನ್ನು ಕೂಡಿದ ಗ್ರಾಮಗಳ ಸಂಖ್ಯೆ | % of electrified villages including hamlets ಶೇಕಡಾವಾರು ವಿದ್ಯುದ್ದೀಕರಣಗೆ ಕೂಡ ಹ್ಯಾಮಲೆಟ್‌ಗಳನ್ನು ಕೂಡಿದ ಗ್ರಾಮಗಳ ಸಂಖ್ಯೆ | Total No.of (Regulated Markets + Sub Markets) ಒಟ್ಟು ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | Regulated Markets & Sub Markets per lakh population ಒಂದು ಲಕ್ಷ ಜನಸಂಖ್ಯೆಗೆ ಒಟ್ಟು ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ |
|---|---|---|---|---|---|---|---|---|---|---|
| **1** | **2** | **63** | **64** | **65** | **66** | **67** | **68** | **69** | **70** | **71** |
| | | | | E7 | | | E8 | | | E9 |
| 1 | ಚಳ್ಳಕೆರೆ Challakere | 207 | 365784 | 57 | 485 | 485 | 100 | 1 | 365784 | 0 |
| 2 | ಚಿತ್ರದುರ್ಗ Chitrdurga | 232 | 423879 | 55 | 258 | 258 | 100 | 3 | 423879 | 1 |
| 3 | ಹಿರಿಯೂರು Hiriyuru | 165 | 286133 | 58 | 403 | 403 | 100 | 1 | 286133 | 0 |
| 4 | ಹೊಳಲ್ಕೆರೆ Holalkere | 102 | 207260 | 49 | 201 | 201 | 100 | 2 | 207260 | 1 |
| 5 | ಹೊಸದುರ್ಗ Hosadurga | 162 | 235116 | 69 | 241 | 241 | 100 | 3 | 235116 | 1 |
| 6 | ಮೊಳಕಾಲ್ಮೂರು Molakalmuru | 68 | 141284 | 48 | 172 | 172 | 100 | 1 | 141284 | 1 |
| | **ಜಿಲ್ಲಾ ಮೊತ್ತ Dist. Total** | **936** | **1659456** | **56** | **1760** | **1760** | **100** | **11** | **1659456** | **1** |

## Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ ಸಂ. | ತಾಲ್ಲೂಕುಗಳು Taluks | No. of Doctors (Govt) ಡಾಕ್ಟರ್ ಸಂಖ್ಯೆ | Total population ಒಟ್ಟು ಜನಸಂಖ್ಯೆ | Tota No. of Doctors per 10000 population 10000 ಜನಸಂಖ್ಯೆಗೆ ಡಾಕ್ಟರ್‌ಗಳ ಸಂಖ್ಯೆ | No.of Hospital Beds ಹಾಸಿಗೆಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Beds per 10000 population 10000 ಜನಸಂಖ್ಯೆಗೆ ಹಾಸಿಗೆಗಳ ಸಂಖ್ಯೆ |
|---|---|---|---|---|---|---|---|
| **1** | **2** | **72** | **73** | **74** | **75** | **76** | **77** |
| | | | | S1 | | | S2 |
| 1 | ಚಳ್ಳಕೆರೆ Challakere | 39 | 365784 | 1 | 160 | 365784 | 4 |
| 2 | ಚಿತ್ರದುರ್ಗ Chitrdurga | 33 | 423879 | 1 | 540 | 423879 | 13 |
| 3 | ಹಿರಿಯೂರು Hiriyuru | 45 | 286133 | 2 | 160 | 286133 | 6 |
| 4 | ಹೊಳಲ್ಕೆರೆ Holalkere | 31 | 207260 | 1 | 100 | 207260 | 5 |
| 5 | ಹೊಸದುರ್ಗ Hosadurga | 36 | 235116 | 2 | 190 | 235116 | 8 |
| 6 | ಮೊಳಕಾಲ್ಮೂರು Molakalmuru | 22 | 141284 | 2 | 130 | 141284 | 9 |
| | **ಜಿಲ್ಲಾ ಮೊತ್ತ Dist. Total** | **206** | **1659456** | **1** | **1280** | **1659456** | **8** |

## Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ ಸಂ. | ತಾಲ್ಲೂಕುಗಳು Taluks | No.of Literates ಅಕ್ಷರಸ್ಥರ ಸಂಖ್ಯೆ | (Total Population -(0 to 6 Population) ಒಟ್ಟು ಜನಸಂಖ್ಯೆ (0 ದಿಂದ 6 ವರ್ಷದವರ ಜನಸಂಖ್ಯೆ) | Literacy Rate ಸಾಕ್ಷರತಾ ಪ್ರಮಾಣ | No.of Pupils ( I to Xstd) ವಿದ್ಯಾರ್ಥಿಗಳ ಸಂಖ್ಯೆ (1 ರಿಂದ 10ರ ವರೆಗೆ) | No. of Teachers ಶಿಕ್ಷಕರ ಸಂಖ್ಯೆ | Pupil - Teacher Ratio (I to X Std) ವಿದ್ಯಾರ್ಥಿಗಳಿಗೆ ಶಿಕ್ಷಕರ ದರ (1 ರಿಂದ 10ರ ವರೆಗೆ) | No.of children out of school in 6 to 14 age group 6–14ರ ಗುಂಪಿನಲ್ಲಿ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ | Total No.of children in 6 to 14 age group 6–14ರ ಗುಂಪಿನಲ್ಲಿ ಮಕ್ಕಳ ಸಂಖ್ಯೆ | % of Children out of school in the 6-14 age group 6–14ರ ಗುಂಪಿನಲ್ಲಿ ಶಾಲೆ ಬಿಟ್ಟ ಪ್ರತಿಶತ ಮಕ್ಕಳ ಸಂಖ್ಯೆ |
|---|---|---|---|---|---|---|---|---|---|---|
| **1** | **2** | **78** | **79** | **80** | **81** | **82** | **83** | **84** | **85** | **86** |
| | | | | S3 | | | S4 | | | S5 |
| 1 | ಚಳ್ಳಕೆರೆ Challakere | 224637 | 41247 | 68.61 | 56202 | 2351 | 24 | 22 | 29 | 75.86 |
| 2 | ಚಿತ್ರದುರ್ಗ Chitrdurga | 297974 | 46679 | 71.23 | 68640 | 3057 | 22 | 11 | 13 | 84.62 |
| 3 | ಹಿರಿಯೂರು Hiriyuru | 188743 | 30756 | 69.77 | 42284 | 2025 | 21 | 9 | 31 | 29.03 |
| 4 | ಹೊಳಲ್ಕೆರೆ Holalkere | 141004 | 21195 | 70.16 | 28357 | 1434 | 20 | 12 | 12 | 100.00 |
| 5 | ಹೊಸದುರ್ಗ Hosadurga | 154493 | 25729 | 69.23 | 34100 | 1795 | 19 | 19 | 35 | 54.29 |
| 6 | ಮೊಳಕಾಲ್ಮೂರು Molakalmuru | 80541 | 18674 | 66.81 | 29408 | 946 | 31 | 60 | 468 | 12.82 |
| | **ಜಿಲ್ಲಾ ಮೊತ್ತ Dist. Total** | **1087392** | **184280** | **73.71** | **258991** | **11608** | **2310** | **133** | **588** | **22.62** |

## Indicators Regarding Economic Infrastructure 2016-17/ 2016–17ರ ಆರ್ಥಿಕ ಸೌಲಭ್ಯಗಳ ಸೂಚ್ಯಾಂಕಗಳು

| ಕ್ರ. ಸಂ. | ತಾಲ್ಲೂಕುಗಳು Taluks | No.of Students enrolled in Govt & Aided & Degree Colleges ಅನುದಾನಿತ ಹಾಗೂ ಪದವಿ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | Total population ಒಟ್ಟು ಜನಸಂಖ್ಯೆ | No.of Students enrolled in Aided & Govt & Degree Colleges per Lakh Population ಒಂದು ಲಕ್ಷ ಜನಸಂಖ್ಯೆಗೆ ಅನುದಾನಿತ ಹಾಗೂ ಪದವಿ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | No.of Habitations having dringing water facility of greater then 40 LPCD 40ಲೀ (ಎಲ್.ಪಿ.ಸಿ.ಡಿ.) ಗಿಂತ ಹೆಚ್ಚು ಕುಡಿಯುವ ನೀರಿನ ಸೌಲಭ್ಯವಿರುವ ಗ್ರಾಮಗಳ ಸಂಖ್ಯೆ | Total No.of Habitations ಒಟ್ಟು ಗ್ರಾಮಗಳ ಸಂಖ್ಯೆ | % No.of Habitations having dringing water facility of 40 or more LPCD to Total habitations ಒಟ್ಟು ಗ್ರಾಮಗಳ ಸಂಖ್ಯೆಗೆ 40 ಲೀ. (ಎಲ್.ಪಿ.ಸಿ.ಡಿ.) ಗಿಂತ ಹೆಚ್ಚು ಕುಡಿಯುವ ನೀರಿನ ಸೌಲಭ್ಯವಿರುವ ಗ್ರಾಮಗಳ ಸಂಖ್ಯೆ |
|---|---|---|---|---|---|---|---|
| **1** | **2** | **87** | **88** | **89** | **90** | **91** | **92** |
| | | | | S6 | | | S7 |
| 1 | ಚಳ್ಳಕೆರೆ Challakere | 3699 | 365784 | 1011.25 | 43 | 195 | 22 |
| 2 | ಚಿತ್ರದುರ್ಗ Chitrdurga | 7488 | 423879 | 1766.54 | 113 | 190 | 59 |
| 3 | ಹಿರಿಯೂರು Hiriyuru | 1997 | 286133 | 697.93 | 62 | 158 | 39 |
| 4 | ಹೊಳಲ್ಕೆರೆ Holalkere | 957 | 207260 | 461.74 | 104 | 202 | 51 |
| 5 | ಹೊಸದುರ್ಗ Hosadurga | 1966 | 235116 | 836.18 | 10 | 225 | 4 |
| 6 | ಮೊಳಕಾಲ್ಮೂರು Molakalmuru | 530 | 141284 | 375.13 | 36 | 89 | 40 |
| | **ಜಿಲ್ಲಾ ಮೊತ್ತ Dist. Total** | **16637** | **1659456** | **1002.56** | **368** | **1059** | **35** |

## Indicators Regarding Population Characteristics 2016-17/ 2016–17ರ ಜನಸಂಖ್ಯೆಯ ಲಕ್ಷಣಗಳೂ ಸೂಚ್ಯಾಂಕಗಳು

| ಕ್ರ. ಸಂ. | ತಾಲ್ಲೂಕುಗಳು Taluks | Female Population ಹೆಣ್ಣು ಜನಸಂಖ್ಯೆ | Male Population ಗಂಡು ಜನಸಂಖ್ಯೆ | Sex Ratio (No. of females per 1000 Males) ಲಿಂಗಾನುಪಾತ | Urban Population ನಗರ ಜನಸಂಖ್ಯೆ | Total Population ಒಟ್ಟು ಜನಸಂಖ್ಯೆ | % Urban population to total Population ಒಟ್ಟು ಜನಸಂಖ್ಯೆಗೆ ಪ್ರತಿಶತ ನಗರ ಜನಸಂಖ್ಯೆ | SC & ST Population ಪ.ಜಾ. ಮತ್ತು ಪ.ಪಂ. ಜನಸಂಖ್ಯೆ | Total Population ಒಟ್ಟು ಜನಸಂಖ್ಯೆ | % SC & ST Population ಪ್ರತಿಶತ ಪ.ಜಾ. ಮತ್ತು ಪ.ಪಂ. ಜನಸಂಖ್ಯೆ |
|---|---|---|---|---|---|---|---|---|---|---|
| **1** | **2** | **93** | **94** | **95** | **96** | **97** | **98** | **99** | **100** | **101** |
| | | | | **P1** | | | **P2** | | | **P3** |
| 1 | ಚಳ್ಳಕೆರೆ Challakere | 179853 | 185931 | 967 | 55194 | 365784 | 15.09 | 190539 | 365784 | 52.09 |
| 2 | ಚಿತ್ರದುರ್ಗ Chitrdurga | 209316 | 214563 | 976 | 151737 | 423879 | 35.80 | 171161 | 423879 | 40.38 |
| 3 | ಹಿರಿಯೂರು Hiriyuru | 141973 | 144160 | 985 | 56416 | 286133 | 19.72 | 99758 | 286133 | 34.86 |
| 4 | ಹೊಳಲ್ಕೆರೆ Holalkere | 102268 | 104992 | 974 | 22019 | 207260 | 10.62 | 82128 | 207260 | 39.63 |
| 5 | ಹೊಸದುರ್ಗ Hosadurga | 115968 | 119148 | 973 | 28370 | 235116 | 12.07 | 67226 | 235116 | 28.59 |
| 6 | ಮೊಳಕಾಲ್ಮೂರು Molakalmuru | 69235 | 72049 | 961 | 15797 | 141284 | 11.18 | 80859 | 141284 | 57.23 |
| | **ಜಿಲ್ಲಾ ಮೊತ್ತ Dist. Total** | **818613** | **840843** | **974** | **329533** | **1659456** | **19.86** | **691671** | **1659456** | **41.68** |

## Indicators Regarding Population Characteristics 2016-17/ 2016–17ರ ಜನಸಂಖ್ಯೆಯ ಲಕ್ಷಣಗಳೂ ಸೂಚ್ಯಾಂಕಗಳು

| ಕ್ರ. ಸಂ. | ತಾಲ್ಲೂಕುಗಳು Taluks | Total No.of Non-Agricultural Workers ಕೃಷಿಯೇತರ ಕೆಲಸಗಾರರ ಸಂಖ್ಯೆ | Total Workers ಒಟ್ಟು ಕೆಲಸಗಾರರು | % Non-Agriculaural Workers to Total Workers ಪ್ರತಿಶತ ಕೃಷಿಯೇತರ ಕೆಲಸಗಾರರ ಸಂಖ್ಯೆ | Total Agricultural Labourers ಒಟ್ಟು ಕೃಷಿ ಕಾರ್ಮಿಕರು | Total Main workers ಒಟ್ಟು ಮುಖ್ಯ ಕೆಲಸಗಾರರು | % Agricultural labourers to Total Main workers ಪ್ರತಿಶತ ಕೃಷಿ ಕಾರ್ಮಿಕರು |
|---|---|---|---|---|---|---|---|
| **1** | **2** | **102** | **103** | **104** | **105** | **106** | **107** |
| | | | | **P4** | | | **P5** |
| 1 | ಚಳ್ಳಕೆರೆ Challakere | 199247 | 337272 | 59.08 | 49383 | 148549 | 33.24 |
| 2 | ಚಿತ್ರದುರ್ಗ Chitrdurga | 198794 | 95095 | 209.05 | 42172 | 163910 | 25.73 |
| 3 | ಹಿರಿಯೂರು Hiriyuru | 145256 | 94862 | 153.12 | 35215 | 113380 | 31.06 |
| 4 | ಹೊಳಲ್ಕೆರೆ Holalkere | 115277 | 189683 | 60.77 | 23256 | 80339 | 28.95 |
| 5 | ಹೊಸದುರ್ಗ Hosadurga | 126527 | 153462 | 82.45 | 20581 | 100218 | 20.54 |
| 6 | ಮೊಳಕಾಲ್ಮೂರು Molakalmuru | 71486 | 108640 | 65.80 | 22162 | 61074 | 36.29 |
| | **ಜಿಲ್ಲಾ ಮೊತ್ತ Dist. Total** | **856587** | **979014** | **87.49** | **192769** | **667470** | **28.88** |